
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸಿದ್ಧಾಂತ ಮತ್ತು ಆಚರಣೆ

(ತುಮಕೂರು ಜಿಲ್ಲೆಯನ್ನು ಅನುಲಕ್ಷಿಸಿ)

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ
ಗೋವಿಂದರಾಯ ಪಿ.ಹೆಚ್.

ಮಾರ್ಗದರ್ಶಕರು
ಡಾ.ಎಚ್.ಡಿ.ಪ್ರಶಾಂತ್
ಪ್ರಾಧ್ಯಾಪಕರು



ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

176

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸಿದ್ಧಾಂತ ಮತ್ತು ಆಚರಣೆ

(ತುಮಕೂರು ಜಿಲ್ಲೆಯನ್ನು ಅನುಲಕ್ಷಿಸಿ)

(ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ
ಗೋವಿಂದರಾಯ ಪಿ.ಹೆಚ್.

ಮಾರ್ಗದರ್ಶಕರು
ಡಾ.ಎಚ್.ಡಿ.ಪ್ರಶಾಂತ್
ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ಗೋವಿಂದರಾಯ ಪಿ.ಹೆಚ್.ಇವರು ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ**ಯೋಜನೆ**ಸಿದ್ಧಾಂತ ಮತ್ತು ಆಚರಣೆ (ತುಮಕೂರು ಜಿಲ್ಲೆಯನ್ನು ಅನುಲಕ್ಷಿಸಿ)** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ.ಎಚ್.ಡಿ.ಪ್ರಶಾಂತ್
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ.
ದಿನಾಂಕ: ೦5-12-16

ಸಂಶೋಧಕರ ಘೋಷಣಾ ಪತ್ರ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯೋಜನೆಸಿದ್ಧಾಂತ ಮತ್ತು ಆಚರಣೆ(ತುಮಕೂರು ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಈ ಮಹಾ ಪ್ರಬಂಧವನ್ನು ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ಅಭಿವೃದ್ಧಿ ಅಧ್ಯಯನ ವಿಭಾಗದ, ಪ್ರಾಧ್ಯಾಪಕರಾದ **ಡಾ.ಎಚ್.ಡಿ.ಪ್ರಶಾಂತ್** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಗೋವಿಂದರಾಯ ಪಿ.ಹೆಚ್.
ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : 05-12-2016

ಪರಿವಿಡಿ

ಪರಿಶಿಷ್ಟಗಳು

ಕೋಷ್ಟಕಗಳು

ನಕ್ಷೆಗಳು

ರೇಖಾಚಿತ್ರಗಳು

ಅಧ್ಯಾಯ ಒಂದು

ಪ್ರಸ್ತಾವನೆ

ಅಧ್ಯಾಯ ಒಂದು

ಪ್ರಸ್ತಾವನೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎಂ.ಎನ್.ಆರ್.ಇ.ಜಿ.ಎ.)ಯ ಸಿದ್ಧಾಂತ ಮತ್ತು ಆಚರಣೆಯನ್ನು ಅರ್ಥಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದ ಆಶಯ. ಹಸಿವು, ಬಡತನ, ನಿರುದ್ಯೋಗ ನಿವಾರಿಸುವ ಆಶಯದಿಂದ, ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ ಅನೇಕ ಅಭಿವೃದ್ಧಿ ಯೋಜನೆಗಳನ್ನು ಜಾಗತಿಕ ಮಟ್ಟದಿಂದ ತಳಮಟ್ಟದ ಪಂಚಾಯತ್ ರಾಜ್ ಸಂಸ್ಥೆಯವರೆಗೆ ರೂಪಿಸಿ ಜಾರಿಗೆ ತರಲಾಗಿದೆ. ಹಸಿವನ್ನು ಹಿಂಗಿಸಬೇಕು, ಬಡತನವನ್ನು ನಿರ್ಮೂಲನೆ ಮಾಡಬೇಕು ಎಂದು ಹಲವು ಜನ ಚಳವಳಿಗಳು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ನಿರಂತರವಾಗಿ ನಡೆಯುತ್ತಿವೆ. ಈ ಚಳವಳಿಗಳ ಪ್ರಮುಖ ಗುರಿ ಹಸಿವು, ಬಡತನ, ಶಿಶು ಮರಣ ಪ್ರಮಾಣ ಕಡಿಮೆ ಮಾಡುವುದು, ಲಿಂಗಸಮಾನತೆ ಸಾಧಿಸುವುದು ಮತ್ತು ಉದ್ಯೋಗ ಅವಕಾಶಗಳನ್ನು ಪಡೆದುಕೊಳ್ಳುವುದು. ಇಂತಹ ಆಶಯಗಳ ಆಧಾರದಲ್ಲಿಯೇ ರೂಪಿತವಾದ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಎಂ.ಎನ್.ಆರ್.ಇ.ಜಿ.ಎ ಪ್ರಮುಖವಾದದ್ದು.

'ಅಭಿವೃದ್ಧಿ' ಪದವು ಪ್ರಾರಂಭದಲ್ಲಿ ಬಡತನ ನಿರ್ಮೂಲನೆ, ಹಸಿವು–ಶೋಷಣೆ, ಅಪೌಷ್ಟಿಕತೆ, ಅನಾರೋಗ್ಯ, ಅನಕ್ಷರತೆ ಮುಕ್ತ ಸಮಾಜದ ನಿರ್ಮಾಣ ಮಾಡುವ, ಆರ್ಥಿಕ–ಸಾಮಾಜಿಕ ಹಾಗೂ ಲಿಂಗ ಅಸಮಾನತೆಯು ಸೇರಿದಂತೆ ಇನ್ನೂ ಹಲವು ಸಾಮಾಜಿಕ ಬಿಕ್ಕಟ್ಟುಗಳಿಗೆ ಪರಿಹಾರೋಪಾಯ ಸೂಚಿಸುವ ಶಬ್ದವಾಗಿತ್ತು. ಇಂದು 'ಅಭಿವೃದ್ಧಿ'ಯು ಒಂದು ಅರ್ಥಹೀನ ವಿಚಾರವಾಗಿದೆ. ಪ್ರಾರಂಭದಲ್ಲಿ ನೀಡಿದ ಭರವಸೆಗಳಿಗೆ ಭಿನ್ನವಾಗಿ ಮುಕ್ತ ಮಾರುಕಟ್ಟೆಯು ರೂಪಿಸುತ್ತಿರುವ ಹೊಸ ಬಗೆಯ ಅಸಮಾನತೆಗೆ ಅಂಗೀಕಾರ ನೀಡುವ ಕೆಲಸವನ್ನು 'ಅಭಿವೃದ್ಧಿ' ಮಾಡುತ್ತಿದೆ. 'ಅಭಿವೃದ್ಧಿ' ತಾನು ಬದುಕಲು ಸಮಯ ಸಂದರ್ಭಕ್ಕೆ ತಕ್ಕಂತೆ ಬಣ್ಣವನ್ನು ಬದಲಾಯಿಸಿಕೊಳ್ಳಬಲ್ಲ ಗೋಸುಂಬೆಯಂತೆ ಕಾಣುತ್ತಿದೆ. 'ಅಭಿವೃದ್ಧಿ' ಪದ ಕೂಡ ಕಾಲ, ದೇಶ, ಸಂದರ್ಭ ಮತ್ತು ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ಬೇರೆ ಬೇರೆ ಅರ್ಥಗಳನ್ನು(ಬಹುತೇಕ ಸಂದರ್ಭಗಳಲ್ಲಿ ಬಂಡವಾಳಶಾಹಿ/ಉಳ್ಳವರ

ಪರವಾಗಿ) ರೂಪಿಸಿಕೊಳ್ಳಬಲ್ಲ ಒಂದು ರಾಜಕೀಯ ಪ್ರೇರಿತ ಪರಿಕಲ್ಪನೆಯಾಗಿದೆ (ಎಚ್.ಡಿ.ಪ್ರಶಾಂತ್, 2015).

18ನೇ ಶತಮಾನದ ಉತ್ತರಾರ್ಧದಲ್ಲಿ ಪ್ರಾರಂಭವಾದ 'ಅಭಿವೃದ್ಧಿ' ಪರಿಕಲ್ಪನೆಗಳಿಗೆ ಬಹಳ ದೊಡ್ಡ ಚರಿತ್ರೆ ಇದೆ. ಇದಕ್ಕೆ ಯಾವುದೇ ಗೌಪ್ಯ ಯೋಜನೆಗಳಿರಲ್ಲಿಲ್ಲ. ಆದರೆ ದುಷ್ಟ ಬುದ್ಧಿಯ ರಾಜಕಾರಣಿಗಳು, ಕೆಟ್ಟ ಮನಸ್ಸಿನ ಆಡಳಿತಶಾಹಿಗಳು ಮತ್ತು ಬಂಡವಾಳಶಾಹಿಗಳ ಕುಟಿಲೋಪಾಯಗಳ ಮೂಲಕ 'ಅಭಿವೃದ್ಧಿ' ಪ್ರಕ್ರಿಯೆಗಳು ಜಗತ್ತಿನಾದ್ಯಂತ ಬೇರೆ ಬೇರೆ ತಿರುವು ಪಡೆದು ಜಾರಿಗೊಳ್ಳ ಲಾರಂಭಿಸಿದವು. ಹೀಗಾಗಿಯೇ ಜೀವ ವಿರೋಧಿ ಅಭಿವೃದ್ಧಿಗೆ ಪ್ರತಿಯಾಗಿ, ಇಂದು ಜೀವ ಪರ ಅಭಿವೃದ್ಧಿಯನ್ನು ಸಾರ್ವತ್ರಿಕ ಪರಿಕಲ್ಪನೆ ರೂಪಿಸಿಕೊಳ್ಳುವುದು ಅಸಾಧ್ಯವಾಗಿದೆ. ಪ್ರಸ್ತುತ 'ಅಭಿವೃದ್ಧಿ' ರೂಪಾವಳಿಯು ಸಹಜ ಸ್ವಾಭಾವಿಕ ಪರಿಸರವೂ ಸೇರಿದಂತೆ ಸಾಮಾಜಿಕ ಸಂಬಂಧಗಳನ್ನೂ ಆರ್ಥಿಕ ಪ್ರಗತಿಯ ನೆಲೆಯಲ್ಲಿ ವ್ಯಾಪಾರ ವಸ್ತು ಪದಾರ್ಥವನ್ನಾಗಿಸಿದೆ. ಅಂದರೆ ಯಾವುದು ಸಂಪೂರ್ಣವಾಗಿ ಮಾರುಕಟ್ಟೆಯಿಂದ ದೂರ ಉಳಿಯಬೇಕೋ, ಅದೆಲ್ಲವೂ ಮಾರುಕಟ್ಟೆಯಲ್ಲಿ ಪಾವತಿಸಿದರೆ ಸೇವೆಯ ಭಾಗವಾಗಿ ದೊರಕುತ್ತದೆ.

ಅಭಿವೃದ್ಧಿ ಕುರಿತು ಜಗತ್ತಿನಲ್ಲಿ ರೂಪಗೊಂಡ ಸಾಹಿತ್ಯವನ್ನು ಪ್ರಮುಖವಾಗಿ ಎರಡು ರೀತಿಯಲ್ಲಿ ವಿಭಾಗಿಸಬಹುದು. ಒಂದು ಆರ್ಥಿಕ ಬೆಳವಣಿಗೆ ಆಧಾರಿತವಾದದ್ದು, ಎರಡನೆಯದು ಜನರ ಜೀವನ ಗುಣಮಟ್ಟ ಆಧಾರಿತವಾದದ್ದು. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ವಿವಿಧ ಕಾಲಘಟ್ಟದಲ್ಲಿ ಪ್ರಮುಖವಾಗಿ ಮೂರು ಬಗೆಯ ಅಭಿವೃದ್ಧಿ ಸಿದ್ಧಾಂತಗಳು ನಮಗೆ ಕಾಣಸಿಗುತ್ತವೆ. ಅವುಗಳೆಂದರೆ– ಅ) ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತ. ಆ) ನವ–ಉದಾರವಾದಿ ಅಭಿವೃದ್ಧಿ ಸಿದ್ಧಾಂತ ಮತ್ತು ಇ) ಮಾನವ ಅಭಿವೃದ್ಧಿ/ಹಕ್ಕು ಆಧಾರಿತ ಅಭಿವೃದ್ಧಿ ಸಿದ್ಧಾಂತ(ಎಚ್.ಡಿ.ಪ್ರಶಾಂತ್, 2014).

ಮೊದಲನೆಯದು ಬಂಡವಾಳ ಅಕ್ಯುಮ್ಯುಲೇಶನ್ (ಕೂಡಿಕೆ/ಸಂಚಯ) ದೃಷ್ಟಿಕೋನದಿಂದ ಆರ್ಥಿಕ ಬೆಳವಣಿಗೆಯ(ಆದಾಯದ ಹೆಚ್ಚಳ) ನೆಲೆಯಲ್ಲಿ ಅಭಿವೃದ್ಧಿಯನ್ನು ಪ್ರತಿಪಾದಿಸುತ್ತದೆ. ಒಂದು ದೇಶದ ಅಥವಾ ಪ್ರದೇಶದ ಅಭಿವೃದ್ಧಿಯು ಆ ದೇಶದ ಆದಾಯದ ಬೆಳವಣಿಗೆ ಅಥವಾ ವರಮಾನದ ಹೆಚ್ಚಳದಿಂದ ನಿರ್ಧಾರವಾಗುತ್ತದೆ. ಮುಂದುವರಿದು ಆಯಾ ದೇಶದ ಜನರ ತಲಾ ವರಮಾನದ ಹೆಚ್ಚಳವೇ ಅಭಿವೃದ್ಧಿ ಎಂದು ಈ ಸಿದ್ಧಾಂತ ಪ್ರತಿಪಾದಿಸುತ್ತದೆ. ಅದರ ಪ್ರಕಾರ ಒಂದು ದೇಶದ ಆದಾಯ ಹೆಚ್ಚಳವಾದರೆ, ಅದು ತನಗೆ ತಾನೆ ಸಹಜವಾಗಿ 'ನಿಧಾನವಾಗಿ ಹರಿದಿರುವ' ಮಾದರಿಯಲ್ಲಿ ಹರಿದುಬರುತ್ತದೆ ಎಂದು ವಾದಿಸುತ್ತದೆ. ಇಲ್ಲಿ ಆದಾಯವೇ ಅಭಿವೃದ್ಧಿಯ ಮುಖ್ಯ ಮಾಪನ. ಇಲ್ಲಿ ಜನರು ಕೇವಲ ಅಭಿವೃದ್ಧಿಯ ಒಂದು ಸಾಧನ ಮಾತ್ರ. ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಲಿಂಗಸಂಬಂಧಿ ಪ್ರಶ್ನೆಗಳಿಗೆ ಇಲ್ಲಿ ಅವಕಾಶವಿಲ್ಲ. ಇದು ಮೂಲಭೂತವಾಗಿ

'ಟ್ರಿಕಲ್ ಡೌನ್ ಥಿಯರಿ' ಆಧಾರದಲ್ಲಿ ಬಂದದ್ದು. ಅದು ಏನೆಂದರೆ, ಎಲ್ಲಿ ಉತ್ಪಾದನೆ ಜಾಸ್ತಿಯಾಗುತ್ತೋ ಅಲ್ಲಿ ಆದಾಯ ಜಾಸ್ತಿಯಾಗುತ್ತದೆ. ಎಲ್ಲಿ ಆದಾಯ ಜಾಸ್ತಿಯಾಗುತ್ತೋ ಅಲ್ಲಿ ಉಳಿತಾಯ ಜಾಸ್ತಿಯಾಗುತ್ತದೆ. ಎಲ್ಲಿ ಉಳಿತಾಯ ಜಾಸ್ತಿ ಆಗುತ್ತದೆಯೋ ಅಲ್ಲಿ ಎಲ್ಲವೂ ಸುಖಿಭಾವ ಇರುತ್ತದೆ. ಆದರೆ ಏನಾಯಿತು? ಏನಾಗಿದೆ? ಅನ್ನುವ ಪ್ರಶ್ನೆಯನ್ನು ಎತ್ತಿಕೊಳ್ಳಬೇಕು. ಈ ಪ್ರಶ್ನೆಯನ್ನು ಎತ್ತಿಕೊಂಡರೆ 2005 ರಿಂದ 2010ರ ವರೆಗೆ ಈ ದೇಶದ ಆರ್ಥಿಕ ಬೆಳವಣಿಗೆ ದರ ಶೇಕಡಾ 6 ಮತ್ತು 6ರ ಆಚೆ ಈಚೆ ಓಡಾಡುತ್ತಾ ಇದೆ. ನಿನ್ನೆ ಮೊನ್ನೆಯವರೆಗೆ ಈ ದೇಶದಲ್ಲಿ ಒಂದು ಕೋಟಿಗಿಂತಲೂ ಹೆಚ್ಚು ಆದಾಯ ಇರುವವರು ಘೋಷಿಸಿಕೊಂಡವರು ಕೇವಲ 42,800 ಜನ ಮಾತ್ರ ಇದು ಏನು ಎಂದು ನೀವೇ ತಿಳಿದುಕೊಳ್ಳಿ. ಅದೇ ಸಂದರ್ಭದಲ್ಲಿ ಈ ದೇಶದಲ್ಲಿ ಶೇಕಡ 56ರಷ್ಟು 15ರಿಂದ 35 ತಿಂಗಳ ವಯೋಮಾನದ ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಅರ್ಜುನ್ ಸೇನ್ ಗುಪ್ತ ಅವರು 2009ರಲ್ಲಿ ವಿವಿಧ ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಜನರ ಬದುಕನ್ನು ಕುರಿತು ನೀಡಿದ ವರದಿ ಪ್ರಕಾರ 836 ಮಿಲಿಯನ್ ಭಾರತೀಯರು ಪ್ರತಿದಿನ ಬದುಕಲು ಬಳಕೆ ಮಾಡುತ್ತಿರುವ ತಲಾ ಅನುಭೋಗ ವೆಚ್ಚ(*Per capita consumption)*20 ರೂಪಾಯಿಗಿಂತಲೂ ಕಡಿಮೆ(ಎಚ್.ಡಿ.ಪ್ರಶಾಂತ್, 2015).

ನವ-ಉದಾರವಾದಿ ಅಭಿವೃದ್ಧಿ ಸಿದ್ಧಾಂತ. ಈ ಸಿದ್ಧಾಂತವು ಮಾರುಕಟ್ಟೆಗೆ ಪ್ರಮುಖ ಆದ್ಯತೆಯನ್ನು ನೀಡುತ್ತದೆ. ಇಲ್ಲಿ ಮಾರುಕಟ್ಟೆಯೇ ಅಂತಿಮ. ಯಾರು ಎಷ್ಟು ಆದಾಯವನ್ನು ಪಡೆಯುತ್ತಾರೆ ಎಂಬುದು ಮಾರುಕಟ್ಟೆಯಿಂದ ನಿರ್ಧರಿಸಲ್ಪಡುತ್ತದೆ. ನವ-ಉದಾರವಾದಿ ಸಿದ್ಧಾಂತದ ಪ್ರಕಾರ ಆರ್ಥಿಕ ಅಂಶಗಳಾದ ಬಂಡವಾಳ, ಆದಾಯ, ಉಳಿತಾಯ, ಬಡ್ಡಿ, ಉತ್ಪಾದನೆ, ಕೊಳ್ಳುಬಾಕತೆ-ಎಲ್ಲವೂ ಜಾಗತಿಕ ಮಾರುಕಟ್ಟೆಯ ನಿರ್ದೇಶನ ಮತ್ತು ನಿಯೋಜನೆಯಂತೆ ನಡೆಯುತ್ತಿರುತ್ತವೆ. ಇಷ್ಟು ಮಾತ್ರವಲ್ಲದೆ, ನವ-ಉದಾರವಾದಿ ಸಿದ್ಧಾಂತ ಪ್ರತಿಪಾದಿಸುವ ಮಾರುಕಟ್ಟೆ ಆಧಾರಿತ ಆರ್ಥಿಕ ಅಂಶಗಳಿಗೆ ಎಲ್ಲವನ್ನೂ ನಿಯಂತ್ರಿಸುವ ಶಕ್ತಿಯಿದೆ. ಇಲ್ಲಿ ಬಂಡವಾಳದ ಹೂಡಿಕೆಗೆ ಮತ್ತು ಅದರಿಂದ ಬರುವ ಲಾಭಕ್ಕೆ ಮೊದಲ ಸ್ಥಾನ. ಜನರಿಗಾಗಲಿ, ಹಕ್ಕುಗಳಿಗಾಗಲಿ ಮತ್ತು ಸಾಮಾಜಿಕ ಹಂಚಿಕೆಯ ಪ್ರಶ್ನೆಗಳಿಗಾಗಲಿ ಇಲ್ಲಿ ಅವಕಾಶವಿಲ್ಲ. ಈ ಸಿದ್ಧಾಂತವು ಯಾವುದೇ ಸಮಸ್ಯೆಯನ್ನು ಜಾಗತಿಕ ನೆಲೆಯಲ್ಲಿ ಅರ್ಥೈಸುವ ಮತ್ತು ವಿಶ್ಲೇಷಿಸುವ ಮೂಲಕ ಸಮಸ್ಯೆಯನ್ನು ಸ್ಥಳೀಯ ನೆಲೆಯಲ್ಲಿ ಬಿಡಿಸಿ ನೋಡುವ ಗೋಜಿಗೆ ಹೋಗುವುದಿಲ್ಲ. ಉದಾಹರಣೆಗೆ, ಹಸಿವಿನಂತಹ ಗಂಭೀರ ಸಮಸ್ಯೆಯನ್ನು ಸಾಮಾಜಿಕ ಮತ್ತು ರಾಜಕೀಯ ನೆಲೆಯಲ್ಲಿ ನೋಡದೆ, ಹಸಿವಿಗೆ ಉತ್ಪಾದನೆ ಮತ್ತು ಆದಾಯ/ವರಮಾನದ ಕೊರತೆಯೇ ಪ್ರಮುಖ ಕಾರಣವೆಂದು ಈ ಸಿದ್ಧಾಂತ ವಾದಿಸುತ್ತದೆ. ಈ ಸಿದ್ಧಾಂತವು ಜನರ ಬದುಕು, ಜೀವನದ ಗುಣಮಟ್ಟವನ್ನು ಅಭಿವೃದ್ಧಿ ಪಡಿಸಲು ಹೆಚ್ಚಿನ ತಂತ್ರಜ್ಞಾನವನ್ನು ಉತ್ಪಾದನೆಯಲ್ಲಿ ಬಳಸಬೇಕು ಮತ್ತು ವಿಶೇಷ ಆರ್ಥಿಕ ವಲಯಗಳನ್ನು

ಅಭಿವೃದ್ಧಿಪಡಿಸಬೇಕು ಎಂದು ಸಾರುತ್ತದೆ. ಇದಕ್ಕೆ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿಯೇ ಮುಖ್ಯ. ಇಲ್ಲಿ ಯಾರು ಎಷ್ಟು ಬಂಡವಾಳವನ್ನು ಹೂಡಿ ತಮ್ಮ ಕುಶಲತೆ ಮತ್ತು ಸಾಮರ್ಥ್ಯದಿಂದ ಹೆಚ್ಚು ಆದಾಯವನ್ನು ಗಳಿಸುತ್ತಾರೋ ಅವರು ಮಾತ್ರ ಮುಖ್ಯ. ಜನರ ಆಹಾರ ಭದ್ರತೆಯ ಪ್ರಶ್ನೆಗಳು, ಅಪೌಷ್ಟಿಕತೆಯ ಪ್ರಶ್ನೆಗಳು, ಆರೋಗ್ಯದ ಪ್ರಶ್ನೆಗಳು, ಸಮಾನ ಶಿಕ್ಷಣದ ಪ್ರಶ್ನೆಗಳು, ವಸತಿ ಪ್ರಶ್ನೆಗಳು ಹಾಗೂ ಪರಿಸರ ಸಂಬಂಧಿ ಪ್ರಶ್ನೆಗಳು ಪ್ರಮುಖವಲ್ಲ. ಒಂದು ಪಕ್ಷ ಇವುಗಳು ಅಭಿವೃದ್ಧಿಗೆ ಮುಖ್ಯವಾದವು ಎಂದು ಹೇಳಿದ್ದರೂ ಅದು ಕೇವಲ ರೂಪಕದ ನೆಲೆಯಲ್ಲಿ ಮಾತ್ರ (ಎಚ್.ಡಿ.ಪ್ರಶಾಂತ್, 2015).

ಮೂರನೆಯದು, ಮಾನವ ಅಭಿವೃದ್ಧಿ/ಹಕ್ಕು ಆಧಾರಿತ ಸಿದ್ಧಾಂತ. ಈ ಸಿದ್ಧಾಂತವು ಜನ ಕೇಂದ್ರಿತ ಸಿದ್ಧಾಂತವೆಂದೇ ಪ್ರಚಾರ ಪಡೆದಿದೆ. ಈ ಸಿದ್ಧಾಂತವು ಆದಾಯ ಅಥವಾ ಬಂಡವಾಳ ಅಭಿವೃದ್ಧಿ ಕೇವಲ ಒಂದು ಸಾಧನ ಮಾತ್ರ. ಜನರೇ ಇಲ್ಲಿ ಅಭಿವೃದ್ಧಿಯ ಮುಖ್ಯ ಗುರಿ ಮತ್ತು ಕೇಂದ್ರ. ಹಕ್ಕು, ಭಾಗವಹಿಸುವಿಕೆ, ಸಾಮಾಜಿಕ ನ್ಯಾಯ ಮತ್ತು ಸಮಾನತೆ ಮಾನವ ಅಭಿವೃದ್ಧಿ ಸಿದ್ಧಾಂತದ ಪ್ರಮುಖ ಅಂಶಗಳು. ಈ ಸಿದ್ಧಾಂತವು ಶೋಷಣೆ, ಪ್ರಾದೇಶಿಕ ಅಸಮಾನತೆ, ಲಿಂಗಾಧಾರಿತ ಅಸಮಾನತೆ– ಹೀಗೆ ಇನ್ನೂ ಮುಂತಾದ ಸಾಮಾಜಿಕ ಮತ್ತು ರಾಜಕೀಯ ನೆಲೆಯಲ್ಲಿ ಅಭಿವೃದ್ಧಿಯನ್ನು ಅರ್ಥೈಸಲು ಪ್ರಯತ್ನಿಸುತ್ತದೆ. ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತ ಪ್ರತಿಪಾದಿಸುವ ಆದಾಯವು ತನ್ನಷ್ಟಕ್ಕೆ ತಾನೇ ಹರಿದು ಬರುವ ವಿಷಯವನ್ನು ಈ ಸಿದ್ಧಾಂತ ಪ್ರಶ್ನಿಸುತ್ತದೆ. ಮಾನವ ಅಭಿವೃದ್ಧಿ ಸಿದ್ಧಾಂತದ ಪ್ರಕಾರ ಸಮಾನತೆ, ಸಾಮಾಜಿಕ ನ್ಯಾಯ, ಭಾಗವಹಿಸುವಿಕೆ ಮತ್ತು ಸಮಾನ ಹಂಚಿಕೆ ಇವು ಪ್ರಜ್ಞಾಪೂರ್ವಕವಾಗಿ ಸಾಧಿಸಿಕೊಳ್ಳಬೇಕಾದ ವಿಷಯಗಳಾಗಿವೆ. ಇದು ಸಹಜ ಸ್ವಾಭಾವಿಕವಾಗಿ ತನಗೆ ತಾನೇ ನಡೆಯುವ ಪ್ರಕ್ರಿಯೆ ಅಲ್ಲ. ಅಭಿವೃದ್ಧಿಯನ್ನು ಸಮಗ್ರವಾಗಿ ಅರ್ಥೈಸದೆ ಆಯಾ ನೆಲೆಯಲ್ಲಿ ಅರ್ಥೈಸಿ, ಅಭಿವೃದ್ಧಿಯ ಸಾಧ್ಯಾಸಾಧ್ಯತೆಗಳನ್ನು ಕಂಡುಕೊಳ್ಳಲು ಮಾನವ ಅಭಿವೃದ್ಧಿ ಸಿದ್ಧಾಂತ ಪ್ರಯತ್ನಿಸುತ್ತದೆ. ಉದಾಹರಣೆಗೆ ಮಕ್ಕಳ ಆರೋಗ್ಯ, 03ರಿಂದ 06ರ ವಯೋಮಾನದ ಮಕ್ಕಳ ಆರೋಗ್ಯದ ಸ್ಥಿತಿ, ಸಾಕ್ಷರತೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಾದ ಹಾಜರಾತಿ, ದಾಖಲಾತಿ, ಮಧ್ಯದಲ್ಲಿ ಶಾಲೆ ಬಿಡುವವರ ಪ್ರಮಾಣ, ಇತ್ಯಾದಿ ವಿಷಯಗಳನ್ನು ಸಾಮಾಜಿಕ, ಪ್ರಾದೇಶಿಕ, ಲಿಂಗ ಸಂಬಂಧಿ(ಹೆಣ್ಣು ಮತ್ತು ಗಂಡು) ನೆಲೆಯಲ್ಲಿ ಮತ್ತು ವಯೋಮಾನದ ನೆಲೆಯಲ್ಲಿ ಬಿಡಿಸಿ ಅರ್ಥೈಸುವಲ್ಲಿ ಮಾನವ ಅಭಿವೃದ್ಧಿ ಸಿದ್ಧಾಂತ ಯಶಸ್ಸು ಕಂಡಿದೆ(ಜನಾರ್ದನ, 2014).

'ಅಭಿವೃದ್ಧಿ' ಏನು ಮಾಡಿದೆ? ಎಂಬ ಪ್ರಶ್ನೆ ಕೇಳುವ ಕಾರಣವೆಂದರೆ, ಅದು ಬಡತನವನ್ನು ಸುಧಾರಿಸುವಲ್ಲಿ ಹೇಳಲಾರದಂತೆ ಸೋತಿರುವುದು. ಅಂದರೆ ಆರೋಗ್ಯ, ಆಹಾರ, ಅಕ್ಷರ, ಉದ್ಯೋಗ, ಸ್ವತಂತ್ರ, ಕುಡಿಯುವ ನೀರು ಇತ್ಯಾದಿ ಅಗತ್ಯ ಸೌಲಭ್ಯಗಳನ್ನು ಕನಿಷ್ಠ ಪ್ರಮಾಣದಲ್ಲಿ ನೀಡಲು

ಸೋತಿರುವುದು. ಇಂತಹ ಸೋಲುಗಳನ್ನು ಸರಿ ಪಡಿಸುವ ನೆಲೆಯಲ್ಲಿಯೇ ನಮ್ಮ ಸರ್ಕಾರಗಳು (ಕೇಂದ್ರ ಮತ್ತು ರಾಜ್ಯ) ಹೊಸ ಹೊಸ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುತ್ತಿವೆ. ಅವುಗಳಲ್ಲಿ ಎಂ.ಜಿ.ಎನ್.ಆರ್.ಜಿ.ಎ., ಕೂಡ ಒಂದು.

ಬಡತನ ನಿರ್ಮೂಲನೆ, ಆಹಾರದ ಭದ್ರತೆ ಒದಗಿಸುವ ದಿಕ್ಕಿನಲ್ಲಿ ಕಳೆದ ಆರು ದಶಕಗಳಿಂದ ಅನೇಕ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ವಿವಿಧ ರೂಪದಲ್ಲಿ ಅನುಷ್ಠಾನಕ್ಕೆ ಬಂದಿವೆ. ಅವುಗಳಲ್ಲಿ ಮುಖ್ಯವಾದವು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ ಖಾತರಿ ಯೋಜನೆ, ಜವಹಾರ್ ರೋಜ್‌ಗಾರ್ ಯೋಜನೆ, ಉದ್ಯೋಗ ಭರವಸೆ ಯೋಜನೆ, ಜವಹಾರ್ ಗ್ರಾಮ ಸಮೃದ್ಧಿ ಯೋಜನೆ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ, ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆ, ಈ ಎಲ್ಲಾ ಯೋಜನೆಗಳ ಆಶಯ ಸಾಮಾಜಿಕವಾಗಿ ವಂಚಿತ ಜನರ ಹಸಿವನ್ನು ನೀಗಿಸಿ ಅವರ ಸಾಮಾಜಿಕ ಚಲನೆಯನ್ನು ಹೆಚ್ಚಿಸುವುದು. ಹೀಗೆ ಯೋಜನೆಗಳನ್ನು ರೂಪಿಸುವಾಗ, ಅನುಷ್ಠಾನ ಮಾಡುವ/ಫಲಾನುಭವಿಗಳಿಗೆ ತಲುಪಿಸುವ ವಿಧಾನದಲ್ಲಿನ ಲೋಪದೋಷಗಳಿಂದ ಉಂಟಾದ ಭ್ರಷ್ಟಾಚಾರ, ಕಾಲವಿಳಂಬ, ಅನುದಾನ ಬಳಕೆಯಲ್ಲಿನ ತಾರತಮ್ಯ, ಇನ್ನೂ ಮುಂತಾದ ಹಲವು ಕಾರಣಗಳಿಂದ ಆಶಯಕ್ಕೆ ಅನುಗುಣವಾಗಿ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಅಭಿವೃದ್ಧಿ ಯೋಜನೆಗಳು ತಳಮಟ್ಟದಲ್ಲಿ ಆಚರಣೆಗೆ ಬಾರದಿರುವ ಕುರಿತು ಅನೇಕ ಅಧ್ಯಯನಗಳು ನಡೆದಿವೆ(ಸೌಮ್ಯ ಕಿದಂಬಿ–2007). ಇಂತಹ ಅನೇಕ ಅಧ್ಯಯನಗಳು ತಳಮಟ್ಟದಲ್ಲಿ ಅಭಿವೃದ್ಧಿ ಯೋಜನೆಗಳ ಆಶಯಗಳಿಗೆ ಪೂರಕವಾಗಿ ಆಚರಣೆಗೆ ಬಾರದಿರುವ ಕುರಿತು ವಿಶ್ಲೇಷಣೆಯನ್ನು ಮಾಡಿವೆ (ಎಚ್.ಡಿ, ಪ್ರಶಾಂತ್, 2004 ಮತ್ತು ವಾಸವಿ.ಎ.ಆರ್ 2008). ಇಂತಹ ಹಲವು ಅಧ್ಯಯನಗಳ ಫಲಿತಗಳು ಅನೇಕ ಜನ ಚಳವಳಿಗಳನ್ನು ರೂಪಿಸುವ ಜೊತೆಗೆ ಹೊಸ ಹೊಸ ಅಭಿವೃದ್ಧಿ ಕಾರ್ಯಕ್ರಮ ಮತ್ತು ಯೋಜನೆಗಳನ್ನು ರೂಪಿಸುವ ಒತ್ತಾಯಗಳನ್ನು ಮಾಡಿದವು. ಸಾಮಾಜಿಕವಾಗಿ ಅವಕಾಶ ವಂಚಿತರಿಗೆ ಉದ್ಯೋಗದ ಹಕ್ಕನ್ನು ಯಾವುದೇ ಅಭಿವೃದ್ಧಿ ಕಾರ್ಯಕ್ರಮ ನೀಡಲಿಲ್ಲ. ಗ್ರಾಮೀಣ ಪರಿಸರದಲ್ಲಿ ಉದ್ಯೋಗ ಹಕ್ಕಾಗದ ಹೊರತು, ಅಸಹಾಯಕರಿಗೆ ಉದ್ಯೋಗ ದೊರಕುವುದು ಸಾಮಾಜಿಕ–ಸಾಂಸ್ಕೃತಿಕ ಕಾರಣಗಳಿಂದ ಮಾತ್ರವಲ್ಲದೇ ರಾಜಕೀಯ ದೃಷ್ಟಿಯಿಂದಲೂ ದುಸ್ತರ ಎನ್ನುವುದನ್ನು ರಾಜಸ್ಥಾನದಲ್ಲಿ ಜಾನ್ ಡ್ರೇಜ್ ಅವರ ನಾಯಕತ್ವದಲ್ಲಿ ರೂಪಿತವಾದ ಹೋರಾಟ Right To Food Form ಎನ್ನುವ ನಾಗರೀಕ ಸಮಾಜದ ಅನುಭವ.

ಕರ್ನಾಟಕದಲ್ಲಿ 1991ರ ಜನಗಣತಿ ಪ್ರಕಾರ ಒಂದು ಸಾವಿರ ಪುರುಷರಿಗೆ 960 ಜನ ಮಹಿಳೆಯರು ಇದ್ದರೆ, 2001ರ ಜನಗಣತಿ ಪ್ರಕಾರ ಅದು 965ಕ್ಕೆ ಹೆಚ್ಚಳವಾಗಿದೆ. ಈ ಹೆಚ್ಚಳವನ್ನು ಕೇವಲ ಸಂಖ್ಯೆಶಾಸ್ತ್ರದ ದೃಷ್ಟಿಯಿಂದ ಚರ್ಚಿಸಿದರೆ ಸಾಲದು ಆರೋಗ್ಯ, ಆಹಾರದ ಭದ್ರತೆ ಮತ್ತು

ಪೌಷ್ಟಿಕತೆಯ ಹಿನ್ನೆಲೆಯಲ್ಲಿ ಗಮನಿಸಿದರೆ 0–06 ವಯೋಗುಂಪಿನಲ್ಲಿನ ಲಿಂಗ ಅನುಪಾತದ ಅಂಕಿ ಅಂಶ ಆತಂಕದಡೆಗೆ ಸೆಳೆಯುತ್ತದೆ. ಕರ್ನಾಟಕದಲ್ಲಿ 1991ರ ಜನಗಣತಿ ಪ್ರಕಾರ 0–06 ವಯೋಗುಂಪಿನಲ್ಲಿ ಒಂದು ಸಾವಿರ ಗಂಡು ಮಕ್ಕಳಿಗೆ 960 ಜನ ಹೆಣ್ಣು ಮಕ್ಕಳು ಇರುವುದು ಕಂಡುಬಂದರೆ, 2001ರಲ್ಲಿ 949ಕ್ಕೆ ಕುಸಿದಿದೆ. ಈ ಕುಸಿತದ ಪರಿಣಾಮ ಅಭಿವೃದ್ಧಿ ಆಯಾಮದ ಚರ್ಚೆಗೆ ಗ್ರಾಸವಾಗುವುದು. ಏಕೆ 0–06 ವಯೋಮಾನದ ಹೆಣ್ಣು ಮಕ್ಕಳು ಒಂದು ದಶಕದ ಅವಧಿಯಲ್ಲಿ ತೀರಾ ಕಡಿಮೆಯಾಗಿದ್ದಾರೆ? ಎನ್ನುವಂತಹ ಮೂಲಭೂತ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ. ಉದಾಹರಣೆಗೆ ಬೆಂಗಳೂರಿನ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿ 1000 ಗಂಡು ಮಕ್ಕಳಿಗೆ 953 ಹೆಣ್ಣುಮಕ್ಕಳಿದ್ದರೆ, ಬೆಂಗಳೂರು ನಂತಹ ನಗರ ಪ್ರದೇಶದಲ್ಲಿ ಈ ಸಂಖ್ಯೆ 906 ಇರುವುದು ಒಂದು ಆಘಾತಕಾರಿ ಅಂಶವೇ ಆಗಿದೆ. ಕರ್ನಾಟಕದಲ್ಲಿ ವಾರ್ಷಿಕವಾಗಿ 0.40 ಲಕ್ಷದಷ್ಟು ನವಜಾತ ಶಿಶುಮರಣ ಸಂಭವಿಸುತ್ತಿದೆ. ಇದನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ನೋಡಿದರೆ, ನಗರ ಪ್ರದೇಶದಲ್ಲಿ ಶೇಕಡ 80 ರಷ್ಟು ಮತ್ತು ಗ್ರಾಮೀಣ ಪ್ರದೇಶದಲ್ಲಿ ಶೇಕಡ 69 ರಷ್ಟು ನವಜಾತ ಶಿಶುಗಳ ಮರಣವಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–3ರ ಪ್ರಕಾರ ಹಿಂದಿನ ಹತ್ತು ವರ್ಷಗಳಲ್ಲಿ ನವಜಾತ ಶಿಶುವಿನ ಮರಣದಲ್ಲಿ ಗಂಡು ಶಿಶುವಿನ ಮರಣ ಪ್ರಮಾಣ ಶೇಕಡ 53.6 ಇದ್ದರೆ, ಹೆಣ್ಣು ಶಿಶುವಿನ ಮರಣ ಪ್ರಮಾಣವು ಶೇಕಡ 34.6ರಷ್ಟು ಇದೆ. ಹಾಗೆಯೇ ಜನನ ನಂತರದ ಶಿಶುವಿನ ಮರಣ ಪ್ರಮಾಣವು ಗಂಡು ಶಿಶುವಿನಲ್ಲಿ ಶೇಕಡ 16.5 ಇದ್ದರೆ, ಹೆಣ್ಣು ಶಿಶುವಿನಲ್ಲಿ ಶೇಕಡ 19.3ಕ್ಕೆ ಹೆಚ್ಚಳವಾಗಿದೆ. ಇದಕ್ಕೆ ಪ್ರಮುಖ ಕಾರಣಗಳೇನು ಎಂಬುದಕ್ಕೆ ಅನಾರೋಗ್ಯವೆ? ಅಪೌಷ್ಟಿಕವೆ? ಈ ಎರಡು ಮಾಪನಗಳು ಬಡತನವನ್ನು ಗುರುತಿಸುತ್ತವೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (2005–06) ಪ್ರಕಾರ ಮೂರು ವರ್ಷಕ್ಕಿಂತಲೂ ಕಡಿಮೆ ವಯೋಮಾನದ ಒಟ್ಟು ಮಕ್ಕಳಲ್ಲಿ ಶೇಕಡ 46ರಷ್ಟು ಮಕ್ಕಳು ಕನಿಷ್ಟ ಮಟ್ಟದ ದೈಹಿಕ ಆರೋಗ್ಯದ ತೂಕ ಹೊಂದಿರುವುದಿಲ್ಲ. ಅದರಲ್ಲಿ ಶೇಕಡಾ 33ರಷ್ಟು ಮಹಿಳೆಯರು ಮತ್ತು ಶೇಕಡಾ 28ರಷ್ಟು ಪುರುಷರ ಬಾಡಿ ಮಾಸ್ ಸೂಚಿ (ಬಿ.ಎಂ.ಐ.) ನಿಗದಿತ ಕನಿಷ್ಟ ಮಟ್ಟಕ್ಕಿಂತಲೂ ಕಡಿಮೆ ಇದೆ. 15–35 ತಿಂಗಳ ವಯೋಮಾನದ ಶೇಕಡಾ 79ರಷ್ಟು ಮಕ್ಕಳು, 15–49 ವಯೋಮಾನದ ಶೇಕಡಾ 56ರಷ್ಟು ಮಹಿಳೆಯರು, ಇದೇ ವಯೋಮಾನಕ್ಕೆ ಸೇರಿದ ಶೇಕಡಾ 24ರಷ್ಟು ಪುರುಷರು ಮತ್ತು ಶೇಕಡಾ 58ರಷ್ಟು ಗರ್ಭಿಣಿಯರು ಆಹಾರದ ಕೊರತೆ ಮತ್ತು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ.

2010–12ರ ಅವಧಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಜೀವಂತ ಹುಟ್ಟುವ ಒಂದು ಸಾವಿರ ಮಕ್ಕಳಲ್ಲಿ 50 ಮಕ್ಕಳು ಒಂದು ವರ್ಷದ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುವುದಕ್ಕೆ ಮೊದಲೇ ಸಾವನ್ನು ಕಾಣುತ್ತಿವೆ. ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಐ.ಎಂ.ಆರ್ ಪ್ರಮಾಣವು 49 ಇದ್ದರೆ, ಹೆಚ್ಚು

ಹಳ್ಳಿಗಳನ್ನು ಮತ್ತು ಸರಾಸರಿ ಶೇಕಡ 66ರಷ್ಟು ಜನರು ತಮ್ಮ ಜೀವನಕ್ಕೆ ಕೃಷಿಯನ್ನೆ ನೇರವಾಗಿ ಅವಲಂಬಿಸಿರುವುದು. ಗುಲ್ಬರ್ಗಾ ವಿಭಾಗದಲ್ಲಿ ಐ.ಎಂ.ಆರ್. ಪ್ರಮಾಣವು ಶೇಕಡ 67ರಷ್ಟು ಇರುವುದು ಈ ಭಾಗದ ಹಳ್ಳಿಗಳಲ್ಲಿ ಆಹಾರ, ಪೌಷ್ಟಿಕತೆ ಮತ್ತು ಆರೋಗ್ಯ ಸೌಲಭ್ಯದ ಕೊರತೆಯ ಸ್ಥಿತಿಯನ್ನು ಸೂಚಿಸುತ್ತದೆ. ಇಂಡಿಯಾದಲ್ಲಿ ಎಂ.ಎಂ.ಆರ್ ಪ್ರಮಾಣವು 178 ಇದ್ದರೆ, ಕರ್ನಾಟಕದಲ್ಲಿ 144 ರಷ್ಟಿದ್ದರೆ ಬೀದರ್‌ನಲ್ಲಿ 299 ಮತ್ತು ಹಿಂದುಳಿದ ಜಿಲ್ಲೆಗಳಲ್ಲಿ ಎಂ.ಎಂ.ಆರ್ ಪ್ರಮಾಣ 350 ರಷ್ಟಿದೆ ಎನ್ನುವ ಅಂಶಗಳು ಆರ್ಥಿಕತೆಯ ಬಿಕ್ಕಟ್ಟು ಬಂಧಿಸಿರುವ ನಿರುದ್ಯೋಗವನ್ನು ಸಹಜವಾಗಿಯೆ ಸೂಚಿಸುತ್ತದೆ. ಆರೋಗ್ಯದ ಮತ್ತು ಮಾನವ ಅಭಿವೃದ್ಧಿಯ ವರದಿಗಳು ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ ಎನ್ನುವಂತಹ ಅಂಶಗಳನ್ನು ಉಲ್ಲೇಖಿಸಿವೆ.

ಇತ್ತೀಚೆಗೆ ಬಿಡುಗಡೆಯಾದ 2011ರ ಸಾಮಾಜಿಕ–ಆರ್ಥಿಕ ಜಾತಿ ಗಣತಿ (ಎಸ್.ಐ.ಸಿ.ಸಿ) ವರದಿಯು ಗ್ರಾಮೀಣ ಪ್ರದೇಶದಲ್ಲಿರುವ ಶೇಕಡ 49ರಷ್ಟು ಕುಟುಂಬಗಳು ಬಡತನದಲ್ಲಿವೆ, ಶೇಕಡ 51 ರಷ್ಟು ಕುಟುಂಬಗಳು ಬದುಕಿಗೆ ಪ್ರತಿದಿನವೂ ಕೂಲಿ ಕೆಲಸ ಅವಲಂಬಿಸಿವೆ. ಶೇಕಡ 30 ಕುಟುಂಬಗಳು ಭೂಮಾಲೀಕತ್ವವನ್ನು ಹೊಂದಿಲ್ಲ ಎಂದು ತಿಳಿಸುತ್ತದೆ. ಇಂಡಿಯಾದಲ್ಲಿ 2001 ಮತ್ತು 2011ರ ಅವಧಿಯಲ್ಲಿ ಸಾಗುವಳಿದಾರರ ಸಂಖ್ಯೆ 127.3 ಮಿಲಿಯನ್ ನಿಂದ 118.6 ಮಿಲಿಯನ್‌ಗೆ ಇಳಿದಿದೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ 59ರಷ್ಟು ಪುರುಷರು ಮತ್ತು ಶೇಕಡ 75ರಷ್ಟು ಮಹಿಳೆಯರು ಜೀವನೋಪಾಯಕ್ಕೆ ಕೃಷಿಯನ್ನು ನೇರವಾಗಿ ಅವಲಂಬಿಸಿದ್ದಾರೆ. ಕಳೆದ ಮೂರು ಜನಗಣತಿ ಅವಧಿಯಲ್ಲಿ ಕೃಷಿಕೂಲಿ ಕಾರ್ಮಿಕರ ಸಂಖ್ಯೆ 74.6 ಮಿಲಿಯನ್ (1991) ಯಿಂದ 106.8 ಮಿಲಿಯನ್ (2001) ಮತ್ತು 144 ಮಿಲಿಯನ್‌ಗೆ (2011) ಹೆಚ್ಚಳವಾಗಿದೆ. ಇದರ ಪರಿಣಾಮವಾಗಿ ಕೃಷಿ ಕೂಲಿ ಕಾರ್ಮಿಕರ ಸಂಖ್ಯೆ ಶೇಕಡ 26 ರಿಂದ ಶೇಕಡ 30ಕ್ಕೆ ಹೆಚ್ಚಳವಾಗಿದೆ. ಹಳ್ಳಿಗಳಲ್ಲಿ ಇರುವ ಶೇಕಡ 77ರಷ್ಟು ಕುಟುಂಬಗಳು ಪ್ರತಿದಿನ ದುಡಿಮೆಗಾಗಿ 5 ಕಿ.ಲೋ ಪ್ರಯಾಣ ಮಾಡುತ್ತಿದ್ದಾರೆ ಎಂದು ತಿಳಿಸುತ್ತದೆ. ಕರ್ನಾಟಕದ ಒಂದು ದೃಷ್ಟಿಕೋನ 2020 ಬಹಳ ಗಂಭೀರವಾದ ಸಂಗತಿಯೆಂದರೆ ಕೃಷಿಯ ಅವಲಂಬನೆಯನ್ನು ಇಂದಿನ ಶೇಕಡ 61% ರಿಂದ 2020ರಲ್ಲಿ ಶೇಕಡ 35–40%ಕ್ಕೆ ಇಳಿಸಬೇಕೆಂಬ ಶಿಫಾರಸ್ಸು. ಈ ಬಗೆಯ ಶಿಫಾರಸ್ಸು ವರದಿಯು ತಳೆದಿರುವ ಸೈದ್ಧಾಂತಿಕ ನೆಲೆಗಟ್ಟಿಗೆ ಸಂಪೂರ್ಣ ವಿರುದ್ಧವಾದುದಾಗಿದೆ. ಏಕೆಂದರೆ ವರದಿಯಲ್ಲಿ ಜನರ ಧಾರಣಾ ಸಾಮರ್ಥ್ಯವನ್ನು ಮತ್ತು ಸ್ವಾತಂತ್ರದ ವ್ಯಾಪ್ತಿಯನ್ನು ವಿಸ್ತೃತಗೊಳಿಸುವ ಬಗ್ಗೆ ಒತ್ತಿ ಹೇಳಲಾಗಿದೆ. ಕೃಷಿಯಿಂದ ವರ್ಗಾವಣೆಯಾದ ದುಡಿಯುವ ವರ್ಗಗಳು ಎಲ್ಲಿ ಬದುಕನ್ನು ಕಂಡುಕೊಳ್ಳಬೇಕು? ಎನ್ನುವ ಪ್ರಶ್ನೆಯನ್ನು ನಾವು ಬಹಳ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಹೀಗೆ ವಲಸೆ ಹೋಗಿರುವ ಶಿಕ್ಷಣ ವಂಚಿತ ಕುಶಲತೆಯಿಲ್ಲದ ಜನರು ಕೃಷಿ ಚಟುವಟಿಕೆಗಳಲ್ಲಿ, ಹೋಟೆಲ್‌ಗಳಲ್ಲಿ, ಇಟ್ಟಿಗೆ ಭಟ್ಟಿಗಳಲ್ಲಿ, ಗಣಿಗಳಲ್ಲಿ, ಮೀನುಗಾರಿಕೆ ಪ್ರಕ್ರಿಯೆಗಳಲ್ಲಿಯೂ ಕೂಡ

ಶ್ರಮದಾಯಕದಂತಹ ಕೆಲಸಗಳಲ್ಲಿ ತೊಡಗಿದ್ದಾರೆ. ವಲಸೆ ಕುರಿತು ಬಹಳ ವಿಸ್ತೃತವಾದ ಸಂಶೋಧನೆಗಳು ಸಮಾಜ ವಿಜ್ಞಾನಗಳ ಕ್ಷೇತ್ರಗಳಲ್ಲಿ ನಡೆದಿವೆ. ಇವು ಲಿಂಗ, ಮಕ್ಕಳು, ದುಡಿಮೆ, ಸಂಪನ್ಮೂಲ, ವಲಸೆಯ ಪರಿಸ್ಥಿತಿ ಇತ್ಯಾದಿಗಳನ್ನು ಕುರಿತು ಅಧ್ಯಯನಗಳು ನಡೆದಿವೆ(ಸಿದ್ದಗಂಗಮ್ಮ 2010). ಈಗ ನಡೆದ ಸಂಶೋಧನೆಗಳು ಸಮಾಜ ವಿಜ್ಞಾನ/ಜ್ಞಾನಶಾಖೆಗಳಿಗೆ ಮಹತ್ವದ ಕೊಡುಗೆಗಳನ್ನು ನೀಡಿದೆ. ಹೀಗೆ ಭಾರತೀಯರ ಸಾಮಾಜಿಕ ಸಂದರ್ಭದಲ್ಲಿ ವಲಸೆಯೂ ಭಾರತದ ಉದ್ದಗಲಕ್ಕೂ ಜೀವನೋಪಾಯಕ್ಕೆ ತಂತ್ರಗಾರಿಕೆಯಾಗಿ ಕಾಣುತ್ತದೆ. ಶೈಕ್ಷಣಿಕ ವಲಯದಲ್ಲಿ ನಡೆಯುತ್ತಿರುವ ಸಂಶೋಧನೆಗಳು ಸಹ ವಲಸೆಯನ್ನು ಜೀವನೋಪಾಯದ ತಂತ್ರಗಾರಿಕೆ ಎಂದು, ಆಂತರಿಕ ಕಾರ್ಮಿಕ ವಲಸೆಯೂ ಜೀವನೋಪಾಯದ ಅವಿಭಾಜ್ಯ ಅಂಗವೆಂದು ಹಲವು ದಶಕಗಳಿಂದ ಗುರ್ತಿಸಿವೆ. ಗ್ರಾಮೀಣ ಪ್ರದೇಶದಲ್ಲಿ ಸರಾಸರಿ ಮೂರನೇ ಒಂದು ಭಾಗದಷ್ಟು ಕುಟುಂಬಗಳಲ್ಲಿ ಕನಿಷ್ಠ ಒಬ್ಬ ವ್ಯಕ್ತಿಯಾದರೂ ಜೀವನೋಪಾಯಕ್ಕಾಗಿ ವಲಸೆ ಹೋಗಿರುವುದು ತಿಳಿಯುತ್ತದೆ. ಇದನ್ನು ಮನಗಂಡ ಜನಪರ ಗುಂಪು ಉದ್ಯೋಗವನ್ನು ಹಕ್ಕಾಗಿ ರೂಪಿಸುವ ಕುರಿತು ಚರ್ಚೆಗಳು ಹುಟ್ಟಿಹಾಕುತ್ತವೆ. ಅದರ ಫಲವೇ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ.

ಜಾಗತಿಕ ಮಟ್ಟದಲ್ಲಿ ಆಹಾರದ ಭದ್ರತೆ ಮತ್ತು ಬಡತನ ನಿರ್ಮೂಲನೆ ಅಂಗವಾಗಿ ಅನೇಕ ದೈಹಿಕ ಶ್ರಮ ಆಧಾರಿತ ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದೆ. ಆದರೆ ಇಂದಿಗೂ ಜಗತ್ತಿನಲ್ಲಿ 842 ಮಿಲಿಯನ್ ಜನರು ಹಸಿವಿನಿಂದ ಬಳಲುತ್ತಿದ್ದಾರೆ. 200 ಬಿಲಿಯನ್ ಜನರು ನಿರುದ್ಯೋಗಿಗಳಾಗಿರುವುದು ತಿಳಿಯುತ್ತದೆ(ವರ್ಡ್ ಕಾನ್ಫರೆನ್ಸ್ ಆನ್ ಯುತ್ 2014). ಭಾರತದಲ್ಲಿ ಒಪ್ಪತ್ತಿನ ಊಟಕ್ಕೂ ಇಲ್ಲದ ಎಷ್ಟೋ ಮಂದಿ ನಮ್ಮ ನಡುವೆ ಇದ್ದಾರೆ, ವಿಶ್ವಬ್ಯಾಂಕ್ ಅಂದಾಜಿನ ಪ್ರಕಾರ ಭಾರತದ ಶೇಕಡ 39ರಷ್ಟು ಜನರ ಆದಾಯ ದಿನಕ್ಕೆ ರೂ 20 ಕ್ಕಿಂತ ಕಡಿಮೆ. ಭಾರತದ 40 ಕೋಟಿ ಜನತೆಗೆ ಬದುಕಲು ಬೇಕಾಗುವ ಮೂಲಭೂತ ಅವಶ್ಯಕತೆಗಳಾದ ವಿದ್ಯುತ್, ಆರೋಗ್ಯ, ಶೌಚಾಲಯ, ಶಿಕ್ಷಣ, ಉದ್ಯೋಗ ಮತ್ತು ಆಹಾರ ಭದ್ರತೆ ಮುಂತಾದ ಸೌಲಭ್ಯಗಳಿಲ್ಲದೆ ಬಳಲುತ್ತಿರುವುದು ತಿಳಿಯುತ್ತದೆ(ಅಮಾರ್ತ್ಯ ಸೇನ್ ಮತ್ತು ಜೀನ್ ಡ್ರೇಜ್ 2013).

ಭಾರತದಲ್ಲಿ ದೈಹಿಕ ಶ್ರಮ ಆಧಾರಿತ ಅನೇಕ ಉದ್ಯೋಗ ಯೋಜನೆಗಳು ಆಚರಣೆಗೆ ಬಂದಿವೆ ಆದರೂ ಇವು ಆಹಾರದ ಭದ್ರತೆಯ ತೀವ್ರತೆಯನ್ನು ತೋರಿಸುತ್ತದೆ. ನಿರುದ್ಯೋಗದಿಂದ ಆರ್ಥಿಕ ಅವಕಾಶಗಳ ಕೊರತೆ, ಇಂತಹ ಕೊರತೆಯಿಂದ ಅಪೌಷ್ಟಿಕತೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ ಎಂದು ತಿಳಿಸುತ್ತದೆ. ಆರೋಗ್ಯದ ರಕ್ಷಣೆಗೆ ಹೆಚ್ಚು ವೆಚ್ಚವಾಗುತ್ತಿರುವುದು ಅಭಿವೃದ್ಧಿ ಮತ್ತು ಆರೋಗ್ಯದ ಹಿನ್ನಲೆಯಲ್ಲಿ ಚರ್ಚಿಸಿದರೆ ವಿಶ್ವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಒಟ್ಟು 188 ರಾಷ್ಟ್ರಗಳಲ್ಲಿ ಭಾರತ 182 ನೇ ಸ್ಥಾನದಲ್ಲಿರುವುದು ಕಂಡುಬರುತ್ತದೆ(ಗೀತಾ ಸೇನ್ 2002).

ಬಡತನ, ಹಸಿವು, ಅಪೌಷ್ಟಿಕತೆ, ವಲಸೆಯ ಸ್ವರೂಪ ಮತ್ತು ಅದರ ಪ್ರಮಾಣ ಹಾಗೂ ಅದರ ವ್ಯಾಪ್ತಿ ದೇಶದಿಂದ ದೇಶಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ಗ್ರಾಮೀಣದಿಂದ ನಗರಕ್ಕೆ ವ್ಯತ್ಯಾಸಗಳನ್ನು ಕಾಣಬಹುದು. ಪ್ರದೇಶಗಳ ಅಭಿವೃದ್ಧಿ ಹೊಂದಿತ್ತಿರುವ ದೇಶಗಳಲ್ಲಿ ಸಹಜವಾಗಿಯೇ ವ್ಯತ್ಯಾಸಗಳನ್ನು ಗುರುತಿಸಬಹುದು. ಬಡತನದ ಬಹುಭಾಗ ಮತ್ತು ಪ್ರಮಾಣ ನಿರುದ್ಯೋಗದಂತಹ ಸಮಸ್ಯೆಗಳೇ ಪ್ರಮುಖ ಕಾರಣವಾಗಿರುವ ಅಂಶ ಅನೇಕ ಅಧ್ಯಯನಗಳಿಂದ ತಿಳಿದುಬರುತ್ತದೆ. ಈ ಹಿನ್ನಲೆಯಲ್ಲಿ ಸಮಾಜ ವಿಜ್ಞಾನಿಗಳು ಬಡತನವನ್ನು ಎರಡು ಪ್ರಕಾರದಲ್ಲಿ ಗುರುತಿಸಿರುತ್ತಾರೆ. ಒಂದು ಸಾಪೇಕ್ಷ ಬಡತನ ಮತ್ತು ನೈಜ ಬಡತನ. ಇವುಗಳ ವ್ಯತ್ಯಾಸವನ್ನು ಸಾಮಾಜಿಕ ಮತ್ತು ಆರ್ಥಿಕ ಆಯಾಮಗಳಲ್ಲಿ ನೋಡಿದರೆ ಸಾಪೇಕ್ಷ ಬಡತನವೆಂದರೆ "ಕನಿಷ್ಟ ಮಟ್ಟದ ಜೀವನ ನಿರ್ವಹಣೆಗೆ ಆಗದಿರುವಂತಹ ಪರಿಸ್ಥಿತಿಗೆ" ಸಾಪೇಕ್ಷ ಬಡತನವೆಂದು ಅರ್ಥಮಾಡಿಕೊಳ್ಳುವುದು. ಹಾಗೆಯೇ ನೈಜ ಬಡತನವೆಂದರೆ "ದೈಹಿಕ ಆರೋಗ್ಯದ ರಕ್ಷಣೆಗೆ ಒದಗಿಸಲಾಗದೇ ಇರುವಷ್ಟು ಸಂಪನ್ಮೂಗಳ ಕೊರತೆಯಿರುವುದನ್ನು" ನೈಜ ಬಡತನವೆಂದು ವಿವರಿಸಲಾಗುವುದು (ದಿ ಪೆಂಗ್ವಿನ್ ಡಿಕ್ಷ್‌ನರಿ ಆಫ್ ಸೋಶಿಯಾಲಾಜಿ-1984). ಬಡಜನತೆಯನ್ನು ಹಸಿವು ಮುಕ್ತಗೊಳಿಸುವ, ಕನಿಷ್ಟ ದಿನಗಳಾದರೂ ಉದ್ಯೋಗವಕಾಶಗಳನ್ನು ಒದಗಿಸಬೇಕು ಎಂದು ಪ್ರತಿಪಾದಿಸಲಾಯಿತು. ಹೀಗೆ ಪ್ರತಿಪಾದಿಸಿದ ಚರ್ಚೆಗಳು ಉದ್ಯೋಗವನ್ನು ಹಕ್ಕಾಗಿಸಲು ಪೂರಕವಾದವು.

ಗ್ರಾಮೀಣ ಬಡ ಜನರಿಗೆ ಉದ್ಯೋಗವನ್ನು ನೀಡುವಂತಹ ಅಥವಾ ಖಾತರಿಗೊಳಿಸುವಂತಹ ಮೊಟ್ಟ ಮೊದಲು ನಡೆದಂತಹ ಪ್ರಯತ್ನ ಮಹಾರಾಷ್ಟ್ರಕ್ಕೆ ಸಲ್ಲುತ್ತದೆ. ಈ ಪ್ರಯತ್ನ ಉದ್ಯೋಗ ಭರವಸೆಯ ಯೋಜನೆ ಮೂಲಕ 1972ರಲ್ಲಿ ಜಾರಿಗೆ ತರಲಾಯಿತು ಮತ್ತು 1974 ರಲ್ಲಿ ಅಧಿಕೃತವಾಗಿ ಅನುಷ್ಠಾನವಾಯಿತು. ಯೋಜನೆಯ ಅನುಭವದ ಆಧಾರದ ಮೇಲೆ ಕೂಲಿಕಾರರಿಗೆ 'ಉದ್ಯೋಗದ ಹಕ್ಕು' ನೀಡುವ ಸಲುವಾಗಿ ಹತಾಶರಾಗಿರುವವರ ಜೀವನದಲ್ಲಿ ಉದ್ಯೋಗದ ಕನಸು ಹುಟ್ಟಿಸಿದಂತಾಯಿತು. ಮಹಾರಾಷ್ಟ್ರ ಸರ್ಕಾರ ಠರಾವ್ ಪಾಸು ಮಾಡಿತು. ಈ ಸಂದರ್ಭದಲ್ಲಿ ಹಲವು ಚಿಂತಕರ, ಸಮಾಜಸೇವಕರ, ಹೋರಾಟಗಾರರ, ಸರ್ಕಾರೇತರ ಸೇವಕರ್ತರು ಜನ ಚಳವಳಿಗಾರರಾದ ಜಾನ್ ಹೋಳಿಬಾಬ ಆದವ್, ಸ್ವಾಮಿ ಅಗ್ನಿವೇಶ್, ಅಶೋಕ್ ಭಾರತಿ, ದೀಪಂಕರ್ ಭಟ್ಟಾಚಾರ್ಯ, ಸುನೀತ್ ಚೋಪ್ರ ಮುಂತಾದವರ ಪ್ರಯತ್ನದಿಂದ "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ" ಈ ಮಸೂದೆ ಲೋಕಸಭೆಯಲ್ಲಿ 2004 ಸೆಪ್ಟಂಬರ್‌ನಲ್ಲಿ ಸರ್ವಾನುಮತದಿಂದ ಅನುಮೋದನೆ ದೊರೆಯಿತು. 2005 ರಲ್ಲಿ ರಾಷ್ಟ್ರಪತಿಗಳಿಂದ ಅಂಕಿತಗೊಂಡು "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ"ಯಾಗಿ ಜಾರಿಗೆ ಬಂದಿತು. 2006 ರಿಂದ ಮೂರು ಹಂತದಲ್ಲಿ ರಾಷ್ಟ್ರಾದ್ಯಾಂತ ಅನುಷ್ಠಾನವಾಯಿತು. 21ನೇ ಶತಮಾನದ ಮೊದಲ ದಶಕದ

ಮೊಟ್ಟಮೊದಲ ಯೋಜನೆ ಇದಾಗಿದೆ. ಇದು 60 ವರ್ಷಗಳ ಇತಿಹಾಸದಲ್ಲೇ ಒಂದು ಗುರುತರವಾದ ಒಂದು ಸಾಧನೆಯ ಮೈಲಿಗಲ್ಲು ಮತ್ತು ಮಾನವತಾ ಇತಿಹಾಸವೆಂದು ಬಣ್ಣಿಸಿದ್ದಾರೆ (ಮಹಿರ್ ಷಾ, 2007). ಈ ಯೋಜನೆಯನ್ನು ಸಮರ್ಥವಾಗಿ ಅನುಷ್ಠಾನ ಮಾಡಲು ಕರ್ನಾಟಕದಲ್ಲಿ ಪಂಚಾಯತ್ ಸಂಸ್ಥೆಗಳಿಗೆ 1983 ರಲ್ಲಿ ಅಧಿಕಾರ ನೀಡಿತು. 1992 ರಲ್ಲಿ ಸಂವಿಧಾನದ 73 ನೇ ತಿದ್ದುಪಡಿ ಮೂಲಕ ಅಧಿಕಾರವನ್ನು ಬಲಗೊಳಿಸಿತು (ಶ್ರೀಧರ 2012). ಈ ಹಿನ್ನೆಲೆಯಲ್ಲಿ ಇದರ ಅನುಷ್ಠಾನದ ವ್ಯಾಪ್ತಿ ವಿಸ್ತಾರವಾಯಿತು. ತಳಮಟ್ಟದಲ್ಲಿ ಬರುವ ಯೋಜನೆಗಳು ಜನರ ಯೋಜನೆಗಳಾಗಬೇಕೆಂದರೆ ವಾರ್ಡ್‌ಸಭೆ ಗ್ರಾಮಸಭೆಗಳಲ್ಲಿ ಜನರು ಭಾಗವಹಿಸಿ ಜನರ ಮೂಲಕ ಬೇಡಿಕೆ ಆಧಾರಿತ ಯೋಜನೆಗಳಾದರೆ ಗ್ರಾಮಗಳು ಅಭಿವೃದ್ಧಿಯಾಗುವವು (ಚಂದ್ರಪೂಜಾರಿ 2004). 2006 ರಿಂದ ಇಲ್ಲಿಯವರೆಗೆ ಅನುಷ್ಠಾನಗೊಂಡ ಮತ್ತು ಇದರ ಮೇಲೆ ನಡೆದಂತಹ ಅಧ್ಯಯನಗಳು ಮತ್ತು ಬಡವರನ್ನು ಬಡತನದಿಂದ ಹೊರತರುವುದು, ಮೂಲಭೂತ ಸೌಲಭ್ಯಗಳ ಕೊರತೆಯನ್ನು ನೀಗಿಸುವುದು ಮತ್ತು ಉದ್ಯೋಗಗಳನ್ನು ನೀಡುವಲ್ಲಿ ಯಾವ ಪ್ರಮಾಣದ ಮಹತ್ವ ವಹಿಸಿವೆ? ಸಿದ್ಧಾಂತದ ಆಚರಣೆಗಳೇನು? ಸಿದ್ಧಾಂತಗಳಿಗೆ ಪೂರಕವಾಗಿ ಆಚರಣೆಗಳು ನಡೆದಿವೆಯೇ? ಸಿದ್ಧಾಂತಗಳಿಗೆ ಅನುಗುಣವಾಗಿಯೇ ಸೌಲಭ್ಯಗಳು ಕೂಲಿಕಾರರಿಗೆ ತಲುಪಿವೆಯೇ? ಇನ್ನೂ ಮುಂತಾದ ಪ್ರಶ್ನೆಗಳ ಮೇಲೆ ನಡೆದಿರುವ ಸಂಶೋಧನಾ ಅಧ್ಯಯನಗಳನ್ನು ಪರಾಮರ್ಶಿಸಿ ಉದ್ಯೋಗ ಖಾತರಿ ಕಾಯಿದೆಯ ಅನುಷ್ಠಾನದ ಅಧ್ಯಯನಕ್ಕೆ ಪ್ರಸ್ತುತ ಅಧ್ಯಯನ ಪ್ರಯತ್ನಿಸುತ್ತದೆ.

1.1. ಪ್ರಮುಖ ಅಧ್ಯಯನಗಳ ಪರಾಮರ್ಶೆ

ಪ್ರಸ್ತುತ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಹಲವು ಅಧ್ಯಯನಗಳು ನಡೆದಿವೆ. ಈ ಪ್ರಸ್ತುತ ಅಧ್ಯಯನಕ್ಕೆ ಪ್ರಮುಖವೆನಿಸಿದ ಕಾಲದ ಮಿತಿಯಲ್ಲಿ ಅಧ್ಯಯನಗಳನ್ನು ಇಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನ ಮಾಡಲಾಗಿದೆ. ಪ್ರಮುಖವಾದ ಅಧ್ಯಯನಗಳ ಪರಾಮರ್ಶೆಯನ್ನು ಮಾಡಿ ಪ್ರಮುಖ ಪ್ರಶ್ನೆಗಳನ್ನು ಗುರುತಿಸಿ ಪ್ರಸ್ತುತ ಅಧ್ಯಯನವು ಸಂಶೋಧನಾ ಪ್ರಶ್ನೆಗಳನ್ನು ರೂಪಿಸಿಕೊಂಡಿದೆ.

ಸಾಮಾಜಿಕ ಭದ್ರತೆ ಕುರಿತಂತೆ ನಡೆದಿರುವ ಅಧ್ಯಯನಗಳು "ಉದ್ಯೋಗ, ಬಡತನ ಮತ್ತು ಆಹಾರದ ಭದ್ರತೆ ಮಧ್ಯೆ ಇರುವ ಸಂಬಂಧಗಳ" ಬಗ್ಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಅನೇಕ ವಾದ ವಿವಾದಗಳು ಹುಟ್ಟಿಹಾಕಿದೆ. ಆಹಾರ ಭದ್ರತಾ ಸಮಸ್ಯೆಗೂ ಬಡತನಕ್ಕೂ ನೇರವಾದ ಸಂಬಂಧವಿದೆ ಯೆಂದು ಹಲವು ಅಧ್ಯಯನಗಳು ಗುರುತಿಸುತ್ತವೆ. ಆಹಾರ ಭದ್ರತೆ ಎಂದರೆ "ವ್ಯಕ್ತಿಯೊಬ್ಬ ಆರೋಗ್ಯ ಪೂರ್ಣವಾದ ಜೀವನವನ್ನು ನಡೆಸಲು ಬೇಕಾದ ಅವಶ್ಯಕ ಆಹಾರ ಪದಾರ್ಥಗಳನ್ನು ಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು." ಇಂದು ಬಹಳಷ್ಟು ಬಡವರು ತಮ್ಮ ಆಹಾರವನ್ನು ಗಳಿಸಲು ದೈಹಿಕ ಶ್ರಮವನ್ನೇ ಅವಲಂಬಿಸಿದ್ದಾರೆ. ಆದ್ದರಿಂದ ಈ ದುಡಿಯುವ ವರ್ಗಕ್ಕೆ ಶ್ರಮ ಆಧಾರಿತ

ಉದ್ಯೋಗವನ್ನು ಒದಗಿಸಿದರೆ ಆಹಾರ ಭದ್ರತೆಯ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು ಎಂಬುದನ್ನು ಫಿನ್‌ಸ್ಟಪ್-ಅಂಡರ್ ಸನ್ ತಮ್ಮ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಆರ್ಥಿಕ ಬೆಳವಣಿಗೆಯ ಮೂಲಕವೇ ನಾವು ಹಸಿವು ಮತ್ತು ಆಹಾರ ಸಮಸ್ಯೆಯನ್ನು ನೀಗಿಸಲು ಪ್ರಯತ್ನಿಸಬೇಕೆಂಬ ವಾದ ಪ್ರಬಲವಾಗಿದೆ. ಉದ್ಯೋಗದ ಮೂಲಕ ಆಹಾರ ಭದ್ರತೆ ಎನ್ನುವ ಕಾರ್ಯತಂತ್ರವು ಪರಿಣಾಮಕಾರಿ ಹಾಗೂ ಸುಸ್ಥಿರವಾದದ್ದು ಎಂಬುದು ಈಗಾಗಲೇ ನಿರೂಪಿತವಾಗಿದೆ ಎಂಬ ಅಂಶವನ್ನು ಫಿನ್‌ಸ್ಟಪ್-ಅಂಡರ್ ಸನ್ ಅವರ ಅಧ್ಯಯನ ವಿಶ್ಲೇಷಣೆ ಮಾಡಿದೆ.

ಜಾಚಿಮ್ ವಾನ್ ಭ್ರೌನ್(1995), Employment for Poverty Reduction and Food Security. ಅವರು ನಡೆಸಿರುವ ಅಧ್ಯಯನದ ಉದ್ದೇಶವು ಬಡತನ ಕಡಿಮೆ ಮಾಡಲು ಜೊತೆಗೆ ಆಹಾರ ಭದ್ರತೆಯನ್ನು ನೀಡುತ್ತದೆ ಎಂದು ವಿಶ್ಲೇಷಿಸಿರುತ್ತಾರೆ. ಆಹಾರ ಅಭದ್ರತೆಯ ಸಮಸ್ಯೆ ಇಂದು ಹೆಚ್ಚಾಗಿ ಹಳ್ಳಿಗಾಡಿನ ಭೂರಹಿತರಿಗೆ ಹಾಗೂ ನಗರ ಪ್ರದೇಶದ ಬಡಜನತೆಯನ್ನು ಹೆಚ್ಚಾಗಿ ಕಾಡುತ್ತಿದೆ. ಇನ್ನೂ ಪ್ರಾದೇಶಿಕ ಹಿನ್ನೆಲೆಯಲ್ಲಿ ನೋಡುವುದಾದರೆ ಬಹಳಷ್ಟು ಜನರ ದುಡಿಮೆ ಮಾರ್ಗ ಎಂದರೆ ದೈಹಿಕ ಶ್ರಮ ಮಾತ್ರ. ಇದರಿಂದ ಆಹಾರ ಭದ್ರತೆಯು ನೀಗುವುದಿಲ್ಲ. ಅನೇಕ ಮಾರ್ಗಗಳನ್ನು ಬಳಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸುವುದೇ ಬಡತನ ನಿರ್ಮೂಲನೆಯ ಮಾರ್ಗವಾಗಿರುತ್ತದೆ. ಮಾನವ ಸಂಪನ್ಮೂಲ ಅಧಿಕವಾಗುತ್ತಾ ಹೋದಂತೆ ಅದಕ್ಕೆ ಅನುಗುಣವಾಗಿ ಉದ್ಯೋಗಗಳನ್ನು ಸೃಷ್ಟಿಸುವುದು ಬಹು ದೊಡ್ಡ ಸವಾಲಾಗಿದೆ. ಆದರೆ ದುಡಿಯುವ ಕಾರ್ಮಿಕ ವರ್ಗದ ಸಂಖ್ಯೆ ಮಾತ್ರ ವೇಗವಾಗಿ ಹೆಚ್ಚುತ್ತಿದೆ. ದುಡಿಮೆಗೆ ತಕ್ಕವೇತನ ಸಿಗದಿರುವುದು ಸಹ ಆಹಾರ ಭದ್ರತೆಯ ಸಮಸ್ಯೆಗೆ ಕಾರಣವಾಗುತ್ತಿದೆ. ಇಂದಿನ ಜಾಗತಿಕ ವಿದ್ಯಮಾನಗಳ ಪ್ರವೃತ್ತಿಯನ್ನು ಗಮನಿಸಿದರೆ ಉದ್ಯೋಗದ ಮೂಲಕವೇ ಬಡತನ ನಿರ್ಮೂಲನೆ ಸಾಧ್ಯ ಎನ್ನುವುದನ್ನು ಈ ಅಧ್ಯಯನ ಪ್ರಬಲವಾಗಿ ವಿಶ್ಲೇಷಣೆಗೆ ಒಳಪಡಿಸಿದೆ.

ಪಾಟ್ನಾಯಕ್.ಬಿ.ಕೆ.(2012) National Rural Employment Guarantee Scheme some preliminary Findings from Hoshiarpur District. ಎನ್ನುವ ಅಧ್ಯಯನವು ಪಂಜಾಬಿನ ಹೋಸಿರ್ ಪುರ ಜಿಲ್ಲೆಯ ಮತ್ತು ಅದರ ಜೊತೆಗೆ ಆರ್ಮಸ್ಟಾರ್, ಜಲಾಂದರ್ ಮತ್ತು ನವಸನ್ನಾರ್ ಜಿಲ್ಲೆಗಳಲ್ಲಿ ನಡೆದಿರುವ ಎಂ.ಜಿ.ಎನ್.ಆರ್.ಇ.ಜಿ.ಎಯನ್ನು ಅಧ್ಯಯನಕ್ಕೆ ಒಳಪಡಿಸಿದೆ. ಈ ಅಧ್ಯಯನ ಕ್ಷೇತ್ರದಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ನಲ್ಲಿ 95 ಜಾಬ್ ಕಾರ್ಡಗಳನ್ನು ಪಡೆದಿರುವಂತಹ ಕುಟುಂಬಗಳನ್ನು ಅಧ್ಯಯನ ಮಾಡಿ ವಿಶ್ಲೇಷಣೆ ಮಾಡಿದ್ದಾರೆ. ಈ ಕಾಯಿದೆಯಡಿ ಅನುಷ್ಠಾನಕ್ಕಾಗಿ ಸಮಿತಿಗಳು ರಚನೆಯಾಗಬೇಕಾಗಿದ್ದರೂ ಅಲ್ಲಿ ಸಮಿತಿಗಳು ರಚನೆಯಾಗದೆ ಇರುವುದು ಯೋಜನೆ ವಿಳಂಬ ವಾಗುವುದಕ್ಕೂ ಪ್ರಗತಿ ಪರಿಶೀಲನೆಯ ಗುರಿ ಮತ್ತು ಸಾಧನೆಯ ಒತ್ತಡವು ಕಾಯಿದೆಯ ನಿಯಮಗಳ

ಉಲ್ಲಂಘನೆಗೆ ದಾರಿಯಾಗಿರುವುದನ್ನು ಅಧ್ಯಯನ ಗುರುತಿಸಿದೆ. ಶೇಕಡ 50ರಷ್ಟು ಜನರಿಗೆ ಎಂ.ಜಿ.ಎನ್.ಆರ್.ಇ.ಜಿ.ಎ ಮಾಹಿತಿ ಇರುವುದು, ಕಾಮಗಾರಿಗಳ ಆಯ್ಕೆಗೆ ಅಧ್ಯಯನ ಪ್ರದೇಶಗಳಲ್ಲಿ ಶೇಕಡ 80ರಷ್ಟು ಗ್ರಾಮ ಸಭೆಗಳು ನಡೆದಿವೆ. ಆದರೆ ಸಭೆಗೆ ಜನ ಸೇರದ, ಚರ್ಚೆಗಳಿಲ್ಲದೆ, ಏಕ ಪಕ್ಷೀಯ ಗ್ರಾಮ ಸಭೆಗಳಾಗಿರುತ್ತವೆ. ಶೇಕಡ 55ರಷ್ಟು ಮಾತ್ರ ಉದ್ಯೋಗ ಒದಗಿಸಿರುವುದು ತಿಳಿದು ಬರುತ್ತದೆ. 91–100 ದಿನಗಳ ಉದ್ಯೋಗ ನೀಡಿರುವುದು ಶೇಕಡ 7.8ರಷ್ಟು ಇದ್ದರೆ, 71–90 ದಿನಗಳು ಶೇಕಡ 6.6ರಷ್ಟು, 51–70 ದಿನಗಳು ಶೇಕಡ 28.87ರಷ್ಟು 31–50 ದಿನಗಳು ಶೇಕಡ 27.7 ರಷ್ಟು 30 ದಿನಗಳಲ್ಲಿ ಶೇಕಡ 23.3ರಷ್ಟು ಉದ್ಯೋಗ ನೀಡಿರುವುದು ಕಂಡುಬಂದಿದೆ. ಈ ತರಹದ ಲೋಪದೋಷಗಳಿಂದ ಜನರ ಮೇಲೆ ವ್ಯತಿರಿಕ್ತ ಪರಿಣಾಮವಾಗಿರುವುದು. ಈ ಹಿನ್ನೆಲೆಯಿಂದ ಹಿಂದಿನಿಂದಲೂ ಇರುವ ಗ್ರಾಮದ ಹೊರ ವಲಸೆಯು ಮುಂದುವರೆದಿರುವುದನ್ನು ಅಧ್ಯಯನ ಗುರುತಿಸಿದೆ. ಕಾಯಿದೆಯ ಭರವಸೆ ಏನಾಯಿತು? ಪಂಚಾಯತ್ ವ್ಯವಸ್ಥೆ ಏಕೆ ಕ್ರಮ ಕೈಗೊಳ್ಳಲಿಲ್ಲ? ಮುಗ್ಧ ಜನರಿಗೆ ಉದ್ಯೋಗಗಳನ್ನು ಏಕೆ ನೀಡಲಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಜೀನ್ ಡ್ರೀಜ್ ಅವರು (2007) "On NREGA in Orissa" ರಲ್ಲಿ ನಡೆಸಿರುವ ಒರಿಸ್ಸಾ ರಾಜ್ಯದಲ್ಲಿ ಮೂರು ಜಿಲ್ಲೆಗಳಾದ ಕಹಂದಿ, ಬಾಲಂಜೀರ್ ಮತ್ತು ಬೋಧ ಹಾಗೂ ಆರು ತಾಲ್ಲೂಕುಗಳಲ್ಲಿ 30 ಗ್ರಾಮ ಪಂಚಾಯತಿಗಳನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನಗಳ ಮೂಲಕ ಅಲಹಾಬಾದ್ ವಿಶ್ವವಿದ್ಯಾಲಯ ಮತ್ತು ಸಮಾಜ ವಿಜ್ಞಾನ ಸಂಸ್ಥೆಗಳ ವಿದ್ಯಾರ್ಥಿಗಳಾದ ರಿತೀಕ ಖೇರಾ, ರಾಜಶೇಖರ್, ಮಿಶ್ರರವರು ಜೀನ್ ಡ್ರೀಜ್‌ರವರ ಮಾರ್ಗದರ್ಶನದಲ್ಲಿ ಅಧ್ಯಯನ ನಡೆಸಿದ್ದಾರೆ. 30 ಕಾರ್ಮಿಕರನ್ನು ಸಂದರ್ಶನ ಮಾಡಿದೆ. ಇದರಲ್ಲಿ ಮಸ್ಟರ್ ರೋಲ್‌ನ ದಾಖಲಾತಿಗಳನ್ನು ಕ್ರಾಸ್ ಚೆಕ್ ಮಾಡಿದೆ. ದೋಷ ಪೂರಿತ ಉದ್ಯೋಗ ಚೀಟಿಗಳು, ಕೂಲಿಕಾರರಿಗೆ ಕೂಲಿ ನೀಡಿರುವುದು, ಹಣ ಪಡೆದವರ ಹೆಸರು, ಸಹಿ ಸರಿಯಾಗಿ ಬರೆದಿಲ್ಲದಿರುವುದು, ನಿಗದಿತ ನಮೂನೆಯಲ್ಲಿ ಇಲ್ಲದಿರುವುದನ್ನು ಗುರುತಿಸಿರುತ್ತಾರೆ. ಉದ್ಯೋಗ ಚೀಟಿಗಳನ್ನು ನಿಯಮಬಾಹಿರವಾಗಿ ವಿತರಣೆ ಮಾಡಿರುವುದನ್ನು, ಕೂಲಿಮಾಡಿದ ಮಾನವ ದಿನಗಳಿಗೂ, ದಾಖಲಿಸಿರುವ ಮಾನವ ದಿನಗಳಿಗೂ ತುಂಬ ವ್ಯತ್ಯಾಸಗಳು ಇರುವುದನ್ನು ಈ ಅಧ್ಯಯನ ಗುರುತಿಸಿದೆ. ದುಡಿದ ಕೂಲಿಕಾರರ ಮಾನವ ದಿನಗಳನ್ನು ಎಂ.ಐ.ಎಸ್‌ಗೆ ಮಾನವದಿನಗಳನ್ನು 30–40 ದಿನಗಳು ತಡವಾಗಿ ದಾಖಲಿಸಿರುವುದು ಕಂಡುಬಂದಿದೆ. ಇದರಿಂದ ಅವರಿಗೆ ಕೂಲಿವೇತನ 15 ದಿನದೊಳಗಾಗಿ ಸಿಗಬೇಕಾಗಿದ್ದರೂ ಶೇಕಡ 78ರಷ್ಟು ಕೂಲಿಕಾರರಿಗೆ 9 ತಿಂಗಳು ತಡವಾಗಿ ಸಿಕ್ಕಿರುವುದನ್ನು ಯಂತ್ರಗಳಲ್ಲಿ ಮಾಡಿದ ಕಾಮಗಾರಿಗಳಿಗೆ ಬ್ಯಾಂಕಿನಿಂದ ಹಣ ಬಿಡಿಸಲಿಕ್ಕೆ ಮತ್ತು ಉದ್ಯೋಗದ ಚೀಟಿಗಳನ್ನು ಬಳಸಿಕೊಳ್ಳುತ್ತಿರುವುದು. ಕಾಯಿದೆ ಅನ್ವಯ ಗುತ್ತಿಗೆದಾರರನ್ನು ಮತ್ತು ಯಂತ್ರಗಳನ್ನು ಎಂ.ಜಿ.ಎನ್.ಆರ್.ಇ.ಜಿ.ಎ ನಿರುದ್ಯೋಗಿಗಳಿಗೆ ಉದ್ಯೋಗ

ನೀಡುವ ಸಲುವಾಗಿ ನಿಷೇದಿಸಿದ್ದರೂ ಶೇಕಡ 67 ರಷ್ಟು ಕಾಮಗಾರಿಗಳನ್ನು ಜೆ.ಸಿ.ಬಿ ಮತ್ತು ಇತರ ಯಂತ್ರಗಳ ಬಳಕೆ ಕಾಮಗಾರಿ ಮಾಡಿರುವುದನ್ನು ಈ ಅಧ್ಯಯನ ಗುರುತಿಸಿದೆ. ಇದನ್ನು ಪರಾಮರ್ಶಿಸಿದರೆ ಸಿದ್ಧಾಂತಕ್ಕೂ ಆಚರಣೆಗೂ ತುಂಬ ಅಂತರವಿರುವುದು ತಿಳಿಯುತ್ತದೆ. ಇದರ ಮೇಲೆ ಹುಟ್ಟುವಂತಹ ಮೂಲಭೂತ ಪ್ರಶ್ನೆಗಳು ಬಹು ಪ್ರಕಾರದ ಚರ್ಚೆಗೆ ಗ್ರಾಸವಾಗುವುದು.

ಮಹಿರ್ ಷಾ, ಅವರು (2007) "ಕನಿಯಟ್ಟಿ ಫಾರಂ ಆಫ್ ಲೇಬರ್" ಎಂಬ ಅಧ್ಯಯನ ಉತ್ತರ ಪ್ರದೇಶದ ಸೋನ್‌ಭದ್ರ, ಕರ್ನಾಟಕದ ರಾಯಚೂರು, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈ ಅಧ್ಯಯನ ಕೈಗೊಳ್ಳಲಾಗಿದೆ. ಉದ್ಯೋಗ ಖಾತರಿ ಕಾಯಿದೆ ಅಡಿ ಭಾಗ 7(1)ರಡಿ ಕೂಲಿಕಾರರು ಅರ್ಜಿ ಸಲ್ಲಿಸಿದ 15 ದಿನದೊಳಗಾಗಿ ಕೆಲಸ ನೀಡಬೇಕು. ಇಲ್ಲವಾದರೆ ಆ ಕೂಲಿಕಾರರಿಗೆ ನಿರುದ್ಯೋಗ ಭತ್ಯೆ ನೀಡಬೇಕೆನ್ನುವುದನ್ನು ಉದ್ಯೋಗ ಖಾತರಿ ಕಾಯಿದೆಯಲ್ಲಿ ಕಡ್ಡಾಯಗೊಳಿಸಿದೆ. ಈ ಜಿಲ್ಲೆಗಳಲ್ಲಿ ಎಲ್ಲಿಯೂ ನಿರುದ್ಯೋಗ ಭತ್ಯೆ ನೀಡಿಲ್ಲದಿರುವುದು ಅಧ್ಯಯನದಲ್ಲಿ ಕಂಡುಬರುತ್ತದೆ. ಕೂಲಿಯನ್ನು ಕೂಲಿಕಾರರಿಗೆ 90 ದಿನಕ್ಕೂ ಹೆಚ್ಚು ಕೂಲಿವೇತನವನ್ನು ವಿತರಣೆ ಮಾಡಿರುವುದು ಈ ಅಧ್ಯಯನ ಗುರುತಿಸುತ್ತದೆ. ಪಡಿತರ ಚೀಟಿ ಸಮೀಕ್ಷೆಯ ಸಂದರ್ಭದಲ್ಲಿ ಸಮೀಕ್ಷೆ ನಡೆಸಿದಾಗ ಉತ್ತರ ಪ್ರದೇಶದ ಸೋನ್‌ಭದ್ರ ಎಂಬ ಜಿಲ್ಲೆಯಲ್ಲಿ ನಿರುದ್ಯೋಗ ಭತ್ಯೆಯ ಕುರಿತು ಪ್ರಶ್ನಿಸಿದರೆ ಅದರ ಬಗ್ಗೆ ಮಾಹಿತಿ ಇಲ್ಲದಿರುವುದು ತಿಳಿಯುತ್ತದೆ. ಅನುಷ್ಠಾನದ ಅಧಿಕಾರ ಮತ್ತು ಅದರ ಜವಾಬ್ದಾರಿ ಪಡೆದ ಪಂಚಾಯತಿಗಳು ಉದ್ಯೋಗ ನೀಡಲಿಲ್ಲ ಪರ್ಯಾಯವಾಗಿ ನಿರುದ್ಯೋಗ ಭತ್ಯೆಯೂ ನೀಡಲಿಲ್ಲ. ಎನ್ನುವ ಅಂಶಗಳನ್ನು ಪ್ರಸ್ತುತ ಅಧ್ಯಯನ ವಿಶ್ಲೇಷಣೆ ಮಾಡಿದೆ.

ಸಂತೋಷ ಈ ಚನಗುಂಡಿಯವರು(2013), "ದುಡಿದ ಕೈಗಳಿಗೆ ಕೂಲಿ ನೀಡದ ಉದ್ಯೋಗ ಖಾತರಿ" ಎನ್ನುವ ಲೇಖನವನ್ನು ಕರ್ನಾಟಕ ರಾಜ್ಯದ ಆನುಷಂಗಿಕ ಮಾಹಿತಿ ಆಧಾರಲ್ಲಿ ಕೈಗೊಂಡಿರುತ್ತಾರೆ. ದುಡಿಯುವ ವರ್ಗಕ್ಕೆ ಕೆಲಸಕೊಡುವುದರ ಮೂಲಕ ಕೂಲಿ ನೀಡಲು ಕರ್ನಾಟಕದ ಆಯಾ ಜಿಲ್ಲೆಗಳಿಗೆ ಸರ್ಕಾರ ಅನುದಾನವನ್ನು ಬೇಡಿಕೆ ಮತ್ತು ಭೌತಿಕ ಪ್ರಗತಿ ಆಧಾರದ ಮೇಲೆ 2013–14 ರಲ್ಲಿ. ಜಿಲ್ಲಾವಾರು ಬಿಡುಗಡೆ ಮಾಡಿದೆ. ಸಮರ್ಪಕ ಅನುಷ್ಠಾನದ ಲೋಪದೋಷಗಳಿಂದ ಅನೇಕ ಜಿಲ್ಲೆಗಳಲ್ಲಿ ಅನುದಾನವನ್ನು ಬಾಕಿ ಉಳಿಸಿಕೊಂಡಿರುವುದು ತಿಳಿಯುತ್ತದೆ. ಅದರಲ್ಲಿ ರೂ 171 ಕೋಟಿ ಬಾಕಿ ಉಳಿದಿದೆ. ಜಿಲ್ಲಾವಾರು ಗಮನಿಸಿದರೆ ಬಾಕಿ ಹಣ ಗುಲ್ಬರ್ಗದಲ್ಲಿ 8.57ಕೋಟಿ, ಕೊಪ್ಪಳದಲ್ಲಿ 2.73 ಕೋಟಿ, ಮಂಡ್ಯದಲ್ಲಿ 1.93 ಕೋಟಿ, ಚಾಮರಾಜನಗರದಲ್ಲಿ 1.68 ಕೋಟಿ, ಕೊಪ್ಪಳದಲ್ಲಿ 16.54 ಕೋಟಿ, ಉಡುಪಿ 13.84 ಕೋಟಿ, ಚಿಕ್ಕಬಳ್ಳಾಪುರ 7.95 ಕೋಟಿ, ಚಿತ್ರದುರ್ಗದಲ್ಲಿ 14.29 ಕೋಟಿ, ದಾವಣಗೆರೆಯಲ್ಲಿ 27 ಕೋಟಿ, ಯಾದಗಿರಿ 15.33 ಕೋಟಿ, ಕೋಲಾರ 8.43 ಕೋಟಿ ಬಾಕಿ ಇರುವುದು ತಿಳಿದು ಬಂದಿದೆ. ಅದರಲ್ಲಿ ಗ್ರಾಮಪಂಚಾಯತಿಗಳಲ್ಲಿ ಹೆಚ್ಚು ಬಾಕಿ

ಇರುವ ಹಣವೆಂದರೆ ತುಮಕೂರು 27.35 ಕೋಟಿ, ಯಾದಗಿರಿ 8.93 ಕೋಟಿ, ಕೋಲಾರ 7.02 ಕೋಟಿ. ಎಂ.ಜಿ.ಎನ್.ಆರ್.ಇ.ಜಿ.ಎ ಕಾಯಿದೆ ಅಡಿ ಕೂಲಿಮಾಡಿದ 15 ದಿನದೊಳಗಾಗಿ ಕೂಲಿ ನೀಡಬೇಕೆಂಬ ನಿಯಮಾವಳಿಯಿದ್ದರೂ ಈ ಜಿಲ್ಲೆಗಳಲ್ಲಿ ಸರಾಸರಿ 3 ತಿಂಗಳಿಂದ 9 ತಿಂಗಳವರೆಗೆ ಕೂಲಿ ನೀಡದಿರುವುದನ್ನು ವಿಶ್ಲೇಷಿಸಿದರೆ ಪಂಚಾಯತ್ ಸಂಸ್ಥೆಯ ಪಾತ್ರವೇನು? ಸಿಬ್ಬಂದಿ ಕೊರತೆಯೆ? ಆ ಸಿಬ್ಬಂದಿಗೆ ತರಬೇತಿ ಕೊರತೆಯೇ? ಜನಪ್ರತಿನಿಧಿಗಳ ಮತ್ತು ನೌಕರವರ್ಗದವರ ಮಧ್ಯೆ ಸಮನ್ವತೆಯ ಕೊರತೆಯೇ? ಎನ್ನುವಂತಹ ಚರ್ಚೆಗೆ ಗ್ರಾಸವಾಗುವುದು ಮತ್ತು ಪ್ರಸ್ತುತ ಅಧ್ಯಯನದಲ್ಲಿ ಅರ್ಥಮಾಡಿಕೊಳ್ಳುವುದು.

ಕಾರ್ತಿಕ ಭತ್ಯ ವಗ್ಗಿ(2010), "NREGA Wage Payments". ಲೇಖನದಲ್ಲಿ ಉತ್ತರ ಪ್ರದೇಶದ ರಾಂಚಿ ಜಿಲ್ಲೆಯಲ್ಲಿ ಕರ್ಚನ ಗ್ರಾಮದಲ್ಲಿ, ಆಂಧ್ರಪ್ರದೇಶದ ಅನಂತಪುರ, ಕರ್ನಾಟಕದ ಗುಲ್ಬರ್ಗಾ ಮತ್ತು ತಮಿಳುನಾಡಿನ ತಿರುವನಮಲೈ ಜಿಲ್ಲೆಯ ಒಂದೊಂದು ಬ್ಲಾಕ್‌ಗಳಲ್ಲಿ ಈ ಅಧ್ಯಯನ ನಡೆಸಿರುತ್ತದೆ. ಈ ಅಧ್ಯಯನ ಕ್ಷೇತ್ರದಲ್ಲಿ ಕಾಮಗಾರಿ ನಡೆಯುವ ಸ್ಥಳದಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ವಿಶ್ರಾಂತಿಗಾಗಿ ನೆರಳು, ಸಣ್ಣಪುಟ್ಟ ಗಾಯಗಳಿಗೆ ತುರ್ತುಚಿಕಿತ್ಸೆ ಸಲಕರಣೆಗಳು ಮತ್ತು ಮಹಿಳಾ ಕಾರ್ಮಿಕರ 6 ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳಲು ಒಬ್ಬ ಮಹಿಳಾ ಕೂಲಿಕಾರ್ಮಿಕರನ್ನು ನೇಮಿಸಬೇಕು. ಆದರೆ ಕುಡಿಯುವ ನೀರು ಒದಗಿಸಿರುವುದರ ಶೇಕಡವಾರು ಪ್ರಮಾಣ ಉತ್ತರ ಪ್ರದೇಶದ ರಾಜ್ಯದಲ್ಲಿನ ಕರ್ಚನ ಗ್ರಾಮದಲ್ಲಿ ಶೇಕಡ 23ರಷ್ಟು, ಶಂಕರ್‌ಗಾರ್ ಶೇಕಡ 26ರಷ್ಟು, ರಾಂಚಿ ಜಿಲ್ಲೆಯಲ್ಲಿ ಶೇಕಡ 9ರಷ್ಟು, ಆಂಧ್ರಪ್ರದೇಶದ ಅನಂತಪುರ ಶೇಕಡ 2ರಷ್ಟು ಕರ್ನಾಟಕದ ಗುಲ್ಬರ್ಗಾ ಶೇಕಡ 3.6ರಷ್ಟು ಕಂಡುಬರುತ್ತದೆ. ಕೆಲಸ ಮಾಡಿದ 15 ದಿನದೊಳಗಾಗಿ ನೀಡಬೇಕಾದ ಕೂಲಿವೇತನವನ್ನು ಶೇಕಡ 23ರಷ್ಟು ಮಾತ್ರ ಉದ್ಯೋಗ ಒದಗಿಸಿರುವುದು, ಕರ್ಚನ ಮತ್ತು ಶಂಕರ್‌ಗಾರ್‌ನಲ್ಲಿ 8 ತಿಂಗಳಾದರೂ ಕೂಲಿ ವೇತನ ನೀಡದಿರುವುದು ಅಧ್ಯಯನ ಗಮನಿಸಿದೆ. ಕರ್ನಾಟಕ ಮತ್ತು ತಮಿಳುನಾಡಿನಲ್ಲಿ 10 ತಿಂಗಳಾದರು ಕೂಲಿವೇತನ ನೀಡದಿರುವುದು ಈ ಅಧ್ಯಯನದಿಂದ ತಿಳಿಯುತ್ತದೆ. ಶೇಕಡ 32ರಷ್ಟು ಜನರಿಗೆ ಕೂಲಿಮಾಡದೇ ಅವರ ಬ್ಯಾಂಕ್‌ಖಾತೆಗೆ ಉದ್ಯೋಗ ಖಾತರಿ ಹಣ ಸಂದಾಯವಾಗಿರುವುದನ್ನು ಗಮನಿಸದರೆ ಕಾಯಿದೆಯ ಬಗ್ಗೆ ಮಾಹಿತಿ ಇದೆಯೇ? ಇದ್ದರೆ ಸೌಲಭ್ಯ ಪಡೆಯಲು ಏಕೆ ಮುಂದೆ ಬರಲಿಲ್ಲ ಅಥವಾ ಅನುಷ್ಠಾನ ಸಂಸ್ಥೆಗೆ ಕಾಯಿದೆಯ ಬಗ್ಗೆ ಪೂರ್ಣ ಮಾಹಿತಿ ಇದೆಯೇ? ಇದ್ದರೂ ಉದ್ಯೋಗ, ಕಾರ್ಮಿಕ, ಸೌಲಭ್ಯ ಇವುಗಳ ನಡುವೆ ಅಂತರವನ್ನು ಹೆಚ್ಚಿಸಿದೆಯೇ ಎನ್ನುವಂತಹ ಅಂಶಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಅನುಷ್ಮಾನ್ ಜಸ್ವಲ್, ಪ್ಲೋಮೀ ಮಿಸ್ತ್ರಿ, ಷಾಜಿ ಜೆಸೆಪ್. ಅವರ ತಂಡ(2012) "Will NREGA Ensure Security against Hunger? ಪ್ರಶ್ನೆಯ ಆಧಾರಿತ ಅಧ್ಯಯನವು, ರಾಷ್ಟ್ರೀಯ

ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಆಶಯ ಮತ್ತು ಉದ್ದೇಶವನ್ನು ಈ ಅಧ್ಯಯನ ವಿಶ್ಲೇಷಣೆಗೆ ಒಳಪಡಿಸಿದೆ. ಅರ್ಹ ಮತ್ತು ಉದ್ಯೋಗದ ಅಗತ್ಯವಿರುವ ಕುಟುಂಬಗಳಿಗೆ 100 ದಿನಗಳ ಉದ್ಯೋಗ ನೀಡಬೇಕೆಂಬುದು ಕಾಯಿದೆಯಲ್ಲಿ ಇದ್ದರೂ, ಅದರ ಹಕ್ಕು ಮತ್ತು ಅನುಷ್ಠಾನ ಕುರಿತಂತೆ ಅಧ್ಯಯನ ನಡೆಸಲು ಗುಜರಾತಿನಲ್ಲಿ 5, ಮಧ್ಯಪ್ರದೇಶದಲ್ಲಿ 2, ರಾಜಸ್ಥಾನದಲ್ಲಿ 2 ಜಿಲ್ಲೆಗಳು ಮತ್ತು ಮಹಾರಾಷ್ಟ್ರದಲ್ಲಿ ಒಂದು ಜಿಲ್ಲೆಯನ್ನು ಅಧ್ಯಯನಕ್ಕೆ ಒಳಪಡಿಸಿ, ಈ ಅಧ್ಯಯನ ಪ್ರತಿವರ್ಷದಲ್ಲಿ 96 ಜನ ಈ ಕಾಯಿದೆಯಿಂದ ಉದ್ಯೋಗಗಳು ದೊರಕಿರುವುದು. 497 ಅರೆ ಉದ್ಯೋಗಿಗಳು ಮತ್ತು 475 ನಿರುದ್ಯೋಗಿಗಳ ಕುರಿತು ಈ ಅಧ್ಯಯನ ವಿಶ್ಲೇಷಣೆ ಮಾಡಿದೆ. ಮಹಾರಾಷ್ಟ್ರದಲ್ಲಿ ಗುಡ್ಡಗಾಡಿನ ಜನರ ಹಸಿವು, ಬಡತನ, ಮಾನವ ಹಕ್ಕುಗಳನ್ನು ಸಂರಕ್ಷಿಸುವ ಮಹತ್ತರ ಉದ್ದೇಶಗಳು 1978ರಿಂದಲೂ ಆಚರಣೆಯಲ್ಲಿ ಇದ್ದರೂ ಆಚರಣೆಯ ಮೂಲಕ 30 ವರ್ಷಗಳ ಕಾಲ ಉದ್ಯೋಗ ಖಾತರಿ ಯೋಜನೆಗಳು ಹಸಿವು ಮತ್ತು ಬಡತನ ಹೋಗಲಾಡಿಸಲು ಸಾಧ್ಯವಾಗಲಿಲ್ಲ ಎನ್ನುವುದು ತಿಳಿಯಬೇಕಾಗಿದೆ.

ಚ್ಛಯಾ ದಾತರ್(2007), Failure of National Rural Employment Guarantee Scheme in Maharashtra. ಅಧ್ಯಯನದಲ್ಲಿ ವ್ಯಕ್ತವಾಗುವ ಅಂಶವೆಂದರೆ 1978ರಿಂದಲೂ ಮಹಾರಾಷ್ಟ್ರದಲ್ಲಿ ಉದ್ಯೋಗ ಖಾತರಿ ಯೋಜನೆ ಅನುಷ್ಠಾನ ಮಾಡಿಕೊಂಡೆ ಬಂದಿರುತ್ತಾರೆ. ಅನೇಕ ಅಧ್ಯಯನಗಳು ಸರ್ಕಾರಗಳು ಇದರ ಯಶಸ್ಸಿನ ಬಗ್ಗೆ ಚರ್ಚೆಗಳು ನಡೆದಿರುವ ಮಧ್ಯದಲ್ಲೆ ವೈಫಲ್ಯದ ಬಗ್ಗೆಯೂ ಅಧ್ಯಯನ ಹೊರತಂದಿದೆ. ಸರ್ಕಾರ ಪ್ರತಿವರ್ಷ ಬೇಸಿಗೆ, ಮುಂಗಾರು ಸಮಯದಲ್ಲಿ ಕೆಲವು ಭಾಗದ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡುತ್ತಲೆ ಇರುತ್ತದೆ. ಆದರೂ ಉದ್ಯೋಗ ಖಾತರಿ ಪ್ರಗತಿಯಲ್ಲಿ ಹಿಂದುಳಿದಿರುವುದು ತಿಳಿಯುತ್ತದೆ. ಪಂಜಾಬ್ ರಾಜ್ಯದ 20 ಜಿಲ್ಲೆಗಳಲ್ಲಿ ಸಿ.ಎ.ಜಿ ವರದಿ ಪ್ರಕಾರ ಕೇವಲ 3.5ರಷ್ಟು ಕುಟುಂಬಗಳಿಗೆ ಮಾತ್ರ 100 ದಿನಗಳ ಉದ್ಯೋಗ ದೊರೆತಿದೆ. ರಾಜಸ್ಥಾನದ ಉದಯಪುರ ಮತ್ತು ದುಂಗಾಪುರದಲ್ಲಿನ ಜಿಲ್ಲೆಯ ಕುಟುಂಬಗಳಲ್ಲಿ ವರ್ಷದಲ್ಲಿ ಸರಾಸರಿ 20 ದಿನಗಳ ಉದ್ಯೋಗ ನೀಡಿರುವುದು ಕಂಡುಬರುತ್ತದೆ. ಅದರಲ್ಲಿ ಹಳೆಯ ಕೆರೆಗಳ ಹೂಳು ತೆಗೆಯುವುದಕ್ಕೆ ಹೊಸಕೆರೆ ನಿರ್ಮಾಣಕ್ಕೆ ಗುತ್ತಿಗೆದಾರರು ಯಂತ್ರಗಳನ್ನು ಬಳಸಿರುವುದರಿಂದ ನಿಜವಾದ ಕೂಲಿಕಾರರಿಗೆ ವರ್ಷದಲ್ಲಿ 100 ದಿನಗಳ ಉದ್ಯೋಗ ಒದಗಿಸಲಿಕ್ಕೆ ಆಗದಿರುವುದು ತಿಳಿಯುತ್ತದೆ. ಕಾಯಿದೆಯಲ್ಲಿ ಕಡ್ಡಾಯವಾಗಿ ಗುತ್ತಿಗೆದಾರರನ್ನು ಮತ್ತು ಯಂತ್ರಗಳನ್ನು ನಿಷೇಧಿಸಿದ್ದರೂ ಅಕ್ರಮ ಪ್ರವೇಶಮಾಡಿರುವುದನ್ನು ಈ ಅಧ್ಯಯನ ತೋರಿಸಿದೆ. ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಹೊರಟಿರುವ ಅನುಷ್ಠಾನ ಸಂಸ್ಥೆಯಾದ ಪಂಚಾಯತ್‌ರಾಜ್ ಪಾತ್ರ ಮತ್ತು ಅಧಿಕಾರ ಏನು ಎನ್ನುವುದು ಬಹಳದೊಡ್ಡ ಪ್ರಶ್ನೆಯಾಗಿರುದು ಇಂತಹ ಲೋಪದೋಷಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

ಜ್ಯಾನ್ ಡ್ರೇಝ್ ಜೆ ಮತ್ತು ಓಲ್ಡಿಗೋಸ್(2007), How is NREGA doing?. ಅಧ್ಯಯನವನ್ನು ರಾಜಸ್ಥಾನದ 6 ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿರುವುದು. ಆಹಾರದ ಭದ್ರತೆ ಎದುರಿಸುತ್ತಿರುವ ಸಂದರ್ಭದಲ್ಲಿ ಚುನಾವಣೆ ಮತ್ತು ರಾಜಕೀಯ ಪ್ರಜ್ಞೆ ರಾಜಕೀಯ ಲಾಭಕ್ಕಾಗಿ ಉದ್ಯೋಗ ಖಾತರಿ ಕಾಯಿದೆಯ ಕಡೆ ಗಮನ ಸೆಳೆಯಿತು. ಕಾಯಿದೆಯ ಬಗ್ಗೆ ವ್ಯಾಪಕವಾದ ತಿಳುವಳಿಕೆ ಮೂಡಿಸಲು ರಾಜಕೀಯ ಜನಸಂಘಟನೆಗಳು ಮುಂದೆ ಬಂದವು. ಈ ಮೂಲಕ ಉದ್ಯೋಗಗಳನ್ನು ಕೂಲಿಕಾರರಿಗೆ ಒದಗಿಸಲಾಯಿತು. ಯೋಜನೆ ಯಶಸ್ಸು ಕಂಡಿತು ಕಾರಣ ಕಾಯಿದೆಯ ನಿಯಮಗಳನ್ನು ಪಾಲಿಸಿದ್ದರಿಂದ ಜನರಿಗೆ ಉದ್ಯೋಗಗಳು ಲಭಿಸಿದವು. ಇದರಿಂದ ಅವರ ಆರ್ಥಿಕ ಪರಿಸ್ಥಿತಿಯೂ ಸುಧಾರಿಸಿರುವುದನ್ನು ಅಧ್ಯಯನ ಗುರುತಿಸಿದೆ. ಆದರೆ ಈ ತರಹದ ಸವಾಲುಗಳನ್ನು ಗುಜರಾತ್, ಉತ್ತರ ಪ್ರದೇಶ, ಬಿಹಾರದಂತಹ ರಾಜ್ಯದಲ್ಲಿ ಕಾಯಿದೆಯನ್ನು ಸರಿಯಾದ ಮಾದರಿಯಲ್ಲಿ ಆಚರಣೆ ಮಾಡದೇ ಇರುವುದು ಯೋಜನೆಯ ವೈಫಲ್ಯಕ್ಕೆ ಕಾರಣವಾಗಿರುವುದು ತಿಳಿಯುತ್ತದೆ.

ರಂಜಿತ್ ಸಿಂಗ್(2008), Evaluative study of Hoshiarpur. ಅವರ ಅಧ್ಯಯನವು ಉದ್ಯೋಗ ಖಾತರಿ ಕಾಯಿದೆಗಳ ಆಚರಣೆಗಳಲ್ಲಿನ ಕೊರತೆಯನ್ನು ಹೀಗೆ ಗುರುತಿಸಿದೆ. ಗ್ರಾಮವನ್ನು ಬಿಟ್ಟು 5 ಕಿ.ಮೀ.ಗಿಂತಲೂ ದೂರಹೋಗಿ ಕೆಲಸ ಮಾಡಿದರೆ ಹೆಚ್ಚುವರಿ ಕೂಲಿ ನೀಡಿರುವ ನಿದರ್ಶನಗಳು ಸಹಜವಾಗಿಯೆ ಕಡಿಮೆ. ಕಾಯಿದೆ ಪ್ರಕಾರ ಗ್ರಾಮದಿಂದ ಹೊರಗೆ 5 ಕಿ.ಮೀ ದೂರಹೋಗಿ ಕೆಲಸ ಮಾಡುವ ಕೂಲಿಕಾರರಿಗೆ ಕಾಯ್ದೆಯಲ್ಲಿ ದಿನದ ಕೂಲಿ ಶೇಕಡ 10ರಷ್ಟು ಹೆಚ್ಚುವರಿ ಕೂಲಿ ನೀಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ಪಂಜಾಬ್ ರಾಜ್ಯದ 20 ಜಿಲ್ಲೆಗಳಲ್ಲಿ ಸಿ.ಎ.ಜಿ ವರದಿ ಪ್ರಕಾರ ಶೇಕಡ 3.5ರಷ್ಟು ಕುಟುಂಬಗಳು 5 ಕಿ.ಮೀ.ಗಿಂತ ದೂರಹೋಗಿ ಕೆಲಸ ಮಾಡಿದರೂ ಹೆಚ್ಚುವರಿ ಭತ್ಯೆ ಅಥವಾ ಕೂಲಿಯ ಪ್ರಮಾಣದಲ್ಲಿ ಹೆಚ್ಚುವರಿ ಕೂಲಿ ನೀಡಿಲ್ಲದಿರುವುದು ತಿಳಿಯುತ್ತದೆ. ಇದರ ಪರಿಣಾಮ ಜನರಿಗೆ ಉದ್ಯೋಗ ಖಾತರಿಯ ಬಗ್ಗೆ ಮತ್ತು ಗ್ರಾಮ ಪಂಚಾಯತಿಯ ಬಗ್ಗೆ ನಂಬಿಕೆ ಕಳೆದುಕೊಂಡು, ಜನರು ಖಾಸಗಿ ಕೂಲಿ ಕೆಲಸಕ್ಕೆ ನಿರತರಾಗಿರುವ ಬೆಳವಣಿಗೆಯನ್ನು ಅಧ್ಯಯನದಲ್ಲಿ ವ್ಯಕ್ತವಾಗುತ್ತದೆ.

ವಿಠೋಬ.ಬಿ ಮತ್ತು ವಗ್ಗಿ(2011), "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಒಂದು ಅವಲೋಕನ". ಎಂಬ ಈ ಲೇಖನವು ಆನುಷಂಗಿಕ ಮಾಹಿತಿಯ ಆಧಾರಲ್ಲಿ ನಡೆದಿದೆ. ಕರ್ನಾಟಕ ಬಾಗಲಕೋಟೆ, ಒರಿಸ್ಸಾ, ರಾಜಸ್ಥಾನ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ಮತ್ತು ಆಂಧ್ರಪ್ರದೇಶ ಎಂ.ಜಿ.ಎನ್.ಆರ್.ಇ.ಜಿ.ಎ ಉದ್ಯೋಗ ಖಾತರಿ ಕಾಯಿದೆಯ ಪ್ರಕಾರ ಗುತ್ತಿಗೆದಾರರನ್ನು ಮತ್ತು ಜೆಸಿಬಿ ಹಾಗೂ ಟ್ರ್ಯಾಕ್ಟರ್‌ಗಳಂತಹ ಯಂತ್ರಗಳನ್ನು ನಿಷೇಧಿಸಿದೆ. ಈ ಕಾಮಗಾರಿಗಳಲ್ಲಿ ನಿಷೇಧಿಸಿದರೂ ಶೇಕಡ 57ರಷ್ಟು ಕರ್ನಾಟಕದ ಜಿಲ್ಲೆಗಳಲ್ಲಿ ಶೇಕಡ 33ರಷ್ಟು ಒರಿಸ್ಸಾ ಶೇಕಡ

36ರಷ್ಟು ರಾಜಸ್ಥಾನ ಶೇಕಡ 23ರಷ್ಟು ಮಧ್ಯಪ್ರದೇಶ ಶೇಕಡ 47ರಷ್ಟು, ಪಶ್ಚಿಮ ಬಂಗಾಲ ಶೇಕಡ 52ರಷ್ಟು ಎಂ.ಜಿ.ಎನ್.ಆರ್.ಇ.ಜಿ.ಎ ಕೆಲಸಗಳು ಜೆ.ಸಿ.ಬಿಗಳ ಮೂಲಕ ನಿರ್ಮಾಣ ಮಾಡಿರುವುದನ್ನು ಬಸಂತ್ ಮತ್ತು ಮಹಿಷಾ ಅಧ್ಯಯನ ಗುರುತಿಸಿದೆ. ಕಾಯಿದೆಯ ಮೂಲ ಉದ್ದೇಶವಾಗಿದ್ದರೂ ಕೂಲಿ ವೇತನವನ್ನು ಬ್ಯಾಂಕ್ ಖಾತೆಗೆ ವಿತರಿಸುವುದು ಉತ್ತರ ಪ್ರದೇಶದ ಅಲಹಾಬಾದ್ ಮತ್ತು ರಾಂಚಿಯಲ್ಲಿ ಗುಜರಾತ್‌ನ ದಾಹೂದ್ ಮತ್ತು ಪಂಚಮಹಾ ಜಿಲ್ಲೆಗಳಲ್ಲಿ ಬ್ಯಾಂಕ್ ಖಾತೆಗೆ ನೀಡದೇ ಗುತ್ತಿಗೆದಾರರು ಸ್ವಂತ ಖಾತೆಗೆ ಜಮಾ ಮಾಡಿರುವುದನ್ನು ಈ ಸಂಶೋಧನೆ ಗುರುತಿಸಿದೆ.

ಅನಿಂದಿತ ಅಧಿಕಾರಿ, ಕಾರ್ತಿಕ ಭತ್ಯ(2010),“ NREGA Wage Payments” : Can We Bank on the Banks?. ಅವರು ಜಾರ್ಖಂಡ್, ಉತ್ತರಪ್ರದೇಶ ಮತ್ತು ಒರಿಸ್ಸಾದಲ್ಲಿ ಅಧ್ಯಯನವನ್ನು ಕೈಗೆತ್ತಿಕೊಳ್ಳುತ್ತಾರೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪೂರ್ವದಲ್ಲಿ, ಗ್ರಾಮೀಣಾಭಿವೃದ್ಧಿಯ ಕೂಲಿಯೋಜನೆಗಳಲ್ಲಿ ನೀತಿಗಳಾಗಲಿ ನಿಯಮಗಳಾಗಲಿ ನಿರ್ದಿಷ್ಟವಾಗಿರಲಿಲ್ಲ. ಇಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆ ಮೂಲಕ ಭ್ರಷ್ಟಚಾರದ ಪ್ರಕರಣಗಳು ಬೆಳಕಿಗೆ ಬಂದಿರುವುದು ಕಂಡುಬಂದಿವೆ. ಆದರೆ ಉದ್ಯೋಗ ಖಾತರಿ ಒಂದು ಸಂವಿಧಾನಾತ್ಮಕ ರೂಪದಲ್ಲಿ ಕಾಯಿದೆ ಬಂದರೂ ಲೋಪದೋಷಗಳೇನು ಕಡಿಮೆಯಾಗದಿರುವುದು ಅಧ್ಯಯನದಲ್ಲಿ ಕಂಡುಬಂದಿದೆ. ರಾಣಿದಿಕ್ ಗ್ರಾಮಪಂಚಾಯತಿಯ ಸಹಕಾರಿ ಬ್ಯಾಂಕ್‌ನಲ್ಲಿ ಗುತ್ತಿಗೆದಾರರು ಫಲಾನುಭವಿಗಳಿಂದ ಖಾಲಿ ವಿತ್‌ಡ್ರಾ ಫಾರಂಗೆ ಸಹಿ ಪಡೆದು ವ್ಯವಹರಿಸುತ್ತಿರುವುದು. ಉತ್ತರ ಪ್ರದೇಶದ 2 ಜಿಲ್ಲೆಗಳನ್ನು ಅಲಹಬಾದ್‌ನಲ್ಲಿ 2 ಕ್ಷೇತ್ರ 1) ಕರ್ಚನ 2) ಶಂಕರ್‌ಗಾರ್. ರಾಂಚಿ ಜಿಲ್ಲೆಯಲ್ಲಿ 2 ಕ್ಷೇತ್ರ 1) ಮಂದರ್ 2)ಅಂಕರ್‌ನಲ್ಲಿ ಇಂಜಿನಿಯರ್ ಬದಲಿಗೆ ಸರಪಂಚ ಮತ್ತು ಕಾರ್ಯದರ್ಶಿಗಳು ಕಾಮಗಾರಿಗಳ ಮೇಲ್ವಿಚಾರಣೆ ಮಾಡುತ್ತಿದ್ದರು. ಈ ಮಧ್ಯೆ ಗುತ್ತಿಗೆದಾರ ಕಾಮಗಾರಿಗಳನ್ನು ಅನುಷ್ಠಾನ ಮಾಡಿರುವುದು ತಿಳಿಯುತ್ತದೆ. ರಾಂಚಿ ಜಿಲ್ಲೆಯಲ್ಲಿ ಹೆಚ್ಚು ಆದಿವಾಸಿಗಳು ಇರುವುದರಿಂದ ತಿಳುವಳಿಕೆ ಇಲ್ಲದಿರುವುದಕ್ಕೆ ಶೇಕಡ 44 ಗ್ರಾಮ ಪಂಚಾಯತಿ ಅಧಿಕಾರಿಗಳು ಶೇಕಡ 14ರಷ್ಟು ಗುತ್ತಿಗೆದಾರರು 28ರಷ್ಟು ಸ್ವತಃ ಖಾತೆ ತೆರೆದಿರುವುದು ಮತ್ತು ಜನರ ಅರಿವಿಗೆ ಬಾರದೇ ಬ್ಯಾಂಕ್ ನಿರ್ವಹಣೆ ಮಾಡಿ ಕೂಲಿಯಲ್ಲೂ, ಕೂಲಿವೇತನದಲ್ಲೂ ಇವರೇ ನಿರ್ವಹಣೆ ಮಾಡುತ್ತಿರುವುದನ್ನು ಗುರುತಿಸಿದೆ ಇದರಿಂದ ಕೂಲಿಮಾಡಿದ ಅರ್ಧದಷ್ಟು ಕೂಲಿಕಾರರಿಗೆ ಕೂಲಿ ವೇತನ ಲಭ್ಯವಾಗದಿರುವುದು ಅಧ್ಯಯನದಿಂದ ತಿಳಿಯುತ್ತದೆ.

ಪ್ರಮತೇಶ ಅಂಬೇಷ್ಟ, ಪಿ.ಎಸ್. ವಿಜಯ ಶಂಕರ್. ಮಿಹಿರ್‌ಷಾ(2008), Two Years of NREGA The Road Ahead. ಅವರು ಒರಿಸ್ಸಾ, ಗುಜರಾತ್, ಚತ್ತೀಸ್‌ಘರ್ ಇತರೆ 19 ರಾಜ್ಯದ 20 ಜಿಲ್ಲೆಗಳಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಯಿತು. ಕಾಯಿದೆ ಪ್ರಕಾರ ಪ್ರತಿ ತಾಲ್ಲೂಕಿಗೆ

ಒಬ್ಬ ಪ್ರೋಗ್ರಾಮ್ ಆಫಿಸರ್‌ನ್ನು ನೇಮಕ ಮಾಡಬೇಕು. 19 ರಾಜ್ಯಗಳನ್ನು ಸರ್ವೆ ಮಾಡಿದಾಗ ಶೇಕಡ 70ರಷ್ಟು ತಾಲ್ಲೂಕ್‌ಗಳಲ್ಲಿ ಪ್ರೋಗ್ರಾಮ್ ಆಫಿಸರ್‌ಗಳನ್ನು ನೇಮಕ ಮಾಡಿಲ್ಲದಿರುವುದು, ಹೆಚ್ಚುವರಿಯಾಗಿ ಬಿ.ಡಿ.ಓ.ಗಳೇ ಜವಾಬ್ದಾರಿ ವಹಿಸಿರುವುದು ತಿಳಿಯುತ್ತದೆ. ಪ್ರತಿ ಗ್ರಾಮಪಂಚಾಯತಿಗೆ ಒಬ್ಬ ಉದ್ಯೋಗ ಖಾತರಿ ಸಹಾಯಕನನ್ನು ನೇಮಕ ಮಾಡುವಲ್ಲಿ ಸಿ.ಎ.ಜಿ. ವರದಿ ಪ್ರಕಾರ 513 ಗ್ರಾ.ಪಂ.ಗಳಲ್ಲಿ ಶೇಕಡ 52ರಷ್ಟು ಈ ಹುದ್ದೆಗಳನ್ನು ತುಂಬಿಲ್ಲದಿರುವುದು. ತಾಂತ್ರಿಕ ಸಲಹೆ ಇಲ್ಲದೆ 2007–08 ರಲ್ಲಿ ಕೇವಲ 35 ದಿನಗಳು ಉದ್ಯೋಗ ಲಭ್ಯವಾಗಿದೆ. ಒಬ್ಬ ತಾಲ್ಲೂಕು ಮಟ್ಟದ ಬಿ.ಡಿ.ಓ ವಿಶಾಲ ವ್ಯಾಪ್ತಿ ಹೊಂದಿರುವ ತಳಮಟ್ಟದ ಗ್ರಾಮಗಳಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವೇ? ಈ ಸಿದ್ಧಾಂತದ ಪ್ರಕಾರ ಉದ್ಯೋಗದ ಭರವಸೆಯಿಂದ ನಿಯಮಾವಳಿ ಪ್ರಕಾರ ಉದ್ಯೋಗ ನೀಡಲು ಸಾಧ್ಯವೆ ಎನ್ನುವುದು ಒಂದು ಸವಾಲು. ಇದು ಆಡಳಿತಾತ್ಮಕ ಸಿಬ್ಬಂದಿ ಕೊರತೆಯೇ ಇದಕ್ಕೆ ಪ್ರಮುಖ ಕಾರಣವಾಗಿರುವುದನ್ನು ಅಧ್ಯಯನ ತಿಳಿಸುತ್ತದೆ. ಸಾಮಾಜಿಕ ಲೆಕ್ಕಪರಿಶೋಧನೆಯಲ್ಲಿ ಪ್ರಹಸನ (ನಾಟಕೀಯ)ಉದ್ಯೋಗ ಖಾತರಿ ನಿಯಮದ ಪ್ರಕಾರ ಸಾಮಾಜಿಕ ಲೆಕ್ಕಪರಿಶೋದನೆಯಲ್ಲಿ ಲೋಪದೋಷಗಳನ್ನು ಮುಚ್ಚಿಹಾಕಿದೆ. ಇದರ ಹಿಂದಿನ ಸತ್ಯಾ ಸತ್ಯತೆಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಕೌಸ್ತವ್ ಬ್ಯಾನರ್ಜಿ, ಪಾರ್ಥ ಸಹ. (2010), "The NREGA, the Maoists and the Development Woes of the Indian State ; ಮಾವೊವಾದಿಗಳು ನೆಲೆಸಿರುವಂತಹ ರಾಜ್ಯಗಳಾದ ಜಾರ್ಖಾಂಡ್, ಛತ್ತಿಸ್‌ಘರ್ ಹಾಗೂ ಒರಿಸ್ಸಾಗಳ ಕೆಲವು ಜಿಲ್ಲೆಗಳಲ್ಲಿ ಅಧ್ಯಯನ ನಡೆಸಲಾಗಿದೆ. ಜಾರ್ಖಾಂಡ್‌ನಲ್ಲಿ ಯೋಜನೆ ಪ್ರಾರಂಭವಾಗಿ ಮೂರು ವರ್ಷಗಳಾದರೂ ಯಾವುದೇ ನಿರೀಕ್ಷಿತ ಅಭಿವೃದ್ಧಿಯಾಗದಿರುವುದನ್ನು ಕಾರಣ ಕಾಯಿದೆಯ ನಿಯಮಗಳು ಕೆಲವು ಕಠಿಣವಾಗಿದ್ದು, ಇವುಗಳನ್ನು ಆಚರಣೆಗೆ ತರುವಲ್ಲಿ ವೈಫಲ್ಯವಾಗಿರುವುದು. 1993 ರಲ್ಲಿ ಇದ್ದ ನಿರುದ್ಯೋಗ ದರ 2004ರಲ್ಲಿ ಪುರುಷರಲ್ಲಿ ಶೇಕಡ 2.4ರಷ್ಟು ಹೆಚ್ಚಾದರೆ, ಮಹಿಳೆಯರಲ್ಲಿ ಶೇಕಡ 3.1ರಷ್ಟು ಹೆಚ್ಚಿಸಿರುವುದು. ಜಾರ್ಖಾಂಡನಲ್ಲಿ 30 ರಿಂದ 40 ದಿನಗಳು ಕೂಲಿ ದೊರೆತಿರುವುದು. ಛತ್ತಿಸ್‌ಘರ್‌ನಲ್ಲಿ ಉದ್ಯೋಗ ಖಾತರಿ ಆಚರಣೆಯಲ್ಲಿ ಉತ್ತಮವಾಗಿರುವುದರಿಂದ ಕೃಷಿಯ ಅಭಿವೃದ್ಧಿಗೆ ಸಹಾಯವಾಗಿರುವುದು. ಇದರಿಂದ ಕೃಷಿ ಉತ್ಪಾದನೆಯೂ ಹೆಚ್ಚಿರುವುದು. ಛತ್ತೀಸ್‌ಘರ್‌ದಲ್ಲಿ ಶೇಕಡ 50 ರಿಂದ 55 ದಿನಗಳ ಕೂಲಿ, ಭಿತ್ತನೆಯ ಬೀಜ, ರಸಗೊಬ್ಬರ, ಕ್ರಿಮಿನಾಶಕ ಔಷಧಿ ಕೊಳ್ಳುವ ಆರ್ಥಿಕ ಸಾಮರ್ಥ್ಯ ಉದ್ಯೋಗ ಖಾತರಿಯಿಂದ ಬಂದಿದೆ. ಅನುಷ್ಠಾನ ಸಂಸ್ಥೆಗಳು ಏಕೆ ನಿರಾಸಕ್ತಿ ಹೊಂದಿವೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಷಾಜಿ ಜೆಸೆಪ್(2006), "Power of the people political mobilization and Guaranteed Employment". ಅವರು ಮಹಾರಾಷ್ಟ್ರದ ಹಿಂದುಳಿದ ಜಿಲ್ಲೆಗಳಲ್ಲಿ ಅನುಷ್ಠಾನಗೊಂಡ

ಉದ್ಯೋಗ ಖಾತರಿ ಕಾಯಿದೆಯ ಯೋಜನೆಯ ಬಗೆಗೆ ಅಧ್ಯಯನವನ್ನು ಕೈಗೊಂಡಿರುತ್ತಾರೆ. ಮಹಾರಾಷ್ಟ್ರ ರಾಜ್ಯದಲ್ಲಿ 1970ರ ದಶಕದ ಅವಧಿಯಲ್ಲಿ ಸಾಮಾಜಿಕ ವರ್ಗದ ತಳಸ್ಥರದಲ್ಲಿರುವ ದಲಿತರು, ಮಹಿಳೆಯರು, ಗುಡ್ಡಗಾಡು ಜನರು, ಅತಿ ಸಣ್ಣ ರೈತರು ಮತ್ತು ಭೂರಹಿತ ಕಾರ್ಮಿಕರು ಆಹಾರದ ಭದ್ರತೆಯನ್ನು ಎದುರಿಸುವ ದುಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಮೊದಲಿಗೆ ಉದ್ಯೋಗ ಖಾತರಿ ಕಾಯಿದೆಯನ್ನು ಅನುಷ್ಠಾನ ಮಾಡುತ್ತಾರೆ. ಅನುಷ್ಠಾನದಲ್ಲಿ ಆಡಳಿತದ ಲೋಪದೋಷಗಳಿಂದ ಹಿಂದಿನ ಯೋಜನೆಗಳು ವೈಫಲ್ಯಗೊಂಡವು. ಈ ಯೋಜನೆಗಳ ಅನುಭಗಳ ಮೇಲೆ ಹೊಸ ಯೋಜನೆ ಜಾರಿಗೆ ತರುವಂತೆ ಮತ್ತು ಸರ್ಕಾರವನ್ನು ಮನವೊಲಿಸಲು ಅನೇಕ ಸಂಘ ಸಂಸ್ಥೆಗಳ ನೆರಿವಿಗೆ ಬರುವುದು. ಉದ್ಯೋಗದಲ್ಲಿ ಹೊಸ ನೀತಿಗಾಗಿ ಸರ್ಕಾರವನ್ನು ಒತ್ತಾಹಿಸಿದವು. ಈ ಸಂಘಟನೆಗಳಿಗೆ ಪಕ್ಷಮುಕ್ತ ರಾಜಕೀಯ ಒಕ್ಕೂಟಗಳೆಂದು ಪೊತಾರಿ ಹೇಳುತ್ತಾರೆ. ಈ ಪ್ರಯತ್ನದಿಂದ 1978ರ ಕಾಯಿದೆ ಅಂಗೀಕಾರವಾಯಿತು. ಉದ್ಯೋಗ ಖಾತರಿ ಯೋಜನೆಯಲ್ಲೂ ಹಸಿವು, ಆಹಾರ ಭದ್ರತೆಯಂತಹ ಸಮಸ್ಯೆಗಳು ಹೆಚ್ಚುತ್ತಲೇ ಹೋಯಿತು. ಹಸಿವು ನೀಗಿಸಲು "ಉದ್ಯೋಗ ಖಾತರಿ" ಒಂದು ಪ್ರಬಲವಾದ ಮಾರ್ಗವಾಗಿದ್ದರೂ 30 ವರ್ಷಗಳ ಉದ್ಯೋಗ ಖಾತರಿ ಯೋಜನೆಗಳಿಂದ ಬರ ಹೋಗಲಾಡಿಸಲು ಕೊನೆಗೂ ಸಾಧ್ಯವಾಗಲಿಲ್ಲ ಎನ್ನುವುದಕ್ಕೆ ಪ್ರತಿವರ್ಷ ಬೇಸಿಗೆ ಮುಂಗಾರು ಸಮಯದಲ್ಲಿ ರಾಜ್ಯ ಸರ್ಕಾರ ಕೆಲವು ಭಾಗದ ಜಿಲ್ಲೆ ಮತ್ತು ತಾಲ್ಲೂಕಗಳನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿತು. ಆಹಾರದ ಭದ್ರತೆ, ಬಡತನ ನಿರ್ಮೂಲನೆ ಆಗದಿರುವುದು ಈಗಲೂ ಸಹ ಮಹಾರಾಷ್ಟ್ರದಲ್ಲಿ ಉದ್ಯೋಗ ಖಾತರಿಯಂತಹ ಯೋಜನೆಗಳು ಬಡವರ ಹೃದಯ ಮುಟ್ಟುವಂತಹ ಪ್ರಯೋಗಗಳಾಗಲಿಲ್ಲ ಈ ವೈಫಲ್ಯದ ಹಿಂದೆ ಇರುವ ಸತ್ಯಾಸತ್ಯತೆಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ರಿತಿಕಾ ಕೆ. ಮತ್ತು ನಂದಿನಿ ಎನ್(2009)., Women Experience in MREGA. ಅವರು ರಾಜಸ್ಥಾನ, ಗುಜರಾತ್, ಪಶ್ಚಿಮ ಬಂಗಾಳ, ಕೇರಳ, ಆಂಧ್ರಪ್ರದೇಶಗಳ ಒಂದೊಂದು ಕ್ಷೇತ್ರಗಳನ್ನು 6 ರಾಜ್ಯಗಳಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆನುಷಂಗಿಕ ಮತ್ತು ಪ್ರಾಥಮಿಕ ಮಾದರಿಯಲ್ಲಿ ಅಧ್ಯಯನದಿಂದ ಅದರ ಪ್ರಮಾಣಾಂಶಗಳ ಮಾಹಿತಿಯನ್ನು ವಿಶ್ಲೇಷಿಸಿದರೆ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ನೀಡುವುದು ಆಹಾರ ಭದ್ರತೆ ನೀಡುವುದಾಗಿದ್ದರೂ, 100 ದಿನಗಳ ಬದಲಿಗೆ ಸರಾಸರಿ 43 ದಿನಗಳ ಉದ್ಯೋಗ ಒದಗಿಸಿದ್ದು. ಎಲ್ಲಿಯೂ ನಿರುದ್ಯೋಗದ ಭತ್ಯೆ ನೀಡಿಲ್ಲದಿರುವುದು ಫಲಾನುಭವಿಗಳ ಸಂದರ್ಶನಲ್ಲಿ ಅದರ ಬಗ್ಗೆ ಅವರಿಗೆ ಮಾಹಿತಿ ಇಲ್ಲದಿರುವುದು ಸಂದರ್ಶನದ ವೇಳೆ ಗೊತ್ತಾಗುತ್ತದೆ. ಶೇಕಡ 78ರಷ್ಟು ಮಹಿಳೆಯರಿಗೆ ಉದ್ಯೋಗ ಖಾತರಿಯ ಮಾಹಿತಿ ಇದೆ. ಆದರೆ ಉದ್ಯೋಗ ಹಕ್ಕು ತಿಳಿದಿರುವುದಿಲ್ಲ ಎನ್ನುವುದು ಅಧ್ಯಯನದಲ್ಲಿ ವ್ಯಕ್ತವಾಗಿದೆ.

ಶಿವಯ್ಯ ಜಿ ಮತ್ತು ನಾಗೇಶುರ ರಾವ್(2011), "Andhra Pradesh Rural Employment Guarantee Scheme ; Its Impact on the Rural Areas of Anantapur District" ಅಧ್ಯಯನವನ್ನು ಆಂಧ್ರಪ್ರದೇಶದಲ್ಲಿ ಕೈಗೊಂಡಿದ್ದು ಈ ಲೇಖನವನ್ನು ವಿಶ್ಲೇಷಿಸಿದರೆ ಉದ್ಯೋಗ ಖಾತರಿಯ ಕಾಯಿದೆಯ ಮಾಹಿತಿ ದುಡಿಯುವ ಕಾರ್ಮಿಕರಿಗೆ ಇಲ್ಲದಿರುವುದು, ಇದರಿಂದ ಬೇಡಿಕೆಯ ಪ್ರಮಾಣವೂ ಕಡಿಮೆಯಾಗಿರುವುದು ತಿಳಿಯುತ್ತದೆ. ಉದ್ಯೋಗದ ಚೀಟಿ ವಿತರಣೆಯಲ್ಲಿ ಜಾತಿಯ ಹೆಸರಲ್ಲಿ ಮತ್ತು ರಾಜಕೀಯ ಪಕ್ಷದ ಹೆಸರಲ್ಲಿ ತಾರತಮ್ಯ ನೀತಿ ಎಸಗಿರುವುದು, ಇದರಿಂದ ಶೇಕಡ 23ರಷ್ಟು ಕುಟುಂಬಗಳಿಗೆ ಉದ್ಯೋಗದ ಚೀಟಿ ವಿತರಿಸದಿರುವುದು ಕಂಡು ಬಂದಿರುವುದು. ಕಾರಣ ಗುತ್ತಿಗೆದಾರರು ಜೆಸಿಬಿ ಯಂತ್ರಗಳನ್ನು ಬಳಸಿರುವುದರಿಂದ ಭರವಸೆಯ ಉದ್ಯೋಗಗಳನ್ನು ನೀಡಲು ಆಗದಿರುವುದು ಕಂಡುಬಂದಿದೆ. ಗುತ್ತಿಗೆದಾರರು ತನ್ನ ಹಿಂಬಾಲಕರಿಗೆ, ತನ್ನ ಜಾತಿಯವರಿಗೆ ಮತ್ತು ತಮ್ಮ ರಾಜಕೀಯ ಪಕ್ಷದವರಿಗಾಗಿ ಉದ್ಯೋಗದ ಚೀಟಿಯನ್ನು ಪಡೆದು ಬ್ಯಾಂಕ್‌ನಿಂದ ಕೂಲಿ ವೇತನ ಪಡೆದಿರುವುದನ್ನು ಅಧ್ಯಯನ ಗುರುತಿಸಿದೆ. ಯಂತ್ರಗಳ ಮೂಲಕ ಜಲನಯನ ಅಭಿವೃದ್ಧಿ ಕಾಮಗಾರಿ, ಮಣ್ಣು ಸಂರಕ್ಷಣಾ ಕಾಮಗಾರಿಗಳು, ಸಣ್ಣ ನೀರಾವರಿ, ಕೆರೆಗಳ ಹೂಳೆತ್ತುವುದು, ಬದು ಹಾಕುವ ಕೆಲಸ ಮಾಡಲಾಗಿದೆ. ಕೇವಲ 15 ದಿನ ಉದ್ಯೋಗ ನೀಡಿರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

ಪರುಶಾಮ ರೈ(2010), Study on NREGA by CEFS, New Delhi. ಈ ಅಧ್ಯಯನ ಒರಿಸ್ಸಾದ 6 ಜಿಲ್ಲೆಗಳಲ್ಲಿ ಪ್ರಾಥಮಿಕ ಮಾಹಿತಿಯ ಮೂಲಕ ಅಧ್ಯಯನ ಮಾಡಲಾಗಿದೆ. 19 ಜಿಲ್ಲೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಅಧ್ಯಯನದ ವರದಿಯನ್ನು ಪರಾಮರ್ಶಿಸಿದರೆ ಉದ್ಯೋಗ ಖಾತರಿಯಡಿ ವರ್ಷದಲ್ಲಿ 100 ದಿನಗಳ ಉದ್ಯೋಗ ಅರೆಕುಶಲ ಕೂಲಿಗಾರರಿಗೆ ನೀಡಬೇಕೆಂಬ ನಿಯಮವಿದ್ದರೂ, ಒಂದು ವರ್ಷದಲ್ಲಿ ಕುಟುಂಬದ ಕೂಲಿಯ ಸರಾಸರಿಯ ಸಂಖ್ಯೆ 57 ದಿನಗಳನ್ನು ಮಾತ್ರ ನೀಡಿರುತ್ತದೆ. 100ದಿನಗಳ ಉದ್ಯೋಗಗಳ ಪ್ರಚಾರ ಹೆಚ್ಚು ರಾಜಕೀಯ ಪ್ರೇರಿತವಾಗಿರುವುದು, 18 ಗ್ರಾಮಗಳಲ್ಲಿ ಯಾವುದೇ ಉದ್ಯೋಗದ ಚೀಟಿ ಪಡೆದಿರಲಿಲ್ಲ. 37 ಗ್ರಾಮಗಳಲ್ಲಿ ಉದ್ಯೋಗವನ್ನೇ ಪಡೆದುಕೊಂಡಿರಲಿಲ್ಲ. ಅತಿ ಬುದ್ದಿವಂತಿಕೆಯಿಂದ ಸುಳ್ಳುದಾಖಲೆ ಗಳನ್ನು ಸೃಷ್ಟಿಸಿ ಆನ್ ಲೈನ್ ಮೂಲಕ ದಾಖಲಿಸಿದೆ. ಕಛೇರಿಯಲ್ಲಿರುವ ದಾಖಲೆಗಳಲ್ಲಿ ಮಾನವ ಕೆಲಸದ ದಿನಗಳಲ್ಲಿ 104 ದಿನಗಳು, 108 ದಿನಗಳು, 100 ದಿನಗಳು, 96 ದಿನಗಳು, 90 ದಿನಗಳು ಹೀಗೆಯೆ ವಾಸ್ತವಿಕ ಕೆಲಸಕ್ಕೂ ದಾಖಲೆಗಳಲ್ಲಿರುವುದಕ್ಕೂ ತಾಳೆಯಾಗದಿರುವುದು ಕಂಡುಬರುವುದು. ಇದಕ್ಕೆ ಸಂಬಂಧಿಸಿದಂತೆ ಪಾರದರ್ಶಕತೆಯ ಕೊರತೆಯು ಕಂಡುಬಂದರೆ ಇನ್ನೊಂದೆಡೆ ಮಾಹಿತಿ ಕೊರತೆ ಕಂಡುಬಂದಿದೆ. ಜನರಿಗೆ ಉದ್ಯೋಗದ ಬಗ್ಗೆ ಶೇಕಡ 67ರಷ್ಟು ಉದ್ಯೋಗದ ಅವಶ್ಯಕತೆ

ಇದ್ದರೂ ಇಲ್ಲಿ ಗುತ್ತಿಗೆದಾರರು ಯಂತ್ರಗಳ ಮೂಲಕ ಕಾಮಗಾರಿಗಳನ್ನು ಅನುಷ್ಠಾನ ಮಾಡಿರುವುದು ಜನರಿಗೆ ಶೇಕಡ 12ರಷ್ಟು ಮಾತ್ರ ಉದ್ಯೋಗ ನೀಡಿರುವುದನ್ನು ತಿಳಿಸುತ್ತದೆ.

ಜ್ಯಾನ್ ದ್ರೇಜೆ(2010), On NREGA in Orissa. ಕಲಹಂದಿ, ಬಲನ್ಗಾರ್ ಮತ್ತು ಬೋದ್ ಜಿಲ್ಲೆಗಳಲ್ಲಿ ಅಧ್ಯಯನವನ್ನು ಕೈಗೊಂಡಿದ್ದು, ಉದ್ಯೋಗ ಖಾತರಿ ಯೋಜನೆ ನಿಯಮಾವಳಿ ಪ್ರಕಾರ ಮಷ್ಟರ್‌ರೋಲ್ ನಂತಹ ದಾಖಲೆಗಳಲ್ಲಿ ಕೂಲಿಕಾರರ ಮತ್ತು ಕೂಲಿಗೆ ಸಂಬಂದಪಟ್ಟ ದಾಖಲೆಗಳಿರಬೇಕು. ಆದರೆ ಇಲ್ಲಿ ಕೂಲಿಕಾರರಿಗೆ ಹಣ ಸಂದಾಯವಾಗಿರುವುದಕ್ಕೆ ಯಾವ ದಾಖಲಾತಿಯೂ ಇಲ್ಲದಿರುವುದು ಕಾಣಲಾಗಿದೆ. ಉದ್ಯೋಗ, ಕೂಲಿಯ ವಿವರಣೆ, ಉದ್ಯೋಗದ ಚೀಟಿ, ಹೀಗೆ ಆಡಳಿತಾತ್ಮಕ ವಿಚಾರದಲ್ಲಿ ಎಲ್ಲಿಯೂ ಇದರ ನಿರ್ವಹಣೆಯಲ್ಲಿ ಸ್ಪಷ್ಟತೆ ಇಲ್ಲದಿರುವುದು, ಪ್ರಾರಂಭದ ದಿನಗಳಲ್ಲಿ ಉದ್ಯೋಗದ ಚೀಟಿ ಕೆಲವರಿಗೆ ವಿತರಿಸಿ ನಂತರ ಬಂದ ಮಜುರೇ ಗ್ರಾಮಗಳ ಬೇಡಿಕೆಯನ್ನು ಪೂರ್ಣವಾಗಿಯೇ ಕೈಬಿಟ್ಟಿರುವುದು, ಎಲ್ಲಾ ಹಂತದಲ್ಲೂ ಪಾರದರ್ಶಕದ ಕೊರತೆ ಇರುವುದು, ಕಾಯಿದೆ ಅನ್ವಯ ಆಹಾರದ ಭದ್ರತೆ ಉದ್ಯೋಗದ ಸೃಷ್ಟಿಯ ಹಿನ್ನಲೆಯಲ್ಲಿ ಗುತ್ತಿಗೆದಾರನ್ನು ಪೂರ್ಣವಾಗಿ ನಿಷೇದಿಸಿದ್ದರೂ ಅವರದೇ ಪ್ರಮುಖ ಪಾತ್ರವಾಗಿರುತ್ತದೆ. ಕೂಲಿಕಾರ್ಮಿಕರ ಉದ್ಯೋಗದ ಚೀಟಿಗಳೆಲ್ಲ ಗುತ್ತಿಗೆದಾರರ ಮನೆಯಲ್ಲಿರುವವು. ತಾಂತ್ರಿಕ ತಜ್ಞರ ಕೊರತೆಯಿಂದ ಕೂಲಿಯ ವೇತನದಲ್ಲಿ ವಿಳಂಬವಾಗಿರುವುದು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಈ ಯೋಜನೆಯಲ್ಲಿ ಬೇಡಿಕೆ ಬಂದರೂ ಕಡೆಗಣಿಸಿರುವ ಹಿನ್ನೆಲೆ ಏನು? ಲೋಪದೋಷಗಳ ಸುತ್ತ ಹೆಣೆದಿರುವ ವಾಸ್ತವಾಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ.

ಬಾಗಲ್‌ಕೋಟ ಎಸ್ ಟಿ ಮತ್ತು ಪೋಟೆ ಎಸ್‌ಎಂ(2011)., "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಸಾಮಾಜಿಕ ಆರ್ಥಿಕ ಸಬಲೀಕರಣ ದೂರ ದೃಷ್ಟಿ ಮತ್ತು ಸಮಸ್ಯೆಗಳು" ಅಧ್ಯಯನವನ್ನು ದೇಶದಲ್ಲಿ ಮೊದಲ ಹಂತದಲ್ಲಿ 20 ಜಿಲ್ಲೆಗಳಲ್ಲಿ ಮಾತ್ರ ಅಧ್ಯಯನ ಮಾಡಲಾಗಿದೆ. ಸಬಲೀಕರಣದ ಸಾಧನವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಬಡತನದಲ್ಲಿರುವ ಕುಟುಂಬಗಳಿಗೆ ಜೀವನ ಭದ್ರತೆಗೆ 100 ದಿನಗಳ ಉದ್ಯೋಗಗಳನ್ನು ಒದಗಿಸಿಕೊಟ್ಟಿದೆ. "ಪ್ರಾಯೊಗಿಕ ಮಾನವ ಶಕ್ತಿ ಸಂಶೋಧನ ಸಂಸ್ಥೆ" ಈ ಹಿನ್ನೆಲೆಯಲ್ಲಿ ಶೇಕಡ 40ರಷ್ಟು ಮಹಿಳಾ ಸಹಭಾಗಿತ್ವ ವಾರ್ಷಿಕ ಆದಾಯದಲ್ಲಿ 15000 ದಿಂದ 20000 ಹೆಚ್ಚಾಗಿರುವುದು ರಾಜಸ್ತಾನದಲ್ಲಿ ಕುಟುಂಬ ಒಂದಕ್ಕೆ ಸರಾಸರಿ 77 ದಿನಗಳು ಉದ್ಯೋಗ ಸಿಕ್ಕಿರುವುದು ಮತ್ತು ಮಹಿಳೆಯರಿಗೆ ಸ್ವಂತ ಆದಾಯ ದುಡಿಯಲಿಕ್ಕೆ ಪರೋಕ್ಷವಾಗಿ ಅನನ್ಯ ಅವಕಾಶ ಮಾಡಿಕೊಟ್ಟಿದೆ. ಶೇಕಡ 59ರಷ್ಟು ವಲಸೆ ಪ್ರಮಾಣವನ್ನು ತಗ್ಗಿಸಿದೆ ಶೇಕಡ 38ರಷ್ಟು ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರೇರೆಪಿಸಿದೆ. ಆದರೂ ಕೂಲಿ ನೀಡಿರುವುದರಲ್ಲಿ 30 ರಿಂದ 45 ದಿನಗಳ ವಿಳಂಬ ನೀತಿ ಅನುಸರಿಸಿರುವುದು

ಕಂಡುಬಂದಿದೆ. ಯಶಸ್ಸುಗಳ ಮತ್ತು ವೈಫಲ್ಯಗಳ ಒಳಗಿನ ಸತ್ಯಾಸತ್ಯತೆಗಳನ್ನು, ಅದರ ಪೂರಕ ಮತ್ತು ಪ್ರೇರಕ ಹಿನ್ನೆಲೆಗಳು ಏನು? ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಜ್ಯಾನ್ ದ್ರೇಜೆ, ರಿತಿಕಾ ಕೇರಾ ಸಿದ್ದಾರ್ಥ, Corruption in NREGA , Myths and Reality. ಜಾರ್ಖಂಡ್, ತಮಿಳುನಾಡು, ಛತ್ತಿಸ್‌ಗರ್ ಮತ್ತು ಆಂಧ್ರಪ್ರದೇಶದಲ್ಲಿ ಅಧ್ಯಯನವನ್ನು ಕೈಗೊಂಡಿರುತ್ತದೆ. ಸಿ.ಎ.ಜಿ ವರದಿಗಳ ಮೂಲಕ ಇದರಲ್ಲಿ ನಡೆದ ವೈಫಲ್ಯಗಳನ್ನು ಎತ್ತಿ ಹಿಡಿಯುತ್ತಲೇ ಬಂದಿದೆ. ಇದೊಂದು ಉಪಯುಕ್ತವಾದ ಜಾಗೃತಿಯ ಕರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಯೋಜನೆ ಅನುದಾನ ನಿಜವಾಗಿಯು ಬಡವರಿಗೆ ಲಭಿಸಿದೆಯೆ ಅನ್ನುವುದು ಒಂದು ಪ್ರಶ್ನೆಯಾಗಿಯೆ ಉಳಿದಿದೆ. ಮಸ್ಟರ್‌ರೋಲ್ ನಂತಹ ಪ್ರಯೋಜನಗಳ ಮೂಲಕ ಭ್ರಷ್ಟಾಚಾರಗಳನ್ನು ಎತ್ತಿಹಿಡಿಯಲಾಗಿದೆ. ಉದಾ; ಅಲಹಾಬಾದ್ ಸೋಷಿಯಲ್ ಸೈನ್ಸ್ ಆಫ್ ಇನಿಷ್ಟಿಟ್ಯೂಟ್ ನ ಜೀವಿಸಂತರು ಮತ್ತು ದೆಹಲಿ ವಿಶ್ವವಿದ್ಯಾಲಯ ತರಬೇತಿ ಪಡೆದ ವಿದ್ಯಾರ್ಥಿ ತಂಡದಿಂದ ಮಸ್ಟರ್‌ರೋಲ್‌ನ್ನು ಮಾದರಿ ವಿಧಾನದ ಮೂಲಕ ಆಯ್ಕೆಮಾಡಿ ಸಮೀಕ್ಷೆ ಕೈಗೊಳ್ಳಲಾಗಿದೆ. ಮಸ್ಟರ್‌ರೋಲ್‌ನ ಪಟ್ಟಿಯಲ್ಲಿರುವಂತಹ ಕೂಲಿಕಾರ್ಮಿಕರನ್ನು ಸಂದರ್ಶನ ಮಾಡಲಾಗಿದೆ, ಕೆಲಸ ನಿರ್ವಹಿಸಿದ ದಿನಗಳು ಮತ್ತು ಪಡೆದುಕೊಂಡ ವೇತನದ ಬಗ್ಗೆ ಮಾಹಿತಿ ಪಡೆಯಲಾಗಿದೆ. ರಾಜಸ್ಥಾನದಲ್ಲಿ ಅಭಿವೃದ್ಧಿಗೊಳಪಡಿಸಿದೆ. ಜಾರ್ಖಂಡ್ ಮತ್ತು ಛತ್ತಿಸ್‌ಘರ್‌ದ "ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆ ದೀರ್ಘಾವಧಿ ಭ್ರಷ್ಟಾಚಾರವಾಗಿರುವುದಕ್ಕೆ ಸಾಕ್ಷ್ಯಧಾರ ದೊರಕಿರುವುದು ಉದಾಹರಣೆಗೆ ಛತ್ತಿಸ್ಸಗರ್‌ದ ಸುಚ್ಚುಜಾ ಜಿಲ್ಲೆಯಲ್ಲಿ ಮಸ್ಟರ್‌ರೊಲ್ ತನಿಖೆ ಮಾಡಲು ಮಾದರಿ ಆಯ್ಕೆಮೂಲಕ ತನಿಖೆ ಮಾಡಲಾಗಿದೆ. ಶೇಕಡ 95 ರಷ್ಟು ಕೂಲಿ ಪಾವತಿಯಾಗಿದೆ ಮತ್ತು ಫಲಾನುಭವಿಗೆ ತಲುಪಿರುವುದು. ಜಾರ್ಖಂಡ್‌ನ ರಾಂಚಿಯಲ್ಲಿ 5 ಮಾದರಿ ಗ್ರಾಮಪಂಚಾಯತಿ ಮಸ್ಟರ್‌ರೊಲ್ ತನಿಖೆ ಮಾಡಿದಾಗ ಶೇಕಡ 33ರಷ್ಟು ಆದಂತಹ ಸೋರಿಕೆಯನ್ನು ಎತ್ತಿಹಿಡಿಯಿತು. ದೊಡ್ಡ ಪ್ರಮಾಣದ ಅನುದಾನವನ್ನು ಬಡವರಿಗೆ ಸಿಕ್ಕಿಲ್ಲವೆಂದು ಸಮರ್ಥಿಸಿದೆ. ತಮಿಳುನಾಡಿನ ವೆಲ್ಲೂರು ಜಿಲ್ಲೆಯಲ್ಲಿ ಸಾಮಾಜಿಕ ಲೆಕ್ಕ ಪರಿಶೂಧನೆ ವೀಕ್ಷಿಸಿದಾಗ ಭ್ರಷ್ಟಾಚಾರ ತಡೆಯುವ ತಂತ್ರರೂಪಿಸಿದೆ. ತಮಿಳುನಾಡು ಸರ್ಕಾರದ ಮಾರ್ಗದರ್ಶನ ಪ್ರಕಾರ ಮಸ್ಟರ್‌ರೊಲ್ ಜಾರಿಗೆ ಬಂದಿದ್ದು, ಇದರಲ್ಲಿ ಕಾರ್ಮಿಕರ ಹೆಸರು, ವಿವರ, ಹಾಜರಾತಿ ಸಹಿ, ಹೆಬ್ಬಟ್ಟು ತಪಾಸಣೆ ಮೂಲಕ ನ್ಯೂನ್ಯತೆಯನ್ನು ಎತ್ತಿ ಹಿಡಿದಿದೆ. ಸೋರಿಕೆ ಹೆಚ್ಚು ಇರುವುದು ಸಾಮಾಜಿಕ ಲೆಕ್ಕ ಪರಿಶೋಧನೆ ಮಸ್ಟರ್‌ರೊಲ್ ತಪಾಸಣೆ ಮಾಡಿಲ್ಲ. ಆಂಧ್ರಪ್ರದೇಶದಲ್ಲಿ ಅಂಚೆ ಕಛೇರಿ ಮೂಲಕ ವೇತನ ನೀಡಲಾಯಿತು. ಸಾಮಾಜಿಕ ಲೆಕ್ಕ ಪರಿಶೋಧನೆ ಹಲವು ಪ್ರಕಾರದ ಭ್ರಷ್ಟಾಚಾರಗಳು ಬೆಳಕಿಗೆ ಬಂದಿವೆ. ಒರಿಸ್ಸಾದ 30 ಕೆಲಸದ ಸ್ಥಳಗಳನ್ನು ಮಾದರಿ ಆಯ್ಕೆ ಮೂಲಕ ಸಮೀಕ್ಷೆ ಮಾಡಲಾಗಿದೆ. ಜಲಂಗೀರ್, ಜಾತ್ ಹಾಗೂ ಕಳಹಂದಿ

ಜಿಲ್ಲೆಗಳಲ್ಲಿ ಶ್ರೀಮಂತರ ಮೂಲಕ ಹೆಚ್ಚು ಭ್ರಷ್ಟಾಚಾರವಾಗಿತ್ತು ಒರಿಸ್ಸಾ ಭ್ರಷ್ಟಾಚಾರದಲ್ಲಿ ದೊಡ್ಡ ಹೆಸರು ಮಾಡಿರುವುದನ್ನು ಅಧ್ಯಯನ ತಿಳಿಸುತ್ತದೆ.

ಅನಿಷ್ ವಾನಾಯಕ್(2008), NREGA and the death of taps soren. ಪ್ರಕರಣ ಅಧ್ಯಯನ. ಈ ಅಧ್ಯಯನವನ್ನು ಜಾರ್ಖಂಡ್ ರಾಜ್ಯದ ಅಜಾಂಗ್ ಬಾದಿನ ಚಾರ್ಕಿ ಚೌಕದಲ್ಲಿನ ತಪಸೇ ಸೋರೆನ್ ಎನ್ನುವ ಗುಡ್ಡಗಾಡಿನ ಆದಿವಾಸಿ ಜನಾಂಗದ ಬಿರಕಹಾದ್ ಎಂಬ ಗ್ರಾಮದಲ್ಲಿ ಕೈಗೊಂಡಿದೆ. ಈ ಲೇಖನವನ್ನು ಅವಲೋಕಿಸಿದರೆ ಜುಲೈ 2008ರಲ್ಲಿ ಒಬ್ಬ ಸಣ್ಣ ರೈತ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ದಾರುಣ ಸಾವಿನ ಪ್ರಕರಣ ಇದು. ಜಾರ್ಖಾಂಡ್ ಸೋರೆನ್ ಹಾಗು ಅವನ ಸಹೋದರನಿಗೆ 4.5 ಎಕರೆ ಜಮೀನು ಮಾತ್ರ ಇರುತ್ತದೆ. ಇವರಿಗೆ ಜಮೀನಿನಲ್ಲಿ ಕೇವಲ 4 ತಿಂಗಳು ಮಾತ್ರ ಕೆಲಸವಿರುತ್ತದೆ. ಉಳಿದ ದಿನಗಳಲ್ಲಿ ಜೀವನೋಪಾಯಕ್ಕಾಗಿ ಬೇರೆ ಕಡೆ ಕೂಲಿ ಹುಡುಕಿಕೊಂಡು ವಲಸೆ ಹೋಗಬೇಕಾಗಿರುತ್ತದೆ. ಈ ಮಧ್ಯೆ ಸೋರೆನ್‌ನ ಜಮೀನಿನಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ವತಿಯಿಂದ ಬಾವಿ ನಿರ್ಮಾಣಕ್ಕೆ ರೂ 1,63,000 ಹಣ ಮಂಜೂರಾಗುತ್ತದೆ. ಇದಕ್ಕೆ 10,000 ಲಂಚ ನೀಡಬೇಕಾಗುತ್ತದೆ. ಈ ಹಣದಲ್ಲಿ 70000ರೂ ಅನ್ನು ಮೂರು ಕಂತುಗಳಲ್ಲಿ ಹಣ ಬಿಡುಗಡೆ ಮಾಡುವಂತೆ ಆದೇಶವೂ ಆಗಿರುತ್ತದೆ. ಸಕಾಲದಲ್ಲಿ ಹಣ ಬರದ ಕಾರಣ ಕೂಲಿ ಕೊಡಲು ಆಗುವುದಿಲ್ಲ. ಕೆಲಸದಲ್ಲಿ ವಿಳಂಬವಾಗುವುದು. ಅಷ್ಟರಲ್ಲಿ ಬಾವಿಯಲ್ಲಿ ಬಂಡೆ ಬಂದ ಕಾರಣ ಕೆಲಸ ಅರ್ಧಕ್ಕೆ ನಿಲ್ಲುವುದು, ಆದರೂ ಕೆಲಸ ಮಾಡಿದವರಿಗೆ ಕೂಲಿ ನೀಡಲು ಸುರೇನ್ ಬ್ಯಾಂಕಿಗೆ ಹಣ ತರಲು ಹೋಗುತ್ತಾನೆ. ಆಗ ಅವನಿಗೆ ಒಂದು ಆಘಾತವಾಗುತ್ತದೆ. ಬ್ಯಾಂಕಿನಲ್ಲಿದ್ದ ಹಣವನ್ನು ಅವನಿಗೆ ಗೊತ್ತಿಲ್ಲದೆ ವಿತ್ ಡ್ರಾ ಮಾಡಲಾಗಿರುತ್ತದೆ. ಈ ವಿಷಯದ ಬಗ್ಗೆ ಚರ್ಚಿಸಲು ಬಿ.ಡಿ.ಒ ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಪಂಚಾಯತ್ ಸೇವಕರನ್ನು ಭೇಟಿ ಮಾಡುತ್ತಾನೆ. ಅವರುಗಳ ನಡುವೆ ಏನು ಚರ್ಚೆ ನಡೆದಿದೆ ಎಂಬುದು ಯಾರಿಗೂ ಗೊತ್ತಿರುವುದಿಲ್ಲ. ಆದರೆ ಅವನು ಸೀಮೆ ಎಣ್ಣೆ ಬಾಟಲ್ ತೆಗೆದು ಕೊಂಡು ಹೋಗಿ ಮೈಮೇಲೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಕಿರುಚುತ್ತ ಉದ್ರೇಕದ ಮಾತು ಹೇಳುತ್ತಾನೆ "ಇನ್ನು ಮುಂದೆ ಯಾವುದೇ ಅನ್ಯಾಯವನ್ನು ಸಹಿಸುವುದಿಲ್ಲ" ಎಂದು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆಯುತ್ತಾನೆ. ಕಾಯಿದೆಯ ನಿಯಮಾವಳಿಗಳು ಅನುಷ್ಠಾನದಲ್ಲಿ ಎಲ್ಲಾ ಹಂತದಲ್ಲೂ ಉಲ್ಲಂಘಿಸಿರುವುದು ಗೊತ್ತಾಗುತ್ತದೆ. ಇಲ್ಲಿ ಕಾಯಿದೆಯನ್ನು ಏಕೆ ಉಲ್ಲಂಘಿಸಿದ್ದಾರೆ ಮತ್ತು ಅನುಸ್ಠಾನದಲ್ಲಿ ಪಂಚಾಯತ್ ರಾಜ್‌ನ ಲೋಪದೋಷಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ವಿದ್ಯಾದಾಸ್ ಮತ್ತು ಪ್ರದೀಲಾಸ(2007), "Illusions of change" ಈ ಅಧ್ಯಯನವನ್ನು ಒರಿಸ್ಸಾ ರಾಜ್ಯದಲ್ಲಿ ಕೈಗೊಂಡಿದ್ದು. ಸರ್ಕಾರವು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ

ಕಾಯಿದೆ ಕಾರ್ಯಕ್ರಮದ ಮೊದಲ ಹಂತದ ಅನುಸ್ಠಾನದ ಅಂಕಿ ಅಂಶಗಳನ್ನು ವಿಶ್ಲೇಷಣೆ ಮಾಡಿದರೆ ಒರಿಸ್ಸಾ ಸರ್ಕಾರ 700 ಕೋಟಿಗಿಂತಲೂ ಹೆಚ್ಚಿನ ಹಣ ಶೇಕಡ 82.39 ರಷ್ಟು ಹಣ ಖರ್ಚಾಗಿರುವುದು. 2006–07ರಲ್ಲಿ ಮಯೂರ್ ಬಾನಿ ಜಿಲ್ಲೆಯಲ್ಲಿ ಹೆಚ್ಚಿನ ಹಣ ಖರ್ಚಾಗಿರುವುದು. ಒಟ್ಟು 23.30 ಲಕ್ಷ ಕುಟುಂಬಗಳಿಗೆ ಉದ್ಯೋಗ ಚೀಟಿಯನ್ನು ವಿತರಿಸಲಾಗಿದ್ದು, ಅದರಲ್ಲಿ 11.19 ಲಕ್ಷ ಕುಟುಂಬಗಳಿಗೆ ಉದ್ಯೋಗವನ್ನು ಮಾತ್ರ ಒದಗಿಸಿದೆ. ಕಾಯಿದೆಯ ಅನ್ವಯ ಒಂದು ಕುಟುಂಬಕ್ಕೆ ಒಂದು ವರ್ಷದಲ್ಲಿ 100 ದಿನಗಳ ಉದ್ಯೋಗ ಒದಗಿಸಬೇಕಾಗಿದ್ದು, ಆದರೆ ಸರಾಸರಿ ಕೇವಲ 31 ದಿನಗಳ ಉದ್ಯೋಗ ಮಾತ್ರ ಒದಗಿಸಿರುವುದು. ಕಾಯಿದೆಯ ಉಲ್ಲಂಘನೆ ಏಕಾಯಿತು? ಪಂಚಾಯತಿಯು ಅನುಷ್ಠಾನದಲ್ಲಿ ಏಕೆ ವೈಫಲ್ಯ ಕಂಡಿದೆ? ಹಲವು ಪ್ರಶ್ನೆಗಳಿಗೆ ಗ್ರಾಸವಾಗುವುದು. ಈ ತರಹ ಹಲವು ಲೋಪದೋಷಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ.

ಸಿಖ್ ರಾಜನ್ ಮಿಶ್ರ, (2013), "The National Rural Employment Guarantee Scheme; Some Reflections on apportunities and challenges. ಈ ಅಧ್ಯಯನವನ್ನು ರಾಜಸ್ಥಾನ, ಕರ್ನಾಟಕ ಮತ್ತು ತ್ರಿಪುರದಲ್ಲಿ ನಡೆಸಲಾಗಿದೆ. ಹಸಿರು ಕ್ರಾಂತಿಯ ನಂತರ ಭಾರತದ ಕೃಷಿ ಪ್ರದೇಶ ವಿಸ್ತಾರವಾಯಿತು. ಜಮೀನ್ದಾರರಿಗೆ ಅನುಕೂಲವಾಯಿತೆ ವಿನಃ ಮಧ್ಯಮ ವರ್ಗದ ರೈತರಿಗೆ ಅನುಕೂಲವಾಗಲಿಲ್ಲ. ಈ ಮಧ್ಯೆದಲ್ಲಿಯೇ ಜನಸಂಖ್ಯೆ ಬೆಳವಣಿಗೆಯ ದರಕ್ಕಿಂತ ಬೆಳೆದಂತಹ ಆಹಾರದ ಧಾನ್ಯಗಳ ದರ ಹೆಚ್ಚಾಯಿತು. ಕಡಿಮೆ ಇರುವ ಕೇವಲ ನೀರಾವರಿಯಲ್ಲಿ ಕೃಷಿ ಉತ್ಪಾದನೆ ಹೆಚ್ಚಾಯಿತೇ ವಿನಃ ಒಣ ಭೂಮಿ ಬೇಸಾಯ ಕಡೆಗಣಿಸಿದ್ದರಿಂದ ಉದ್ಯೋಗವಿಲ್ಲದೆ ಆಹಾರದ ಭದ್ರತೆ ಕೊರತೆ ಉಂಟಾಯಿತು. ಉದ್ಯೋಗ ಖಾತರಿ ಕಾಯಿದೆ ಭರವಸೆಯನ್ನಾಗಲಿ, ಉದ್ಯೋಗದ ಹಕ್ಕಿಗಾಗಲಿ, ಕಾಯಿದೆಯಾಗಿ ಹೊರ ಹೊಮ್ಮಿರಲಿಲ್ಲ. 2008ರ ಸುಮಾರಿಗೆ 604 ಜಿಲ್ಲೆಗಳಿಗೆ ಈ ಯೋಜನೆ ವಿಸ್ತರಿಸಲಾಯಿತು. ಅಂಕಿ ಅಂಶಗಳ ಪ್ರಕಾರ 20000 ಕೋಟಿ ಖರ್ಚಾಗಿರುವುದು ಕಂಡುಬಂದಿದೆ. ಕಾಯಿದೆ ಅಡಿ ಭ್ರಷ್ಟಾಚಾರ ನಿಯಂತ್ರಿಸಲು ಸಾಮಾಜಿಕ ಲೆಕ್ಕ ಪರಿಶೋಧನೆ ಇದ್ದರೂ ಡ್ರೀಜೆ ಪ್ರಕಾರ 2011ರಲ್ಲಿ ಶೇಕಡ 20 ರಷ್ಟು ಕುಟುಂಬಗಳಿಗೆ ಮಾತ್ರ 100 ದಿನಗಳು ಒದಗಿಸಿರುವುದು. ದೇಥ 2008ರ ಅಧ್ಯಯನದಲ್ಲಿ ಉದ್ಯೋಗ ಚೀಟಿ ವಿತರಿಸುವಲ್ಲಿ ತುಂಬ ತಾರತಮ್ಯ ಎಸಗಿರುವುದು ತಿಳಿಯುತ್ತದೆ. 2006ರ 200 ಜಿಲ್ಲೆಗಳ ಪೈಕಿ ಶೇಕಡ 3.2ರಷ್ಟು ಕುಟುಂಬಗಳಿಗೆ 100 ದಿನಗಳ ಉದ್ಯೋಗ ಮಾತ್ರ ಒದಗಿಸಿದೆ. ಸರಾಸರಿ 18 ದಿನಗಳ ಉದ್ಯೋಗ ಮಾತ್ರ ಒದಗಿಸಿರುವುದು ತಿಳಿಯುತ್ತದೆ. ಉತ್ತಮ ಎಂದರೆ ರಾಜಸ್ಥಾನಗಳಲ್ಲಿ 77 ದಿನಗಳ ಉದ್ಯೋಗ ಮಾತ್ರ ಒದಗಿಸಿದೆ. ಹಾಗೆಯೇ ತ್ರಿಪುರ ಉತ್ತಮ ಸಾಧನೆ ಮಾಡಿದೆ. ಕರ್ನಾಟಕ 2006–07ರಲ್ಲಿ ಕೇವಲ 10 ದಿನಗಳ ಉದ್ಯೋಗ ಮಾತ್ರ ಒದಗಿಸಿದೆ ಎನ್ನುವುದನ್ನು ಅಧ್ಯಯನ ಗುರುತಿಸಿದೆ.

ನಾರಾಯಣ ಚಂದ್ರ ಪ್ರಧಾನ ಮತ್ತು ರಮೇಶ್ ಗೋಲೈಟ MGNREGA A virtuous social protection. ಅವರು ಈ ಅಧ್ಯಯನವನ್ನು ಮೊದಲ ಹಂತದಲ್ಲಿ 2ನೇ ಫೆಬ್ರವರಿ 200 ಜಿಲ್ಲೆಗಳು 2008–10ರಲ್ಲಿ ಅನುಷ್ಠಾನದ ಜಿಲ್ಲೆಗಳಲ್ಲಿ ಕೈಗೊಂಡಿದ್ದಾರೆ. 5–3ಕೋಟಿ ಉದ್ಯೋಗ ಸೃಷ್ಟಿ ಮಾಡಲಾಯಿತು. 2005ರಲ್ಲಿ ಕಾಯಿದೆ ರೂಪದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಪ್ರಾರಂಭವಾಗಿ 2006ರಲ್ಲಿ ಅನುಷ್ಠಾನಕ್ಕೆ ಬಂದಿತು. ಇದರ ಉದ್ದೇಶಕ್ಕೆ ವಿರುದ್ಧವಾಗಿ ಕುಟುಂಬಕ್ಕೆ ವರ್ಷದಲ್ಲಿ 100ದಿನಗಳ ನೀಡದೆ ಬಡತನದ ಸ್ವರೂಪಗಳು ಮುಂದುವರೆದಿರುವುದು ತಿಳಿಯುತ್ತದೆ. ಒಟ್ಟು ದೇಶೀಯ ಉತ್ಪನ್ನ ಶೇಕಡ 5ದಕ್ಕಿಂತ ಹೆಚ್ಚಳವಾಗಿರುವುದನ್ನು ಕಾಣಬಹುದು. ಉದ್ಯೋಗದ ಚೀಟಿ ಕೂಲಿ ಕಾರ್ಮಿಕರಿಗೆ ಒಂದು ಆಯುಧವಿದ್ದಂತೆ 2007–08 ರಿಂದ 2008–09ಕ್ಕೆ ಶೇಕಡ 27.71ರಷ್ಟು ಹೆಚ್ಚಾಯಿತು. ಪ್ರಗತಿಯಲ್ಲಿ ಹಿಂದುಳಿದಿರುವುದು ಅಧ್ಯಯನ ಗುರುತಿಸಿದೆ. ಯೋಜನೆಯ ಸಿದ್ಧಾಂತಕ್ಕೆ ಪೂರಕವಾಗಿ ಅನುಷ್ಠಾನಗೊಳಿಸದಿರುವುದು ಕಂಡು ಬಂದಿದೆ. ಬೇಡಿಕೆಗೆ ತಕ್ಕಂತೆ ಉದ್ಯೋಗ ನೀಡದಿರುವುದು ಕಂಡು ಬಂದಿದೆ. ಆಡಳಿತಾತ್ಮಕ ವ್ಯವಸ್ಥೆ ನಿರೀಕ್ಷೆಗೆ ತಕ್ಕಂತೆ ಉದ್ಯೋಗ ಸೃಷ್ಟಿಸಲಿಲ್ಲ, ಜಾಬ್ ಕಾರ್ಡ ಕೊಟ್ಟರು ಉದ್ಯೋಗ ನೀಡದಿರುವುದು ಒಂದು ವಿಪರ್ಯಾಸವೆಂದು ವಿಶ್ಲೇಷಿಸಿದ್ದಾರೆ. ನಿರುದ್ಯೋಗ ಭತ್ಯೆ ನೀಡದಿರುವುದು ಯೋಜನೆಯ ಸಿದ್ಧಾಂತಕ್ಕೆ ತಕ್ಕಂತೆ ಅನುಷ್ಠಾನವಾಗದಿರುವುದನ್ನು ತಿಳಿಯುತ್ತದೆ. 2008–09, 2009–10ರಲ್ಲಿ ಉದ್ಯೋಗ ಚೀಟಿ ಕೇವಲ ಶೇಕಡ 20ರಷ್ಟು ವಿತರಣೆ ಮಾಡಿದರೂ ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ಕೇವಲ ಶೇಕಡ 17ರಷ್ಟು ಮಾತ್ರ ವಿತರಿಸಿರುವುದನ್ನು ಅಧ್ಯಯನ ಗುರುತಿಸಿದೆ.

ರವಿಕುಮಾರ್.ಸಿ.ಹೆಚ್.ಖ. ರಾಕೇಶ್ ಕುಮಾರ್ ಮತ್ತು ಎಸ್.ಸೀತಾಲಕ್ಷ್ಮಿ,(2008), National Rural Employment Guarantee Act in Andrapradesh. ಅವರು ಈ ಅಧ್ಯಯನವನ್ನು 2006ರಲ್ಲಿ 13 ಜಿಲ್ಲೆಗಳನ್ನು 2007ರಲ್ಲಿ 19 ಜಿಲ್ಲೆಗಳನ್ನು ಮತ್ತು 2008ರಲ್ಲಿ 22 ಜಿಲ್ಲೆಗಳಲ್ಲಿ ಅಧ್ಯಯನ ನಡೆಸಿರುತ್ತಾರೆ. ಈ ಲೇಖನವನ್ನು ವಿಶ್ಲೇಷಿಸಿದರೆ ರಾಜ್ಯದಲ್ಲಿ 1098 ಮಂಡಲ್‌ಗಳಲ್ಲಿ ಅನುಷ್ಠಾನ ಮಾಡಲಾಗಿತ್ತು. ಶೇಕಡ 52.34 ರಷ್ಟು ಕೂಲಿಕಾರರು ನೋಂದಣೆ ಮಾಡಲಾಗಿರುವುದು. ಅದಕ್ಕೆ ಪರ್ಯಾಯವಾಗಿ ಶೇಕಡ 37ರಷ್ಟು ಮಾತ್ರ ಉದ್ಯೋಗ ಚೀಟಿಯನ್ನು ವಿತರಿಸಲಾಗುರವುದನ್ನು ಕಾಣಬಹುದಾಗಿದೆ. ಕಾಯಿದೆ ಪ್ರಕಾರ ಕುಟುಂಬ ಒಂದಕ್ಕೆ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡುವ ಹಕ್ಕು ಇದ್ದರೂ, 2008ರಲ್ಲಿ ಕೇವಲ 42 ದಿನಗಳ ಉದ್ಯೋಗ ಒದಗಿಸಲಾಗಿರುವುದು. ಶೇಕಡ50 ಕ್ಕೂ ಹೆಚ್ಚು ಕೂಲಿಕಾರರಿಗೆ ಬೇಡಿಕೆ ಇಲ್ಲದಿರುವುದನ್ನು, ಅದಕ್ಕೆ ಬಹುಮುಖ್ಯವಾದ ಕಾರಣ ಕೂಲಿಕಾರ್ಮಿಕರಿಗೆ ಮಾಹಿತಿ ಇಲ್ಲದಿರುವುದನ್ನು ಕಾಣಬಹುದು. ಕಾಯಿದೆ ಅಡಿ ಸಮುದಾಯಕ್ಕೆ ತಿಳುವಳಿಕೆ ಮಾಹಿತಿ ಮತ್ತು ತರಬೇತಿ ನೀಡುವ ಅವಕಾಶವಿದ್ದರೂ ಯಾವುದೇ ಪ್ರಯೋಜನ ವಾಗದಿರುವುದು ತಿಳಿಯುತ್ತದೆ. ಏಕೆ ಜನಸಾಮಾನ್ಯರಿಗೆ ಮಾಹಿತಿ ನೀಡಿಲ್ಲ, ಕೆಲಸದ ನಂತರ 15

ದಿನದೊಳಗಾಗಿ ಕೂಲಿ ನೀಡಬೇಕಾಗಿದ್ದರೂ 60 ದಿನಗಳಾದರೂ ಕೂಲಿ ನೀಡದಿರುವುದು ಕಂಡುಬಂದಿದೆ. ಶೇಕಡ 35 ರಷ್ಟು ಕುಟುಂಬಗಳಿಗೆ ಕೇವಲ 30 ದಿನಗಳ ಕೂಲಿ ಮಾತ್ರ ಪಾವತಿಸಿರುವುದು 2007–08ರಲ್ಲಿ ಕಂಡು ಬಂದಿದೆ, ಉದ್ಯೋಗ ಪಡೆದ ಕೂಲಿಕಾರರಲ್ಲಿ ಮಹಿಳೆಯರು ಶೇಕಡ 54ರಷ್ಟು ಪುರುಷರು ಶೇಕಡ 46ರಷ್ಟು ಕೂಲಿ ವಿಳಂಬವಾಗಿರುವುದನ್ನು ಅಧ್ಯಯನ ಗುರುತಿಸಿದೆ.

ಜ್ಯಾನ್ ದ್ರೇಜೆ ಮತ್ತು ಮಹಿರ್ ಷಾ Will Employment Guarantee Deliver?: ಉದ್ಯೋಗ ಖಾತರಿಯಿಂದ ಸಾರ್ವಜನಿಕ ಆಸ್ತಿ ನಿರ್ಮಾಣ ಮಾಡುವುದು, ಜಲನಯನ ಅಭಿವೃದ್ಧಿ, ಕೆರೆಹೂಳು ತೆಗೆಯುವುದು, ಭೂ ಅಭಿವೃದ್ಧಿ ಕಾಮಗಾರಿಗಳ ಮೂಲಕ ಹೊಸ ಅಸ್ತಿತ್ವ ಕಾಪಾಡಲು ಮಾಡುತ್ತಿರುವ ಒಂದು ಪ್ರಯೋಗವಾಗಿರುವುದು. ದೇಶದಲ್ಲಿ ಬಂಡವಾಳಶಾಹಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ದಿನದಿಂದ ದಿನಕ್ಕೆ ಬಾರಿ ಪ್ರಮಾಣದಲ್ಲಿ ನಿರುದ್ಯೋಗದ ಸಮಸ್ಯೆ ಎದುರಿಸುತ್ತಿರುವುದು ಇದಕ್ಕೆ ಸವಾಲಾಗಿ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಉದ್ಯೋಗ ಖಾತರಿ ಕಾಯಿದೆಯಿಂದಲೇ ಮಾತ್ರ ಸಾಧ್ಯ. ಇದು ಮಧ್ಯಮ ವರ್ಗದವರಿಗೆ ಅನುಕೂಲ ಮತ್ತು ಅವರ ಬಡತನದ ತೀವ್ರತೆಯನ್ನು ತಗ್ಗಿಸುವಂತಹ ಪ್ರಯೋಜಕಾರಿ ಕಾರ್ಯಕ್ರಮವಾಗುತ್ತದೆ ಎಂದು ತಮ್ಮ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಈ ವರದಿಯ 2007–08ರ ರಾಜ್ಯಗಳಲ್ಲಿ ಕೈಗೊಂಡ ಸಮೀಕ್ಷೆಗಳನ್ನು ವಿಶ್ಲೇಷಿಸಿದರೆ ಶೇಕಡ 98ರಷ್ಟು ಕೂಲಿಗಾರರಲ್ಲಿ 100 ದಿನಗಳ ಉದ್ಯೋಗ ಸಿಕ್ಕಿರುವುದು ಕೇವಲ ಶೇಕಡ11 ರಷ್ಟು ಮಾತ್ರ ಕಂಡು ಬಂದಿದೆ. ಕಳೆದ 12 ತಿಂಗಳ ಹಿಂದೆ ಮಾಡಿದ ಸಮೀಕ್ಷೆಯನ್ನು ಅವಲೋಕನ ಮಾಡಿದರೆ ರಾಜ್ಯಗಳಲ್ಲಿ ಶೇಕಡ 100 ದಿನಗಳ ಉದ್ಯೋಗ ಸಿಕ್ಕಿರುವುದು ಮಿಜೋರಾಮ್ ಶೇಕಡ 0.00 ರಷ್ಟು, ಬಿಹಾರ ಶೇಕಡ 2ರಷ್ಟು, ಉತ್ತರ ಪ್ರದೇಶ ಶೇಕಡ 10.5ರಷ್ಟು ಜಾರ್ಖಂಡ್ ಶೇಕಡ 3ರಷ್ಟು, ಮಧ್ಯ ಪ್ರದೇಶ ಶೇಕಡ 21ರಷ್ಟು ಮತ್ತು ಕೇರಳ ಶೇಕಡ 32ರಷ್ಟು ಮಾತ್ರ ಉದ್ಯೋಗ ದೊರಕಿರುವುದನ್ನು ಪರಾಮರ್ಶಿಸಿದರೆ ಅನುಷ್ಠಾನದಲ್ಲಿರುವ ಹಿಂದಿನ ಕಾರಣಗಳೇನು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಭ್ರಷ್ಟಾಚಾರವು ಸರ್ವವ್ಯಾಪಿಯಾಗಿರುವುದು ಪಂಚಾಯತಿ ಸೇವಕನಿಗೆ ಶೇಕಡ4 ರಷ್ಟು, ಬಿಡಿ.ಒ ಶೇಕಡ 5ರಷ್ಟು ಜೂನಿಯರ್ ಇಂಜಿನಿಯರ್, ಶೇಕಡ 5ರಷ್ಟು ಲಂಚ ನೀಡುವುದು. ಉನ್ನತ ಅಧಿಕಾರಿಗಳಿಗೆ ಬೇರೆ ತರಹದ ಶೇಕಡ ಲಂಚ ನೀಡುವುದು ಅಧ್ಯಯನದಿಂದ ತಿಳಿಯುತ್ತದೆ. ಅನುದಾನದ ವಿಷಯಕ್ಕೆ ಬಂದಾಗ ಒಟ್ಟು ಅನುದಾನದಲ್ಲಿ ಶೇಕಡ 75ರಷ್ಟು ಬಳಕೆಯಾಗಿರುವುದು 2008–09ರಲ್ಲಿ 30,000 ಸಾವಿರ ಕೋಟಿ ಅನುದಾನದಲ್ಲಿ ಕೇವಲ ಶೇಕಡ 73ರಷ್ಟು ಖರ್ಚು ಮಾಡಿರುವುದು. 2006ರಲ್ಲಿ 8823 ಕೊಟಿ ಹಣ ಖರ್ಚಾಗಿರುವುದನ್ನು ಕೇಂದ್ರ ಸಚಿವಾಲಯ ತಿಳಿಸಿರುವುದು. ಅದರಲ್ಲಿ 5842 ಕೋಟಿ ಹಣ ಕೂಲಿಗಾಗಿ ಖರ್ಚಾಗಿದ್ದರೆ ಈ ಪ್ರಮಾಣದ ಹಣ

ಕೂಲಿಕಾರರಿಗೆ ತಲುಪಿದೆಯೆ? ಎಂಬ ಪ್ರಶ್ನೆ ಚರ್ಚೆಗೆ ಗ್ರಾಸವಾಗುವುದು. ಎನ್.ಎಸ್.ಎಸ್.ಒ ಸಂಶೋಧನೆಯ ಪ್ರಕಾರ ಕೇವಲ ಅದರಲ್ಲಿ ಅರ್ಧದಷ್ಟು ಮಾತ್ರ ಕೂಲಿಕಾರರಿಗೆ ತಲುಪಿದೆ ಎಂದಿದ್ದಾರೆ. ಅದರಲ್ಲಿ ಅರ್ಹ ಫಲಾನುಭವಿಗಳಿಗೆ ತಲುಪಿರುವುದು ಕಡಿಮೆ ಎನ್.ಎಸ್.ಎಸ್.ಒ ವರದಿಯಲ್ಲಿ 1270 ಕೋಟಿ ಅರ್ಹ ಫಲಾನುಭವಿಗಳಿಗೆ ಕೂಲಿ ಸಿಕ್ಕಿರುವುದು, ಸರ್ಕಾರ ಹೇಳುವುದು ಬಡವರಿಗಾಗಿ ಖರ್ಚು ಮಾಡುತ್ತಿದೆ ಎಂದು ಹಿಂದಿ ಭಾಷೆಯಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಎಂದು ವ್ಯಂಗ್ಯವಾಗಿ ಹೇಳುವುದನ್ನು ನೋಡಬಹುದು ಅಂದರೆ "ಸತ್ತು ಹೋದ ಕಾರ್ಯಕ್ರಮ" ಎಂದು ಹೇಳಿದ್ದಾರೆ.

ರಂಜಿತ್ ಸಿಂಗ್ ಗುಮ್ಮಾನ್ ಮತ್ತು ಪರಮಿಂದ್ರ ಕೌರ್ ದ್ಯ(2008), NREGA and Evaluative study of Hoshiarpur District" Conference on Emlpoyment Opportunities and Public employment policy in Globalising India, Organized by CDS ಈ ಲೇಖನವನ್ನು ಪರಾಮರ್ಶಿಸಿ ನೋಡಿದರೆ ಸಿ.ಎ.ಜಿ ವರದಿ ಪ್ರಕಾರ ಕೇವಲ 3.5ರಷ್ಟು ಕುಟುಂಬಗಳಿಗೆ ಮಾತ್ರ 100 ದಿನಗಳ ಉದ್ಯೋಗ ನೀಡಲಾಗಿದೆ ಇ.ಪಿ.ಡಬ್ಲ್ಯೂಗಳ ಲೇಖನಗಳ ಸಾರಾಂಶಗಳನ್ನು ಅವಲೋಕಿಸಿದರೆ ಶೇಕಡ 55ರಷ್ಟು ಮಾತ್ರ ಕುಟುಂಬಗಳು ಪಡೆದಿರುತ್ತವೆ. ಸಿ.ಎ.ಜಿ ವರದಿ ಪ್ರಕಾರ 513 ಗ್ರಾಮ ಪಂಚಾಯತಿಗಳನ್ನು ಸಮೀಕ್ಷೆ ನಡೆಸಿ 74 ಗ್ರಾಮಗಳಲ್ಲಿ ಉದ್ಯೋಗದ ಚೀಟಿ ವಿತರಣೆ ಮಾಡದೆ ಇರುವುದು ಕಂಡು ಬಂದಿರುವುದು, ಅಂದರೆ ಕೇವಲ ಶೇಕಡ 85.58ರಷ್ಟು ಮಾತ್ರ ಉದ್ಯೋಗ ಚೀಟಿ ಹಂಚಿಕೆಯಾಗಿರುವುದು ಕಂಡು ಬಂದಿರುತ್ತದೆ. ಹೋಶೀರ್‌ಪುರ್ ಜಿಲ್ಲೆಯಲ್ಲಿ 2.35 ಲಕ್ಷ ಕುಟುಂಬಗಳಿವೆ ಶೇಕಡ 71ರಷ್ಟು ಉದ್ಯೋಗದ ಚೀಟಿ ವಿತರಣೆಯಾಗಿರುವುದು ಅದರಲ್ಲಿ ಶೇಕಡ 23ರಷ್ಟು ಉಳುಮೆ ಮಾಡುವವರು, 2006ರಲ್ಲಿ ಶೇಕಡ 73.6 ಮತ್ತು 2007ರಲ್ಲಿ ಶೇಕಡ 26.4ರಷ್ಟು ಉದ್ಯೋಗವನ್ನು ಒದಗಿಸಲಾಗಿತ್ತು. 2 ವರ್ಷದಲ್ಲಿ ಸರಾಸರಿ ಶೇಕಡ49.45 ರಷ್ಟು ಜನರಿಗೆ ಮಾತ್ರ ಉದ್ಯೋಗವನ್ನು ಒದಗಿಸಲಾಗಿದೆ. ಇದರ ಹಿಂದಿನ ಕಾರಣಗಳನ್ನು ಮತ್ತು ಲೋಪದೋಷಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಸಿ.ಎ.ಜಿ ಮತ್ತು ಭಾರತ ಸರ್ಕಾರ(208), Performance adit by C & GOI. ಈ ಅಧ್ಯಯನದ ವರದಿಯನ್ನು ಪರಾಮರ್ಶಿಸಿದರೆ 2007ರಲ್ಲಿ ಪ್ರತಿ ರಾಜ್ಯದಲ್ಲೂ 2 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ 2 ಬ್ಲಾಕ್ ಮತ್ತೆ ಅದರಲ್ಲಿ 4 ಗ್ರಾಮ ಪಂಚಾಯತಿಗಳನ್ನು ಪ್ರತಿ ಗ್ರಾಮ ಪಂಚಾಯತಿಯಲ್ಲಿನ ಪ್ರತಿ ನೋಂದಣಿಯಾದ ಕುಟುಂಬಗಳನ್ನು ಅಧ್ಯಯನದ ದೃಷ್ಟಿಯಿಂದ ಆಯ್ಕೆ ಮಾಡಿಕೊಂಡಿರುವುದು. ಮಾರುವೇಶದಲ್ಲಿ ಗುತ್ತಿಗೆದಾರರು ಮತ್ತು ಇಂಜಿನಿಯರ್ ಕಲಹಂದಿ ಜಿಲ್ಲೆಯ ಭವಾನಿಪಟ್ನ ಬ್ಲಾಕ್ನಲ್ಲಿ 149 ಕಾಮಗಾರಿಗಳನ್ನು ಪರಿಶೀಲಿಸಿದರೆ ಆ ಕಾಮಗಾರಿಗಳ ಇ-ಟೆಂಡರ್ ಮಾಡಿಲ್ಲದಿರುವುದು, ಕೊಟೇಷನ್ ಪಡೆದಿಲ್ಲದಿರುವುದು, ಕೂಲಿಯ ವಿವರ ಮತ್ತು ಮಾನವ

ದಿನಗಳ ವಿವರವನ್ನು, ಸಾಮಾಜಿಕ ಲೆಕ್ಕ ಪರಿಶೋಧನೆಯಿಂದ ಗೊತ್ತಾಗುವುದು. ಕಾಮಗಾರಿಗಳನ್ನು ಅಳೆದಾಗ ಅದರಲ್ಲೂ 15 ಲಕ್ಷದ ರಸ್ತೆ ಕಾಮಗಾರಿಗಳಲ್ಲಿ ಕಳಪೆ ಗುಣ ಮಟ್ಟದ ಕಾಮಗಾರಿಗಳು ನಿರ್ಮಾಣವಾಗಿರುವುದು, ಕಲಹಂದಿ ಜಿಲ್ಲೆಯಲ್ಲಿ 46 ಕಾಮಗಾರಿಗಳು ಪೂರ್ಣ ವಿಳಂಬವಾಗಿರುವುದು ಹಾಗೂ ಕೂಲಿದಾರರಿಗೆ 90 ದಿನಕ್ಕೂ ಹೆಚ್ಚು ಕೂಲಿ ಕೊಡುವಲ್ಲಿ ವಿಳಂಬವಾಗಿರುವುದು. 2006–07 ಕಾಮಗ್ರಾರಿಗಳಿಗೆ ತಾಂತ್ರಿಕ ಅನುಮೋದನೆ ಪಡೆದಿಲ್ಲದಿರುವುದನ್ನು 13 ಪ್ರಕರಣಗಳಲ್ಲಿ ಕಾಣಬಹುದು. ಒಟ್ಟಾರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಯೋಜನೆಯನ್ನು ಕಾಯಿದೆಯ ಮಾರ್ಗದರ್ಶಿಯನ್ನು ಬಿಟ್ಟು ಅನುಷ್ಠಾನ ಮಾಡಿರುವುದನ್ನು ಅಧ್ಯಯನ ಗುರುತಿಸಿದೆ. ಕಲಹಂದಿ ಮತ್ತು ಬೊಲಂಗಾರ್ ಜಿಲ್ಲೆಗಳಲ್ಲಿ 21 ಗ್ರಾಮಗಳಲ್ಲಿ 142 ಫಲಾನುಭವಿಗಳನ್ನು ಸಂದರ್ಶನ ಮಾಡಿ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆ ಮಾಡಿ ನೋಡಿದಾಗ 117 ಪ್ರಕರಣಗಳಲ್ಲಿ ವಿವಾದಗಳಾಗಿರುವುದು 5.76 ಲಕ್ಷಗಲಲ್ಲಿ 3.41 ಲಕ್ಷ ಮಾತ್ರ ವೇತನ ನೀಡಿ 13 ಮಸ್ಟರ್‌ರೋಲ್ ಗಳಲ್ಲಿ ಉಳಿದ ಕೂಲಿ ರೂಪದ ಹಣವನ್ನು ಮೋಸ ಮಾಡಿರುವುದು.

ಸುಮಂತಶರ್ಮ, ಪ್ರೊ.ವಿಜಯ್, ಕೆ.ಆರ್.ಬೊದ್ದು "Critical evaluation of NREGA": ಈ ಲೇಖನವನ್ನು ವಿಶ್ಲೇಷಿಸಿದರೆ ರಾ.ಗ್ರಾ.ಉ.ಖಾ.ಯೋಜನೆಯ ಅಧ್ಯಯನಕ್ಕಾಗಿ ಒರಿಸ್ಸಾ ರಾಜ್ಯದ ನೋಪಾದ ಜಿಲ್ಲೆ ಮತ್ತು ಮಧ್ಯಪ್ರದೇಶದ ಸಿಧಿ ಜಿಲ್ಲೆಗಳಲ್ಲಿ ಅಧ್ಯಯನವನ್ನು ಮಾಡಿದೆ. ಅಧಿಕಾರದ ವಿಕೇಂದ್ರೀಕರಣದ ಭಾಗವಾದ ಸ್ಥಳೀಯ ಸರ್ಕಾರದ ಮೂಲಕ ಅಭಿವೃದ್ಧಿ ಸಾಧ್ಯ ಎನ್ನುವುದರ ಅರ್ಥದಲ್ಲಿ ನೋಪಾದ ಜಿಲ್ಲೆಯಲ್ಲಿ 240 ಪ್ರತಿವರ್ತಿಗಳನ್ನು ಅಧ್ಯಯನ ಮಾಡಿ ಮಾಹಿತಿ ಸಂಗ್ರಹಿಸಿ ನೋಡಿದಾಗ ಶೇಕಡ 84.58ರಷ್ಟು ಪ್ರತಿವರ್ತಿಗಳಿಗೆ ಖಾಯಿದೆಯ ಬಗ್ಗೆ ತಿಳಿದಿರುವುದು ಕಂಡು ಬಂದಿದೆ. ಬಾಗವಹಿಸುವಿಕೆ ಕೊರತೆ ಎದ್ದು ಕಾಣುತ್ತಿರುವುದು, ಗ್ರಾಮಸಭೆಗಳಲ್ಲಿ ಕೆಲವು ಭಾಗದಲ್ಲಿ 7–8 ಜನ ಭಾಗವಹಿಸಿದರೆ ಇನ್ನು ಕೆಲವು ಭಾಗದಲ್ಲಿ 3–4 ಜನ ಭಾಗವಹಿಸಿರುವುದು ಕಂಡು ಬಂದಿರುವುದು. ಬ್ಯಾಂಕ್ ಖಾತೆ ತೆರೆಯಲಿಕ್ಕೆ ಗ್ರಾಮಪಂಚಾಯತಿ ಸದಸ್ಯರು ಮತ್ತು ನೌಕರರು ಸರಿಯಾಗಿ ಸಹಕರಿಸದಿರುವುದು ಕಂಡುಬಂದಿದೆ. 100 ದಿನಗಳ ಉದ್ಯೋಗ ನೀಡುವುದರ ಬದಲಿಗೆ ಕೇವಲ ಶೇಕಡ20 ಕ್ಕಿಂತ ಕಡಿಮೆ ದಿನಗಳ ಉದ್ಯೋಗ ನೀಡಿರುವುದನ್ನು ವಿಶ್ಲೇಷಿಸಿದರೆ ರಾ.ಗ್ರಾ.ಉ.ಖಾ.ಯೋ ಸಮಗ್ರವಾಗಿ ತಿಳುವಳಿಕೆ ಆಗುವುದರ ಬದಲಿಗೆ ಎಷ್ಟರ ಮಟ್ಟಿಗೆ ಮತ್ತು ಯಾವ ಪ್ರಮಾಣದಲ್ಲಿ ಜನರಿಗೆ ತಿಳುವಳಿಕೆಯಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಸುಷ್ಮ ಮಹಂತಿ. Mahtma Gandhi National Rural Employment Guarantee Act(MNREGA) and Tribal livelihoods: A case study in Sundargarh District of Odisha. ಈ ಲೇಖನವನ್ನು ಪರಾಮರ್ಶಿಸಿದರೆ ರಾ.ಗ್ರಾ.ಉ.ಖಾ.ಯೋಜನೆ ಉದ್ಯೋಗ

ಖಾತರಿಯ ಇತಿಹಾಸವು ಸಹ ಗ್ರಾಮೀಣ ಯೋಜನೆಗಳ ಬಹುಭಾಗ ಉದ್ಯೋಗಗಳನ್ನೇ ಅವಲಂಬಿಸಿರುವುದನ್ನು ಕಾಣಬಹುದು. 2006–07ರಲ್ಲಿ 11,300 ಕೋಟಿ ಬಿಡುಗಡೆ. ಮಾಡಿರುವುದು. ನಂತರ 2010–11ರಲ್ಲಿ ರೂ 40,000 ಬಿಡುಗಡೆ ಮಾಡಿರುವುದು ಕಂಡುಬಂದಿದೆ. ಆದರೆ ಯಾವ ರಾಜ್ಯ ಮತ್ತು ಜಿಲ್ಲೆಗಳಲ್ಲಿ ಉದ್ಯೋಗದ ಬೇಡಿಕೆ ಮತ್ತು ನೀಡಿಕೆ ಅಂಶಗಳನ್ನು ಮತ್ತು ಬಿಡುಗಡೆಯಾದ ಅನುದಾನದಲ್ಲಿ ಖರ್ಚಿನ ಪ್ರಮಾಣ ಎಷ್ಟು ಎಂಬುದರ ಬಗ್ಗೆ ಎಲ್ಲಿಯೂ ಪ್ರಸ್ತಾಪಿಸಿಲ್ಲದಿರುವುದನ್ನು ಕಾಣಬಹುದು. ಪ್ರಸ್ತುತ ಅಧ್ಯಯನದಲ್ಲಿ ಈ ಅಂಶಗಳ ಬಗ್ಗೆ ಅರ್ಥಮಾಡಿಕೊಳ್ಳುವುದು ಅವಶ್ಯಕ ವಾಗಿರುವುದು.

ಡೇ ಮತ್ತು ಬೇಡಿ(2010), **"The National Rural Employment Guarantee Scheme in Birbhum."** ಈ ಲೇಖನವನ್ನು ವಿಶ್ಲೇಷಿಸಿದರೆ ಪಶ್ಚಿಮಬಂಗಾಳದ ಬಿರುಭಾಮ ಜಿಲ್ಲೆಯಲ್ಲಿ 2006 ರಿಂದ 2009ರವರೆಗೆ ಅನುಷ್ಠಾನಗೊಳಿಸಿದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ನೋಡಿದರೆ "ಕಟ್ಟ ಕಡೆಯ ಉದ್ಯೋಗ" ದಾತನಿಗೆ ಉದ್ಯೋಗ ಒದಗಿಸುವುದು ಈ ಯೋಜನೆಯ ಆಶಯವಾಗಿರುವುದು. ಆದರೆ ಈ ಜಿಲ್ಲೆಯಲ್ಲಿ ಬೇಡಿಕೆ ಇರುವ ಉದ್ಯೋಗದಾತನಿಗೆ ಉದ್ಯೋಗ ಒದಗಿಸುವಲ್ಲಿ ವೈಫಲ್ಯ ಕಂಡಿರುವುದು. ಕಾರಣ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮಾಹಿತಿಯ ಕೊರತೆ ಜನರಲ್ಲಿ ಇರುವುದು ಆಧ್ಯಯನದಲ್ಲಿ ಕಂಡುಬಂದಿರುವುದು. ಉದ್ಯೋಗದ ಬೇಡಿಕೆ ಇರುವಂತವರಿಗೆ ಅರ್ಜಿ ಸಲ್ಲಿಸಿದ ಮೇಲೆ ಉದ್ಯೋಗ ನೀಡಿರುವುದು, ಕೆಲಸ ಮಾಡಿಸಿಕೊಂಡ ಮೇಲೆ 15 ದಿನದೊಳಗಾಗಿ ಕೂಲಿ ನೀಡುವುದು ಕಾನೂನಾತ್ಮಕ ಹಕ್ಕಾಗಿರುವುದು. ಆದರೆ ಇಲ್ಲಿ ಒಂದು ವರ್ಷವಾದರೂ ಕೂಲಿ ನೀಡದಿರುವುದು ಕಂಡು ಬಂದಿದೆ. ಅಧ್ಯಯನದಲ್ಲಿ ಅವಲೋಕಿಸಿರುವ ಮಾಹಿತಿ ಎಂದರೆ ಕೆಲಸ ಮುಗಿದ ಮೇಲೆ ಎಂ.ಐ.ಎಸ್. ಮಾಡುವುದು ನಿಯಮಾವಳಿ ಇದು ವಿಳಂಬವಾಗಿರುವುದರಿಂದ ವೇತನ ನೀಡುವಲ್ಲಿ ವಿಳಂಬವಾಗಿರುವುದು ಗ್ರಾಮಪಂಚಾಯತಿಗೆ ಒಬ್ಬ ಇಂಜಿನಿಯರ್ ಇದ್ದು ಯೋಜನೆ ರೂಪಿಸುವುದು ಮತ್ತು ಕೆಲಸದ ನಂತರ ಕೆಲಸವನ್ನು ಅಳೆಯುವುದು, ಆನ್ ಲೈನ್ ಮೂಲಕವಾಗಿ ಎಂ.ಐ.ಎಸ್. ಮಾಡುವುದು ಈ ಅಂಶಗಳನ್ನು ಎಲ್ಲಿಯೂ ಪ್ರಸ್ತಾಪಿಸದೆ ಇವುದನ್ನು ಈ ಅಧ್ಯಯನ ತಿಳಿಸುತ್ತದೆ.

ಮತ್ತೂರ್, (2009), "Silent but successful initiative". ಈ ಲೇಖನವನ್ನು ವಿಶ್ಲೇಶಿಸಿದರೆ ಆಂಧ್ರಪ್ರದೇಶದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನ ಗೊಂಡಿರುವ ಕೆಲವು ಗ್ರಾಮಗಳನ್ನು ಆಯ್ಕೆ ಮಾಡಿ ಪರಿಶೀಲನೆ ಮಾಡಿದಾಗ ಬಹಳ ಜನ ಕೂಲಿ ಕಾರರು ಕೆಲಸ ಮಾಡಿರುವುದಕ್ಕೆ ಕೂಲಿಯೇ ಪಡೆದಿಲ್ಲದಿರುವುದು ಅಧ್ಯಯನದಲ್ಲಿ ತಿಳಿದುಬಂದಿರುವುದು ಅಂದರೆ ಪಾಸ್‌ಬುಕ್ಕು ಮತ್ತು ಜಾಬ್‌ಕಾರ್ಡಗಳಿಗೂ ಹೋಲಿಕೆಯಾಗದಿರುವುದನ್ನು ಕಾಣಬಹುದು.

ಜಾಬ್ ಕಾರ್ಡಗಳ ಒಳಗೆ ಹಣ ಸಂದಾಯವಾಗಿರುವುದು ಎಲ್ಲಿಯೂ ಎಂಟ್ರಿ ಯಾಗದಿರುವುದನ್ನು ಗಮನದಲ್ಲಿಟ್ಟು ಸಂಬಂಧಪಟ್ಟ ಸಿಬ್ಬಂಧಿ ಮತ್ತು ಅಧಿಕಾರಿಗಳನ್ನು ಪರಿಶೀಲನೆಗೆ ಒಳಪಡಿಸಿದಾಗ, ಕೂಲಿ ನೀಡುವಲ್ಲಿ ವಂಚಿಸಿರುವುದನ್ನು ಮತ್ತು ಹಣ ಸಂದಾಯ ಮಾಡದಿರುವುದನ್ನು ಎಲ್ಲರೂ ಒಪ್ಪಿಕೊಂಡು ಮತ್ತೆ 50,000 ರೂಪಾಯಿಗಳನ್ನು ವಾಪಾಸ್ ಕಟ್ಟಿರುವುದನ್ನು ಅಧ್ಯಯನದಲ್ಲಿ ಕಂಡು ಬಂದಿರುತ್ತದೆ. ಈ ಲೋಪದೋಷಗಳಿಗೆ ಸಂಬಂಧಿಸಿದ ಇದರ ಹಿಂದೆ ಇರುವ ಸತ್ಯಾ ಸತ್ಯತೆಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕವಾಗಿರುವುದು. ಯಾವ ಪ್ರದೇಶ ಯಾವ ಪ್ರಮಾಣದಲ್ಲಿ ಲೋಪದೋಷಗಳಾಗಿರುವುದು ಎಲ್ಲಿಯೂ ಪ್ರಸ್ತಾಪಿಸಿಲ್ಲದಿರುವುದನ್ನು ಕಾಣಬಹುದು.

ಜ್ಯಾನ್ ದ್ರೇಜೆ ದೆಹಲಿ ವಿ.ವಿ ತಂಡ(2009), Institute of applied man power research, Delhi. ಈ ಲೇಖನವನ್ನು ಪರಾಮರ್ಶೆ ಮಾಡಿದರೆ ಭಾರತದ ದಕ್ಷಿಣ, ಉತ್ತರ,ಪಶ್ಚಿಮ ಮತ್ತು ಈಶಾನ್ಯ ಪ್ರದೇಶದ ಒಟ್ಟು 20 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗಳಲ್ಲಿ 300 ಫಲಾನುಭವಿಗಳನ್ನು ಅಧ್ಯಯನದ ದೃಷ್ಟಿಯಿಂದ ಸಮೀಕ್ಷೆ ನಡೆಸಿದಾಗ ಉದ್ಯೋಗದ ಚೀಟಿಗೆ ಲಂಚಪಡೆದ ನಿದರ್ಶನಗಳು ಬೆಳಕಿಗೆ ಬಂದಿರುವುದನ್ನು ಕಾಣಬಹುದು. ಆದಿವಾಸಿಗಳ ಗ್ರಾಮದಲ್ಲಿ ನಡೆಸಿದ ಅಧ್ಯಯನವನ್ನು ವಿಶ್ಲೇಷಿಸಿದರೆ ಒರಿಸ್ಸಾದ ಸುಂದರ್‌ಗಾವ್ ಬಿಸ್ರಾ ಬ್ಲಾಕ್‌ನ ಸಂತೋಷ್‌ಪುರ ಗ್ರಾಮಪಂಚಾಯತಿಯನ್ನು ಆಯ್ಕೆ ಮಾಡಿಕೊಂಡು ಪ್ರಾಥಮಿಕ ಸಮೀಕ್ಷೆ ಮಾಡಿ ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಿದಾಗ 2007–08ರಲ್ಲಿ ಕಾಯಿದೆಯ ಅನ್ವಯ 100 ದಿನಗಳ ಉದ್ಯೋಗದ ಬದಲಿಗೆ ಕೇವಲ 8ದಿನಗಳ ಉದ್ಯೋಗ ಮಾತ್ರ ಒದಗಿಸಿರುವುದನ್ನು ಕಾಣಬಹುದಾಗಿದೆ. ಅಧ್ಯಯನದ ಪ್ರಕಾರ ಈ ಅವಧಿಯಲ್ಲಿ ಉಪಯೋಗಕ್ಕಾಗಿ ಬೇಡಿಕೆಯೇ ಬಂದಿರಲಿಲ್ಲ ಎಂದು ಅವರ ವಿಶ್ಲೇಷಣೆಯಾಗಿರುವುದು. ಒರಿಸ್ಸಾದ ಲೀಡಿಂಗ್ ನ್ಯೂಸ್ಸ್‌ನಲ್ಲಿ ಅಧ್ಯಯನದ ಲೇಖನಗಳಲ್ಲಿ ಶೇ 0.68ರಷ್ಟು ಜನರಿಗೆ 100 ದಿಗಳ ಉದ್ಯೋಗ ನೀಡಿದರೆ ಶೇ 99.28ರಷ್ಟು ಜನರಿಗೆ ಕೇವಲ 6 ದಿನಗಳಷ್ಟು ಉದ್ಯೋಗವನ್ನು ಮಾತ್ರ ನೀಡಿರುವುದು,.ನೋಂದಾವಣೆಯಾಗಿದ್ದರೂ ಕೆಲಸದ ಬೇಡಿಕೆಗಳು ಕಂಡು ಬಂದಿಲ್ಲದಿರುವುದು ಕಾಣಬಹುದು. ಇತ್ತೀಚಿನ ದಿನಗಳಲ್ಲಿ ಇದು ಬದಲಾಗಿ ಶೇ 54.7ರಷ್ಟು ಮಾತ್ರ ಉದ್ಯೋಗ ಚೀಟಿ ವಿತರಣೆ ಮಾಡಿರುವುದು ಕಾಣಬಹುದು. ಆದರೂ ಈ ಆದಿವಾಸಿಗಳಿಗೆ ಮಾಹಿತಿ ಕೊರತೆಯಿಂದ ಉದ್ಯೋಗದ ಅವಕಾಶಗಳು ಕೈತಪ್ಪಿರುವುದು ಗುತ್ತಿಗೆದಾರರನ್ನು ಈ ಕಾಯಿದೆ ಅಡಿ ಪ್ರವೇಶವಿಲ್ಲದಿದ್ದರೂ ಇಲ್ಲಿ ಅಕ್ರಮ ಪ್ರವೇಶ ಮಾಡಿರುವುದನ್ನು ಕಾಣಬಹುದು. ಜಾಬ್ ಕಾರ್ಡ್‌ಗೆ ಫೋಟೋ ಅಂಟಿಸುವುದು ಕಡ್ಡಾಯವಿದ್ದರೂ ಫೋಟೋ ಲಗತ್ತಿಸಿಲ್ಲದಿರುವುದು ಕಂಡಿಬಂದಿರುವುದು. ಕೆಲವರಿಗೆ ಬಹಳಷ್ಟು ಮಂದಿಗೆ ಉದ್ಯೋಗದ ಚೀಟಿಗೆ ಬದಲಾಗಿ ನಕಲಿ ಚೀಟಿಯನ್ನು ನೀಡಿರುವುದು ಕಂಡುಬಂದಿರುವುದು. ಮಸ್ಟರ್‌ರೋಲ್‌ನಲ್ಲಿ 50 ಮಾನವ ದಿನಗಳ

ಉದ್ಯೋಗ ತುಂಬಿದ್ದರೆ ಜಾಬ್ ಕಾರ್ಡ್‌ನಲ್ಲಿ 60 ದಿನಗಳ ಉದ್ಯೋಗ ನೀಡಿರುವುದು ವೈಫಲ್ಯದ ಪ್ರಮಾಣ ತಿಳಿಯದಿರುವುದು ಕಂಡುಬಂದಿರುವುದು. ಮಸ್ಟರ್‌ರೋಲ್ ನಲ್ಲಿ 50 ಮಾನವ ದಿನಗಳನ್ನು ತುಂಬಿದರೆ ಜಾಬ್ ಕಾರ್ಡನಲ್ಲಿ 60 ದಿನ ಅಂತ ದಾಖಲಿಸಿದ್ದಾರೆ. ಕೆಲವು ಜಾಬ್ ಕಾರ್ಡ ಖಾಲಿ ಬಿಟ್ಟಿರುವುದನ್ನು ಕಾಣಬಹುದು. ಹೀಗೆ ಕಾಯಿದೆಯ ನಿಯಮಗಳನ್ನು ಎಲ್ಲಿಯೂ ಸರಿಯಾಗಿ ಪಾಲಿಸದಿರುವುದನ್ನು ಕಾಣಬಹುದು. ಒಟ್ಟಾರೆ ಈ ಅಧ್ಯಯನದಲ್ಲಿ ಜನರಿಗೆ ಮಾಹಿತಿ ಇಲ್ಲದಿರುವುದು ಶೇಕಡ 14.70ರಷ್ಟು ಇದ್ದರೆ, ಸಕಾರಾತ್ಮವಾಗಿ ಚರ್ಚಿಸಿದವರ ಸಂಖ್ಯೆ ಶೇಕಡ 17.30ರಷ್ಟು ಮತ್ತು ನಕಾರಾತ್ಮವಾಗಿ ಚರ್ಚಿಸಿದವರ ಸಂಖ್ಯೆ ಶೇಕಡ 68ರಷ್ಟು ಇರುವುದನ್ನು ಕಾಣಬಹುದು ಇದರ ವೈಫಲ್ಯದ ಹಿಂದಿನ ಸತ್ಯಾಂಶಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ರಾಜಕುಮಾರ್ ಸಿವಾನ್ ಮತ್ತು ಸುನಿಲ್ ಕುಮಾರ್ "Implementing NREGS in Hiriyena; A study of Social Audit . ಈ ಲೇಖನವನ್ನು ಪರಾಮರ್ಶೆ ಮಾಡಿದರೆ ಹಿಂದಿನ ಬಹುತೇಕ ಯೋಜನೆಗಳು ಅನುದಾನದ ಕೊರತೆಯಿಂದ, ಸಮುದಾಯದಲ್ಲಿ ವ್ಯಾಪಕ ತಿಳುವಳಿಕೆಯ ಕೊರತೆಯಿಂದಲೂ, ಅನುಷ್ಠಾನಾಧಿಕಾರಿಗಳ ಸಮನ್ವಯತೆಯ ಕೊರತೆಯಿಂದಲೂ ಅಧ್ಯಯನಗಳ ಕೊರತೆಯಿಂದಲೂ ವೈಫಲ್ಯತೆಯನ್ನು ಗುರ್ತಿಸಿರುವುದು ಕಂಡುಬಂದಿರುವುದು. ಸಾಮಾಜಿಕ ಲೆಕ್ಕ ಪರಿಶೋಧನೆ ಮಾಡಲಾಗಿ ಕಾಯಿದೆಯ ಅನ್ವಯ ಪ್ರತಿ 6 ತಿಂಗಳೊಳಿಗೊಮ್ಮೆ ಗ್ರಾಮಸಭೆಗಳನ್ನು ಮಾಡುವ ನಿಯಮವಿದ್ದರೂ ಒಂದು ವರ್ಷ 5 ತಿಂಗಳಾದರೂ ಗ್ರಾಮಸಭೆಗಳಾಗದೇ ಇರುವುದು ಸಭೆಗಳು ಪ್ರತಿ ತಿಂಗಳು ಮಾಡುವ ನಿಯಮವಿದ್ದರೂ ಅರ್ಧದಷ್ಟು ಸಭೆಗಳು ನಡೆದಿಲ್ಲದಿರುವುದನ್ನು ಕಾಣಬಹುದು. ಸಭೆಗಳಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ಅಧಿಕಾರಿಗಳು ಗೈರು ಹಾಜರಾಗಿರುವುದನ್ನು ಕಾಣಬಹುದು. ಏಪ್ರಲ್ 2007ರಲ್ಲಿ ನಡೆದ ಸಭೆ ನಂತರ ಸೆಪ್ಟಂಬರ್ 2008ರಲ್ಲಿ ನಡೆದಿರುವುದನ್ನು ನೋಡಬಹುದು ಮತ್ತು ಅನುದಾನ ಬಿಡುಗಡೆ ಮಾಡುವಲ್ಲಿ ತಾರತಮ್ಯವೆಸಗಿರುವುದು. ಬಾರಖಾನ್ ಮತ್ತು ರಸಲುಪುರ ಗ್ರಾಮಗಳಿಗೆ ಕಡಿಮೆ ಅನುದಾನ ಬಿಡುಗಡೆಮಾಡಿರುವುದು, 100 ದಿನಗಳ ಉದ್ಯೋಗ ನೀಡುವ ನಿಯಮಗಳು ಇದ್ದರೂ ನೀಡದಿರು ವುದನ್ನು ಕಾಣಬಹುದು. 15 ದಿನದೊಳಗೆ ಕೂಲಿ ನೀಡುವ ನಿಯಮವಿದ್ದರೂ ಕೂಲಿ ನೀಡುವಲ್ಲಿ ವಿಳಂಬವಾಗಿರುವುದನ್ನು ಕಾಣಬಹುದು. ನಿರ್ದಿಷ್ಟವಾದ ಅಧ್ಯಯದ ಪ್ರದೇಶವಾಗಲಿ ಮಾನದ ದಿನಗಳನ್ನಾಗಲಿ ನೀಡುವ ಕೂಲಿಯ ಪ್ರಮಾಣವನ್ನಾಗಾಲಿ ನಿರುದ್ಯೋಗ ಭತ್ಯೆವನ್ನಾಗಲಿ ಇಲ್ಲಿಯೂ ಪ್ರಸ್ತಾಪಿಸಿಲ್ಲದಿರುವುದನ್ನು ಕಾಣಬಹುದು. ಈ ತರಹ ಲೋಪದೋಷಗಳ ಹಿನ್ನೆಯಲ್ಲಿ ವಿಶ್ಲೇಷಿಸಿದರೆ ಇದರ ಹಿಂದೆ ಇರುವ ವಾಸ್ತವಾಂಶಗಳನ್ನು ಅರ್ಥಮಾಡಿಕೊಳ್ಳುವುದು.

ಅರುಣ್ ರಾಯ್ ಮತ್ತು ನಿಖಿಲ್‌ಡೆ, (2012), "Much more then a survival scheme" Hindu paper. ಈ ಲೇಖನವನ್ನು ವಿಶ್ಲೇಷಿಸಿದರೆ 2006ರಿಂದ 2012ರವರೆಗೆ ನಡೆದ

ಸಮೀಕ್ಷೆ ಮತ್ತು ಅಧ್ಯಯನದಲ್ಲಿರುವುದನ್ನು ಗಮನಿಸಿದರೆ ಸಾಮಾಜಿಕ ವಲಯದಲ್ಲಿ ಈ ದೇಶ ಹೆಚ್ಚು ಕಾಲ ಬಡತನದಲ್ಲಿ ನಲುಗಿರುವುದು ಸತ್ಯ. ರಾಷ್ಟ್ರೀಯ ಉದ್ಯೋಗ ಖಾತರಿಯಂತಹ ಯೋಜನೆ ಹೆಚ್ಚು ಉದ್ಯೋಗ ಸೃಷ್ಟಿಸಿರುವುದು ಜಾಗತೀಕ ಮಟ್ಟದಲ್ಲಿ ಇತಿಹಾಸ ಸೃಷ್ಟಿಸಿರುವುದು. ಪ್ಲಾನಿಂಗ್ ಕಮಿಷನ್ ಸದಸ್ಯ ಮಹೀಷಾ, EPW ಸಂಪಾದಕ ರಾಮಮೋಹನ್‌ರೆಡ್ಡಿ ಕೇಂದ್ರದ ಮಂತ್ರಿ ಜೈರಾಮ್ ರಮೇಶ್ ಮತ್ತು ಅರ್ಥಶಾಸ್ತ್ರಜ್ಞ ಜೀನ್ ಡ್ರೀಜೆ ಇವರ ಅಧ್ಯಯನದಲ್ಲಿ ಎರಡು ಪ್ರಕಾರದ ವಿಶ್ಲೇಷಣೆಗಳು ಕಂಡು ಬರುತ್ತವೆ, ಒಂದು ಇದು ಬಡಜನರಿಗೆ ಕೊಟ್ಟಂತಹ ಕಾಣಿಕೆ ಎಂದು ಇನ್ನೊಂದು ಅಸಮರ್ಪಕ ಅನುಷ್ಠಾನದಿಂದ ದಟ್ಟ ಬಡತನದಂತಹ ಸ್ವರೂಪಗಳು ಮುಂದು ವರೆದಿರುತ್ತವೆ. ಉಳಿವಿಗಾಗಿ ಹಿಂಸೆಯ ವಿರುದ್ಧ ಹೋರಾಡಿದ ಲಕ್ಷಾಂತರ ಕಾರ್ಮಿಕರನ್ನು ಗಮನಿಸಿದರೆ ಗುರಿ ಮತ್ತು ಬೇಡಿಕೆಗೆ ಅನುಗುಣವಾಗಿ ಅನುಷ್ಠಾನವಾಗದಿರುವುದು ಕಂಡುಬರುತ್ತದೆ. ಇದರ ಬಗ್ಗೆ ಟೀಕೆಗಳು ಮತ್ತು ಚರ್ಚೆಗಳು ಮುಂದುವರೆಯುತ್ತವೆ. ಕೌಟುಂಬಿಕ ಆದಾಯ ಹೆಚ್ಚಿಸಿದೆಯೇ? ಬಡತನದಂತಹ ಕುಟುಂಬಗಳಲ್ಲಿ ಹಸಿವು ತಗ್ಗಿಸಿದೆಯೇ? ಸಮೀಕ್ಷೆಯ ಪ್ರಕಾರದಲ್ಲಿ ಅಸ್ಥಿರವಾದ ಆಸ್ತಿಗಳು ನಿರ್ಮಾಣವಾಗಿವೆ. ಬಿಹಾರ, ಗುಜರಾತ್, ರಾಜಸ್ಥಾನ ಮತ್ತು ಕೇರಳದಲ್ಲಿ ಮಳೆಕೊಯ್ಲು ಯೋಜನೆಗಳು ಚೆನ್ನಾಗಿವೆ ಎಂದು ಎನ್‌ಎಸ್‌ಎಸ್‌ಒ ವರದಿಯಾಗಿದೆ. ಎಸ್.ಸಿ, ಎಸ್.ಟಿ, ಮತ್ತು ಬಿಪಿಎಲ್ ಕುಟುಂಬದ ಪಾಳುಬಿದ್ದ ಭೂಮಿಯನ್ನು ಅನುಷ್ಠಾನ ಮಾಡದೆ ಹಾಗೆಯೇ ಕಳಪೆಯ ಅನುಷ್ಠಾನದಲ್ಲಿ ತೊಡಗಿರುವುದು, ಕಾರ್ಮಿಕರಿಗೆ ಕನಿಷ್ಟ ವೇತನಕ್ಕಿಂತ ಕಡಿಮೆ ನೀಡಿರುವುದು, ವೇತನ ನೀಡುವಲ್ಲಿ ಅತ್ಯಂತ ವಿಳಂಬವಾಗಿರುವುದು.

ಜನರಿಗೆ ಮಾಹಿತಿ ಕೊರತೆಯಿಂದ ಉದ್ಯೋಗಕ್ಕಾಗಿ ಅರ್ಜಿಗಳು ಸರಿಯಾಗಿ ನೀಡಿರುವುದಿಲ್ಲ. ನಿರುದ್ಯೋಗಕ್ಕಾಗಿ ನಿರುದ್ಯೋಗ ಭತ್ಯೆ ಎಲ್ಲಿಯೂ ನೀಡಿರುವ ನಿದರ್ಶನ ಕಂಡುಬಂದಿರುವುದಿಲ್ಲ. ಅನುಷ್ಠಾನದಲ್ಲಿ ಸಿಬ್ಬಂದಿ ಕೊರತೆ ಇರುವುದು, ಅನುದಾನದಲ್ಲಿಯೂ ವಿಳಂಬತೆ ನಿರಂತರವಾಗಿ ಕಂಡು ಬಂದಿರುವುದು. ಕೆಲವು ರಾಜ್ಯಗಳಲ್ಲಿ ಅನುದಾನ ಸರಿಯಾಗಿ ಬರದೇ ಇರುವುದು, ಮಷ್ಟರ್‌ರೋಲ್ ನಿರ್ವಹಣೆ ಸರಿಯಾಗಿಲ್ಲದಿರುವುದು, ಆಂಧ್ರ ಪ್ರದೇಶದಲ್ಲಿ ಹಣ ಸೋರಿಕೆಯಂತಹ ಭ್ರಷ್ಟಾಚಾರಗಳ ಪ್ರಕರಣಗಳು ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುವುದು, ಇದೆಲ್ಲವನ್ನು ಗಮನಿಸಿದರೆ ಬಡವರಿಗಾಗಿ ಭರವಸೆ ನೀಡಿರುವ ಈ ಯೋಜನೆ ಯಾವ ದಿಕ್ಕಿನತ್ತ ಸಾಗಿದೆ? 6 ದಶಕಗಳಿಂದಲೂ ಉದ್ಯೋಗಿಗಳಿಗೆ ಪೂರಕ ಮತ್ತು ಪರಿವರ್ತನೆಯ ಪರ್ಯಾಯ ಯೋಜನೆಯಾಗಿ ಕಾಯಿದೆ ಯಾರಿಗೆ ಪೂರಕವಾಗಿ ಯಾವ ಪ್ರಮಾಣದಲ್ಲಿ ಅನುಷ್ಠಾನವಾಗಿದೆಯೇ ಎಂಬುದನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕವಾಗಿರುವುದು ಅಧ್ಯಯನ ತಿಳಿಸುತ್ತದೆ.

CAG Staff Reporter(2012),"Irregularities found in MNREGA Implementation. ಈ ಲೇಖನವನ್ನು ವಿಶ್ಲೇಷಿಸಿದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ

ಯೋಜನೆ ನಿಜವಾಗಿಯೂ ಉದ್ಯೋಗದ ಅವಶ್ಯಕತೆ ಇರುವವರಿಗೆ ನೋಂದಣಿ ಮಾಡಿ ಉದ್ಯೋಗದ ಚೀಟಿ ನೀಡಲಿಲ್ಲ, ಅರ್ಹತೆ ಇಲ್ಲದವರಿಗೆ ನೀಡಿ ಅನುಷ್ಠಾನ ಮಾಡಲಾಗಿದೆ. ಕರ್ನಾಟಕದಲ್ಲಿ ಬೆಳಗಾವಿ, ಹಾವೇರಿ, ಕೋಲಾರ, ಜಿಲ್ಲೆಗಳಲ್ಲಿ ಇತ್ತೀಚೆಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನ ಮಾಡಿರುವುದನ್ನು ಸಿಎಜಿ ವರದಿ ಮಾಡಿದೆ. ಬೆಳಗಾವಿ ಜಿಲ್ಲೆಯಲ್ಲಿ ಕೂಲಿಯ ಅನುದಾನವನ್ನೇ ರೂ49 ಕೋಟಿಯನ್ನು ಫಿಕ್ಸ್ಡ್ ಡೆಪೋಜಿಟ್ ಮಾಡಿರುವುದು ಕಂಡುಬಂದಿದೆ. ಕೊಳ್ಳುವ ಸಾಮಗ್ರಿಗಳಲ್ಲಿ ನಿಯಮಗಳನ್ನು ಪಾಲಿಸದೆ ಬಾರೀ ಪ್ರಮಾಣದಲ್ಲಿ ಅವ್ಯವಹಾರ ನಡೆದಿರುವುದು ಮತ್ತು ಪಾರದರ್ಶಕತೆ ಕಾಯಿದೆ ಉಲ್ಲಂಘನೆ ಮಾಡಿರುವುದು ತಿಳಿಯುತ್ತದೆ. ಕಾಯಿದೆ ಅಡಿ ಕೂಲಿ ಮಾಡಿದ 15 ದಿನದೊಳಗೆ ಕೂಲಿ ನೀಡುವುದು ನಿಯಮವಿದ್ದರೂ 2009–10 ಮತ್ತು 2010–11ರಲ್ಲಿ 25 ಗ್ರಾಮಪಂಚಾಯತಿಗಳಿಂದ 4.45 ಕೋಟಿ ರೂಪಾಯಿ 280ದಿನಗಳವರೆಗೆ ವಿಳಂಬವಾಗಿ ನೀಡಿರುವುದು. ಸಿಎಜಿ ವರದಿ ಮಾಡಿದೆ. ಇದನ್ನು ವಿಶ್ಲೇಷಿಸಿದರೆ ಅನುಷ್ಠಾನ ಸಂಸ್ಥೆಯಾದ ಗ್ರಾಮಪಂಚಾಯತಿ ಏಕೆ ಕಾಯಿದೆಯನ್ನು ಉಲ್ಲಂಘನೆ ಮಾಡಿದೆ. ಕೂಲಿಯ ಹಣವನ್ನು ಡೆಪೋಜಿಟ್ ಮಾಡಿದ್ದೇಕೆ? ಕೂಲಿ ವಿಳಂಬ ಮಾಡಿದ್ದೇಕೆ? ಹಲವು ಪ್ರಕಾರದ ಪ್ರಶ್ನೆಗಳು ಏಳುತ್ತವೆ. ಇದರ ಇಂದೆ ಇರುವ ವಾಸ್ತವಾಂಶಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ ಎಂದು ಅಧ್ಯಯನ ತಿಳಿಸುತ್ತದೆ.

ಶ್ರೀಧರ. ಎಂ.ವಿ.(2008), "ಮಾನವ ಶ್ರಮಕ್ಕೆ ಇದೋ ಬೆಂಬಲ ಬೆಲೆ". ಈ ಲೇಖನವನ್ನು ಪರಾಮರ್ಶಿಸಿದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 96 ಗ್ರಾಮಪಂಚಾಯತಿಗಳಲ್ಲಿ ಅನುಷ್ಠಾನಗೊಂಡಿದ್ದು ಈ ಯೋಜನೆ ಬಡತನ ನಿರ್ಮೂಲನೆ ಮಾಡುವ ಸಾಧನವಾಗಿದ್ದರೂ ಅರ್ಹ ಫಲಾನುಭವಿಗಳು ಈ ಯೋಜನೆಯಲ್ಲಿ ಕೂಲಿ ಹರಸಿಕೊಂಡು ಬರುತ್ತಿಲ್ಲ ಅನುಷ್ಠಾನ ಜವಾಬ್ದಾರಿ ವಹಿಸಿರುವ ಪಂಚಾಯತಿಗಳು ಈ ಯೋಜನೆಯನ್ನು ಸರಿಯಾಗಿ ಕೈಗೊಳ್ಳಬೇಕಾದ ಕಾಮಗಾರಿಗಳನ್ನು ಸಿದ್ಧಗೊಳಿಸಿಲ್ಲ, ಈ ಜಿಲ್ಲೆಯಲ್ಲಿ ಕೆಲಸ ಮಾಡುವ ಯುವಕ ಯುವತಿಯರು ಈ ಯೋಜನೆ ಅಡಿ ನಿಗದಿ ಪಡಿಸಿರುವ ಕೂಲಿಗಿಂತಲೂ ಹೆಚ್ಚಿನ ಕೂಲಿ ಅಸಂಘಟಿತ ಖಾಸಗಿ ವಲಯದಲ್ಲಿ ಅಂದರೆ ಕಟ್ಟಡ ನಿರ್ಮಾಣ, ಎಲೆಕ್ಟ್ರೀಕಲ್, ಗಾರೆ ಕೆಲಸ, ಕಬ್ಬಿಣದ ಕೆಲಸ, ಆಟೋ ಓಡಿಸುವುದರಲ್ಲಿ ಹೆಚ್ಚು ಕೂಲಿ ಸಿಗುವುದು. ಈ ಯೋಜನೆಯಲ್ಲಿ ಕೂಲಿ ಹುಡುಕಿಕೊಂಡು ಬರುವವರಿಗೆ ಸಿಗುವುದಿಲ್ಲ ಹಾಗೆಯೇ ಕೇಂದ್ರ ಸರ್ಕಾರ 2008ರಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ 60 ಸಾವಿರ ಕೋಟಿ ಸಾಲವನ್ನು ಮಾಡಿರುವುದು, ಅದೇ 2008ರಲ್ಲಿ ಬ್ಯಾಂಕಗಳು 240000 ಕೋಟಿ ನೀಡಲು ಮುಂದಾಗಿರುವುದು. 24ದೊಡ್ಡ 753ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳು ಪೂರ್ಣಗೊಳ್ಳುತ್ತಿರುವುದರಿಂದ ಯೋಜನೆ ಅನುಷ್ಠಾನ ಸಮಸ್ಯೆಗಳಿಂದ ಒಂದು ಸವಾಲಾಗಿರುವುದು ಕಂಡು ಬಂದಿರುವುದರಿಂದ ಇವು ಇದರ ಹಿಂದೆ ಯಾವ ಪ್ರಮಾಣದಲ್ಲಿ ಸವಾಲುಗಳು ಇವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು.

ಭಗವತಿ ಪಟೇಲ್(2008), URL Link Bhagavatipatal. ಈ ಲೇಖನವನ್ನು ಪರಾಮರ್ಶಿಸಿದರೆ ಭಾರತದಲ್ಲಿ ಸುಮಾರು 14 ಕೋಟಿ ಗ್ರಾಮೀಣ ಕುಟುಂಬಗಳಿದ್ದು ಅದರಲ್ಲಿ ಶೇಕಡ 30ರಷ್ಟು ಕುಟುಂಬ ಬಡತನ ರೇಖೆಗಿಂತ ಕೆಳಗಿದ್ದು 3 ದಶಕಗಳಿಂದ ಸಣ್ಣ ಹಿಡುವಳಿದಾರರು ಸಣ್ಣ ಪ್ರಮಾಣದ ಭೂಮಿ ಹೊಂದಿದವರಿದ್ದರು ಅದರಲ್ಲಿ ಬುಡಕಟ್ಟು, ಗುಡ್ಡಗಾಡು ಮರುಭೂಮಿ ಅತಿವೃಷ್ಟಿ ಅನಾವೃಷ್ಟಿಯಿಂದ ಬಡತನ ಹೆಚ್ಚುತ್ತಿರುವುದು ಕಂಡುಬಂದಿದೆ. ಬಡತನ ನಿರ್ಮೂಲನದ ಹಲವು ಪ್ರಕಾರದ ಕಾರ್ಯಕ್ರಮಗಳನ್ನು ಸರ್ಕಾರ ಅನುಷ್ಠಾನ ಮಾಡುತ್ತಿದ್ದು ಅವು ಬಡವರಿಗೆ ತಲುಪುತ್ತಿಲ್ಲ. ಯೋಜನೆಯನ್ನು ರೂಪಿಸಿ ಅನುಷ್ಠಾನ ಮಾಡುವಲ್ಲಿ ಲೋಪದೋಷಗಳು ಹೆಚ್ಚುತ್ತಿರುವುದು ಶೇಕಡ 15ರಷ್ಟು ಸಹ ತಳಮಟ್ಟದವರೆಗೆ ಮುಟ್ಟುತ್ತಿಲ್ಲದಿರುವುದು ಕಂಡುಬಂದಿದೆ. ಇದನ್ನು ಅವಲೋಕಿಸಿದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ –ಯೋಜನೆ ರೂಪಿಸುವಲ್ಲಿ ಅನುಷ್ಠಾನ ಮಾಡುವಲ್ಲಿ ಯಾವ ಪ್ರಮಾಣದಲ್ಲಿ ಕಾಯಿದೆಯ ನಿಯಮಗಳನ್ನು ಉಲ್ಲಂಘನೆಯಾಗಿದೆ ಎಂಬುದನ್ನು ಅಧ್ಯಯನ ಗುರುತಿಸಿದೆ.

ಗೋಪಿನಾಥ್ ಘೋಷ್, (2008), Social Audit and NREGA. ಈ ಲೇಖನವನ್ನು ಪರಾಮರ್ಶಿಸಿದರೆ ಜಾರ್ಖಂಡ್ ರಾಜ್ಯ ಸರ್ಕಾರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನಗೊಂಡಿರುವುದು ಮತ್ತು ಜಮಾಬಂದಿ ಕುರಿತಂತೆ ಜಾರ್ಖಂಡ್‌ನಲ್ಲಿ ಅವಲೋಕನಾ ವೇದಿಕೆ ಸಿದ್ಧಪಡಿಸಿ ಇದರಿಂದ ಜಮಾಬಂದಿ ನಡೆಸಲಾಗಿದೆ 2007ರಲ್ಲಿ ಪಂಚಾಯತ್ ಆಯ್ಕೆ ಮಾಡಿಕೊಂಡು ಮೇ 6 ರಿಂದ 24 ರವರೆ ನಡೆಸಿದ್ದಾರೆ. ಪ್ರತಿ ಜಿಲ್ಲೆಯಿಂದ ಒಟ್ಟು 300 ಪ್ರತಿನಿಧಿಗಳು ಭಾಗವಹಿಸಿದ್ದಾರೆ. ಜೊತೆಗೆ ಜೆ.ಎನ್.ಯು ವಿದ್ಯಾರ್ಥಿಗಳು ಮತ್ತು ಆರ್ಥಿಕ ಚಿಂತಕರು ಆದ ಜೀನ್ ಡ್ರೀಜ್ ಮತ್ತು ಅರುಣ್‌ರಾಯ್ ಭಾಗವಹಿಸಿದ್ದರು. 15 ಗುಂಪುಗಳಾಗಿ ಸಮೀಕ್ಷೆ ಮಾಡಲಾಗಿದೆ. ಇದರಿಂದ ಗಮನಿಸಿರುವುದು ಗ್ರಾಮಸ್ಥರಿಗೆ ಗ್ರಾಮಸಭೆ ಮಾಡುವುದು, ಭಾಗವಹಿಸುವುದು ಬೇಡಿಕೆಗಳ ಸಮಸ್ಯೆಗಳ ಬಗ್ಗೆ ಚರ್ಚಿಸುವುದು ಕಂಡು ಬಂದಿದೆ. ಇದರ ನ್ಯೂನ್ಯತೆಗಳೆಂದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕೂಲಿ ನೀಡುವಲ್ಲಿ ವಿಳಂಬವಾಗಿರುವುದು. ನಿಗದಿ ಪಡಿಸಿದ ಕೂಲಿ ನೀಡದಿರುವುದು ಒಬ್ಬ ವ್ಯಕ್ತಿಗೆ ಎರಡು ಉದ್ಯೋಗದ ಚೀಟಿ ನೀಡಿರುವುದು, ಕೆಲಸದ ಸ್ಥಳದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆ ಸೌಲಭ್ಯ ಪರಿಹಾರ ನೀಡದಿರುವುದು, ಕಾಮಗಾರಿಗಳನ್ನು ಮಧ್ಯವರ್ತಿಗಳೇ ಅಂತಿಮವಾಗಿ ತೀರ್ಮಾನವಾಗದಿರುವುದು. ಯೋಜನೆ ನಿಧಾನವಾಗಿ ಸಾಗುತ್ತಿರುವುದು ಸರ್ಕಾರದಲ್ಲಿ ಬೋಗಸ್ ಬೀಲ್ ಹೆಚ್ಚು ಕಂಡುಬಂದಿರುವುದು. ಅನುಷ್ಠಾನದಲ್ಲಿ ಸಕ್ರೀಯವಾಗಿ ಭಾಗವಹಿಸುವುದು ಸೂಕ್ತ ಎಂದು ಲೇಖಕರ ಸಲಹೆ ಅನುಷ್ಠಾನದಲ್ಲಿ ಪಂಚಾಯತ್ ರಾಜ್ ಏಕೆ ಗಮನಹರಿಸುತ್ತಿಲ್ಲ, ಕಾಯಿದೆ ಏಕೆ, ಹೇಗೆ, ಉಲ್ಲಂಘನೆಯಾಗಿದೆ ಎಂಬುದನ್ನು ಅರ್ಥಮಾಡಿ ಕೊಳ್ಳುವುದು.

ಪ್ರದೀಪ್ ಬೈಸಖ್(2008), "Social Audit Senoia in Orissa". ಈ ಲೇಖನವನ್ನು ಅವಲೋಕಿಸಿದರೆ ಒರಿಸ್ಸಾ ಸರ್ಕಾರ ಹೈದರಬಾದಿನ NIRD ಸಂಸ್ಥೆಯೊಂದಿಗೆ 2008 ಫೆಬ್ರವರಿ 2 ರಿಂದ 4ರಲ್ಲಿ 19 ಜಿಲ್ಲೆಯಲ್ಲಿ ಜಮಾಬಂದಿ ಕಾರ್ಯವನ್ನು ನಿರ್ವಹಿಸಿತು. 2006–07ರ ಆರ್ಥಿಕ ವರ್ಷದಲ್ಲಿ 5 ಲಕ್ಷ ಬಿಡುಗಡೆಯಾದ ಅನುದಾನದಲ್ಲಿ ಕೂಲಿಗಾಗಿ ನೀಡಲಾದ 4.13115 ರೂ ಹಣದಲ್ಲಿ ಶೇಕಡ 75ರಷ್ಟು ಕೆಲಸಗಾರರಿಗೆ ಕೂಲಿ ನೀಡದಿರುವುದು, 1280 ಮೀಟರ್ ರಸ್ತೆಗಾಗಿ ಖರ್ಚುಮಾಡುವುದು. ದಾಖಲಾಗಿದ್ದರೆ ವಾಸ್ತವವಾಗಿ ಕೇವಲ 700 ಮೀಟರ್ ಮಾತ್ರ ರಸ್ತೆ ನಿರ್ಮಾಣವಾಗಿರುವುದು ಕಂಡುಬಂದಿದೆ. ಶೇಕಡ 75ರಷ್ಟು ಕೂಲಿಕಾರರಿಗೆ ಕೂಲಿ ನೀಡದಿರುವುದು ಬಡತನ ನಿರ್ಮೂಲನೆಗಾಗಿ ಹುಟ್ಟಿಕೊಂಡ ಯೋಜನೆ ಬಡವರಿಗೆ ಸಾರ್ವಜನಿಕ ಕೆಲಸಗಳು ಕೂಲಿ ನೀಡುವುದು, ಹಸಿವು ಅನ್ನಾಂಗದ ಕೊರತೆ ನೀಗಿಸುವುದು ಕಾಯಿದೆಯ ಧ್ಯೇಯವಾಗಿರುತ್ತದೆ. ಇಲ್ಲಿ ಮುಖ್ಯವಾಗಿ ಕೂಲಿಕಾರರಿಗೆ ಕೂಲಿ ನೀಡದಿರುವುದು ಈ ಲೋಪದೋಷಗಳಲ್ಲಿನ ಸತ್ಯಾ ಸತ್ಯತೆಗಳನ್ನು ಯಾವ ಪ್ರಮಾಣದಲ್ಲಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು.

ಶೋಭನ ಯು.ಕೆ. ಮತ್ತು ಡಾ..ಡಿ.ಕಮಲವೇಣಿ, (2012), "NREGA Inclusive Growth the through Socio-Economic Transformation of Marginalized Communities" National Rural Employment Programme. ಅಧ್ಯಯನವನ್ನು ತಮಿಳುನಾಡು, ರಾಜಸ್ಥಾನ , ಕೇರಳ ಮತ್ತು ಆಂಧ್ರ ಪ್ರದೇಶವನ್ನು ಅಧ್ಯಯನ ಮಾಡಲಾಗಿದೆ. ಖಾಸಗಿ ವಲಯದಲ್ಲಿ ದಿನದ ಕೊನೆಯಲ್ಲಿ ಕೂಲಿ ನೀಡುವುದು. ಮೊದಲಿನಿಂದ ಬಂದದ್ದು ಆಗಿರುತ್ತದೆ. ಏಕೆಂದರೆ ಸಮಾಜದಲ್ಲಿ ಹಿಂದುಳಿದ ವರ್ಗವು ಆರ್ಥಿಕ ಸಂಕಷ್ಟದಿಂದ ಕೂಡಿರುವುದು. ಆದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ 15 ದಿನದೊಳಗೆ ಕೂಲಿ ನೀಡುವುದು. ಬ್ಯಾಂಕ್ ಅಥವಾ ಅಂಚೆಕಛೇರಿ ಮೂಲಕವಾಗಿ ವಿತರಿಸಿರುವುದರಿಂದ ಬಡವರಿಗೆ ಭ್ರಷ್ಟಾಚಾರದಿಂದ ಮುಕ್ತವಾದರೂ ಅಂದಿನ ಜೀವನೋಪಾಯವೆನ್ನುವುದು ಪ್ರಶ್ನೆಯಾಗಿ ಉಳಿದಿರುವುದು. ಈ ಮಧ್ಯೆ ಉದ್ಯೋಗ ಖಾತರಿ ಯೋಜನೆ ಕೆಲವು ರಾಜ್ಯಗಳಲ್ಲಿ ಕೂಲಿ ನೀಡುವುದು ಬಾರಿ ವಿಳಂಬವಾಗಿರುವ ಪ್ರಕರಣಗಳು ಹೆಚ್ಚಿವೆ. ಕಾಯಿದೆ ನಿಯಮವು ಸಹ ಉಲ್ಲಂಘನೆಯಾಗಿರುವುದು ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡುವ ನಿಯಮವಾಗಿದ್ದರೂ ಈ ರಾಜ್ಯಗಳಲ್ಲಿ ಕೇಂದ್ರದಿಂದ ಬಿಡುಗಡೆಯಾಗದೆ ಉಳಿದಿರುವುದು ಹೆಚ್ಚು. 2006–07ರಲ್ಲಿ ಶೇಕಡ 73ರಷ್ಟು ಬಿಡುಗಡೆಯಾಗಿ 2007–08ರಲ್ಲಿ ಶೇಕಡ 81ರಷ್ಟು 2008–09ರಲ್ಲಿ ಶೇಕಡ 75ರಷ್ಟು ಬಿಡುಗಡೆ ಮಾಡಿರುವುದು. ಬೇಡಿಕೆ ಬಂದರೆ ಅದಕ್ಕೆ ತಕ್ಕ ಅನುದಾನ ಬಿಡುಗಡೆ ಮಾಡಬೇಕೆಂಬ ನಿಯಮವಿದ್ದರು ಅತ್ಯಂತ ಕಡಿಮೆ ಅನುದಾನ ಬಿಡುಗಡೆ ಮಾಡಿರುವುದರ

ಲೋಪದೋಷಗಳನ್ನು ಅರ್ಥಮಾಡಿಕೊಳ್ಳಬೇಕಾಗುವುದು. ಅದೇ 2008-09ರಲ್ಲಿ ಕಾಯಿದೆ ಪ್ರಕಾರ 100 ದಿನಗಳ ಉದ್ಯೋಗ ನೀಡಬೇಕೆಂಬ ನಿಯಮವಿದ್ದರೂ ಕೇವಲ 48 ದಿನಗಳು ಮಾತ್ರ ಉದ್ಯೋಗ ನೀಡಿರುವುದು ಅಧ್ಯಯನ ಗುರುತಿಸಿದೆ.

ಸುಧಾನ್ಸು ಕುಮಾರ್ ದಾಸ್(2012), "Social Audit in NREGA ensuring social justice and transparency". ಈ ಅಧ್ಯಯನವನ್ನು ಒರಿಸ್ಸಾ ರಾಜ್ಯದ 6 ಬ್ಲಾಕ್‌ಗಳಲ್ಲಿ ಪ್ರಾಥಮಿಕ ಅಧ್ಯಯನ ನಡೆಸಲಾಗಿದೆ. ಭಾರತ ದೇಶ ಸ್ವತಂತ್ರವಾದ ನಂತರ ಕಾನೂನು ಚೌಕಟ್ಟನ್ನು ಬಲವಾಗಿ ಅಡಿಪಾಯ ಹಾಕಲಾಯಿತು. ವಿಶೇಷವಾಗಿ ಭಾರತದಲ್ಲಿರುವಂತಹ ಬಡತನ ನಿರ್ಮೂಲನೆ ಮಾಡುವ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಸುಧಾರಿಸಲು ಉದ್ಯೋಗದ ಭರವಸೆ ನೀಡಲು 2005ರಲ್ಲಿ ಉದ್ಯೋಗ ಖಾತರಿಯನ್ನು ಕಾಯಿದೆಯಾಗಿ ಮಾಡಲಾಯಿತು. 3 ಹಂತಗಳ ರೂಪದಲ್ಲಿ ಲೇಖನಗಳು ದಾಖಲೆಗಳ ಪ್ರಕಾರ 100 ದಿನಗಳ ಉದ್ಯೋಗ ನೀಡುವುದರ ಬದಲಿಗೆ 2006-07ರಲ್ಲಿ ಸರಾಸರಿ 45ದಿನಗಳ, 2007-08ರಲ್ಲಿ 38ದಿನಗಳ ಉದ್ಯೋಗ ನೀಡಿರುವುದು ಸಿ.ಇ.ಎಸ್.ಎಫ್ ಅಧ್ಯಯನದಿಂದ ಕಂಡುಬಂದಿದೆ. ವಿಶ್ಲೇಷಿಸಿದಾಗ ಸರಾಸರಿ ಕೇವಲ 5ದಿನಗಳ ಉದ್ಯೋಗ ನೀಡಿರುವುದು ಕಂಡುಬಂದಿದೆ. ದೆಹಲಿಯ ಸಮಾಜ ವಿಜ್ಞಾನ ಸಂಸ್ಥೆಯ ಪ್ರೋ ಜೀನ್ ಡ್ರೀಜ್ ನಾಯಕತ್ವದಲ್ಲಿ ಕಲಹಂದಿ ಬಾಲಂಗಿರಿ ಮತ್ತು ಬೋದ್ ಜಿಲ್ಲೆಗಳಲ್ಲಿ 6 ಬ್ಲಾಕ್ ಮತ್ತು ಪ್ರತಿ ಬ್ಲಾಕ್‌ನ 5ಗ್ರಾಮ ಪಂಚಾಯತಿಗಳು ಸೇರಿ ಒಟ್ಟು 30 ಗ್ರಾಮಪಂಚಾಯತಿಗಳನ್ನು ಸಮೀಕ್ಷೆಗೆ ಒಳಪಡಿಸಿ ವಿಶ್ಲೇಷಿಸಿಲಾಗಿದೆ. ಅನೇಕ ಕುಟುಂಬಗಳಿಗೆ ಉದ್ಯೋಗದ ಚೀಟಿ ವಿತರಿಸದೇ ಇರುವುದು ತಿಳಿಸುತ್ತದೆ. ಶೇಕಡ 60ಕ್ಕೂ ಹೆಚ್ಚು ಕಾರ್ಮಿಕರಿಗೆ ಕೆಲಸಕ್ಕೆ ಅರ್ಜಿ ಹಾಕುವುದು ಗೊತ್ತಿಲ್ಲದಿರುವುದು. ಅರ್ಜಿ ಹಾಕಿದ ನಂತರ 15ದಿನಗೊಳಗಾಗಿ ಉದ್ಯೋಗ ಪಡೆಯಬೇಕು ಇಲ್ಲವಾದರೆ ನಿರುದ್ಯೋಗದ ಭತ್ಯೆ ಪಡೆಯಬೇಕು, ಕಾಮಗಾರಿ ನಡೆಯುವ ಸ್ಥಳದಲ್ಲಿ ವಿಶ್ರಾಂತಿ, ನೀರು ಇತ್ಯಾದಿ ಪಡೆಯಬೇಕೆಂಬ ನಿಯಮ ಜನರಿಗೆ ಗೊತ್ತಿಲ್ಲದಿರುವುದು ಕಂಡುಬಂದಿದೆ. 2006-07ರಲ್ಲಿ ಶೇಕಡ 53ರಷ್ಟು, 2007-08ರಲ್ಲಿ ಶೇಕಡ 38ರಷ್ಟು ಉದ್ಯೋಗ ಪಡೆದಿರುವುದು ಕಂಡುಬಂದಿದೆ. ಪಾರದರ್ಶಕತೆ ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆ ವಿಷಯಗಳು ಸಹ ತಿಳಿದಿಲ್ಲದಿರುವುದು ಕಂಡು ಬಂದಿದೆ. ಈ ಕಾಯ್ದೆ ಸರಿಯಾಗಿ ಮತ್ತು ಸಮರ್ಥವಾಗಿ ಗ್ರಾಮ ಪಂಚಾಯತಿ ನಂತಹ ಸಂಸ್ಥೆಗಳು ಏಕೆ ಅನುಷ್ಠಾನ ಮಾಡಲಿಲ್ಲ. ಈ ಲೋಪದೋಷಗಳ ಹಿಂದಿನ ವಾಸ್ತವಾಂಶಗಳನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

ಪ್ರದೀಪ್ ಜೈನ್ ಮತ್ತು ರಮೀಂದ್ರ ಜಿತ್ ಸಿಂಗ್, Mahatma Ganghi National Rural Employment Guarantee Act(MNREGA) on the touchstone of social security. ಈ ಲೇಖನವನ್ನು ಪರಾಮರ್ಶಿಸಿದರೆ ಆನುಷಂಗಿಕ ವರದಿ ಆಧಾರದ ಮೇಲೆ (ಆನ್‌ಲೈನ್ ಡಾಟಾ)2012-13ರ ಅಂಕಿಅಂಶಗಳನ್ನು ಮೊದಲ ಹಂತದಲ್ಲಿ 200 ಜಿಲ್ಲೆಗಳಲ್ಲಿ ಅನುಷ್ಠಾನ ಮಾಡಿದ್ದು

ಸರಳ ಯಾದೃಚ್ಛಿಕ ಮಾದರಿಯಲ್ಲಿ ಸಮೀಕ್ಷೆ ಕೈಗೊಂಡು 5528 ಜಾಬ್ ಕಾರ್ಡ್ ಉಳ್ಳವರಲ್ಲಿ ಕೇವಲ 272 ಕುಟುಂಬಗಳಲ್ಲಿ ಮಾತ್ರ. ಕೇವಲ 35 ದಿನಗಳ ಉದ್ಯೋಗ ನೀಡಿರುತ್ತಾರೆ. ಕಾಯಿದೆಯ ಅನ್ವಯ 100 ದಿನಗಳ ಉದ್ಯೋಗ ನೀಡುವಲ್ಲಿ ಸರ್ಕಾರ ವಿಫಲಗೊಂಡಿರುವುದು. ಪಂಚಾಯತ್ ರಾಜ್ ಸಂಸ್ಥೆ ಕಾರ್ಯ ಬದ್ಧತೆಯಲ್ಲಿ ಹಿಂದುಳಿದಿರುವುದನ್ನು ತಿಳಿಸುತ್ತದೆ. ಮಹಿಳೆಯರಿಗೆ ಕಾಯಿದೆಯ ಪ್ರಕಾರ ಕನಿಷ್ಠ 33ರಷ್ಟು ಉದ್ಯೋಗ ನೀಡುವ ಅವಕಾಶವಿದ್ದರೂ ಕೇವಲ 22.32ರಷ್ಟು ಮಾತ್ರ ಉದ್ಯೋಗ ನೀಡಿರುತ್ತಾರೆ. ಇದು ಒಂದು ರೀತಿ ಆರೋಗ್ಯಕರವಾದ ಬೆಳವಣಿಗೆಯೆಂದು ತಿಳಿಸಿರುವುದು ಮಹಿಳಾ ಸಬಲೀಕರಣದ ಆಯಾಮದಲ್ಲಿ ನೋಡಿದರೆ ಮಹಿಳಾ ಧ್ವನಿಗೆ ಪ್ರಾತಿನಿಧ್ಯ ಆರೋಗ್ಯಕರವಾಗಿ ದೊರೆತ್ತಿಲ್ಲದಿರುವುದು ಗೊತ್ತಾಗುತ್ತದೆ.

ವಲಸೆ ಮತ್ತು ಉದ್ಯೋಗ ಖಾತರಿ ಯೋಜನೆಯನ್ನು ವಿಶ್ಲೇಷಿಸಿದರೆ ಗ್ರಾಮೀಣದಿಂದ ನಗರಗಳಿಗೆ ಶೇಕಡ 2ರಷ್ಟು ಜನಸಂಖ್ಯೆ ವಲಸೆ ಹೋಗುವುದು, ಅದರ ಹಿನ್ನೆಲೆಯಲ್ಲಿ ಸತ್ಯಗಳನ್ನು ಹುಡುಕಿದರೆ ಗ್ರಾಮೀಣ ಆರ್ಥಿಕತೆ ಕುಸಿಯುತ್ತಿರುವುದು ಹಾಗು ಸ್ಥಳೀಯ ಕೂಲಿ ವೇತನ ಸಹ ಕಡಿಮೆ ಇರುವುದರಿಂದ ವಲಸೆ ಪ್ರಮಾಣ ಹೆಚ್ಚುತ್ತದೆ ಎಂದು ಸಂಶೋಧನಾ ವರದಿ ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ಅಧ್ಯಯನ ಕ್ಷೇತ್ರದಲ್ಲೂ ಸಹ ಏಕೆ ನೋಡಬಾರದು ಮತ್ತು ಅದರ ಕಾರಣಗಳನ್ನು ಗುರುತಿಸುವ ಅಗತ್ಯ ಇರುತ್ತದೆ. ದೆಹಲಿಯ ಮಾನವ ಅಭಿವೃದ್ಧಿ ಸಂಸ್ಥೆ 2008ರಲ್ಲಿ ಬಿಹಾರ ರಾಜ್ಯದ ವಲಸೆ ಪ್ರಮಾಣವನ್ನು ಸಮೀಕ್ಷೆಯ ವರದಿ ಪ್ರಕಾರ ಇಂದಿನ ವಲಸೆಗೆ ಹೋಲಿಸಿದರೆ ಶೇಕಡ 20ರಷ್ಟು ವಲಸೆ ಪ್ರಮಾಣ ಕಡಿಮೆಯಾಗಿದೆ ಎಂದು ತಿಳಿದುಬರುತ್ತಿದೆ.

ದೆಹಲಿಯ ಮ್ಯಾನ್ ಪವರ್ ರಿಸರ್ಚ್ ಸಂಸ್ಥೆ(2009), ಭಾರತ ಒಟ್ಟು 20 ಜಿಲ್ಲೆಗಳಿಂದ 300 ಕೂಲಿ ಕಾರ್ಮಿಕರನ್ನು ಸಂಶೋಧನೆಗೆ ಒಳಪಡಿಸಲಾಯಿತು. ಈ ಮೌಲ್ಯಮಾಪನ ವರದಿಯಲ್ಲಿ ಕಂಡು ಬರುವ ಅಂಶವೆಂದರೆ ಫಲಾನುಭವಿಗಳು ಪಡೆದ ಜಾಬ್ ಕಾರ್ಡ್‌ನಲ್ಲಿ ಭಾವಚಿತ್ರ ಇರುವುದಿಲ್ಲ, ಜಾಬ್ ಕಾರ್ಡ್‌ನ್ನು ಹಣಕೊಟ್ಟು ಪಡೆದುಕೊಂಡಿರುತ್ತಾರೆ, ಜಾಬ್ ಕಾರ್ಡ್‌ನಲ್ಲಿ ದಾಖಲಿಸುವ ಕಾಲಂಗಳು ಇರುವುದಿಲ್ಲ, ಇದರಲ್ಲಿ ಅನೇಕ ಕುಟುಂಬಗಳು ಕೆಲಸವನ್ನು 15 ದಿನದೊಳಗಾಗಿ ಎಲ್ಲಿಯೂ ಪಡೆದುಕೊಂಡಿರುವುದಿಲ್ಲ. ಅದಕ್ಕೆ ಯಾರಿಗೂ ನಿರುದ್ಯೋಗ ಭತ್ಯೆ ಪಡೆದಿರುವುದಿಲ್ಲ, ಕೆಲವರಿಗೆ 20 ರಿಂದ 30 ದಿನ ಕೆಲಸ ಪಡೆದುಕೊಂಡಿರುವುದು ಬಿಟ್ಟರೆ ಎಲ್ಲಿಯೂ ಯಾರು ಸಹ 100 ದಿನಗಳ ಉದ್ಯೋಗ ಪಡೆದಿರುವುದಿಲ್ಲ ಎನ್ನುವಂತಹ ಅಂಶಗಳು ಕಂಡುಬರುತ್ತವೆ. ಅನುಷ್ಠಾನ ಮಾಡುವ ಸಂಸ್ಥೆ ಏಕೆ ಕಾಯಿದೆಯ ನಿಯಮಗಳನ್ನು ಪಾಲಿಸಲಿಲ್ಲ? ಜನರು ಉದ್ಯೋಗವನ್ನು ಪಡೆಯಲು ಪ್ರಶ್ನಿಸಲಿಲ್ಲ? ಜನರಿಗೆ ತಿಳುವಳಿಕೆ ಮತ್ತು ಮಾಹಿತಿಯನ್ನು ಪಂಚಾಯತಿ ನೀಡಲಿಲ್ಲವೆ ಎನ್ನುವಂತಹ ಪ್ರಶ್ನೆಗಳು ಇದರ ಹಿಂದಿನ ವಾಸ್ತಾವಿಕತೆ ಎನು ಎನ್ನುವದನ್ನು ಅರ್ಥ ಮಾಡಿಕೊಳ್ಳ ಬೇಕಾಗಿದೆ.

ವಸಂತರಾಜ ಕೆ.ಎನ್.(2009), ಆಹಾರದ ಭದ್ರತೆಗೆ ಉದ್ಯೋಗದ ಭದ್ರತೆ, ಹಸಿನ ಸಾಮ್ರಾಜ್ಯಕ್ಕೆ ಕೊನೆಯಂತು. ಈ ಲೇಖನದಲ್ಲಿ ಕಂಡುಬರುವ ಅಂಶವೆಂದರೆ ಗ್ರಾಮೀಣ ಪ್ರದೇಶದಲ್ಲಿ ಕೃಷಿಯ ಬಿಕ್ಕಟ್ಟಿನಿಂದ ಭೂಹೀನರ ಸಂಖ್ಯೆ ಹೆಚ್ಚಾದಂತೆ. ಇದರ ಬೆನ್ನಲ್ಲೆ ನಿರುದ್ಯೋಗ ಸಮಸ್ಯೆ ಹೆಚ್ಚಿತು. ಪರ್ಯಾಯವಾಗಿ ಉದ್ಯೋಗ ಖಾತರಿ ಕಾಯಿದೆ ಬಂದಿತು. ಇದರಿಂದ ಜನರಿಗೆ ಉದ್ಯೋಗದ ಹಕ್ಕನ್ನು ನಿಡಿತು. ಉದ್ಯೋಗದ ಭರವಸೆಗೆ ತಕ್ಕಂತೆ ಅನುಷ್ಠಾನದ ಮೊದಲ ವರ್ಷದಲ್ಲಿ ಸರಾಸರಿ 43 ದಿನ, ಎರಡನೇ ವರ್ಷದಲ್ಲಿ 42 ದಿನ, ಮಹಿಳೆಯರಿಗೆ ಶೇಕಡ 46ರಷ್ಟು ಉದ್ಯೋಗವನ್ನು ನೀಡಿತು. ಜನರಿಗೆ ಉದ್ಯೋಗ ನೀಡಿರುವುದರಲ್ಲಿ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಾಗುತ್ತ ಹೋಗುತ್ತದೆ ಎನ್ನುವುದನ್ನು ಅಧ್ಯಯನ ಗುರುತಿಸುತ್ತದೆ. ಬಿಹಾರ, ಜಾರ್ಖಂಡ್, ಮಧ್ಯಪ್ರದೇಶ, ಛತ್ತಿಸ್‌ಘರ್, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಉತ್ತರಖಂಡ. ಉದ್ಯೋಗ ಖಾತರಿ ತನ್ನ ಗುರಿ ಸಾಧನೆ ಮಾಡುವಲ್ಲಿ ಒಂದು ಪ್ರಯತ್ನ ಮಾಡಿರುವುದರಲ್ಲಿ ರಾಜಸ್ಥಾನ 85 ದಿನಗಳ ಉದ್ಯೋಗ ನೀಡಿದರೆ ಅತೀ ಕಡಿಮೆ ಎಂದರೆ 32ದಿನಗಳ ಉದ್ಯೋಗ ನೀಡಿದೆ. 2ನೇ ವರ್ಷದಲ್ಲಿ ಉತ್ತರ ಪ್ರದೇಶ ಶೇಕಡ 42ರಷ್ಟು, ಬಿಹಾರ ಶೇಕಡ ಒಂದಕ್ಕಿಂತ ಕಡಿಮೆಯಾಗಿರುವುದು. ಈ ತರಹದ ನಿರುದ್ಯೋಗಗಳು ಉಲ್ಬಣವಾಗುವುದಕ್ಕೆ ಜನರಿಗೆ ಅರಿವಿನ ಕೊರತೆ ಪ್ರಮುಖ. ಈ ಕೊರತೆ ನೀಗಿಸಲು ತಳಮಟ್ಟಕ್ಕೆ ಹರಿಯುವಂತಹ ಮಾಧ್ಯಮಗಳನ್ನು ಬಳಕೆ ಮಾಡಬೇಕು. ಪ್ರಗತಿಯನ್ನು ಅಳೆಯುವ ಮಾಪಕವಾದ ಸಾಮಾಜಿಕ ಲೆಕ್ಕ ಪರಿಶೋಧನೆ ಜನರೊಡನೆ ಪರಾದರ್ಶಕವಾಗಿ ನಡೆಯಬೇಕು.

ಉದ್ಯೋಗ ಖಾತರಿ ಕಾಯಿದೆ ಕರ್ನಾಟಕದಲ್ಲಿ ಪ್ರತೀ ಕುಟುಂಬಕ್ಕೆ ಮೊದಲ ವರ್ಷದಲ್ಲಿ 41 ದಿನ, 2ನೇ ವರ್ಷದಲ್ಲಿ 44ದಿನಗಳ ಉದ್ಯೋಗ ನೀಡಿರುವುದನ್ನು ಗಮನಿಸಿದರೆ ಗುರಿಯ ಅರ್ಧಕ್ಕಿಂತಲೂ ಕಡಿಮೆ ಪ್ರಗತಿ ಸಾಧಿಸಿರುವುದು. ಅಧ್ಯಯನ ಗುರುತಿಸಿರುವ ಅಂಶವೆಂದರೆ ಅನುಷ್ಠಾನ ಮಾಡುತ್ತಿರುವ ಸಂಸ್ಥೆ ಮೇಲುಸ್ತುವಾರಿ ಮತ್ತು ಪಾರದರ್ಶಕತೆ ಕಾಪಾಡುವಲ್ಲಿ ಹಿಂದುಳಿದಿರುವುದು. ಜನರಿಗೆ ವ್ಯಾಪಕವಾದ ಅರಿವಿನ ಕೊರತೆ ಮತ್ತು ಅನುಷ್ಠಾನದಲ್ಲಿ ಅತೀಯಾಗಿ ಯಂತ್ರಗಳ ಬಳಕೆ ಮಾಡಿರುವುದು ತನ್ನ ಗುರಿ ಸಾಧಿಸುವಲ್ಲಿ ಹಿಂದುಳಿದಿರುವ ಅಂಶವನ್ನು ಅಧ್ಯಯನಗುರುತಿಸಿದೆ.

ಮೇಲಿನ ಎಲ್ಲಾ ಅಧ್ಯಯನಗಳನ್ನು ಅವಲೋಕಿಸಿದಾಗ, ಉದ್ಯೋಗ ಖಾತರಿ ಕಾಯಿದೆಯ ಯೋಜನೆಯೂ ತನ್ನ ಸಿದ್ಧಾಂತಗಳು ಮತ್ತು ಆಚರಣೆಯಲ್ಲಿನ ಅಂತರವನ್ನು ದೊಡ್ಡ ಮಟ್ಟದಲ್ಲಿ ಇರುವುದನ್ನು ಸಂಶೋಧನೆಗಳು ಹೊರ ತಂದಿವೆ. ಉದ್ಯೋಗ ಚೀಟಿ ವಿತರಿಸದಿರುವುದು, ನಿರುದ್ಯೋಗ ಭತ್ಯೆ ನೀಡದಿರುವುದು, ಕಾಮಗಾರಿಗಳನ್ನು ಯಂತ್ರಗಳಿಂದ ನಿರ್ವಹಿಸಿರುವುದು, ಮಸ್ಟರ್‌ರೋಲ್‌ನಲ್ಲಿ ನಡೆದ ಲೆಕ್ಕ ಪತ್ರಗಳ ವ್ಯತ್ಯಾಸಗಳು ಕಂಡುಬಂದಿರುವುದು, ಸಾಮಾಜಿಕ ಲೆಕ್ಕ ಪತ್ರಗಳಲ್ಲಿ ಮಹಿಳೆಯರಿಗೆ ಉದ್ಯೋಗ ನೀಡದೇ ಇರುವುದು, ಕೂಲಿ ವೇತನವನ್ನು ಬ್ಯಾಂಕ್ ಖಾತೆಗೆ ವಿತರಿಸದೇ ಇರುವುದು,

ಕೂಲಿಕಾರರ ಕುಟುಂಬಗಳಿಗೆ ಉದ್ಯೋಗ ಖಾತರಿ ಕಾಯಿದೆಯ ನಿಯಮಗಳು ಮತ್ತು ಉದ್ಯೋಗದ ಹಕ್ಕು ಇದರ ಬಗ್ಗೆ ಕನಿಷ್ಠ ಮಟ್ಟದ ತಿಳುವಳಿಕೆ ಇಲ್ಲದೆ ಇರುವುದು ಮುಂತಾದ ಲೋಪದೋಷಗಳನ್ನು ಇದುವರೆಗಿನ ಅಧ್ಯಯನಗಳು ವಿಶ್ಲೇಷಣೆ ಮಾಡಿವೆ. ಉದ್ಯೋಗ ಖಾತರಿ ಕಾಯಿದೆ ತನ್ನ ಉದ್ದೇಶಗಳಿಗೆ ಅನುಗುಣವಾಗಿ ಆಚರಣೆಗಳಲ್ಲಿ ಹಿಂದುಳಿದಿರುವುದು ಕಂಡುಬಂದಿದೆ. ಪ್ರಸ್ತುತ ಅಧ್ಯಯನವು ಕರ್ನಾಟಕದ ರಾಜ್ಯದ ತುಮಕೂರು ಜಿಲ್ಲೆಯಲ್ಲಿನ ಮಧುಗಿರಿ ಮತ್ತು ಗುಬ್ಬಿ ಎರಡು ತಾಲ್ಲೂಕುಗಳನ್ನು ಅಧ್ಯಯನ ಕ್ಷೇತ್ರಗಳನ್ನಾಗಿಟ್ಟುಕೊಂಡು ಸಂಶೋಧನೆ ಕೈಗೊಳ್ಳಲಾಗಿದೆ. ಇದರ ಮುಖ್ಯ ಉದ್ದೇಶ ಈ ಕ್ಷೇತ್ರಗಳಲ್ಲಿ ಉದ್ಯೋಗ ಖಾತರಿ ಯೋಜನೆಯ ಸಿದ್ಧಾಂತ ಮತ್ತು ಆಚರಣೆಗಳು ಏನಾಗಿವೆ ಎಂಬ ಅಂಶಗಳನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

1.2. ಸಮಸ್ಯೀಕರಣ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ 2005ರಲ್ಲಿ ಕಾಯಿದೆಯಾಗಿ ರೂಪಗೊಂಡು 2006ರಲ್ಲಿ ಅಗ್ರ ಸಮೀಕ್ಷೆಯ ಪರೀಕ್ಷೆಗಾಗಿ ದೇಶದ ಕೆಲವು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು ನಂತರ ಹಂತ ಹಂತವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ದೇಶವ್ಯಾಪಿ ಅನುಷ್ಠಾನದ ಪ್ರಕ್ರಿಯೆಗಳನ್ನು ವಿಸ್ತರಿಸಲಾಯಿತು. ಅದರ ಮೇಲೆ ನಡೆದ ಪ್ರಮುಖ ಅಧ್ಯಯನಗಳನ್ನು ಪರಾಮರ್ಶಿಸಿದಾಗ ಈ ಕೆಳಕಂಡ ಸಂಶೋಧನಾ ಪ್ರಶ್ನೆಗಳು ಎದುರಾಗುತ್ತವೆ. ಗ್ರಾಮೀಣರಿಗೆ ಉದ್ಯೋಗ ಖಾತರಿ ಯೋಜನೆಯ ಕಾಯಿದೆ ಬಗ್ಗೆ ತಿಳುವಳಿಕೆ ಮೂಡಿದೆಯೆ? ಉದ್ಯೋಗ ಚೀಟಿ ಸಮಗ್ರವಾಗಿ ವಿತರಿಸಿದೆಯೆ? ಉದ್ಯೋಗಕ್ಕಾಗಿ ಅರ್ಜಿ ಹಾಕಿದ ಮೇಲೆ 15 ದಿನದೊಳಗೆ ಉದ್ಯೋಗ ನೀಡಿದೆಯೇ? ಒಂದು ಆರ್ಥಿಕ ವರ್ಷದಲ್ಲಿ 100 ದಿನದ ಉದ್ಯೋಗದ ಭರವಸೆ ಈಡೇರಿಸಿದೆಯೆ? ನಿರುದ್ಯೋಗದ ಭತ್ಯೆ ನೀಡಿದೆಯೆ? ಕಾಮಗಾರಿ ನಡೆಯುವ ಸ್ಥಳದಲ್ಲಿ ಮೂಲಭೂತ ಸೌಲಭ್ಯಗಳನ್ನು ಗ್ರಾಮಪಂಚಾಯತಿ ಒದಗಿಸಿದೆಯೆ? ಸಕಾಲದಲ್ಲಿ ಕೂಲಿ ವೇತನ ಬ್ಯಾಂಕ್ ಅಥವಾ ಅಂಚೆ ಕಛೇರಿ ಮೂಲಕ ನೀಡಿರುವುದೇ? ಕೂಲಿ ಮೂಲಕವೇ ಗ್ರಾಮೀಣ ಪ್ರದೇಶದಲ್ಲಿ ದೀರ್ಘಕಾಲಿನ ಆಸ್ತಿ ನಿರ್ಮಾಣವಾಗಿವೆಯೇ? ಉದ್ಯೋಗದ ಬೇಡಿಕೆ ನೀಡಿದೆಯೇ? ಬೇಡಿಕೆ ಮತ್ತು ಅನುಷ್ಠಾನದ ಮಾಹಿತಿ ಜನರಿಗೆ ನೀಡುವ ಸಲುವಾಗಿ ಗ್ರಾಮಸಭೆಗಳನ್ನು ನಡೆಸಿದೆಯೇ? ಕಾಮಗಾರಿಗಳನ್ನು ಆಯ್ಕೆ ಮತ್ತು ತೀರ್ಮಾಕ್ಕೆ ವಾರ್ಡ್‌ಸಭೆ ನಡೆದಿದೆಯೇ? ದೀರ್ಘಕಾಲಿನ ಆಸ್ತಿಗಳು ಹೇಗೆ ನಿರ್ಮಾಣವಾಗಿವೆ? ಸಾಮಾಜಿಕ ಲೆಕ್ಕ ಪರಿಶೋಧನೆ ನಡೆದಿದೆಯೇ? ಗ್ರಾಮೀಣ ಕೂಲಿಕಾರರ ಜೀವನೋಪಾಯ ಸುಧಾರಣೆಯಾಗಿದೆಯೇ? ಮಹಿಳೆಯರಿಗೂ ಉದ್ಯೋಗ ನೀಡಿದ್ದಾರೆಯೇ? ಎಲ್ಲರಿಗೂ ಸಮಾನವಾದ ಕೂಲಿಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ನೀಡಲಾಗುತ್ತಿದೆಯೆ? ಪಾರದರ್ಶಕವನ್ನು ಕಾಯಿದೆ ಅನುಷ್ಠಾನದಲ್ಲಿ ತರುತ್ತಿದೆಯೇ?

ನಿರ್ವಹಣೆಯಲ್ಲಿ ಮಸ್ಟರ್ ರೋಲ್‌ನ ಪಾತ್ರವೇನು? ಮಾಹಿತಿ ಎಲ್ಲರಿಗೂ ತಲುಪುತ್ತಿದೆಯೇ? ಮಾಹಿತಿ ತಲುಪದಿದ್ದರೆ ಗ್ರಾಮ ಪಂಚಾಯತಿಗಳು ಇದರ ಬಗ್ಗೆ ಏಕೆ ಹೊಣೆಗಾರಿಕೆ ವಹಿಸುತ್ತಿಲ್ಲ? ಇನ್ನು ಮುಂತಾದ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಈ ಎಲ್ಲಾ ಪ್ರಶ್ನೆಗಳನ್ನು ನಿರ್ದಿಷ್ಟ ಉದ್ದೇಶಗಳಾಗಿ ಪ್ರಸ್ತುತ ಅಧ್ಯಯನ ರೂಪಿಸಿಕೊಂಡಿದೆ.

1.3. ಅಧ್ಯಯನದ ಉದ್ದೇಶಗಳು

1. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಿದ್ಧಾಂತ ಮತ್ತು ಆಚರಣೆಯನ್ನು ಅರ್ಥಮಾಡಿಕೊಳ್ಳುವುದು.
2. ಯೋಜನೆಯ ಸೌಲಭ್ಯಗಳು ಫಲಾನುಭವಿಗಳಿಗೆ ದೊರಕಿರುವ ಸ್ವರೂಪವನ್ನು ಅರ್ಥಮಾಡಿ ಕೊಳ್ಳುವುದು.
3. ಪ್ರಜಾಪ್ರಭುತ್ವ ಮತ್ತು ವಿಕೇಂದ್ರಿಕರಣದ ಆಶಯಕ್ಕೂ ಯೋಜನೆಗಿರುವ ಸಂಬಂಧವನ್ನು ಕಂಡುಹಿಡಿಯುವುದು.
4. ಉದ್ಯೋಗದ ಬೇಡಿಕೆ ಮತ್ತು ಪೂರೈಕೆ/ನೀಡಿಕೆಯ ಸ್ವರೂಪವನ್ನು ವಿಶ್ಲೇಷಿಸುವುದು.
5. ಯೋಜನೆಯ ಅನುಷ್ಠಾನದಲ್ಲಿ ಸ್ಥಳೀಯವಾಗಿ ಎದುರಾಗುವ ಸಾಂದರ್ಭಿಕ ಸವಾಲುಗಳನ್ನು ವಿಶ್ಲೇಷಿಸುವುದು.

1.4. ಅಧ್ಯಯನದ ವಿಧಾನ

ಉದ್ದೇಶಗಳನ್ನು ತಾರ್ಕಿಕವಾಗಿ ಪ್ರತಿಪಾದಿಸಲು ಅಗತ್ಯವಾದ ವಿಷಯಗಳು ಬೇಕು. ಅದನ್ನು ಪಡೆದುಕೊಳ್ಳಲು ಅವಶ್ಯಕವಾದ ಮತ್ತು ಅನುಕೂಲವಾಗುವಂತಹ ಅಧ್ಯಯನ ವಿಧಾನವನ್ನು ರೂಪಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವು ಮೂಲತಃ ದೃಷ್ಟಾಂತವಾದಿ(ಎಂಪಿರಿಕಲ್) ಮತ್ತು ಎಕ್ಸ್‌ಪ್ಲೋರೇಟಿವ್ ಅಧ್ಯಯನವಾಗಿದೆ. ಅಧ್ಯಯನಕ್ಕೆ ಬೇಕಾಗುವ ಆನುಷಂಗಿಕ ಮಾಹಿತಿಯನ್ನು ಸಾಹಿತ್ಯ ಸಮೀಕ್ಷೆಯ ಮೂಲಕ, ಈಗಾಗಲೇ ನಡೆದಿರುವ ಅಧ್ಯಯನಗಳು, ವರದಿಗಳು, ಸಮೀಕ್ಷೆಗಳು, ಜನಗಣತಿ ವರದಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಯೋಜನೆಗಳ ಇಲಾಖೆಯ ವರದಿಗಳಿಂದ ಮತ್ತು ಮಾರ್ಗದರ್ಶಿಸೂಚಿ ಇತ್ಯಾದಿ ಮೂಲ ವರದಿಗಳಿಂದ ಆನುಷಂಗಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸುವಾಗ ಈಗಾಗಲೇ ಇರುವ ಸೈದ್ಧಾಂತಿಕ ಸಂಗತಿಗಳನ್ನು ಪರಿಗಣಿಸಲಾಗಿದೆ. ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಿದ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಮಾಹಿತಿಯನ್ನು ವಿಶ್ಲೇಷಣೆ ಮಾಡಲಾಗಿದೆ. ಪ್ರಸ್ತುತ ಅಧ್ಯಯನವು ಮಾದರಿ ಆಯ್ಕೆಗೆ ಬಹು ಹಂತದ ಶ್ರೇಣಿಕೃತ ಯಾದೃಚ್ಛಿಕ

(ಸ್ಟ್ರಾಟಿಫಾಯಡ್ ರಾಂಡಮ್) ನಮೂನೆ ಉಪಯೋಗಿಸಿಕೊಂಡಿದೆ.ಇದನ್ನು ಮೂರು ಹಂತದಲ್ಲಿ ವಿನ್ಯಾಸಮಾಡಿಕೊಳ್ಳಲಾಗಿದೆ.

ಕರ್ನಾಟಕದ ರಾಜ್ಯದ ತುಮಕೂರು ಜಿಲ್ಲೆ ಅಭಿವೃದ್ಧಿಯಲ್ಲಿ ಸಾಧಾರಣವೆನಿಸಿದ್ದು ತುಮಕೂರು ಜಿಲ್ಲೆಯ ಒಳಗಿರುವ ತಾಲ್ಲೂಕುಗಳಲ್ಲಿ ಪ್ರಾದೇಶಿಕ ಅಸಮತೋಲನವಿದೆ. ಈ ಕುರಿತ ವಿವರವನ್ನು ಅಧ್ಯಾಯ ಎರಡರಲ್ಲಿ ನೀಡಲಾಗಿದೆ. ಇವುಗಳನ್ನು ಮುಂದುವರೆದ ಮತ್ತು ಹಿಂದುಳಿದ ಎಂಬ ಎರಡು ಪ್ರಕಾರಗಳಾಗಿ ವಿಂಗಡಿಸಬಹುದು. ಆ ಎರಡು ತಾಲ್ಲೂಕುಗಳಲ್ಲಿ ಮುಂದುವರೆದ ಗುಬ್ಬಿ ತಾಲ್ಲೂಕು ಮತ್ತು ಹಿಂದುಳಿದ ಪ್ರದೇಶವಾದ ಮಧುಗಿರಿ ತಾಲ್ಲೂಕುಗಳಲ್ಲಿ ಪ್ರತಿ ತಾಲ್ಲೂಕಿನಿಂದ ಒಂದೊಂದು ಗ್ರಾಮಪಂಚಾಯತಿಯನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಗುಬ್ಬಿ ತಾಲ್ಲೂಕಿನ ಬೆಲವತ್ತ ಗ್ರಾಮಪಂಚಾಯತಿಯಲ್ಲಿ 1486 ಕುಟುಂಬಗಳಿಗೆ ಶೇಕಡ 13.45ರಷ್ಟು ಮತ್ತು ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ 1558 ಕುಟುಂಬಗಳಿಗೆ ಶೇಕಡ 12.83ರಷ್ಟು ಕುಟುಂಬಗಳನ್ನು ಶ್ರೇಣಿಕೃತ ಯಾದೃಚ್ಛಿಕ ನಮೂನೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹೀಗೆ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಗ್ರಾಮ ಪಂಚಾಯತಿಯ ಗ್ರಾಮಗಳಿಂದ, ಅಧ್ಯಯನಕ್ಕೆ ಅಗತ್ಯವಾದ ಪ್ರಾಥಮಿಕ ಮಾಹಿತಿಯನ್ನು ಸಂಬಂಧಿಸಿದ ವೈಯುಕ್ತಿಕ, ಕುಟುಂಬಗಳ ಜನಪ್ರತಿನಿಧಿಗಳಿಂದ ನೇರ ಸಂದರ್ಶನ, ಗುಂಪು ಚರ್ಚೆ, ಸಮಯ ಮತ್ತು ಸಂದರ್ಭಗಳನ್ನು ಅವಲೋಕಿಸುವ ಮೂಲಕ ಕ್ಷೇತ್ರ ಕಾರ್ಯದ ಮೂಲಕ ಸಿದ್ದ ಪಡಿಸಿಕೊಳ್ಳಲಾಯಿತು.

ಉದ್ದೇಶಗಳನ್ನು ಅಧ್ಯಯನಕ್ಕೊಳಪಡಿಸುವ ಉದ್ದೇಶದಿಂದ ಅನುಕೂಲವಾಗುವಂತೆ ಪ್ರಶ್ನಾವಳಿಗಳ ಮೂಲಕವೂ ಮಾಹಿತಿ ಸಂಗ್ರಹಿಸಿಕೊಳ್ಳಲಾದೆ. ಹೀಗೆ ಸಂಗ್ರಹಿಸಿದ ಪ್ರಾಥಮಿಕ ಮಾಹಿತಿಯನ್ನು ಸರಳ ಕೋಷ್ಟಕಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹೀಗೆ ಮಾಡುವಾಗ ಅಧ್ಯಯನದ ಉದ್ದೇಶಗಳಿಗೆ ಅನುಗುಣವಾಗಿ ವಿಶ್ಲೇಷಣೆ ಮಾಡುವಾಗ ಪ್ರಾಥಮಿಕ ಮಾಹಿತಿಯನ್ನು ಆನುಷಂಗಿಕ ಮಾಹಿತಿಯೊಂದಿಗೆ ತಾಳೆ ನೋಡಿ ಈಗಾಗಲೇ ಇರುವ ಮತ್ತು ನಿಗದಿಪಡಿಸಿರುವ ಮಾನದಂಡಗಳನ್ನು ಅಸ್ತಿತ್ವದಲ್ಲಿ ಇರುವ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಜೊತೆ ತಾಳೆ ನೋಡಿ, ವ್ಯತ್ಯಾಸ ಮತ್ತು ಅಂತರಗಳನ್ನು ಕಂಡುಕೊಳ್ಳಲು ಪ್ರಯತ್ನ ಮಾಡಲಾಗಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ನಿಯಮಾವಳಿಗೆ ಅನುಗುಣವಾಗಿ ಅಧ್ಯಯನ ಕ್ಷೇತ್ರದಲ್ಲಿ ಕಾಯಿದೆಯ ಅನುಷ್ಠಾನ ಹೇಗಾಗಿದೆ. ಜನರಿಗಿರುವ ಕಾಯಿದೆಯ ಮಾಹಿತಿ, ಜಾಬ್ ಕಾರ್ಡ್ ವಿತರಣೆ, ವಾರ್ಡ್‌ಸಭೆ, ಗ್ರಾಮಸಭೆ ನಡೆದಿರುವುದರ, ಜನರ ಬೇಡಿಕೆಯ ಕಾಮಗಾರಿಗಳ ಆಯ್ಕೆ, ಅರ್ಜಿಹಾಕಿದ 15 ದಿನಗಳೊಳಗೆ ಕೂಲಿ ನೀಡಿರುವುದರ ಮಹಿತಿ, ಕಾಮಗಾರಿ ನಡೆಯುವ ಸ್ಥಳದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವುದು, ಕೆಲಸ ಮಾಡಿದ 15 ದಿನದೊಳಗೆ ಕೂಲಿ ವೇತನ ನೀಡುವುದು, ಕೂಲಿ ವೇತನವನ್ನು ಬ್ಯಾಂಕ್ ಮೂಲಕವೇ ಪಡೆಯುವುದು ಒಂದು ಆರ್ಥಿಕ ವರ್ಷದಲ್ಲಿ 100ದಿನಗಳ ಉದ್ಯೋಗ ನೀಡುವುದು, ಕಾಯಿದೆ ಅಡಿ ಗುತ್ತಿಗೆದಾರರನ್ನು

ಮತ್ತು ಯಂತ್ರಗಳನ್ನು ನಿಷೇಧಿಸಿರುವುದು, ಕಾಮಗಾರಿಗಳನ್ನು ಮಾನವ ಶ್ರಮದ ಮೂಲಕವೇ ಮಾಡುವುದು. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ದೀರ್ಘಕಾಲಿನ ಆಸ್ತಿಗಳನ್ನು ನಿರ್ಮಾಣ ಮಾಡುವುದು ಇತ್ಯಾದಿ ಕೆಲಸ ಅಥವಾ ಕಾಮಗಾರಿಗಳನ್ನು ಪಾರದರ್ಶಕತೆ ಮತ್ತು ಸಾಮಾಜಿಕ ಲೆಕ್ಕಪತ್ರ ತಪಾಸಣೆಯಲ್ಲಿ ಕಾರ್ಮಿಕರನ್ನು ಒಳಗೊಂಡಂತೆ ಅಧ್ಯಯನ ಮಾಡಲಾಗಿದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ವೈಯುಕ್ತಿಕ ವಿವರಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ಗುಣಾತ್ಮಕವಾದ ಮಾಹಿತಿಗಳನ್ನು ಪರಿಮಾಣಾತ್ಮಕ ಮಾಹಿತಿ ಜೊತೆ ತಾಳೆ ನೋಡಿ ವಿಶ್ಲೇಷಣೆ ಮಾಡಿ ಕೆಲವು ನಿರ್ಧಾರಗಳಿಗೆ ಬರಲಾಗಿದೆ.

1.5. ಅಧ್ಯಯನದ ಮಿತಿ

ಈ ಅಧ್ಯಯನ ಕ್ಷೇತ್ರವನ್ನು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಭೆಲವತ್ತ ಗ್ರಾಮ ಪಂಚಾಯತಿ ಮತ್ತು ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮ ಪಂಚಾಯತಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಹೀಗಾಗಿ ಈ ಅಧ್ಯಯನ ವ್ಯಾಪ್ತಿಯಲ್ಲಿ ಮಾತ್ರ ಅಧ್ಯಯನ ಮಾಡಲಾಗಿದೆ. ಈ ಎರಡು ಪಂಚಾಯತಿಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅಧ್ಯಯನದ ಮೂಲ ಉದ್ದೇಶವಾಗಿ ಪರಿಗಣಿಸಿ ಮಿತಿಗೊಳಿಸಲಾಗಿದೆ. ಪ್ರಸ್ತುತ ಬಹು ಪ್ರಕಾರದ ಗ್ರಾಮೀಣಾಭಿವೃದ್ಧಿ ಯೋಜನೆಗಳು ಇದ್ದರೂ ಅದರಲ್ಲಿ ಪ್ರಮುಖವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಗೆ ಮಾತ್ರ ಈ ಅಧ್ಯಯನ ಮಾಡಲಾಗಿದೆ. ಅಧ್ಯಯನ ಕ್ಷೇತ್ರದ ಗ್ರಾಮ ಪಂಚಾಯತಿಗಳಲ್ಲಿ 2009–10 ರಿಂದ 2013–14ರವರೆಗೆ ಅನುಷ್ಠಾನವಾಗಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಕೇಂದ್ರೀಕರಿಸಲಾಗಿದೆ. ಗ್ರಾಮ ಪಂಚಾಯತಿ ಮಟ್ಟದ ಅಂಕಿ ಸಂಖ್ಯೆಗಳನ್ನು ಬಳಸಿಕೊಂಡು ವಿಶ್ಲೇಷಣೆ ಮಾಡಿರುವುದು ಅಧ್ಯಯನದ ಮಿತಿಯಾಗಿದೆ.

1.6. ಅಧ್ಯಯನದ ಮಹತ್ವ

ಈ ಅಧ್ಯಯನ ಕ್ಷೇತ್ರದಲ್ಲಿ ಬಹಳ ಮುಖ್ಯವಾಗಿ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಸ್ವರೂಪಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅನುಷ್ಠಾನವನ್ನು ಹೇಗೆ ಪ್ರಭಾವಿಸಿವೆ ಎನ್ನುವುದನ್ನು ಅರ್ಥಮಾಡಿಕೊಳ್ಳುವ ಮೂಲಕ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ. ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಎದುರಾಗಿರುವ ಸಾಂಸ್ಕೃತಿಕ ಸವಾಲುಗಳನ್ನು ಬಿಡಿಸಿ, ನೀತಿ ನಿರೂಪಣೆಗೆ ಮಹತ್ವದ ಸಮಾಜಶಾಸ್ತ್ರೀಯ ನೆಲೆಗಳು ನೀಡುವ ದೃಷ್ಟಿಯಿಂದ ಪ್ರಸ್ತುತ ಅಧ್ಯಯನ ಮಹತ್ವದಾಗಿದೆ.

1.7. ಅಧ್ಯಾಯಗಳ ಸ್ವರೂಪ

ಪ್ರಸ್ತುತ ಪ್ರಬಂಧವು ಒಟ್ಟು ಎಂಟು ಅಧ್ಯಾಯಗಳನ್ನು ಹೊಂದಿದೆ. ಈ ಅಧ್ಯಾಯಗಳು ಅವುಗಳ ಒಳಗೆ ಇರುವ ವಿಷಯಗಳ ವಿವರಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

ಅಧ್ಯಾಯ ಒಂದರಲ್ಲಿ ಪ್ರಸ್ತಾವನೆ ಪ್ರಮುಖ ಸಂಶೋಧನಾ ಅಧ್ಯಯನಗಳ ವಿಶ್ಲೇಷಣೆ ಪ್ರಮುಖ ಮೂಲಕ ಪ್ರಶ್ನೆಗಳು, ಅಧ್ಯಯನದ ಉದ್ದೇಶಗಳನ್ನು, ಅಧ್ಯಯನದ ವಿಧಾನ, ಅಧ್ಯಯನ ಕ್ಷೇತ್ರದ ಪರಿಚಯ, ಅಧ್ಯಯನದ ಮಿತಿಗಳು, ಅಧ್ಯಯನದ ಮಹತ್ವ ವಿವರಣೆ ನೀಡಲಾಗಿದೆ. ಈ ಅಧ್ಯಾಯದಲ್ಲಿ ಬಡತನ, ಆಹಾರದ ಭದ್ರತೆ ಮತ್ತು ಬಡತನ ನಿರ್ಮೂಲನೆಗಾಗಿ ದೈಹಿಕ ಶ್ರಮದ ಕೂಲಿ ಉದ್ಯೋಗಗಳು ಹಿಂದಿನಿಂದ ಇಲ್ಲಿಯ ತನಕ ಬೆಳೆದು ಬಂದ ದಾರಿಯ ಬಗ್ಗೆ ಹಾಗೂ ಉದ್ಯೋಗದ ಹಕ್ಕು ಮತ್ತು ಕಾಯಿದೆಯ ಬಗ್ಗೆ ನೂತನವಾಗಿ ಬಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನದ ಬಗ್ಗೆ ಬಂದ ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ಬಂದ ಲೇಖನಗಳು, ಅಂತರ್ಜಾಲದ ಲೇಖನಗಳು, ಸಂಶೋಧನಾ ವರದಿಗಳು, ಯೋಜನಾ ವರದಿಗಳು, ಯೋಜನಾ ಪರಿವೀಕ್ಷಣ ವರದಿಗಳು, ಸಂಶೋಧನಾ ಕೃತಿಗಳು, ಮಾನವ ಅಭಿವೃದ್ಧಿ ವರದಿಗಳು ಇತ್ಯಾದಿ ಮೂಲಗಳಿಂದ ಪಡೆದ ಮಾಹಿತಿಯನ್ನು ಬಳಸಿಕೊಂಡು ವಿಸ್ತೃತವಾಗಿ ಚರ್ಚಿಸಲಾಗಿದೆ. ಉದ್ಯೋಗ ಖಾತರಿ ಕಾಯಿದೆಯ ಮೇಲೆ ಅಧ್ಯಯನದ ಉದ್ದೇಶಗಳಿಗನುಣವಾಗಿ ಯೋಜನೆಯ ಅರಿವು, ಉದ್ಯೋಗದ ಚೀಟಿ, ಉದ್ಯೋಗದ ಬೇಡಿಕೆ ಮತ್ತು ನೀಡಿಕೆ, 100ದಿನಗಳ ಉದ್ಯೋಗದ ಭರವಸೆ, ಉದ್ಯೋಗ ನೀಡುವ, ಕೂಲಿ ವೇತನ ನಿಯಮಾನುಸಾರ ಬ್ಯಾಂಕ್ ಮೂಲಕವಾಗಿ ನೀಡುವ, ಕಾಮಗಾರಿ ಆಯ್ಕೆಗೆ ವಾರ್ಡಸಭೆ, ಗ್ರಾಮಸಭೆಯಲ್ಲಿ ಸಮುದಾಯದ ತೀರ್ಮಾನ, ಉದ್ಯೋಗದ ಸ್ಥಳದಲ್ಲಿ ಮೂಲ ಸೌಕರ್ಯ ಒದಗಿಸಿರುವುದು, ದೀರ್ಘಕಾಲಿನ ಆಸ್ತಿ ನಿರ್ಮಾಣ, ನಿರುದ್ಯೋಗ ಭತ್ಯೆ, ಸಾಮಾಜಿಕ ಲೆಕ್ಕಪತ್ರ ಮುಂತಾದ ವಿಸ್ತೃತವಾಗಿ ಚರ್ಚಿಸಿ ಮತ್ತು ಪ್ರಶ್ನೆಗಳನ್ನು ಚರ್ಚೆಗೆ ಎತ್ತಿಕೊಳ್ಳಲಾಗಿದೆ.

ಅಧ್ಯಾಯ-ಎರಡರಲ್ಲಿ ಅಧ್ಯಯನದ ಜಿಲ್ಲೆಯ ಭೌಗೋಳಿಕ ಲಕ್ಷಣಗಳು, ಸಾಗುವಳಿಯ ವಿವರ, ಮುಖ್ಯ ತೋಟಗಾರಿಕೆ ಬೆಳೆಗಳು, ಹವಾಮಾನಕ್ಕನುಗುಣವಾಗಿರುವ ವಾತವರಣ, ತುಮಕೂರು ಜಿಲ್ಲೆಯ ಕುಟುಂಬಗಳ ವಿವರ, ಜಿಲ್ಲೆಯ ಜನಸಂಖ್ಯೆ ವಿವರ, ಶಿಕ್ಷಣ ಮತ್ತು ಸಾಕ್ಷರತಾ ವಿವರ, ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪಕ್ಷಿನೋಟ, ಜಿಲ್ಲೆಯಲ್ಲಿ ಕೃಷಿ ಕೂಲಿಕಾರರ ವಿವರ, ಜಿಲ್ಲೆಯಲ್ಲಿ ಆರೋಗ್ಯ ಕೇಂದ್ರಗಳ ವಿವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೇವೆಗಳ ವಿವರ, ಜಿಲ್ಲೆಯಲ್ಲಿ ಕುಡಿಯುವ ನೀರಿನ ವಿವರ, ಜಿಲ್ಲೆಯಲ್ಲಿ ಮಳೆ ಬೀಳುವ ಪ್ರಮಾಣದ ವಿವರ, ಜಿಲ್ಲೆಯ ಪಶುಪಾಲನೆ ವಿವರ, ನೀರಾವರಿ ಪ್ರದೇಶದ ವ್ಯಾಪ್ತಿಯ ವಿಸ್ತೀರ್ಣದ ವಿಶ್ಲೇಷಣೆ, ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮ ಪಂಚಾಯತಿಗಳ ಎಲ್ಲ ವಿವರಗಳನ್ನು ಹೇಳಲು ಪ್ರಯತ್ನ ಮಾಡಲಾಗಿದೆ.

ಅಧ್ಯಾಯ-ಮೂರರಲ್ಲಿ ಉದ್ಯೋಗ ಖಾತರಿ ಯೋಜನೆಯ ಐತಿಹಾಸಿಕ ಹಿನ್ನಲೆ, ಉದ್ಯೋಗ, ಬಡತನ ಮತ್ತು ಆಹಾರದ ಭದ್ರತೆ ಇವುಗಳ ನಡುವೆ ಇರುವ ಸಂಬಂಧಗಳು, ಉದ್ಯೋಗ ಸೃಷ್ಟಿಯ ಸಿದ್ಧಾಂತ ಕಾರ್ಯತಂತ್ರ ಹಾಗೂ ಬಡತನದ ನಡುವಿನ ಅಂತರ್‌ಸಂಬಂಧ, ಉದ್ಯೋಗ ಸೃಷ್ಟಿಯ ಸಂದರ್ಭದಲ್ಲಿ ಬಡತನದ ಸಿದ್ಧಾಂತಗಳ ಪ್ರಭಾವ, ಬಡತನ ನಿರ್ಮೂಲನೆಗಾಗಿ –

ಉದ್ಯೋಗ ಹಿಂದಿನ ಅನುಭವಗಳನ್ನು ವಿಶ್ಲೇಷಣೆ ಮಾಡಲಾಗಿದೆ. ನಿರುದ್ಯೋಗ ಮತ್ತು ಆಹಾರದ ಭದ್ರತೆಯ ಕೊರತೆಯಿಂದ ವ್ಯತಿರಿಕ್ತ ಪರಿಣಾಮಗಳು ಹಾಗೂ ಉದ್ಯೋಗ ಯೋಜನೆಗಳು ಬೆಳೆದು ಬಂದ ದಾರಿಯನ್ನು ಚರ್ಚಿಸಲಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅದರ ಹುಟ್ಟು ಮತ್ತು ಬೆಳವಣಿಗೆ ಕಾರಣಗಳು, ಅಂದಿನ ಪರಿಸ್ಥಿತಿ ಮತ್ತು ಪ್ರಯತ್ನಗಳನ್ನು ಅಧ್ಯಾಯ ಮೂರರಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ–ನಾಲ್ಕರಲ್ಲಿ ಅಧ್ಯಯನಕ್ಕೆ ಒಳಪಡಿಸಿ ಸಾಮಾಜಿಕ–ಆರ್ಥಿಕ ಹಿನ್ನೆಲೆ, ಲಿಂಗ ಮತ್ತು ವಯಸ್ಸಿನ ವಿವರ, ವೈವಾಹಿಕ ಸ್ಥಿತಿ, ಶೈಕ್ಷಣಿಕ ಅಂತಸ್ತು, ಧಾರ್ಮಿಕ ಅಂತಸ್ತು, ಜಾತಿ ಮತ್ತು ಕೌಟುಂಬಿಕ ಪದ್ಧತಿ, ಸ್ಥಿರ ಆಸ್ತಿಯ ವಿವರ, ವಸತಿ ವ್ಯವಸ್ಥೆ, ಮಾಸಿಕ ಆದಾಯ ಇವುಗಳನ್ನು ವಿವರಿಸಲಾಗಿದೆ.

ಅಧ್ಯಾಯ–ಐದರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಸಿದ್ಧಾಂತ ಆಚರಣೆಯ ವಿಶ್ಲೇಷಣೆ ಇದೆ ಉದ್ಯೋಗ ಖಾತರಿ ಕಾಯಿದೆ ಅನುಷ್ಠಾನಕ್ಕೆ ತಂದಿರುವ, ಜನರಿಗಿರುವ ಮಾಹಿತಿಯ ಬಗ್ಗೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಜನರಿಗೆ ಒದಗಿಸಿದ ತಿಳಿವಳಿಕೆಯ ಮೂಲಗಳು, ಜನರಿಗೆ ಬೇಡಿಕೆ ನೀಡಿರುವುದರ ವಿಧಾನ, ಉದ್ಯೋಗ ಖಾತರಿ ಕಾಯಿದೆಯ ನೋಂದಣಿ ವಿವರ, ನೋಂದಣಿ ಮಾಡಿದ ಮೇಲೆ ಉದ್ಯೋಗದ ಚೀಟಿ ಫಲಾನುಭವಿಗಳು ಪಡೆದ ಕಾಲಾವಧಿ, ಕೂಲಿಕಾರರಿಗೆ ಬ್ಯಾಂಕ್ ಖಾತೆ, ಉದ್ಯೋಗ ಖಾತರಿ ಯೋಜನೆಯಲ್ಲಿ ಆಯ್ಕೆಯಾದ ಕಾಮಗಾರಿಗಳು ಜನರಿಗೆ ಮಾಹಿತಿಗಾಗಿ ಪ್ರಕಟಣೆ ಮಾಡಿರುವುದು, ಉದ್ಯೋಗ ಖಾತರಿ ಯೋಜನೆ ಅಡಿ ಅರ್ಜಿಹಾಕಿದ ಮೇಲೆ ಉದ್ಯೋಗ ನೀಡಿರುವುದು, ನಿರುದ್ಯೋಗ ಭತ್ಯೆ, ಉದ್ಯೋಗ ಖಾತರಿ ಕಾಯಿದೆ ಅಡಿ ಕೂಲಿಕಾರರಿಗೆ ಎಷ್ಟು ದಿನದೊಳಗಾಗಿ ಕೂಲಿ ನೀಡಿರುವುದು, ಕಾಮಗಾರಿ ನಡೆಯುವ ಸ್ಥಳದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿರುವುದು, 100 ದಿನಗಳ ಉದ್ಯೋಗ ನೀಡಿರುವುದರ ಬಗ್ಗೆ, ಉದ್ಯೋಗ ಖಾತರಿ ಯೋಜನೆ ಅಡಿ ಕೆಲಸ ಮಾಡಲು ಮಹಿಳೆಯರಿಗೆ ಅವಕಾಶ ಮತ್ತು ಸಮಾನವಾದ ಕೂಲಿ ಇತ್ಯಾದಿಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ–ಆರು (ಪ್ರಜಾಪ್ರಭುತ್ವ ಮತ್ತು ವಿಕೇಂದ್ರೀಕರಣದ ಆಶಯಕ್ಕೂ ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಿರುವ ಸಂಬಂಧ, ಕಾಮಗಾರಿ ಗುರ್ತಿಸಲಿಕ್ಕೆ ವಾರ್ಡಸಭೆ ಗ್ರಾಮಸಭೆ ಯಾವ ಸ್ಥಳದಲ್ಲಿ ನಡೆದಿರುವುದರ ವಿವರ, ಉದ್ಯೋಗ ಖಾತರಿ ಯೋಜನೆ ಗ್ರಾಮಸಭೆಗಳು ನಡೆದಿರುವುದರ ವಿವರ, ಎನ್.ಎಂ.ಆರ್ ದಾಖಲೆ ನಿರ್ವಹಿಸಿರುವುದು, ಗ್ರಾಮ ಪಂಚಾಯತ್‌ಗೆ ಇಂಜನಿಯರ್ ನೇಮಕ ಮತ್ತು ಕೆಲಸವನ್ನು ಅಳೆಯುತ್ತಿರುವವರ ವಿವರ, ಕೆಲಸದ ಅವಧಿಯಲ್ಲಿ ಕೂಲಿಕಾರರಿಗೆ ಅಪಘಾತ ಸಂಭವಿಸಿ ಮತ್ತು ಉಚಿತವಾಗಿ ಚಿಕಿತ್ಸೆ ನೀಡಿರುವುದರ ವಿವರ, ಕಾಯಕ

ಬಂಧು ಸಂಘದ ವಿವರ, ಸಾಮಾಜಿಕ ಲೆಕ್ಕ ಪತ್ರದ ಪರಿಶೀಲನೆ ವಿವರ, ಇವುಗಳನ್ನು ಚರ್ಚಿಸಲಾಗಿದೆ. ಗ್ರಾಮ ಪಂಚಾಯತ್‌ಗೆ ಇಂಜಿನಿಯರ್ ನೇಮಕ ಮತ್ತು ಕೆಲಸವನ್ನು ಅಳೆಯುತ್ತಿರುವವರ ವಿವರ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಸಮಾರೋಪ ಈ ಅಧ್ಯಾಯವು ಇಡೀ ಅಧ್ಯಯನದ ಸಂಕ್ಷಿಪ್ತ ರೂಪವಾಗಿದ್ದು, ಅಧ್ಯಯನದಲ್ಲಿ ಫಲಿತಗಳ ಹಿನ್ನಲೆ ಇಟ್ಟುಕೊಂಡು ಯೋಜನೆಯ ಸುಸ್ಥಿರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ಕೊನೆಯ ಟಿಪ್ಪಣಿಗಳು

ಕನ್ನಡ

1 ಪ್ರಶಾಂತ್.ಎಚ್.ಡಿ., (2014), ಶಿಕ್ಷಣ ಹಕ್ಕು ಕಾಯಿದೆ–2009, ಹಕ್ಕಲ್ಲ ಹಕ್ಕಿನ ಪ್ರತೀಕ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

3. ಪ್ರಶಾಂತ್.ಎಚ್.ಡಿ., (2016), ಮಾರುಕಟ್ಟೆ ಮತ್ತು ಜ್ಞಾನ, ಅರುಹು ಕುರುವು, ವಿಸ್ಮಯ ಫೌಂಡೇಶನ್, ಮೈಸೂರು.

4. ಪ್ರಶಾಂತ್.ಎಚ್.ಡಿ., (2015), ಕೃಷಿ ಮತ್ತು ಸಂಸ್ಕೃತಿ, ಸಾಮಾಜಿಕ ಆಕಾರ ರೇಖೆ, ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ.

5 ಜನಾರ್ದನ, (2014), ಬಡತನದ ವಿವಿಧ ರೂಪಗಳು ಅವುಗಳನ್ನು ನಿರ್ಧರಿಸುವ ಮಾನದಂಡಗಳು, ಪ್ರಸಾರಾಂಗ.ಕನ್ನಡ ವಿಶ್ವವಿದ್ಯಾಲಯ. ಹಂಪಿ.

6 ಚಂದ್ರಪೂಜಾರಿ.ಎಂ., (2004), ಜನಾಯೋಜನೆ ಹೈದರಾಬಾದ್ ಕರ್ನಾಟಕದ ಅನುಭವ ಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

7 ಚಂದ್ರಶೇಖರ್ ಟಿ.ಆರ್.(2005), ಜನರ ಯೋಜನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

8 ಸಿದ್ದಗಂಗಮ್ಮ, (2010), ಕರ್ನಾಟಕದಲ್ಲಿ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

9 ವಿಟೋಬ ಮತ್ತು ವಗ್ಗಿ, (2011), "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಒಂದು ಅವಲೋಕನ" ಹೊಸತು, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.

10 ನಿಕಿಲ್ ಡೇ ಮತ್ತು ತಂಡದವರು, (2006), ಉದ್ಯೋಗ ಖಾತರಿ ಕಾಯಿದೆ, ನ್ಯಾಷನಲ್ ಬುಕ್ ಟ್ರಸ್ಟ್, ಹೊಸದೆಹಲಿ.

11 ರಿತಿಕಾ.ಕೆ. ಮತ್ತು ನಂದಿನಿ ಎನ್(2009), "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಮಹಿಳಾ ಕೂಲಿಕಾರರು ಮತ್ತು ಅನುಭವ" ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಅಕ್ಟೋಬರ್ 24 ವಾಲ್ಯುಮ್ ಎಕ್ಸ್ ಎಲ್ ಪಿ ವಿ ನಂ 33.

12 ಶ್ರೀಧರ.ಎ., (2012), ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

13 ಥ್ಯಾಕೋರ್ ಬಿ ಕೆ ಮತ್ತು ಬ್ರಜೇಶ್ ಕರ್ ಚೌದರಿ, (2010) "ಜಾರ್ಕಂಡ್ ನ ಹಳ್ಳಿಗಳಲ್ಲಿ ಉದ್ಯೋಗ ಮತ್ತು ಕೂಲಿಗಳು" ಆರ್ಥಿಕ ಪುನರ್ ರಚನೆಗಳ ಕಾಲದಲ್ಲಿನ ಒಂದು ಅಧ್ಯಯನ, ಸದರನ್ ಎಕನಾಮಿಸ್ಟ್, ಬೆಂಗಳೂರು.

14 ಮಹಿರ್ ಷಾಹ್, (1985), "ಕನಿಯಟ್ಟಿ ಫಾರಂ ಆಫ್ ಲೇಬರ್, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ.

15 ಬಾಗಲಕೋಟಿ ಮತ್ತು ಪೊಟೆ ಎಸ್ ಎಮ್, (2011). "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಸಾಮಾಜಿಕ ಆರ್ಥಿಕ ಸಬಲೀಕರಣದ ದೂರ ದೃಷ್ಟಿ ಮತ್ತು ಸಮಸ್ಯೆಗಳು." ಪ್ರತಿಭಾನ್ವೇಷಣ, ಧಾರವಾಡ.

16 ಸಿಖಾ(2011) "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಜೊತೆಗೆ ವಿವಿಧ ಇಲಾಖೆಗಳ ಕಾರ್ಯತಂತ್ರಗಳ ಸಂಯೋಜನೆ", 2011 ಕರ್ನಾಟಕ ವಿಕಾಸ. ಬೆಂಗಳೂರು.

17 ಇಳಾ ಪಾಟ್ನಾಯಕ್, (2011). "ಪರಿಹಾರದ ಬದಲು ಸಮಸ್ಯೆಯಾಯಿತೆ" ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಕನ್ನಡ ಪ್ರಭ, ಬೆಂಗಳೂರು.

18 ಭೀಮೇಶ, (2010), ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಹಿಳಾ ಪ್ರತಿನಿಧೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

19 ಶಂಕರ್ ಕೆ.ಆರ್(2009), ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವರದಿ ಪ್ರಕಾರ, ಬೆಂಗಳೂರು.

20 ಜಿ.ವಿ.ಜೋಷಿ, (2013), ಗಾಂಧಿ ಹೆಸರಿನ ಯೋಜನೆಯಲ್ಲಿ ಕಾಣದ 'ಖಾತ್ರಿ'(ಜಸ್ಟಿ ಕೆ.ಎಸ್.ಹೆಗಡೆ ಇನ್ಸಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ನಿಟ್ಟೆ) ಪ್ರಜಾವಾಣಿ ಪತ್ರಿಕೆ. ಬೆಂಗಳೂರು.

21 ಸಂತೋಷ ಈ ಚನಗುಂಡಿ, (2013), ದುಡಿದ ಕೈಗಳಿಗೆ ಕೂಲಿ ನೀಡದ ಸರ್ಕಾರ ಉದ್ಯೋಗಖಾತರಿ: ಕೋಟಿ ಬಾಕಿ ಪ್ರಜಾವಾಣಿ ಪತ್ರಿಕೆ, ಬೆಂಗಳೂರು, ಪುಟದ ಸಂಖ್ಯೆ 4.

22 ವಿಲ್. ಫ್ರೆಡ್ ಡಿಸೋಜ. (2008), ಇಡೀ ರಾಜ್ಯಕ್ಕೆ ಬಂದ ಉದ್ಯೋಗ ಖಾತರಿ ಯೋಜನೆಯಿಂದ ಯಾರಿಗೆ ಲಾಭ, ಸಾಲು ಹೆಜ್ಜೆ ಮಾಸಿಕಬೆಂಗಳೂರು. ಪುಟ ಸಂಖ್ಯೆ 5–7.

23 ಶ್ರೀಧರ, ಎಂ.ವಿ, (2008), ಮಾನವ ಶ್ರಮಕ್ಕೆ ಇದೂ ಬೆಂಬಲ ಬೆಲೆ, ಕನ್ನಡ ಪ್ರಭ, ಬೆಂಗಳೂರು.

24 ಫ್ರೆಡ್ ಡಿಸೋಜ, ವಿಲ್.(2008), ಇಡೀ ರಾಜ್ಯಕ್ಕೆ ಬಂದ ಉದ್ಯೋಗ ಖಾತರಿ ಯೋಜನೆಯಿಂದ ಯಾರಿಗೆ ಲಾಭ, ಸಾಲು ಹೆಜ್ಜೆ ಮಾಸಿಕ.. ಬೆಂಗಳೂರು

25 ವಸಂತರಾಜ ಕೆ.ಎನ್(2009), ಆಹಾರದ ಭದ್ರತೆಗೆ ಉದ್ಯೋಗದ ಭದ್ರತೆ, ಹಸಿವಿನ ಸಾಮ್ರಾಜ್ಯಕ್ಕೆ ಕೊನೆಯಂತು, ಸಿಂತನ ಪುಸ್ತಕ, ಜಯನಗರ ಬೆಂಗಳೂರು.

ಇಂಗ್ಲೀಷ್

26 Vasavi A. R "Suicides and the making of India" Agriculture the Stress , south Africa Review of Sociology 40(1) 2009.

27 NFHS -3 (2007): 2005-06 National family health survey , Ministry of health and Family welfare, Government of India .

28 Sen , G.,A Iyer and A George (2002) : Class, Gender and Health Equity : Lessons from Liberalisation in India Harvard centre for population and development studies , working paper series , volume 12, No 3.

29 Nikhil De, John Drez and Rithika Khera (2006), .

30 Chhaya Datar, (2007), Failure of National Rural Employment Guarantee Scheme in Maharashtra, Economic & Political Weekly, Vol 42, No-34 (Aug 25-31, 2007).

31 Dreze J and C Oldigs ,(2007), How is NREGA doing? (Accessed from the following website www.ansiss.org/doc/seminar 2007 july 20-22 jean_dreze.doc)

32 Palanichami AP, (2012) "A study on Mahtma Gandhi National Rural Employment Guarantee Programe (MNREGP) in Thuinjapuram block.

33 Amartya Sen and Jean dreze, (2013),An uncertain Glory , by Chitta Behera, 4A Jubilee Tower, Choudhary Bazar, Cuttack-9, Orissa.

34 Mihir Shah, (2007), Employment Guarantee, Civil Society and Indian Democracy, Economic & Political Weekly, May 2007, Vol No VI.

35 Mihir Shah, (2004),NREGA: A Historic Opportunity, Economic & Political Weekly, August 2004 Vol No V.

36 Karuna Vakati Aakella and Sowmya Kidambi. (2007). Challanging Corruption with Social Audits, Economic & Political Weekly, February 3rd.

37 Karuna Vakati Aakella and Sowmya Kidambi. (2007). Social Audits in Andrapradesh, A Process in Evoluation, Economice& Political Weekly, November 24th.

38 Joachim Von Braun, (1995), Employment for Poverty Reduction and Food Security: Concept, Research Issuses, and Overview.International Food Policy Research Institute Seveenteenth Street, N.W.Washington, D.C,U.S.A.

39 Venugopal, (2011),"Mahatma Gandhi National Rural Employment Guarantee Scheme in Kerala" Southern Economist July 15.

40 Shivaiah.G and Nageswarao, (2011), "Andhra Pradesha Rural Employment Guarantee Scheme; Its Impact on the Rural Areas of Anantapura District in Kerala"Southern Economist July 1.

41 Pramathesh Ambasta, Vijay Shankar, Mihirshah, (2008). "Two Years of NREGA the Road Ahead;Economice & Political Weekly.February 23.

42 Kutsva Banargi and Partha Sha, (2010), The NREGA, The Maoists and the Development State, Economic & Political Weekly.Vol XLV No28. July 10.

43 Pramathesh Ambasta, Vijay Shankar, Mihirshah, (2008)."Two Years of NREGA the Road Ahead; Economic & Political Weekly.February 23.

44 Swaminathan M.S (2011),"To the hungry, god is bread" Hindu paper. October,1, Bangalore.

45 Andita Adhikari, Karthik Bhatiya, (2010) "NREGA Wage Payments": Can We Bank on the Banks? Economic & Political Weekly.Vol XLV No 1. Bangalore.

46 Santhosh Mehrotra(2008) "NREGA Two Years On: Where Do We Go from Here?" Economic & Political Weekly.Vol XLV No 1.Augest 2.

47 Rakesh tiwari and others, (2011) "MGNREGA for Environmental Service Enhancement anf Vulnerability Reduction: Rapid Appraisal in Chitradurga District, Karnataka .Economic and political weekly EPW MAY 14, VOL XLVI NO 20.

48 Sanjoy Roy, (2010) "Implementation of NREGS in Tripura: An Evaluation, the NEHU Journal, Vol.VIII, No. 1, January.

49 Shaji Joseph, (2006) "Power of the people Political Mobilisation and Guaranteed Employment" Economic and Political Weekly December

50 Parshuram Rai, (2010) "Study on NREGA by CEFS, New Delhi, Compilation by Chitta Behera, 4A Jubilee Tower, Choudhury Bazar, Cuttack-9, Orissa.

51 Jean Dreze, (2010) guided Study on NREGA in Orissa, , Compilation by Chitta Behera, 4A Jubilee Tower, Choudhury Bazar, Cuttack-9, Orissa.

52 Kusthv Byanargi, Partha saha, (2010) "The NREGA, the Maoists and the Development Woes of the Indian State ; .Economic and political weekly EPW July 10, 2010 VOL XLV No 28.

53 Anshuman Jaswal-Ms Paulomee Mistry, (2009) "Will NREGA Ensure Security against Hunger? http:google.com.

54 Jean Dreze, Reetika Khera and Siddharta, (2008), Corruption in NREGA, Myths and Reality, Yojana Vol.No 52 .P.No 66-68.Bangalore.

55 Sidharta, (2012), Team of academic researchs find significant lacunae wage payment delays hit NREGA work in Jharkhand transparency Revie –journal of transparency studies.

56 Narayan Chandra pradhan and Ramesh golithi, (2011), MNREGA : A virtuous social protuction MNREGA as right to empoverment, Abhijith publications, Delhi.

57 Ramu maurya and Shraddha pal, (2011), economic policy of public work programme, A case study from India MNREGA as right to empoverment Abhijith Publications, Delhi.

58 Shivkumar lal and Abhishek srivastava, (2011), Women empoverment eradication in India acritical appraisal of MNREGA, MNREGA as right to empoverment (2011), Abhijith publications, Delhi.

59 Basanth K. Sahu, (2011), Impacts of MGNREGA's on house hold in drought area A Study of two villages in odisha, MNREGA as right to empoverment, Abhijith publications Delhi.

60 Jean dreze, (2010), a pilot study on NREGA in Orissa New Delhi.Online report Orissa.

61 C&AG, (2010), Perfomance audit into states of NREGA in First phase, New Delhi.Online report Orissa.

62 .PRIA, (2010), A Sample study on NREGA in Orissa, New Delhi.Online report Orissa.

63 Mihir shah (2008), "Direct cash transfer No magic bullet Economic and political weekly. Orissa

64 Sick Rajan Mishra,(2013),"The National Rural Employment Guarantee Scheme, Some Reflections on apportunities and challenges.

65 Chaiya Dhater, (2013),"Failure of National Rural Employment Guarantee Scheme in Maharashtra.

66 Ravikumar C.H, Kha Rakhesh kumar, Sita Lakhmi.S, (2008), National Rural Employment Guarantee Act in Andrapradesh.

67 Chandrashaker CP and Jayanth ghosh, (2012), "Public works and wages in Rural India".

68 Vidiya Das, Pramod Pradilan, (2007), Illusions of Change :Economic and political weekly August, Orissa.

69 Anish Vanaik, (2008), NREGA and the death of tapas soren, Economic and political weekly, Orissa.

70 Ranjith sing Guman and Paravindra Kor dyu ,(2008), NREGA and Evaluative study of Hoshiarpur District" Conference on Emlpoyment Opportunities and Public employment policy in Globalising India, Organized by CDS during .

71 Mihir shah (2004) "A Historic Opportunity". Economic and Political Weekly.Orissa.

72 Mihir shah (2010) "Emloyment Guarantee, Civil Society and Indian Democracy Economic and Political Weekly. Orissa.

75 Karuna Vakati Aakella, Sowmya Kidamba,(2007), Social Audits in Andhra Pradesh: A Process in Evolution. Economic and Political Weekly.Orissa.

74 Sumanthasharma Vijay KR Boddu, (2013), "Critical evaluation of NREGA": Indian Institute of Planning and management, New Delhi.

75 Suamhat Mahanthi, (2002),Mahtma Gandhi National Rural Employment Guarantee Act (MNREGA) and Tribal livelihoods, a case study in Sundargarh District of Odisha.

76 Khuulla and Salju, (2007), "Impact of NREGA on Rural live hoods".

77 Day and Bedi,2010, "The National Rural Employment Guarantee Scheme in Birbhum" Economic and Political Weekly. Orissa

78 Mathuru, (2007), "Employment Guarantee Progress so for" Economic and Political Weekly. Orissa.

79 Palanichami AP, (2012) "A study on Mahtma Gandhi National Rural Employment Guarantee Programe (MNREGP) in Thuinjapuram block.

80 Patnaik B.K, (2012), .National Rural Employment Guarantee Scheme some preliminary Findings from Hoshiarpur District.

81 Rajkumar Sivan Sunilkumar, (2011), "Implementing NREGS in Hiriyena; A study of Social Audit.

82 Arun Ray and Nikhilde, (2012), "much more then a survival scheme" Hindu paper.

83 CAG Staff Reporter "The Hindu Paper (2012) Irregularities found in MNREGA Implementation.

84 Kamala kannaK, (2006).Rural Industrialisation and poverty alleviation, Kurukshetra. Bangalore.

85 Bhagavati Patel, (2008), Link Bhagavatipatal, http.www nrega.org.

86 Gopinath Ghosh, (2008), Social Audit and NREGA, Yojana, vol No. 52 Page No 18/21.

87 Abhay sing, (2008),"Awareness in the Development of Tribals". Yojana. Vol No 52.p No 34-36.

88 Gopinath Ghosh, (2008), Social Audit and NREGA, Yojana, Vol,No52, P.No 18-21

89 Sudhanarayann, (2008), "Women and Children" Yojna..Vol No 52 Page No 59-63.

90 The Penguin dictionary of Sociology, 1984:165

91 Kamala Kanna.K, (2006), Rural Industrialisation and poverty alleviation, Kurukshetra P.No 3-8.

92 Kumar Anandharaja P. and Well Haorei, (2010), "Impact Assessment of MGNREGS on Rural Migration" Kuruksetra, Vol.59, No.10, December 2010, pp. 26-28.

93 Institute of Applied Manpower Research, (2009) "All India Report on Evaluation of NREGA, A Survey of Twenty Districts", Delhi,2009.

ಅಧ್ಯಾಯ ಎರಡು

ಅಧ್ಯಯನ ಕ್ಷೇತ್ರದ ಪರಿಚಯ

ಅಧ್ಯಾಯ ಎರಡು

ಅಧ್ಯಯನ ಕ್ಷೇತ್ರದ ಪರಿಚಯ

2.1. ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

ತುಮಕೂರು ಜಿಲ್ಲೆಯಲ್ಲಿ ಪ್ರಾಗೈತಿಹಾಸದ ಮಾನವನ ಜೀವನ ಕ್ರಮದ ಹಂತವನ್ನು ಅರಿಯಲಾಗಿದ್ದು ಅದರಂತೆಯೇ ಈ ಜಿಲ್ಲೆಯಲ್ಲಿ ಮಾನವನ ಇತಿಹಾಸವು ವಿಭಿನ್ನತೆಯ ಕಾಲವಾಗಿತ್ತು ಎಂಬ ಅಂಶವನ್ನು ಇಲ್ಲಿ ದೊರೆತಿರುವ ವಿವಿಧ ಸಾಂಸ್ಕೃತಿಕ ಅವಶೇಷಗಳು ಸ್ಪಷ್ಟಪಡಿಸಿವೆ. ಅಷ್ಟೆ ಅಲ್ಲದೆ ಪೌರಾಣಿಕ ಹಿನ್ನೆಲೆಯಲ್ಲಿ ನೋಡುವುದಾದರೆ ಈ ಜಿಲ್ಲೆಯೂ ರಾಮಾಯಣ, ಮಹಾಭಾರತ ಕಾಲದಿಂದಲೂ ಪ್ರಸಿದ್ಧ ಸ್ಥಳವಾಗಿದೆ. ಗುಬ್ಬಿ ತಾಲೂಕಿನ ಕಡಬದಲ್ಲಿ ರಾಮಾಯಣದ ಶ್ರೀರಾಮನು ತಂಗಿದ್ದನೆಂದೂ, ತನ್ನ ಹೆಂಡತಿ ಸೀತಾ ದೇವಿಯ ಕೋರಿಕೆಯಂತೆ ತುಂಬಾ ಇಕ್ಕಟ್ಟಿನಿಂದ ಕೂಡಿದ ನದಿಯನ್ನು ಬೇರ್ಪಡಿಸಿದನೆಂದು ನಂಬಲಾಗಿದೆ. ಹಾಗೆ ಬೇರ್ಪಟ್ಟ ನದಿಯ ಒಂದು ಭಾಗ ಇಂದಿನ ಕಡಬದ ದೊಡ್ಡಕೆರೆ ಎಂಬುದು ಒಂದು ಇತಿಹಾಸವಾಗಿದೆ. ಈ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಕದಂಬ ಮುನಿಯಿಂದಾಗಿ ಈ ಪ್ರದೇಶಕ್ಕೆ ಕಡಬ ಎಂಬ ಹೆಸರು ಬಂದಿತೆಂದು ಹೇಳಲಾಗಿದೆ. ಅದೇ ರೀತಿ ತುರುವೇಕೆರೆ ತಾಲ್ಲೂಕಿನ ಸಂಪಿಗೆ, ಮಹಾಭಾರತ ಕಾಲದ ಚಂಪಕ ನಗರವಾಗಿತ್ತೆಂದು ನಂಬಲಾಗಿದೆ. ಚಂಪಕ ನಗರ ಮಹಾಭಾರತ ಕಾಲದ ದೊರೆ ಹಂಸಧ್ವಜನ ಮಗ ಸುಧನ್ವನ ರಾಜಧಾನಿಯಾಗಿತ್ತೆಂದು ತಿಳಿದುಬರುವುದು. ಕರ್ನಾಟಕದಲ್ಲಿ ತುಮಕೂರು ಜಿಲ್ಲೆ ಅತಿ ಹೆಚ್ಚು ಅಂದರೆ 266 ಶಿಲಾಯುಗದ ನೆಲೆಗಳನ್ನು ಹೊಂದಿದೆ. ಜಿಲ್ಲೆಯಲ್ಲಿ ಮುಖ್ಯವಾಗಿ ಗುಬ್ಬಿ ತಾಲ್ಲೂಕಿನ ಮೂಗನಾಯ್ಕನಕೋಟೆ, ಸಿರಾ ತಾಲ್ಲೂಕಿನ ಬೂದಿಗುಡ್ಡ, ಬುಕ್ಕಾಪಟ್ಟಣ, ಹೊಳಕಲ್ಲು ಬೆಟ್ಟ, ತುಮಕೂರು ತಾಲೂಕಿನ ಮಂಚಕಲ್‌ಕುಪ್ಪೆ, ಮೀನಾಕ್ಷಮ್ಮ ಎಸ್ಟೇಟ್, ತಿಪಟೂರು ತಾಲ್ಲೂಕಿನ ಕಿಬ್ಬನಹಳ್ಳಿ, ಕೊರಟಗೆರೆ ತಾಲ್ಲೂಕಿನ ಇರಕಸಂದ್ರ ಕಾಲೋನಿ, ಮಧುಗಿರಿ ತಾಲೂಕಿನ ಚಿಕ್ಕೇಗೌಡನರೊಪ್ಪ ಅವರಗಲ್ಲು, ಗುಟ್ಟ, ಮಿಡಿಗೇಶಿ, ಅಪ್ಪೇನಹಳ್ಳಿ, ಕತ್ತಿರಾಜನಹಳ್ಳಿ ಮೊದಲಾದ ಕಡೆಗಳಲ್ಲಿ ಕಂಡುಬರುತ್ತದೆ.

ಐತಿಹಾಸಿಕವಾಗಿ ನೋಡಿದರೆ ತುಮಕೂರು ಜಿಲ್ಲೆಯ ಚರಿತ್ರೆಯನ್ನು ಗುರುತಿಸಿದೆ. 9 ಮತ್ತು 10 ನೇ ಶತಮಾನದಲ್ಲಿ ನೊಳಂಬರು ಆಳ್ವಿಕೆ ನಡೆಸಿದ್ದು, ನಂತರದಲ್ಲಿ ಪ್ರಸಿದ್ಧ ರಾಜವಂಶಸ್ಥರಾದ

ಹೊಯ್ಸಳರು ರಾಜ್ಯಭಾರಮಾಡಿರುವುದು ತಿಳಿಯುತ್ತದೆ. ಈ ಜಿಲ್ಲೆಯಲ್ಲಿ ಸುಮಾರು 25 ಪಾಳೇಗಾರರ ಮನೆತನಗಳು ಆಳ್ವಿಕೆ ನಡೆಸಿರುವುದು ತಿಳಿಯುತ್ತದೆ. ನಂತರದ ವರ್ಷಗಳಲ್ಲಿ ಈ ಪ್ರದೇಶ ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟು, ಪೂರ್ಣಯ್ಯನವರ ಕಾಲದಲ್ಲಿ ಈ ಜಿಲ್ಲೆಯ ಮಧುಗಿರಿಯು ಫೌಜುದಾರಿಯ ಭಾಗವಾಗಿತ್ತು. ಮುಂದೆ ಕಮೀಷನ್ನರ ಆಡಳಿತಕ್ಕೆ ಒಳಪಟ್ಟು 1832 ರಲ್ಲಿ ತುಮಕೂರು ಡಿವಿಜನ್ ಆಗಿತ್ತು. ಈ ಡಿವಿಜನ್ 1863 ರಲ್ಲಿ ರದ್ದಾಗಿ ತುಮಕೂರು ಜಿಲ್ಲೆಯನ್ನು ನಂದಿದುರ್ಗ ಡಿವಿಜನ್‌ಗೆ ಸೇರಿಸಲಾಗಿತ್ತು. ಮತ್ತೆ 1886 ರಲ್ಲಿ ಚಿತ್ರದುರ್ಗವನ್ನು ಜಿಲ್ಲೆಯನ್ನಾಗಿ ಮಾರ್ಪಡಿಸಿದಾಗ ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆಗೆ ಸೇರ್ಪಡೆಯಾಗಿತ್ತು. ತರುವಾಯ ಈ ಜಿಲ್ಲೆಯು ಮೈಸೂರು ರಾಜ್ಯದ ಜಿಲ್ಲೆಗಳಲ್ಲಿ ಒಂದಾಯಿತು ಎಂದು ಚರಿತ್ರೆಯ ಹೆಜ್ಜೆಗಳನ್ನು ಅಧ್ಯಯನಗಳು ಗುರುತಿಸಿವೆ.

ತುಮಕೂರು ಜಿಲ್ಲೆಯು ಬೆಂಗಳೂರಿನಿಂದ 70 ಕಿ ಮೀ ದೂರದಲ್ಲಿದ್ದು, ಒಂದು ಪ್ರಮುಖ ವ್ಯಾಪಾರ ಕೇಂದ್ರವಾಗಿದೆ. ಆಡಳಿತ ದೃಷ್ಟಿಯಿಂದ ಜಿಲ್ಲೆಯನ್ನು ಮೂರು ಉಪವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ತುಮಕೂರು ಉಪವಿಭಾಗದಲ್ಲಿ ತುಮಕೂರು, ಗುಬ್ಬಿ, ಕುಣಿಗಲ್ ತಾಲ್ಲೂಕುಗಳು, ತಿಪಟೂರು ಉಪವಿಭಾಗದಲ್ಲಿ ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ ತಾಲ್ಲೂಕುಗಳು ಹಾಗೂ ಮಧುಗಿರಿ ಉಪವಿಭಾಗದಲ್ಲಿ ಮಧುಗಿರಿ, ಕೊರಟಗೆರೆ, ಪಾವಗಡ ಮತ್ತು ಸಿರಾ ತಾಲೂಕುಗಳಿವೆ.

ಜಿಲ್ಲೆಯ ಭೂ ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು 818.51 ಮೀಟರ್ ಎತ್ತರದಲ್ಲಿದೆ. ಜಿಲ್ಲೆಯಲ್ಲಿ ಜೀವನದಿಗಳು ಇರುವುದಿಲ್ಲ. ಕೆಲವು ಸಣ್ಣ ನದಿಗಳಾದ ಜಯಮಂಗಲಿ, ಶಿಂಷಾ, ಕುಮದ್ವತಿ ಇವುಗಳಲ್ಲಿ ಮಳೆಗಾಲದಲ್ಲಿ ಮಾತ್ರ ನೀರು ಇದ್ದು ಸಾಧಾರಣವಾಗಿ ಬೇಸಿಗೆಯಲ್ಲಿ ಬತ್ತಿ ಹೋಗುತ್ತವೆ. ಜಿಲ್ಲೆಯು ಸಮತೋಲನ ಹವಾಗುಣ ಹೊಂದಿದ್ದು, ಒಣ ಹವೆಯಿಂದ ಕೂಡಿರುತ್ತದೆ. ನೈರುತ್ಯ ಮಾರುತಗಳಿಂದ ಜೂನ್ ತಿಂಗಳಿನಲ್ಲಿ ಮಳೆ ಪ್ರಾರಂಭವಾಗಿ ಸೆಪ್ಟಂಬರ್ ತಿಂಗಳಿನವರೆಗೂ, ಈಶಾನ್ಯ ಮಾರುತಗಳಿಂದ ಅಕ್ಟೋಬರ್ ತಿಂಗಳಿಂದ ನವೆಂಬರ್ ಕೊನೆಯವರೆಗೂ ಮಳೆ ಬೀಳುತ್ತದೆ. ಡಿಸೆಂಬರ್ ತಿಂಗಳಿನಲ್ಲಿ ಚಳಿಗಾಲ ಪ್ರಾರಂಭವಾಗಿ ಫೆಬ್ರವರಿ ಅಂತ್ಯದವರೆಗೂ ಇರುತ್ತದೆ. ಬೇಸಿಗೆಯು ಮಾರ್ಚ್ ತಿಂಗಳಿಂದ ಪ್ರಾರಂಭವಾಗಿ ಮೇ ತಿಂಗಳ ಕೊನೆಯವರೆಗೂ ಇರುತ್ತದೆ. ಜಿಲ್ಲೆಯಲ್ಲಿ ಕೆಂಪು ಮತ್ತು ಕಪ್ಪು ಮಣ್ಣು ಇದ್ದು ಮರಳು ಮಿಶ್ರಿತವಾಗಿರುತ್ತದೆ.

ತುಮಕೂರು ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣದಲ್ಲಿದ್ದು, 12.450 ಯಿಂದ 14.220 ಉತ್ತರದ ಅಕ್ಷಾಂಶ ಒಳಗೆ 76.200 ಯಿಂದ 77.310 ಪೂರ್ವ ರೇಖಾಂಶಗಳನಡುವೆ ವಿಸ್ತರಿಸಲ್ಪಟ್ಟಿದೆ. ತುಮಕೂರು ಜಿಲ್ಲೆಯ ಉಷ್ಣಾಂಶ 18 ಸೆಂಟಿಗ್ರೇಡ್‌ನಿಂದ 38 ಸೆಂಟಿಗ್ರೇಡ್ ಇದ್ದು, ಒಣ ಹವೆಯಿಂದ ಕೂಡಿರುತ್ತದೆ.

ಈ ಜಿಲ್ಲೆಯಲ್ಲಿ 10ಒಟ್ಟು ತಾಲ್ಲೂಕುಗಳು, 50 ಹೋಬಳಿಗಳು, 321 ಗ್ರಾಮ ಪಂಚಾಯಿತಿಗಳು ಇರುತ್ತವೆ. ಮತ್ತು 2011 ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 2716 ಗ್ರಾಮಗಳು ಇರುತ್ತವೆ. ಜಿಲ್ಲೆಯ ಪೂರ್ವಕ್ಕೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳು, ಪಶ್ಚಿಮಕ್ಕೆ ಹಾಸನ, ಚಿಕ್ಕಮಗಳೂರು ಜಿಲ್ಲೆಗಳು, ಉತ್ತರಕ್ಕೆ ಚಿತ್ರದುರ್ಗ ಹಾಗೂ ಆಂಧ್ರ ಪ್ರದೇಶದ ಗಡಿ ಮತ್ತು ದಕ್ಷಿಣಕ್ಕೆ ಮಂಡ್ಯ ಜಿಲ್ಲೆ ಇರುತ್ತದೆ.



ತುಮಕೂರು ಜಿಲ್ಲೆ ರೇಖಾಚಿತ್ರ 2

Tumkur District



ತುಮಕೂರು ಜಿಲ್ಲೆಯಲ್ಲಿ ಪ್ರಮುಖವಾಗಿ ಭತ್ತ, ರಾಗಿ, ನೆಲಗಡಲೆ, ಹುರುಳ್ಳಿ, ತೊಗರಿ, ರೇಷ್ಮೆ, ಅಲಸಂದೆ, ಹುಚ್ಚೆಳ್ಳು, ಹೆಸರು, ಉದ್ದು, ಅವರೆ ಮತ್ತು ಮುಸುಕಿನ ಜೋಳ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಪಾವಗಡ, ಸಿರಾ, ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಮಳೆ ಕಡಿಮೆ ಬೀಳುವ ಪ್ರದೇಶವಾಗಿರುವುದರಿಂದ ಮತ್ತು ಯಾವುದೇ ನೀರಿನ ಮೂಲ ಸಂಪನ್ಮೂಲ ಇಲ್ಲದಿರುವುದು ನೆಲಗಡಲೆ ಬೆಳೆಯನ್ನು ಪ್ರಮುಖವಾಗಿ ಬೆಳೆಯಲಾಗುತ್ತಿದೆ. ತುಮಕೂರು ಕುಣಿಗಲ್ ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಹೆಚ್ಚು ಭಾಗದಲ್ಲಿ ನೀರಿನ ಸಂಪನ್ಮೂಲವಿದ್ದು ಅಲ್ಲಿ ನೀರಾವರಿ ಪ್ರದೇಶವಿರುವುದರಿಂದ ಭತ್ತ, ರಾಗಿ, ತೆಂಗು ಬೆಳೆಗಳನ್ನು ಪ್ರಮುಖವಾಗಿ ಬೆಳೆಯಲಾಗುತ್ತಿದೆ. ತಿಪಟೂರು, ಚಿಕ್ಕನಾಯಕನಹಳ್ಳಿ ಹಾಗೂ ಗುಬ್ಬಿ ತಾಲ್ಲೂಕಿನಲ್ಲಿ ಮುಖ್ಯವಾಗಿ ತೆಂಗನ್ನು ವಾಣಿಜ್ಯ ಬೆಳೆಯನ್ನಾಗಿ ಬೆಳೆಯಲಾಗುತ್ತಿದೆ. ಇನ್ನುಳಿದ ತಾಲ್ಲೂಕುಗಳಲ್ಲಿ ರಾಗಿ ಹಾಗೂ ಇತರೆ ಬೆಳೆಗಳನ್ನು ಸಾಮಾನ್ಯವಾಗಿ ಬೆಳೆಯಲಾಗುತ್ತಿದೆ.

ತುಮಕೂರು ಜಿಲ್ಲೆಯ ಸಂಕ್ಷಿಪ್ತ ನೋಟ

2.2. ಭೌಗೋಳಿಕ ಲಕ್ಷಣಗಳು

ಜಿಲ್ಲೆಯ ದಕ್ಷಿಣ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಬೆಟ್ಟದ ಸಾಲು ಹಬ್ಬಿರುತ್ತದೆ. ಕುಣಿಗಲ್ ತಾಲ್ಲೂಕಿನ ಹುತ್ರಿದುರ್ಗ ಮತ್ತು ಹುಲಿಯೂರುದುರ್ಗ ಬೆಟ್ಟಗಳು ಮುಖ್ಯವಾದವುಗಳು. ಇವುಗಳಿಗೆ ಸಮಾನಾಂತರವಾಗಿ ಉತ್ತರ ಭಾಗದಲ್ಲಿ ಮತ್ತೊಂದು ಗುಡ್ಡದ ಸಾಲು ಹಬ್ಬಿದ್ದು, ಇವುಗಳಲ್ಲಿ ಪಾವಗಡ ತಾಲ್ಲೂಕಿನ ಕಾಮನದುರ್ಗ, ನಿಡಗಲ್ ದುರ್ಗಗಳು, ಮಧುಗಿರಿ ತಾಲ್ಲೂಕಿನ ಬೆಟ್ಟಗಳು ಮತ್ತು ಮಿಡಿಗೇಶಿದುರ್ಗ, ಕೊರಟಗೆರೆ ತಾಲ್ಲೂಕಿನ ಚನ್ನರಾಯನದುರ್ಗ, ತುಮಕೂರು ತಾಲ್ಲೂಕಿನ ದೇವರಾಯನದುರ್ಗ ಮುಖ್ಯವಾದವುಗಳು. ಜಿಲ್ಲೆಯ ಭೂ ಪ್ರದೇಶವು ಸಮುದ್ರಮಟ್ಟದಿಂದ 806 ಮೀಟರ್‌ಗಳಷ್ಟು ಎತ್ತರದಲ್ಲಿದೆ.

ಭೌಗೋಳಿಕ ವಿಸ್ತೀರ್ಣವು ಸುಮಾರು 10,596 ಚದರ ಕಿ.ಮೀ.ಗಳಷ್ಟಿದ್ದು, ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇಕಡಾ 5.589 ರಷ್ಟಿದೆ. ರಾಜ್ಯದ ಜಿಲ್ಲೆಗಳ ವಿಸ್ತೀರ್ಣಕ್ಕೆ ಹೋಲಿಸಿದಾಗ ತುಮಕೂರು ಜಿಲ್ಲೆಯು 3 ನೇ ಸ್ಥಾನ ಪಡೆದಿರುತ್ತದೆ. ಜಿಲ್ಲೆಯ ಬಹುತೇಕ ಪ್ರದೇಶ ಕೆಂಪು ಮತ್ತು ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿರುತ್ತದೆ.

2.3. ಜಿಲ್ಲೆಯ ಸಾಗುವಳಿಯ ವಿವರ

ತುಮಕೂರು ಜಿಲ್ಲೆಯು ಕರ್ನಾಟಕ ರಾಜ್ಯದ ಒಟ್ಟು ಭೂಪ್ರದೇಶದಲ್ಲಿ 3ನೆಯ ಸ್ಥಾನದಲಿದ್ದು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣವು 1064755 ಹೆಕ್ಟೇರ್ ಪ್ರದೇಶವಿರುವುದನ್ನು ಕಾಣಬಹುದು.

ಅಂದರೆ 10,597 ಚದುರ ಕಿಲೋ ಮೀಟರ್ ಪ್ರದೇಶದಿಂದ ಕೂಡಿರುವುದು. ತುಮಕೂರು ಜಿಲ್ಲೆಯಲ್ಲಿ 10 ತಾಲ್ಲೂಕುಗಳಿದ್ದು ಆ ತಾಲ್ಲೂಕುಗಳಲ್ಲಿ ಈ ಕೆಳಕಂಡ ಭೌಗೋಳಿಕವಾಗಿ ವಿಂಗಡಿಸಿರು ವುದು ವರದಿಯಿಂದ ತಿಳಿಯುತ್ತದೆ. (ಹೆಚ್.ಜಿ. ರಾಜಶೇಖರಪ್ಪ, ತುಮಕೂರು ಜಿಲ್ಲೆಯ ಆರ್ಥಿಕ–ಸಾಮಾಜಿಕ ಅವಲೋಕನ, 2011 ರ ಜನಗಣತಿ).


ಕೋಷ್ಟಕ: 2.1

ಜಿಲ್ಲೆಯ ಸಾಗುವಳಿಯ ವಿವರ

ಕ್ರಸಂ.	ತಾಲ್ಲೂಕುಗಳ	ಭೌಗೋಳಿಕ ವಿಸ್ತೀರ್ಣವು(ಚ.ಕಿ)
1	ಚಿಕ್ಕನಾಯಕನಹಳ್ಳಿ	1113
2	ಗುಬ್ಬಿ	1221
3	ಕೊರಟಗೆರೆ	652
4	ಕುಣಿಗಲ್	981
5	ಮಧುಗಿರಿ	1131
6	ಪಾವಗಡ	1358
7.	ಶಿರಾ	1552
8.	ತಿಪಟೂರು	758
9.	ತುಮಕೂರು	1026
10.	ತುರುವೇಕೆರೆ	778
		10597

ರೇಖಾ ಚಿತ್ರ : 1

ಜಿಲ್ಲೆಯ ಸಾಗುವಳಿಯ ವಿವರ



ತುಮಕೂರು ಜಿಲ್ಲೆಯಲ್ಲಿ ಭೌಗೋಳಿಕವಾಗಿ ಶಿರಾ ಮತ್ತು ಪಾವಗಡ ಹೆಚ್ಚು ವಿಸ್ತಾರವಾದ ಪ್ರದೇಶ ಹೊಂದಿದ್ದು, ಕೊರಟಗೆರೆ ಮತ್ತು ತಿಪಟೂರು ಅತ್ಯಂತ ಕಡಿಮೆ ಭೂಪ್ರದೇಶ ಹೊಂದಿರುವುದು ಅಂಕಿ ಅಂಶಗಳ ಲೆಕ್ಕಾಚಾರದಿಂದ ತಿಳಿದು ಬರುತ್ತದೆ. ಒಟ್ಟು ಹತ್ತು ತಾಲ್ಲೂಕುಗಳಲ್ಲಿ ಹೇಗೆ ಸಮಾನವಾದ ಭೂ ಹಂಚಿಕೆ ಇರುವುದಿಲ್ಲವೊ ಹಾಗೇಯೇ ಎಲ್ಲಾ ಭೂಮಿಯೂ ಸಾಗುವಳಿ ಯಲ್ಲಿದೆಯೇ? ಅಥವಾ ಇರುವ ಭೂಮಿಯೆಲ್ಲಾ ಬಂಜರು ಭೂಮಿ ಎನ್ನಲಾಗುವುದೇ? ಎನ್ನುವಂತಹ ಪ್ರಶ್ನೆಗಳನ್ನು ಎತ್ತಿದರೆ ಜಿಲ್ಲೆಯಲ್ಲಿರುವ ಭೂಮಿಯನ್ನು ಹಲವು ಪ್ರಕಾರಗಳಲ್ಲಿ ಗುರುತಿಸಬಹುದು. ಅಂತಹದೊಂದು ಚಿತ್ರಣವನ್ನು ನಾವು ಕಾಣುವುದಾದರೆ ಕೆಲವು ಪ್ರಕಾರದ ಭೂಮಿಯನ್ನು ಗುರುತಿಸಲಾಗಿರುವುದು. ಅವುಗಳೆಂದರೆ ಒಟ್ಟು ಭೂ ವಿಸ್ತೀರ್ಣವು 1064755 ಹೆಕ್ಟೇರ್ ಇದ್ದು 45,177 (ಶೇಕಡ 4.24) ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ಪ್ರದೇಶವಿರುತ್ತದೆ, 1,51,815 (ಶೇಕಡ 14.5) ಹೆಕ್ಟೇರ್ ಪ್ರದೇಶದಲ್ಲಿ ವ್ಯವಸಾಯೇತರ, 61,642 (ಶೇಕಡ 5.88) ಹೆಕ್ಟೇರ್ ಪ್ರದೇಶದಲ್ಲಿ ಸಾಗುವಳಿಗೆ ಯೋಗ್ಯವಲ್ಲದ ಬಂಜರು ಭೂಮಿ ಇರುತ್ತದೆ, 76,453 (ಶೇಕಡ 7.18) ಹೆಕ್ಟೇರ್ ಪ್ರದೇಶದಲ್ಲಿ ಖಾಯಂ ಗೋಮಾಳ ಮತ್ತು ಇತರೆ ಹುಲ್ಲುಗಾವಲು ಭೂಮಿ, 2,01,033 (ಶೇಕಡ 1.97) ಹೆಕ್ಟೇರ್ ಪ್ರದೇಶದಲ್ಲಿ ಮರಗಳ ತೋಪುಗಳು ಹಾಗೂ ಪೊದೆಗಳಿಂದ ಕೂಡಿರುತ್ತದೆ. ಒಟ್ಟು 684415 (ಶೇಕಡ 64.27) ಹೆಕ್ಟೇರ್ ಪ್ರದೇಶದಲ್ಲಿ ಭಿತ್ತನೆಗೆ ಯೋಗ್ಯವಾಗಿರುತ್ತದೆ, ಅದರಲ್ಲಿ 6,15,074 ಹೆಕ್ಟೇರ್ ಬಿತ್ತನೆ ಮತ್ತು 69,341 ಹೆಕ್ಟೇರ್ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಸಲ ಬಿತ್ತನೆಯಾಗುವ ಪ್ರದೇಶವಾಗಿರುತ್ತದೆ ಎಂಬ ಅಂಶವು ಕಂಡುಬರುತ್ತದೆ.

ಜಿಲ್ಲೆಯಲ್ಲಿ ತಾಲ್ಲೂಕುವಾರು ಜನವಸತಿ ಪ್ರದೇಶಗಳನ್ನು ನೋಡುವುದಾದರೆ 321 ಗ್ರಾಮಪಂಚಾಯತಿಯಿಂದ ಒಟ್ಟು 2716 ಜನ ವಸತಿ ಪ್ರದೇಶಗಳಿರುತ್ತವೆ. ಅದರಲ್ಲಿ ಚಿಕ್ಕನಾಯಕನಹಳ್ಳಿ 235, ಗುಬ್ಬಿ 349, ಕೊರಟಗೆರೆ 250, ಕುಣಿಗಲ್ 314, ಮಧುಗಿರಿ 324, ಪಾವಗಡ 151, ಶಿರಾ 248, ತಿಪಟೂರು 229, ತುಮಕೂರು 372 ಮತ್ತು ತುರುವೇಕೆರೆ 244 ಇರುತ್ತವೆ (2011 ರ ಜನಗಣತಿ). ಇದರಲ್ಲಿ ಅತಿ ಹೆಚ್ಚು ಜನವಸತಿ ಪ್ರದೇಶ ಇರುವುದು ತುಮಕೂರು ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಕಂಡು ಬಂದರೆ, ಅತ್ಯಂತ ಕಡಿಮೆ ಜನ ವಸತಿ ಪ್ರದೇಶ ಇರುವುದು ಪಾವಗಡ ಮತ್ತು ತಿಪಟೂರು ತಾಲ್ಲೂಕುಗಳಲ್ಲಿ ಕಂಡು ಬರುತ್ತದೆ.

2.4. ಹವಾಮಾನಕ್ಕೆ ಅನುಗುಣವಾಗಿ ಜಿಲ್ಲೆಯನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿದೆ.

1. ಮಧ್ಯ ಒಣ ಪ್ರದೇಶ : ಪಾವಗಡ, ಶಿರಾ, ಮಧುಗಿರಿ, ಕೊರಟಗೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು.
2. ದಕ್ಷಿಣ ಒಣ ಪ್ರದೇಶ : ಕುಣಿಗಲ್ ಮತ್ತು ತುರುವೇಕೆರೆ ತಾಲ್ಲೂಕುಗಳು.
3. ಪೂರ್ವ ಒಣ ಪ್ರದೇಶ : ತುಮಕೂರು ಮತ್ತು ಗುಬ್ಬಿ ತಾಲ್ಲೂಕುಗಳು.

ತುಮಕೂರು ಜಿಲ್ಲೆ ವಿಸ್ತೀರ್ಣದಲ್ಲಿ ಕರ್ನಾಟಕದ ಇತರೆ ಜಿಲ್ಲೆಯೊಂದಿಗೆ ಹೋಲಿಸಿದಾದರೆ ಇದು ದೊಡ್ಡ ಜಿಲ್ಲೆಯಾಗಿದ್ದು, ಅದಕ್ಕೆ ಅನುಗುಣವಾಗಿ ಕುಟುಂಬಗಳ ಸಂಖ್ಯೆಯಲ್ಲಿಯೂ ತನ್ನ ವಿಸ್ತಾರತೆಯನ್ನು ವಿಸ್ತರಿಸಿರುವುದು 2011ರ ಜನಗಣತಿಯಲ್ಲಿ ತಿಳಿದು ಬರುತ್ತದೆ. ಜಿಲ್ಲೆಯ 50 ಹೋಬಳಿಗಳಲ್ಲಿ ಒಟ್ಟು 321 ಗ್ರಾಮಪಂಚಾಯತಿ ಕೇಂದ್ರಗಳಿದ್ದು ಒಟ್ಟು 2716 ಗ್ರಾಮಗಳಿರುತ್ತವೆ. ಈ ಗ್ರಾಮಗಳಲ್ಲಿ ಒಟ್ಟು 2574 ಕುಟುಂಬಗಳು ವಾಸವಾಗಿರುವುದು ಕಂಡು ಬರುತ್ತದೆ.

2.5. ಜಿಲ್ಲೆಯಲ್ಲಿ ಮಳೆ ಬೀಳುವ ಪ್ರಮಾಣದ ವಿವರ:

ಕೃಷಿಗೂ ಜೀವನೋಪಾಯಕ್ಕೂ ಹೇಗೆ ನೇರವಾದ ಸಂಬಂಧವಿದೆಯೊ ಹಾಗೆ ಕೃಷಿಗೂ ಮಳೆ ಬೀಳುವ ಪ್ರಮಾಣಕ್ಕೂ ನೇರವಾದ ಸಂಬಂಧವಿರುವುದು, ಈ ವಿಷಯಗಳ ಮೇಲೆ ಚರ್ಚಿಸಿದರೆ ಜನರು ಬಹುಪಾಲು ಕೃಷಿ ಅವಲಂಬಿವಾಗಿರುವುದು ದೊಡ್ಡ ಪ್ರಮಾಣದಲ್ಲಿ ಕಾಣಬಹುದು. ಇದರ ಮೇಲೆ ಸಂಗ್ರಹಿಸಿದ ಒಂದಿಷ್ಟು ಅಂಕಿ ಅಂಶಗಳ ನೋಟವನ್ನು ಬಿಚ್ಚಿಡಲಾಗಿದೆ.

ಕೋಷ್ಟಕ: 2.2

ಮಳೆ ಬೀಳುವ ಪ್ರಮಾಣ 2009 ರಿಂದ 2013ರ ವರೆಗೆ (ಮಿ.ಮಿ)

ಕ್ರಸಂ	ತಾಲ್ಲೂಕು	2009	2010	2011	2012	2013
1	ಚಿಕ್ಕನಾಯಕನಹಳ್ಳಿ	587	881	437	445	423.3
2	ಗುಬ್ಬಿ	586	753	490	385	557.5
3	ಕೊರಟಗೆರೆ	669	836	683	569	631.8
4	ಕುಣಿಗಲ್	691	748	661	504	675.5
5	ಮಧುಗಿರಿ	658	689	464	446	490
6	ಪಾವಗಡ	482	726	321	469	506.1
7	ಶಿರಾ	750	891	493	475	638.5
8	ತಿಪಟೂರು	775	929	530	425	557.5
9	ತುಮಕೂರು	841	1043	724	577	754.4
10	ತುರುವೇಕೆರೆ	651	865	638	475	448.2
ಒಟ್ಟು		**673**	**837**	**544**	**480**	**568.4**

ಮಳೆ ಬೀಳುವ ಪ್ರಮಾಣವನ್ನು ವಿಶ್ಲೇಷಿಸಿದರೆ ತುಮಕೂರು ಜಿಲ್ಲೆಯಲ್ಲಿ 10 ತಾಲ್ಲೂಕುಗಳಲ್ಲಿ 2010 ರಲ್ಲಿ ಸರಾಸರಿ 837 ಮಿ.ಮೀ ಮಳೆಯಾಗಿರುವುದು ಕಂಡುಬಂದರೆ 2009ರಲ್ಲಿ ಸರಾಸರಿ 673 ಮಿ.ಮೀ ಮಳೆಯಾಗಿರುವುದು ಕಂಡುಬಂದಿರುವುದು. ತಾಲ್ಲೂಕುವಾರು ಮಳೆ ಬಿದ್ದಿರುವ

ಪ್ರಮಾಣವನ್ನು ಅವಲೋಕಿಸಿದರೆ 5 ವರ್ಷದ ಸರಾಸರಿಯಲ್ಲಿ ತುಮಕೂರು ತಾಲ್ಲೂಕಿನಲ್ಲಿ 787.88 ಮಿ.ಮೀ ಮತ್ತು ಕೊರಟಗೆರೆ ತಾಲ್ಲೂಕಿನಲ್ಲಿ 667.76 ಮಿ.ಮೀ ಮಳೆಯಾಗಿರುವುದು. ಈ ಎರಡು ತಾಲ್ಲೂಕುಗಳು ಜಿಲ್ಲೆಯಲ್ಲೇ ಅತೀ ಹೆಚ್ಚು ಮಳೆ ಬಿದ್ದಿರುವುದನ್ನು ಗಮನಿಸಬಹುದು. ಹಾಗೆಯೇ ಪಾವಗಡ ತಾಲ್ಲೂಕಿನಲ್ಲಿ 5 ವರ್ಷದ ಕಾಲಾವಧಿಯಲ್ಲಿ ಸರಾಸರಿಯ ಮಳೆಯ ಪ್ರಮಾಣವನ್ನು ನೋಡಿದರೆ 500.82 ಮಿ.ಮೀ ಮಳೆ ಬಿದ್ದಿದ್ದರೆ, ಮಧುಗಿರಿ ತಾಲ್ಲೂಕಿನಲ್ಲಿ 5 ವರ್ಷದ ಅವಧಿಯಲ್ಲಿ ಸರಾಸರಿ ಮಳೆ ಬಿದ್ದಿರುವುದು 549.4 ಮಿ.ಮೀ ಆದರೆ ಈ ಎರಡು ತಾಲ್ಲೂಕಗಳಲ್ಲಿ ಅತೀ ಕಡಿಮೆ ಮಳೆ ಬಿದ್ದಿರುವುದು ಕಂಡುಬರುತ್ತದೆ.

ಜಿಲ್ಲೆಯಲ್ಲಿ ಕೃಷಿ ವಿವರ

2.6. ಜಿಲ್ಲೆಯ ಮುಖ್ಯ ತೋಟಗಾರಿಕೆ ಬೆಳೆಗಳು

ತುಮಕೂರು ಜಿಲ್ಲೆಯಲ್ಲಿ ವಿಶೇಷವಾಗಿ ತೋಟದ ಬೆಳೆಗಳು, ಹಣ್ಣುಗಳು, ತರಕಾರಿ, ಹೂವುಗಳು, ಸಾಂಬಾರು ಬೆಳೆಗಳು, ಮತ್ತು ಔಷಧಿ ಸಸ್ಯಗಳನ್ನು ಬೆಳೆಯಲಾಗುತ್ತಿದೆ. ಜಿಲ್ಲೆಯ ಬೆಳೆಗಳಲ್ಲಿ ತೆಂಗು, ಅಡಿಕೆ, ಬಾಳೆ, ಮಾವು, ಸಪೋಟ, ದಾಳಿಂಬೆ, ಹುಣಸೆ, ಎಲೆಬಳ್ಳಿ, ಮತ್ತು ಪುಷ್ಪಗಳು ಮುಖ್ಯ ವಾದವುಗಳು. ಜಿಲ್ಲೆಯಲ್ಲಿ ರೈತರು ಹೆಚ್ಚಿನ ಆಸಕ್ತಿ ವಹಿಸಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ.ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಬಿತ್ತನೆಗೆ ಒಳಪಡುವ ವಿಸ್ತೀರ್ಣ 7,61,163 ಹೆಕ್ಟೇರ್ ಪ್ರದೇಶವಿದ್ದು, ಇದರಲ್ಲಿ 1,77,294 ಹೆಕ್ಟೇರ್ ಪ್ರದೇಶದ ವಿಸ್ತೀರ್ಣದಲ್ಲಿ ತೋಟಗಾರಿಕೆ ಬೆಳೆ ಇರುತ್ತದೆ.

2.7. ಜಿಲ್ಲೆಯಲ್ಲಿ ಕೃಷಿಕೂಲಿಕಾರರ ವಿವರ

ಭಾರತ ದೇಶದ ಪ್ರಮುಖ ಕಸುಬು ಕೃಷಿಯಾಗಿದ್ದು, ಈ ಕೃಷಿಯನ್ನೇ ಶೇಕಡ 68ರಷ್ಟು ಅವಲಂಭಿಸಿವುದು ಅಧ್ಯಯನದಿಂದ ತಿಳಿಯುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಬಹುಪಾಲು ಜನರು ಕೃಷಿಯನ್ನೇ ನಂಬಿ ತನ್ನ ಜೀವನ ಸಾಗಿಸುತ್ತಿರುವುದನ್ನು ಅನೇಕ ವರದಿಗಳು ಮತ್ತು ಅಧ್ಯಯನಗಳಿಂದ ತಿಳಿಯುತ್ತದೆ. ಇತರೆ ರಾಷ್ಟ್ರಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಷ್ಟ್ರದಲ್ಲಿ ಭೂಮಿಗೂ ಕೃಷಿಗೂ ಮತ್ತು ಜೀವನಕ್ಕೂ ನೇರವಾದ ಸಂಬಂಧವಿರುವುದು ತಿಳಿದು ಬರುವುದು. ಹಾಗೆಯೇ ಬಹು ಬಗೆಯ ಕೂಲಿ ಕಾರ್ಮಿಕರು ಕೃಷಿ ಕೂಲಿಯನ್ನೇ ನಂಬಿ ಮತ್ತು ಕೃಷಿಯನ್ನೇ ಅವಲಂಬಿತರಾಗಿರುವುದು ತಿಳಿಯುತ್ತದೆ. ಒಂದು ಸತ್ಯ ಸಂಗತಿ ಎಂದರೆ ಬಹುಸಂಖ್ಯಾತ ಕೂಲಿಕಾರರು ಅಸಂಘಟಿತ ವಲಯದಲ್ಲಿ ದುಡಿಮೆಯ ಮೂಲಕ ತನ್ನ ಜೀವನೋಪಾಯ ಸಾಗಿಸುತ್ತಿರುವುದು ಕಂಡುಬರುತ್ತದೆ.

ಕೋಷ್ಟಕ 2.3

ಜಿಲ್ಲೆಯಲ್ಲಿ ಕೃಷಿಕೂಲಿಕಾರರ ವಿವರ

	ಗ್ರಾಮೀಣ	ನಗರ	ಒಟ್ಟು
ಪುರುಷ	20.74	2.40	16.96
ಸ್ತ್ರೀಯರು	45.5	14.96	40.65
ಒಟ್ಟು	**30.80**	**3.08**	**4.02**

ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ ಆ ಮಾಹಿತಿಗಳನ್ನು ನೋಡಿದರೆ ಜಿಲ್ಲೆಯಲ್ಲಿ ಒಟ್ಟು ಕೃಷಿ ಕೂಲಿಕಾರರ ಪ್ರಮಾಣ ಶೇಕಡ 4.02ರಷ್ಟು ಇದ್ದರೆ, ಗ್ರಾಮೀಣದಲ್ಲಿ ಒಟ್ಟು ಶೇಕಡ 30.80ರಷ್ಟು ಕಂಡು ಬರುತ್ತದೆ. ಅದರಲ್ಲೂ ಮಹಿಳಾ ಕೂಲಿಕಾರರು ಶೇಕಡ 45.1ರಷ್ಟು ಇದ್ದು, ಅಧಿಕ ಸ್ಥಾನದಲ್ಲಿರುವುದು ವ್ಯಕ್ತವಾಗುತ್ತದೆ. ಪುರುಷ ಕೂಲಿಕಾರರ ಪ್ರಮಾಣ ಶೇಕಡ 20.74ರಷ್ಟು ಇರುವುದು ತಿಳಿಯುತ್ತದೆ. ಆದರೆ ಇದು ನಗರ ಕೂಲಿಕಾರರ ಪ್ರಮಾಣ ಕೇವಲ ಶೇಕಡ 4.02ರಷ್ಟು ಮಾತ್ರ ಕಂಡು ಬರುವುದು. ಇಲ್ಲಿಯೂ ಸಹ ಮಹಿಳಾ ಕೃಷಿ ಕೂಲಿಕಾರರ ಸಂಖ್ಯೆ ಶೇಕಡ 40.65ರಷ್ಟು ಇರುವುದನ್ನು ಗಮನಿಸಬಹುದು.


2.8. ಜಿಲ್ಲೆಯ ಪಶುಪಾಲನೆ ವಿವರ

ಜಿಲ್ಲೆಯಲ್ಲಿ ಪಶುಪಾಲನ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚಿಸಿದರೆ ದನಕರುಗಳಲ್ಲಿ ಮಿಶ್ರತಳಿ 1,41,190 ಇದ್ದರೆ ಸ್ಥಳೀಯ ತಳಿಗಳು 4,48,036 ಇರುವುದು ಕಂಡುಬಂದಿದೆ. ಒಟ್ಟು 5,89,226 ಇರುವುದು ಕಂಡು ಬರುತ್ತವೆ. ಎಮ್ಮೆಗಳ ಸಂಖ್ಯೆ ಜಿಲ್ಲೆಯಲ್ಲಿ ಒಟ್ಟು 2,41,907 ಇರುತ್ತವೆ. ಕುರಿಗಳಲ್ಲಿ ಸ್ಥಳೀಯವು 10,61,132 ಇದ್ದು ವಿದೇಶಿ ತಳಿ 22 ಮಾತ್ರ ಇದ್ದವು. ಆದರೆ ಮಿಶ್ರತಳಿ 6565 ಇದ್ದು ಒಟ್ಟು ಕುರಿಗಳ ಸಂಖ್ಯೆ 10,67,719 ಇರುವುದು ಎಲ್ಲರ ಗಮನಕ್ಕೆ ತಿಳಿದು ಬರುವುದು.

ಇತರೆ ಜಾನುವಾರುಗಳನ್ನು ಗಮನಿಸಿದರೆ ಅದರ ಅಂಕಿಅಂಶಗಳು ಈ ಪ್ರಕಾರದಲ್ಲಿವೆ ಮೇಕೆಗಳು 517763 ಇದ್ದು ಹಂದಿಗಳಲ್ಲಿ ಸ್ಥಳೀಯವು 7531 ಇದ್ದು, ವಿದೇಶಿಯ ತಳಿ ಕೇವಲ 43 ಮಾತ್ರ ಇರುವುದು ಅಂಕಿಅಂಶಗಳು ತಿಳಿಸುತ್ತವೆ. ಮಿಶ್ರತಳಿ 144 ಇರುವವು ಒಟ್ಟು 7718 ಸಮೀಕ್ಷೆಯಲ್ಲಿ ಕಂಡುಬಂದಿರುವವು. ಈ ಜಾನುವಾರಗಳ ರಕ್ಷಣೆ ಮಾಡಲು ಜಿಲ್ಲೆಯಲ್ಲೇ ಒಟ್ಟು 232 ಪಶುವೈದ್ಯ ಆಸ್ಪತ್ರೆಗಳು ಕಂಡುಬರುತ್ತವೆ.

ಚಿತ್ರ: 2

ಜಿಲ್ಲೆಯ ಪಶುಪಾಲನೆ ರೇಖಾ ಚಿತ್ರದ ವಿವರ:




2.9. ನೀರಾವರಿ ಪ್ರದೇಶದ ವ್ಯಾಪ್ತಿಯ ವಿಸ್ತೀರ್ಣದ ವಿಶ್ಲೇಷಣೆ

ತುಮಕೂರು ಜಿಲ್ಲೆಯಲ್ಲಿ ಪ್ರಮುಖವಾಗಿ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಎರಡು ಪ್ರಕಾರದ ವಲಯಗಳು ಇರುವುದನ್ನು ಗುರುತಿಸಲಾಗಿದೆ. ಒಂದು ಹಿಂದುಳಿದ ಮತ್ತು ಅಭಿವೃದ್ಧಿ ಹೊಂದಿದ ವಲಯಗಳೆಂದು. ಅಭಿವೃದ್ಧಿ ಹೊಂದಿದ ವಲಯ ಪ್ರದೇಶವೆಂದರೆ ತುರುವೇಕೆರೆ, ಕುಣಿಗಲ್, ಗುಬ್ಬಿ, ತಿಪಟೂರು, ತುಮಕೂರು ಮತ್ತು ಚಿಕ್ಕನಾಯಕನಹಳ್ಳಿಯ ಕೆಲವು ಭಾಗ ಮಾತ್ರ ಹಿಂದುಳಿದ ವಲಯ ಪ್ರದೇಶದ ತಾಲ್ಲೂಕುಗಳಾದ ಮಧುಗಿರಿ, ಶಿರಾ, ಪಾವಗಡ ಮತ್ತು ಕೊಟಗೆರೆಯ ಕೆಲವು ಭಾಗಗಳು ಅದರಲ್ಲಿ ಪ್ರಮುಖವಾಗಿ ಸಂಶೋಧನೆಯ ಕ್ಷೇತ್ರ ಗುಬ್ಬಿ ಮತ್ತು ಮಧುಗಿರಿ ತಾಲ್ಲೂಕಿಗೆ ಸೀಮಿತವಾಗಿರುವುದರಿಂದ ಈ ಎರಡು ತಾಲ್ಲೂಕುಗಳ ನೀರಾವರಿ ಪ್ರದೇಶಗಳನ್ನು ಮತ್ತು ಅದರ ವಿಸ್ತೀರ್ಣವನ್ನು ಚರ್ಚಿಸಲಾಗಿದೆ.

ಗುಬ್ಬಿ ತಾಲ್ಲೂಕಿನ ರೇಖಾ ಚಿತ್ರ ಮತ್ತು ಅಧ್ಯಯನ ಕ್ಷೇತ್ರ ಬೆಲವತ್ತ ಗ್ರಾಮಪಂಚಾಯತಿ ರೇಖಾಚಿತ್ರ

4 : ರಸ್ತೆ ಮತ್ತು ರೈಲ್ವೆ ಸಾರಿಗೆ




ಕೋಷ್ಟಕ : 2.4

ನೀರಾವರಿ ಪ್ರದೇಶದ ವಿಸ್ತೀರ್ಣದ ವಿವರ (ಹೆಕ್ಟೇರ್‌ನಲ್ಲಿ)

ಗುಬ್ಬಿ	ಶೇಕಡ	ಮಧುಗಿರಿ	ಶೇಕಡ	ಜಿಲ್ಲೆಯ ಒಟ್ಟು	ಶೇಕಡ
31664	17.95	13523	7.67	176424	100.00

ರೇಖಾಚಿತ್ರ 3

ನೀರಾವರಿ ಪ್ರದೇಶದ ವಿಸ್ತೀರ್ಣದ ವಿವರ



ತುಮಕೂರು ಜಿಲ್ಲೆಯಲ್ಲಿ ಒಟ್ಟು ನೀರಾವರಿ ಪ್ರದೇಶದ ವ್ಯಾಪ್ತಿ 1,76,424 ಹೆಕ್ಟೇರ್ ಇದ್ದು, ಗುಬ್ಬಿ ತಾಲ್ಲೂಕ ತುಮಕೂರು ಜಿಲ್ಲೆಯಲ್ಲೇ ಅತಿ ಹೆಚ್ಚು ನೀರಾವರಿ ಪ್ರದೇಶ ಹೊಂದಿರುವುದನ್ನು ಮೇಲ್ಕಂಡ ಕೋಷ್ಟಕದಲ್ಲಿ ಕಾಣಬಹುದು ಅಂದರೆ 31,664 ಹೆಕ್ಟೇರ್ ನೀರಾವರಿ ಪ್ರದೇಶವಿರುವುದು. ಈ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯಲ್ಲೇ ಹೆಚ್ಚು ನೀರಾವರಿ ಪ್ರದೇಶ ಹೊಂದಿರುವ ಹೆಗ್ಗಳಿಕೆ ಇರುವುದು. ಇದರಿಂದ ಕೃಷಿ ಅಭಿವೃದ್ಧಿಯಲ್ಲಿ ಒಂದು ಹೆಜ್ಜೆ ಮುಂದೆ ಇರುವುದನ್ನು ಕಾಣಲಾಗಿದೆ. ಇಲ್ಲಿ ಕೃಷಿಕಾರ್ಮಿಕರಿಗೆ ನಿರಂತರವಾಗಿ ಕೂಲಿ ಸುಲಭವಾಗಿ ಸಿಗುವುದನ್ನು ಗಮನಿಸಬಹುದು, ಹಾಗು ಕೃಷಿಯೇತರರಿಗೆ ಹೊರಗಡೆ ಹೋಗಿ ದುಡಿದು ಜೀವನ ಮಾಡಲಿಕ್ಕೆ ಉತ್ತಮವಾದ ರಸ್ತೆ ಮತ್ತು ರೈಲು ಸಂಪರ್ಕಗಳು ಸುಲಭವಾಗಿ ಮತ್ತು ಸಮೀಪದಲ್ಲೇ ಲಭ್ಯವಾಗುವುದನ್ನು ಕಾಣಬಹುದು.

ಮಧುಗಿರಿ ತಾಲ್ಲೂಕಿನಲ್ಲಿ ಒಟ್ಟು ನೀರಾವರಿ ಪ್ರದೇಶ 13,523 ಹೆಕ್ಟೇರ್ ಪ್ರದೇಶದಲ್ಲಿ ಇದ್ದು ಬೇಸಿಗೆ ಮತ್ತು ಮಳೆಗಾಲದಲ್ಲಿ ಬದಲಾವಣೆಯಾಗುವುದನ್ನು ಕಾಣಬಹುದು. ಜಿಲ್ಲೆಯಲ್ಲೇ 10 ತಾಲ್ಲೂಕುಗಳ ಸಾಲಲ್ಲಿ ಕೆಳಗಿನಿಂದ 3ನೇ ಸ್ಥಾನದಲ್ಲಿರುವುದು. ಇದರಿಂದ ಈ ತಾಲ್ಲೂಕು ಕೃಷಿ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದು ತಿಳಿದು ಬರುತ್ತದೆ. ಭೂ ರೈತರಿಗೆ ಮತ್ತು ಭೂ ಕಾರ್ಮಿಕರಿಗೆ ವರ್ಷದಲ್ಲಿ ಹೆಚ್ಚು ಎಂದರೆ 4 ತಿಂಗಳು ಕೆಲಸ ಮಾತ್ರ ಸಿಗುವುದು. ಉಳಿದ ಕಾಲಾವಧಿಯಲ್ಲಿ ಜೀವನಕ್ಕಾಗಿ ಬೇರೆ ಕಡೆ ಕೂಲಿ ಕೆಲಸಕ್ಕಾಗಿ ವಲಸೆ ಹೋಗುವುದು ಒಂದು ಸ್ವಾಭಾವಿಕವಾಗಿ ಕಾಣಲಾಗುವುದು. (ತುಮಕೂರು ಜಿಲ್ಲೆ ಅಂಕಿ ಅಂಶಗಳ ನೋಟ 2013–14).

ಜಿಲ್ಲೆಯಲ್ಲಿ ಸಾಮಾಜಿಕ ವಿವರ

2.10 ತುಮಕೂರು ಜಿಲ್ಲೆಯ ಕುಟುಂಬಗಳ ವಿವರ

ಕೋಷ್ಟಕ : 2.5

ಜಿಲ್ಲೆಯ ಕುಟುಂಬಗಳ ವಿವರ

ಕ್ರಸಂ	ತಾಲ್ಲೂಕಿನ ಹೆಸರು	ಕುಟುಂಬಗಳ ಸಂಖ್ಯೆ	ಶೇಕಡ
1	ಚಿಕ್ಕನಾಯಕನಹಳ್ಳಿ	52612	8.22
2	ಗುಬ್ಬಿ	63688	9.95
3	ಕೊರಟಗೆರೆ	40619	6.35
4	ಕುಣಿಗಲ್	55559	8.68
5	ಮಧುಗಿರಿ	63924	9.99
6	ಪಾವಗಡ	55652	8.69
7	ಶಿರಾ	70754	11.05
8	ತಿಪಟೂರು	55075	8.60
9	ತುಮಕೂರು	140097	21.89
10	ತುರುವೇಕೆರೆ	42101	6.58
	ಒಟ್ಟು	**640081**	**100.00**

ಮೇಲ್ಕಂಡ ಕೋಷ್ಟಕದಲ್ಲಿ ವ್ಯಕ್ತವಾಗುವಂತೆ ಜಿಲ್ಲೆಯಲ್ಲಿ ಒಟ್ಟು 6,40,081 ಕುಟುಂಬಗಳು ಹೊಂದಿರುತ್ತವೆ. ಇದಕ್ಕೆ ಎದುರಾಗಿ ತಾಲ್ಲೂಕುವಾರು ಗಮನಿಸಿದರೆ ತುಮಕೂರು ತಾಲ್ಲೂಕಿನಲ್ಲಿ 1,40,097 ಕುಟುಂಬಗಳು ಮತ್ತು ಶಿರಾ ತಾಲ್ಲೂಕಿನಲ್ಲಿ 70754 ಕುಟುಂಬಗಳು ನೆಲೆಸಿರುತ್ತವೆ ಪ್ರತಿಯಾಗಿ ಶೇಕಡ 21.89ರಷ್ಟು ಮತ್ತು ಶೇಕಡ 11.05ರಷ್ಟು ಇರುವುದರೊಂದಿಗೆ ಈ ತಾಲ್ಲೂಕುಗಳು ಜಿಲ್ಲೆಯಲ್ಲೇ ಹೆಚ್ಚು ಕುಟುಂಬಗಳನ್ನು ಹೊಂದಿರುವುದು ಕಂಡುಬರುತ್ತವೆ. ಕೊರಟಗೆರೆ ತಾಲ್ಲೂಕುಗಳು 40,619 ಕುಟುಂಬಗಳಿದ್ದು ತುರುವೇಕೆರೆ ತಾಲ್ಲೂಕಿನಲ್ಲಿ 42,101 ಕುಟುಂಬಗಳು ಇರುವುದರಿಂದ ಕ್ರಮವಾಗಿ ಶೇಕಡ 6.35 ಮತ್ತು ಶೇಕಡ 6.58 ಇದ್ದು ತುಮಕೂರು ಜಿಲ್ಲೆಯಲ್ಲೇ ಈ ತಾಲ್ಲೂಕುಗಳು ಅತೀ ಕಡಿಮೆ ಕುಟುಂಬಗಳು ಹೊಂದಿರುವುದು ತಿಳಿಯುತ್ತದೆ. ಕೊರಟಗೆರೆ ತುಮಕೂರು ಜಿಲ್ಲಾ ಕೇಂದ್ರಕ್ಕೆ 23 ಕಿಲೋಮೀಟರ್ ದೂರದಲ್ಲಿದ್ದು ಈ ಭಾಗದ ಕೈಗಾರಿಕಾ ಪ್ರದೇಶವಾಗಿರುವುದರಿಂದ ಈ ತಾಲ್ಲೂಕಿನಲ್ಲಿ ಕುಟುಂಬಗಳ ಸಂಖ್ಯೆ ಮತ್ತು ಜನಸಂಖ್ಯೆ ತುಮಕೂರು ತಾಲ್ಲೂಕನ್ನು

ಹೊರೆತುಪಡಿಸಿದರೆ ಹಾಗೂ ಇತರೆ ತಾಲ್ಲೂಕುಗಳಿಗೆ ಹೋಲಿಸಿದರೆ ಅಧಿಕವಾಗಿರುವುದು ಕಂಡುಬರುತ್ತದೆ. ತುರುವೇಕೆರೆ ತುಮಕೂರು ಜಿಲ್ಲೆಗೆ 60 ಕಿಲೋಮೀಟರ್ ದೂರವಿದ್ದು ಸಾರಿಗೆ ಮತ್ತು ಮಾರುಕಟ್ಟೆಗಳಿಗೂ ದೂರವಿರುವುದು ಬೇರೆ ಕಡೆಯಿಂದ ಉದ್ಯೋಗ ಮತ್ತು ವ್ಯಾಪಾರದ ಚಟುವಟಿಕೆಗಳಿಗೆ ಬರುವವರ ಸಂಖ್ಯೆ ಗಣನೀಯವಾಗಿ ಕಡಿಮೆ ಇರುತ್ತದೆ.

2.11 ಜಿಲ್ಲೆಯ ಜನಸಂಖ್ಯೆ ವಿವರ

ಜನಸಂಖ್ಯೆ ಬಗ್ಗೆ ಅನೇಕ ಸಾಮಾಜಿಕ, ಆರ್ಥಿಕ ಚಿಂತಕರು ಮತ್ತು ಜನಸಂಖ್ಯಾ ತಜ್ಞರು ಹಲವು ದೃಷ್ಟಿಯಲ್ಲಿ ಅನೇಕ ಆಯಾಮಗಳಲ್ಲಿ ವ್ಯಾಖ್ಯಾನಿಸುತ್ತಾರೆ. ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ತನ್ನದೇ ಆದಂತಹ ನಿರ್ಣಯದ ನಿಲುವನ್ನು ತರುವುದೆಂಬುದನ್ನು ಚಿಂತಿಸುತ್ತಾರೆ. ಸಮಾಜ ಹೇಗೆ ಆಯಾ ಕಾಲಘಟ್ಟಗಳಲ್ಲಿ ಪರಿವರ್ತನೆಯಾಗಿರುವುದು ಮತ್ತು ಜನಸಂಖ್ಯೆಯು ಜನಗಣತಿಯಿಂದ ಜನಗಣಯನ್ನು ಅವಲೋಕಿಸಿದರೆ ಜನಸಂಖ್ಯಾ ಬೆಳವಣಿಗೆ ವ್ಯತ್ಯಾಸವನ್ನು ಗುರುತಿಸಿದೆ.


ಕೋಷ್ಟಕ: 2.6

ಜಿಲ್ಲೆಯ ಜನಸಂಖ್ಯೆ ವಿವರ

ಕ್ರಸಂ	ತಾಲ್ಲೂಕು	ಪುರುಷ	ಮಹಿಳೆ	ಒಟ್ಟು	ಶೇಕಡ
1	ಚಿಕ್ಕನಾಯಕನಹಳ್ಳಿ	105583	106547	212130	7.92
2	ಗುಬ್ಬಿ	132102	130416	262518	9.80
3	ಕೊರಟಗೆರೆ	84349	83242	167591	6.26
4	ಕುಣಿಗಲ್	112803	112980	225783	8.43
5	ಮಧುಗಿರಿ	134670	133196	267866	10.00
6	ಪಾವಗಡ	123680	121514	245194	9.15
7	ಶಿರಾ	158978	154780	313758	11.71
8	ತಿಪಟೂರು	111282	111467	222749	8.31
9	ತುಮಕೂರು	303197	289200	592397	22.11
10	ತುರುವೇಕೆರೆ	83950	85044	168994	6.31
ಒಟ್ಟು		**1350594**	**1328386**	**2678980**	**100.00**

ರೇಖಾಚಿತ್ರ : 4

ಜಿಲ್ಲೆಯ ಜನಸಂಖ್ಯೆ ವಿವರ



ಹಾಗೆಯೇ ತುಮಕೂರು ಜಿಲ್ಲೆಯ ಜನಸಂಖ್ಯೆಯನ್ನು ನೋಡುವುದಾದರೆ 2001ರ ಜನಗಣತಿಯ ಪ್ರಕಾರ 25,84,711 ಜನಸಂಖ್ಯೆ ಹೊಂದಿದ್ದು, 2011 ರ ಜನಗಣತಿಯ ಪ್ರಕಾರ 26,78,980 ಜನಸಂಖ್ಯೆ ಇರುವುದು ಕಂಡು ಬರುತ್ತದೆ. ಒಂದು ದಶಕಕ್ಕೆ ಇದರ 94,269 ಜನಸಂಖ್ಯೆ ಹೆಚ್ಚಾದರೆ ಶೇಕಡವಾರು 3.51ರಷ್ಟು 10 ವರ್ಷದಲ್ಲಿ ಹೆಚ್ಚಾಗಿರುವುದು ತಿಳಿದುಬರುತ್ತದೆ. ತುಮಕೂರು ತಾಲ್ಲೂಕಿನಲ್ಲಿ ಶೇಕಡ22.11ರಷ್ಟು ಜನಸಂಖ್ಯೆ ಹೋಂದಿದ್ದು ಮತ್ತು ಶಿರಾ ತಾಲ್ಲೂಕಿನಲ್ಲಿ ಶೇಕಡ 11.71ರಷ್ಟು ಜನಸಂಖ್ಯೆ ಹೊಂದಿರುತ್ತದೆ. ಈ ಎರಡು ತಾಲ್ಲೂಕುಗಳು ಜಿಲ್ಲೆಯಲ್ಲೇ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ತಾಲ್ಲೂಕುಗಳೆಂದು ಗುರುತಿಸಿಕೊಂಡಿವೆ. ಕೊರಟಗೆರೆ ಶೇಕಡ 6.26ರಷ್ಟು ಮತ್ತು ತುರುವೇಕೆರೆ ತಾಲ್ಲೂಕುಗಳಲ್ಲಿ ಶೇಕಡ 6.31ರಷ್ಟು ಜನಸಂಖ್ಯೆ ಹೊಂದಿದ್ದು ಅಂಕಿ ಅಂಶಗಳ ಲೆಕ್ಕಾಚಾರ ಜಿಲ್ಲೆಯಲ್ಲೇ ಅತೀ ಕಡಿಮೆ ಜನಸಂಖ್ಯೆ ಹೊಂದಿದ ತಾಲ್ಲೂಕುಗಳೆಂದು ಕಂಡುಬರುತ್ತದೆ.

2.12 ಶಿಕ್ಷಣ ಮತ್ತು ಸಾಕ್ಷರತಾ ವಿವರ

ತುಮಕೂರು ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣವನ್ನು ವಿಶ್ಲೇಷಿಸಿದರೆ 2001ರ ಜನಗಣತಿಯ ಪ್ರಕಾರ ಪುರುಷ ಮತ್ತು ಸ್ತ್ರೀಯರ ಸಾಕ್ಷರತಾ ಪ್ರಮಾಣ ಕ್ರಮವಾಗಿ ಶೇಕಡ 76.8ರಷ್ಟು ಮತ್ತು ಶೇಕಡ 56.9ರಷ್ಟು ಇರುವುದು ಕಂಡುಬಂದರೆ 2011 ರ ಜನಗಣತಿಯ ಪ್ರಕಾರ ಪುರುಷ ಮತ್ತು ಸ್ತ್ರೀಯರ ಸಾಕ್ಷರತಾ ಪ್ರಮಾಣ ಕ್ರಮವಾಗಿ ಶೇಕಡ 82.81ರಷ್ಟು ಮತ್ತು ಶೇಕಡ 67.38ರಷ್ಟು ಇರುವುದು ಕಂಡು ಬರುತ್ತದೆ. ಅದರಲ್ಲಿ ಪುರುಷರು ಶೇಕಡ 6.01 ರಷ್ಟು ಮತ್ತು ಸ್ತ್ರೀಯರು ಶೇಕಡ 10.48ರಷ್ಟು ಹೆಚ್ಚಿರುವುದನ್ನು ತಿಳಿಯುತ್ತದೆ. ಅಂದರೆ 10 ವರ್ಷದಲ್ಲಿ ಪುರುಷರಿಗಿಂತ ಸ್ತ್ರೀಯರಲ್ಲಿ

ಸಾಕ್ಷರತೆಯ ಪ್ರಮಾಣ ಬೆಳವಣಿಗೆಯ ಚಲನೆಯನ್ನು ಗುರುತಿಸಬಹುದು. ಹೀಗೆ ಬೆಳವಣಿಗೆಯಾಗುವುದರ ಹಿಂದೆ ಇರುವ ಸತ್ಯಾ ಸತ್ಯತೆಗಳೇನು? ಎಂಬುದು ಅನೇಕ ವಾದಗಳಿಗೆ ದಾರಿಮಾಡಿಕೊಡುವುದು. ಜಿಲ್ಲೆಯಲ್ಲಿ ಶಿಕ್ಷಣ ಮಟ್ಟವನ್ನು ಹೆಚ್ಚಿಸಲಿಕ್ಕೆ ಪೂರಕವಾದ ಅಂಶವು ಈ ಕೆಳಕಂಡ ಕೋಷ್ಟಕದಲ್ಲಿ ವ್ಯಕ್ತವಾಗುವುದು.

ಕೋಷ್ಟಕ: 2.7

ಶಿಕ್ಷಣ ಮತ್ತು ಸಾಕ್ಷರತಾ ವಿವರ

ಕ್ರಸಂ	ತಾಲ್ಲೂಕು	ಪ್ರಾಥಮಿಕ	ಮಾಧ್ಯಮಿಕ	ಪ್ರೌಢಶಾಲೆ	ಪದವಿ ಪೂರ್ವ	ಪದವಿ	ಇಂಜಿನಿಯರಿಂಗ್	ಮೆಡಿಕಲ್	ಪಾಲಿಟೆಕ್ನಿಕ್
1	ಚಿಕ್ಕನಾಯಕನಹಳ್ಳಿ	216	141	62	14	4	0	0	
2	ಗುಬ್ಬಿ	264	165	68	22	2	01	0	
3	ಕೊರಟಗೆರೆ	180	108	43	10	3	0	0	
4	ಕುಣಿಗಲ್	302	163	68	16	2	0	0	
5	ಮಧುಗಿರಿ	226	174	70	16	4	0	0	
6	ಪಾವಗಡ	137	144	72	16	2	0	0	
7	ಶಿರಾ	281	205	81	21	5	0	0	
8	ತಿಪಟೂರು	187	132	57	18	6	02	0	
9	ತುಮಕೂರು	310	336	171	65	29	05	2	1ಸರ್ಕಾರಿ
10	ತುರುವೇಕೆರೆ	205	116	56	13	3	0	0	1ಸರ್ಕಾರಿ
	ಒಟ್ಟು	**2308**	**1684**	**748**	**211**	**60**	**08**	**02**	**14**

ಈ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳ ಸಂಖ್ಯೆ 2308 ಇದ್ದು, ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ 1684 ಇರುತ್ತವೆ. ಹಾಗೆಯೇ ಪ್ರೌಢಶಾಲೆಗಳ ಸಂಖ್ಯೆ 748 ಇರುತ್ತವೆ, ಪದವಿ ಪೂರ್ವ ಕಾಲೇಜುಗಳ ಸಂಖ್ಯೆ 211 ಇದ್ದು ಪದವಿ ಕಾಲೇಜುಗಳ ಸಂಖ್ಯೆ ಸರ್ಕಾರಿ 19 ಮತ್ತು ಖಾಸಗಿ 41 ಇರುತ್ತವೆ. 02 ವೈದ್ಯಕೀಯ ಕಾಲೇಜುಗಳು, ಒಂದು ದಂತ ಶಿಕ್ಷಣ ಕಾಲೇಜು, ಪಾಲಿಟೆಕ್ನಿಕ್ ಸರ್ಕಾರಿ ಕಾಲೇಜು 02, ಖಾಸಗಿ ಕಾಲೇಜು 12 ಇರುತ್ತವೆ, ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು 08 ಇರುತ್ತವೆ. ಹಾಗೂ ಮುಖ್ಯವಾಗಿ ತುಮಕೂರು ನಗರದಲ್ಲಿ ವಿಶ್ವವಿದ್ಯಾನಿಲಯ ಇದ್ದು ಜಿಲ್ಲೆಯ ತಳ ಮಟ್ಟದವರೆಗೂ ಉನ್ನತ ಶಿಕ್ಷಣ ಪ್ರಯೋಜನವಾಗುತ್ತಿರುವುದು ತಿಳಿಯುತ್ತದೆ. ಶಿಕ್ಷಣ ಮತ್ತು ಉದ್ಯೋಗದ ನಡುವೆ ನೇರ ಸಂಬಂಧವಿರುವುದು ಈಗಾಗಲೇ ಎಲ್ಲರ ಅರಿವಿಗೆ ಬಂದಿರುವುದು. ಈ ಮೂಲಕ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳ ಪ್ರಮಾಣವನ್ನು ಕ್ರಮೇಣ ಹೆಚ್ಚಿಸಿರುವುದು ಮತ್ತು ಇದರಿಂದ ಓದುಗರ ಸಂಖ್ಯೆಯ ವೇಗವನ್ನು ಹೆಚ್ಚಿಸಿರುವುದನ್ನು ದಾಖಲೆಗಳು ವ್ಯಕ್ತಪಡಿಸುತ್ತವೆ.

2.13. ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪಕ್ಷಿನೋಟ

ತುಮಕೂರು ಜಿಲ್ಲೆಯಲ್ಲಿ 10 ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯನ್ನು ಈ ಕೆಳಕಂಡ ಕೋಷ್ಟಕ ತಿಳಿಸುತ್ತದೆ.

ಕೋಷ್ಟಕ: 2.8

ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪಕ್ಷಿನೋಟ

ಕ್ರ.ಸಂ.	ತಾಲ್ಲೂಕು	2001ರ ಜನಗಣತಿ		2011ರ ಜನಗಣತಿ	
		ಪ.ಜಾ	ಪ.ಪಂ	ಪ.ಜಾ	ಪ.ಪಂ
1	ಪಾವಗಡ	27.08	16.47	27.49	17.24
2	ಮಧುಗಿರಿ	23.01	11.62	24.11	12.19
3	ಕುಣಿಗಲ್	12.99	6.81	13.78	1.21
4	ತುರುವೇಕೆರೆ	13.14	2.55	13.61	2.78
5	ಚಿಕನಾಯಕನಹಳ್ಳಿ	17.15	7.89	18.29	8.32
6	ಗುಬ್ಬಿ	15.95	7.04	16.60	7.30
7	ಕೊರಟಗೆಗರೆ	22.03	10.21	22.97	11.24
8	ಶಿರಾ	21.63	8.78	22.28	9.17
9	ತಿಪಟೂರು	14.03	3.59	14.08	3.62
10	ತುಮಕೂರು	16.36	5.64	16.63	5.87
ಒಟ್ಟು		**18.34**	**7.50**	**18.92**	**7.82**

ಕೋಷ್ಟಕ–3 ರಲ್ಲಿ ಕಾಣಿಸಿದಂತೆ ಪರಿಶಿಷ್ಟ ಜಾತಿಯವರು ಜಿಲ್ಲೆಯಲ್ಲಿ ಒಟ್ಟು ಕ್ರಮಾನುಸಾರ 2001ರ ಜನಗಣತಿ ಪ್ರಕಾರ ಶೇಕಡ 18.34ರಷ್ಟು, 2011 ರ ಜನಗಣತಿಯ ಪ್ರಕಾರ ಶೇಕಡ 18.92 ರಷ್ಟು ಇರುವುದು ತಿಳಿಯುತ್ತದೆ. ಮಧುಗಿರಿ ತಾಲ್ಲೂಕಿನಲ್ಲಿ 2001 ರ ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿಯವರು ಶೇಕಡ 23.01ರಷ್ಟು ಪಾವಗಡ ತಾಲ್ಲೂಕಿನಲ್ಲಿ ಶೇಕಡ 27.08ರಷ್ಟು ಜನಸಂಖ್ಯೆ ಹೊಂದಿರುವುದು. 2011ರ ಜನಗಣತಿಯ ಪ್ರಕಾರ ಮಧುಗಿರಿ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿಯವರು ಶೇಕಡ 24.11 ಇದ್ದು ಪಾವಗಡ ತಾಲ್ಲೂಕಿನಲ್ಲಿ ಶೇಕಡ 27.49ರಷ್ಟು ಜನಸಂಖ್ಯೆ ಹೊಂದಿರುತ್ತದೆ. ಎರಡು ತಾಲ್ಲೂಕುಗಳನ್ನು ತಾಳೆ ಹಾಕಿ ನೋಡಿದರೆ ಜಿಲ್ಲೆಯಲ್ಲೆ ಹೆಚ್ಚು ಪರಿಶಿಷ್ಟಜಾತಿ ಜನರು ಇರುವುದು ತಿಳಿಯುತ್ತದೆ. 2001 ರಜನಗಣತಿಯ ಪ್ರಕಾರ ಕುಣಿಗಲ್ ತಾಲ್ಲೂಕಿನಲ್ಲಿ ಪರಿಶಿಷ್ಟಜಾತಿ

ಜನಸಂಖ್ಯೆ ಶೇಕಡ 12.99 ರಷ್ಟು, ತುರುವೇಕೆರೆ ಶೇಕಡ 13.14ರಷ್ಟು ಇದ್ದು ಮತ್ತು 2011ರ ಜನಗಣತಿಯ ಪ್ರಕಾರ ಕ್ರಮಾನು ಕಾರವಾಗಿ ಇದೇ ತಾಲ್ಲೂಕುಗಳಲ್ಲಿ ಶೇಕಡ 13.78 ಮತ್ತು ಶೇಕಡ 13.61ರಷ್ಟು ಇರುವುದರೊಂದಿಗೆ ಜಿಲ್ಲೆಯಲ್ಲೇ ಈ ಎರಡು ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿಯವರು ಅತ್ಯಂತ ಕಡಿಮೆ ಜನಸಂಖ್ಯೆ ಹೊಂದಿದ್ದು ತಿಳಿಯುತ್ತದೆ. ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಪ್ರಮಾಣ 2001ರಲ್ಲಿ ಶೇಕಡ 7.50ರಷ್ಟು ಇದ್ದು, 2011ರಲ್ಲಿ ಶೇಕಡ 7.82ರಷ್ಟು ಇರುವುದು. ಕ್ರಮವಾಗಿ 2001ರ ಜನಗಣತಿಯ ಪ್ರಕಾರ ಪಾವಗಡ ತಾಲ್ಲೂಕಿನಲ್ಲಿ ಪರಿಶಿಷ್ಟ ಪಂಗಡದವರು ಶೇಕಡ 16.47ರಷ್ಟು, ಮಧುಗಿರಿ ತಾಲ್ಲೂಕಿನಲ್ಲಿ ಶೇಕಡ 11.62ರಷ್ಟು ಇರುವುದರೊಂದಿಗೆ ಅತಿ ಹೆಚ್ಚು ಜನಸಂಖ್ಯೆ ಹೊಂದಿದ ತಾಲ್ಲೂಕುಗಳಾಗಿರುತ್ತವೆ. ಆದರೆ ತುರುವೇಕೆರೆ ತಾಲ್ಲೂಕಿನಲ್ಲಿ ಇದೇ ಪರಿಶಿಷ್ಟ ಪಂಗಡದವರು ಶೇಕಡ 2.55 ರಷ್ಟು, ತಿಪಟೂರು ಶೇಕಡ 3.59ರಷ್ಟು ಜನ ಸಂಖ್ಯೆ ಹೊಂದಿದ್ದು. 2011ರ ಜನಗಣತಿಯ ಪ್ರಕಾರ ಕುಣಿಗಲ್ ಶೇಕಡ 1.21ರಷ್ಟು , ತಿಪಟೂರು ಶೇಕಡ 3.62ರಷ್ಟು ಇದ್ದು ಈ ಎರಡು ತಾಲ್ಲೂಕುಗಳು ಜಿಲ್ಲೆಯಲ್ಲೇ ಅತ್ಯಂತ ಕಡಿಮೆ ಪರಿಶಿಷ್ಟ ಪಂಗಡದವರು ಇರುವ ತಾಲ್ಲೂಕುಗಳು ಎಂದು ತಿಳಿಯುತ್ತದೆ.

2.14 ಜಿಲ್ಲೆಯಲ್ಲಿ ಆರೋಗ್ಯ ಕೇಂದ್ರಗಳ ವಿವರ

ಜನರ ಸೇವ ವರ್ಗದಲ್ಲಿ ಆರೋಗ್ಯ ಕೇಂದ್ರಗಳು ಸೇವೆ ಮಾಡುವಲ್ಲಿ ಈ ಮೂಲಕ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಮಹತ್ತರ ಪಾತ್ರವಹಿಸುವವು. ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರದಲ್ಲಿ ಒಂದು ಜಿಲ್ಲಾ ಆಸ್ಪತ್ರೆಯಿದ್ದು 400 ಹಾಸಿಗೆಗಳು ಇದ್ದು ಜನರಿಗೆ ಉತ್ತಮವಾದ ಸೇವೆ ಸಲ್ಲಿಸುತ್ತಿರುವುದು ಕಂಡು ಬಂದಿದೆ. ತುಮಕೂರು ಹೊರತುಪಡಿಸಿದರೆ ಜಿಲ್ಲೆಯ 09 ತಾಲ್ಲೂಕುಗಳಲ್ಲಿ 09 ತಾಲ್ಲೂಕು ಕೇಂದ್ರ ಆಸ್ಪತ್ರೆಗಳು ಕೆಲಸ ನಿರ್ವಹಿಸುತ್ತವೆ. ಹಾಗೂ ಇತರೆ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಖಾಸಗಿ ಆಸ್ಪತ್ರೆಗಳಿದ್ದು ಅವು ಕೆಲಸನಿರ್ವಹಿಸುತ್ತವೆ. ಒಟ್ಟು ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ 157 ಮತ್ತು ಖಾಸಗಿ ಕ್ಲೀನಿಕ್, ನರ್ಸಿಂಗ್‌ಹೊಮ್ ಸಂಖ್ಯೆ 97 ಇರುತ್ತವೆ ಮತ್ತು ಖಾಸಗಿ ಆಸ್ಪತ್ರೆಗಳ ಸಂಖ್ಯೆ 519 ಇರುತ್ತವೆ. ಸರ್ಕಾರಿ ವೈದ್ಯರ ಸಂಖ್ಯೆ 208 ಇದ್ದು ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆ 2311 ಇರುತ್ತವೆ. ಔಷಧಿ ಅಂಗಡಿಗಳ ಸಂಖ್ಯೆ 699 ಇರುತ್ತವೆ, ರಕ್ತನಿಧಿಗಳು ಜಿಲ್ಲೆಯಲ್ಲಿ ಒಟ್ಟು 10 ಇರುತ್ತವೆ. ಅಲೋಪತಿ ಆಸ್ಪತ್ರೆಗಳ ಸಂಖ್ಯೆ 157 ಮತ್ತು ಭಾರತೀಯ ವೈದ್ಯ ಪದ್ಧತಿಯ ಆಸ್ಪತ್ರೆಗಳ ಸಂಖ್ಯೆ 12 ಇದ್ದು ಪ್ರಾಥಮಿಕ ಆರೋಗ್ಯ ಕೇಂದ್ರಗಳು 143 , ಸಮುದಾಯ ಆರೋಗ್ಯ ಕೇಂದ್ರಗಳು 04 ಇರುವುದು ಕಂಡುಬಂದಿದೆ. ಆರೋಗ್ಯಕ್ಕೆ ಪೂರಕವಾಗಿ ಜನರಿಗೆ ಸೇವೆ ಸಲ್ಲಿಸುತ್ತಿರುವುದು ಕಂಡು ಬಂದಿದೆ.

2.15 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೇವೆಗಳ ವಿವರ

ಜಿಲ್ಲೆಯಲ್ಲಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೆ ಪೂರಕವಾಗಿ ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆ ಬಹು ಪ್ರಕಾರದ ಕಾರ್ಯಕ್ರಮಗಳನ್ನು ಸರ್ಕಾರ ಹಿಂದಿನಿಂದಲೂ ಅನುಷ್ಠಾನ ಮಾಡಿಕೊಂಡು ಬಂದಿದೆ. ಜನರು ಆ ಕಾರ್ಯಕ್ರಮಗಳ ಸದುಪಯೋಗ ಪಡೆಯುತ್ತಿರುವುದನ್ನು ತಿಳಿಯುತ್ತದೆ. ಜಿಲ್ಲೆಯಲ್ಲಿ ಒಟ್ಟು ಅಂಗನವಾಡಿ ಕೇಂದ್ರಗಳು 4081 ಇದ್ದು ಅದಕ್ಕೆ ಎದುರಾಗಿ ಸ್ವಂತ ಕಟ್ಟಡದಲ್ಲಿ 2452 ಇದ್ದು ಸೇವಕಾರ್ಯಗಳು ನಡೆಯುತ್ತಿರುವುದು ಕಂಡು ಬಂದಿದೆ. ಜಿಲ್ಲೆಯಲ್ಲಿ 432 ಶಾಲಾ ಕಟ್ಟಡಗಳು ಇದ್ದು ತರಗತಿಗಳು ನಡೆಯುತ್ತವೆ ಹಾಗೂ ಇತರೆ ಖಾಸಗಿ ಮನೆಗಳಲ್ಲಿ 1197 ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿರುವುದನ್ನು ಕಾಣಬಹುದು. ಈ ಮೂಲಕ ಗರ್ಭಿಣಿಯರಿಗೆ, ಬಾಣಂತಿಯರಿಗೆ ಹಾಗೂ ಕಿಶೋರಿಯರಿಗೆ ಅನುಕೂಲವಾಗುತ್ತಿರುವುದು ತಿಳಿಯುತ್ತದೆ.

ಮಹಿಳೆಯರ ಸಬಲೀಕರಣಕ್ಕೆ ಅನುಗುಣವಾಗಿ ಸರ್ಕಾರ ಜಿಲ್ಲೆಯಲ್ಲಿ ಒಟ್ಟು 10,234 ಸ್ತ್ರೀ ಶಕ್ತಿ ಅಥವಾ ಸ್ವಸಹಾಯ ಸಂಘಗಳು ರಚನೆಯಾಗಿ ಸಂಘಟನೆಗಳ ಮೂಲಕ ಕಾರ್ಯ ನಿರ್ವಹಿಸುತ್ತವೆ. ಒಟ್ಟು ಮಹಿಳೆ ಸದಸ್ಯರ ಸಂಖ್ಯೆ 1,65,832 ಇದ್ದು ಪರಿಶಿಷ್ಟ ಜಾತಿ ಮಹಿಳೆಯರ ಸಂಖ್ಯೆ 33,731 ಇದ್ದು, ಪರಿಶಿಷ್ಟ ಪಂಗಡದ ಮಹಿಳೆಯರ ಸಂಖ್ಯೆ 16008 ಇದ್ದು ಇತರೆ ಮಹಿಳೆಯರ ಸಂಖ್ಯೆ 1,16,093 ತನ್ನ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ದಾಖಲಾತಿಗಳ ಮೂಲಕ ವ್ಯಕ್ತವಾಗುತ್ತದೆ.

2.16 ಜಿಲ್ಲೆಯಲ್ಲಿ ಕುಡಿಯುವ ನೀರಿನ ವಿವರ

2011 ರ ಜನಗಣತಿಯ ಪ್ರಕಾರ ಒಟ್ಟು ಜಿಲ್ಲೆಗಳಲ್ಲಿರುವ ಕುಟುಂಬಗಳ ಸಂಖ್ಯೆ 6,36,394 ಇದ್ದು ಕುಡಿಯುವ ನೀರಿಗೆ ಹಲವು ಮೂಲಗಳನ್ನು ಅಳವಡಿಸಿ ಆ ಮೂಲಕ ನೀರು ಸರಬರಾಜು ಆಗುತ್ತಿದೆ. ಅದರಲ್ಲಿ ಕೊಳವೆಯಿಂದ ಸರಬರಾಜು ಆಗುವುದು ಶೇಕಡ 66.84 ರಷ್ಟು ಇದ್ದರೆ, ಬಾವಿ ಮೂಲಕ ಸರಬರಾಜು ಆಗುವುದು ಶೇಕಡ 1.71ರಷ್ಟು ಇರುತ್ತದೆ. ಕೈಪಂಪಿನಿಂದ ಸರಬರಾಜು ಆಗುವುದು ಶೇಕಡ 6.32ರಷ್ಟು ಇರುವುದು. ಕೊಳವೆ ಬಾವಿಗಳಿಂದ ಸರಬರಾಜು ಆಗುವುದು ಶೇಕಡ 23.89ರಷ್ಟು ಕಾಣಬಹುದು (ಎಂ.ರಾಜಣ್ಣ ತುಮಕೂರು ಜಿಲ್ಲೆಯ ಅಂಕಿ ಅಂಶಗಳ ನೋಟ 2011ರ ಜನಗಣತಿ).

2.17 ಜಿಲ್ಲೆಯಲ್ಲಿ ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಪಡಿತರ ಚೀಟಿದಾರರ ವಿವರ

ತುಮಕೂರು ಜಿಲ್ಲೆಯಲ್ಲಿ ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಪಡಿತರ ಚೀಟಿದಾರರ ಸಂಖ್ಯೆಯನ್ನು ವಿಶ್ಲೇಷಿಸಿದರೆ ತುಮಕೂರು ಜಿಲ್ಲೆಯಲ್ಲಿ ಒಟ್ಟು ಕುಟುಂಬಗಳು ಅದರಲ್ಲಿ ಬಿ.ಪಿ,ಎಲ್ ಪಡಿತರ

ಚೀಟಿಗಳು ಮತ್ತು ಎ.ಪಿ.ಎಲ್ ಪಡಿತರ ಚೀಟಿಗಳು ಕೋಷ್ಟಕದಲ್ಲಿ ಒಳಗೊಂಡಿರುತ್ತದೆ. ಗ್ರಾಮೀಣ ಮತ್ತು ನಗರ ಎರಡು ಪ್ರದೇಶಗಳಲ್ಲಿ ಬರುವ ಮಾಹಿತಿಯನ್ನು ತಿಳಿಸುತ್ತದೆ.

ಕೋಷ್ಟಕ : 2.9

ಜಿಲ್ಲೆಯಲ್ಲಿ ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಪಡಿತರ ಚೀಟಿದಾರರ ವಿವರ

	ಬಿ.ಪಿ.ಎಲ್ ಪಡಿತರ ಚೀಟಿಗಳು					ಎ.ಪಿ.ಎಲ್ ಪಡಿತರ ಚೀಟಿಗಳು			
	ಅಂತ್ಯೋದಯ	ಅಕ್ಷಯ ಸಿಲೆಂಡರ್ ಸಹಿತ	ಅಕ್ಷಯ ಸಿಲೆಂಡರ್ ರಹಿತ	ಒಟ್ಟು	ಶೇಕಡ	ಸಿಲೆಂಡರ್ ಸಹಿತ	ಸಿಲೆಂಡರ್ ರಹಿತ	ಒಟ್ಟು	ಶೇಕಡ
ಗ್ರಾಮೀಣ	45853	42583	369849	458285	79.92	23392	55918	79310	79.08
ನಗರ	3599	36004	75551	115154	20.08	14430	6551	20981	20.92
ಒಟ್ಟು	49452	78587	445400	573439	100.00	37822	62469	100291	100.00

ತುಮಕೂರು ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಬಿ.ಪಿ.ಎಲ್ ಚೀಟಿದಾದರರ ಒಟ್ಟು 5,73,439 ಇದ್ದು ಗ್ರಾಮೀಣದಲ್ಲಿ 4,52,885 ಮತ್ತು ನಗರ ಪ್ರದೇಶದಲ್ಲಿ 1,15,455 ಇರುತ್ತವೆ. ಅನುಕ್ರಮವಾಗಿ ಶೇಕಡ ವಾರು ಪ್ರಮಾಣದಲ್ಲಿ ನೋಡಿದರೆ ಗ್ರಾಮೀಣ ಶೇಕಡ 79.92ರಷ್ಟು ಇದ್ದರೆ ನಗರ ಪ್ರದೇಶದಲ್ಲಿ ಶೇಕಡ 20.08ರಷ್ಟು ಇರುತ್ತದೆ. ಹಾಗೆಯೇ ಎ.ಪಿ.ಎಲ್ ಪಡಿತರ ಚೀಟಿಗಳನ್ನು ಅವಲೋಕಿಸಿದರೆ ಗ್ರಾಮೀಣ ಪ್ರದೇಶದಲ್ಲಿ ಶೇಕಡ 79.08 ಇದ್ದರೆ ನಗರ ಪ್ರದೇಶದಲ್ಲಿ ಶೇಕಡ 20.92 ಇರುವುದು ಕಂಡುಬರುವುದು.

2.18. ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮಪಂಚಾಯತಿ ಪಕ್ಷಿನೋಟ

ತುಮಕೂರು ಜಿಲ್ಲೆಯಲ್ಲಿ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಆಯಾಮದ ಹಿನ್ನೆಲೆಯಲ್ಲಿ ಪ್ರಮುಖವಾಗಿ ಎರಡು ಪ್ರಾದೇಶಿಕ ಅಸಮತೋಲನಗಳನ್ನು ಗುರುತಿಸಬಹುದು. ಈ ಜಿಲ್ಲೆಯಲ್ಲಿ ಅಸಮತೋಲನ ಇದೆಯೇ? ಇದ್ದರೆ ಅದು ಯಾವ ಪ್ರದೇಶದಲ್ಲಿ ಇದೆ? ಹಾಗಾದರೆ ಅಂತಹವುದನ್ನು ಗುರುತಿಸುವುದಾದರು ಹೇಗೆ? ಒಮ್ಮೆಲೆ ಇಂತಹ ಬಹುತರದ ಪ್ರಶ್ನೆಗಳನ್ನು ಎತ್ತಿದರೆ ಜಿಲ್ಲೆಯೊಳಗಿನ ಮತ್ತು ಸುತ್ತಮುತ್ತಲಿನ ಸತ್ಯಾ ಸತ್ಯತೆಗಳನ್ನು ಅರಿತರೆ ಎರಡು ಪ್ರಕಾರದ ವಲಯಗಳನ್ನು ಗುರುತಿಸಬಹುದು. ಒಂದು ನೀರಾವರಿ ಪ್ರದೇಶದ ವಲಯವಾದರೆ ಇನ್ನೊಂದು ಬರಪೀಡಿತ ಪ್ರದೇಶ ಹಾಗೆಯೇ ಮಧುಗಿರಿ ತಾಲ್ಲೂಕು ಬರಪೀಡಿತ ಪ್ರದೇಶದ ವ್ಯಾಪ್ತಿಗೆ ಬರುವುದು. ಮಧುಗಿರಿ ತಾಲ್ಲೂಕು ಕೇಂದ್ರಕ್ಕೆ 12 ಕಿಲೋಮೀಟರ್ ದೂರದಲ್ಲಿದ್ದು, ದೊಡ್ಡೇರಿ ಗ್ರಾಮಪಂಚಾಯತಿ ಮಧುಗಿರಿ ತಾಲ್ಲೂಕಿಗೆ ಸೇರಿರುವುದು. ಈ ಗ್ರಾಮ ಪಂಚಾಯತಿ ಅಧ್ಯಯನದ ಒಂದು ಕ್ಷೇತ್ರವಾಗಿರುತ್ತದೆ. ದೊಡ್ಡೇರಿ ಒಂದು

ಹೋಬಳಿ ಕೇಂದ್ರವಾಗಿದ್ದು, ಬಹುಪಾಲು ಆಡಳಿತ ಕಛೇರಿಗಳು ಮತ್ತು ವ್ಯಾಪಾರ ಕೇಂದ್ರಗಳು ಬಡವನಹಳ್ಳಿಗೆ ಸೇರಿರುತ್ತವೆ. ಬಡವನಹಳ್ಳಿ ತುಮಕೂರು ಜಿಲ್ಲೆಯಲ್ಲೇ ಅತ್ಯಂತ ದೊಡ್ಡ ಹೂವಿನ ಮಾರುಕಟ್ಟೆಗೆ ಹೆಸರಾಗಿರುವುದು ಕಂಡುಬರುತ್ತದೆ. ಅದಕ್ಕೆ ದೊಡ್ಡೇರಿ ಹೆಸರಿಗೆ ಮಾತ್ರ ಅದು ಹೋಬಳಿಯಾಗಿರುವುದು ಕಂಡುಬರುತ್ತದೆ.

ದೊಡ್ಡೇರಿ ಗ್ರಾಮಪಂಚಾಯತಿಯ ಐಸಿಹಾಸಿಕ ಹಿನ್ನೆಲೆ

ದೊಡ್ಡೇರಿ ಗ್ರಾಮಪಂಚಾಯತಿ ಹಿಂದೆ ಇದು ಒಂದು ಚಿಕ್ಕಗ್ರಾಮವಾಗಿ ಗುರುತಿಸಿಕೊಂಡಿದ್ದು, ಐತಿಹಾಸಿಕವಾಗಿ ಇದಕ್ಕೆ ತನ್ನದೇ ಆದ ಒಂದು ಇತಿಹಾಸವಿರುವುದು. ಈಗಲೂ ಇಲ್ಲಿಯ ಹಳೆಯ ಕಾಲದ ಕೋಡಿಲಿಂಗೇಶ್ವರ ದೇವಸ್ಥಾನದಲ್ಲಿರುವ ಕೆತ್ತನೆಗಳು ಮತ್ತು ಆಚರಣೆಗಳನ್ನು ಐತಿಹಾಸಿಕ ಆಯಾಮದಲ್ಲಿ ನೋಡಿದರೆ ಈ ಪ್ರದೇಶ ಚೋಳರ ಆಳ್ವಿಕೆಗೆ ಒಳಪಟ್ಟಿರುವುದು ತಿಳಿದು ಬರುತ್ತದೆ. ಇದು ಗ್ರಾಮದ ಪಕ್ಕ ಕೆರೆಯ ಏರಿಯ ಕೋಡಿ ಸಮೀಪ ಇರುವುದರಿಂದ ಇದನ್ನು ಕೋಡಿಲಿಂಗೇಶ್ವರ ಎಂದು ಹೆಸರು ಬಂದಿರುವುದು ತಿಳಿದು ಬರುತ್ತದೆ. "ಎತ್ತರವಾದ ಪ್ರದೇಶದಲ್ಲಿ ಈ ಗ್ರಾಮವಿದ್ದು ನೋಡಲಿಕ್ಕೆ ಅದು ದೊಡ್ಡದಾದ ಏರಿಯ ರೂಪದಲ್ಲಿದ್ದರಿಂದ ಆ ಗ್ರಾಮವನ್ನು ಜನರು ಅದನ್ನು ದೊಡ್ಡ ಮತ್ತು ಏರಿ ಈ ಎರಡು ಶಬ್ದಗಳನ್ನು ಒಟ್ಟಿಗೆ ಸೇರಿಸಿ ಜನರು ಅದನ್ನು ಮುಂದೆ ದೊಡ್ಡೇರಿ" ಎಂದು ಕರೆಯಲ್ಪಟ್ಟರು ಎಂಬ ಘಟಿಸಿದ ಸಂಗತಿಗಳನ್ನು ಜನರು ಈಗಲೂ ಜನರ ಮನಸ್ಸಿನಲ್ಲಿ ಇನ್ನೂ ಹಸಿಯಾಗಿಯೇ ಉಳಿದಿರುವುದು ಪ್ರಸ್ತುತ ಅಧ್ಯಯನದಿಂದ ವ್ಯಕ್ತವಾಗುತ್ತದೆ(ಮೂಲ: ಗ್ರಾಮದ ಹಿರಿಯರ ಅನುಭವದ ಗುಂಪು ಚರ್ಚೆ).

ಈ ಪ್ರದೇಶದಲ್ಲಿ ಮಳೆಯ ಪ್ರಮಾಣ ಕಡಿಮೆ ಇದ್ದು, ನೀರಾವರಿ ಮೂಲಗಳು ಇರುವುದಿಲ್ಲ ಇದ್ದರೂ ಅದು ಕೇವಲ ಶೇಕಡ 5ರಷ್ಟು ಮಾತ್ರ ಕಾಣಬಹುದು. ಆದರೆ ಇರುವುದೊಂದು ಕೆರೆ ಇದ್ದು, ಮಳೆ ಬೀಳುವ ಪ್ರಮಾಣ ಕಡಿಮೆ ಇರುವುದರಿಂದ ಕೆರೆಯಲ್ಲೂ ನೀರು ಇಲ್ಲದೆ ಬಹುಪಾಲು ಜನರು ಒಣ ಬೇಸಾಯದಲ್ಲೇ ಮಳೆಯ ಆಶ್ರಿತ ಕೃಷಿ ಉತ್ಪನ್ನಗಳನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಗಳು ತುಂಬ ಕಡಿಮೆ ಪ್ರಮಾಣದಲ್ಲಿ ಕಾಣಬಹುದು. ಅದರಲ್ಲೂ ಪ್ರಮುಖವಾದ ಬೆಳೆಗಳೆಂದರೆ ಶೇಂಗಾ, ರಾಗಿ, ಇರುವುದರಲ್ಲಿಯೇ ಪ್ರತಿ ದಿನ ಅಲ್ಪ ಸ್ವಲ್ಪ ಹಣ ನೋಡುವ ಬೆಳೆಯೆಂದರೆ ಅದು ಕಾಕಡ ಹೂವು ಇದರ ಜೊತೆಯಲ್ಲಿ ಅಲ್ಪ ಪ್ರಮಾಣದಲ್ಲಿ ತೊಗರಿ ಮತ್ತು ಹಲಸಂದಿ ಬೆಳೆಯುವರು.

2.19. ಗ್ರಾಮೀಣಾಭಿವೃದ್ಧಿ ಯೋಜನೆಗಳ ಪಕ್ಷಿನೋಟ

ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಈ ಗ್ರಾಮಪಂಚಾಯತಿಯಲ್ಲಿ 12ನೇ ಹಣಕಾಸು ಯೋಜನೆಯಿಂದ ಕೆಲವು ಸಣ್ಣ ಪುಟ್ಟ ಯೋಜನೆಗಳನ್ನು ಅನುಷ್ಠಾನ ಮಾಡಿದ್ದಾರೆ. ಅವು

ಸಮರ್ಪಕವಾಗಿ ತಳಮಟ್ಟದವರೆಗೆ ತಲುಪಿರುವುದಿಲ್ಲ. ಅದರ ಬದಲಿಗೆ ಕೂಲಿಗಾಗಿ ಕಾಳು ಯೋಜನೆ ಅನುಷ್ಠಾನವಾಗಿರುವುದು ಕಂಡು ಬಂದಿದೆ. ಈ ಮೂಲಕವಾಗಿ ಹೊಲಗಳಲ್ಲಿ ಬದುಗಳು ಭೂ ಅಭಿವೃದ್ಧಿ ಕಾಮಗಾರಿಗಳು ನಡೆದಿರುವುದು, ಅದರಿಂದ ಯೋಜನೆಯ ಗುರಿ ಮುಟ್ಟುವಂತಹ ಪ್ರಯೋಜನವಾಗದಿದ್ದರೂ ಅಲ್ಪ ಪ್ರಮಾಣದ ಪ್ರಯೋಜನೆಗಳ ಮೂಲಕ ಈ ತರಹದ ಯೋಜನೆಗಳು ಬಂದು ಹೋಗಿದೆ. ಉದ್ಯೋಗ ಖಾತರಿ ಕಾಯಿದೆ ಪ್ರಾರಂಭವಾಗುವುದರ ಹಾಸುಪಾಸಿನಲ್ಲಿ 'ಗ್ರಾಮ ಸ್ವರಾಜ್' ಯೋಜನೆ ಈ ಪಂಚಾಯತಿಯಲ್ಲಿ ಅನುಷ್ಠಾನವಾಗಿದೆ. ಇದರಿಂದ ಕುಡಿಯುವ ನೀರು, ಚರಂಡಿ, ರಸ್ತೆ, ನೀರಿನ ತೊಟ್ಟಿಗಳು, ಕೃಷಿ ಹೊಂಡ ಮುಂತಾದ ಕಾಮಗಾರಿಗಳು ನಡೆದಿದೆ ಎಂದು ಗ್ರಾಮಪಂಚಾಯಿತಿ ನೌಕರರ ಮೂಲಕ ಮತ್ತು ದಾಖಲೆಗಳಿಂದ ತಿಳಿಯುತ್ತದೆ.


2.20. ಗುಬ್ಬಿ ತಾಲ್ಲೂಕಿನ ಬೆಲವತ್ತ ಗ್ರಾಮಪಂಚಾಯತಿ ಪಕ್ಷಿನೋಟ


ತುಮಕೂರು ಜಿಲ್ಲೆಯಲ್ಲಿ ಗುಬ್ಬಿ ತಾಲ್ಲೂಕು ಎರಡು ಮೂರು ದಶಕಗಳಿಂದ ಕೃಷಿಯಲ್ಲಿ ಅಭಿವೃದ್ಧಿ ಹೊಂದುತ್ತಾ ಬಂದಿರುವುದು. ಇದಕ್ಕೆ ಪೂರಕವಾದ ಅಂಶಗಳೆಂದರೆ ನೀರಾವರಿ ಪ್ರದೇಶದ ವ್ಯಾಪ್ತಿ ಹೆಚ್ಚುತ್ತಾ ಬಂದಿರುವುದು. ಬೆಲವತ್ತ ಗ್ರಾಮದಲ್ಲಿ ಗ್ರಾಮಪಂಚಾಯತಿ ಕೇಂದ್ರಕಛೇರಿ ಇರುವುದು. ಮೊದಲು ಈ ಗ್ರಾಮಕ್ಕೆ ಬೆಲವತ್ತ ಎಂಬ ಹೆಸರು ಹೇಗೆ ಬಂತು ಎನ್ನುವುದನ್ನು ಚರ್ಚಿಸುತ್ತ ಹೋದರೆ ಮೂಲತಹ ಈ ಗ್ರಾಮದ ಸುತ್ತ ಮುತ್ತ ಬೇಲದ ಹಣ್ಣಿನ ಮರಗಳಿವೆ. ಈ ಮರಗಳಿಂದ ಸಿಗುವ ಹಣ್ಣುಗಳು ಜನರಿಗೆ ಹೆಚ್ಚು ಉಪಯುಕ್ತವಾಗಿದ್ದು ಅದಕ್ಕೆ ಜನರಿಗೆ ಈ ಪ್ರದೇಶದಲ್ಲಿ ನಲೆಯೂರಿರುವ ಒಂದು ಚಿಕ್ಕ ಸಮುದಾಯಕ್ಕೆ 'ಬೆಲವತ್ತ' ಎಂಬ ಹೆಸರು ಬಂದಿರುವುದು(ಮೂಲ: ಗ್ರಾಮದ ಹಿರಿಯ ವಯಸ್ಸಿನ ಅನುಭವಿಗಳು). ಈ ಗ್ರಾಮ ತುಮಕೂರು ಜಿಲ್ಲಾ ಕೇಂದ್ರಕ್ಕೆ 22 ಕಿಲೋ ಮೀಟರ್ ಇರುವುದು. ಗ್ರಾಮಪಂಚಾಯತಿ ಕೇಂದ್ರ ಸ್ಥಾನದಿಂದ ಪ್ರತಿ ಗ್ರಾಮಗಳಿಗೂ ಡಾಂಬರ್ ರಸ್ತೆ ಸಂಪರ್ಕ ಇರುವುದು. ಎರಡು ರಾಜ್ಯ ಹೆದ್ದಾರಿಗಳು ಸಮೀಪವಿರುವುದು ಮತ್ತು ಸಮರ್ಪಕವಾದ ರೈಲು ಮಾರ್ಗಗಳು ಗ್ರಾಮಪಂಚಾಯಿತಿ ವ್ಯಾಪ್ತಿಯೊಳಗೆ ಹಾದು ಹೋಗುವುದು. ಈಗ ಕೆಲವು ಕನಿಷ್ಠ ಮೂಲಭೂತ ಅವಶ್ಯಕತೆಗಳಾದ ಕುಡಿಯುವ ನೀರು ಮತ್ತು ವಸತಿಯು ಅಲ್ಪ ಪ್ರಮಾಣದಲ್ಲಿರುವುದು ಕಂಡುಬುರುತ್ತವೆ. ಪ್ರಮುಖವಾಗಿ ಬೆಲವತ್ತ ಮತ್ತು ಅಕ್ಕಪಕ್ಕದ ಗ್ರಾಮಪಂಚಾಯತಿಗಳಾದ ನಿಟ್ಟೂರು ಮತ್ತು ಕಡಬ ವ್ಯಾಪ್ತಿ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಕೆರೆಗಳಿದ್ದು ಆ ಕೆರೆಗಳಿಗೆ ಮಳೆ ನೀರು ಬರುವುದರ ಜೊತೆಗೆ ಹೇಮಾವತಿ ಜಲಾಶಯದಿಂದ ಕೆಲ ಸಮಯದಲ್ಲಿ ನೀರು ಹರಿದು ಬರುತ್ತದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶದ ಬಹುಭಾಗ ನೀರಾವರಿಯಿಂದ ಕೂಡಿದ್ದು ಕೃಷಿಗೆ ಅನುಕೂಲವಾಗಿದೆ. ಬಹುಭಾಗ ನೀರಾವರಿ ಪ್ರದೇಶ ಇರುವುದರಿಂದ ಈ

ಭಾಗದಲ್ಲಿ ಹೆಚ್ಚು ತೆಂಗು, ಅಡಿಕೆ, ಬಾಳೆ, ಭತ್ತ ಮತ್ತು ರಾಗಿ ಪ್ರಮುಖ ಬೆಳೆಗಳಾಗಿರುತ್ತವೆ. ರೈತರಿಗೆ ಸ್ವಂತ ಉದ್ಯೋಗ, ಕೃಷಿ ಉತ್ಪನ್ನಗಳ ಲಭ್ಯತೆ ಕಂಡು ಬಂದರೆ ಕೃಷಿ ಕಾರ್ಮಿಕರಿಗೆ ಮತ್ತು ಕೃಷಿಯೇತರ ಕಾರ್ಮಿಕರಿಗೆ ನಿರಂತರವಾಗಿ ಕೂಲಿ ಸಿಗುವುದು ಕಂಡುಬರುವುದು.

ಗುಬ್ಬಿ ತಾಲ್ಲೂಕಿನ ರೇಖಾ ಚಿತ್ರ : 5

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪೂರ್ವ ಗ್ರಾಮೀಣಾಭಿವೃದ್ಧಿ ಯೋಜನೆಗಳ ಪಕ್ಷಿನೋಟ





2.21 ಜನಸಂಖ್ಯೆ ವಿವರ

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಬೆಲವತ್ತ ಗ್ರಾಮ ಪಂಚಾಯತಿ ಮತ್ತು ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಜನಸಂಖ್ಯೆಯನ್ನು ಅವಲೋಕಿಸಿದರೆ ಇವುಗಳ ಸಾಮ್ಯತೆ ಅಥವಾ ವ್ಯತ್ಯಾಸಗಳನ್ನು ಗುರುತಿಸಬಹುದು.

ಕೋಷ್ಟಕ: 2.10

ಜನಸಂಖ್ಯೆ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಜನಸಂಖ್ಯೆ	ಶೇಕಡ	ಜನಸಂಖ್ಯೆ	ಶೇಕಡ	ಜನಸಂಖ್ಯೆ	ಶೇಕಡ
ಪುರುಷ	2997	49.91	3318	50.91	6315	50.43
ಮಹಿಳೆ	3008	50.09	3200	49.09	6208	49.57
ಒಟ್ಟು	6005	100.00	6518	100.00	12523	100.00

ಬೆಲವತ್ತ ಮತ್ತು ದೊಡ್ಡೇರಿ ಗ್ರಾಮಪಂಚಾಯತಿಗಳಲ್ಲಿರುವ ಜನಸಂಖ್ಯೆಯನ್ನು ವಿಶ್ಲೇಷಿಸಿದರೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ 6,005 ಜನಸಂಖ್ಯೆ ಇದ್ದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ 6,518 ಜನಸಂಖ್ಯೆ ಹೊಂದಿದೆ. ಮಹಿಳೆಯರ ಜನಸಂಖ್ಯೆ ಬೆಲವತ್ತದಲ್ಲಿ ಶೇಕಡ 50.09 ಇದ್ದರೆ ದೊಡ್ಡೇರಿಯಲ್ಲಿ ಶೇಕಡ 49.09ರಷ್ಟು ಇದೆ. ಪರುಷರ ಜನಸಂಖ್ಯೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 49.91ರಷ್ಟು ಇದ್ದರೆ ದೊಡ್ಡೇರಿಯಲ್ಲಿ ಶೇಕಡ 50.91ರಷ್ಟು ಇರುವುದು ತಿಳಿದು ಬರುತ್ತದೆ. ಒಟ್ಟಾರೆ ಜನಸಂಖ್ಯೆಯಲ್ಲಿ ಬೆಲವತ್ತ ಗ್ರಾಮಪಂಚಾಯತಿಗಿಂತ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಕೇವಲ ಶೇಕಡ ಒಂದರಷ್ಟು ಮಾತ್ರ ಹೆಚ್ಚು ಇರುವುದು ಕಂಡುಬಂದಿದೆ(2011 ಜನಗಣತಿ ತುಮಕೂರು ಜಿಲ್ಲೆ ಅಂಕಿ ಅಂಶಗಳ ನೋಟ 2013–148).

2.22 ಕುಟುಂಬಗಳ ವಿವರ

ಬೆಲವತ್ತ ಮತ್ತು ದೊಡ್ಡೇರಿ ಗ್ರಾಮಪಂಚಾಯತಿಗಳಲ್ಲಿನ ಕುಟುಂಬಗಳ ವಿವರದ ಅಂಕಿ ಅಂಶಗಳನ್ನು ಗಮನಿಸಿದರೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಒಟ್ಟು ನೆಲೆಸಿರುವ ಕುಟುಂಬಗಳ ಸಂಖ್ಯೆ 1486 ಇರುತ್ತವೆ. ಹಾಗೆಯೇ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿರುವ ಕುಟುಂಬಗಳ ಒಟ್ಟು ಸಂಖ್ಯೆ 1558 ಇರುತ್ತವೆ. ಈ ಎರಡು ಗ್ರಾಮಪಂಚಾಯತಿಗಳಲ್ಲಿ ದೊಡ್ಡೇರಿ ಗ್ರಾಮ ಪಂಚಾಯತಿ ದೊಡ್ಡದಾಗಿದ್ದರೆ ಬೆಲವತ್ತ ಗ್ರಾಮ ಪಂಚಾಯತಿ ಚಿಕ್ಕದಾಗಿರುವುದು ಕಂಡುಬರುತ್ತದೆ (2011 ಜನಗಣತಿ ತುಮಕೂರು ಜಿಲ್ಲೆ ಅಂಕಿ ಅಂಶಗಳ ನೋಟ 2013–149).

ಕೋಷ್ಟಕ : 2.11

ಕುಟುಂಬಗಳ ವಿವರ

	ಸಾಕ್ಷರತೆಯ ಪ್ರಮಾಣ					
	ಬೆಲವತ್ತ	ಶೇಕಡ	ದೊಡ್ಡೇರಿ	ಶೇಕಡ	ಒಟ್ಟು	ಶೇಕಡ
ಪುರುಷ	2290	54.89	2460	58.77	4750	56.83
ಮಹಿಳೆ	1882	45.11	1726	41.23	3608	43.17
ಒಟ್ಟು	4172	100.00	4186	100.00	8358	100.00

ಬೆಲವತ್ತ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿರುವ ಒಟ್ಟು ಜನಸಂಖ್ಯೆ 6005 ಇದ್ದು, ಇಲ್ಲಿ ಒಟ್ಟು ಸಾಕ್ಷಾರತೆಯ ಸಂಖ್ಯೆ 4172 ಇದ್ದು, ಶೇಕಡ 69.47ರಷ್ಟು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿರುವ ಒಟ್ಟು ಜನಸಂಖ್ಯೆ 6518 ಇದ್ದು, ಇಲ್ಲಿನ ಸಾಕ್ಷಾರತೆಯ ಸಂಖ್ಯೆ 4186 ಇದ್ದು, ಶೇಕಡ 64.22 ರಷ್ಟು ಇರುವುದು ಕಂಡುಬರುತ್ತದೆ. ಪುರುಷರ ಸಾಕ್ಷಾರತೆಯ ಪ್ರಮಾಣ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಪುರುಷರ ಸಾಕ್ಷಾರತೆಯ ಪ್ರಮಾಣ 54.89 ಇದ್ದು, ಮಹಿಳೆಯ ಸಾಕ್ಷಾರತೆಯ ಪ್ರಮಾಣ ಶೇ45.11ರಷ್ಟು ಇದ್ದು ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಪುರುಷರ ಸಾಕ್ಷಾರತೆಯ ಪ್ರಮಾಣ 58.77 ಮತ್ತು ಮಹಿಳೆಯರು ಶೇಕಡ41.23 ಇರುವುದು ಕಂಡು ಬಂದಿದೆ. ಪುರುಷರ ಸಾಕ್ಷಾರತೆಯ ಪ್ರಮಾಣ ದೊಡ್ಡೇರಿಯಲ್ಲಿ ಹೆಚ್ಚು ಕಂಡು ಬಂದರೆ, ಮಹಿಳೆಯರದ್ದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಹೆಚ್ಚು ಕಂಡು ಬರುತ್ತದೆ.

2.23 ಕೃಷಿ ಕಾರ್ಮಿಕರ ವಿವರ

ಗುಬ್ಬಿ ತಾಲ್ಲೂಕಿನ ಬೆಲವತ್ತ ಗ್ರಾಮಪಂಚಾಯತಿ ಮತ್ತು ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮ ಪಂಚಾಯತಿ ಗ್ರಾಮಗಳಲ್ಲಿ ಕೃಷಿ ಕಾರ್ಮಿಕರ ಅಂಕಿ ಅಂಶಗಳನ್ನು ವಿಶ್ಲೇಷಿಸಿದರೆ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಪರುಷ ಕೃಷಿ ಕಾರ್ಮಿಕರು 188 ಇದ್ದು, ಶೇಕಡ 76.11ರಷ್ಟು ಇರುತ್ತದೆ. ಮಹಿಳಾ ಕೃಷಿ ಕಾರ್ಮಿಕರಲ್ಲಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ 59 ಇದ್ದು ಶೇಕಡ 23.89ರಷ್ಟು ಇದ್ದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಪುರುಷ ಕೃಷಿ ಕಾರ್ಮಿಕರ ಸಂಖ್ಯೆ 570 ಇದ್ದರೆ, ಮಹಿಳಾ ಕೃಷಿ ಕಾರ್ಮಿಕರ ಸಂಖ್ಯೆ 1013 ಇರುವುದು. ಅಂದರೆ ಶೇಕಡ 63.99ರಷ್ಟು ಇರುತ್ತದೆ. ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಕೃಷಿ ಕಾರ್ಮಿಕರ ಸಂಖ್ಯೆ ಹೆಚ್ಚು ಇದ್ದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಕಡಿಮೆ ಪ್ರಮಾಣದ ಕೃಷಿಕಾರ್ಮಿಕರು ಇರುವುದು ತಿಳಿದುಬಂದಿದೆ.

ಕೋಷ್ಟಕ: 2.12

ಕೃಷಿ ಕಾರ್ಮಿಕರ ವಿವರ

	ಬೆಲವತ್ತ	ಶೇಕಡ	ದೊಡ್ಡೇರಿ	ಶೇಕಡ	ಒಟ್ಟು	ಶೇಕಡ
ಪುರುಷ ಕೃಷಿ ಕಾರ್ಮಿಕರು	188	76.11	570	36.01	758	41.42
ಮಹಿಳಾ ಕೃಷಿ ಕಾರ್ಮಿಕರು	59	23.89	1013	63.99	1072	58.58
ಒಟ್ಟು	247	100.00	1583	100.00	1830	100.00

2.24 ಇತರೆ ಮುಖ್ಯ ಕೆಲಸಗಾರರು

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಬೆಲವತ್ತ ಗ್ರಾಮಪಂಚಾಯತಿ ಮತ್ತು ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮಪಂಚಾಯತಿ ಗ್ರಾಮಗಳಲ್ಲಿ ಇತರೆ ಮುಖ್ಯ ಕೆಲಸಗಾರರ ಅಂಕಿ ಅಂಶಗಳನ್ನು ವಿಶ್ಲೇಷಿಸಿದರೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಪುರುಷ ಇತರೆ ಮುಖ್ಯ ಕೆಲಸಗಾರರ 365 ಇದ್ದು ಶೇಕಡ 75.41ರಷ್ಟು ಇರುತ್ತದೆ. ಮಹಿಳಾ ಇತರೆ ಮುಖ್ಯ ಕೆಲಸಗಾರರ ಬೆಲವತ್ತ ಗ್ರಾಮಪಂಚಾಯತಿಯಲ್ಲಿ 119 ಇದ್ದು, ಶೇಕಡ 24.59 ಇದ್ದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಪುರುಷ ಇತರೆ ಮುಖ್ಯ ಕೆಲಸಗಾರರ ಸಂಖ್ಯೆ 219 ಇದ್ದು, ಶೇಕಡ 66.57ರಷ್ಟು ಇರುತ್ತದೆ. ಮಹಿಳಾ ಇತರೆ ಮುಖ್ಯ ಕೆಲಸಗಾರರ ಸಂಖ್ಯೆ 110 ಇರುವುದು ಅಂದರೆ ಶೇಕಡ 33.43ರಷ್ಟು ಇರುತ್ತದೆ. ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಇತರೆ ಮುಖ್ಯ ಕೆಲಸಗಾರರ ಸಂಖ್ಯೆ ಹೆಚ್ಚು ಇದ್ದು ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಕಡಿಮೆ ಪ್ರಮಾಣದ ಇತರೆ ಮುಖ್ಯ ಕೆಲಸಗಾರರ ನೋಡಬಹುದಾಗಿದೆ.

ಕೋಷ್ಟಕ: 2.13

ಇತರೆ ಮುಖ್ಯ ಕೆಲಸಗಾರರು

	ಬೆಲವತ್ತ	ಶೇಕಡ	ದೊಡ್ಡೇರಿ	ಶೇಕಡ	ಒಟ್ಟು	ಶೇಕಡ
ಪುರುಷ ಇತರೆ ಮುಖ್ಯ ಕೆಲಸಗಾರರು	365	75.41	219	66.57	584	71.83
ಮಹಿಳಾ ಇತರೆ ಮುಖ್ಯ ಕೆಲಸಗಾರರು	119	24.59	110	33.43	229	28.17
ಒಟ್ಟು	484	100.00	329	100.00	813	100.00

ಒಟ್ಟಾರೆ ಈ ಅಧ್ಯಯನವು ಅಧ್ಯಯನ ಕ್ಷೇತ್ರದ ಭೌಗೋಳಿಕ, ಸಾಮಾಜಿಕ ಮತ್ತು ಜನಸಂಖ್ಯಾತ್ಮಕ ವಿವರಣೆಯನ್ನು ನಮಗೆ ನೀಡುತ್ತದೆ. ಅಷ್ಟೇ ಅಲ್ಲದೇ ಮಹಿಳೆ, ಮಕ್ಕಳು ಮತ್ತು ದುಡಿಯುವ

ವರ್ಗಗಳ ಶಿಕ್ಷಣ, ಆರೋಗ್ಯ ಇತ್ಯಾದಿ ವಿಷಯಗಳನ್ನು ತಿಳಿಸುತ್ತದೆ. ಈ ವಿವರಗಳು ಒಂದು ಕ್ಷೇತ್ರದ ಅಧ್ಯಯನಕ್ಕೆ ಅತ್ಯಂತ ಮಹತ್ವವಾದುದು. ಅದರಲ್ಲಿಯೂ ಉದ್ಯೋಗ ಖಾತರಿಗೆ ಸಂಬಂಧಿಸಿದಂತೆ ಅಧ್ಯಯನ ನಮ್ಮದಾಗಿರುವುದರಿಂದ ಅದರ ಅನುಷ್ಠಾನ ಹಂತದಲ್ಲಿನ ಸಾಂಸ್ಕೃತಿಕ ರಾಜಕಾರಣವನ್ನು ಅರ್ಥಮಾಡಿಕೊಳ್ಳಲು ಈ ಎಲ್ಲಾ ವಿವರಗಳು ಅತ್ಯಂತ ಮಹತ್ವದಾಗಿರುತ್ತವೆ. ಈ ವಿವರಗಳನ್ನು ಆಧರಿಸಿ ಅಧ್ಯಯನವನ್ನು ಮಾಡಲಾಗಿದೆ. ವಿಶ್ಲೇಷಣೆಯ ಸಂದರ್ಭದಲ್ಲಿ ಈ ಅಧ್ಯಯನದ ವಿವರಗಳನ್ನು ಬಳಸುವ ಪ್ರಯತ್ನ ಮಾಡಲಾಗಿದೆ.

ಕೊನೆಯ ಟಿಪ್ಪಣಿಗಳು

1. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2004–05, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2005, ಪು.23.
2. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2005–06, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2006, ಪು.31.
3. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2006–07, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2007, ಪು.23–43
4. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2007–08, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2008, ಪು.8–24.
5. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2008–09, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2009, ಪು.
6. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2009–10, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2010, ಪು.8–19
7. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2010–11, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2011, ಪು.
8. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2012–13, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2013, ಪು.
9. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2013–14, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2005, ಪು.

10. ತುಮಕೂರು ಜಿಲ್ಲೆಯ 2011ರ ಜನಗಣತಿ ವರದಿ, ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ

11. The Directorate of Area Development Programmes Rural Development and Panchayat Raj Department, GOk

12. Abhishankar . K. (1969), Tumkur District Gazetteer, Publication Gazetter Dapartment of Karnataka, Tumkur

13. https://www.google.co.in/url Tumkur District, Karnataka-Central Ground Water Board Report

14. Nagaraj. N, Uttam Deb, GD Nageswara Rao, R Anusha and Cynthia Bantilan (2013) POLICY INDUCED TRANSFORMATION IN DR Tumkur District, Karnataka-Central Ground Water Board Report

15. Yland Agriculture: The Case of Tharati Village in Karnataka Research Program on Markets, Institutions and Policies ICRISAT, Patancheru 502324, AP, India

ಅಧ್ಯಾಯ ಮೂರು

ಉದ್ಯೋಗ ಖಾತರಿಯ ಐತಿಹಾಸಿಕ ಹಿನ್ನೆಲೆ

ಅಧ್ಯಾಯ ಮೂರು

ಉದ್ಯೋಗ ಖಾತರಿಯ ಐತಿಹಾಸಿಕ ಹಿನ್ನೆಲೆ

3.1. ಉದ್ಯೋಗ, ಬಡತನ ಮತ್ತು ಆಹಾರದ ಭದ್ರತೆಯ ನಡುವಿನ ಸಂಬಂಧ

ಆಹಾರದ ಸಾಮಾಜಿಕ ಭದ್ರತೆ ಮತ್ತು ಆಹಾರ ಸಮಸ್ಯೆಯನ್ನು ಅರಿಯಲು ಆಹಾರ ಮಾರುಕಟ್ಟೆಯ ರಾಜಕೀಯ ಆರ್ಥಿಕತೆಯನ್ನು ಅರ್ಥಮಾಡಿಕೊಳ್ಳಬೇಕು. ಕಾರ್ಮಿಕ ಮಾರುಕಟ್ಟೆಯ ರೀತಿ ನೀತಿಗಳನ್ನು ಅದು ಆಹಾರ ಭದ್ರತೆಯ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರುತ್ತಿದೆ ಎಂಬುದನ್ನು ತಿಳಿಯಲು ಇಲ್ಲಿ ಪ್ರಯತ್ನ ಮಾಡಲಾಗಿದೆ. ಆಹಾರ ಭದ್ರತೆಯ ಸಮಸ್ಯೆಗೂ ಬಡತನಕ್ಕೂ ನೇರವಾದ ಸಂಬಂಧವಿದೆ ಎನ್ನುವುದನ್ನು ಬಹುತೇಕ ಎಲ್ಲಾ ಅಭಿವೃದ್ಧಿ ಚಿಂತಕರು ಒಪ್ಪುತ್ತಾರೆ. ಬಡತನದ ಕಾರಣದಿಂದಾಗಿ ಅವಶ್ಯಕತೆ ಇರುವಷ್ಟು ಆಹಾರ ಪದಾರ್ಥಗಳನ್ನು ಕೊಳ್ಳಲಾಗುತ್ತಿಲ್ಲ ಎನ್ನುವುದು ಇಂಡಿಯಾ ಎಕ್ಸ್‌ಕ್ಲೂಶನ್ ವರದಿ–2014 ತಿಳಿಸುತ್ತದೆ. ಆಹಾರ ಭದ್ರತೆ ಎಂದರೆ "ವ್ಯಕ್ತಿಯೊಬ್ಬ ಆರೋಗ್ಯ ಪೂರ್ಣವಾದ ಜೀವನವನ್ನು ನಡೆಸಲು ಬೇಕಾದ ಅವಶ್ಯಕ ಆಹಾರ ಪದಾರ್ಥಗಳನ್ನು ಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು" ಎನ್ನುವುದನ್ನು ಮಜೀದ್ ರೆಹಮನ್, ವಾಸವಿ, ಪಿ.ಸಾಯಿನಾಥ, ಜೀನ್ ಡ್ರೇಜ್ ಮತ್ತು ಅಮರ್ತ್ಯಸೇನ್ ಅವರ ಅಧ್ಯಯನಗಳು ಗುರುತಿಸಿವೆ.

ಬಡವರು ತಮ್ಮ ಆಹಾರವನ್ನು ಪಡೆಯಲು ಪ್ರತಿದಿನ ದೈಹಿಕ ಶ್ರಮವನ್ನೇ ಅವಲಂಬಿಸಿದ್ದಾರೆ. ಆದ್ದರಿಂದ ಈ ದುಡಿಯುವ ವರ್ಗಕ್ಕೆ ಶ್ರಮ ಆಧಾರಿತ ಉದ್ಯೋಗವನ್ನು ಒದಗಿಸಿದರೆ ಆಹಾರ ಭದ್ರತೆಯ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು. ಇಂದು ಬಹು ಪ್ರಕಾರದ ಯೋಜನೆಗಳು ಬಡವರಿಗೆ ಕಲ್ಯಾಣ ರಾಷ್ಟ್ರದ ನೆಲೆಯಲ್ಲಿ ಸಹಾಯ ಧನವನ್ನು ಕೊಡುವುದರ ಬದಲು ಉತ್ಪಾದನೆ ಆಧಾರಿತ ಕೂಲಿಯನ್ನು ಕೊಡುವ ಉದ್ಯೋಗಗಳನ್ನು ಸೃಷ್ಟಿಸುವ ಬಗ್ಗೆ ವಿಶೇಷ ಗಮನವನ್ನು ಕೊಡುತ್ತಿಲ್ಲ. ಆದರೆ ಇದಕ್ಕೆ ಅಪವಾದವೆಂಬಂತೆ ಎಂಬತ್ತರ ದಶಕದಲ್ಲಿ ಆಹಾರ ಸಹಾಯಧನ

ನೀಡುವ ಬದಲು ಉತ್ಪಾದನೆ ಆಧಾರಿತ ಹಾಗೂ ಕೂಲಿಯನ್ನು ನೀಡುವಂತಹ ಉದ್ಯೋಗಗಳನ್ನು ಸೃಷ್ಟಿಸುವ ಮೂಲಕ ಬಡತನವನ್ನು ಕಡಿಮೆ ಮಾಡಬಹುದು ಎಂದು ಅರಿತು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿರುವುದು ಕಾಣುತ್ತದೆ. ಇಂದು ಆಹಾರ ಧಾನ್ಯಕ್ಕೆ ನೀಡುವ ಸಹಾಯಧನ ಯೋಜನೆಯ ಇತಿಮಿತಿಗಳು ಏನೆಂಬುದು ನಮಗೆ ಅರ್ಥವಾಗಿದೆ(ಪಿನ್‌ಸ್ಟಪ್-ಅಂಡರ್ ಸನ್, 1988). ಆರ್ಥಿಕ ಬೆಳವಣಿಗೆಯ ಮೂಲಕವೇ ನಾವು ಹಸಿವು ಮತ್ತು ಆಹಾರ ಸಮಸ್ಯೆಯನ್ನು ನೀಗಿಸಲು ಪ್ರಯತ್ನಿಸಬೇಕೆಂಬ ಅರಿವು ಎಲ್ಲರಲ್ಲೂ ಮೂಡಿದೆ(ವಿಶ್ವಬ್ಯಾಂಕ್, 1990 ಲಿಪ್ಟನ್ ಮತ್ತು ವ್ಯಾನ್‌ಡರ್ ಗಾಗ್, 1993). ಉದ್ಯೋಗದ ಮೂಲಕ ಆಹಾರ ಭದ್ರತೆ ಎನ್ನುವ ಕಾರ್ಯತಂತ್ರವು ಪರಿಣಾಮಕಾರಿ ಹಾಗು ಸುಸ್ಥಿರವಾದದ್ದು ಎಂಬುದು ಹೀಗಾಗಲೇ ನಿರೂಪಿತವಾಗಿದೆ. ಆ ಮೂಲಕವೇ ಸಂಪನ್ಮೂಲ ಬಳಕೆ ಹಾಗು ಸ್ಥಳೀಯ ಅಂತರಾಷ್ಟ್ರೀಯ ಅಭಿವೃದ್ಧಿ ಸಹಾಯಧನವನ್ನು ಈ ಅಭಿವೃದ್ಧಿಗೆ ನೀಡಲಾಗುತ್ತದೆ.

ಆರ್ಥಿಕ ಬೆಳವಣಿಗೆ ಎಷ್ಟೇ ಪ್ರಮಾಣದಲ್ಲಿ ಹೆಚ್ಚಳವಾದರೂ ಆಹಾರ ಅಭದ್ರತೆಯ ಸಮಸ್ಯೆ ಹೆಚ್ಚಾಗಿ ಹಳ್ಳಿಗಾಡಿನ ಭೂರಹಿತರು ಹಾಗು ನಗರ ಪ್ರದೇಶದ ಬಡವರನ್ನು ಹೆಚ್ಚಾಗಿ ಕಾಡುತ್ತಿವೆ. ಇದನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ನೋಡುವುದಾದರೆ ಆಫ್ರಿಕಾ ಹಾಗು ದಕ್ಷಿಣ ಏಷ್ಯಾಯಾದ ದೇಶಗಳಲ್ಲಿ ಆಹಾರ ಭದ್ರತೆ ಹೆಚ್ಚಾಗಿ ಕಂಡುಬರುತ್ತದೆ. ಕಡಿಮೆ ವರಮಾನ ಇರುವ ದೇಶಗಳ ಗ್ರಾಮೀಣ ಪ್ರದೇಶಗಳಲ್ಲಿ ಬಹುಜನರ ಭೂ ಹಿಡುವಳಿ ಪ್ರಮಾಣ ಅತ್ಯಂತ ಕಡಿಮೆ ಇರುವುದರಿಂದ ಸಂಪನ್ಮೂಲ ಕೊರತೆ ಉಂಟಾಗಿದೆ ಎಂದು ಹೇಳಲಾಗುತ್ತದೆ. ಗ್ರಾಮೀಣರಲ್ಲಿ ಬಹಳಷ್ಟು ಜನರಿಗೆ ಒಂದೇ ಒಂದು ದುಡಿಮೆಯ ಮಾರ್ಗ ಎಂದರೆ "ದೈಹಿಕ ಶ್ರಮ" ಮೂಲಕ ಆಹಾರ ಅಭದ್ರತೆಗೆ ಒಳಗಾಗುತ್ತಾರೆ. ಆಹಾರ ಭದ್ರತೆಗೆ ಇರುವ ಒಂದೇ ಒಂದು ಸಂಪನ್ಮೂಲ ಎಂದರೆ ದೈಹಿಕ ಶ್ರಮವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸುವುದೇ ಬಡತನ ನಿರ್ಮೂಲನೆಯ ಮಾರ್ಗವಾಗಿರುತ್ತದೆ ಎಂದು ಬಂಡವಾಳ ಆಧಾರಿತ ಅಭಿವೃದ್ಧಿ ಮಾದರಿಗಳು ಹೇಳುತ್ತವೆ. ಕಡಿಮೆ ಆದಾಯ ಇರುವ ದೇಶಗಳಲ್ಲಿ ಮಾನವ ಸಂಪನ್ಮೂಲ ಶೀಘ್ರಗತಿಯಲ್ಲಿ ಹೆಚ್ಚಳವಾಗುತ್ತದೆ. ಅದಕ್ಕೆ ಅನುಗುಣವಾಗಿ ಉದ್ಯೋಗಗಳನ್ನು ಸೃಷ್ಟಿಸುವುದು ಆ ದೇಶಗಳ ಮುಂದೆ ಇರಬಹುದಾದ ದೊಡ್ಡ ಸವಾಲಾಗಿದೆ. ಕೂಲಿಕಾರರ ಶಕ್ತಿಗೆ ಅನುಗುಣವಾಗಿ ಭೂಮಿ ಅಥವಾ ಬಂಡವಾಳವು ಹೆಚ್ಚಳವಾಗುತ್ತಿಲ್ಲ. ಹೆಚ್ಚು ಆದಾಯ ಇರುವ ದೇಶಗಳಲ್ಲಿ ದೈಹಿಕವಾಗಿ ಅರ್ಹತೆಯುಳ್ಳ ಕೆಲಸಗಾರರ ಸಂಖ್ಯೆ ಸ್ಥಿರವಾಗಿರುವಾಗ ಅಥವಾ ಕೆಲವೊಮ್ಮೆ ಕಡಿಮೆಯಾಗುತ್ತಿದ್ದು, ದೇಶಗಳಲ್ಲಿ ನಿರುದ್ಯೋಗ ಸಮಸ್ಯೆಗೆ ಯಾವುದೇ ರೀತಿಯ ಅರ್ಥಪೂರ್ಣ ಇರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾದ ರೀತಿಯಲ್ಲಿ ಕಡಿಮೆ ಆದಾಯ ಇರುವ ದೇಶಗಳಲ್ಲಿ ಅರೆ ಉದ್ಯೋಗ, ಕಡಿಮೆ ಪ್ರಮಾಣದ

ಉತ್ಪಾದನೆಯಂತಹ ಸಮಸ್ಯೆಗಳೇ ನಿಯಂತ್ರಣಕ್ಕೆ ಸಿಗುತ್ತಿಲ್ಲದಿರುವುದು ಕಂಡುಬರುತ್ತದೆ. ಆದರೆ ಕಾರ್ಮಿಕರ ಸಂಖ್ಯೆ ಮಾತ್ರ ವೇಗವಾಗಿ ಹೆಚ್ಚುತ್ತಿದೆ. 15 ರಿಂದ 64 ವಯೋಮಾನದ ಅರ್ಹ ಕೆಲಸಗಾರರ ಸಂಖ್ಯೆ 1990ರಲ್ಲಿ 33 ಬಿಲಿಯನ್ ಇದ್ದು 2020ರ ವೇಳೆಗೆ 66 ಬಿಲಿಯನ್ ಆಗುವ ನಿರೀಕ್ಷೆ ಇದೆ. ಅಂದರೆ ಇದು ಕೇವಲ ಎರಡು ದಶಕಗಳ ಅವಧಿಯಲ್ಲಿ ಶೇಕಡ 39ರಷ್ಟು ಹೆಚ್ಚಳ ವಾಗುತ್ತದೆ. ಈ ಹೆಚ್ಚಳ ಕೇವಲ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ, ಅದು ಸಹ ಅತ್ಯಂತ ಕಡುಬಡವರಿರುವ ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತದೆ. ಇಂದಿನ ಜಾಗತಿಕ ವಿದ್ಯಮಾನಗಳ ಪ್ರವೃತ್ತಿಯನ್ನು ಗಮನಿಸಿದರೆ ಉದ್ಯೋಗದ ಮೂಲಕವೇ ಬಡತನ ನಿರ್ಮೂಲನೆ ಸಾಧ್ಯ ಎಂದು ಕಲ್ಯಾಣ ರಾಷ್ಟ್ರ ಪರಿಕಲ್ಪನೆಯ ಅಭಿವೃದ್ಧಿ ಚಿಂತಕರು ಪ್ರತಿಪಾದಿಸಿದ್ದಾರೆ.

ಇತ್ತೀಚಿನ ವಿಶ್ವ ಬ್ಯಾಂಕ್‌ನ ಪರಿಸರ ಮರು ಹೊಂದಾಣಿಕೆ ನೀತಿಯೂ ಕೌಶಲ್ಯರಹಿತ ಶ್ರಮದ ಮೌಲ್ಯದಲ್ಲಿ ಕುಸಿತ ಉಂಟಾಗಿ ಬಂಡವಾಳದ ಮೌಲ್ಯವೇ ಪ್ರಧಾನವಾಗಿದೆ ಎಂದು ವಿಶ್ಲೇಷಣೆ ಮಾಡಲಾಗಿದೆ. ಅಂದರೆ ದೈಹಿಕ ಶ್ರಮಕ್ಕೆ ತಕ್ಕಬೆಲೆ ಸಿಗುತ್ತಿಲ್ಲ. ಈ ಪ್ರವೃತ್ತಿ ವಿಶೇಷವಾಗಿ ಆಫ್ರಿಕಾದಂತಹ ದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇಲ್ಲಿಯವರೆಗಿನ ನಾಗರೀಕ ಸಮಾಜದಲ್ಲಿನ ಅಶಾಂತಿ ಸಂದರ್ಭದ ಕಾರಣಗಳಿಂದಾಗಿ ಅನೇಕ ವಲಯಗಳಲ್ಲಿ ಪುನರ್‌ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದ್ದು ಇದನ್ನು ಮಾನವನ ದೈಹಿಕ ಶ್ರಮವನ್ನು ಬಳಸಿಕೊಳ್ಳುವುದರ ಮೂಲಕ ಮಾಡಬೇಕಾಗಿದೆ. ಸುಸ್ಥಿರ ಅಭಿವೃದ್ಧಿಯು ಸಂಪನ್ಮೂಲಗಳ ಹಾಗೂ ಮೂಲ ಸೌಕರ್ಯಗಳ ಸಮರ್ಥವಾದ ಬಳಕೆಯಿಂದ ಮಾತ್ರ ಸಾಧ್ಯ. ಹಾಗಾಗಿ ಮೂಲಸೌಕರ್ಯಗಳ ಅಭಿವೃದ್ಧಿಯನ್ನು ದೈಹಿಕ ಶ್ರಮ ಆಧಾರಿತ ಕಾರ್ಯಕ್ರಮಗಳ ಮೂಲಕವೇ ಮಾಡಬೇಕು. ಇಂತಹ ಕಾರ್ಯಕ್ರಮಗಳನ್ನು ಶ್ರಮ ಹಾಗೂ ಬಂಡವಾಳದ ನಡುವಿನ ವ್ಯತ್ಯಾಸವನ್ನು ಸರಿದೂಗಿಸುವ ಮೂಲಕವೇ ಕೈಗೆತ್ತಿಕೊಳ್ಳಬೇಕು. ಆಫ್ರಿಕಾದಲ್ಲಿ ಸಹ ಉಪಪ್ರಾಂತ್ಯಗಳಲ್ಲಿ ಆರ್ಥಿಕ ಅಭಿವೃದ್ಧಿಗೆ ಅಡಚಣೆಯಾಗಿರುವುದೇ ಮೂಲ ಸೌಕರ್ಯಗಳ ಕೊರತೆ ಎಂದು ಗುರುತಿಸಿದೆ. ನಂತರ ಮೂಲ ಸೌಲಭ್ಯಗಳನ್ನು ಒದಗಿಸುವ ಯೋಜನೆಗಳಿಗೆ ಯಾವುದೇ ಪ್ರೋತ್ಸಾಹದಾಯಕ ಯೋಜನೆಗಳು ಇಲ್ಲದಿರುವುದು ಮೂಲಸೌಲಭ್ಯಗಳ ಕೊರತೆಗೆ ಕಾರಣವಾಗಿದೆ ಎನ್ನುವ ನಿಲುವಿಗೆ ಕೆಲವು ಅಭಿವೃದ್ಧಿ ಚಿಂತಕರು ಬಂದಿರುತ್ತಾರೆ. ಇಂತಹ ನಿಲುವುಗಳಿಗೆ ಅವರು ಬರುವಾಗಲು ಬಂಡವಾಳವನ್ನು ಪ್ರಧಾನವಾಗಿ ಅಭಿವೃದ್ಧಿಯ ಸಾಧನ ಎಂದು ಹೇಳುತ್ತಾರೆ.

ಉದ್ಯೋಗ ಸೃಷ್ಟಿಯ ಹಿನ್ನೆಲೆಯಲ್ಲಿ ಉನ್ನತ ಮಟ್ಟದ ಉದ್ಯೋಗ ಅದರಲ್ಲೂ ವಿಶೇಷವಾಗಿ ಪೂರ್ಣ ಪ್ರಮಾಣದ ಉದ್ಯೋಗ ನೀತಿ ನಿರೂಪಕರೆಲ್ಲಾ ವಾಸ್ತವಿಕ ಹಾಗು ತಾತ್ವಿಕ ನೆಲೆಗಟ್ಟಿನಲ್ಲಿ ಒಪ್ಪಿರುವ ಒಂದು ಸಾರ್ವತ್ರಿಕ ಗುರಿಯಾಗಿದೆ. ಹೀಗಾಗಿ ಪ್ರಾರಂಭದ ಅಭಿವೃದ್ಧಿ ಸಿದ್ಧಾಂತಗಳನ್ನು

ರೂಪಿಸುವ ಸಂದರ್ಭದಲ್ಲಿ ಉದ್ಯೋಗ ವಿಸ್ತರಣೆಯ ವಿಷಯಕ್ಕೆ ಬೇರೆಲ್ಲಾ ವಿಷಯಗಳಿಗಿಂತ ಪ್ರಮುಖವಾದ ಸ್ಥಾನವನ್ನು ನೀಡಲಾಗಿದೆ (ಲೂಯಿಸ್, 1955). ಕೆಲವು ಪ್ರಾರಂಭಿಕ ಅಭಿವೃದ್ಧಿಯ ಸಿದ್ಧಾಂತಗಳು ಕೇವಲ ಊಹಾತ್ಮಕ ಪರಿಕಲ್ಪನೆಗಳಿಗೆ ಒತ್ತು ಕೊಟ್ಟು ಅತ್ಯಂತ ಸಂಕೀರ್ಣ ಸ್ವರೂಪದ ಬಡರಾಷ್ಟ್ರಗಳ ಕಡಿಮೆ ಆದಾಯದ ಗ್ರಾಮೀಣ ಹಾಗು ನಗರ ಪ್ರದೇಶದ ಕಾರ್ಮಿಕ ಮಾರುಕಟ್ಟೆಯ ವೈರುಧ್ಯಗಳನ್ನು ಕಡೆಗಣಿಸಿದ್ದರಿಂದ ಮಾರ್ಗದರ್ಶಿ ನೀತಿಯನ್ನು ರೂಪಿಸುವಲ್ಲಿ ಕೇವಲ ಸೀಮಿತ ಲಾಭವಾಯಿತೆ ಹೊರೆತು ಹೆಚ್ಚಿನ ಉಪಯೋಗವೇನು ಆಗಲಿಲ್ಲ.

ಕಾರ್ಮಿಕ ಶಕ್ತಿಯೆಂದರೆ ಕೇವಲ ಅದೊಂದು ಘಟಕ ಹಾಗು ಬಂಡವಾಳ ಎಂಬುದು ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿಯ ಪರಿಣಾಮವನ್ನು ಉಂಟುಮಾಡುವ ಅಂಶವೆಂಬ ಸ್ವರೂಪದ ದೋಷಪೂರಿತವಾಗಿರುವುದು. ಆರ್ಥಿಕ ಬೆಳವಣಿಗೆಯ ಮಾದರಿಗಳು ಸರಿಯಾದ ರೀತಿಯ ಅಭಿವೃದ್ಧಿ ಸಿದ್ಧಾಂತಗಳನ್ನು ರೂಪಿಸುವಲ್ಲಿ ಇವು ಅಡ್ಡಿಯುಂಟು ಮಾಡಿದೆ. ಹೀಗಾಗಿ ಯಾವ ರೀತಿಯಲ್ಲಿ ಸೂಕ್ತವಾದ ಮಾನವ ಸಂಪನ್ಮೂಲವನ್ನು ಬಳಸಿಕೊಳ್ಳಬಹುದೆಂಬುದನ್ನು ಈ ಅಭಿವೃದ್ಧಿ ಸಿದ್ಧಾಂತಗಳು ಹೇಳುವುದಿಲ್ಲ ಅದು ಅಸ್ಪಷ್ಟವಾಗಿ ಕಾಣುತ್ತದೆ ಎಂದು ಷಲ್ಜ್ ವಾದಿಸುತ್ತಾರೆ (ಷಲ್ಜ್, 1981).

ಅಷ್ಟೆ ಅಲ್ಲದೆ ಉದ್ಯೋಗ ಸೃಷ್ಟಿಯ ಕಾರ್ಯತಂತ್ರಗಳನ್ನು ರೂಪಿಸುವುದು ಹಾಗು ಈ ಕಾರ್ಯತಂತ್ರಗಳನ್ನು ಸಾಂಸ್ಥಿಕ ಮಟ್ಟದಲ್ಲಿ ಅನುಷ್ಠಾನಗೊಳಿಸಬಹುದು ಎನ್ನುವ ಬಗ್ಗೆಯೂ ಈ ಅಭಿವೃದ್ಧಿ ಸಿದ್ಧಾಂತಗಳು ಏನನ್ನೂ ಹೇಳುವುದಿಲ್ಲ, 1980ರ ದಶಕದಲ್ಲಿ ಬೆಳವಣಿಗೆ ಆಧಾರಿತ ಪರಿಕಲ್ಪನೆಗಳೊಂದಿಗೆ ಜೀವನ ಅವಶ್ಯಕತೆಗಳನ್ನು ಪೂರೈಸುವ ಮೂಲಕ ಬಡತನದ ಪ್ರಮಾಣವನ್ನು ಕುಗ್ಗಿಸುವ ಅನೇಕ ಸ್ವಾರ್ಥಾತ್ಮಕ ಸ್ವರೂಪದ ಕಾರ್ಯತಂತ್ರಗಳನ್ನು ರೂಪಿಸಲಾಯಿತು (ಸ್ಟೀಟನ್, 1981). ಆಹಾರ ಮತ್ತು ಕೃಷಿ ವಲಯಗಳು ಒಂದು ದೇಶದ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹತ್ತರ ಪಾತ್ರ ವಹಿಸುವುದರಿಂದ ಈ ಎರಡು ವಲಯಗಳ ಚೌಕಟ್ಟಿನಲ್ಲಿ ಸೃಷ್ಟಿಸಬಹುದಾದ ಉದ್ಯೋಗಗಳ ಸಾಧ್ಯತೆಯ ವಿಷಯ ಅಭಿವೃದ್ಧಿ ಕಾರ್ಯತಂತ್ರದ ಚರ್ಚೆಗಳಲ್ಲಿ ತನ್ನದೇ ಆದ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ ಎಂದು ಹೇಳುತ್ತಾರೆ (ಮೆಲ್ಲೋರ್, 1986). ಇತ್ತೀಚಿಗೆ ಆರ್ಥಿಕ ಬೆಳವಣಿಗೆ ಸ್ವರೂಪದ ವಿಸ್ತೃತ ವಿಶ್ಲೇಷಣೆಯಿಂದ ಕಾರ್ಮಿಕ ವಲಯವನ್ನು ಒಳಗೊಂಡಂತೆ ನಮಗೆ ಸರ್ಕಾರ ಹಾಗು ಮಾರುಕಟ್ಟೆಯ ಸಾಮರ್ಥ್ಯಗಳನ್ನು ಬಳಸಿಕೊಳ್ಳುವುದರ ಮೂಲಕ ಬಡತನದ ಪ್ರಮಾಣವನ್ನು ಕಡಿಮೆ ಮಾಡುವ ಕಾರ್ಯತಂತ್ರಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಪ್ರಯತ್ನ ಮಾಡುತ್ತವೆ (ಬರ್ದನ್, 1989 ಹಾಪ್ ಬ್ರೆನರ್ ಮ್ಯಾನ್ 1993).

ಟೂಡಾರೋ(1989)ರವರ ಅಭಿಪ್ರಾಯದಂತೆ ಈ ಕೆಳಗಿನ ಎರಡು ಅಂಶಗಳನ್ನು 1980ರ ಮಧ್ಯದ ಅವಧಿಯಿಂದಲೂ ಒಪ್ಪಿಕೊಂಡು ಬರಲಾಗಿದೆ. ಒಂದನೆಯದು ಬಡತನದ ಪ್ರಮಾಣವನ್ನು

ಕಡಿಮೆ ಮಾಡುವಲ್ಲಿ ಉದ್ಯೋಗ ಅವಕಾಶಗಳ ವಿಸ್ತರಣೆಯ ಕೇಂದ್ರ ಬಿಂದು. ಎರಡನೆಯದು ಈ ಗುರಿಯನ್ನು ಕಾರ್ಯಾನುಷ್ಠಾನದ ನಿಯಮಾವಳಿ ಅಡಿಯಲ್ಲಿ ಸಾಧಿಸುವುದು. ಅಂದರೆ ಸಮಗ್ರ ಆರ್ಥಿಕ ಸಂಬಂಧಗಳನ್ನು ಸೂಕ್ಷ್ಮ ಅರ್ಥಶಾಸ್ತ್ರದ ನೆಲಗಟ್ಟಿನಲ್ಲಿ ಸಂಪನ್ಮೂಲಗಳನ್ನು ಹಾಗು ತಂತ್ರಗಳನ್ನು ಹಂಚುವಾಗ ಸಂಸ್ಥೆಗಳ ಸ್ವರೂಪ ಹಾಗು ಪರಿಸ್ಥಿತಿಗಳನ್ನು ಹರಿಯುವ ಕಡೆಗೆ ಗಮನ ಕೊಡುವುದು. ಆರ್ಥಿಕ ಸ್ಥಿರತೆ ಹಾಗು ಹೊಂದಾಣಿಕೆಗೆ ಸಂಬಂಧಪಟ್ಟಂತೆ ಆಗುತ್ತಿರುವ ಬದಲಾವಣೆಗಳನ್ನು ಬಹುರಾಷ್ಟ್ರೀಯ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡಿದ್ದ ಅರ್ಟನ್ ಹಾಗು ಮುಜುಂದಾರ್ ತಂಡ ಎರಡು ಪ್ರಮುಖ ಪ್ರಶ್ನೆಗಳನ್ನು ಎತ್ತುತ್ತದೆ. ಮೊದಲನೆಯದು ಕಾರ್ಮಿಕ ಮಾರುಕಟ್ಟೆಗಳು ತಮ್ಮ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿವೆಯೆ? ಮತ್ತೊಂದು ಸಮಗ್ರ ಆರ್ಥಿಕ ಹೊಂದಾಣಿಕೆಯ ವಿಷಯದಲ್ಲಿ ಅನುಕೂಲಕರ ರೀತಿಯಲ್ಲಿ ವರ್ತಿಸುತ್ತಿವೆಯೆ? ಅಥವಾ ತೊಡಕಾಗಿ ಪರಿಣಮಿಸಿರುವುದೇ? ಎನ್ನುವುದು. ಎರಡನೆಯ ಪ್ರಶ್ನೆ ಆರ್ಥಿಕ ಹೊಂದಾಣಿಕೆಗಳು ಕಾರ್ಮಿಕ ಮಾರುಕಟ್ಟೆಯ ಮೇಲೆ ಯಾವ ರೀತಿ ಪರಿಣಾಮಗಳನ್ನುಂಟು ಮಾಡಿವೆ? ಮೊದಲನೆಯ ಪ್ರಶ್ನೆಗೆ ಸಂಬಂಧಪಟ್ಟಂತೆ ಈ ತಂಡವು ಹೇಳುವುದೇನೆಂದರೆ ಪ್ರತಿಯೊಂದು ರಾಷ್ಟ್ರದ ಕಾರ್ಮಿಕರ ಮಾರುಕಟ್ಟೆಯು ಸಮರ್ಥವಾದ ರೀತಿಯಲ್ಲಿ ಕಾರ್ಯ ನಿರ್ವಹಿಸಿದೆ. ಆದರೆ ಎರಡನೆಯ ಪ್ರಶ್ನೆಗೆ ಸಂಬಂಧಪಟ್ಟಂತೆ ವಿಭಿನ್ನವಾದ ಪ್ರಕ್ರಿಯೆಗಳು ಹೊರಬಂದಿವೆ. ಆದರೆ ಈ ತಂಡವು ಬಡಜನತೆಗೋಸ್ಕರ ಸೃಷ್ಟಿಸುವ ಉದ್ಯೋಗ ನೀತಿಗಳ ಬಗ್ಗೆ ಏನನ್ನೂ ಹೇಳುವುದಿಲ್ಲ ಆದ್ದರಿಂದ ಆ ತಂಡದ ಅಧ್ಯಯನದ ಫಲಿತಾಂಶ ಹಾಗು ನೇರ ಉದ್ಯೋಗ ಸೃಷ್ಟಿಯ ದೃಷ್ಟಿಕೋನ ಒಂದಕ್ಕೊಂದು ಪರಿಪೂರಕವಾಗಿಲ್ಲ. ಕುತೂಹಲಕಾರಿ ಅಂಶವೇನೆಂದರೆ ಆರ್ಥಿಕ ಸ್ಥರದಲ್ಲಿನ ರಚನಾತ್ಮಕ ಹೊಂದಾಣಿಕೆಯ ಪ್ರಭಾವಕ್ಕೆ ಒಳಗಾದ ಅನೇಕ ರಾಷ್ಟ್ರಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಹೊಂದಾಣಿಕೆಯ ಮಾರ್ಗದರ್ಶಿ ಸೂತ್ರಗಳ ನೆರವಿಲ್ಲದೆ (ಅಂತರಾಷ್ಟ್ರೀಯ ಕಾರ್ಮಿಕರ ಸಂಘ ಮತ್ತು ವಿಶ್ವ ಬ್ಯಾಂಕ್) ಅಥವಾ ಸಹಾಯವಿಲ್ಲದೆ ಅವುಗಳೇ ನೇರವಾಗಿ ಬಡತನವನ್ನು ನೀಗಿಸಲು ಹೆಚ್ಚು ಹೆಚ್ಚು ಉದ್ಯೋಗ ಸೃಷ್ಟಿಯ ಕಾರ್ಯಕ್ರಮಗಳು ಹಮ್ಮಿಕೊಂಡವು.

ಬಡತನ ಉದ್ಯೋಗ ಬೆಳವಣಿಗೆ ಇವುಗಳ ನಡುವೆ ಇರುವ ಆಂತರಿಕ ಸಂಬಂಧದ ಬಗೆಗಿನ ಯೋಜನಾಕ್ರಮದ ರೀತಿಯನ್ನು ವಿಸ್ತೃತಗೊಳಿಸಿದೆ(1994). ಉದ್ಯೋಗವನ್ನು ಬಡತನದ ವಿರೋಧಿ ನೆಲೆಗಟ್ಟಿನಲ್ಲಿ ತಾವೆ ಸೂಚಿಸಿದ ನಾಲ್ಕು ಅಂಶಗಳ ಮಿಶ್ರಣದೊಂದಿಗೆ ನೋಡುತ್ತಾರೆ. ಈ ನಾಲ್ಕು ಅಂಶಗಳೆಂದರೆ ಅವು ಆರ್ಥಿಕ ಹೊಂದಾಣಿಕೆ ಮತ್ತು ಸುಧಾರಣೆ, ಉದ್ಯೋಗ ಸೃಷ್ಟಿ, ಸಮಾಜ ಸೇವೆ ಹಾಗು ಸಹಭಾಗಿತ್ವ, ಇವರ ಪ್ರಕಾರ ಮಾರುಕಟ್ಟೆ ಸ್ನೇಹಿ ನೀತಿ ನಿಯಮಗಳು ಮಾರುಕಟ್ಟೆಗಳೊಂದಿಗೆ ಸಹಕರಿಸಬೇಕು. ಜನಪರ ಮಾರುಕಟ್ಟೆಗಳು ಸಹಭಾಗಿತ್ವ ಸಂಸ್ಥೆಗಳ ಮಾನವ

ಸಂಪನ್ಮೂಲಗಳ ಹೂಡಿಕೆ(ಪೌಷ್ಠಿಕ ಆಹಾರ, ಶಿಕ್ಷಣ ಇತ್ಯಾದಿ) ಸಮರ್ಥ ರೀತಿಯ ಕಾರ್ಮಿಕರ ಬಳಕೆ ಹಾಗೂ ಪರಿಸರ ಪೂರಕ ತಂತ್ರಜ್ಞಾನದ ಸಹಾಯದೊಂದಿಗೆ ರೂಪಿತಗೊಳ್ಳಬೇಕು ಎನ್ನುವ ಅಂಶಗಳು ಇಲ್ಲಿ ಕಂಡುಬರುತ್ತವೆ.

3.2 ಬಡತನ ನಿರ್ಮೂಲನೆಗಾಗಿ–ಉದ್ಯೋಗ: ಹಿಂದಿನ ಅನುಭವಗಳು

ಉದ್ಯೋಗ ಸೃಷ್ಟಿಯ ಮುಖಾಂತರ ಬಡತನ ನಿರ್ಮೂಲನೆಗೆ ತೆಗೆದುಕೊಂಡ ಕ್ರಮಗಳು ಇತ್ತೀಚಿನ ಯೋಜನೆಗಳೇನು ಅಲ್ಲ, ಇದಕ್ಕೆ ಅದರದೇ ಚರಿತ್ರೆ ಇದೆ. 1817ರಷ್ಟು ಹಿಂದಿನ ಗ್ರೇಟ್ ಬ್ರಿಟನ್ ಬಡತನ ನಿರ್ಮೂಲನೆಯ ಕಾಯ್ದೆಯನ್ನು ಜಾರಿಗೆ ತಂದು ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಬಡತನವನ್ನು ನೀಗಿಸುವ ಯೋಜನೆಯನ್ನು ಹಾಕಿಕೊಂಡಿತ್ತು (ಫ್ಲಿನ್, 1961). ಇದೇ ರೀತಿ ಉದ್ಯೋಗ ಸೃಷ್ಟಿಸುವ ಮುಖಾಂತರ ಬಡತನ ನಿರ್ಮೂಲನೆಯನ್ನು ಮಾಡುವ ಪ್ರಯತ್ನಗಳ ಇತಿಹಾಸವನ್ನೇ ನಾವು ಭಾರತ ದೇಶದಲ್ಲಿ ನೋಡಬಹುದು. ಏಷ್ಯಾ ಖಂಡದ ಅಭಿವೃದ್ಧಿ ಸಾಧನೆಗೆ ಸಮುದಾಯದ ಸಕ್ರೀಯ ಭಾಗವಹಿಸುವಿಕೆಯ ಮಹತ್ತರ ಪಾತ್ರದ ಬಗ್ಗೆ ಅಭಿವೃದ್ಧಿ ಚಿಂತಕರು ಒತ್ತಿ ಹೇಳಿದ್ದಾರೆ.

ಸುಸ್ಥಿರ ರಾಜಕೀಯ ಬದ್ಧತೆ ಹಾಗೂ ಆಡಳಿತ ದಕ್ಷತೆಯೊಂದಿಗೆ ಸಾರ್ವಜನಿಕ ಕಾಮಗಾರಿಗಳನ್ನು ಕೈಗೊಂಡರೆ ಇವು ಬಡತನವನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಮಹತ್ತರ ಪಾತ್ರವಹಿಸುತ್ತಿದೆ ಎಂದು ಬರ್ಕಿ(1976) ರವರು ತಮ್ಮ ಅಧ್ಯಯನದಲ್ಲಿ ಅಭಿಪ್ರಾಯ ಪಡುತ್ತಾರೆ. ಈ ರೀತಿಯ ರಾಜಕೀಯ ಬದ್ಧತೆಯ ಕೊರತೆ ಎಂಭತ್ತರ ದಶಕದವರೆಗೂ ಮುಂದುವರೆಯುತ್ತದೆ. ನಂತರದಲ್ಲಿ ರಾಜಕೀಯ ಬದ್ಧತೆ ಪ್ರಕಟವಾದರೂ ಸಹ ಅಭಿವೃದ್ಧಿ ಕಾರ್ಯಕ್ರಮಗಳ ಬಂಡವಾಳವನ್ನು ಹೂಡುವ ಸಂಸ್ಥೆಗಳ ಪ್ರತಿಕ್ರಿಯೆ ಅಷ್ಟೇನು ಗಮನೀಯವಾಗಿರಲಿಲ್ಲ. ಫಿಲಿಪೈನ್ಸ್ ದೇಶದಲ್ಲಿ ನೀರಾವರಿ ಪುನರ್ವಸತೀಕರಣದ ವಸ್ತು ಅಧ್ಯಯನವನ್ನು ಕೈಗೊಂಡ ಕಿಕುಚಿ, ದೊಚಿನ ಮತ್ತು ಹಯಾಮಿ (1978) ತಂಡವು ಹೊಸ ಅರಿವನ್ನು ಮೂಡಿಸುವ ಕೆಲವು ಅಂಶಗಳನ್ನು ಗಮನಕ್ಕೆ ತರುತ್ತದೆ. ಇಂತಹ ಅಧ್ಯಯನಗಳು ಸಮುದಾಯದ ಕಾರ್ಮಿಕ ಶಕ್ತಿಯ ಸಕ್ರೀಯೆ ಭಾಗವಹಿಸುವಿಕೆಯ ಪ್ರಕ್ರಿಯೆಯಲ್ಲಿ ಆರ್ಥಿಕ ಮತ್ತು ಸಂಘಟನೆಯ ಸ್ವರೂಪದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತವೆ. ಆದ್ದರಿಂದ ಮೊದಲನೆಯದಾಗಿ ಸಮುದಾಯವು ಅಭಿವೃದ್ಧಿ ಕಾಮಗಾರಿಗಳಲ್ಲಿ ಭಾಗವಹಿಸುವಿಕೆ ಬೇಕೆಂದರೆ ಜನರಿಗೆ ಉತ್ತಮ ಪ್ರೋತ್ಸಾಹ ಧನವನ್ನು ನೀಡಬೇಕು ಮತ್ತು ಎಲ್ಲರಿಗೂ ಸಮರ್ಥವಾದ, ಒಪ್ಪಿತವಾದ ನಾಯಕತ್ವದ ಅಡಿಯಲ್ಲಿ ಒಂದು ಗೂಡಿಸಬೇಕು. ಈ ಅಧ್ಯಯನದಲ್ಲಿ ಲಾಭಕರವಾದ ಖರ್ಚು ಮತ್ತು ವರಮಾನದ ಅನುಪಾತ ಕಂಡು ಬಂದಿದೆ. ಈ ರೀತಿ ಬಂದ ಲಾಭವನ್ನು ಭೂ ರಹಿತರಿಗೆ ಹಾಗು ಸಣ್ಣ ಭೂಹಿಡುವಳಿದಾರರಿಗೆ ಹಂಚಬೇಕೆಂದು ಈ ಅಭಿವೃದ್ಧಿ ಚಿಂತನೆ

ಅಭಿಪ್ರಾಯ ಪಡುತ್ತದೆ. ಈ ನೀರಾವರಿ ಪುನರ್ವಸತೀಕರಣ ಯೋಜನೆಯಲ್ಲಿ ಭೂ ಹಿಡುವಳಿದಾರರಿಗಿಂತ ಭೂ ರಹಿತರಿಗೆ ಹೆಚ್ಚು ಲಾಭವಾಯಿತೆಂದು. ಈ ಅಧ್ಯಯನ ಗುರುತಿಸಿದೆ. ಆದರೆ ಇಲ್ಲಿ ಗಮನಿಸಬಹುದಾದ ಒಂದು ಕುತೂಹಲಕರ ಅಂಶ ಎಂದರೆ ಭೂ ಹಿಡುವಳಿದಾರರು ಈ ಯೋಜನೆಯಲ್ಲಿ ಯಾವುದೇ ಬಂಡವಾಳವನ್ನು ತೊಡಗಿಸಲಿಲ್ಲ. ಆದರೂ ಸಹ ಅವರಿಗೆ ಪರೋಕ್ಷ ರೀತಿಯಲ್ಲಿ ಲಾಭವಾಯಿತು. ಆದ್ದರಿಂದ ಇಂತಹ ಶ್ರಮ ರಹಿತ ಲಾಭದ ಮೇಲೆ ತೆರಿಗೆಯಿಂದ ಬಂದ ಹಣವನ್ನು ಮತ್ತು ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಗೆ ಬಳಸಬೇಕೆಂದು ಈ ತಂಡ ಸಲಹೆ ನೀಡುತ್ತದೆ. ಈ ಪರಿಕಲ್ಪನೆಯನ್ನು ಮುಂದೆ ವಿಷಾದವಾಗಿ ಚರ್ಚಿಸಲಾಗುತ್ತದೆ.

ಕಾರ್ಮಿಕ ಕೇಂದ್ರಿತ ಗ್ರಾಮೀಣಾಭಿವೃದ್ಧಿಯ ಸಮೀಕ್ಷೆ ಮಾಡಿದ ಗ್ರೇಡ್ (Grade,1987) ಅವರು ವಿಶೇಷ ಸಾರ್ವಜನಿಕ ಕಾಮಗಾರಿ ಕಾರ್ಯಕ್ರಮಗಳ ಫಲಿತಾಂಶದ ಹಿನ್ನೆಲೆಯಲ್ಲಿ ಕೆಲವು ಆಶಾದಾಯಕ ಭರವಸೆಗಳನ್ನು ಮೂಡಿಸುವ ಮಾತುಗಳನ್ನಾಡುತ್ತಾರೆ. ಕಾರ್ಮಿಕ ಕೇಂದ್ರಿತ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ಹಾಗು ಅವುಗಳ ಫಲಿತಾಂಶದ ಬಗ್ಗೆ ಅಧ್ಯಯನ ಮಾಡಿದ ಗ್ರೇಡ್ ಇದರ ಪರಿಣಾಮದ ಬಗ್ಗೆ ಒಂದು ಧನಾತ್ಮಕ ನಿಲುವಿಗೆ ಬರುತ್ತಾರೆ. ಕಾರ್ಮಿಕರ ಸಂಘಟನೆಯ ನಿಟ್ಟಿನಲ್ಲಿ ಕೂಲಿಗಾಗಿ ಕಾಳು ಯೋಜನೆಯ ಯಶಸ್ಸಿನ ಬಗ್ಗೆ ಕ್ಲೇ (1986) ಹೇಳುತ್ತಾರೆ. ಆದರೆ ಈ ಕಾರ್ಯ ಯೋಜನೆಯು ಆಫ್ರಿಕಾದ ದೇಶದಲ್ಲಿ ಕಾರ್ಮಿಕರ ಸಂಘಟನೆಯ ನಿಟ್ಟಿನಲ್ಲಿ ಅಂತಹ ಮಹತ್ತರ ಬದಲಾವಣೆಯನ್ನು ತರಲು ಸಾಧ್ಯವಾಗಿಲ್ಲ ಎಂದು ಹೇಳುತ್ತಾರೆ. ಏನೇ ಆದರೂ ಸಹ ಈ ಕಾರ್ಮಿಕ ಕೇಂದ್ರಿತ ಕಾಮಗಾರಿಗಳು 1990 ದಶಕದ ಮಧ್ಯ ಭಾಗದಲ್ಲಿ ಆಫ್ರಿಕಾದ ದೇಶಗಳಲ್ಲಿ ಮಹತ್ತರ ಬದಲಾವಣೆಯುಂಟು ಮಾಡಿರುವುದನ್ನು ನಾವು ಸ್ಪಷ್ಟವಾಗಿ ಗಮನಿಸಬಹುದು.

3.3. ಬಾಂಗ್ಲಾದೇಶದ ಅನುಭವ

ಅಂತರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿನ ನಿರುದ್ಯೋಗ, ಆಹಾರದ ಭದ್ರತೆ ಮತ್ತು ಬಡತನ ನಿರ್ಮೂಲನೆ ಯೋಜನೆಗಳ ಅನುಭವವನ್ನು ಹೊಸ ನೀತಿಗಳನ್ನು ಹುಟ್ಟು ಹಾಕುತ್ತವೆ. ಬಾಂಗ್ಲಾದೇಶ ಬಡತನ ನಿರ್ಮೂಲನೆ ಮತ್ತು ಆಹಾರದ ಭದ್ರತೆ ಒಂದು ಸವಾಲಾಗಿ ಪರಿಣಮಿಸಿತು. ನಮ್ಮ ರಾಷ್ಟ್ರದ ನೆರೆವರೆಯ ರಾಷ್ಟ್ರಗಳು ಕೂಡ ಬಡತನ, ನಿರುದ್ಯೋಗ, ಆಹಾರದ ಭದ್ರತೆಗೆ ಹೆಚ್ಚಿನ ಕ್ರಮ ಕೈಗೊಂಡಿರುವುದು ತಿಳಿಯುತ್ತದೆ. ಈ ವಿಚಾರದಲ್ಲಿ ಬಾಂಗ್ಲಾದೇಶ ಹೆಚ್ಚು ಪರಿಣಾಮಕಾರಿ ಕೆಲಸ ಮಾಡಿದೆ. ಬಡತನ ಮತ್ತು ಆಹಾರ ಕೊರತೆಯನ್ನು ತೆಗೆದು ಹಾಕಲು ಬಾಂಗ್ಲಾದೇಶದ ಕೂಲಿಗಾಗಿ ಕಾಳು ಮತ್ತು ಆಹಾರ ಭದ್ರತೆಯ ಪರ್ಯಾಯ ಕಾರ್ಯಕ್ರಮಗಳು ಅನುಷ್ಠಾನ ಮಾಡಲು ಬಹು ಪ್ರಕಾರದ ಕಾರ್ಯತಂತ್ರಗಳನ್ನು ಅನುಸರಿಸಿದೆ.

112 ಮಿಲಿಯನ್ ಜನಸಂಖ್ಯೆಯಿರುವ ಬಾಂಗ್ಲಾದೇಶದಲ್ಲಿ ಸುಮಾರು ಅರ್ಧದಷ್ಟು ಜನಸಂಖ್ಯೆಗೆ ಸಾಕಾಗುವಷ್ಟು ಆಹಾರ ಧಾನ್ಯ ಸಿಗುತ್ತಿರಲಿಲ್ಲ. ಇಲ್ಲಿನ ಶೇಕಡ 50 ಗ್ರಾಮೀಣ ರೈತರು ತಮ್ಮ ಜೀವನಕ್ಕೆ ಕೃಷಿ ಮೂಲವನ್ನೇ ಅವಲಂಬಿಸಿದ್ದರು. ಹೀಗಾಗಿ ವರ್ಷದ ಕೆಲವು ದಿನಗಳಲ್ಲಿ ಮಾತ್ರ ದುಡಿಮೆಗೆ ಅವಕಾಶವಿದ್ದು ಉಳಿದ ದಿನಗಳಲ್ಲಿ ಸದಾ ನಿರುದ್ಯೋಗಿಗಳಾಗುತ್ತಿದ್ದರು. ಇನ್ನು ಭೂ ಹಿಡುವಳಿ ಕಡಿಮೆ ಹೊಂದಿರುವವರಿಗೆ ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತಿರಲ್ಲಿಲ. ಭೂ-ರಹಿತರು ಹಾಗೂ ಸಣ್ಣ ಹಿಡುವಳಿದಾರರು ಅನಿವಾರ್ಯವಾಗಿ ತಮ್ಮ ಜೀವನ ನಿರ್ವಹಣೆಗೆ ಸ್ವಯಂ ಉದ್ಯೋಗವನ್ನು ಅವಲಂಬಿಸಬೇಕಾದ ಅನಿವಾರ್ಯತೆಯಿತ್ತು. ಆದರೆ ಬಡತನ ನಿರ್ಮೂಲನೆಗೆ ಇದು ಲಾಭದಾಯಕವಾದ ಮಾರ್ಗವಾಗಿಲ್ಲ ಎಂಬುದು ಎಲ್ಲರ ಅರಿವಿಗೆ ಬಂದಿತ್ತು. ಇದರಿಂದ ಬಡತನ ನಿರ್ಮೂಲನೆಯ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳಲಾಯಿತ್ತು. ಅದರಲ್ಲಿ ಪ್ರಮುಖವಾದುದು ಕೂಲಿಗಾಗಿ ಕಾಳು ಯೋಜನೆ ಹಾಗೂ ಗ್ರಾಮೀಣ ನಿರ್ವಹಣಾ ಕಾರ್ಯಕ್ರಮಗಳನ್ನು 'ಕೂಲಿಗಾಗಿ ಕಾಳು ಈ ಕಾರ್ಯಕ್ರಮವು 1975ರಿಂದಲೂ ಜಾರಿಯಲ್ಲಿದೆ. ಈ ಕಾರ್ಯಕ್ರಮದಡಿಯಲ್ಲಿ ಕೆಲಸವಿಲ್ಲದ ದಿನಗಳಲ್ಲಿ ಗ್ರಾಮೀಣ ರಸ್ತೆ ಅಭಿವೃದ್ಧಿ ಹಾಗೂ ನಿರ್ವಹಣೆ, ನದಿ ತೀರಗಳ ಅಭಿವೃದ್ಧಿ ಮಾಡುವುದು. ಕೃಷಿ ಕಾಲುವೆಗಳನ್ನು ತೊಡುವುದು. ಇಂತಹ ಕಾಮಗಾರಿಗಳನ್ನು ಅನುಷ್ಠಾನ ಮಾಡುವುದರ ಮೂಲಕ ಉದ್ಯೋಗಗಳನ್ನು ಸೃಷ್ಟಿ ಮಾಡುವ ಮುಖಾಂತರ ಹಳ್ಳಿಗಾಡಿನ ಜನರಿಗೆ ದುಡಿಯುವ ಅವಕಾಶಗಳನ್ನು ಸೃಷ್ಟಿ ಮಾಡಲಾಯಿತ್ತು. ಇದರಿಂದ ಹಳ್ಳಿಗರಿಗೆ ಸಾಕಷ್ಟು ಆಹಾರ ಧಾನ್ಯವನ್ನು ಪೂರೈಸಲಾಯಿತ್ತು.

ಈ ಕುರಿತು ಬಾಂಗ್ಲಾ ದೇಶದಲ್ಲಿ ಅಂಕಿ-ಅಂಶ ಮಾಪನ ಸಂಸ್ಥೆಯು ನಿರ್ದಿಷ್ಟ ಕಾಲಾವಧಿಗಳಲ್ಲಿ ಕುಟುಂಬವಾರು ಖರ್ಚು-ವೆಚ್ಚದ ಸಮೀಕ್ಷೆಯನ್ನು ಕೈಗೊಂಡಿರುತ್ತದೆ. ಈ ಸಮೀಕ್ಷೆಯಿಂದ ದೊರಕುವ ಅಂಕಿ-ಅಂಶದ ಆಧಾರದ ಮೇಲೆ ಬಡತನ ಮತ್ತು ಅಸಮಾನತೆಯ ಪ್ರಮಾಣವನ್ನು ನಿರ್ಧರಿಸಲಾಗುತ್ತಿದೆ. ಆದರೂ ಸಹ ಈ ಅಂಕಿ-ಅಂಶದ ಆಧಾರದ ಮೇಲೆ ಬಡತನದ ಪ್ರಮಾಣವನ್ನು ನಿರ್ಧರಿಸುವಲ್ಲಿ ಬೇರೆ ಬೇರೆ ಅಧ್ಯಯನದ ಫಲಿತಾಂಶಗಳು ಭಿನ್ನವಾಗಿವೆ. ಇದಕ್ಕೆ ಕಾರಣ ಪ್ರತಿ ವ್ಯಕ್ತಿಗೆ ಅವಶ್ಯಕವಿರುವ ಕನಿಷ್ಟ ಮಟ್ಟದ ಆಹಾರ ಪ್ರಮಾಣ, ಕನಿಷ್ಟ ಮಟ್ಟದ ಕ್ಯಾಲರಿ ಮತ್ತು ದಿನನಿತ್ಯದ ಆಹಾರ ಕ್ರಮದಲ್ಲಿ ಯಾವ ಯಾವ ಆಹಾರ ಧಾನ್ಯಗಳನ್ನು ಪರಿಗಣಿಸಬೇಕು ಹಾಗೂ ಆಹಾರ ಧಾನ್ಯದ ಬೆಲೆಯನ್ನು ಯಾವ ಆಧಾರದ ಮೇಲೆ ನಿರ್ಧರಿಸಬೇಕು, ಎನ್ನುವ ಬಗ್ಗೆ ಒಮ್ಮತದ ಅಭಿಪ್ರಾಯ ಇರುವುದಿಲ್ಲ. ಇತ್ತೀಚೆಗೆ ಉಸೇನ್ ಎನ್ನುವವರು ತಮ್ಮದೇ ಆದ ಪರ್ಯಾಯ ವಿಧಾನದ ಮೂಲಕ ಬಾಂಗ್ಲಾದೇಶದ ಗ್ರಾಮೀಣ ಪ್ರದೇಶದ ಬಡತನದ ಪ್ರಮಾಣ ಸ್ವರೂಪದ ಬಗ್ಗೆ ಸಮೀಕ್ಷೆಯನ್ನು ಕೈಗೊಂಡಿದ್ದಾರೆ. ಇವರ ಪ್ರಕಾರ 1970ರ ಉತ್ತರಾರ್ಧದಿಂದ 1980ರ ಮಧ್ಯಾವಧಿಯ ವರೆಗಿನ ಅವಧಿಯಲ್ಲಿ ಬಡತನದ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುತ್ತದೆ.

1988–89ರ ಅವಧಿಯಲ್ಲಿ ಬಡತನದ ಪ್ರಮಾಣದಲ್ಲಿ ಸ್ವಲ್ಪ ಮಟ್ಟಿಗೆ ಏರಿಕೆಯಾಗಿದ್ದು ಇದಕ್ಕೆ ನೆರೆ ಮತ್ತು ಪ್ರವಾಹಗಳೇ ಕಾರಣವಿರಬಹುದು ಎಂದು ಅಭಿಪ್ರಾಯ ಪಡುತ್ತಾರೆ. ಆದರೂ ಸಹ 1990ರ ನಂತರದಿಂದ ಕೃಷಿ ಕ್ಷೇತ್ರದಲ್ಲಾದ ಬೆಳವಣಿಗೆಯಿಂದಾಗಿ ಬಾಂಗ್ಲಾದ ಗ್ರಾಮೀಣ ಪ್ರದೇಶದ ಪರಿಸ್ಥಿತಿಯಲ್ಲಿ ಸುಧಾರಣೆಯಾಗಿದೆ ಎಂದು ಹೇಳುತ್ತದೆ.

3.4. ಉದ್ಯೋಗ ಸೃಷ್ಟಿ ಮತ್ತು ಸಹಭಾಗಿತ್ವ

ಅಭಿವೃದ್ಧಿಗೆ ಸಕಾರಾತ್ಮಕ ಕಾರಣಗಳಿರುವಂತೆ ನಕಾರಾತ್ಮ ಕಾರಣಗಳನ್ನು ಗುರುತಿಸಬಹುದು. ಬಾಂಗ್ಲಾದೇಶದ ಗ್ರಾಮೀಣ ಪ್ರದೇಶವನ್ನು ಬೆನ್ನು ಹತ್ತಿದ ಬಡತನ ಮತ್ತು ಪೌಷ್ಟಿಕಾಂಶದ ಕೊರತೆ ನಿರಂತರವಾಗಿ ಅಲ್ಲಿಯ ಜನರನ್ನು ಕಾಡಿರುವುದು ಚರಿತ್ರೆಯಿಂದ ತಿಳಿಯುತ್ತದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಬಾಂಗ್ಲಾದೇಶದ ಬಡ ಗ್ರಾಮೀಣ ಜೀವನ ನಿರ್ವಹಣೆಗೆ ತಮ್ಮ ದೈಹಿಕ ಶ್ರಮವನ್ನೇ ಅವಲಂಬಿಸಿರುತ್ತಾರೆ. ಬಡವರ ಕಲ್ಯಾಣವು ಅಥವಾ ಅಭಿವೃದ್ಧಿಗೆ ಉದ್ಯೋಗ ಸೃಷ್ಟಿ ಹಾಗೂ ಕೂಲಿ ಹೆಚ್ಚಳ ಅಂಶಗಳ ಮೇಲೆ ಅವಲಂಬಿತವಾಗಿದೆ. ಕಾರ್ಮಿಕರ ದುಡಿಯುವ ಕೈಗಳಿಗೆ ಕೆಲಸವನ್ನು ನಿಡುವಂತಹ ಸಶಕ್ತಿ, ಆರ್ಥಿಕ ವ್ಯವಸ್ಥೆ ನಿರ್ಮಾಣವಾಗಬೇಕು. ಕೂಲಿಕಾರರ ಹಾಗೂ ಸ್ವ–ಉದ್ಯೋಗಗಳ ಉತ್ಪಾದನೆಗಳ ಸಾಮರ್ಥ್ಯವನ್ನು ಸಹ ಹೆಚ್ಚಿಸಬೇಕು, ಎನ್ನುವ ಕಾರ್ಯತಂತ್ರಗಳು ಇಲ್ಲಿ ಈ ದೇಶದಲ್ಲಿ ಅನುಷ್ಠಾನಕ್ಕೆ ತರಲಾಯಿತ್ತು. ಅಲ್ಲಿನ ಯೋಜನಾ ಆಯೋಗದ ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಹಾಕಿಕೊಂಡ ಅಪರಿಪೂರ್ಣಗೊಂಡ ಉದ್ಯೋಗ ಸೃಷ್ಟಿಯ ಗುರಿಗಳು ಮತ್ತು ಸಾಧನೆಯ ಅಂಕಿ–ಅಂಶದ ಆಧಾರವನ್ನಿಟ್ಟುಕೊಂಡ ಹೊಸೇತ ಮತ್ತು ಆಕಾಶ್ (1993) ಅವರು ಬಾಂಗ್ಲಾದೇಶದ ಒಟ್ಟು ಕಾರ್ಮಿಕರಲ್ಲಿ 1/3ರಷ್ಟು ಜನರು ನಿರುದ್ಯೋಗಿಗಳಾಗಿದ್ದಾರೆ ಎಂದು ಹೇಳುತ್ತಾರೆ. ಹೆಚ್ಚುತ್ತಿರುವ ನಿರುದ್ಯೋಗ ಹಾಗೂ ಅರೆ–ಉದ್ಯೋಗದ ಪರಿಣಾಮದಿಂದ ಸರಾಸರಿ ಕೂಲಿ ಏರಿಕೆಯ ಪ್ರಮಾಣದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ.

1947ರ ಬರಗಾಲದ ಸನ್ನಿವೇಶವನ್ನು ಎದುರಿಸಲು ಬಾಂಗ್ಲಾ ಸರ್ಕಾರವು ಕೂಲಿಗಾಗಿ ಕಾಳು ಯೋಜನೆಯನ್ನು 1975ರಲ್ಲಿ ಕೈಗೆತ್ತಿಕೊಂಡಿತು. ಇದರ ಮೂಲ ಉದ್ದೇಶ ಅಹಾರ ಧಾನ್ಯಗಳನ್ನು ಆಹಾರ ಭದ್ರತೆಯ ಸಮಸ್ಯೆಗೆ ಒಳಗಾದ ಬಡಜನರಿಗೆ ಪರಿಹಾರವಾಗಿ ಹಂಚುವುದಾಗಿತ್ತು. ನಂತರದ ವರ್ಷಗಳಲ್ಲಿ ಈ ಕಾರ್ಯಕ್ರಮದಡಿಯಲ್ಲಿ ಆಹಾರ ಭದ್ರತೆಗಿಂತ ಅಭಿವೃದ್ಧಿಗೆ ಒತ್ತು ಕೊಡಲಾಯಿತು. ಈ ಕಾರ್ಯಕ್ರಮ ಮೂಲ ಉದ್ದೇಶಗಳು ಕೆಳಕಂಡಂತೆ ಇರುತ್ತವೆ.

1. ಆಹಾರೋತ್ಪಾದನೆ
2. ಸೂಕ್ತ ರಕ್ಷಣಾಕ್ರಮಗಳ ಮೂಲಕ ಪ್ರವಾಹ ಹಾಗೂ ನೆರೆಹಾವಳಿಯಿಂದಾಗುವ ಸಾವು ನೋವು ಆಸ್ತಿಯ ಹಾನಿಯ ಪ್ರಮಾಣವನ್ನು ತಗ್ಗಿಸುವುದು.

3. ಕೃಷಿ ಬಿಡುವಿನ ಅವಧಿಯಲ್ಲಿ ಕೃಷಿಕರಿಗೆ ಲಾಭದಾಯಕ ಉದ್ಯೋಗಗಳನ್ನು ಸೃಷ್ಟಿಸುವುದು.
4. ಮಾರುಕಟ್ಟೆಯ ಅಭಿವೃದ್ಧಿಗೆ ಪೂರಕವಾಗುವಂತಹ ಮೂಲ ಸೌಕರ್ಯಗಳ ನಿರ್ಮಾಣ ಹಾಗೂ ನಿರ್ವಹಣಾ ವ್ಯವಸ್ಥೆಯೊಂದಿಗೆ ಕೃಷಿ ಕ್ಷೇತ್ರದಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದು.

ಆಹಾರ ಭದ್ರತೆಯನ್ನು ಹೆಚ್ಚಿಸುವ ದಿಕ್ಕಿನಲ್ಲಿ ಬಾಂಗ್ಲಾದೇಶದಲ್ಲಿ 11 ರೀತಿಯ ಪಡಿತರ ವಿತರಣಾ ವ್ಯವಸ್ಥೆಗಳಿದ್ದು, ಕೂಲಿಗಾಗಿ ಕಾಳು ಯೋಜನೆಯು ಇದರಲ್ಲಿ ಒಂದು. ಸಾರ್ವಜನಿಕ ಪಡಿತರ ವಿತರಣೆಯ ಮೂಲ ಉದ್ದೇಶವೆಂದರೆ ಸಾಕಷ್ಟು ಆಹಾರ ಧಾನ್ಯಗಳ ಪೂರೈಕೆಯ ಮೂಲಕ ಆಹಾರ ಭದ್ರತೆಯನ್ನು ಸಾಧಿಸುವುದು. ಈ ವ್ಯವಸ್ಥೆಯನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ಒಂದು ಯೋಗ್ಯ ಬೆಲೆಯ ಮಾರುಕಟ್ಟೆ ವ್ಯವಸ್ಥೆಯಲ್ಲಿ ಆಹಾರ ಧಾನ್ಯ ಪೂರೈಸುವುದು. ಮತ್ತೊಂದು ಉಚಿತವಾಗಿ ವಿತರಿಸುವುದು. ಕೂಲಿಗಾಗಿ ಕಾಳು ಯೋಜನೆ ಎರಡನೆ ವರ್ಗಕ್ಕೆ ಸೇರಿರುತ್ತದೆ. ಪ್ರತಿ ವಿತರಣಾ ವ್ಯವಸ್ಥೆಯಡಿಯಲ್ಲಿ ನಿರ್ದಿಷ್ಟ ವರ್ಗದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಈ ಹನ್ನೊಂದು ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ಕೂಲಿಗಾಗಿ ಕಾಳು ಯೋಜನೆ ಅತ್ಯಂತ ದೊಡ್ಡ ಪ್ರಮಾಣದ ಯೋಜನೆಯಾಗಿದ್ದು, 1991–92ರ ಅವಧಿಯಲ್ಲಿ ಶೇಕಡ 23ರಷ್ಟು ಜನರು ಯೋಜನೆಯ ಫಲಾನುಭವಿಗಳಾಗಿರುತ್ತಾರೆ.

3.5 ಆಹಾರ ಭದ್ರತೆಯ ಕೊರತೆಯ ಪರಿಣಾಮಗಳು

ಬಡತನ ಮತ್ತು ಬಡತನದ ರೇಖೆಯ ಬಗ್ಗೆ ಚರ್ಚಿಸುವುದಾದರೆ ವಿಶ್ವದ ಒಟ್ಟು ಬಡವರ ಸಂಖ್ಯೆಯಲ್ಲಿ ಭಾರತದಲ್ಲಿ ಬಡವರು ಮೂರನೇ ಒಂದು ಭಾಗ ಇದ್ದಾರೆ. ಭಾರತದ ಯೋಜನಾ ಆಯೋಗದ ಮಾನದಂಡದ ಪ್ರಕಾರ 2004–05ರ ಪ್ರಕಾರ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 27.5 ರಷ್ಟು ಜನರು ಬಡತನ ರೇಖೆಗಿಂತ ಕೆಳಗಿರುವವರು. ಭಾರತದೇಶ ಬಡತನಕ್ಕೆ ಸಾಕ್ಷಿಯಾಗಿದೆ ಎಂದರೆ ಮಾನವ ಅಭಿವೃದ್ಧಿಯಲ್ಲಿ ಅದು ಜಗತ್ತಿನ 182 ರಾಷ್ಟ್ರಗಳಲ್ಲಿ 134ನೇ ಸ್ಥಾನದಲ್ಲಿರುವುದು. ಇದರ ಪ್ರಮಾಣ 1977–78ರಲ್ಲಿ 51.03ರಷ್ಟು ಮತ್ತು 1993–94ರಲ್ಲಿ ಶೇಕಡ 36%ರಷ್ಟು ಇರುವುದು ಅಧ್ಯಯನಗಳು ಗುರುತಿಸಿವೆ. ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರಕಾರ ಭಾರತದ ಜನಸಂಖ್ಯೆಯಲ್ಲಿ ಶೇಕಡ 75.6ರಷ್ಟು ದಿನಕ್ಕೆ ಡಾಲರ್ ಲೆಕ್ಕದಲ್ಲಿ $ 2ಕ್ಕಿಂತ ಕಡಿಮೆ ಆದಾಯದಲ್ಲಿ ಜೀವಿಸುತ್ತಿರುವುದು ತಿಳಿಯುತ್ತದೆ. ಅಭಿವೃದ್ಧಿ ಮತ್ತು ಗ್ರಾಮೀಣ ಮೂಲಸೌಕರ್ಯ ಸೃಷ್ಟಿಸುವಲ್ಲಿ ದೈಹಿಕ ಶ್ರಮ ಆಧಾರಿತ ಉದ್ಯೋಗಗಳು ಪ್ರಮುಖವಾದ ಪಾತ್ರವಹಿಸುತ್ತವೆ. ನಿರುದ್ಯೋಗದ ಪ್ರಮಾಣ ಹೆಚ್ಚಿದಷ್ಟು ಆಹಾರ ಕೊರತೆಯ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. ಇಂದಿಗೂ ಜಗತ್ತಿನಲ್ಲಿ 842 ಮಿಲಿಯನ್ ಜನರು ಹಸಿವಿನಿಂದ ಬಳಲುತ್ತಿರುವುದು ಕಂಡುಬರುತ್ತದೆ (ವರ್ಲ್ಡ್ ಕಾನ್ಫರೆನ್ಸ್ ಆನ್ ಯುತ್, 2014).

ಇಂತಹ ಪರಿಸ್ಥಿತಿಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಅಧಿಕವಾಗಿ ಬೇರೂರಿರುತ್ತವೆ. ಆಫ್ರಿಕಾದಂತಹ ರಾಷ್ಟ್ರದಲ್ಲಿ ಇದರ ಪ್ರಮಾಣ ಅಧಿಕವಾಗಿರುವುದು ಜಾಗತೀಕ ಮಟ್ಟದಲ್ಲಿ ಗುರುತಿಸಲಾಗಿದೆ. ಆಹಾರ ಕೊರತೆಯಿಂದ ಭಾರತದಲ್ಲಿ ಪ್ರತಿವರ್ಷ 25ಲಕ್ಷ ಮಕ್ಕಳು ಸಾಯುತ್ತಿದ್ದಾರೆ. (ಎನ್.ಎಚ್.ಎಫ್.ಎಸ್.2005–06; ಎನ್.ಎಚ್.ಎಫ್.ಎಸ್.2014–15). ಈ ತರಹದ ಪರಿಣಾಮಗಳು ಸ್ವಾಭಾವಿಕವಾಗಿಯೇ ಬರದಿದ್ದರೂ ಒತ್ತಾಯದ ಮೂಲಕ ಅಥವಾ ಅನಿವಾರ್ಯವಾಗಿಯೇ ಸಂಭವಿಸುತ್ತವೆ. ಆರೋಗ್ಯವಂತರಿಗೆ ಪ್ರತಿದಿನಕ್ಕೆ ಕನಿಷ್ಟ ಪ್ರಮಾಣದ ಆಹಾರ ಇಂದು ಲಭ್ಯವಾಗುತ್ತಿಲ್ಲವೆಂದು ಅಧ್ಯಯನಗಳು ಗುರುತಿಸಿವೆ.

ಆಹಾರದ ಭದ್ರತೆ ಮತ್ತು ಅಪೌಷ್ಟಿಕತೆ ಕೊರತೆ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುವುದರ ಜೊತೆಗೆ ಕೊರತೆಯೂ ಸಹ ಕಂಡುಬರುವುದು. ಜಾಗತೀಕ ಮಟ್ಟದಲ್ಲಿ ಗರ್ಭಿಣಿ ಸ್ತ್ರೀಯರು ರಕ್ತಹೀನತೆಯ ಸಮಸ್ಯೆಯಿಂದ ಬಳಲುತ್ತಿರುವುದು ಸಹಜವಾಗಿಯೇ ಕಂಡುಬಂದರೆ ಭಾರತದಲ್ಲಿ ಇದರ ಪ್ರಮಾಣ ಜಗತ್ತಿನಲ್ಲಿಯೇ ಅಧಿಕವಾಗಿ ಕಂಡುಬರುವುದು(ವಿಶ್ವಬ್ಯಾಂಕ್ ವರದಿ–2007). ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಪೌಷ್ಟಿಕ ಆಹಾರದ ಅಗತ್ಯತೆ ಹೆಚ್ಚು ಇದೆ ಪರಿಸ್ಥಿತಿ ಮುಂದುವರೆದರೆ ಅದು ಅಪಾಯಕಾರಿ ಬೆಳವಣಿಗೆ ಎಂದು ಜೀನ್ ಡ್ರೀಜ್ ಅರ್ಥೈಸುತ್ತಾರೆ(ಜೀನ್ ಡ್ರೀಜ್,2007).

ಅಭಿವೃದ್ಧಿ ಸೂಚ್ಯಾಂಕಗಳ ಪ್ರಗತಿ, ಉದ್ಯೋಗ, ಬಡತನ ನಿರ್ಮೂಲನೆಗಳ ಮಧ್ಯೆ ನೇರವಾದ ಸಂಬಂಧ ಇರುವುದನ್ನು ಕಾಣಬಹುದು. ಮಾನವ ಅಭಿವೃದ್ಧಿ ಸೂಚ್ಯಾಂಕಗಳನ್ನು ಅಳವಡಿಸಿಕೊಂಡು ಪ್ರಗತಿ ಸಾಧಿಸುತ್ತಿರುವ ರಾಷ್ಟ್ರಗಳನ್ನು ಯು.ಎನ್.ಡಿ.ಪಿ ಅಧ್ಯಯನ ಮಾಡಿದೆ. ಆ ವರದಿಗಳ ಸಾರಾಂಶವನ್ನು ವಿಶ್ಲೇಷಿಸಿದರೆ ಅಭಿವೃದ್ಧಿ ಸಾಧನೆಯಲ್ಲಿ ಯಾವ ಸ್ಥಾನದಲ್ಲಿದೆ ಎನ್ನುವುದನ್ನು ಗಮನಿಸಿದರೆ ಜಗತ್ತಿನ ಒಟ್ಟು 188 ರಾಷ್ಟ್ರಗಳಲ್ಲಿ ಭಾರತ 182ನೇ ಸಾಲಿನಲ್ಲಿದೆ. ಆರೋಗ್ಯದ ರಕ್ಷಣೆಯ ಸಲುವಾಗಿ ಔಷಧಿಗಳಿಗೆ ಹೆಚ್ಚು ವ್ಯಯಮಾಡುತ್ತಿರುವ ಜಗತ್ತಿನ ರಾಷ್ಟ್ರಗಳಲ್ಲಿ ಭಾರತ ಪ್ರಥಮ ಸ್ಥಾನದಲ್ಲಿರುವುದು ಸಹ ಕಂಡುಬಂದಿರುವುದು(ಗೀತ ಸೇನ್–2002).

ಆಹಾರದ ಭದ್ರತೆ ಮತ್ತು ನಿರುದ್ಯೋಗ ಮತ್ತು ಬಡತನ ನಿರ್ಮೂಲನೆ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸುವುದಾದರೆ ಭಾರತದಲ್ಲಿ ನಿರುದ್ಯೋಗದ ದರ 1993–94ರಲ್ಲಿ ಶೇಕಡ 5.6 ಇದ್ದು 1999–00ರಲ್ಲಿ ಶೇಕಡ 7.2ರಷ್ಟು ಆಗಿರುವುದು ಕಂಡುಬರುತ್ತದೆ. 21ನೇ ಶತಮಾನದಲ್ಲಿ ಭಾರತದ ಎನ್.ಎಸ್.ಎಸ್.ಒ ನಂತಹ ಅಧ್ಯಯನಗಳನ್ನು ಪರಾಮರ್ಶಿಸಿದಾಗ ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚುತ್ತಿದೆ (ಮುಖ್ಯೋಪಾಧ್ಯಾಯ ಮತ್ತು ರಾಜರಾಮನ್–2007). ಜಾಗತೀಕ ಮಟ್ಟದಲ್ಲಿ ಬಡತನದ ರೇಖೆಗಿಂತ ಕೆಳಗಿರುವ ದೇಶಗಳನ್ನು ಅಧ್ಯಯನ ಮಾಡಿದ ವರದಿಗಳನ್ನು ಗಮನಿಸಿದರೆ ಶೇಕಡ 80ರಷ್ಟು ಭಾರತದ ಜನರು ಅಂತರಾಷ್ಟ್ರೀಯ ಬಡತನದ

ರೇಖೆಯಿಂದ ಕೆಳಗಿರುವುದು ಕಂಡುಬರುತ್ತದೆ. ಒಟ್ಟು 94 ದೇಶಗಳ ಪಟ್ಟಿಯಲ್ಲಿ ಭಾರತ 80ನೇ ರ್‍ಯಾಂಕಿಂಗ್ ನಲ್ಲಿರುವುದು ಮತ್ತು ಹಿಂದುಳಿದ ಆಫ್ರಿಕಾ ದೇಶದ ಸಾಲಲ್ಲಿರುವುದನ್ನು ಎನ್.ಸಿ.ಇ.ಯು.ಎಸ್-2010ರ ವರದಿ ತಿಳಿಸುತ್ತದೆ. ಆಹಾರದ ಕೊರತೆಯನ್ನು ಸ್ವಾತಂತ್ರ್ಯ ಬಂದಾಗನಿಂದಲೂ ಸಾಮಾಜಿಕ ಚಿಂತಕರ ಅಧ್ಯಯನ ಮಾಡುತ್ತಾ ಬಂದಿರುವರು ಅದರಲ್ಲಿ 1947ರಲ್ಲಿ ಇದ್ದಂತಹ ಭಾರತದ ಒಟ್ಟು ಜನಸಂಖ್ಯೆಗಿಂತೂ ಹೆಚ್ಚಿನ ಜನರು ದಿನಕ್ಕೆ ಒಂದೇ ಊಟದಿಂದ ಅರೆ ಹೊಟ್ಟೆಯಲ್ಲಿದ್ದಾರೆ ಎನ್ನುವುದನ್ನು "ಹಸಿದವನಿಗೆ ಅನ್ನವೇ ದೇವರು" ಎಂಬ ಲೇಖನದಲ್ಲಿ ಸ್ವಾಮಿನಾಥನ್ ಗುರುತಿಸುತ್ತಾರೆ(ಎಂ.ಎಸ್.ಸ್ವಾಮಿನಾಥನ್, 2011).

ಯಾವುದೇ ರಾಷ್ಟದಲ್ಲಿ ಅಭಿವೃದ್ಧಿ ಏನಾದರು ಆಗಿದೆಯಂದರೆ ಅದು ಮಾನವ ಸಂಪನ್ಮೂಲದ ಬಲದಿಂದ ಮಾತ್ರ ಸಾಧಿಸಿರುವುದು ತಿಳಿಯಬಹುದು. ಸಾಮಾಜಿಕ ಅಭಿವೃದ್ಧಿ ಅರ್ಥಶಾಸ್ತ್ರದಲ್ಲಿ ನೋಡುವುದಾದರೆ ಆ ರಾಷ್ಟ್ರದಲ್ಲಿರುವ ಕಾರ್ಮಿಕರೇ ಅದರ ಪ್ರಮುಖ ಪ್ರತಿನಿಧಿಯಾಗಿರುತ್ತಾರೆ. ಆದುದರಿಂದ ಕಾರ್ಮಿಕರಿಗೆ ಉದ್ಯೋಗಗಳನ್ನು ಒದಗಿಸಿದರೆ ಸಾಮಾಜಿಕ ಅಭಿವೃದ್ಧಿ ಕಾಣಬಹುದು. ಭಾರತದಂತಹ ದೇಶದಲ್ಲಿ ಇಂತಹ ಪ್ರಯತ್ನಗಳು ಸರಿಯಾದ ದಾರಿಯಲ್ಲಿ ನಡೆಯದಿರುವುದನ್ನು ಅನೇಕ ಅಧ್ಯಯನಗಳು ತಿಳಿಸುತ್ತವೆ. ಭಾರತದಲ್ಲಿ ಕಾರ್ಮಿಕರ ಒತ್ತಡ ಕೇವಲ ಶೇಕಡ 2.3ರಷ್ಟು ಇರುವುದು. ನಿರುದ್ಯೋಗ ದರ 1973ರಲ್ಲಿ ಶೇಕಡ 8.35 ಇದ್ದು. 1983ರಲ್ಲಿ ಶೇಕಡ 9.22 ಇದ್ದು, 1993ರಲ್ಲಿ ಶೇಕಡ 6.06ರಷ್ಟು ಇದ್ದು, 2005ರಲ್ಲಿ ಶೇಕಡ 8.28 ಹೆಚ್ಚು ನಿರುದ್ಯೋಗ ದರ ಇರುವುದನ್ನು, ಭಾರತದ ಒಟ್ಟು ಉದ್ಯೋಗಸ್ಥರಲ್ಲಿ ಅಸಂಘಟಿತ ವಲಯದಲ್ಲಿ ಶೇಕಡ 93ರಷ್ಟು ಉದ್ಯೋಗದಲ್ಲಿರುವುದನ್ನು ಕಾಣಬಹುದು(ಪ್ಲಾನಿಂಗ್ ಕಮಿಷನ್ ವರದಿ, 2011).

ಆಹಾರದ ಭದ್ರತೆಯನ್ನು ಆರ್ಥಿಕತಜ್ಞರು ಹೀಗೆ ವ್ಯಾಖ್ಯಾನಿಸುತ್ತಾರೆ. "ವ್ಯಕ್ತಿಯೊಬ್ಬ ಆರೋಗ್ಯ ಪೂರ್ಣವಾದ ಜೀವನವನ್ನು ನಡೆಸಲು ಬೇಕಾದ ಅವಶ್ಯಕ ಆಹಾರ ಪದಾರ್ಥಗಳನ್ನು ಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು". ಇಂತಹ ಸಮಸ್ಯೆಯನ್ನು ಎದುರಿಸುವುದು ಹೆಚ್ಚಾಗಿ ಗ್ರಾಮೀಣ ಭೂರಹಿತರು ಮತ್ತು ನಗರ ಪ್ರದೇಶದ ಬಡವರು. ಬಡತನದ ಪರಿಕಲ್ಪನೆಯನ್ನು ಸರಳವಾಗಿ ವ್ಯಾಖ್ಯಾನಿಸುವುದಾದರೆ "ಜನರ ಜೀವನದ ಕೊರತೆ ಅಥವಾ ಅಭಾವದ ಸ್ಥಿತಿಯಲ್ಲಿರುವುದಕ್ಕೆ" ಬಡತನ ಎನ್ನಬಹುದು. ಉದ್ಯೋಗವೆಂಬ ಸಾಧನದ ಮೂಲಕ ಹಸಿವು ನೀಗಿಸುವ, ಆಹಾರದ ಭದ್ರತೆಯನ್ನು ಹೆಚ್ಚಿಸುವ ಶಕ್ತಿ ಇದೆಯೆಂದು ಕಲ್ಯಾಣ ಮಾದರಿ ಅಭಿವೃದ್ಧಿ ಸಿದ್ಧಾಂತ ಹೇಳುತ್ತದೆ. ಎಂಭತ್ತರ ದಶಕದಲ್ಲಿ ಆಹಾರದ ಸಹಾಯಧನ ನಿಡುವ ಬದಲು ಉತ್ಪಾದನ ಆಧಾರಿತ ಹಾಗೂ ಕೂಲಿಯನ್ನು ನೀಡುವಂತಹ ಉದ್ಯೋಗಗಳನ್ನು ಸೃಷ್ಟಿಸುವುದರ ಮೂಲಕ ಬಡತನವನ್ನು ಕಡಿಮೆ ಮಾಡಬಹುದು(ಆ್ಯಂಡರ್ ಸನ್, 1988-1993).

ಆಹಾರದ ಭದ್ರತೆಯನ್ನು ಒದಗಿಸುವ, ಬಡತನವನ್ನು ನಿರ್ಮೂಲನೆಗೊಳಿಸುವ ಹಿನ್ನೆಲೆಯಲ್ಲಿ ಉದ್ಯೋಗ ಸಿದ್ಧಾಂತದ ಪ್ರಯೋಗಗಳನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಬಹಳ ಹಿಂದೆಯೇ ಅನುಷ್ಠಾನಗೊಳಿಸಲಾಯಿತು. ಗ್ರೇಟ್‌ಬ್ರಿಟನ್‌ನಲ್ಲಿ 1817ರಲ್ಲಿ ಒಂದು ಕನಿಷ್ಠ ಮಟ್ಟದ ಉದ್ಯೋಗದ ಕಾಯಿದೆ ಅನುಷ್ಠಾನಗೊಂಡಿತು. ನಂತರ ಅದರ ಅನೇಕ ಲೋಪದೋಷಗಳನ್ನು ಅನುಭವಗಳ ಮೂಲಕ ಪರಿಷ್ಕರಣೆ ಮಾಡಲಾಗಿದೆ (ಬ್ಲೂಗಾ, 1964). ಹಾಗೆಯೇ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಇದರ ಒಂದು ಪರಿಕಲ್ಪನೆಯನ್ನು 1930ರಲ್ಲಿ ಮಾಡ್ಯೂಲ್ ಪ್ರೋಗ್ರಾಮ್ ಜಾರಿಗೆ ಬಂದವು(ಕೆಸಲ್ ಮ್ಯಾನ್,1978; ಬಿರ್ನಸ್ಟೇನ್, 1970). ಇಂತಹ ಅನೇಕ ಯೋಜನೆಗಳು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಪ್ರಮುಖವಾಗಿ ನೈಸರ್ಗಿಕ ದುರಂತಗಳಲ್ಲಿ ತೊಂದರೆ ಅನುಭವಿಸುತ್ತಿರುವವರ, ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವವರು ಗುರಿಯಾಗಿಸಿಕೊಂಡು, ಬಡತನ ನಿರ್ಮೂಲನೆಗೆ ಸಂಬಂಧಿಸಿದ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಯಿತು. ಹಕ್ಕು ಮತ್ತು ಅಧಿಕಾರಕ್ಕಾಗಿ ಹೋರಾಟ ಮಾಡುವಂತಹ ಕಾರ್ಮಿಕರಿಗೆ ನ್ಯಾಯ ಒದಗಿಸುವುದು ಇದರ ಮೂಲ ಆಶಯವಾಗಿತ್ತು. ಅನೇಕ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಬಡವರಿಗೆ ಉದ್ಯೋಗ ನೀಡುವುದರ ಮೂಲಕ ಸಾರ್ವಜನಿಕ ಆಸ್ತಿಗಳನ್ನು ನಿರ್ಮಾಣ ಮಾಡುವ ಕೆಲಸಗಳಿಗೆ ಆದ್ಯತೆ ನೀಡಲಾಯಿತು. ಇದು ಚೀನಾದಲ್ಲಿ ಚೀನಾ–1987ರಲ್ಲಿ, ಭಾರತ–1978ರಲ್ಲಿ, ಪಾಕಿಸ್ತಾನ–1992ರಲ್ಲಿ, ಬಾಂಗ್ಲಾದೇಶ–1983ರಲ್ಲಿ, ಫಿಲಿಪೈನ್ಸ್–1990ರಲ್ಲಿ, ಬೋಸ್ವಾನ್–1960ರಲ್ಲಿ, ಕೀನ್ಯಾ–1992ರಲ್ಲಿ, ಉದ್ಯೋಗ ಖಾತರಿ ನೀತಿಗಳ ಪ್ರಕಾರ ಅವರ ಹಕ್ಕುಗಳಿಗೆ ಅನುಸಾರವಾಗಿ ಸೌಲಭ್ಯಗಳನ್ನು ಅನೇಕ ಕಾರ್ಯತಂತ್ರಗಳ ಮೂಲಕ ತಲುಪಿಸುವಂತಹ ಪ್ರಯತ್ನಗಳನ್ನು ಮಾಡಿರುವುದನ್ನು, ಜೀನ್ ಡ್ರೀಜ್ ಮತ್ತು ಸೇನ್, 1991; ಲಿಪ್ಟಾನ್, 1996; ವಾನ್ ಭ್ರೂನ್, 1995; ಭ್ಲೋಸ್ಲೆ, 1992; ಕಾನ್ಬೂರ್,1993; ಈ ಎಲ್ಲಾ ಅಧ್ಯಯನಗಳು ತಿಳಿಸುತ್ತವೆ.

ಇಂತಹ ಪ್ರಯತ್ನಗಳು ಭಾರತದಂತಹ ರಾಷ್ಟ್ರಗಳಲ್ಲೂ ಬಡತನ ನಿರ್ಮೂಲನೆಗಾಗಿ ಬಹು ಪ್ರಕಾರದ ಉದ್ಯೋಗ ಅವಕಾಶಗಳನ್ನು ಆಚರಣೆಗೆ ತಂದು ನೋಡಲಾಯಿತು. ಅಂದರೆ ಭಾರತದಲ್ಲಿ ಸಾರ್ವಜನಿಕ ಕೂಲಿ ಉದ್ಯೋಗ ಯೋಜನೆಗಳು ಹೊಸದೇನಲ್ಲ. ಇದಕ್ಕೆ ಆರು ದಶಕಗಳ ಇತಿಹಾಸವಿದೆ. ಬರ ಮತ್ತು ಬಡತನ ನಿರ್ಮೂಲನೆ ಮಾಡಲು, ಹಸಿವು ನೀಗಿಸಲು ಆಹಾರದ ಭದ್ರತೆ ಒದಗಿಸಲು ಹಲವು ಪ್ರಕಾರದ ಗ್ರಾಮೀಣ ಉದ್ಯೋಗ ಯೋಜನೆಗಳನ್ನು ಆಚರಣೆಗೆ ತರಲಾಗಿದೆ. ಇಲ್ಲಿ ನಮಗೆ ಕೆಲವು ಪ್ರಶ್ನೆಗಳು ಎದುರಾಗುತ್ತವೆ. ಅವು ಯಾವುವೆಂದರೆ, ಅನುಷ್ಠಾನಗೊಂಡಂತಹ ಎಲ್ಲಾ ಯೋಜನೆಗಳು ಯಶಸ್ವಿಯಾಗಿವೆಯೇ? ಅವು ಉದ್ಯೋಗಗಳನ್ನು ಸೃಷ್ಟಿಸಿವೆಯೇ? ಸೃಷ್ಟಿಸಿದ್ದರೆ ಅದು ಎಷ್ಟರ ಮಟ್ಟಿಗೆ ಸೃಷ್ಟಿಸಿವೆ? ಆಹಾರದ ಭದ್ರತೆಯನ್ನು ಒದಗಿಸಿವೆಯೇ? ಇವು ಬಡತನ,

ಬರ, ಆರ್ಥಿಕ ಬಿಕ್ಕಟ್ಟುಗಳನ್ನು ಬಿಡಿಸಿದೆಯೇ? ಅಭಿವೃದ್ಧಿ ಆಗಿದೆಯೇ? ಆಗಿದ್ದರೆ ಅದು ಯಾವ ಪ್ರಮಾಣದಲ್ಲಿ ಆಗಿದೆ. ತಳಮಟ್ಟದ ಜನರಿಗೂ ಸೌಲಭ್ಯಗಳು ತಲುಪಿವೆಯೇ? ಅನ್ನುವಂತಹ ಪ್ರಶ್ನೆಗಳಿಗೆ ಯಶಸ್ವಿಗಿಂತ ವೈಫಲ್ಯಗಳೇ ಹೆಚ್ಚು ಎನ್ನುವ ಉತ್ತರಗಳನ್ನು ಅಧ್ಯಯನಗಳು ಗುರುತಿಸಿವೆ. ಉದ್ಯೋಗ ಖಾತರಿ ಯೋಜನೆ, ಕೂಲಿಗಾಗಿ ಕಾಳು ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಜವಹಾರ್ ರೋಜ್‌ಗಾರ್ ಯೋಜನೆ, ಉದ್ಯೋಗ ಭರವಸೆ ಯೋಜನೆ ಹೀಗೆ ಯೋಜನೆಗಳ ಪಟ್ಟಿ ಹೆಚ್ಚುತ್ತಲೇ ಹೋಯಿತು. ಆದರೆ ಇವುಗಳು ಪರಿಪೂರ್ಣತೆಯನ್ನು ಹೊಂದಲಿಲ್ಲ. ಏಕೆ ಪರಿಪೂರ್ಣತೆ ಹೊಂದಲಿಲ್ಲ? ಗ್ರಾಮೀಣ ಅಭಿವೃದ್ಧಿ ಮತ್ತು ಇದರಲ್ಲಿ ಪಂಚಾಯತ್ ರಾಜ್ ಸಂಸ್ಥೆಯ ಪಾತ್ರವೇನು? ಈ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಲ್ಲಿ ಲೋಪದೋಷಗಳು ಯಾವ ಹಂತಗಳಲ್ಲಿ ಆಯಿತು? ಎನ್ನುವುದು ಚರ್ಚೆಗೆ ಗ್ರಾಸವಾದವು. ಜೊತೆಗೆ ಯಾವ ಯೋಜನೆಗಳು ಭಾರತದಂತಹ ಗ್ರಾಮೀಣ ಬಡವರ ಹಸಿವನ್ನು ಮತ್ತು ಆಹಾರದ ಭದ್ರತೆಯನ್ನು ಒದಗಿಸಲಿಲ್ಲ ಎನ್ನುವ ಸತ್ಯವನ್ನು ತರೆದಿಟ್ಟವು.

3.6. ಅಭಿವೃದ್ಧಿ ಯೋಜನೆಗಳು

ಸ್ವಾತಂತ್ರ್ಯ ನಂತರದ ಅಭಿವೃದ್ಧಿಗೆ ಪೂರಕವಾಗಿ ಬಹು ಬಗೆಯ ಉದ್ದೇಶವಿಟ್ಟುಕೊಂಡು ಭಾರತದಲ್ಲಿ ಸರ್ಕಾರ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು ಜಾರಿಗೆ ಬರುತ್ತವೆ. ಅವುಗಳು ತಳಹಂತದ ಜನರಿಗೆ ತಲುಪಬೇಕು. ಸೌಲಭ್ಯಗಳು ಅವಶಕತೆ ಇರುವವರಿಗೆ ತಲುಪಲೇಬೇಕು. ಬಡತನ, ನಿರುದ್ಯೋಗ, ಅನಕ್ಷರತೆಗಳು ನಿವಾರಣೆಯಾಗಬೇಕು. ಸಕಾಲಕ್ಕೆ ಸರ್ಕಾರದ ಸೌಲಭ್ಯಗಳು ಜನರನ್ನು ತಲುಪುವುದರಿಂದ ಜನರ ಜೀವನ ಮಟ್ಟ ಸುಧಾರಿಸುತ್ತದೆ. ಇದರಿಂದ ಕುಟುಂಬಗಳು ಮತ್ತು ಸಮುದಾಯದ ಜೀವನ ಗುಣಮಟ್ಟವು ಸಹ ಸುಧಾರಣೆಯಾಗುತ್ತದೆ. ಕಾಲಕಾಲಕ್ಕೆ ಸರ್ಕಾರದ ಉದ್ಯೋಗ ಮತ್ತು ಮೂಲಭೂತ ಸೌಲಭ್ಯಗಳು ಜನರನ್ನು ತಲುಪಿದರೆ ಅವರು ಜೀವನೋಪಾಯಕ್ಕಾಗಿ ವಲಸೆ ಹೋಗುವುದು ನಿಲ್ಲಬಹುದು. ಇದರಿಂದಾಗಿ ಹಳ್ಳಿಗಳ ಏಳಿಗೆ ಆಗಬಹುದು. ಇಂತಹ ಪ್ರಯತ್ನದಿಂದ ನಗರಾಭಿಮುಖ ವಲಸೆ ಕಡಿಮೆಯಾಗಬಹುದು. ಸಾಮರಸ್ಯ, ಸಮಾನ ಅವಕಾಶದ ಉದ್ಯೋಗ ಅವಕಾಶಗಳು ಸೃಷ್ಟಿಸುವ ಆಶಯದಿಂದ ವಿಕೇಂದ್ರೀಕರಣ ವ್ಯವಸ್ಥೆಯ ಮುಖ್ಯ ಘಟ್ಟವಾದ ಗ್ರಾಮಪಂಚಾಯತಿಗಳು ತಳಮಟ್ಟದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪಣ ತೊಡಬೇಕು. ಹಳ್ಳಿಗಳ ಪ್ರತಿ ಕುಟುಂಬದ ಸರ್ವತೋಮುಖ ಅಭಿವೃದ್ಧಿಯಾದರೆ ಹಳ್ಳಿಗಳ ಏಳಿಗೆ ಸಾಧ್ಯ ಎನ್ನುವ ಮಹಾದಾಶೆಯಿಂದ ಶಿಕ್ಷಣ, ಆರೋಗ್ಯ, ಉದ್ಯೋಗ, ಶುದ್ಧ ಕುಡಿಯುವ ನೀರು, ವಾಸಿಸಲು ಯೋಗ್ಯ ಮನೆ, ರಸ್ತೆ ದೀಪದ ವ್ಯವಸ್ಥೆ, ಶೌಚಾಲಯವನ್ನು ಪ್ರತಿ ಕುಟುಂಬ ಹಾಗೂ ಹಳ್ಳಿಗಳು ಹೊಂದಬೇಕು ಎನ್ನುವ ದಿಕ್ಕಿನಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಲಾಯಿತ್ತು. ಅದರಲ್ಲಿ ಉದ್ಯೋಗ ಖಾತರಿ ಮಹತ್ವದಾಗಿದೆ.

3.7. ಯೋಜನೆಗಳ ಬೆಳವಣಿಗೆ

ನಿರುದ್ಯೋಗ ಭಾರತ ದೇಶದ ಜ್ವಲಂತ ಸಮಸ್ಯೆ. ದಿನೇ ದಿನೇ ಅರ್ಹ ದುಡಿಮೆಗಾರರು ಉದ್ಯೋಗವನ್ನು ಅರಸಿ ಅಲೆಯುತ್ತಿರುವುದು ಹೆಚ್ಚಾಗಿದೆ. ಭಾರತದ ದಿವಂಗತ ರಾಷ್ಟ್ರಪತಿಗಳಾದ ವಿ.ವಿ. ಗಿರಿಯವರು ಹೇಳುವಂತೆ "ನಿರುದ್ಯೋಗ ಎಂಬುದು ಸಮಸ್ಯೆಗಳಲ್ಲೇ ಅತ್ಯಂತ ದೊಡ್ಡ ಸಮಸ್ಯೆ". ಅಸಮಾನ ಆರ್ಥಿಕ ಬೆಳವಣಿಗೆ ಆಧಾರಿತ ಅಭಿವೃದ್ಧಿ ಮತ್ತು ನಿರುದ್ಯೋಗದಿಂದಾಗಿ ಯುವಕರು ನಕ್ಸಲೈಟ್ ಪ್ರವೇಶ ಸೇರಿದಂತೆ ಅನೇಕ ಸಂವಿಧಾನ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ನಿರುದ್ಯೋಗಿಗಳಾದ ವಿದ್ಯಾವಂತರು ತಮಗೆ ದೊರಕಬೇಕಾದ ಸೌಲಭ್ಯಗಳಿಂದ ವಂಚಿತರಾಗುವುದರಿಂದ ನಕ್ಸಲಿಸಂ ವೇಗವಾಗಿ ಬೆಳೆಯುತ್ತಿದೆ ಎಂದು ಅನೇಕ ಅಧ್ಯಯನಗಳು ತಿಳಿಸಿವೆ. ಹೀಗಾಗಿ ನಿರುದ್ಯೋಗ ಎಂಬುದು ಅತ್ಯಂತ ಸೂಕ್ಷ್ಮ ಹಾಗು ಜಟಿಲವಾದಂತಹ ಸಮಸ್ಯೆಗಳಿಗೂ ಕಾರಣವಾಗಿದೆ. ಇದರ ಸ್ವರೂಪ ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿದೆ.

ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ ನಿರುದ್ಯೋಗ ಸಮಸ್ಯೆ ಆವರ್ತ ಸ್ವರೂಪದ್ದಾಗಿದ್ದು (ಅಂದರೆ ಅಲ್ಪಕಾಲ ಮಾತ್ರ ತೊಂದರೆಯನ್ನುಂಟು ಮಾಡುವ). ಇದಕ್ಕೆ ಕೈಗಾರಿಕಾ ಉತ್ಪಾದನೆಗಳ ಬೇಡಿಕೆ ಇಳಿಮುಖವಾಗಿರುವುದು ಕಾರಣವಾಗುತ್ತದೆ. ಹಾಗಾಗಿ ಸ್ವಲ್ಪ ಅವಧಿಯ ಕಾಲ ಮಾತ್ರ ಕೈಗಾರಿಕೆಗಳ ಉತ್ಪಾದನಾ ಕಾರ್ಯವನ್ನು ಸ್ಥಗಿತ ಮಾಡುತ್ತವೆ. ಆಗ ನಿರುದ್ಯೋಗ ಸೃಷ್ಟಿಯಾಗುತ್ತದೆ. ಆದರೆ ಭಾರತದಂತಹ ಅಭಿವೃದ್ಧಿ ಶೀಲ ಅಥವಾ ಹಿಂದುಳಿದ ದೇಶಗಳಲ್ಲಿ ದುಡಿಯುವ ಕೈಗಳಿಗೆ ಸಾಕಷ್ಟು ಬಂಡವಾಳ ಪೂರೈಕೆಯಾಗದೆ ನಿರುದ್ಯೋಗ ಸಮಸ್ಯೆ ಉಂಟಾಗುತ್ತದೆ. ಇಷ್ಟಲ್ಲದೆ ಉತ್ಪಾದನಾ ಕಾರ್ಯಕ್ಕೆ ಬೇಕಾಗುವ ಪೂರಕ ಪರಿಕರಗಳಾದ ಭೂಮಿ ಉದ್ಯಮಶೀಲತೆ ನಿರ್ವಹಣೆಯ ಕೊರತೆಯ ಅಂಶಗಳು ನಿರುದ್ಯೋಗಕ್ಕೆ ಕಾರಣವಾಗುತ್ತವೆ. ಆದ್ದರಿಂದ ದೈಹಿಕವಾಗಿ ದೃಢವಾಗಿ ಹಾಗು ಆರೋಗ್ಯವಾಗಿರುವ ಅರ್ಹ ಜನತೆಗೆ ದುಡಿಯುವ ಅವಕಾಶ ಸಿಗದೆ ಇರುವುದನ್ನು ನಿರುದ್ಯೋಗ ಎಂದು ಅರ್ಥೈಸಬೇಕಾಗುತ್ತದೆ. ದುಡಿಯುವ ಕೈಗಳಿಗೆ ಕೆಲಸ ಸಿಗದಿದ್ದರೆ ಅದು "ಮಾನವ ಶಕ್ತಿಯ ನಷ್ಟ" ಎಂದು ಕರೆಯಲಾಗುತ್ತದೆ. ನಿರುದ್ಯೋಗದ ಮತ್ತೊಂದು ಸ್ವರೂಪ ಎಂದರೆ ತಾತ್ಕಾಲಿಕ ನಿರುದ್ಯೋಗ. ಒಬ್ಬ ವ್ಯಕ್ತಿಯು ಕೈಯಲ್ಲಿರುವ ಕೆಲಸವನ್ನು ತ್ಯಜಿಸಿ, ಮತ್ತೊಂದು ಕೆಲಸವನ್ನು ಹುಡುಕಿಕೊಂಡು ಹೋದಾಗ ಈ ಎರಡು ಅವಧಿಯ ಮಧ್ಯದ ತಾತ್ಕಾಲಿಕ ನಿರುದ್ಯೋಗವನ್ನು Frictional unemployment ಅಥವಾ ಅಲ್ಪಾವಧಿಯ ನಿರುದ್ಯೋಗವೆಂದು ಹೇಳಬಹುದು. ಆದ್ದರಿಂದ ನಿರುದ್ಯೋಗಿಗಳ ಪ್ರಮಾಣವನ್ನು ಲೆಕ್ಕಹಾಕುವ ಸಂದರ್ಭದಲ್ಲಿ ಈ ತಾತ್ಕಾಲಿಕ ನಿರುದ್ಯೋಗವನ್ನು ಯಾರು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ತಾತ್ಕಾಲಿಕ ನಿರುದ್ಯೋಗ ಸಮಸ್ಯೆಗೆ ಮುಂದುವರೆದ ದೇಶಗಳ ಲಕ್ಷಣ ಇದರ ಬೇಡಿಕೆಯ ಕೊರತೆ, ಆರ್ಥಿಕ ಹಿಂಜರಿಕೆಯ ಕಾರಣದಿಂದ ಉದ್ಯೋಗಿಯೊಬ್ಬ

ತಾನು ಕಾರ್ಯ ನಿರ್ವಹಿಸುವ ಸ್ಥಳದಲ್ಲಿ ಕೆಲಸವಿಲ್ಲದೆ ಬೇರೊಂದು ಕಡೆ ಉದ್ಯೋಗವನ್ನು ಅರಸುವಾಗ ಉದ್ಭವವಾಗುವ ಸ್ವರೂಪದ್ದಾಗಿರುತ್ತದೆ. ಈ ಸಮಸ್ಯೆಯನ್ನು ಸೂಕ್ತವಾದ ಆರ್ಥಿಕ ನೀತಿಯನ್ನು ಅಳವಡಿಸುವುದರ ಮೂಲಕ ಪರಿಹರಿಸಬಹುದು. ಆದರೆ ಭಾರತದಂತಹ ದೇಶಗಳಲ್ಲಿ ನಿರುದ್ಯೋಗವು ಬೇಡಿಕೆಯ ಕೊರತೆಯಿಂದ ಉಂಟಾದುದಲ್ಲ. ಆದ್ದರಿಂದ ಈ ಸಮಸ್ಯೆಯನ್ನು ಕೇವಲ ಸೂಕ್ತ ಆರ್ಥಿಕ ನೀತಿಯ ಅಳವಡಿಕೆಯಿಂದ ಪರಿಹರಿಸಲು ಸಾಧ್ಯವಿಲ್ಲ.

3.8. ನಿರುದ್ಯೋಗದ ಸ್ವರೂಪ

ನಿರುದ್ಯೋಗದ ಸ್ವರೂಪವನ್ನು ನಿಖರವಾದ ಅಂಕಿ–ಅಂಶಗಳ ಕೊರತೆಯಿಂದ ನಿರುದ್ಯೋಗ ಹಾಗು ಅರೆ ಉದ್ಯೋಗದ ಪ್ರಮಾಣಗಳ ಸ್ವರೂಪವನ್ನು(ನಗರ ಪ್ರದೇಶ ಮತ್ತು ಗ್ರಾಮೀಣ ಎರಡರಲ್ಲೂ) ನಿಖರವಾಗಿ ತಿಳಿಯುವುದು ಸವಾಲಿನ ಕೆಲಸ. ಭಾರತ ಸರ್ಕಾರದ ಯೋಜನಾ ಆಯೋಗವು 1969ರಲ್ಲಿ ನೇಮಿಸಿದ ದಂಡೇವಾಲ ಸಮಿತಿಯು ನಿಖರವಾದ ಅಂಕಿ ಅಂಶಗಳನ್ನು ಸಂಗ್ರಹಿಸಲು ಒಂದು ಹೊಸ ವಿಧಾನವನ್ನು ಅನುಸರಿಸಿತು. ಈ ವರದಿಯ ಪ್ರಕಾರ "ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಶಾಶ್ವತವಾದ ನಿರುದ್ಯೋಗವೆಂಬುದು ಇಲ್ಲವೇ ಇಲ್ಲ ಅದೇನಿದ್ದರು ಅದು ತಾತ್ಕಾಲಿಕ ಅಥವಾ ಅರೆ ನಿರುದ್ಯೋಗ" ಎಂದು ಹೇಳುತ್ತದೆ. ಇದಕ್ಕೆ ಬದಲಾಗಿ ಪೂರ್ಣ ಉದ್ಯೋಗಕ್ಕೂ ಅರೆ ಉದ್ಯೋಗಕ್ಕೂ ಮಧ್ಯೆ ಇರುವ ವ್ಯತ್ಯಾಸವನ್ನು ತೋರಿಸಲು ಸಮಿತಿಯು ಆಸಕ್ತಿ ತೋರಿಸಿದೆ. ನಿರುದ್ಯೋಗವನ್ನು ಒಂದೇ ರೀತಿ ಪರಿಗಣಿಸುವುದು ತರ್ಕ ಹೀನವೆಂದು ಈ ಸಮಿತಿಯು ತಿಳಿದಿತ್ತು. ಎರಡು ರೀತಿಯ ನಿರುದ್ಯೋಗ ಸಮಸ್ಯೆಯ ಮಧ್ಯೆ ಇರುವ ಪ್ರಮುಖ ವ್ಯತ್ಯಾಸವೆಂದರೆ ಅದು ಕಾಲ ಅಥವಾ ನಿರುದ್ಯೋಗದ ಅವಧಿಗೆ ಸಂಬಂಧಪಟ್ಟಿದ್ದು ನಿಜ ಹೇಳಬೇಕೆಂದರೆ ವಾಸ್ತವಿಕವಾಗಿ ಯೋಜನಾ ಆಯೋಗವಾಗಲಿ ಜನಗಣತಿಯ ವರದಿಯಾಗಲಿ, ಉದ್ಯೋಗ ಮತ್ತು ತರಬೇತಿ ಸಂಸ್ಥೆಯ ಮಹಾ ನಿರ್ದೇಶಕರಾಗಲಿ, ಉದ್ಯೋಗ ವಿನಿಮಯ ಕೇಂದ್ರವಾಗಲಿ, ಭಾರತೀಯ ಮೌಲ್ಯಮಾಪಕ ಸಂಸ್ಥೆಯಾಗಲಿ, ಅಥವಾ ರಾಷ್ಟ್ರೀಯ ಮಾದರಿಗಳ ಸಮೀಕ್ಷೆ ಸಂಸ್ಥೆಗಳಾಗಲಿ, ಯಾವೊಂದು ನಿರುದ್ಯೋಗ ಸಮಸ್ಯೆಯ ನಿಖರವಾದ/ ಪ್ರಮಾಣಾತ್ಮಕ ವರದಿಗಳನ್ನು/ಸಮೀಕ್ಷೆಯನ್ನು ನೀಡುವುದಿಲ್ಲ ಎಂದು ಪಿ.ಸಾಯಿನಾಥ್ ಹೇಳುತ್ತಾರೆ.

ಇಂಡಿಯಾದ ಪರಿಸ್ಥಿತಿಯಲ್ಲಿ ನಿರುದ್ಯೋಗ ಸಮಸ್ಯೆಯೇ ಬಡತನದ ಚಲನೆಯ ವೇಗವನ್ನು ಹೆಚ್ಚಿಸುವಲ್ಲಿ ಪ್ರಮುಖ ರೂವಾರಿಯಾಗಿರುವುದು. ಇದನ್ನು ಅರಿತ ಯು.ಪಿ.ಎ ಸರ್ಕಾರ ನಿರುದ್ಯೋದ ಸಮಸ್ಯೆಗೆ ಪರಿಹಾರದ ದಾರಿ ಹುಡುಕಲು ಮಾಂಟೆಕ್‌ಸಿಂಗ್ ಅಹ್ಲುವಾಲಿಯ ನೇತೃತ್ವದ ಕಾರ್ಯಪಡೆಯು 2000ರಲ್ಲಿ ವಹಿಸಿತ್ತು. ಇದರ ಅಧ್ಯಯನದ ವರದಿಯಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಯಲ್ಲಿ ಉದ್ಯೋಗ ಸೃಷ್ಟಿಸುವ ಮತ್ತು ನೀಡುವ ಕಾರ್ಯತಂತ್ರವನ್ನು ಸಿದ್ಧಪಡಿಸುವಂತೆ ಮಾರ್ಗದರ್ಶಿ

ಸೂತ್ರವನ್ನು ಸೂಚಿಸಿತು. ವಿಶೇಷ ಪಡೆಯ (ಮಾಂಟೆಕ್ ಸಿಂಗ್ ತಂಡ) ವರದಿ ಪ್ರಕಾರ 1999 – 2000ದ ಅವಧಿಯಲ್ಲಿ ನಿರುದ್ಯೋಗ ಬೆಳವಣಗೆಯ ದರ ಶೇಕಡ 2.2 ಅಧ್ಯಯನ ಗುರುತಿಸಿದೆ. ವಿಶೇಷ ಪಡೆಯ ವರದಿಯು ಯು.ಪಿ.ಎಸ್.ಎಸ್, ಪರಿಕಲ್ಪನೆ ಪ್ರಕಾರ 2002ರ ಅವಧಿಯಲ್ಲಿ ಶೇಕಡ 7.32ರಷ್ಟಿದ್ದು, ಆಯ್ದ ಕೆಲವು ರಾಜ್ಯಗಳಲ್ಲಿ 1993–94 ಹಾಗೂ 1999–2000ರ ಅವಧಿಯಲ್ಲಿ ನಿರುದ್ಯೋಗದ ಪ್ರಮಾಣವನ್ನು (ಅರ್ಹ ಕೆಲಸಗಾರರು ಮತ್ತು ಅವರಲ್ಲಿ ನಿರುದ್ಯೋಗಿಗಳ ಪ್ರಮಾಣ ಅನುಪಾತ) ಸೂಚಿಸುವ ಅಂಕಿಅಂಶಗಳನ್ನು ಪಟ್ಟಿ ಒಂದರಲ್ಲಿ ಕೊಡಲಾಗಿದೆ. ಈ ಅಧ್ಯಯನದಿಂದ ಹೊರಬಂದ ಅಂಕಿ ಅಂಶಗಳು ತಮಿಳುನಾಡು ಮತ್ತು ಪಶ್ಚಿಮಬಂಗಾಳ ರಾಜ್ಯಗಳಲ್ಲಿ 1993–94 ಮತ್ತು 1999–2000 ಅವಧಿಯಲ್ಲಿ ನಿರುದ್ಯೋಗ ಸಮಸ್ಯೆಯು ತುಂಬಾ ಗಂಭೀರವಾಗಿರುವುದನ್ನು ಗುರುತಿಸಿದೆ. 1993–94 ಅವಧಿಯಲ್ಲಿ ನಿರುದ್ಯೋಗಿಗಳ ಸಂಖ್ಯೆ 2 ಕೋಟಿಗಳಷ್ಟು ವ್ಯಕ್ತವಾದರೆ 1999–2000ದ ಅವಧಿಯಲ್ಲಿ ಅದು 2.66 ಕೋಟಿಗೂ ಅಧಿಕವಾಗಿರುವುದು ತಿಳಿಯುತ್ತದೆ. 1999–2000 ಅವಧಿಯಲ್ಲಿ ಅರ್ಹ ಉದ್ಯೋಗಾಂಕ್ಷಿಗಳ ಪ್ರಮಾಣ 6.33 ಕೋಟಿಯಷ್ಟು ಕಂಡುಬಂದರೆ 2006–07ರ ಹೊತ್ತಿಗೆ ಇದು 41.35 ಕೋಟಿಯನ್ನು ತಲುಪಬಹುದಾಗಿತ್ತು(ನಿರುದ್ಯೋಗ ಪ್ರಮಾಣ 10ನೇ ಪಂಚವಾರ್ಷಿಕ ಯೋಜನೆ ವರ್ಷಕ್ಕೆ ಅಡಿಯಲ್ಲಿ ಸುಮಾರು ಶೇಕಡ 1.8ರಷ್ಟು ಕಂಡುಬರುತ್ತದೆ). ನಿರುದ್ಯೋಗ ಬೆಳವಣಿಗೆಯು 2006–07ರ ಹೊತ್ತಿಗೆ ಶೇಕಡ 9.79ರಷ್ಟು ಕಂಡುಬಂದರೆ ಒಟ್ಟು ನಿರುದ್ಯೋಗಗಳ ಸಂಖ್ಯೆ 2.12 ಕೋಟಿಯಷ್ಟು ಆಗಬಹುದೆಂದು ಊಹಿಸಲಾಗಿದೆ. ಪ್ರಸ್ತುತ ಶೇಕಡ 92ರಷ್ಟು ಉದ್ಯೋಗಗಳು ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವುದು ತಿಳಿದು ಬಂದಿದೆ, ಉಳಿದ ಶೇಕಡ 8ರಷ್ಟು ಉದ್ಯೋಗಗಳು ಸಂಘಟಿತ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಆರ್ಥಿಕ ವ್ಯವಸ್ಥೆಯಲ್ಲಿನ ರಚನಾತ್ಮಕ ದೋಷಗಳೇ ನಿರುದ್ಯೋಗಕ್ಕೆ ಕಾರಣವೆಂದು ಹೇಳಬಹುದು. ಭಾರತ ದೇಶವು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಇಲ್ಲಿನ ಬೆಳೆಯುತ್ತಿರುವ ಮಾನವ ಸಂಪನ್ಮೂಲವನ್ನು ಸಮಗ್ರವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತಿಲ್ಲ, ಕಳೆದ ಒಂದು ದಶಕದಲ್ಲಿ ನಾಗಾಲೋಟದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯು ಸಹ ನಿರುದ್ಯೋಗ ಸಮಸ್ಯೆಯ ಹೆಚ್ಚಳಕ್ಕೆ ಕಾರಣವಾಗಿದೆ. ಬೇರೆ ವಲಯಗಳಲ್ಲಿ ಉದ್ಯೋಗ ಅವಕಾಶಗಳು ಇಲ್ಲವಾದ್ದರಿಂದ 2/3ರಷ್ಟು ಜನರು ಪ್ರಮುಖವಾಗಿ ಉದ್ಯೋಗದ ಅವಕಾಶಕ್ಕೆ ಕೃಷಿಯನ್ನೇ ಅವಲಂಭಿಸಿದ್ದಾರೆ. ಹೀಗಾಗಿ ಕೂಲಿಕಾರರು ದುಡಿಮೆಗಾಗಿ ಭೂಮಿಯ ಮೇಲೆ ಹೆಚ್ಚಿನ ಒತ್ತಡ ಹಾಕಿದ್ದಾರೆ ಆದರೂ ಸಹ ಬಹಳಷ್ಟು ಜನರು ನಿರುದ್ಯೋಗಿಗಳಾಗಿದ್ದಾರೆ. ಕಾರಣ ಕೃಷಿ ಕ್ಷೇತ್ರದಲ್ಲಿ ಯಾವಾಗಲೂ ಕೆಲಸ ಇರುವುದಿಲ್ಲ, ನಮಗೆ ನೇರವಾಗಿ ಕಾಣುವುದು ನಿರುದ್ಯೋಗ, ಕಂಡರೂ ಕಾಣದಂತಿರುವ ಕೃಷಿ

ಕ್ಷೇತ್ರದಲ್ಲಿನ ನಿರುದ್ಯೋಗ ಮತ್ತು ಸಾಂಪ್ರದಾಯಿಕ ಬೇಸಾಯ ಪದ್ಧತಿಗಳೇ ಭಾರತದ ಹಿಂದುಳಿದಿರುವಿಕೆಗೆ ಪ್ರಮುಖ ಕಾರಣವಾಗಿವೆ. ಇಂಡಿಯಾದ ಎರಡು ದಶಕಗಳ ಅನುಭವ ಅವಲೋಕಿಸಿದರೆ ಹಿಂದೆ ಶೇಕಡ 72 ಜನರು ಉತ್ಪಾದನೆಗೆ ಕೃಷಿ ಅವಲಂಬಿತರಾಗಿದ್ದಾರೆ. ಕೃಷಿಗೆ ಪೂರಕವಾದ ಹೈನುಗಾರಿಕೆ, ಕೋಳಿ ಸಾಕಣೆ, ಮೀನು ಸಾಗಾಣಿಕೆ, ಹಗ್ಗ ನೂಲುವುದು, ಜೇನು ಸಾಕಾಣಿಕೆ ಆಹಾರ ಸಂಸ್ಕರಣೆಯಂತಹ ಉಪ ಕಸುಬುಗಳು ಸಾಕಷ್ಟು ಪ್ರಮಾಣದಲ್ಲಿರುವುದು. ಅಭಿವೃದ್ಧಿಗೆ ಪೂರಕವಾದ ವಾತವರಣವಿಲ್ಲದ್ದು ನಿರುದ್ಯೋಗ ಸಮಸ್ಯೆಗೆ ಕಾರಣವಾಗಿದೆ. ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಭಾರತ ಸರ್ಕಾರ ಅನೇಕ ರೀತಿಯ ಉದ್ಯೋಗ ಸೃಷ್ಟಿಯ ಯೋಜನೆಗಳನ್ನು ಪಂಚವಾರ್ಷಿಕ ಯೋಜನೆ ಅವಧಿಗಳಲ್ಲಿ ಅಳವಡಿಸಿಕೊಂಡಿದೆ.

3.9. ಗ್ರಾಮೀಣ ವಲಯದಲ್ಲಿ ಉದ್ಯೋಗ ಯೋಜನೆ

ಈ ಮೇಲಿನ ಅಂಶವನ್ನು ಚರ್ಚಿಸಿ ಭಾರತದಲ್ಲಿ ಕಣ್ಣಿಗೆ ಕಾಣುವ ಕೆಲಸಗಳು ಮತ್ತು ಕಾಣದೇ ಇರುವ ಕೆಲಸಗಳು ಮತ್ತು ಅರೆಕಾಲಿಕ ಉದ್ಯೋಗಗಳನ್ನು ಇದಕ್ಕೆ ಸಂಬಂಧಿಸಿದಂತೆ ಕಾರ್ಯನೀತಿ ಮಾಡುವವರು ನಿರಂತರವಾಗಿ ಇದರ ಪರಿಹಾರ ಹುಡುಕುವಲ್ಲಿ ಪ್ರಯತ್ನಿಸಿದ್ದರು. ಉತ್ಪಾದನೆ ಸೆಳೆಯುವಂತಹ ಅರೆ ಉದ್ಯೋಗಗಳು ಗ್ರಾಮೀಣ ವಲಯದಲ್ಲಿ ಹೆಚ್ಚುತ್ತಿರುವ ಕಾರ್ಮಿಕರ ಒತ್ತಡ ಗ್ರಾಮೀಣ ಯೋಜನೆಗಾಗಿ ಗ್ರಾಮೀಣ ವಲಯದಲ್ಲಿ ಪ್ರಮುಖ ಪ್ರೇರಣೆಯಾಯಿತು. ಬಡತನ ನಿರ್ಮೂಲನೆ ಮಾಡಲು ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಿ ಪ್ರೇರಣೆ ಮಾಡಲು ಸಾರ್ವಜನಿಕ ಆಸ್ತಿ–ಪಾಸ್ತಿಗಳನ್ನು ನಿರ್ಮಾಣ ಮಾಡಲು ಭಾರತ ಸರ್ಕಾರ ಅನೇಕ ಯೋಜನೆಗಳನ್ನು ಕೈಗೊಂಡಿರುವುದು ಅಧ್ಯಯನಗಳಿಂದ ತಿಳಿಯುತ್ತದೆ.

3.10. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪೂರ್ವ

ಬಡತನ, ನಿರುದ್ಯೋಗ, ಅಪೌಷ್ಠಿಕತೆ, ಬರ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಬಹು ಆಯಾಮದ ಆಹಾರ ಭದ್ರತೆಯಂತಹ ಸಮಸ್ಯೆಗಳನ್ನು ಬಿಡಿಸಲು. ಸಮಸ್ಯೆಗಳ ಬಿರುಕುಗಳನ್ನು ಬೆಸೆಯಲು ಬಹು ಬಗೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬಹು ಆಯಾಮದ ಕಾರ್ಯ ತಂತ್ರಗಳನ್ನು ರೂಪಿಸಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ, ಮಾಡಿಕೊಂಡೆ ಬಂದಿದೆ. ಸರ್ಕಾರಗಳ ಸಹಯೋಗ, ಅನುಷ್ಠಾನ ಸಂಸ್ಥೆಗಳ ಸಂಯೋಜನೆ, ಸಮುದಾಯ ಭಾಗವಹಿಸುವಿಕೆಯ ಮೇಲೆ ಸುದೀರ್ಘ 56 ವರ್ಷಗಳಿಂದಲೂ ಅಭಿವೃದ್ಧಿ ಯೋಜನೆಗಳನ್ನು ಮತ್ತು ಗ್ರಾಮೀಣ ಅಭಿವೃದ್ಧಿಗೆ ಪ್ರತೀಕವಿರುವ ಯೋಜನೆಗಳನ್ನು ರೂಪಿಸಿಕೊಂಡು ಬರಲಾಗಿದೆ. ಆಯಾ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರದ ಅನುದಾನದ ಮೂಲಕ ಮೂಲಭೂತ ಸೌಲಭ್ಯಗಳನ್ನು ಆಹಾರ

ಭದ್ರತೆಯನ್ನು ಹಾಗೂ ಉದ್ಯೋಗಗಳನ್ನು ನೀಡುತ್ತಾ ಬಂದಿದೆ. ಅವುಗಳಲ್ಲಿ ಪ್ರಮುಖ ಅಭಿವೃದ್ಧಿ ಯೋಜನೆಗೆ ಯಶಸ್ಸು ಮತ್ತು ವೈಫಲ್ಯವನ್ನು ಮುಂದೆ ವಿವರಿಸಲಾಗಿದೆ.

ಮಹಾರಾಷ್ಟ್ರ ಉದ್ಯೋಗ ಖಾತರಿ ಯೋಜನೆ 1976

ಮಹಾರಾಷ್ಟ್ರ ಎಪ್ಪತ್ತರ ದಶಕದಲ್ಲಿ ಬರ, ಬಡತನ, ನಿರುದ್ಯೋಗ ಮತ್ತು ಆಹಾರದ ಭದ್ರತೆಯಿಂದ ತತ್ತರಿಸಿದ ರಾಜ್ಯ ಸರ್ಕಾರ ಪ್ರದೇಶಗಳಲ್ಲಿ ಸಮಸ್ಯೆ ಎದ್ದು ಕಾಣುತ್ತಿತ್ತು. ಈ ಸಮಸ್ಯೆಗಳನ್ನು ನಿವಾರಿಸಲು 1970ರಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತಂದಿತು. ಪ್ರಾರಂಭದಲ್ಲಿ ಇದು ಸಹ ಎಲ್ಲಾ ಯೋಜನೆಗಳಂತೆ ನಿರೀಕ್ಷಿತ ಫಲಿತಾಂಶ ನೀಡುವಲ್ಲಿ ಹಿಂದುಳಿಯಿತು. ಅನೇಕ ಸಂಘಟನೆಗಳ ಪ್ರೇರಣೆ ಮತ್ತು ಸಲಹೆಗಳ ಮೇಲೆ ಬಡತನ ನಿರ್ಮೂಲನೆಗೆ ಸರಿಯಾದ ದಾರಿ ಎಂದರೆ ಕೂಲಿಕಾರರಿಗೆ ಉದ್ಯೋಗ ನೀಡಿದರೆ ಆಹಾರದ ಭದ್ರತೆಯ ಸಮಸ್ಯೆಯನ್ನು ನಿಯಂತ್ರಿಸುವ ಉದ್ದೇಶದಿಂದ ಮತ್ತು ಉದ್ಯೋಗಗಳ ಮೂಲಕ ಸಾರ್ವಜನಿಕ ದೀರ್ಘಕಾಲಿನ ಆಸ್ತಿಗಳನ್ನು ನಿರ್ಮಾಣ ಮಾಡಿದರೆ ಆ ಮೂಲಕವಾಗಿ ಸ್ಥಳೀಯವಾಗಿ ತಮ್ಮ ಜಮೀನುಗಳಲ್ಲೇ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎನ್ನುವಂತ ಚಿಂತನೆಯಿಂದ 1976ರಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಭಾಗವಹಿಸುವ ಕೂಲಿಕಾರ್ಮಿಕರನ್ನು, ದೇಶದಲ್ಲಿ ಮೊದಲ ಬಾರಿಗೆ ಜಾರಿಗೊಳಿಸಲಾಯಿತು. ಇದರಿಂದ ದುಡಿಮೆ ಗಾರರಿಗೆ 'ಉದ್ಯೋಗ ಹಕ್ಕು' ನೀಡಿತು. ಜೀವನ ನಿರ್ವಹಣೆಗೆ ಉದ್ಯೋಗದ ಭರವಸೆ ವಿಶೇಷವಾದ ಮಹತ್ವದ ಮೈಲುಗಲ್ಲು ಪಡೆಯಿತು. ಇದರಿಂದ ಕನಿಷ್ಟ ಮಟ್ಟದ ವೈಫಲ್ಯಗಳನ್ನು ಹೊರೆತು ಪಡಿಸಿದರೆ ಗರಿಷ್ಟ ಮಟ್ಟದ ಯಶಸ್ಸು ಕಂಡಿತು. ಈ ಪ್ರಕ್ರಿಯೆಯೇ ಭಾರತದ ಮಟ್ಟಿಗೆ ರೂಪಿಸುವ ಯೋಜನೆಗಳಿಗೆ, ಪರ್ವಗಳಿಗೆ ಒಂದು ಮಾದರಿ ಯೋಜನೆಯಾಯಿತು. ರಾಷ್ಟ್ರದ ಬಡತನದ ನಿರ್ಮೂಲನೆ ಮಹಾರಾಷ್ಟ್ರದ ಉದ್ಯೋಗ ಖಾತರಿ ಕಾಯಿದೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ರಾಷ್ಟ್ರಕ್ಕೆ ನೀಡಲು ಕೆಲವು ಸೂಚನೆಗಳನ್ನು ನೀಡಿತು ಎಂದರೆ ತಪ್ಪಲ್ಲ. ಈ ಅನುಭವಗಳ ಹಿನ್ನೆಲೆಯಲ್ಲಿ 2006ರಲ್ಲಿ ಉದ್ಯೋಗ ಖಾತರಿ ಯೋಜನೆ ಅನುಷ್ಠಾನಗೊಳಿಸಲಾಯಿತು. ಪ್ರಾರಂಭಗೊಂಡು ಅನೇಕ ಅನುಭಗಳನ್ನು ನೋಡಿದ ಸರ್ಕಾರ ಹಲವು ಹಂತಗಳಲ್ಲಿ ನಿಯಮಗಳನ್ನು ಬದಲಿಸಿಕೊಂಡಿತು.

ಈ ಯೋಜನೆ 1975ರಿಂದ 2005ರವರೆಗೆ 33 ಜಿಲ್ಲೆಗಳಲ್ಲಿ 27,831 ಗ್ರಾಮ ಪಂಚಾಯಿತಿ, ಪ್ರತಿ ಗ್ರಾಮಪಂಚಾಯತಿಗೆ 19 ಲಕ್ಷರೂ ಖರ್ಚಾಗಿರುತ್ತದೆ. ಸಣ್ಣ ನೀರಾವರಿ, ನೆಡೆತೋಪು, ಭೂಮಿ ಉಳುಮೆ, ಭೂಮಿ ಇತ್ಯಾದಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಭಿವೃದ್ಧಿ 1974-75ರಲ್ಲಿ 78% ನೀರಾವರಿ 12 ಭೂ ರಕ್ಷಣೆ ಮತ್ತು ಭೂ ಅಭಿವೃದ್ಧಿ 93% ಖರ್ಚಾಗಿರುತ್ತದೆ. ಬಂಜರು ಭೂಮಿಯಲ್ಲಿ ಅಂತಹ ಯಶಸ್ಸು ಕಾಣಲಿಲ್ಲವೆಂಬುದು ಅನೇಕ ಅಧ್ಯಯನ ತಂಡಗಳಿಂದ ತಿಳಿದು ಬಂದಿರುವುದು.

ಇದು ಅನೇಕ ಗ್ರಾಮೀಣ ಅಭಿವೃದ್ದಿ ಯೋಜನೆಗಳಿಗೆ ಸಂಪರ್ಕ ಸೇತುವೆಯಾಯಿತು. ಇದರಲ್ಲೂ ಪ್ರಮುಖವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ, ಪ್ರತ್ಯೇಕ ಕೆಲಸಗಳನ್ನು ನೀಡಲಾಯಿತು.

ಕೂಲಿಗಾಗಿ ಕಾಳು ಯೋಜನೆ–1977

ಭಾರತ ಸರ್ಕಾರ 1977ರಲ್ಲಿ ಕೂಲಿಗಾಗಿ ಕಾಳು ಯೋಜನೆಯನ್ನು ಅನುಷ್ಠಾನ ಮಾಡಿತು. ಈ ಯೋಜನೆಯಲ್ಲಿ ಸಂವಿಧಾನಾತ್ಮಕವಾದಂತಹ ಅಡೆತಡೆಗಳು ಬಂದ ಕಾರಣ ಈ ಯೋಜನೆಯ ರಚನೆ ಮತ್ತು ಪುನರ್ ನಾಮಕರಣ ಮಾಡಲಾಯಿತು. ಅದರ ಹೆಸರು "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ" ಎಂದು ರಾಷ್ಟ್ರದಾದ್ಯಂತ ಕೃಷಿಕರಿಗೆ ಆರು ತಿಂಗಳು ಕೆಲಸವಿದ್ದು ಉಳಿದ ಆರು ತಿಂಗಳ ಬಿಡುವಿನ (ಬರಗಾಲದಲ್ಲಿ) ಅಥವಾ ಪೂರಕ ಸಮಯದಲ್ಲಿ ಉದ್ಯೋಗ ನೀಡುವ ಸಲುವಾಗಿ ಈ ಯೋಜನೆಯನ್ನು ಗ್ರಾಮೀಣಾಭಿವೃದ್ಧಿ ಯೋಜನೆಗಳಿಗೆ ಪೂರಕವಾಗಿ ಅನುಷ್ಠಾನ ಮಾಡಲಾಯಿತು.

ಈ ಯೋಜನೆ 1977ರಲ್ಲಿ ಜಾರಿಗೆ ಬಂದಿತು. ಗ್ರಾಮೀಣ ಜನರ ಪೌಷ್ಟಿಕ ಆಹಾರ ಹೆಚ್ಚಿಸುವುದು ಅವರ ಆದಾಯ ಹೆಚ್ಚಿಸುವುದು, ಶಾಶ್ವತ ಸಮುದಾಯ ಆಸ್ತಿ ನಿರ್ಮಾಣ ಮಾಡುವುದು, ದೇಶದಲ್ಲಿರುವ ಆಹಾರ ಧಾನ್ಯವನ್ನು ಬಳಸಿಕೊಂಡು ಜನರ ಹಸಿವನ್ನು ನೀಗಿಸುವುದೇ ಈ ಯೋಜನೆಯ ಪ್ರಮುಖ ಆಶಯವಾಗಿತು. ಹಳ್ಳಿಗರನ್ನು ಸಬಲಗೊಳಿಸಿ ಉಪಯುಕ್ತ ದುಡಿಮೆಯಲ್ಲಿ ತೊಡಗಿಸುವ ಉದ್ದೇಶದಿಂದ ಹಾಗು ನೆರೆಹಾವಳಿ ಪ್ರದೇಶದಲ್ಲಿ ಈ ಯೋಜನೆ ಚುರುಕುಗೊಳಿಸಲಾಯಿತು. ನೀರಾವರಿ ಅಣೆಕಟ್ಟುಗಳ ನಿರ್ಮಾಣ, ರಸ್ತೆ ಕಟ್ಟಡಗಳ ನಿರ್ಮಾಣ, ಬಾವಿ ಕೆರೆಗಳನ್ನು ನಿರ್ಮಿಸುವುದು ಅರಣ್ಯ ಅಭಿವೃದ್ಧಿ ಕಾಮಗಾರಿಗಳನ್ನು ಈ ಯೋಜನೆಯಲ್ಲಿ ಕೈಗೊಳ್ಳಲಾಯಿತು. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಹಸಿವು ನೀಗಿಸಲು ಆಹಾರ ಧಾನ್ಯಗಳನ್ನು ಉಚಿತವಾಗಿ ಕೊಟ್ಟರು ರಾಜ್ಯ ಸರ್ಕಾರಗಳು ದುಡಿಮೆಯ ಕೂಲಿಯನ್ನೇ ಕಾಳಿನ ರೂಪದಲ್ಲಿ ಕೊಡಲಾಗುತ್ತದೆ. ಇದರ ಸೌಕರ್ಯಗಳನ್ನು ಬಡವರಿಗೆ ತಲುಪಿಸಲು ತಾಲ್ಲೂಕು ಅಭಿವೃದ್ಧಿ ಮಂಡಳಿ ಹಾಗು ಪಂಚಾಯಿತಿ ಸಮಿತಿ ಮೂಲಕ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಯಿತು. 1977–1979ರಲ್ಲಿ 179.32 ಮಿಲಿಯನ್ ಕೂಲಿ ದಿನಗಳ ಉತ್ಪಾದನೆಗೆ ಕಾಲಿ ದಿನಗಳನ್ನು ಸೃಷ್ಟಿ ಮಾಡಲಾಯಿತು. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣ ರೈತರ ಅಭಿವೃದ್ಧಿ ಸಂಸ್ಥೆ ಮತ್ತು ಅತೀ ಸಣ್ಣ ಕೃಷಿ ಕಾರ್ಮಿಕರ ಯೋಜನೆಯಲ್ಲಿ ಗ್ರಾಮೀಣ ಪ್ರದೇಶದ ಕೂಲಿಯಲ್ಲಿ ಉದ್ಯೋಗ ಅವಕಾಶಗಳನ್ನು ಕಲ್ಪಿಸಿ ದುರ್ಬಲ ವರ್ಗದವರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲು ಯೋಜನೆಯನ್ನು ರೂಪಿಸಲಾಯಿತು. ಆದರೂ ಯೋಜನೆ ಗಮನ ಸೆಳೆಯುವಂತಹ ಸಾಧನೆಯಾಗಲಿಲ್ಲ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ(ಎನ್ ಆರ್ ಇ ಪಿ)

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ 1980 ಅಕ್ಟೋಬರ್‌ನಲ್ಲಿ ಈ ಯೋಜನೆ ಜಾರಿಗೆ ಬಂದಿತು. ಹಿಂದೆ ಅನುಷ್ಠಾನಗೊಳಿಸಿದ ಕೂಲಿಗಾಗಿ ಕಾಳು ಯೋಜನೆಗೆ ಪರ್ಯಾಯವಾಗಿ ಈ ಯೋಜನೆ ಹುಟ್ಟಿಕೊಂಡಿತು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ 50:50ರ ಅನುಪಾತದಲ್ಲಿ ಅನುದಾನವನ್ನು ಯೋಜನೆಗೆ ತೊಡಗಿಸಿತು. ಗ್ರಾಮೀಣ ಪ್ರದೇಶದ ನಿರುದ್ಯೋಗಿಗಳಿಗೆ ಮತ್ತು ಅರೆ ಉದ್ಯೋಗಿಗಳಿಗೆ ವಾರ್ಷಿಕವಾಗಿ 300ರಿಂದ 400 ದಶಲಕ್ಷ ಮಾನವ ದಿನಗಳ ಉದ್ಯೋಗ ಅವಕಾಶಗಳ ಸೃಷ್ಟಿಸುವ ಗುರಿ ಹೊಂದಿತು. ಇದರ ಸಲುವಾಗಿ ದೀರ್ಘಕಾಲಿನ ಆಸ್ತಿಗಳ ನಿರ್ಮಾಣಗಳನ್ನು ಅಂದರೆ ಕುಡಿಯುವ ನೀರಿನ ಬಾವಿಗಳು, ಸಮುದಾಯ ನೀರಾವರಿ ಬಾವಿಗಳು, ಕೆರೆಗಳು, ಸಣ್ಣ ನೀರಾವರಿ ಕೆಲಸಗಳು, ಗ್ರಾಮೀಣ ರಸ್ತೆ, ಶಾಲೆ ಮತ್ತು ಬಾಲಾವಾಡಿ ಕಟ್ಟಡ ನಿರ್ಮಾಣ ಸಾರ್ವಜನಿಕ ಆಸ್ತಿ ನಿರ್ಮಾಣ ಮಾಡಲಾಯಿತು.

ಅನುಷ್ಠಾನದ ಪ್ರಕ್ರಿಯೆಯನ್ನು ಅವಲೋಕಿಸಿದರೆ ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ 1873 ಕೋಟಿ ರೂ ಖರ್ಚು ಮಾಡಿ 1775.2 ದಶಲಕ್ಷ ಮಾನವ ದಿನಗಳ ಉದ್ಯೋಗವನ್ನು ಸೃಷ್ಟಿ ಮಾಡಿತು. 7ನೇ ಪಂಚವಾರ್ಷಿಕ ಯೋಜನೆಯಲ್ಲಿ 1477.5 ದಶಲಕ್ಷ ಮಾನವ ದಿನಗಳನ್ನು ಸೃಷ್ಟಿ ಮಾಡಿರುವುದು ತಿಳಿಯುತ್ತದೆ. ಆದರೂ ಅನುಷ್ಠಾದಲ್ಲಿನ ಲೋಪದೋಷಗಳು, ಉದ್ಯೋಗಗಳು ತಳಮಟ್ಟದ ಸೂಚಿತ ಗುಂಪುಗಳಿಗೆ ತಲುಪದೇ ಇರುವುದನ್ನು ಅಧ್ಯಯಗಳು ವ್ಯಕ್ತಪಡಿಸುತ್ತವೆ.

ಗ್ರಾಮೀಣ ಭೂ ರಹಿತ ಉದ್ಯೋಗ ಖಾತರಿ ಯೋಜನೆ 1983(ಆರ್ ಎಲ್ ಇ ಜಿ ಪಿ)

ಬಹು ಪಾಲು ಹಿಂದಿನ ಯೋಜನೆಗಳು ಬರ ನಿರ್ಮೂಲನೆಯ ಸಲುವಾಗಿ ನೀಡಿದ ಉದ್ಯೋಗಗಳು ಕೃಷಿ ಕೂಲಿ ಕಾರ್ಮಿಕರಿಗೆ ಅಭಿವೃದ್ಧಿಯ ಬಗ್ಗೆ ತೃಪ್ತಿತರಲಿಲ್ಲ. ಈ ಯೋಜನೆಗಳು ಉದ್ಯೋಗಗಳ ಪ್ರಮಾಣ ಕಡಿಮೆ ಮಾಡುವುದರಿಂದ ಆಹಾರದ ಭದ್ರತೆ ಒದಗಿಸುವಲ್ಲಿ ಹಿಂದುಳಿದವು. ಹೆಚ್ಚು ಉದ್ಯೋಗಗಳ ಸೃಷ್ಟಿಯ ಗುರಿಯಿಟ್ಟುಕೊಂಡು ಈ ಯೋಜನೆಯನ್ನು ಆಗಷ್ಟು 15, 1983ರಲ್ಲಿ ಜಾರಿಗೆ ತರಲಾಯಿತು. ಇದರಲ್ಲಿ ಬರಗಾಲದಲ್ಲಿ ಭೂ ರಹಿತ ಪ್ರತಿ ಕುಟುಂಬಕ್ಕೆ ಒಂದು ವರ್ಷದಲ್ಲಿ 100ದಿನಗಳಲ್ಲಿ ಉದ್ಯೋಗ ಒದಗಿಸುವುದು, ಆಹಾರ ಭದ್ರತೆ ಕೊಡುವುದು ಇದರ ಆಶಯವಾಗಿತ್ತು. 7ನೇ ಪಂಚವಾರ್ಷಿಕ ಯೋಜನೆ 2412 ಕೋಟಿ ವೆಚ್ಚ ಮಾಡಿದ್ದು 1154.4 ದಶಲಕ್ಷ ಮಾನವ ದಿನಗಳಲ್ಲಿ ಸೃಷ್ಟಿಸಿ ಆಹಾರದ ಭದ್ರತೆ ಅವಕಾಶ ಮಾಡಿರುತ್ತಾರೆ. ಆದರೆ ಎನ್ ಆರ್ ಇ ಪಿ ಮತ್ತು ಆರ್ ಜಿ ಇ ಜಿ ಪಿ ಎರಡು ಯೋಜನೆಗಳು ನೂರು ದಿನಗಳ ಉದ್ಯೋಗ ಒದಗಿಸುವಲ್ಲಿ ವಿಫಲವಾದ ಹಿನ್ನೆಲೆಯಲ್ಲಿ ಉದ್ಯೋಗ ಭರವಸೆ ಯೋಜನೆ ಕಾರ್ಯರೂಪಕ್ಕೆ ತರಲಾಗಿರುತ್ತದೆ.

ಯೋಜನೆಗಳ ಗುರಿ ಮತ್ತು ಉದ್ದೇಶ ಅಭಿವೃದ್ಧಿ ಹಿನ್ನೆಲೆಯಲ್ಲೇ ಮಾಡಿದರೂ ತನ್ನ ಗುರಿ ಸಾಧಿಸುವಲ್ಲಿ ಹಿಂದುಳಿದಿರುವುದು ತಿಳಿಯುತ್ತದೆ.

ಜವಾಹರ್ ರೋಜ್‌ಗಾರ್ ಯೋಜನೆ(ಜೆಆರ್‌ವೈ)

ಜೆ.ಆರ್.ವೈ. ಯೋಜನೆಯನ್ನು 1989 ಏಪ್ರಿಲ್ 28ರಂದು ಅನುಷ್ಠಾವಾಯಿತು. ಇದು ಗ್ರಾಮೀಣ ಅಭಿವೃದ್ಧಿಯ ಒಂದು "ಉದ್ಯೋಗ ಕಾರ್ಯಕ್ರಮ" ರಾಜೀವ್ ಗಾಂಧಿಯವರು ದೇಶದ್ಯಾಂತ ಅನುಷ್ಠಾನಗೊಳಿಸಿದರು. ಆಹಾರದ ಭದ್ರತೆಗಾಗಿ ಉದ್ಯೋಗಗಳನ್ನು ನಿರ್ಮಿಸಿ ಗ್ರಾಮೀಣ ನಿರುದ್ಯೋಗ ಹಾಗು ಅರೆ ಉದ್ಯೋಗ ಸಮಸ್ಯೆ ನಿವಾರಿಸುವುದು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ 50–100 ದಿನಗಳ ಉದ್ಯೋಗ ಒದಗಿಸುವ ಉದ್ದೇಶ ಹೊಂದಿದ್ದು, ಮಹಿಳೆಯರಿಗೆ ಶೇಕಡ 30ರಷ್ಟು ಉದ್ಯೋಗ ಅವಕಾಶಗಳು ಮೀಸಲಿಡುವುದು, ಈ ಯೋಜನೆಯ ವಿಶೇಷ ಆಧ್ಯತೆಯಾಗಿತ್ತು. ಗುಡ್ಡಗಾಡು ಅಲೆಮಾರಿ ಬುಡಕಟ್ಟಿನವರಿಗೆ ಮರುಭೂಮಿ ಮತ್ತು ದ್ವೀಪಗಳಲ್ಲಿ ವಾಸಿಸುವವರಿಗೆ ಹಾಗು ಹಿಂದುಳಿದ ವರ್ಗದವರಿಗೆ ವಿಸ್ತರಿಸಲಾಗುತ್ತಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 80:20ರ ಅನುಪಾತದಲ್ಲಿ ಅನುದಾನವನ್ನು ತೊಡಗಿಸಲಾಯಿತು. 6.4 ದಶಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿ ಮಾಡಲಾಯಿತು. ತಳಮಟ್ಟದ ಜನರಿಗೆ ಆಧ್ಯತೆ ಮತ್ತು ಮಹಿಳೆಯರಿಗೆ ವಿಶೇಷ ಆಧ್ಯತೆಗಳು ಗುರಿಯಿಟ್ಟುಕೊಂಡರೂ ತಳಮಟ್ಟದ ಸೂಚಿತ ಗುಂಪುಗಳವರೆಗೆ ಈ ಯೋಜನೆಯ ಸೌಲಭ್ಯಗಳು ತಲುಪಲಿಲ್ಲ ಎನ್ನುವಂತಹ ಅಂಶಗಳು ಅಧ್ಯಯನಗಳು ತಿಳಿಸುತ್ತವೆ.

ಉದ್ಯೋಗ ಭರವಸೆ ಯೋಜನೆ (ಇ.ಎ.ಎಸ್)1993

ಎನ್ ಆರ್ ಇ ಪಿ ಮತ್ತು ಆರ್ ಜಿ ಇ ಜಿ ಪಿ ಎರಡು ಯೋಜನೆಗಳು ನೂರು ದಿನಗಳ ಉದ್ಯೋಗ ಒದಗಿಸುವಲ್ಲಿ ವಿಫಲವಾದ ಹಿನ್ನೆಲೆಯಲ್ಲಿ ಉದ್ಯೋಗ ಭರವಸೆ ಯೋಜನೆ (ಇ.ಎ.ಎಸ್) 1993 ಅಕ್ಟೋಬರ್ ತಿಂಗಳಲ್ಲಿ ಬಹು ಆಯಾಮದ ಉದ್ದೇಶಗಳನ್ನಿಟ್ಟುಕೊಂಡು ಜಾರಿಗೆ ತರಲಾಗಿದೆ. ಬರಗಾಲ ಪ್ರದೇಶ, ಮರುಭೂಮಿ ಪ್ರದೇಶ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಒಟ್ಟು 1772 ಕ್ಷೇತ್ರಗಳಲ್ಲಿ ಜಾರಿಗೊಳಿಸಲಾಯಿತು. ಇದು ವೇತನ ಉದ್ಯೋಗ ಕಾರ್ಯಕ್ರಮವಾಗಿದ್ದು, ಇದನ್ನು ವೇತನ ಉದ್ಯೋಗವಾಗಿ ಸರಿಪಡಿಸಲಾಯಿತು. 5448 ಬ್ಲಾಕ್‌ಗಳಲ್ಲಿ ಈ ಯೋಜನೆಯನ್ನು ಅನುಷ್ಠಾನ ಮಾಡಲಾಯಿತು. ಈ ಯೋಜನೆಯ ಉದ್ದೇಶವೆಂದರೆ 1) ವೇತನ ಉದ್ಯೋಗಿಗಳು ತೀವ್ರ ಕೊರತೆಯಿಂದ ಕೂಡಿದ ಸಂದರ್ಭದಲ್ಲಿ ಬಡತನ ರೇಖೆಗಿಂತ ಕೆಳಗೆ ಜೀವಿಸುವ ಗ್ರಾಮೀಣ ಬಡವರಿಗೆ ದೈಹಿಕ ಶ್ರಮದ ಮೂಲಕ ಹೆಚ್ಚುವರಿ ಉದ್ಯೋಗಗಳನ್ನು ನೀಡುವುದು. ಎರಡನೇ ಉದ್ದೇಶ ಭವಿಷ್ಯ ಉದ್ಯೋಗ ಮತ್ತು ಅಭಿವೃದ್ಧಿಯನ್ನು ಸಂರಕ್ಷಿಸುವಂತಹ ಸಮುದಾಯಿಕ ಆಸ್ತಿಗಳನ್ನು ನಿರ್ಮಾಣ

ಮಾಡುವುದು, ಅನುಷ್ಠಾನ ಜಿಲ್ಲಾ ಪಂಚಾಯಿತಿಯದು 1998-99ರಲ್ಲಿ ರೂ 1990 ಕೋಟಿ, 1999-2000 ರೂ 2400 ಕೋಟಿ ಹಣ ಒದಗಿಸಲಾಯಿತು. ಈ ಯೋಜನೆಯಲ್ಲಿ 1998-99 ರಲ್ಲಿ 4165ಲಕ್ಷ ಹಾಗು 1999-2000 ಸೆಪ್ಟೆಂಬರ್‌ವರೆಗೆ ಒಟ್ಟು 853 ದಶಲಕ್ಷ ಮಾನವ ದಿನಗಳ ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲಾಯಿತು. ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಆಹಾರ ಭದ್ರತೆಗೆ ಅನುಕೂಲವಾದ ವಾತವರಣವನ್ನು ಕಲೆಹಾಕಿತು.

ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (ಎಸ್ ಜಿ ಆರ್ ವೈ)

ಪ್ರಜಾಪ್ರಭುತ್ವ ಮತ್ತು ಅಧಿಕಾರದ ವಿಕೇಂದ್ರೀಕರಣ ಹೊಸ ಹೆಜ್ಜೆಗಳು ಅಭಿವೃದ್ಧಿಯ ಕಡೆ ಚಲಿಸುತ್ತವೆ ಎಂದು ಎಲ್ಲರ ಅರಿವಿಗೆ ಬಂದಿತು. ಆ ಹಿನ್ನೆಯಲ್ಲಿ ಏಪ್ರಿಲ್ 2002ರಲ್ಲಿ ಎಸ್ ಜಿ ಎಸ್ ಮತ್ತು ಇಎಎಸ್ ಸಂಯುಕ್ತಗೊಂಡ ಒಂದು ಹೊಸ ಯೋಜನೆಯೇ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ(ಎಸ್ ಜಿ ಆರ್ ವೈ) ಈ ಯೋಜನೆಗೆ ಅನುದಾನವನ್ನು ಸೂಕ್ತವಾದ ರೀತಿಯಲ್ಲಿ ವಿನಿಯೋಗ ಮಾಡಲು ವಿಕೇಂದ್ರೀಕರಣದ ಪಂಚಾಯತ್ ರಾಜ್ ಸಂಸ್ಥೆ ಮತ್ತು ಪ್ರಜಾಪ್ರಭುತ್ವಗಳಂತಹ ಆಡಳಿತ ಯಂತ್ರಗಳನ್ನು ಒದಗಿಸಲಾಯಿತು. ಈ ಯೋಜನೆ ಜನರಿಗೆ ಅರಿನ ಕೊರತೆಯನ್ನು ನೀಗಿಸುವ ಉದ್ದೇಶವಿಟ್ಟುಕೊಂಡು ಯೋಜನೆಯ ಮಾಹಿತಿ ಜನರಿಗೆ ತಲುಪುವಲ್ಲಿ ಪ್ರಯತ್ನ ಮಾಡಿದ್ದರಿಂದ ಯೋಜನೆಯ ಕಾಲಾವಧಿಯಲ್ಲೆ ಯೋಜನಾ ಅನುದಾನದ ಪೂರ್ಣವಾಗಿ ಬಳಕೆಯಾಗಿರುವುದು ತಿಳಿಯುತ್ತದೆ.

ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆ(2004)

ರಾಷ್ಟ್ರೀಯ ಕೂಲಿಗಾಗಿ ಕಾಳು ಯೋಜನೆಯನ್ನು 2004ರಲ್ಲಿ ಪ್ರಾರಂಭಿಸಲಾಯಿತು. ಯೋಜನೆಯಡಿ ರಾಷ್ಟ್ರದಲ್ಲಿ ಅತ್ಯಂತ ಹಿಂದುಳಿದ 150 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಬಡತನ ನಿರ್ಮೂಲನೆ ಮತ್ತು ಆಹಾರದ ಭದ್ರತೆಯೇ ಈ ಯೋಜನೆಯ ಗುರಿಯಾಗಿತ್ತು. ಹೆಚ್ಚು ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ಗುರಿ ಮತ್ತು ಗ್ರಾಮೀಣ ಸಮುದಾಯದ ಆಸ್ತಿಗಳು ಬಹು ಮುಖ್ಯವಾಗಿ ಎರಡು ಪ್ರಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. 1. ಸ್ವಯಂ ಉದ್ಯೋಗ ಯೋಜನೆಗಳು 2. ಕೂಲಿ ಉದ್ಯೋಗ ಯೋಜನೆಗಳು, ಮುಂದೆ ಇದು ಏಕ ರೂಪವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಾಗಿ ಮಾರ್ಪಾಡಾಯಿತು. ಆದರೆ ಈ ಯೋಜನೆಯ ಪರಿಪೂರ್ಣತೆ ಹೊಂದಿರುವುದಿಲ್ಲ, ಆ ಕಾಲಘಟ್ಟಕ್ಕೆ ರಾಷ್ಟ್ರದಲ್ಲಿ ಬಹುತೇಕ ರಾಜ್ಯಗಳು ವೈಫಲ್ಯದ ಹಾದಿ ಹಿಡಿದಿದ್ದವು. ಈ ಯೋಜನೆಯೂ ಸಹ ತಾನು ಹಾಕಿಕೊಂಡ ಗುರಿ ತಲುಪುವಲ್ಲಿ ಹಿಂದುಳಿಯಿತು.

3.11 ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎನ್ ಆರ್ ಇ ಜಿ ಎ)

ರಾಷ್ಟ್ರದಲ್ಲಿ ಬಡತನದ ನಿರ್ಮೂಲನೆಗಾಗಿ ಅಭಿವೃದ್ಧಿ ಯೋಜನೆಗಳ ಪರ್ವವೇ ಬಂದು ಹೋಯಿತು. ಆಗಾದರೆ ಈ ರಾಷ್ಟ್ರ ಮುಂದಿನ ದಾರಿ ಏನು? ಎಂಬುದನ್ನು ಬರ ಮತ್ತು ಬಡತನದ ಬಗ್ಗೆ ನಡೆದ ಅನೇಕ ಚರ್ಚೆಗಳು ಮತ್ತು ಹಿಂದಿನ ಯೋಜನೆಗಳ ಅನುಭವಗಳು ಇನ್ನೊಂದು ಯೋಜನೆ ತರುವಲ್ಲಿ ದಾರಿಯಾಯಿತು. ಮಹಾರಾಷ್ಟ್ರದಲ್ಲಿ ಅನುಷ್ಠಾನ ಮಾಡಿದ ಉದ್ಯೋಗ ಖಾತರಿ ಕಾಯಿದೆಯ ಅನುಭವಗಳನ್ನಿಟ್ಟುಕೊಂಡು ಕೇಂದ್ರ ಸರ್ಕಾರ ಭಾರತದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಜಾರಿಗೆ ತಂದು, ದೈಹಿಕ ಶ್ರಮದ ಉದ್ಯೋಗದ ಸೃಷ್ಟಿಗೆ ದಾರಿಯಾಯಿತು. ಯೋಜನೆಗಳು ಮೊದಲು 6 ಮತ್ತು 7ನೇ ಪಂಚವಾರ್ಷಿಕ ಯೋಜನೆಯ ಮೂಲಕ ಪ್ರಾರಂಭವಾಯಿತು. ಹೀಗೆ ಯೋಜನೆಗಳು ವಿಫಲವಾದ ಹಿನ್ನೆಲೆಯಲ್ಲಿ ಭಾರತ ಸರ್ಕಾರ ಸಂವಿಧಾನದ 40 ಕಾಲಂನಲ್ಲಿ 73 ಮತ್ತು 74 ನೇ ತಿದ್ದುಪಡಿ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳಿಗಳನ್ನು ಜಾರಿಗೆ ತರಲಾಯಿತು. ತಳಮಟ್ಟದ ಸ್ಥಳೀಯ ಸರ್ಕಾರಗಳಿಗೆ ಅಭಿವೃದ್ಧಿಗೆ ಪೂರಕವಾಗಿ ಆಡಳಿತ ನೀಡಲು ಸಂವಿಧಾನಾತ್ಮಕ ಹಕ್ಕು ಮತ್ತು ಅಧಿಕಾರ ನೀಡಿತು. ಈ ಮೂಲಕ 3 ಹಂತದ ಆಡಳಿತ ವ್ಯವಸ್ಥೆಯನ್ನು ಕಲ್ಪಿಸಿತು. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮಪಂಚಾಯತಿಗಳು ಈ ಮೂಲಕವೇ ಗ್ರಾಮೀಣ ಅಭಿವೃದ್ಧಿ ಯೋಜನೆಗಳಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಎನ್ನುವಂತಹ ಯೋಜನೆಯನ್ನು ಪರಿಚಯಿಸಿ ಆಚರಣೆಗೆ ತರಲಾಗಿದೆ. ಇದರಲ್ಲಿ "ಉದ್ಯೋಗ–ಹಕ್ಕು" ಎನ್ನುವ ಪರಿಕಲ್ಪನೆಯನ್ನು ಕಾಯಿದೆಯಾಗಿ ಮಾರ್ಪಾಡಾಗಿದೆ.

ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದು 67 ವರ್ಷ ಕಳೆದರು ಬಹು ಬಗೆಯ ಯೋಜನೆಗಳನ್ನು ರೂಪಿಸಿದರೂ, ಇಂದಿಗೂ ಭಾರತದಲ್ಲಿ ಮಿಲಿಯನ್‌ಗಿಂತಲೂ ಹೆಚ್ಚು ಜನ ಹಸಿವು ಮತ್ತು ಸುಮಾರು 36 ಕೋಟಿ ಜನರು ಅರೆ ಹೊಟ್ಟೆಯಲ್ಲಿರುವವರನ್ನು ಕಾಣಬಹುದು(ಸ್ವಾಮಿನಾಥನ್–2012). ಇಂತಹ ಸಾಮಾಜಿಕ ಮತ್ತು ಆರ್ಥಿಕ ವಿಷಮ ಪರಿಸ್ಥಿಯನ್ನು ಸರಿಪಡಿಸಲು ಸ್ಥಳೀಯ ಆಡಳಿತದಿಂದಲೇ ಸಾಧ್ಯ ಎನ್ನುವುದು ಎಲ್ಲರ ಅರಿವಿಗೆ ಬರುತ್ತದೆ. ಈ ಮೂಲಕ ಅಭಿವೃದ್ಧಿಯನ್ನು ಸಾಧಿಸಬಹುದು ಎಂಬ ನಂಬಿಕೆ ಹುಟ್ಟಿದೆ, ಒಂದು ಪರಂಪರೆಯೇ ಪಂಚಾಯತ್‌ರಾಜ್‌ನಂತಹ ತಂಡದ ರೂಪದಲ್ಲಿ ಪ್ರಯತ್ನಸಿದರೂ ನಿರೀಕ್ಷಿಸಿದ ಫಲ ತಳಮಟ್ಟದವರಿಗೆ ಲಭಿಸಬಹುದು. ಬರ, ಬಡತನ, ಅಪೌಷ್ಟಿಕತೆ ಮತ್ತು ಆಹಾರದ ಭದ್ರತೆಯ ಸಮಸ್ಯೆಯಿಂದ ಹೊರಬರಲು ಸಾಧ್ಯವಾಗಬಹುದೆಂದು, ಇದರಿಂದ ಅಭಿವೃದ್ಧಿಯ ಚಲನೆಯ ವೇಗ ಹೆಚ್ಚಬಹುದೆಂದು ರಾಷ್ಟ್ರದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಅರೆ ಕುಶಲ ಕೂಲಿಕಾರರಿಗೆ ಉದ್ಯೋಗಗಳನ್ನು ಒದಗಿಸಬೇಕು ಮತ್ತು ಉದ್ಯೋಗದ ಭರವಸೆ

ನೀಡಬೇಕು ಎಂಬುದು ತಜ್ಞರ ಚಿಂತನೆಯಾಗಿತ್ತು. ಈ ಸಂದರ್ಭದಲ್ಲಿ ಹಲವು ಚಿಂತಕರ, ಸಮಾಜ ಸೇವಕರ, ಹೋರಾಟಗಾರರ, ಸರ್ಕಾರೇತರ ಸೇವಕರ್ತರ ಪ್ರಯತ್ನದಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ 2004 ರಲ್ಲಿ ದೇಶಾದ್ಯಂತ ವಿಸ್ತರಿಸುವ ಚಿಂತನೆ ನಡೆಯಿತು. ವ್ಯಾಪಕವಾದ ಚರ್ಚೆ ನಡೆದು ಪಾರ್ಲಿಮೆಂಟ್‌ನಲ್ಲಿ ಸರ್ವಾನುಮತದಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಬಿಲ್ ಪಾಸುಮಾಡಲಾಯಿತು. 2005ರಲ್ಲಿ "ಉದ್ಯೋಗದ ಹಕ್ಕು" ನೀಡುವ ಸಲುವಾಗಿ ರಾಷ್ಟ್ರಪತಿಗಳಿಂದ ಅಂಗೀಕಾರಗೊಂಡು ಮೊದಲ ಬಾರಿಗೆ ಕಾಯಿದೆಯಾಗಿ ಜಾರಿಗೆ ತರಲಾಯಿತು. ಎಂ.ಜಿ.ಎನ್.ಆರ್.ಇ.ಜಿ.ಎ ಕಾಯಿದೆಯನ್ನು ಅನುಷ್ಠಾನ ಮಾಡಲು ಮೂರು ಹಂತದಲ್ಲಿ ದೇಶಾದ್ಯಂತ ವಿಸ್ತರಿಸಲಾಯಿತು. ಈ ಕಾಯಿದೆಯನ್ನು ಅನುಷ್ಠಾನ ಮಾಡಲು ಅಧಿಕಾರ ವಿಕೇಂದ್ರೀಕರಣದ ಭಾಗವಾದ ಪಂಚಾಯತ್ ರಾಜ್ ಸಂಸ್ಥೆಯ ಮೂಲಕ ಪ್ರಾರಂಭಿಸಿತು. ಜಾಗತೀಕ ಮಾನವ ಇತಿಹಾಸದಲ್ಲೇ ಒಂದು ಮೈಲುಗಲ್ಲು ಎಂದು ಅನೇಕ ತಜ್ಞರು ಅಭಿಪ್ರಾಯ ಪಡುತ್ತಾರೆ.

"ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯ ಅಧಿನಿಯಮ" 2005ಅನ್ನು ದಿನಾಂಕ 07–09–2005 ರಂದು ಭಾರತದ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. 2006ರಿಂದ ರಾಷ್ಟ್ರಾದ್ಯಂತ ಅನುಷ್ಠಾನವಾಯಿತು. ಇದು 60 ವರ್ಷಗಳ ಇತಿಹಾಸದಲ್ಲೇ ಒಂದು ಗುರುತರವಾದ ಒಂದು ಸಾಧನೆಯ ಮೈಲುಗಲ್ಲು ಮತ್ತು ಮಾನವತಾ ಇತಿಹಾಸವೆಂದು ಬಣ್ಣಿಸಿದ್ದಾರೆ (ಮಹಿರ್ ಷಾ 2007).

3.12. ಎಂ.ಜಿ.ಎನ್.ಆರ್.ಇ.ಜಿ.ಎ. ಯ ವ್ಯಾಪ್ತಿ

ಬಡತನ ನಿರ್ಮೂಲನೆ, ಆಹಾರ ಭದ್ರತೆ ನೀಡುವುದರ ಹಿನ್ನೆಲೆಯಲ್ಲಿ ಉದ್ಯೋಗದ ಹಕ್ಕು ಜನರಿಗೆ ನೀಡುವ ಸಲುವಾಗಿ ದೊಡ್ಡ ಪ್ರಯತ್ನ ನಡೆದಿರುವುದು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಆಶಯ ಜನರ ಜೀವನ ಮಟ್ಟ ಸುಧಾರಣೆಗಾಗಿ, ಅಂದರೆ ಒಂದು ಆರ್ಥಿಕ ವರ್ಷದಲ್ಲಿ ದುಡಿಯುವ ಇಚ್ಚೆಯುಳ್ಳ ಕುಟುಂಬಗಳಿಗೆ 100 ದಿನಗಳ ಉದ್ಯೋಗ ನೀಡುವುದು, ದೀರ್ಘಕಾಲಿನ ಆಸ್ತಿಗಳ ನಿರ್ಮಾಣ ಮತ್ತು ಜೀವನಕ್ಕಾಗಿ ಹೊರ ಹೋಗುವ ವಲಸೆಯ ಪ್ರಮಾಣವನ್ನು ತಗ್ಗಿಸುವುದು. ಭಾರತ ಸರ್ಕಾರ ಕೇಂದ್ರ ಕಾಯಿದೆ ನಂ 42, 2005 ರ ಪ್ರಕಾರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅಧಿನಿಯಮವಾಗಿ ಅಧಿಕೃತಗೊಳಿಸಲಾಯಿತು. ಮೊದಲ ಹಂತದಲ್ಲಿ ಫೆಬ್ರವರಿ 2006ರಲ್ಲಿ ಆರ್ಥಿಕವಾಗಿ ಅತ್ಯಂತ ಹಿಂದುಳಿದ 200 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು, ಎರಡನೇ ಹಂತದ 2007–08ರಲ್ಲಿ 130 ಜಿಲ್ಲೆಗಳಲ್ಲಿ ಅನುಷ್ಠಾನ ಮಾಡಲಾಯಿತು. ಮೂರನೇ ಹಂತದಲ್ಲಿ ಏಪ್ರಿಲ್ 8ರಲ್ಲಿ ಉಳಿದ 285 ಜಿಲ್ಲೆಗಳನ್ನು ಅನುಷ್ಠಾನ

ಮಾಡಲಾಯಿತು. ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಫೆಬ್ರವರಿ 2, 2006ರಲ್ಲಿ ಮೊಟ್ಟ ಮೊದಲು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಉದ್ಘಾಟನೆ ಮಾಡಲಾಯಿತು. ಮುಂದೆ ಈ ಯೋಜನೆ 2009ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಾಗಿ ಮಾರ್ಪಾಡಾಯಿತು.

ಕರ್ನಾಟಕದಲ್ಲಿ ಈ ಯೋಜನೆ ಫೆಬ್ರವರಿ 2006ರಿಂದ ಜಾರಿಗೆ ಬಂದಿತು. ಮೊದಲ ಹಂತದಲ್ಲಿ ಡಾ..ಡಿ.ಎಂ.ನಂಜುಂಡಪ್ಪ ವರದಿಯ ಸೂಚ್ಯಂಕಗಳ ಆಧಾರದ ಮೇಲೆ 2006–07 ರಲ್ಲಿ ಅತ್ಯಂತ ಹಿಂದುಳಿದ 5 ಜಿಲ್ಲೆಗಳಲ್ಲಿ ಅಂದರೆ ಬೀದರ್, ಗುಲ್ಬರ್ಗ, ರಾಯಚೂರು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಯೋಜನೆಯನ್ನು ಅನುಷ್ಠಾನ ಮಾಡಲಾಯಿತು. 2ನೇ ಹಂತದಲ್ಲಿ 2007–08ರಲ್ಲಿ ಹಾಸನ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಬೆಳಗಾವಿ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಒಟ್ಟು 6 ಜಿಲ್ಲೆಗಳಲ್ಲಿ ವಿಸ್ತರಿಸಿತು. ನಂತರ ಮೂರನೇ ಹಂತದಲ್ಲಿ 1ನೇ ಏಪ್ರಿಲ್ 2008ರಿಂದ ರಾಜ್ಯದ ಉಳಿದ 18 ಜಿಲ್ಲೆಗಳಲ್ಲೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. 2ನೇ ಅಕ್ಟೋಬರ್ 2009ರ ಗಾಂಧಿ ಜಯಂತಿಯಂದು 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ–2005'ರಲ್ಲಿ ಶೀರ್ಷಿಕೆಯ ಹಿಂಬದಿಗೆ 'ಮಹಾತ್ಮ ಗಾಂಧಿ' ಪದ ಜೋಡಣೆ ಮಾಡಿ "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ" ಎಂದು ಮರುನಾಮಕರಣ ಮಾಡಲಾಯಿತು. ಈ ಯೋಜನೆಯನ್ನು ಕರ್ನಾಟಕದಲ್ಲಿ "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ–ಕರ್ನಾಟಕ" ಎಂಬ ಹೆಸರಿನಲ್ಲಿ ಯೋಜನೆಯ ನಿಯಮಗಳನ್ನು ದಿನಾಂಕ 08–02–2007ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದೆ. ಈಗ ಇದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ–ಕರ್ನಾಟಕ ಎಂಬ ಹೆಸರಿನಲ್ಲಿ ಜಾರಿಗೆ ಬಂದಿದೆ.(ಅ.ನ.ಸಾ.ರಾ.ಗ್ರಾ, ಮೈಸೂರು)

3.13. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಅನುಷ್ಠಾನದ ಪ್ರಕ್ರಿಯೆ

ಭಾರತದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಒಮ್ಮೆಲೆ ಇದು ರಾಷ್ಟ್ರದಾದ್ಯಂತ ಅನುಷ್ಠಾನ ಮಾಡಲಿಲ್ಲ. ಅದು ಅನೇಕ ಕಾಲಘಟ್ಟಗಳಲ್ಲಿ ಹಂತ ಹಂತವಾಗಿ ಈ ಯೋಜನೆ ಅನುಷ್ಠಾನವಾಯಿತು.

ಕೋಷ್ಟಕ : 3.1.

ಅನುಷ್ಠಾನ ಪ್ರಕ್ರಿಯೆಯ ಕಾಲಮಾನ

ಅಗಸ್ಟ್ 2005	ಫೆಬ್ರವರಿ 2006	ಏಪ್ರಿಲ್ 2007	ಏಪ್ರಿಲ್ 2008	ಅಕ್ಟೋಬರ್ 2008	16 ಫೆಬ್ರವರಿ 2009	ಅಕ್ಟೋಬರ್ 2009
ರಾ.ಗ್ರಾ.ಉ.ಖಾ. ಕಾ.ಶಾಸನಾತ್ಮಕ ಕಾನೂನು	ಅತ್ಯಂತ ಹಿಂದುಳಿದ 200 ಜಿಲ್ಲೆಗಳ ಆಯ್ಕೆ	2ನೇ ಹಂತದಲ್ಲಿ 130 ಜಿಲ್ಲೆಗಳ ಆಯ್ಕೆ	ಉಳಿದ 285 ಜಿಲ್ಲೆಗಳಲ್ಲಿ ದೇಶವ್ಯಾಪಿ ವಿಸ್ತರಣೆ	ಕೂಲಿ ಹಣವನ್ನು ಅಂಚೆ ಮತ್ತು ಬ್ಯಾಂಕ್ ಮೂಲಕವಾಗಿ ವಿತರಣೆ	ಕೂಲಿಕಾರರಿಗೆ ಕೂಲಿ ನೀಡಲು ಅಂಚೆ ಇಲಾಖೆಯೊಂದಿಗೆ ಒಪ್ಪಂದ ಮಾಡಿ ಕೊಳ್ಳಲಾಯಿತು	ಮ.ಗಾ.ರಾ. ಗ್ರಾ.ಉ.ಖಾ ಎಂದು ಹೆಸರು ಬದಲಾವಣೆ

ಮೂಲ: www.nrega.nic.in

ಕೋಷ್ಟಕ 12ರಲ್ಲಿ ತೋರಿಸಿರುವಂತೆ 2004ರಲ್ಲಿ ರಾ.ಗ್ರಾ.ಉ.ಖಾ.ಯೋಜನೆ ಬಡತನ ನಿರ್ಮೂಲನೆ ಸಲುವಾಗಿ ರಾಷ್ಟ್ರ ಮಟ್ಟದಲ್ಲಿ ಅನೇಕ ಚರ್ಚೆಗಳು ನಡೆದು ಹಲವು ಹೋರಾಟಗಳ ಪ್ರಯತ್ನದಿಂದ ಲೋಕಸಭೆಯಲ್ಲಿ ಎಂಪ್ಲಾಯ್‌ಮೆಂಟ್ ಮಸೂದೆಯನ್ನು ಪಾಸು ಮಾಡಲಾಯಿತು. ನಂತರ ಆಗಸ್ಟ್ 2005ರಲ್ಲಿ ಶಾಸನಾತ್ಮಕ ಕಾಯಿದೆಯಾಗಿ ಹೊರಬಂದಿತು.

ಕೋಷ್ಟಕ: 3.2

ರಾ.ಗ್ರಾ.ಉ.ಖಾ.ಯೋಜನೆಯ ಅನುಷ್ಠಾನದ ಹಂತಗಳು

ಒಟ್ಟು		**1ನೇ ಹಂತ 2006–07**	**2ನೇ ಹಂತ 2007–08**	**3ನೇ ಹಂತದಲ್ಲಿ 2008–09**
ಒಟ್ಟು ರಾಜ್ಯಗಳು	28	28	28	28
ಒಟ್ಟು ಜಿಲ್ಲೆ	605	200	130	285

ಈ ಮೇಲ್ಕಂಡ ಕೋಷ್ಟಕದಲ್ಲಿ ವ್ಯಕ್ತವಾದಂತೆ ಫೆಬ್ರವರಿ 2006ರ ಮೊದಲ ಹಂತದಲ್ಲಿ ರಾಷ್ಟ್ರದ ಅತ್ಯಂತ ಹಿಂದುಳಿದ ಒಟ್ಟು 200 ಜಿಲ್ಲೆಗಳನ್ನು ಆಯ್ಕೆ ಮಾಡಲಾಯಿತು ಮತ್ತು 2007 ಏಪ್ರಿಲ್ ಎರಡನೆ ಹಂತದಲ್ಲಿ ಒಟ್ಟು 130 ಜಿಲ್ಲೆಗಳನ್ನು ಆಯ್ಕೆ ಮಾಡಲಾಯಿತು. ಉಳಿದ 285 ಜಿಲ್ಲೆಗಳನ್ನು ಮೂರನೆ ಹಂತದಲ್ಲಿ ವಿಸ್ತರಿಸುವುದರೊಂದಿಗೆ ಈ ಯೋಜನೆಯನ್ನು ರಾಷ್ಟ್ರಾದ್ಯಂತ ವಿಸ್ತರಿಸಲಾಯಿತು. ಅದೇ ವರ್ಷದಲ್ಲಿ ಬ್ಯಾಂಕ್ ಮತ್ತು ಅಂಚೆ ಮೂಲಕ ಕೂಲಿ ಹಣ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

3.14 ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಪರಿಕಲ್ಪನೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಅನುಷ್ಠಾನ ಮಾಡುವ ಸಂದರ್ಭದಲ್ಲಿ ಸಂವಿಧಾನದ 41ನೇ ಪರಿಚ್ಛೇದ ಅನುಸರಿಸಿ ಕೂಲಿ ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು ನಾಗರೀಕರಿಗೆ "ಕಾರ್ಮಿಕರಿಗೆ ಉದ್ಯೋಗದ ಹಕ್ಕು" ಈ ಕೆಳಕಂಡ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಕಾಯಿದೆಯನ್ನಾಗಿ ಮಾಡಲಾಗಿರುವುದು.

3.15 ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಗುರಿಗಳು

- ಭಾರತದಲ್ಲಿ ಅನೇಕ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡಲಾಯಿತು. ಆ ಯೋಜನೆಗಳು ಯಾವುವು? ಕೂಲಿಕಾರರ ಕುಟುಂಬಗಳಿಗೆ 100 ದಿನಗಳ ಉದ್ಯೋಗ ಭರವಸೆಯನ್ನು ಕೊಡಲಿಲ್ಲ ಮತ್ತು ಉದ್ಯೋಗಗಳನ್ನು ನೀಡಲಿಲ್ಲ. ಆದರೆ ಈ ಕಾಯಿದೆ ಅಡಿ ಉದ್ಯೋಗದ ಹಕ್ಕು ನೀಡುವುದರೊಂದಿಗೆ 100 ದಿನಗಳ ಉದ್ಯೋಗದ ಭರವಸೆ ನೀಡುವುದು ಮತ್ತು 100 ದಿನಗಳ ಉದ್ಯೋಗ ನೀಡುವುದು ಈ ಕಾಯಿದೆ ಅಡಿ ಕಲ್ಪಿಸಲಾಗಿದೆ.
- ಗ್ರಾಮೀಣ ಪ್ರದೇಶದಲ್ಲಿರುವ ಉದ್ಯೋಗ ಇಚ್ಛಿಸುವ ಬಡತನ ರೇಖೆಯ ಕೆಳಗಿರುವ ಮತ್ತು ಬಡತನ ರೇಖೆಯ ಮೇಲಿರುವ ಪ್ರತಿ ಕುಟುಂಬಗಳಿಗೂ ತಾರತಮ್ಯವಿಲ್ಲದೆ ಉದ್ಯೋಗ ಅವಕಾಶಗಳನ್ನು ಒದಗಿಸುವುದರ ಮೂಲಕ ಅವರ ಆರ್ಥಿಕ ಪರಿಸ್ಥಿಯನ್ನು ಸುಧಾರಿಸುವುದು. ಗ್ರಾಮೀಣ ಭಾರತದಲ್ಲಿ ವಾಸವಾಗಿರುವ ದುರ್ಬಲ ಜನರಿಗೆ ಸಾಮಾಜಿಕ ರಕ್ಷಣೆ ಒದಗಿಸುವುದು.
- ಅಭಿವೃದ್ಧಿ ದೃಷ್ಟಿಕೋನವಿಟ್ಟುಕೊಂಡು ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಹಿನ್ನೆಲೆಯಲ್ಲಿ ಸಾರ್ವಜನಿಕ ಬಂಡವಾಳ ಹೂಡುವುದರೊಂದಿಗೆ ಸಾರ್ವಜನಿಕ ದೀರ್ಘಕಾಲಿನ ಆಸ್ತಿಗಳನ್ನು ನಿರ್ಮಾಣ ಮಾಡುವುದು.
- ಗ್ರಾಮೀಣ ಪ್ರದೇಶದ ರೈತರಿಗೆ ಮತ್ತು ಕೃಷಿ ಕೂಲಿ ಕಾರ್ಮಿಕರಿಗೆ ಮಳೆಯ ಆಶ್ರಿತ ಕೃಷಿಕರಿಗೆ ಕೃಷಿಕೂಲಿ ಕಾರ್ಮಿಕರಿಗೆ ಕೃಷಿ ಕೆಲಸದ ಬಿಡುವಿನ ವೇಳೆಯಲ್ಲಿ ಉದ್ಯೋಗವನ್ನು ಒದಗಿಸಿಕೊಡುವುದರಿಂದ ಅವರ ಆರ್ಥಿಕ ಪರಿಸ್ಥಿತಿ ಉತ್ತಮ ಪಡಿಸುವುದು ಈ ಮೂಲಕವಾಗಿ ವಲಸೆಯ ಪ್ರಮಾಣ ನಿಯಂತ್ರಿಸಲಾಗುವುದು (ಝು ಮತ್ತು ಇತರರು 2008).
- ಹಕ್ಕುಗಳ ಆಧಾರಿತ ಶಾಸನ ರಚನೆಯ ಮೂಲಕ ಸಮಾಜದಲ್ಲಿ ಹಿಂದುಳಿದ ವರ್ಗಗಳಾದ ವಿಶೇಷವಾಗಿ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಕ್ಕುಗಳನ್ನು ನೀಡಿ ಅವರನ್ನು ಸಬಲೀಕರಿಸುವುದು.

- ವಿವಿಧ ಬಡತನ ನಿರ್ಮೂಲನೆ ಯೋಜನೆಗಳು ಮತ್ತು ಜೀವನೋಪಾಯದ ಕಾರ್ಯಕ್ರಮಗಳನ್ನು ಒಗ್ಗೂಡಿಸುವುದರ ಮುಖಾಂತರ ವಿಕೇಂದ್ರೀಕೃತ ಮತ್ತು ಜನಸಹಭಾಗಿತ್ವ ಯೋಜನೆಗಳನ್ನು ಪರಿಣಾಮಕಾರಿಯಾಗಿ ರೂಪಿಸಿ ಸಂಸ್ಥೆಗಳನ್ನು ಬಲಿಷ್ಠಗೊಳಿಸುವುದರ ಮೂಖಾಂತರ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಳಹಂತದಲ್ಲಿ ಬೇರೂರುವಂತೆ ಮಾಡಲಾಗಿರುವುದು.
- ಗ್ರಾಮೀಣರಿಗೆ ಸಾಮಾಜಿಕ ಸುರಕ್ಷತೆ ನೀಡುವ ಸಲುವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಯಾರು ನಿರುದ್ಯೋಗಿಗಳು ಇರುವರೊ ಅಥವಾ ಯಾರು ಅರೆ ಉದ್ಯೋಗಿಗಳಾಗಿ ಪರ್ಯಾಯ ಕೆಲಸಕ್ಕೆ ಅಲೆದಾಡುವರೋ ಅಂತವರಿಗೆ ಈ ಯೋಜನೆ ಅವಕಾಶ ಮಾಡಿಕೊಟ್ಟಿರುವುದು.

3.16 ಉದ್ಯೋಗ ಖಾತರಿ ಕಾಯಿದೆಯ ಉದ್ದೇಶಗಳು

1. ಸ್ವ–ಇಚ್ಛೆಯಿಂದ ಕೆಲಸ ಬಯಸಿ ಅರ್ಜಿ ಸಲ್ಲಿಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತಿ ಕುಟುಂಬಕ್ಕೆ ಕೆಲಸ ನೀಡುವುದು. ದುಡಿಯುವ ಜನರು ಕೆಲಸವನ್ನರಸಿ ವಲಸೆ ಹೋಗದಂತೆ ತಡೆಗಟ್ಟುವುದು.
2. ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೂ 100 ದಿನಗಳ ಉದ್ಯೋಗವನ್ನು ಒದಗಿಸುವ ಮೂಲಕ ಗ್ರಾಮೀಣ ಜನತೆಯ ಜೀವನಕ್ಕೆ ಭದ್ರತೆ ಒದಗಿಸುವುದು.
3. ಗ್ರಾಮೀಣ ಜನರಿಗೆ ದೀರ್ಘಕಾಲದ ಜೀವನೋಪಾಯದ ಮಾರ್ಗಗಳನ್ನು ಬಲಪಡಿಸುವುದು. ಗ್ರಾಮದ ನೆಲ, ಜಲ, ಅರಣ್ಯ ಸಂಪತ್ತು ಮತ್ತು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು.

3.17 ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಗುಣಲಕ್ಷಣಗಳು ಅಥವಾ ಕಾಯಿದೆಯ ನಿಯಮಗಳು

1. ಉದ್ಯೋಗದ ಬೇಡಿಕೆಗಾಗಿ ಮಾಹಿತಿ ಶಿಕ್ಷಣ ಮತ್ತು ಸಂವಹನದ ಮೂಲಕ ಗ್ರಾಮೀಣರಿಗೆ ವ್ಯಾಪಕವಾದ ತಿಳುವಳಿಕೆ ನೀಡುವುದು. ಅಂದರೆ ಗೋಡೆಬರಹ, ಭಿತ್ತಿಪತ್ರಗಳು, ಕರಪತ್ರಗಳು ಇತ್ಯಾದಿಗಳು.
2. ದೈಹಿಕವಾಗಿ ದುಡಿಯಲು ಅರ್ಹತೆ ಇರುವವರು ಗ್ರಾಮಪಂಚಾಯತಿಯಲ್ಲಿ ಉದ್ಯೋಗಕ್ಕಾಗಿ ನೋಂದಣಿ ಮಾಡಿಸುವುದು. ಗ್ರಾಮಪಂಚಾಯತಿ ಉಚಿತವಾಗಿ ನೋಂದಣಿ ಮಾಡಿಸಿಕೊಡಬೇಕಾಗುವುದು(ದೈಹಿಕ ಅರ್ಹತೆ ಎಂದರೆ 18 ವರ್ಷ ತುಂಬಿದವರು ಮತ್ತು ದೈಹಿಕವಾಗಿ ದುಡಿಯುವ ಸಾಮರ್ಥ್ಯವಿರುವವರು).

3. ಉದ್ಯೋಗಕ್ಕಾಗಿ ಗ್ರಾಮಪಂಚಾಯತಿಯಲ್ಲಿ ಗ್ರಾಮಪಂಚಾಯತಿ ನೌಕರರು ಕೂಲಿಕಾರರಿಗೆ ಉಚಿತವಾಗಿ ನೋಂದಣಿ ಮಾಡಿಸುವುದು.

4. ಗ್ರಾಮಪಂಚಾಯತಿ ಕೂಲಿಕಾರರಿಗೆ "ಉದ್ಯೋಗದ ಹಕ್ಕು" ಆಧಾರದ ಮೇಲೆ ಉದ್ಯೋಗದ ಬೇಡಿಕೆ ಹೆಚ್ಚಿಸುವುದು. ಅದರಲ್ಲಿ ಕಟುಂಬದ ಯಜಮಾನನ ಹೆಸರು, ಕುಟುಂಬದ ಸದಸ್ಯರ ಹೆಸರು, ಅವರ ವಯಸ್ಸು, ಲಿಂಗ ಮತ್ತು ಪ್ರಮುಖವಾಗಿ ದುಡಿದ ಮಾನವ ದಿನಗಳು, ನೀಡಿದ ಕೂಲಿವೇತನ ಈ ಎಲ್ಲಾ ಮಾಹಿತಿ ಒಳಗೊಂಡಿರುತ್ತದೆ. ಜಾಬ್ ಕಾರ್ಡ್ ಒಂದು ವಾರದೊಳಗೆ ನೀಡುವುದು. ಒಂದು ಸಾರಿ ಜಾಬ್ ಕಾರ್ಡ್ ಪಡೆದ ಮೇಲೆ ಅದನ್ನು 5 ವರ್ಷದವರೆಗೆ ನವೀಕರಿಸುವಂತಿಲ್ಲ.

5. ಕೂಲಿಕಾರರು ಕೂಲಿವೇತನವನ್ನು ಕಡ್ಡಾಯವಾಗಿ ಬ್ಯಾಂಕ್ ಅಥವಾ ಅಂಚೆ ಕಛೇರಿ ಮೂಲಕವೇ ಪಡೆಯಬೇಕಾಗಿರುವುದರಿಂದ ಬ್ಯಾಂಕ್‌ನಲ್ಲಿ ತಮ್ಮ ಕುಟುಂಬದ ಹೆಸರಿನಲ್ಲಿ ಉಚಿತವಾಗಿ ಅಂದರೆ ಯಾವುದೇ ಮುಂಗಡ ಹಣವಿಲ್ಲದೆ ಬ್ಯಾಂಕ್ ಖಾತೆ ಪಡೆಯಬೇಕು.

6. ಉದ್ಯೋಗಕ್ಕಾಗಿ ಅರ್ಜಿಸಲ್ಲಿಸಿದ ಮೇಲೆ ಅರ್ಜಿಸಲ್ಲಿಸಿದ ದಿನಾಂಕದಿಂದ 15 ದಿನದೊಳಗಾಗಿ ಕೂಲಿಕಾರರಿಗೆ ಉದ್ಯೋಗಗಳನ್ನು ನೀಡಬೇಕು.

7. ಅರೆ ಕುಶಲ ಉದ್ಯೋಗ ಕೋರಿದ 15 ದಿನಗಳೊಳಗಾಗಿ ಉದ್ಯೋಗ ಒದಗಿಸದಿದ್ದಲ್ಲಿ ಅರ್ಜಿದಾರರು ಆರ್ಥಿಕ ವರ್ಷದ ಮೊದಲ 30 ದಿನಗಳಿಗೆ ಕೂಲಿಯ ಶೇಕಡ 25ರಷ್ಟು ಮತ್ತು ಉಳಿದ ಅವಧಿಗೆ ಕೂಲಿಯ ಶೇಕಡ 50ರಷ್ಟನ್ನು ನಿರುದ್ಯೋಗ ಭತ್ಯೆಯಾಗಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

8. ಕೂಲಿ ಕಾರ್ಮಿಕರಿಗೆ ಸಾಧ್ಯವಾದಷ್ಟು ಮಟ್ಟಿಗೆ ಕೆಲಸವನ್ನು ಅವರ ಗ್ರಾಮದ ವ್ಯಾಪ್ತಿಯಲ್ಲಿ ಒದಗಿಸಬೇಕು. ಅವರು ವಾಸವಿರುವ ಗ್ರಾಮದಿಂದ ಐದು ಕಿ.ಮೀ.ಗಿಂತ ಹೆಚ್ಚಿನ ದೂರದಲ್ಲಿ ಕೆಲಸವನ್ನು ಒದಗಿಸಿದ್ದೇ ಆದರೆ, ಕೂಲಿಯ ಶೇಕಡ. 10ರನ್ನು ಹೆಚ್ಚುವರಿಯಾಗಿ ಸಾರಿಗೆ ಮತ್ತು ಜೀವನ ವೆಚ್ಚವಾಗಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

9. ಕೆಲಸ ಕೋರುವ ನೋಂದಾಯಿತ ಅರ್ಜಿದಾರರ ಪೈಕಿ ಕನಿಷ್ಠ 1/3 ರಷ್ಟು ಇರುವಂತೆ ಮಹಿಳೆಯರಿಗೆ ಆದ್ಯತೆ ಮೇರೆಗೆ ಉದ್ಯೋಗ ಒದಗಿಸಬೇಕು.

10. ಕೂಲಿಕಾರರಿಗೆ 15 ದಿನದೊಳಗಾಗಿ ಕೂಲಿಯನ್ನು ಪಾವತಿಸತಕ್ಕದ್ದು, ಕಾರ್ಮಿಕರಿಗೆ ಕೂಲಿಯನ್ನು ಪಾವತಿಸದಿದ್ದಲ್ಲಿ, ಅವರು ಕೂಲಿ ಪಾವತಿ ಅಧಿನಿಯಮ 1936 (4/1936) ರ ಅನ್ವಯ ಪರಿಹಾರ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

11. ಸಮಾನ ವೇತನ ಅಧಿನಿಯಮ 1976 (25/1976) ರ ಅನ್ವಯ ಲಿಂಗಾಧಾರಿತ ತಾರತಮ್ಯ ಮಾಡತಕ್ಕದ್ದಲ್ಲ. ಮಹಿಳೆಯರಿಗೆ ಸಂವಿಧಾನದ 73ನೇ ತಿದ್ದುಪಡಿ ಅನ್ವಯ ಮೀಸಲಾತಿ ದೃಷ್ಟಿಯಿಂದ ಮತ್ತು ಮಹಿಳೆಯ ಸಬಲೀಕರಣದ ಹಿನ್ನೆಯಲ್ಲಿ ಶೇಕಡ 33ರಷ್ಟು ಕೆಲಸ ನೀಡುವಲ್ಲಿ ಉದ್ಯೋಗ ಒದಗಿಸುವಲ್ಲಿ ಮೀಸಲಾತಿ ನೀಡುವುದು.

12. ಕಾಮಗಾರಿಯ ಸ್ಥಳದ ಸಮೀಪ ಕೂಲಿ ಕಾರ್ಮಿಕರು ಹಾಗೂ ಮಕ್ಕಳು ವಿಶ್ರಾಂತಿ ಪಡೆಯಲು ನೆರಳು ಮತ್ತು ಸ್ವಚ್ಚವಾದ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.

13. ಕೆಲಸದ ಅವಧಿಯಲ್ಲಿ ಉಂಟಾಗಬಹುದಾದ ಸಣ್ಣಪುಟ್ಟ ಗಾಯಗಳಿಗಾಗಿ ಚಿಕಿತ್ಸೆ ನೀಡಲು ಪ್ರಥಮ ಚಿಕಿತ್ಸೆ ಪೆಟ್ಟಿಗೆಯನ್ನು ಒದಗಿಸಬೇಕು.

14. ಕಾಮಗಾರಿಯ ಸ್ಥಳಕ್ಕೆ ಆರು ವರ್ಷಕ್ಕೂ ಕಡಿಮೆ ವಯಸ್ಸಿನ ಐದಕ್ಕಿಂತ ಹೆಚ್ಚಿನ ಮಕ್ಕಳು ಕಾರ್ಮಿಕರೊಂದಿಗೆ ಬಂದಲ್ಲಿ ಅವರನ್ನು ನೋಡಿಕೊಳ್ಳಲು ಕಾರ್ಮಿಕರ ಪೈಕಿ ಒಬ್ಬ ಮಹಿಳೆಯನ್ನು ನೇಮಿಸಬೇಕು ಮತ್ತು ದಿನದ ಕನಿಷ್ಟ ಕೂಲಿಯನ್ನು ಆ ಮಹಿಳೆಗೆ ಪಾವತಿಸಬೇಕು.

15. ಕಾಮಗಾರಿಯ ಸ್ಥಳದಲ್ಲಿ ಕಾಮಗಾರಿಗೆ ಸಂಬಂಧಿಸಿದಂತೆ ಕಾರ್ಮಿಕರಿಗೆ ಗಾಯಗಳಾದಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ನೀಡಬೇಕು.

16. ಕಾಮಗಾರಿ ಸಂಬಂಧ ಯಾವುದೇ ಕಾರ್ಮಿಕರಿಗೆ ಗಾಯಗಳಾಗಿ ಆಸ್ಪತ್ರೆಗೆ ದಾಖಲಾಗಬೇಕಾದ ಅಗತ್ಯ ಕಂಡುಬಂದಲ್ಲಿ ಅವರ ಔಷಧಿ, ವೈದ್ಯಕೀಯ ಚಿಕಿತ್ಸೆ, ವಸತಿ ಇತ್ಯಾದಿ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

17. ವೈದ್ಯಕೀಯ ಚಿಕಿತ್ಸೆ ಪಡೆಯುವ ಅವಧಿಗೆ ಪ್ರತಿ ದಿನಕ್ಕೆ ಆ ದಿನದ ಕೂಲಿಯ ಶೇ.50ರಷ್ಟು ಕೂಲಿಯನ್ನು ದಿನಭತ್ಯೆಯಾಗಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

18. ಕಾಮಗಾರಿಯ ಕಾರಣದಿಂದಾಗಿ ಕಾರ್ಮಿಕರು ಶಾಶ್ವತವಾಗಿ ಅಂಗವಿಕಲರಾದರೆ ಅಥವಾ ಮೃತಪಟ್ಟರೆ ಸಂದರ್ಭಕ್ಕೆ ತಕ್ಕಂತೆ ಅವರು ಅಥವಾ ಅವರ ವಾರಸುದಾರರು ರೂ.25,000.00 ಅಥವಾ ಕೇಂದ್ರ ಸರ್ಕಾರ ನಿಗದಿಪಡಿಸಬಹುದಾದ ಪರಿಹಾರ ಪಡೆಯಲು ಹಕ್ಕುಳ್ಳ ವರಾಗಿರುತ್ತಾರೆ.

19. ಕಾಮಗಾರಿಯ ಸ್ಥಳದಲ್ಲಿ ಇರುವ ಮಕ್ಕಳಿಗೆ ಗಾಯಗಳಾದಲ್ಲಿ, ಶಾಶ್ವತ ಅಂಗವಿಕಲತೆಯಾದಲ್ಲಿ ಅಥವಾ ಮೃತಪಟ್ಟಲ್ಲಿ ಅವರೂ ಸಹ ಮೇಲಿನಂತೆ ಚಿಕಿತ್ಸೆ ಮತ್ತು ಪರಿಹಾರ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

20. ಅಂಗವಿಕಲರಿಗೆ ಕಾಮಗಾರಿ ಸ್ಥಳಕ್ಕೆ ಹೋಗಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಯೋಜನೆಯಡಿ ಕನಿಷ್ಟ ಕೂಲಿ ದರದ ಶೇಕಡ 10ರಷ್ಟು ಪ್ರಯಾಣ ಭತ್ಯೆ ಪಡೆಯುವ ಹಕ್ಕು ನೀಡಲಾಗಿದೆ.

21. ಯೋಜನೆಯಡಿ ಕೆಲಸ ನಿರ್ವಹಿಸುವ 60 ವಯೋಮಾನ ಮೀರಿದವರು ಹಾಗೂ ಅಂಗವಿಕಲರಿಗೆ ಕೆಲಸದ ಪ್ರಮಾಣದಲ್ಲಿ ಶೇಕಡ 25ರಷ್ಟು ರೀಯಾಯಿತಿ ಪಡೆಯುವ ಹಕ್ಕು ಒದಗಿಸಲಾಗಿದೆ (ನಿಖಿಲ್ ಡೇ, ಜೇನ್ ಡ್ರೇಜ್ ಮತ್ತು ರೀತಿಕ ಖೇರಾ 2006).

22. ಉದ್ಯೋಗ ಇಚ್ಛಿಸುವ ಗ್ರಾಮೀಣ ಪ್ರದೇಶದ ಪ್ರತೀ ಕುಟುಂಬಕ್ಕೂ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡುವ ಸಲುವಾಗಿ ಮಾನವರಿಗೆ ಮಾತ್ರ ಮಾನವ ದಿನಗಳನ್ನು ನೀಡುವುದು. ಯಂತ್ರಗಳ ಬಳಕೆಯನ್ನು ನಿಷೇಧಿಸಿದೆ.

23. ಶೇಕಡ 50ರಷ್ಟು ಕಾಮಗಾರಿಗಳ ಅನುಮೋದನೆಯನ್ನು ಸರ್ಕಾರ ಗ್ರಾಮಪಂಚಾಯತಿಗೆ ಅಧಿಕಾರ ನೀಡಿರುವುದು. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರನ್ನು ನಿಷೇಧಿಸಿದೆ.

31.8 ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯ ಯೋಜನೆಯ ವಿಶಿಷ್ಟ ಅಂಶಗಳು

1. **ಅರ್ಹತೆ:** ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಯಾವುದೇ ವ್ಯಕ್ತಿಗೆ 18 ವರ್ಷದ ಮೇಲ್ಪಟ್ಟವರಿಗೆ.

2. **ಆದ್ಯತೆ :** ಅರ್ಜಿ ಸಲ್ಲಿಸಿದ 15 ದಿನದೊಳಗೆ ಪ್ರತಿ ಕುಟುಂಬಕ್ಕೆ ಅರ್ಜಿ ಸಲ್ಲಿಸಿದ ಅರ್ಜಿಸಲ್ಲಿಸಿದಷ್ಟು ದಿನಗಳ ಅಥವಾ ಗರಿಷ್ಟ 100 ದಿನಗಳ ಕೆಲಸ .

3. **ಅಂತರ:** ಅರ್ಜಿದಾರರ ವಾಸಸ್ಥಳದಿಂದ 5 ಕಿ.ಮೀ. ವ್ಯಾಪ್ತಿಯಲ್ಲಿ ಕೆಲಸವನ್ನು ಒದಗಿಸಬೇಕು. ಯಾವುದೇ ಸಂದರ್ಭದಲ್ಲಿ ತಾಲ್ಲೂಕಿನ ವ್ಯಾಪ್ತಿಯೊಳಗೆಯೇ ಕೆಲಸವನ್ನು ನೀಡತಕ್ಕದ್ದು. ಒಂದು ವೇಳೆ 5 ಕಿ.ಮೀ.ಗಿಂತ ಹೆಚ್ಚಿನ ದೂರದಲ್ಲಿ ಕೆಲಸವನ್ನು ಒದಗಿಸಿದ್ದೇ ಆದರೆ ಸಾರಿಗೆ ಭತ್ಯೆಯನ್ನು ದಿನದ ಕೂಲಿಯ ಪ್ರಮಾಣದಲ್ಲಿ ಶೇಕಡ 10ರಷ್ಟು ಹೆಚ್ಚುವರಿ ಕೂಲಿವೇತನವನ್ನು ಪಡೆಯಲು ಹಕ್ಕುಳ್ಳವರಾಗಿದ್ದಾರೆ.

4. **ಕೂಲಿ ಪಾವತಿ:** ಶಾಸನಾತ್ಮಕ ಕನಿಷ್ಟ ಕೂಲಿ ರಾಜ್ಯದ ಎಲ್ಲಾ ಕೃಷಿ ಕಾರ್ಮಿಕರಿಗೆ ಅನ್ವಯಿಸುತ್ತದೆ. ಕೇಂದ್ರ ಸರ್ಕಾರವು ಬೇರೆ ಕೂಲಿಯನ್ನು ನಿಗದಿಪಡಿಸುವ ತನಕ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ರೂ. 82/– ಗಳಾಗಿದೆ. ಕಾಮಗಾರಿ ಸ್ಥಳವು ಕೂಲಿ ಕಾರ್ಮಿಕನ ವಾಸಸ್ಥಳದಿಂದ ಐದು ಕಿ.ಮೀ.ಗಿಂತ ದೂರವಿದ್ದಲ್ಲಿ, ಹೆಚ್ಚುವರಿ ಶೇ.10ರಂತೆ ದಿನದ ಕೂಲಿ ಪಾವತಿಸಬೇಕು. ಅಂದರೆ ರೂ.8.20ನ್ನು ಸೇರಿಸಿ ಒಟ್ಟು ರೂ. 90.20ಗಳನ್ನು ಪಾವತಿಸಬೇಕು. ಪ್ರತಿವಾರಾಂತ್ಯ ಕೂಲಿ ಪಾವತಿ ಮಾಡಬೇಕು, ಅನಿವಾರ್ಯವಾದಲ್ಲಿ ಗರಿಷ್ಟ 15 ದಿನಗಳಿಗೆ

ಮೀರದಂತೆ ಕೂಲಿ ಪಾವತಿಮಾಡಬೇಕು. ಕುಟುಂಬದ ಯಾರೇ ಸದಸ್ಯರು ಗಳಿಸಿದ ಮಂಜೂರಾದ ಹಣ ಕುಟುಂಬದ ಜಂಟಿ ಉಳಿತಾಯ ಖಾತೆಗೆ ಜಮೆ ಮಾಡಬೇಕು. ಕಾರ್ಯನಿರ್ವಹಣಾ ಏಜೆನ್ಸಿ ಯಾರೇ ಆದರೂ ಸಹ ಅರೆ ಕುಶಲ ಕಾರ್ಮಿಕರ ಕೂಲಿಯನ್ನು ಗ್ರಾಮಪಂಚಾಯತ್ ಮೂಲಕವೇ ಪಾವತಿಸಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಲ್ಲಿ ಕಾರ್ಮಿಕರು ಕೆಲಸ ನಿರ್ವಹಿಸುವ ಕೆಲಸದ ಪ್ರಮಾಣವನ್ನು ಆಧರಿಸಿ, ದಿನವೊಂದಕ್ಕೆ ತಾವು ತೆಗೆದುಕೊಳ್ಳುವ ಕನಿಷ್ಟ ಕೂಲಿ ವೇತನಕ್ಕಿಂತ ಹೆಚ್ಚಿಗೆ ವೇತನವನ್ನು ದುಡಿಯಲು ಅವಕಾಶ ಒದಗಿಸಲಾಗಿದೆ. ಆದರೆ ಕೆಲಸದ ಪ್ರಮಾಣವನ್ನು ಆಧರಿಸಿ ನೀಡುವ ವೇತನವು ದಿನವೊಂದಕ್ಕೆ ರೂ. 125/–ಗಳನ್ನು ಮೀರದಂತೆ ಗರಿಷ್ಟ ಮಿತಿಯನ್ನು ನಿಗದಿ ಪಡಿಸಲಾಗಿದೆ. ಅದು ಖಾಸಗಿ ಕೃಷಿ ಮಾರುಕಟ್ಟೆಯ ಕೂಲಿ ಹೆಚ್ಚಿದಂತೆ ಉದ್ಯೋಗ ಖಾತರಿ ಕಾಯಿದೆಯಲ್ಲಿ ಕೂಲಿಯನ್ನು ಆಯಾ ಕಾಲಕ್ಕೆ ಹೆಚ್ಚಿಸಲಾಗಿದೆ. ಉದಾಹರಣೆ 2015–16ರಲ್ಲಿ ಕೂಲಿಯ ದರ 224 ರೂಪಾಯಿ ಮತ್ತು 10 ರೂಪಾಯಿ ಕೆಲಸ ಮಾಡುವ ಸಾಮಗ್ರಿಗಳನ್ನು ಸೂಪಾಗಿ, ಮಣಚಾಗಿ ಮಾಡಿಸುವುದು ಒಟ್ಟಾರೆ 234 ರೂಪಾಯಿ ಕೂಲಿಯನ್ನು ಹೆಚ್ಚಿಸಿದೆ. ಈ ತರಹ ಪರಿಷ್ಕರಣೆ ಆಯಾ ರಾಜ್ಯಗಳಿಗೆ ಬಿಟ್ಟ ವಿಷಯವಾಗಿರುವುದು. 1948ರ ಕನಿಷ್ಟ ಕೂಲಿ ಕಾಯಿದೆ (ಟಿ.ಎಸ್.ಪಾಪಲ 2005).

5. **ನಿಯಮಿತ ಕೂಲಿ:** ಪ್ರತಿವಾರಾಂತ್ಯದಲ್ಲಿ ಕೂಲಿಯನ್ನು ಪಾವತಿ ಮಾಡಬೇಕು. ಅನಿವಾರ್ಯ ವಾದಲ್ಲಿ ಗರಿಷ್ಠ 15 ದಿನಗಳಿಗೆ ಮೀರದಂತೆ (1972ರ ಕನಿಷ್ಠ ಕೂಲಿ ಕಾಯಿದೆ)

6. **ಹೆಚ್ಚುವರಿ ವಿವರಣೆ:** ಪ್ರತಿಯೊಂದು ರಾಜ್ಯದಲ್ಲೂ ಸರ್ಕಾರವು ಉದ್ಯೋಗ ಖಾತರಿ ಯೋಜನೆಯನ್ನು 6 ತಿಂಗಳೊಳಗೆ ಪ್ರಾರಂಭಿಸಬೇಕು.

7. **ಅನುಮೋದಿಸಿದ ಕಾಮಗಾರಿಗಳು:** ಜಲ ಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು, ಸಣ್ಣ ನೀರಾವರಿ, ಜಮೀನಿನ ಅಭಿವೃದ್ಧಿ, ನೀರಾವರಿ ಸೌಲಭ್ಯ, ನೀರಿನ ಮೂಲಗಳ ಪುನಶ್ಚೇತನ, ಕೆರೆ ಅಭಿವೃದ್ಧಿ, ಬರಗಾಲ ತಡೆಗಟ್ಟುವಿಕೆ, ಗ್ರಾಮೀಣ ರಸ್ತೆ ಮತ್ತು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಸೂಚಿಸುವ ಇತರೆ ಯಾವುದೇ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು.

8. **ಕಾರ್ಯನಿರ್ವಹಣಾ ಅಧಿಕಾರಿ:** ತಾಲ್ಲೂಕು ಮಟ್ಟದಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಸಂಯೋಜಿಸಲು ಕಾರ್ಯಕ್ರಮ ಸಮನ್ವಯಾಧಿಕಾರಿ ನೇಮಿಸಲ್ಪಡುತ್ತಾರೆ.

9. **ಅನುಷ್ಠಾನ ವ್ಯವಸ್ಥೆ:** ಗ್ರಾಮಪಂಚಾಯತ್, ಇತರೆ ಪಂಚಾಯತ್ ರಾಜ್ ಸಂಸ್ಥೆಗಳು, ಲೋಕೋಪಯೋಗಿ ಮತ್ತು ಅರಣ್ಯ ಇಲಾಖೆ ಮತ್ತು ಸರ್ಕಾರೇತರ ಸಂಸ್ಥೆಗಳು.

10. **ಗುತ್ತಿಗೆದಾರರು:** ಖಾಸಗಿ ಗುತ್ತಿಗೆದಾರರನ್ನು ನೇಮಿಸುವುದು ನಿಷೇಧಿಸಿದೆ.

11. **ವಿಕೇಂದ್ರೀಕೃತ ಯೋಜನೆ:** ಅನುಷ್ಠಾನ ಪ್ರಾಧಿಕಾರದಿಂದ ಬಂದಂತಹ ಯೋಜನೆಗಳನ್ನು ಆದ್ಯತೆ ಮೇರೆಗೆ ಗುರುತಿಸಿ ಕ್ರೂಢಿಕರಿಸಿ, ಪರಿಶೀಲಿಸಿ, ಅನುಮೋದಿಸಿ, ಮಂಜೂರಾತಿಗಾಗಿ, ಜಿಲ್ಲಾ ಪಂಚಾಯತಿಗೆ ಕಳುಹಿಸಿ ಕೊಡುವ ಜವಾಬ್ದಾರಿಯುತ ಅಧಿಕಾರದ್ದಾಗಿರುತ್ತದೆ. ಪ್ರತಿ ಗ್ರಾಮಪಂಚಾಯತಿಯು ವಾರ್ಡ್‌ಸಭೆ ಮತ್ತು ಗ್ರಾಮಸಭೆ ಮೂಲಕ ಶಿಫಾರಸ್ಸಿಗೆ ಬರುವ ಕಾಮಗಾರಿಗಳ ಪೈಕಿ ಆಧ್ಯತೆಯನ್ನು ಗುರುತಿಸಿ ಅನುಷ್ಠಾನಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ.

12. **ಪಾರದರ್ಶಕತೆ ಮತ್ತು ಹೊಣೆಗಾರಿಕೆ:** ಪ್ರತಿ ಗ್ರಾಮ ಮಟ್ಟದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದ ಮೇಲ್ವಚಾರಣೆ ಮಾಡಲು ಸ್ವತಂತ್ರ ಜಾಗೃತಿ ಸಮಿತಿ ಇರುತ್ತದೆ ಮತ್ತು ಗುಣಮಟ್ಟ ನಿಯಂತ್ರಣ ಸಮಿತಿ ಇರುತ್ತದೆ. ಆಯವ್ಯಯ ಉದ್ಯೋಗದ ಸ್ಥಿತಿ, ನಿರುದ್ಯೋಗ ಸ್ಥಿತಿ, ಕೂಲಿ ಪಾವತಿಸಿದ ಮಾಹಿತಿ, ಹಾಜರಾತಿ ಪಟ್ಟಿಗೆ, ಸಂಬಂಧಪಟ್ಟ ಎಲ್ಲಾ ಮಾಹಿತಿ ಮತ್ತು ಕಡತಗಳಿಗೆ ಅನ್ವಯಿಸುವ ವರದಿಯನ್ನು ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಗ್ರಾಮಸಭೆಯಲ್ಲಿ ಇಡಬೇಕು.

13. **ಸುಧಾರಣಾ ತಂತ್ರಗಳು:** ಈ ಅಧಿನಿಯಮದ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದಲ್ಲಿ ಅಥವಾ ಅನುಷ್ಠಾನ ವಿರುದ್ಧ ಧೋರಣೆ ತಳೆದರೆ ರೂ.1,000/–ತನಕ ದಂಡ ವಿಧಿಸಲಾಗುವುದು.

14. **ಖರ್ಚು ಹಂಚಿಕೆ:** ಕೇಂದ್ರ ಸರ್ಕಾರವು ಕೂಲಿ ಹಾಗು 75% ಸಾಮಗ್ರಿ ವೆಚ್ಚವನ್ನು ಭರಿಸುವುದು. ರಾಜ್ಯ ಸರ್ಕಾರವು ನಿರುದ್ಯೋಗ ಭತ್ಯೆ ಮತ್ತು 25% ಸಾಮಗ್ರಿ ವೆಚ್ಚವನ್ನು ಭರಿಸುವುದು.

15. **ಸಮಯಾವಕಾಶ:** ಆರಂಭದಲ್ಲಿ ದೇಶದ 200 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿದ ನಂತರ ಮುಂದಿನ 5 ವರ್ಗಗಳಲ್ಲಿ ಇಡೀ ಗ್ರಾಮೀಣ ಭಾರತಕ್ಕೆ ವಿಸ್ತರಿಸುವುದು.

16. **ಇತರೆ ಉಪಬಂಧಗಳು:** ಮಹಿಳೆಯರಿಗೆ 3% ಮೀಸಲಾತಿ, ನಿರುದ್ಯೋಗ ಭತ್ಯೆ, ಕಾಮಗಾರಿಯ ಸ್ಥಳದ ಸಮೀಪ ಕಾರ್ಮಿಕರು ಮತ್ತು ಮಕ್ಕಳು ವಿಶ್ರಾಂತಿ ಪಡೆಯಲು ನೆರಳು ಮತ್ತು ಸ್ವಚ್ಚವಾದ ಕುಡಿಯುವ ನೀರಿನ ವ್ಯವಸ್ಥೆ, ಶಿಶುಪಾಲನೆ, ಉಚಿತ ವೈದ್ಯಕೀಯ ಸೌಲಭ್ಯಗಳು, ನಿರುದ್ಯೋಗ ಭತ್ಯೆಯನ್ನು ಒದಗಿಸಬೇಕು.

17. **ಸಾಮಾಜಿಕ ಲೆಕ್ಕ ಪರಿಶೋಧನೆ:** ಎಲ್ಲಾ ಹಂತದ ಪ್ರಕ್ರಿಯೆಗಳಲ್ಲಿ ಯೋಜನಾ ಅನುಷ್ಠಾನ ಮತ್ತು ಮೌಲ್ಯಮಾಪನ ಪಾರದರ್ಶಕವಾಗಿರಲು ಸಾರ್ವಜನಿಕ ಭಾಗವಹಿಸುವುವಿಕೆ ಅಗತ್ಯ. ಈ ಯೋಜನೆಯ ಮುಖ್ಯ ಉದ್ದೇಶ ಕಾರ್ಮಿಕರಿಗೆ ಉದ್ಯೋಗ ಒದಗಿಸುವುದಾಗಿದ್ದು,

ಅವರಿಗೆ ದೊರೆಯಬೇಕಾಗಿರುವ ನ್ಯಾಯಯುತವಾದ ಹಕ್ಕುಗಳ ಬಗ್ಗೆ ಸಾಮಾಜಿಕ ಲೆಕ್ಕ ತಪಾಸಣೆಯನ್ನು ಯೋಜನೆಯ ಅನುಷ್ಠಾನದ ಮೊದಲು, ಅನುಷ್ಠಾನದ ಸಮಯದಲ್ಲಿ ಮತ್ತು ಅನುಷ್ಠಾನದ ನಂತರ ನಡೆಸಲಾಗುವುದು. ಈ ಸಂದರ್ಭದಲ್ಲಿ ಕೆಳಕಂಡ ಅಂಶಗಳ ವಿವರಗಳನ್ನು ನಿಯಾಮಾನುಸಾರ ಪಾಲಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಬೇಕಾಗಿದೆ.

18. **ಮಸ್ಟರ್‌ರೋಲ್ ನಿರ್ವಹಣೆ:** "ಉದ್ಯೋಗದ ಹಕ್ಕು" ನೀಡಿರುವುದು ಉದ್ಯೋಗವನ್ನು ಕೇಳುವ, ದುಡಿದ ಮೇಲೆ ಉದ್ಯೋಗದ ಕೂಲಿಯನ್ನು ಕೇಳುವ ಹಿನ್ನೆಯಲ್ಲಿ ಕೂಲಿಕಾರ್ಮಿಕರ ಹೆಸರು, ಕಾಮಗಾರಿಯ ಸ್ಥಳದ ಹೆಸರು, ಕಾಮಗಾರಿಯ ಹೆಸರು, ಅದರ ಹಾಜರಾತಿ ಪುಸ್ತಕ ನಿರ್ವಹಣೆ ಮುಂತಾದುವುಗಳನ್ನು ನಿರ್ವಹಿಸುವುದು.

- ನೋಂದಣಿ ಪ್ರಕ್ರಿಯೆ
- ಉದ್ಯೋಗ ಚೀಟಿ ವಿತರಣೆ
- ಉದ್ಯೋಗ ಬೇಡಿಕೆಗಳ ಪರಿಗಣನೆ
- ಕಾಮಗಾರಿಗಳ ಆಯ್ಕೆ ಹಾಗೂ ಮಂಜೂರಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ
- ಕಾಮಗಾರಿಗಳ ಅನುಷ್ಠಾನದಲ್ಲಿ ಪಾರದರ್ಶಕತೆ,
- ಕೂಲಿ ಪಾವತಿ
- ಲೆಕ್ಕ ತಪಾಸಣೆಗೆ ದಾಖಲಾತಿಗಳನ್ನು ಒದಗಿಸುವುದು
- ಗುಣಮಟ್ಟ ನಿಯಂತ್ರಣ ಮತ್ತು ಮೌಲ್ಯಮಾಪನ ವರದಿಗಳ ಪ್ರಕಟಣೆ ಇತ್ಯಾದಿ. ಪ್ರತಿ ಮೂರು ತಿಂಗಳಿಗೊಮ್ಮೆ.
- ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸಬೇಕು.
- ಹಾಜರಾತಿ ಪಟ್ಟಿಯ ಒಂದು ಪ್ರತಿಯನ್ನು ಕಾರ್ಯಕ್ರಮ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿನಲ್ಲಿ ಸಾರ್ವಜನಿಕರಿಗೆ ಪರಿಶೀಲಿಸಲು ಲಭ್ಯವಾಗಿರಬೇಕು.

1. ಜಿಲ್ಲಾ ಕಾರ್ಯಾಕ್ರಮಾಧಿಕಾರಿ, ಮತ್ತು ಗ್ರಾಮಪಂಚಾಯತ್ ಜಂಟಿಯಾಗಿ ಎಲ್ಲಾ ಅಂಕಿಅಂಶಗಳನ್ನೊಳಗೊಂಡ ಮತ್ತು ಯೋಜನೆಯ ವ್ಯಾಪ್ತಿಗೆ ಒಳಪಡುವಂತಹ ಸಾಧನೆಗಳನ್ನೊಳಗೊಂಡ ವಾರ್ಷಿಕ ವರದಿಯನ್ನು ತಯಾರಿಸಬೇಕು. ಮೇಲಿನ ಎಲ್ಲಾ ವರದಿ ಮತ್ತು ದಾಖಲೆಗಳು ಸಾರ್ವಜನಿಕ ಬೇಡಿಕೆ ಮೇರೆಗೆ ಪರಿಶೀಲನೆಗೆ ಸಿಗುವಂತಿರಬೇಕು.

3.19. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ವಿವಿಧ ಭಾಗಿದಾರರು– ಪಾತ್ರ ಮತ್ತು ಜವಾಬ್ದಾರಿಗಳು

ತಾಲ್ಲೂಕು ಮಟ್ಟದ ಅಧಿಕಾರಿಗಳ ಕೆಲಸ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ಎಂ.ಜಿ.ಎನ್.ಆರ್.ಇ.ಎಸ್) ಸಂಬಂಧಿಸಿದಂತೆ ತಾಲ್ಲೂಕ್ ಮಟ್ಟದಲ್ಲಿ ಕಾರ್ಯಕ್ರಮಾಧಿಕಾರಿಯೂ ಸಂಯೋಜಕರಾಗಿ ಕೆಲಸ ನಿರ್ವಹಿಸುವರು. ಉದ್ಯೋಗಕ್ಕಾಗಿ ಯಾರೆ ಅರ್ಜಿ ಸಲ್ಲಿಸಿದರೂ ಅವರಿಗೆ 15 ದಿನಗಳ ಒಳಗಾಗಿ ಕೆಲಸ ದೊರೆಯುಂತೆ ಮಾಡುವುದು ಕಾರ್ಯಕ್ರಮ ಅಧಿಕಾರಿಯ ಪ್ರಾಥಮಿಕ ಜವಾಬ್ದಾರಿಯಾಗಿರುತ್ತದೆ. ಕಾರ್ಯಕ್ರಮಾಧಿಕಾರಿಯ ಇತರ ಮುಖ್ಯ ಜವಾಬ್ದಾರಿಗಳೆಂದರೆ :

- ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಣಾ ಅಧಿಕಾರಿ ಈ ಯೋಜನೆಯ ಕಾರ್ಯಕ್ರಮ ಅಧಿಕಾರಿಯಾಗಿರುತ್ತದೆ. ಅವರು ತಾಲ್ಲೂಕು ಹಂತದಲ್ಲಿ ವಿವಿಧ ಪ್ರಕ್ರಿಯೆಗಳ ಬಗ್ಗೆ ಸಮನ್ವಯ ಮಾಡುವ ಮುಖ್ಯ ಜವಾಬ್ದಾರಿ ಹೊಂದಿರುತ್ತಾರೆ.
- ಗ್ರಾಮಪಂಚಾಯತಿಗಳಿಂದ ಪಡೆದುಕೊಂಡ ಎಲ್ಲಾ ಯೋಜನಾ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಕ್ರೂಢೀಕರಿಸಿ ತಾಲ್ಲೂಕು ಯೋಜನೆಯನ್ನು ಸಿದ್ಧಪಡಿಸಿ ಜಿಲ್ಲಾ ಪಂಚಾಯತಿಗೆ ಪರಿಶೀಲನೆ ಹಾಗೂ ಕ್ರೋಢೀಕರಣಕ್ಕೆ ಸಲ್ಲಿಸುವುದು.
- ತಳ ಹಂತದ ಸಮೀಕ್ಷೆಯ ಮೂಲಕ ಕೆಲಸದ ಬೇಡಿಕೆಗಳನ್ನು ನಿರ್ಧರಿಸುವುದನ್ನು ಖಾತರಿ ಪಡಿಸಿಕೊಳ್ಳುವುದು.
- ತಾಲ್ಲೂಕಿನ ವ್ಯಾಪ್ತಿಯಲ್ಲಿ ಗ್ರಾಮಪಂಚಾಯತಿಗಳು ಹಾಗೂ ಇತರ ಅನುಷ್ಠಾನ ಸಂಸ್ಥೆಯಿಂದ ಕೈಗೊಳ್ಳಲಾಗಿರುವ ಕಾಮಗಾರಿಗಳ ಉಸ್ತುವಾರಿಯಾಗಿ ಹಾಗೂ ಮೇಲ್ವಿಚಾರಣೆ ಮಾಡುವುದು.
- ಎಲ್ಲಾ ಕೆಲಸಗಾರರಿಗೆ ಸಕಾಲದಲ್ಲಿ ಸರಿಯಾದ ಕೂಲಿಪಾವತಿಯಾಗುವಂತೆ ಹಾಗೂ ಸಕಾಲದಲ್ಲಿ ಉದ್ಯೋಗ ಒದಗಿಸಲಾಗದ ಸಂದರ್ಭದಲ್ಲಿ ನಿರುದ್ಯೋಗ ಭತ್ಯೆ ಪಾವತಿಯಾಗುವಂತೆ ನೋಡಿಕೊಳ್ಳುವುದು.
- ಸಂಪನ್ಮೂಲಗಳನ್ನು ಪಡೆದುಕೊಂಡಿರುವುದಕ್ಕೆ ಬಿಡುಗಡೆ ಮಾಡಿರುವುದಕ್ಕೆ ಹಾಗೂ ಬಳಕೆ ಮಾಡಿರುವುದರ ಬಗ್ಗೆ ಸರಿಯಾದ ಲೆಕ್ಕಗಳ ನಿರ್ವಹಣೆ.
- ಉದ್ಯೋಗ ಬಯಸಿ ಅರ್ಜಿ ಸಲ್ಲಿಸಿದ 15 ದಿನಗಳೊಳಗೆ ಯೋಜನೆಯ ವ್ಯಾಪ್ತಿಯಲ್ಲಿರುವಂತೆ, ಅರೆ ಕುಶಲ, ದೈಹಿಕ ಕೆಲಸವನ್ನು ದೃಢಪಡಿಸಬೇಕು.

- ತಾಲ್ಲೂಕಿನಲ್ಲಿ ಲಭ್ಯವಿರುವ ಉದ್ಯೋಗ ಅವಕಾಶಗಳಿಗೂ, ಉದ್ಯೋಗ ಬೇಡಿಕೆಗೂ ಹೊಂದಾಣಿಕೆ ಏರ್ಪಡಿಸುವುದು. ಕೆಲಸಕ್ಕೆ ಅರ್ಜಿಯನ್ನು ಸ್ವೀಕರಿಸಿ ಸ್ವೀಕೃತಿ ಪ್ರತಿಯನ್ನು ನೀಡುವುದು. ಅರ್ಜಿದಾರರಿಗೆ ಕೆಲಸಕ್ಕೆ ಹಾಜರಾಗುವಂತೆ ಸೂಚಿಸುವುದು.
- ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ನೇಮಿಸಲ್ಪಟ್ಟ ಎಲ್ಲಾ ಕಾರ್ಮಿಕರಿಗೆ ನ್ಯಾಯಯುತ ಮತ್ತು ನಿಯಮಿತ ಕೂಲಿಯನ್ನು ನೀಡುವಂತೆ ನೋಡಿಕೊಳ್ಳುವುದು.
- ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡುವುದು ಮತ್ತು ಹಂಚುವುದು.
- ಕಾರ್ಯಕ್ರಮ ಅಧಿಕಾರಿಯ , ಅಧಿಕಾರ ವ್ಯಾಪ್ತಿಯಲ್ಲಿನ ಗ್ರಾಮಪಂಚಾಯತ್ ಮತ್ತು ಕಾರ್ಯ ನಿರ್ವಹಣಾ ಏಜೆನ್ಸಿಗಳ ಯೋಜನೆಗಳನ್ನು ಮಂಜೂರು ಮಾಡುವುದು.
- ತಾಲ್ಲೂಕಿನೊಳಗಿನ ಎಲ್ಲಾ ಗ್ರಾಮಪಂಚಾಯತ್ ಮತ್ತು ಕಾರ್ಯ ನಿರ್ವಹಣಾ ಏಜೆನ್ಸಿಗಳು ಕಾಮಗಾರಿಗಳನ್ನು ಉಸ್ತುವಾರಿ ನಡೆಸುವುದು.
- ಯಾವುದೇ ಆಸಕ್ತ ವ್ಯಕ್ತಿಯ ಪರಿಶೀಲನೆಗಾಗಿ ಹಾಜರಿ ಪಟ್ಟಿಯ ಒಂದು ಪ್ರತಿಯನ್ನು ತಮ್ಮಲ್ಲಿ ಇರಿಸಿಕೊಳ್ಳುವುದು. ಗ್ರಾಮಸಭೆಯಲ್ಲಿ ಎಲ್ಲಾ ಕೆಲಸಗಳ ಲೆಕ್ಕ ಪರಿಶೋಧನೆಯಾಗುವುದನ್ನು ದೃಢಪಡಿಸುವುದು.
- ತಾಲ್ಲೂಕಿನ ವ್ಯಾಪ್ತಿಯಲ್ಲಿ ಕುಂದು ಕೊರತೆಗಳನ್ನು ನಿವಾರಿಸುವುದು, ಕಾರ್ಯಕ್ರಮ ಅಧಿಕಾರಿ ಪ್ರತಿಯೊಂದು ದೂರು ದಾಖಲಾತಿ ಮಾಡುವ ವಹಿಯಲ್ಲಿ ದಾಖಲು ಮಾಡಿಕೊಂಡು ದಿನಾಂಕ ಮತ್ತು ಕ್ರಮ ಸಂಖ್ಯೆ ಇರುವ ಸ್ವೀಕೃತಿಯನ್ನು ನೀಡತಕ್ಕದ್ದು ಕಾಯಿದೆಯ 23(6) ಪ್ರಕರಣಕ್ಕೆ ಅನುಗುಣವಾಗಿ ಕಾರ್ಯಕ್ರಮ ಅಧಿಕಾರಿಯೂ ಗ್ರಾಮಪಂಚಾಯತಿಯ ಮೂಲಕ ಕಾಯಿದೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಉದ್ಭವಿಸಬಹುದಾದ ಯಾವುದೇ ದೂರುಗಳನ್ನು ತಕ್ಷಣವಾಗಿ (7ದಿನಗಳೊಳಗೆ) ಪರಿಹರಿಸುವುದು.
- ತಾಲ್ಲೂಕಿನಲ್ಲಿ ಅನುಷ್ಠಾನವಾದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ವಾರ್ಷಿಕ ವರದಿಯನ್ನು ತಯಾರಿಸುವುದು.
- ಮಧ್ಯಂತರ ಪಂಚಾಯತ್‌ಗಳು ತಮ್ಮ ಕರ್ತವ್ಯವನ್ನು ನಿಭಾಯಿಸುವಂತೆ ಸಹಕಾರವನ್ನು ನೀಡುವುದು.
- ರಾಜ್ಯ ಸರ್ಕಾರ ಮತ್ತು ಜಿಲ್ಲಾ ಕಾರ್ಯಾಕ್ರಮ ಸಮನ್ವಯ ಅಧಿಕಾರಿಯವರು ವಹಿಸಿದ ಯಾವುದೇ ಇತರ ಕೆಲಸಗಳು.

ತಾಲ್ಲೂಕು ಪಂಚಾಯತಿಯ ಜವಾಬ್ದಾರಿಗಳು

- ತಾಲೂಕ್ ಹಂತದ ಯೋಜನೆಯನ್ನು ಅನುಮೋದಿಸಿ ಜಿಲ್ಲಾ ಹಂತದ ಜಿಲ್ಲಾ ಪಂಚಾಯತಿಗೆ ಅನುಮೋದನೆಗಾಗಿ ಕಾಮಗಾರಿಗಳ ಪ್ರಸ್ತಾವನೆಯನ್ನು ಕಾರ್ಯಕ್ರಮ ಅಧಿಕಾರಿಗಳಿಗೆ ಕಳುಹಿಸಿಕೊಡುವುದು.
- ಕಾರ್ಯಕ್ರಮ ಅಧಿಕಾರಿಗಳಿಂದ ಮಂಜೂರಾದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.
- ತಾಲ್ಲೂಕು ಯೋಜನೆಯನ್ನು ಅನುಮೋದಿಸುವುದು ಮತ್ತು ಅದನ್ನು ಅಂತಿಮ ಅನುಮೋದನೆಗಾಗಿ ಜಿಲ್ಲಾ ಪಂಚಾಯತ್‌ಗೆ ಕಳುಹಿಸಿಕೊಡುವುದು.
- ಗ್ರಾಮಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ ಕೈಗೊಂಡ ಯೋಜನೆಗಳ ಮತ್ತು ಪರಿಶೀಲನೆ ಮತ್ತು ಉಸ್ತುವಾರಿ ಮಾಡುವುದು.
- ಹಾಗೆಯೇ, ಕಾಲಕಾಲಕ್ಕೆ ರಾಜ್ಯ ಪರಿಷತ್ ಅದಕ್ಕೆ ವಹಿಸಿಕೊಡಬಹುದಾದ ಇತರೆ ಯಾವುದೇ ಕಾರ್ಯಗಳನ್ನು ನಿರ್ವಹಿಸುವುದು.
- ಸಂವಿಧಾನದ ಭಾಗ 9ರಲ್ಲಿ ಅನುಷ್ಠಾನವಾಗುವುದಿಲ್ಲವೋ ಅಂತಹ ಕಡೆಗಳಲ್ಲಿ ರಾಜ್ಯ ಸರ್ಕಾಗಳ ಆದೇಶದ ಮೇರೆಗೆ ಸ್ಥಳೀಯ ಷರತ್ತುಗಳಿಗೆ ಸದರಿ ಜವಾಬ್ದಾರಿಗಳನ್ನು ವಹಿಸಿಕೊಡಲಾಗುತ್ತದೆ.
- ರಾಜ್ಯಸಭೆಯಿಂದ ನಿಯಮಿಸಲ್ಪಟ್ಟ ಇತರ ಯಾವುದೇ ಜವಾಬ್ದಾರಿಗಳು.
- ಕಾರ್ಯಕ್ರಮ ಅಧಿಕಾರಿಗಳನ್ನು ಗ್ರಾಮಪಂಚಾಯತಿಯ ಯೋಜನೆಗಳ ಕ್ರೂಢೀಕೃತ ಪಟ್ಟಿಯನ್ನು ಅನುಮೋದನೆಗಾಗಿ ಜಿಲ್ಲಾ ಪಂಚಾಯತಿಯಿಂದ ಪಡೆಯುವುದು.
- ತಾಲ್ಲೂಕು ಪಂಚಾಯತ್ ಸಭೆಗೆ ಮಂಡಿಸಬೇಕು.
- ಸರಿ ಇರುವ ಹಾಗೂ ಅನುಮೋದನೆಯಾದ ಪ್ರಸ್ತಾವನೆಗಳನ್ನು ಕಾರ್ಯಕ್ರಮ ಅಧಿಕಾರಿ, ಅನುಮೋದನೆಗಾಗಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗಳಿಗೆ ನೀಡುವುದು.

ಗ್ರಾಮಪಂಚಾಯತಿಯ ಜವಾಬ್ದಾರಿಗಳು

- ಗ್ರಾಮ ಸಭೆಯ ಶಿಫಾರಸ್ಸುಗಳನ್ನು ಗಣನೆಗೆ ತೆಗೆದುಕೊಂಡು ಮಾಡಬೇಕಾದ ಸಂಭಾವ್ಯ ಕೆಲಸಗಳ ಪಟ್ಟಿಯನ್ನು ಸಿದ್ಧಪಡಿಸಿ ಒಂದು ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು.
- ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೆಲಸ ಮಾಡಲು ಇಚ್ಛಿಸುವವರನ್ನು ನೋಂದಾಯಿಸಿ ಉದ್ಯೋಗ ಚೀಟಿಯನ್ನು ನೀಡುವುದು.

- ಕೆಲಸಕ್ಕೆ ಅರ್ಜಿಗಳನ್ನು ಸ್ವೀಕರಿಸಿ ದಿನಾಂಕವನ್ನು ನಮೂದಿಸಿದ ಸ್ವೀಕೃತಿ ರಶೀದಿಯನ್ನು ನೀಡುವುದು.

- ಅರ್ಜಿದಾರರಿಗೆ ಕೆಲಸದ ಅವಕಾಶಗಳನ್ನು ಹಂಚುವುದು ಮತ್ತು ಅವರು ಕೆಲಸಕ್ಕೆ ಹಾಜರಾಗುವಂತೆ ಮಾಡುವುದು. ಗ್ರಾಮಪಂಚಾಯತ್ ಮಾಹಿತಿ ಫಲಕದಲ್ಲಿ ಕೆಲಸ ನೀಡಿದವರ ಪಟ್ಟಿಯನ್ನು ಹಾಕುವುದು. ಕಾರ್ಯಕ್ರಮ ಅಧಿಕಾರಿಯಿಂದ ಮಂಜೂರಾದ ಕೆಲಸವನ್ನು ಅನುಷ್ಠಾನಗೊಳಿಸುವುದು. ಗ್ರಾಮಸಭೆಯಲ್ಲಿ ಲೆಕ್ಕ ಪರಿಶೋಧನೆಗೆ ಅಗತ್ಯವಿರುವ ಎಲ್ಲಾ ಅಗತ್ಯ ದಾಖಲಾತಿಗಳನ್ನು ಲಭ್ಯವಾಗಿರಿಸುವುದು.

- ಉದ್ಯೋಗದ ಚೀಟಿಯನ್ನು ನೀಡುವುದು.

- ಅಧ್ಯಾಯ 10ರಲ್ಲಿ ಹೇಳಿರುವಂತೆ ದಾಖಲೆಗಳ ನಿರ್ವಹಣೆ ಮಾಡುವುದು.

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿಗಧಿಪಡಿಸಿರುವ ನಮೂನೆಯಲ್ಲಿ ಲೆಕ್ಕಗಳನ್ನು ನಿರ್ವಹಿಸುವುದು ಹಾಗೂ ಹಣ ಬಳಕೆ ಪ್ರಮಾಣ ಪತ್ರಗಳನ್ನು ನೀಡುವುದು.

- ತನ್ನ ವ್ಯಾಪ್ತಿಯಲ್ಲಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟಂತಹ ಅಂಕಿ ಅಂಶಗಳನ್ನು ಮತ್ತು ಸಾಧನೆಯ ವಿವರಗಳನ್ನು ಒಳಗೊಂಡಿರುವ ವರದಿಯನ್ನು ಪ್ರತಿ ವರ್ಷ ಸಿದ್ಧಪಡಿಸುವುದು ಹಾಗೂ ಇದರ ಪ್ರತಿಯನ್ನು ಸಾರ್ವಜನಿಕರಿಗೆ ಕೋರಿಕೆಯ ಮೇಲೆ ಮತ್ತು ಯೋಜನೆಯಲ್ಲಿ ನಿಗದಿ ಪಡಿಸಿರುವ ಶುಲ್ಕವನ್ನು ಪಡೆದುಕೊಂಡ ನಂತರ ನೀಡತಕ್ಕದ್ದು.

- ಜಾಗೃತಿ ಮೂಡಿಸುವುದು ಮತ್ತು ಸಾಮಾಜಿಕ ಕ್ರೂಢೀಕರಣಕ್ಕೆ ಸಜ್ಜುಗೊಳಿಸುವುದು.

- ಯೋಜನೆ ತಯಾರಿಸಲು ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆಗಾಗಿ ಗ್ರಾಮಸಭೆಯನ್ನು ಆಯೋಜಿಸುವುದು.

- ಸಾಮಾಜಿಕ ಪರಿಶೋಧನೆ ನಡೆಸಲು ಅನುವಾಗುವಂತೆ ಗ್ರಾಮಸಭೆಗೆ ಹಾಜರಾತಿ ಪಟ್ಟಿ (ಮಸ್ಟರ್ ರೋಲ್) ಬಿಲ್ಲುಗಳು, ವೋಚರುಗಳು, ಅಳತೆ ಪುಸ್ತಕಗಳು, ಮಂಜೂರಾತಿ ಆದೇಶಗಳ ಪ್ರತಿಗಳು ಹಾಗೂ ಸಂಬಂಧಿಸಿದ ಇತರ ಲೆಕ್ಕದ ಪುಸ್ತಕಗಳು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸತಕ್ಕದ್ದು.

- ಯೋಜನೆಯ ಅನುಷ್ಠಾನದ ಬಗ್ಗೆ ವಾರ್ಷಿಕ ವರದಿಯನ್ನು ತಯಾರಿಸುವುದು. ಪ್ರತಿ ಗ್ರಾಮ ಪಂಚಾಯತಿ ತಮಗೆ ನಿಗದಿಪಡಿಸಿದ ಮೊತ್ತಕ್ಕೆ, ಆಧ್ಯತೆ ಮೇರೆಗೆ ತಮ್ಮ ವ್ಯಾಪ್ತಿಯ ಕಾಮಗಾರಿಗಳನ್ನು ಆಯ್ಕೆಮಾಡಿಕೊಳ್ಳುವುದು.

- ವಾರ್ಡ್‌ಸಭೆ ಮತ್ತು ಗ್ರಾಮಸಭೆಗಳ ಶಿಫಾರಸ್ಸಿನ ಮೇರೆಗೆ ತಯಾರಿಸಬೇಕು. ಗ್ರಾಮ ಪಂಚಾಯತ್ ಅನುಮೋದಿಸುವುದು.
- ಸಿದ್ಧಪಡಿಸಿದ ಕಾಮಗಾರಿಗಳ ಅಂದಾಜು ಪಟ್ಟಿಯೊಂದಿಗೆ ಅನುಮೋದನೆಗಾಗಿ ಗ್ರಾಮ ಪಂಚಾಯತಿನ ಕಾರ್ಯಕ್ರಮ ಅಧಿಕಾರಿಗಳಿಗೆ ಸಲ್ಲಿಸಬೇಕು.

ಗ್ರಾಮಸಭೆಯ ಜವಾಬ್ದಾರಿಗಳು

ಉದ್ಯೋಗದ ಚೀಟಿದಾರರು ತಮ್ಮ ಅಹವಾಲುಗಳನ್ನು ಮತ್ತು ಬೇಡಿಕೆಗಳನ್ನು ಮಂಡಿಸಲು ಗ್ರಾಮಸಭಾ(ಜಿಎಸ್) ಅತ್ಯಂತ ಪ್ರಮುಖವಾದ ವೇದಿಕೆ. ಕಾಯಿದೆಯ ಅನ್ವಯ ಗ್ರಾಮಸಭೆಯು ಈ ಕೆಳಕಂಡ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಹೊಂದಿರುತ್ತದೆ.

- ಎಂ.ಜಿ.ಎನ್.ಆರ್.ಇ.ಜಿ.ಎ ಅಡಿಯಲ್ಲಿ ಕೈಗೆತ್ತಿಕೊಳ್ಳಬಹುದಾದ ಕಾಮಗಾರಿಗಳ ಕುರಿತು ಶಿಫಾರಸ್ಸು ಮಾಡುವುದು ಮತ್ತು ಕಾಮಗಾರಿಗಳನ್ನು ಪ್ರಾರಂಭಿಸುವ ಆದ್ಯತೆಯನ್ನು ಅಂತಿಮವಾಗಿ ನಿರ್ಧರಿಸುವ ಪ್ರಾಧಿಕಾರವು ಗ್ರಾಮಸಭೆಯೇ ಆಗಿರುತ್ತದೆ.
- ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳ ಮೇಲ್ವಿಚಾರಣೆ ಮಾಡುವುದು.
- ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸುವ ಪ್ರಾಥಮಿಕ ವೇದಿಕೆಯಾಗಿ ಕೆಲಸ ಮಾಡುವುದು. ಗ್ರಾಮಸಭೆಯು ಎಂ.ಜಿ.ಎನ್.ಆರ್.ಇ.ಜಿ.ಎ ಮೂಲಕ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಅನ್ವೇಷಣೆಗೊಳ್ಳುವ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗ್ರಾಮಪಂಚಾಯತಿಯೂ ಒಳಗೊಂಡಂತೆ ಸಂಬಂಧಿಸಿದ ಇಲಾಖೆಗಳಿಂದ ಎಲ್ಲಾ ಬಗೆಯ ಸೂಕ್ತವಾದ ಮಾಹಿತಿಯನ್ನು ವಿಚಾರಿಸಿ ಪಡೆದುಕೊಳ್ಳಲು ಗ್ರಾಮಸ್ಥರಿಗೆ ವೇದಿಕೆಯನ್ನು ಒದಗಿಸುತ್ತದೆ.

ವಾರ್ಡ್‌ಸಭೆ

ವಾರ್ಡ್‌ಸಭೆಗಳು ಗ್ರಾಮಪಂಚಾಯತಿಗಳಂತೆ ಕಾರ್ಯ ನಿರ್ವಹಿಸುತ್ತವೆ. ಯೋಜನೆ ತಯಾರಿಸಲು ಹಾಗೂ ಅನುಷ್ಠಾನ ಮಾಡಲು ಗ್ರಾಮಪಂಚಾಯತಿ ಪ್ರಮುಖವಾದ ಅಂಗ ಸಂಸ್ಥೆಯಾಗಿರುತ್ತದೆ. ಸಂವಿಧಾನದ ಭಾಗ–9 ಅನ್ವಯಿಸದ ಕಡೆಗಳಲ್ಲಿ ಸ್ಥಳೀಯ ಪರಿಷತ್‌ಗಳು/ಪ್ರಾಧಿಕಾರಗಳು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಆದೇಶಿಸುವಂತೆ ಅದಕ್ಕೆ ಅನುಗುಣವಾಗಿ ಜವಾಬ್ದಾರಿಯುತ ಹೊಣೆ ಹೊತ್ತಿರುತ್ತದೆ. ಕಾರ್ಯಕ್ರಮ ಅಧಿಕಾರಿ (ಪಿ.ಒ) ವೆಚ್ಚವಾಗುವ ಒಟ್ಟು ಮೊತ್ತದ 50ರಷ್ಟು ಕಾಮಗಾರಿಗಳನ್ನು ಅನುಷ್ಠಾನಕ್ಕಾಗಿ ಗ್ರಾಮಪಂಚಾಯತಿಗಳಿಗೆ ಹಂಚಿಕೆ

ಮಾಡಿಕೊಡಬೇಕಾಗಿರುತ್ತದೆ. ಗ್ರಾಮಪಂಚಾಯತಿಯೂ ಈ ಕೆಳಕಂಡ ಚಟುವಟಿಕೆಗಳ ಜವಾಬ್ದಾರಿಯನ್ನು ಹೊಂದಿರುತ್ತದೆ.

1. ನೋಂದಣೆಗಾಗಿ ಅರ್ಜಿಗಳನ್ನು ಸ್ವೀಕರಿಸುವುದು.
2. ನೋಂದಣೆ ಅರ್ಜಿಗಳನ್ನು ಪರಿಶೀಲಿಸುವುದು.
3. ಕುಟುಂಬಗಳನ್ನು ನೋಂದಣೆ ಮಾಡಿಕೊಳ್ಳುವುದು.
4. ಉದ್ಯೋಗದ ಚೀಟಿಗಳನ್ನು ವಿತರಣೆ ಮಾಡುವುದು.
5. ಕೆಲಸಕ್ಕೆ ಅರ್ಜಿಗಳನ್ನು ಸ್ವೀಕರಿಸುವುದು.
6. ಕೆಲಸಕ್ಕಾಗಿ ಸ್ವೀಕರಿಸಿದ ಅರ್ಜಿಗಳಿಗೆ ತಾರೀಖು ನಮೂದಿಸಿದ ರಸೀದಿಗಳನ್ನು ವಿತರಿಸುವುದು.
7. ಅನುಷ್ಠಾನ ಸಂಸ್ಥೆ ಯಾವುದೇ ಆದರೂ, ಅರ್ಜಿಸಲ್ಲಿಸಿದ ಅಥವಾ ದಿನಾಂಕ ಸೂಚಿಸಿದ ಮುಂಗಡವಾಗಿ ಅರ್ಜಿಸಲ್ಲಿಸಿದ, ಇವುಗಳಲ್ಲಿ ಯಾವುದು ಅನಂತರ ಬರುತ್ತದೆಯೆ, ಅಂದಿನಿಂದ ಹದಿನೈದು ದಿನಗಳ ಒಳಗೆ, ಕೆಲಸ ಹಂಚಿಕೆ ಮಾಡುವುದು.
8. ಕೆಲಸಕ್ಕಿರುವ ಬೇಡಿಕೆಯನ್ನು ಅಂದಾಜಿಸಲು ಕಾಲಕಾಲಕ್ಕೆ ಸಮೀಕ್ಷೆ ನಡೆಸುವುದು.
9. ಕಾಮಗಾರಿಗಳನ್ನು ಗುರ್ತಿಸುವುದು ಮತ್ತು ಯೋಜಿಸುವುದು, ಕಾಮಗಾರಿಗಳ ಆದ್ಯತೆಯನ್ನು ಪರಿಗಣಿಸಿ ಕಾಮಗಾರಿ ಗುಚ್ಚವನ್ನು ಸಿದ್ಧಪಡಿಸುವುದು. ಸಿದ್ಧಪಡಿಸಿದ ಪಟ್ಟಿಯನ್ನು ಪರಿಶೀಲನೆ ಹಾಗೂ ಪ್ರಾಥಮಿಕ ಅನುಮೋದನೆಗಾಗಿ ಕಾರ್ಯಕ್ರಮ ಅಧಿಕಾರಿಗೆ ಕಳುಹಿಸಿಕೊಡುವುದು.
10. ನಿಗದಿತವಾದ ತಾಂತ್ರಿಕ ಮಾನದಂಡಗಳು ಮತ್ತು ಅಳತೆಗಳಿಗೆ ಅನುಗುಣವಾಗಿ ಕಾಮಗಾರಿಗಳನ್ನು ಅನುಷ್ಠಾನ ಮಾಡುವುದು.
11. ಅಧ್ಯಾಯ 10ರಲ್ಲಿ ಹೇಳಿರುವಂತೆ ದಾಖಲೆಗಳ ನಿರ್ವಹಣೆಯನ್ನು ಮಾಡುವುದು.
12. ಕೇಂದ್ರ/ ರಾಜ್ಯ ಸರ್ಕಾರಗಳು ನಿಗದಿ ಪಡಿಸಿರುವ ನಮೂನೆಗಳಲ್ಲಿ ಲೆಕ್ಕವನ್ನು ನಿರ್ವಹಿಸುವುದು ಹಾಗೂ ಹಣಬಳಕೆ ಪ್ರಮಾಣ ಪತ್ರಗಳನ್ನು ನೀಡುವುದು.
13. ತನ್ನ ವ್ಯಾಪ್ತಿಯಲ್ಲಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಅಂಕಿ ಅಂಶಗಳನ್ನು ಹಾಗೂ ಸಾಧನೆಯ ವಿವರಗಳನ್ನು ಒಳಗೊಂಡಿರುವ ವರದಿಗಳನ್ನು ಪ್ರತಿವರ್ಷ ಸಿದ್ಧಪಡಿಸುವುದು ಹಾಗೂ ಅದರ ಪ್ರತಿಯನ್ನು ಸಾರ್ವಜನಿಕರಿಗೆ ಕೋರಿಕೆಯ ಮೇಲೆ ಮತ್ತು ಯೋಜನೆಯಲ್ಲಿ ನಿಗದಿ ಪಡಿಸಿರುವ ಶುಲ್ಕವನ್ನು ಪಡೆದುಕೊಂಡ ನಂತರ ನೀಡತಕ್ಕದ್ದು.

14. ಜಾಗೃತಿ ಮೂಡಿಸುವುದು ಮತ್ತು ಸಾಮಾಜಿಕ ಕ್ರೂಢೀಕರಣಕ್ಕೆ ಸಜ್ಜುಗೊಳಿಸುವುದು.

15. ಯೋಜನೆ ತಯಾರಿಸಲು ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆಗಾಗಿ ಗ್ರಾಮಸಭೆಯನ್ನು ಆಯೋಜಿಸುವುದು.

16. ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸಲು ಅನುವಾಗುವಂತೆ ಗ್ರಾಮಸಭೆಗೆ ಹಾಜರಾತಿ ಪಟ್ಟಿ, ಬಿಲ್ಲುಗಳು, ವೋಚರುಗಳು, ಅಳತೆ ಪುಸ್ತಕಗಳು, ಆದೇಶದ ಪ್ರತಿಗಳು, ಹಾಗೂ ಸಂಬಂಧಿಸಿದ ಇತರ ಲೆಕ್ಕದ ಪುಸ್ತಕಗಳು ಮಂಜೂರಾತಿ ಆದೇಶಗಳ ಪ್ರತಿಗಳು ಹಾಗೂ ಸಂಬಂಧಿಸಿದ ಇತರೆ ಲೆಕ್ಕದ ಪುಸ್ತಕಗಳು ಮತ್ತು ಕಾಗದ ಪತ್ರಗಳನ್ನು ಹಾಜರು ಪಡಿಸತಕ್ಕದ್ದು.

17. ಅನುಷ್ಠಾನದ ಮೇಲೆ ಗ್ರಾಮಮಟ್ಟದಲ್ಲಿ ಮೇಲ್ವಿಚಾರಣೆ ಮಾಡುವುದು.

ಜಿಲ್ಲಾಮಟ್ಟದ ಹಂತ

ಜಿಲ್ಲಾ ಕಾರ್ಯಕ್ರಮ ಸಂಘಟನಾಧಿಕಾರಿ : ರಾಜ್ಯ ಸರ್ಕಾರವು ಜಿಲ್ಲಾಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಅಥವಾ ಜಿಲ್ಲಾಧಿಕಾರಿಯನ್ನು ಅಥವಾ ಸೂಕ್ತ ಸ್ಥಾನಮಾನಗಳನ್ನು ಹೊಂದಿರುವ ಜಿಲ್ಲಾ ಹಂತದ ಇತರೆ ಯಾವುದೇ ಅಧಿಕಾರಿಯನ್ನು ಡಿ.ಸಿ.ಪಿ ಯಾಗಿ ಹೆಸರಿಸುತ್ತದೆ. ಎಂ.ಜಿ.ಎನ್.ಆರ್.ಇ.ಜಿ.ಎ–2005 ಹಾಗೂ ಅದರ ಅನ್ವಯ ಹೇಳಲಾಗಿರುವ ನಿಯಮಗಳು ಮತ್ತು ಮಾರ್ಗದರ್ಶಕ ಸೂಚನೆಗಳಂತೆ ಜಿಲ್ಲೆಯಲ್ಲಿ ಸದರಿ ಜವಾಬ್ದಾರಿಗಳನ್ನು ಕೂಡ ನಿರ್ವಹಿಸುತ್ತಾರೆ.

1. ಡಿ.ಸಿ.ಪಿ ತನ್ನ ಕಾರ್ಯಗಳನ್ನು ನಿರ್ವಹಿಸಲು ಸಹಾಯ ಮಾಡುವುದು.

2. ತಾಲ್ಲೂಕು ಪಂಚಾಯತಿ ಯೋಜನೆಗಳನ್ನು ಪಡೆದು ಇತರ ಅನುಷ್ಠಾನ ಸಂಸ್ಥೆಗಳಿಂದ ಪಡೆದ ಯೋಜನೆ ಪ್ರಸ್ತಾವನೆಗಳನ್ನು ಒಟ್ಟುಗೂಡಿಸಿ ಅವುಗಳನ್ನು ಜಿಲ್ಲಾ ಯೋಜನೆಯಲ್ಲಿ ಸೇರಿಸಿ ಜಿಲ್ಲಾ ಪಂಚಾಯತ್ ಅನುಮೋದನೆಗಾಗಿ ಪ್ರಸ್ತುತಪಡಿಸುವುದು.

3. ಕಾಮಗಾರಿಗಳ ಗುಚ್ಛಕ್ಕೆ ಸಕಾಲದಲ್ಲಿ ಮಂಜೂರಾತಿ ನೀಡುವುದು.

4. ತಾಲ್ಲೂಕು ಮತ್ತು ಜಿಲ್ಲಾ ಹಂತಗಳಲ್ಲಿ ಹೊಸದಾಗಿ ಸೇರಿಸಲಾದ ಕಾರ್ಯ ಯೋಜನೆಗಳನ್ನು ಮತ್ತೆ ಪ್ರಸ್ತುತಗೊಂಡು ಆಡಳಿತಾತ್ಮಕ ಮಂಜೂರಾತಿ ಅವುಗಳಿಗೆ ದೊರಕುವುದಕ್ಕಿಂತ ಮುಂಚೆ ಸಂಬಂಧಪಟ್ಟ ಗ್ರಾಮಸಭೆಗಳಿಂದ ಶಿಫಾರಸ್ಸು ಪಡೆದುಕೊಂಡು ಅನಂತರ ಆಧ್ಯತೆ ಪಡೆದುಕೊಳ್ಳುವ ಹಾಗೆ ನೋಡಿಕೊಳ್ಳುವುದು.

5. ಸಕಾಲದಲ್ಲಿ ಹಣಕಾಸು ಬಿಡುಗಡೆಯಾಗುವಂತೆ ಹಾಗೂ ಬಳಕೆಯಾಗುವಂತೆ ನೋಡಿಕೊಳ್ಳುವುದು.

6. ಕಾಯ್ದೆಯಲ್ಲಿರುವಂತೆ ಅರ್ಹತೆಗೆ ಅನುಗುಣವಾಗಿ ಕೂಲಿ ಬಯಸುವರಿಗೆ ಕೆಲಸಗಳು ದೊರಕುವಂತೆ ನೋಡಿಕೊಳ್ಳುವುದು.

7. ಎಂ.ಜಿ.ಎನ್.ಆರ್.ಇ.ಜಿ.ಎ ಕೆಲಸಗಳಿಗೆ ಸಂಬಂಧಪಟ್ಟಂತೆ ಪಿ.ಡಿ.ಓ.ಗಳ ಹಾಗೂ ಅನುಷ್ಠಾನ ಮಾಡುವ ಏಜೆನ್ಸಿಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸುವುದು. ನಿಯಂತ್ರಿಸುವುದು ಹಾಗೂ ಉಸ್ತುವಾರಿ ಮಾಡುವುದು ಈ ಕೆಲಸಗಳನ್ನು ನೋಡಿಕೊಳ್ಳುವುದು.

8. ಪ್ರಗತಿಯಲ್ಲಿರುವ ಕಾಮಗಾರಿಗಳ ಪರಿಶೀಲನೆ ಮಾಡುವುದು ಹಾಗೂ ಹಾಜರಾತಿ ಪಟ್ಟಿಯನ್ನು ತಾಳೆ ಹಾಕಿ ನೋಡುವಂತಹ ಕೆಲಸಗಳನ್ನು ಮಾಡುವುದು. ಅಥವಾ ಕಾಮಗಾರಿಗಳನ್ನು ನಿಯಮವಳಿ ಪ್ರಕಾರ ಆಗುವಂತೆ ನೋಡಿಕೊಳ್ಳುವುದು.

9. ಹಣಕಾಸು ದುರುಪಯೋಗ ಅಥವಾ ಹಣಕಾಸಿಗೆ ಸಂಬಂಧಪಟ್ಟಂತೆ ನಿಯಮಗಳಿಗೆ ಹೊರತಾದ ನಡವಳಿಕೆ ಇವುಗಳಿಗೆ ಮೇಲ್ನೋಟದ ಸಾಕ್ಷಿ ಗಳು ದೊರೆತಾಗ ಪ್ರತಿಯೊಂದು ಸಂದರ್ಭದಲ್ಲಿಯೂ ಪ್ರಾಥಮಿಕ ಮಾಹಿತಿ ವರದಿಯೂ ದಾಖಲಾಗುವಂತೆ ನೋಡಿಕೊಳ್ಳುವುದು.

10. ಯೋಜನೆಯ ಅನುಷ್ಠಾನ ಸಂಸ್ಥೆಗಳನ್ನು ಜಿಲ್ಲೆಯಾದ್ಯಂತ ನೇಮಕಮಾಡುವುದು ಈ ಸಂದರ್ಭದಲ್ಲಿ ಕೆಲಸಗಳಿಗೆ ತಗಲುವ ವೆಚ್ಚದ ಕನಿಷ್ಟ ಶೇಕಡ 50ರಷ್ಟು ಕಾಮಗಾರಿಗಳಿಗೆ ಗ್ರಾಮಪಂಚಾಯತಿಗಳೇ ಯೋಜನೆಯ ಅನುಷ್ಠಾನ ಸಂಸ್ಥೆಗಳಾಗಿರುವಂತೆ ಗಮನವಹಿಸುವುದು.

3.20. ಯೋಜನೆಗಳಿಗೆ ಅನುದಾನ ಹಂಚಿಕೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಬಡತನ ನಿರ್ಮೂಲನೆಯ ಉದ್ದೇಶ ವಿಟ್ಟುಕೊಂಡು ಅನುಷ್ಠಾನಗೊಂಡಿರುವುದು. ಇದು ಒಂದು ಮಹತ್ತರವಾದ ಯೋಜನೆಯಾಗಿದೆ. ಈ ಯೋಜನೆಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಅನುದಾನ ಹರಿದು ಬರುವುದು.

- ಕೇಂದ್ರ ಸರ್ಕಾರದಿಂದ : ಮಾನವ ನಿರ್ಮಿತ ಕೆಲಸಗಳಿಗಾಗಿ ಅರೆ ಕುಶಲ ಕೂಲಿಕಾರರಿಗೆ ನೀಡುವ ಅನುದಾನ ಶೇಕಡ 100ರಷ್ಟು ಕೇಂದ್ರ ಸರ್ಕಾರ ಭರಿಸಿದೆ. ಶೇಕಡ 75ರಷ್ಟು ಸಾಮಾಗ್ರಿಗಳಿಗೆ ಭರಿಸುವುದು. ಕೇಂದ್ರ ಸರ್ಕಾರದ ಮಟ್ಟದ ಆಡಳಿತಾತ್ಮಕ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುವುದು.

- ರಾಜ್ಯ ಸರ್ಕಾರದಿಂದ: ಶೇಕಡ 25ರಷ್ಟು ಅನುದಾನವನ್ನು ಸಾಮಗ್ರಿಗಳಿಗೆ ಮತ್ತು ಕೌಶಲ್ಯ ಅರೆ ಕೌಶಲ್ಯ ಕೂಲಿಕಾರರಿಗೆ ವೇತನ ನೀಡುವುದು. ನಿರುದ್ಯೋಗ ಭತ್ಯೆ ಹಾಗೂ ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ಗ್ರಾಮಪಂಚಾಯತ್ ಮಟ್ಟದ ಆಡಳಿತದ ಖರ್ಚನ್ನು ರಾಜ್ಯ ಸರ್ಕಾರ ಭರಿಸುವುದು.

3.21: ಇದುವರೆಗೂ ಕೇಂದ್ರ ಸರ್ಕಾರ ನಿಗದಿ ಪಡಿಸಿದ ಕೂಲಿ ದರಗಳ ವಿವರಗಳು

ಕೋಷ್ಟಕ: 3.3.

ಇದುವರೆಗೂ ಕೇಂದ್ರ ಸರ್ಕಾರ ನಿಗದಿ ಪಡಿಸಿದ ಕೂಲಿ ದರಗಳ ವಿವರಗಳು

ಕ್ರ.ಸಂ.	ಕೂಲಿ ದರವನ್ನು ನಿಗದಿ ಪಡಿಸಿದ ವರ್ಷ	ದಿನಕ್ಕೆ ನೀಡುವ ಕೂಲಿಯ ಪ್ರಮಾಣ (ರೂಪಾಯಿಯಲ್ಲಿ)	ಷರಾ
01	2006–07	69–00	
02	2007–08	74–00	
03	2008–09	82–00	
04	**2009–10**	**82–00**	ಇಲ್ಲಿ ಕಾಣಿಸಿರುವ ವರ್ಷಗಳಲ್ಲಿ ಪ್ರಸ್ತುತ ಅಧ್ಯಯನ ಕೇಂದ್ರೀಕರಿಸಿದೆ
05	**2010–11**	**100–00**	
06	**2011–12**	**125–00**	
07	**2012–13**	**155–00**	
08	**2013–14**	**174–00**	
09	2014–15	191–00	ಪ್ರಸ್ತುತ ಅಧ್ಯಯನವನ್ನು 2009–10 ರಿಂದ 2013–14ಕ್ಕೆ ಮಿತಿಗೊಳಿಸಿರುವುದರಿಂದ ಇದನ್ನು ಪರಿಗಣಿಸಿರುವುದಿಲ್ಲ
10	2015–16	204–00	
11	2016–17	224–00, 10–00 ರೂ ಹೆಚ್ಚುವರಿ	

ಮಾಹಿತಿಯ ಮೂಲ: htt://www.thehinhu.com/news/national/mnrega-wage

3.22. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ರಚನಾ ಕ್ರಮಗಳು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸಮರ್ಥವಾಗಿ ಅನುಷ್ಠಾನ ಮಾಡಿ ತಳಮಟ್ಟದವರೆಗೆ ವಿಸ್ತರಿಸುವ ಸದುದ್ದೇಶದಿಂದ ಅನುಷ್ಠಾನದ ರಚನಾ ಕ್ರಮವನ್ನು ವಿವಿಧ ಸ್ಥರಗಳಲ್ಲಿ ತನ್ನ ರಚನೆಯು ಕೇಂದ್ರ ಸರ್ಕಾರ ಮೇಲುಸ್ಥರದಲ್ಲಿದ್ದು ಗ್ರಾಮಪಂಚಾಯತಿ ಕೆಳಸ್ಥರದ ಅಥವಾ ತಳಮಟ್ಟದಲ್ಲಿ ರಚನೆಯ ಕ್ರಮವನ್ನು ಹೊಂದಿರುವುದನ್ನು ಕಾಣಬಹುದು.

ಗ್ರಾಮಪಂಚಾಯತಿ ಗ್ರಾಮಪಂಚಾಯತಿ ತಳಮಟ್ಟದಲ್ಲಿ ಒಂದು ನೋಡಲ್ ಏಜೆನ್ಸಿಯಾಗಿ ಕೆಲಸ ಮಾಡುವುದು, ಗ್ರಾಮ ಮಟ್ಟದಲ್ಲಿ ಅಥವಾ ಗ್ರಾಮಪಂಚಾಯತಿ ಮಟ್ಟದಲ್ಲಿ ಒಂದು ಅಧಿಕೃತವಾಗಿ ಶೇಕಡ 50ರಷ್ಟು ಕಾಮಗಾರಿಗಳನ್ನು ಯೋಜನೆ ರೂಪಿಸಿ ಮತ್ತು ವಿನ್ಯಾಸಗೊಳಿಸು ಸಂಪೂರ್ಣ

ಅಧಿಕಾರ ಹೊಂದಿರುವುದು. ಕಾಮಗಾರಿಗಳ ಆಯ್ಕೆ, ಅದರ ಪರಿವೀಕ್ಷಣೆ ಮತ್ತು ಮೌಲ್ಯಮಾಪನ ಮಾಡುವ ಜವಾಬ್ದಾರಿಯನ್ನು ವಹಿಸಿದೆ.

ಎಂ.ಎನ್‌.ಆರ್‌.ಇ.ಜಿ.ಎ ಆರ್ಥಿಕ ಸಾಧನೆ

3.23 ಕರ್ನಾಟಕದ ಮತ್ತು ಅಧ್ಯಯನ ಕ್ಷೇತ್ರದ ಪ್ರಗತಿ ವರದಿಯ ಸಂಕ್ಷಿಪ್ತ ನೋಟ

ಕರ್ನಾಟಕದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅನುಷ್ಠಾನಗೊಂಡಿದ್ದು 2006–07ರಿಂದ ಇಲ್ಲಿಯವರೆಗೆ ಅಧಿಕಾರದ ವಿಕೇಂದ್ರೀಕರಣ ಮೂರು ಶ್ರೇಣಿಗಳಲ್ಲಿ ಜಿಲ್ಲಾ, ತಾಲ್ಲೂಕ್ ಮತ್ತು ಗ್ರಾಮಪಂಚಾಯತಿ ಮಟ್ಟದಲ್ಲಿ ಈ ಕಾಯಿದೆಯ ರೂಪದಲ್ಲಿರುವ ಯೋಜನೆಯನ್ನು ರೂಪಿಸಿಕೊಂಡು ಬಂದಿರುತ್ತದೆ. ಹಾಗೆಯೇ ಕರ್ನಾಟಕದ ರಾಜ್ಯಮಟ್ಟದಲ್ಲಿ ಇದರ ಪ್ರಗತಿಯನ್ನು 2006–07 ರಿಂದ 2014–15ರವರೆಗೆ ನಡೆದಿರುವ ಪ್ರಗತಿಯನ್ನು ವಿಶ್ಲೇಷಣೆ ಮಾಡಲಾಗಿದೆ.

ಕೋಷ್ಟಕ: 3.4.

ಎಂ.ಎನ್‌.ಆರ್‌.ಇ.ಜಿ.ಎ ಕರ್ನಾಟಕದಲ್ಲಿ ಮಾನವ ದಿನಗಳ ಭೌತಿಕ ಪ್ರಗತಿ (ಕೋಟಿಗಳಲ್ಲಿ)

2006–07 ರಿಂದ 2014–15

ವರ್ಷ	ಒಟ್ಟು ಮಾನವ ದಿನಗಳ ಉದ್ಯೋಗ ಸೃಷ್ಟಿ	ಮಹಿಳೆ (ಕೋಟಿ ಗಳಲ್ಲಿ)	ಪ.ಪಂ/ಪ.ಪಂ (ಕೋಟಿ ಗಳಲ್ಲಿ)	ಸರಾಸರಿ 100 ದಿನಗಳ ಉದ್ಯೋಗ ಒದಗಿಸಿದ ಕುಟುಂಬಗಳು
2006–07	2.22	1.12	1.08	41
2007–08	1.97	0.99	0.97	36
2008–09	2.88	1.45	1.19	32
2009–10	20.04	6.85	5.07	57
2010–11	10.98	4.91	2.80	48
2011–12	7.01	3.23	1.68	42
2012–13	6.21	2.87	1.60	46
2013–14	7.18	3.34	1.71	50
2014–15	9.34	4.68	1.20	41
ಒಟ್ಟು	67.83	29.44	17.30	–

Source: Gangadhara Reddy Y1and Aswath G.R.2: Performance of Mahatma Gandhi National Rural Employment Guarantee Act in Karnataka, India

Source: Gangadhara Reddy Y1and Aswath G.R.2: Performance of Mahatma Gandhi National Rural Employment Guarantee Act in Karnataka, India

3.24 ಕರ್ನಾಟಕದ ಎಂ.ಜಿ.ಎನ್.ಅರ್.ಇ.ಜಿ.ಎ ಯ ಆರ್ಥಿಕ ಪ್ರಗತಿ

ಕೋಷ್ಟಕ : 3.5

ಕರ್ನಾಟಕದ ಎಂ.ಜಿ.ಎನ್.ಅರ್.ಇ.ಜಿ.ಎ ಯ ಆರ್ಥಿಕ ಪ್ರಗತಿ (ಕೋಟಿಗಳಲ್ಲಿ)

ವರ್ಷ	ಒಟ್ಟು ಲಭ್ಯವಿದ್ದ ಅನುದಾನ (ಕೋಟಿಗಳಲ್ಲಿ)	ಒಟ್ಟು ಖರ್ಚಾದ ಅನುದಾನ (ಕೋಟಿಗಳಲ್ಲಿ)	ಶೇಕಡ ಬಳಕೆಯಾದ (ಕೋಟಿಗಳಲ್ಲಿ)
2006–07	341.31	248.30	73
2007–08	436.72	236.51	54
2008–09	727.33	373.61	51
2009–10	3407.30	2569.20 75	75
2010–11	2587.90	2116.29	82
2011–12	1957.01	1528.25	78
2012–13	1788.76	1456.86	81
2013–14	2192.94	2097.70	95
2014–15	1590.40	1222.78	77

Source: Gangadhara Reddy Y1and Aswath G.R.2: Performance of Mahatma Gandhi National Rural Employment Guarantee Act in Karnataka, India

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಯೋಜನೆಯನ್ನು ಪ್ರಸ್ತುತ ಅಧ್ಯಯನ ಕ್ಷೇತ್ರವಾದ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಬೆಲವತ್ತ ಗ್ರಾಮಪಂಚಾಯತಿ ಮತ್ತು ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಈ ಯೋಜನೆ ಅನುಷ್ಠಾನಗೊಂಡಿರುತ್ತದೆ. 2013–14ರ ಸಾಲಿನಲ್ಲಿ ಈ ಎರಡು ಗ್ರಾಮಪಂಚಾಯತಿಗಳು ಭೌತಿಕ ಪ್ರಗತಿಯ ಸಾಧನೆಯನ್ನು ಈ ಕೆಳಕಂಡ ಕೋಷ್ಟಕದಲ್ಲಿ ತರಲಾಗಿದೆ. ಅದರಲ್ಲಿ ಪ್ರಮುಖವಾಗಿ ಉದ್ಯೋಗದ ಚೀಟಿಗಳನ್ನು ವಿತರಿಸಿರುವುದರ ಮತ್ತು ಒಂದು ಆರ್ಥಿಕ ವರ್ಷದಲ್ಲಿ ಗ್ರಾಮಪಂಚಾಯತಿಗಳು ನೀಡಿರುವ ಉದ್ಯೋಗದ ಭೌತಿಕ ಪ್ರಗತಿಯನ್ನು ತಿಳಿಸಲಾಗಿದೆ.

3.25. ಉದ್ಯೋಗದ ಚೀಟಿ ವಿತರ(2013-14)

ಕೋಷ್ಟಕ : 3.6

ಉದ್ಯೋಗದ ಚೀಟಿ ವಿತರ (2013-14)

ಗ್ರಾಮ ಪಂಚಾಯತಿ	ಕುಟುಂಬಗಳಿಗೆ ಉದ್ಯೋಗದ ಚೀಟಿ ನೀಡಿರುವುದರ ವಿವರ				ಉದ್ಯೋಗದ ಬೇಡಿಕೆ	ಉದ್ಯೋಗ ನೀಡಿರುವುದು
	ಪ.ಜಾತಿ	ಪ.ಪಂ	ಇತರೆ	ಒಟ್ಟು		
ಬೆಲವತ್ತ	175	30	681	886	447	391
ದೊಡ್ಡೇರಿ	282	71	1372	1725	1360	1297

3.26 ಉದ್ಯೋಗ ನೀಡಿರುವುದರ ವಿವರ (2013-14)

ಕೋಷ್ಟಕ : 3.7

ಉದ್ಯೋಗ ನೀಡಿರುವುದರ ವಿವರ (2013-14)

ಗ್ರಾಮ ಪಂಚಾಯತಿ	ಕುಟುಂಬಗಳಿಗೆ ಉದ್ಯೋಗದ ಚೀಟಿ ನೀಡಿರುವುದರ ವಿವರ				ಮಹಿಳೆ	ಕುಟುಂಬಗಳಿಗೆ 100 ದಿನಗಳ ನೀಡುವುದರ ವಿವರ
	ಪ.ಜಾತಿ	ಪ.ಪಂ	ಇತರೆ	ಒಟ್ಟು		
ಬೆಲವತ್ತ	2938	586	10820	14344	6497	06
ದೊಡ್ಡೇರಿ	11789	3627	85656	101072	48286	387

ಜೀವನ ಭದ್ರತೆಗಾಗಿ ಹುಡುಕಾಟ, ತಡಕಾಟದ ಸ್ವರೂಪಗಳು ಇಂದು ನಿನ್ನೆಯದಲ್ಲ. ಈ ತಡಕಾಟಕ್ಕೆ ಮಾನವ ಚರಿತ್ರೆಯಲ್ಲಿ ಬಹಳ ದೊಡ್ಡ ಇತಿಹಾಸ ಇರುವುದನ್ನು ಹಲವು ಸಂಶೋಧನೆಗಳು ಗುರುತಿಸಿವೆ. ಹಸಿವು, ಬಡತನ, ನಿರುದ್ಯೋಗ, ಅರೆ ಉದ್ಯೋಗ, ಅಪೌಷ್ಟಿಕತೆ, ಆಹಾರದ ಭದ್ರತೆ ಮತ್ತು ಅನಾರೋಗ್ಯ ಇನ್ನೂ ಮುಂತಾದ ಸಮಸ್ಯೆಗಳಿಗೆ ರಚನಾತ್ಮಕ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಪರಿಹರಿಸಲು ಪ್ರಯತ್ನ ನಡೆದಿರುವುದನ್ನು ಅಧ್ಯಯನಗಳು ಗುರುತಿಸಿವೆ. ಬಡತನದ ಸ್ವರೂಪಗಳಿಗೆ ಅನುಗುಣವಾಗಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ ಪ್ರಯತ್ನಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ನಿರಂತರವಾಗಿ ನಡೆಯುತ್ತಿವೆ. ಇದು ಅಭಿವೃದ್ಧಿ ಯೋಜನೆಗಳ ಆಯಾಮಗಳನ್ನು ಮತ್ತು ಅವುಗಳ ಚೌಕಟ್ಟನ್ನು ಬದಲಾಯಿಸುತ್ತಲೇ ಬಂದಿದೆ. ಇಂತಹ ಅನುಭವಗಳ ಆಧಾರದಲ್ಲಿಯೇ ಭಾರತ ಸರ್ಕಾರ 2005ರಲ್ಲಿ ಎಂ.ಜಿ.ಎನ್.ಆರ್.ಇ.ಜಿ. ಕಾಯಿದೆ ಜಾರಿಗೆ ತಂದು ಅನುಷ್ಠಾನಮಾಡಿದೆ. ಇದರ ಮೇಲೆ ನಡೆದ ಸಂಶೋಧನಾ ಅಧ್ಯಯನಗಳು ಅದರ ಸಾಧನೆ ಮತ್ತು ವೈಫಲ್ಯಗಳೆರಡನ್ನು ಗುರುತಿಸಿದೆ. ಪ್ರಸ್ತುತ ಅಧ್ಯಯನವು ಅಧ್ಯಯನ ಕ್ಷೇತ್ರದಲ್ಲಿ ಎಂ.ಜಿ.ಎನ್.ಆರ್.ಇ.ಜಿ.

ಕಾಯಿದೆ ಅನುಷ್ಠಾನವು ಅಭಿವೃದ್ಧಿಯ ವೇಗವನ್ನು ಹೇಗೆ ಹೆಚ್ಚಿದೆಯೋ ಅಥವಾ ಕಡಿಮೆ ಮಾಡಿದೆಯೋ ಎನ್ನುವುದನ್ನು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸುತ್ತದೆ.

ಕೊನೆಯ ಟಿಪ್ಪಣಿಗಳು

1. Indian exclusion report, 2014.
2. Pinstrup-Anderson P.,ad 1988- Food subsidies in developing countries Costs, benefits and policy options. Baltimore, Md., U.S.A – Johns Hopkins University press for the International Food policy Research Institute.
3. Lipton M., and J. Van der Gaag , eds .1993 Including the poor Washington, DC : World Bank.
4. Lewis , WA 1955 The theory of economic growth , Home wood, Ill., U.S.A .: Richard D.Irwin.
5. Schultz T.W., 1981. Investing in people: The economics of population quality, Berkely, Calif, U.S.A .: University of California Press.
6. Streeten P., 1981 First things first : Meeting basic human needs in developing countries. Oxford : Oxford University Press.
7. Mellor , J. W 1986. Agriculture on the road to industrialization . In Development strategies reconsidered ,ed. J.P .Lewis and V. kallab. U.S.A.: Transaction Books.
8. Bardhan , P., ed. 1989. The economic theory of agrarian institutions. Oxford: Clarendon Press .
9. Todaro M.P., 1989 Economic developmentin the Third world New York : Longman.
10. I.L.O (International Labour office) 1986 Economically active population estimates ; 1950-1980 : projections 1985-2025. Six volume . geneva.
11. Strauss , J., and D Thomas . 1994 : Human resources .Empirical modeling of household and family decisions For handbook of development economies ,

vol.3, ed T.N Srinivasan and J.R Behrman. Working Paper Series 97-07 .Santa Monica , Calif ., U.S.A .: Rand ,Labour and population programme.

12. Flinn, M.W. 1961 The poor Employment Act of 1817. Economic History Review. 14: 82-92

13. Burki, S.J ., D.G .Davies ,R.H Hook and J.W Thomas 1976 public works programmes in developing countries . A comparative analysis World Bank staff Paper 224 . Washington , D.C .: world Bank.

14. Gaude,J., A. Guichoana, B, Martens , and S. Miller.1987 Rural development and Labor – intensive schemes : Impact studies of some pilot programmes . International Labor Review 126(4) : 423 -446.

15. Clay , E.J. 1986 Rural public works and food for work : A survey world Development 14(10/11) : 1237-1252.

16. Hossain. M., and M Akash 1993 Rural public works for relief and development: A review of Bangladesh experience working papers on Food subsidies 7. Washington ,D.C .: International Food Policy Research institute.

17. Braun ,J. von, T. Teklu and p, webb , 1991 .Labour – Intensive public works for food security: Experience in Africa Working papers on Food security: experiencein Africa .Working Papers on Food subsidies 6.washington ,D.C .: International Food policy Research institute,

18. Braunn ,J. von and E. kannedy. 1994, commercialization of agriculture,economic development and nutrition Baltimore , Md ., U.S.A .: Johns Hopkins University press for the International Food Policy Research Institute.

19. Report: www. Fao-ilo.org/fao –ilo-youth / fao-ilo-jffls/en page No 1

20 NFHS-3(2007) : 2005-06 National Family Health survey , Ministry of Health and Family welfare, Government of India.

21 Report: World bank (2007) :World Development Indicators 2007.

22 Sen ,G ., A .Iyer and A. George(2002): class ,Gender and Health Equity Lessons

from Liberalisation in India Harvard centre for population and Development studies , working paper series ,vol. 12 ,No .3.

23 Swaminathan M S (2011) "To the hungry , god is bread" The Hindu paper October 1 2011

24 Dreze , Jean (2009) , "NREGA is not artificial employment" Civil society May 2009; 7-8,

25 Moitri Dey. National Rural Employment Guarantee Act(NREGA) A Range of Possibilities. International Journal of RuralStudies(IJRS) vol.17 no.2 Oct 2010

26 Gangadhara Reddy Y1and Aswath G.R.2,(2016),Performance of Mahatma Gandhi National Rural Employment Guarantee Act in Karnataka, India,International Research Journal of Social Sciences,www.isca.in

27 Baisakh, P. (2007). Has NREGA Reduced Poverty in Orissa?, *Odishadiary,* July 23,

28 Dey, *S.* and Bedi, A. *(*2010). 'The National Rural Employment Guarantee Scheme in Birbhum, *Economic and Political Weekly,* XLV (41). Pp: 19-25.

29 Dreze J. (2007). NREGA: Dismantling the contractor raj *The Hindu*, 20th November.

30 Indian Institute of Technology, Madras, Chennai (2009). Evaluation of National Rural Employment Guarantee Act: In Districts: Cuddlore, Dindugal, Kanchipuram, Nagai, Thiruvalallur: State: TamilNadu, May.

31 Jain,S.P. (2001). "Emerging Institutions for Decentralized Rural Development", NIRD Publication, Hyderabad.

32 Karalay, G.N. (2005). "Integrated Approach to Rural Development: Policies, Programmes and strategies", Concept Publishing Company, New Delhi.

33 Kashyap, C. L. (1989). "Management and Planning of Rural Development in India", Sterling publishers, New Delhi.

34 Khan, A. U. and Saluja, M.R. (2007). *Impact of MNREGA on Rural Livelihoods*, Paper Presented in 10thSustainable Development Conference on Sustainable Solutions: A Spotlight on South Asian Research, Islamabad, Pakistan, December10-12.

35 Mathur, L. (2009). Silent but successful initiative, *The Hindu*. 1st March.

36 Afridi, F. (2008). Can Community Monitoring Improve the Accountability of Public O_cials.Economic and Political Weekly, 35{40.

37 Angelucci, M. and G. D. Giorgi (2009). Indirect E_ects of an Aid Program: How do CashInjections A_ect Ineligibles' Consumption? American Economic Review 99 (1), 486{508.

38 Ashish, R. and K. Bhatia (2009). Alternative to Migration. Frontline 16.Association for Indian Development (2009). Key Observations on NREGA work in Andhra Pradesh. Availableat http://aidindia.org/main/content/view/y88/279/.

39 Azam, M. (2011). The Impact of Indian Job Guarantee Scheme on Labor Market Outcomes:Evidence from a Natural Experiment. Working Paper.

40 Badiani, R. and A. Sa_r (2009). Coping with Aggregate Shocks: Temporary Migration andOther Labor Responses to Climactic Shocks in Rural India, Chapter 2. Oxford UniversityPress.

41 Banerjee, A. and E. Duo (2007). The Economic Lives of the Poor. Journal of EconomicPerspectives 21 (1), 141{167.

42 Basu, A. K. (2011). Impact of Rural Employment Guarantee Schemes on Seasonal Labor

43 http://www.gov.in

44 http://www.nrega.net

45 http://www.nrega.nic.in/guidelines.htm

46 Source:Gangadhara Reddy Y1and Aswath G.R.2: Performance of Mahatma

47 Gandhi National Rural Employment Guarantee Act in Karnataka, India

48 Source: Gangadhara Reddy Y1and Aswath G.R.2: Performance of Mahatma Gandhi National Rural Employment Guarantee Act in Karnataka, India .

49 Nikhil Day, Jean Dreze and Reetika Khera, (2006), Employment Guarantee Act, National Book Trust, India A-5 Green Park, New Delhi-110016

50 ಬೋಧಕರು ಮತ್ತು ತರಬೇತಿ ಸಮಾಲೋಚಕರು, (2011), ಮಗಾರಾಗ್ರಾಉಖಾಯೋ, ಅಬ್ದಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಲಲಿತ ಮಹಾಲ್ ರಸ್ತೆ, ಮೈಸೂರು.

ಅಧ್ಯಾಯ ನಾಲ್ಕು

ಪ್ರತಿವರ್ತಿಗಳ ಸಾಮಾಜಿಕ–ಆರ್ಥಿಕ ಹಿನ್ನೆಲೆ

ಅಧ್ಯಾಯ ನಾಲ್ಕು

ಪ್ರತಿವರ್ತಿಗಳ ಸಾಮಾಜಿಕ–ಆರ್ಥಿಕ ಹಿನ್ನೆಲೆ

4.1. ಲಿಂಗ ಮತ್ತು ವಯಸ್ಸಿನ ವಿವರ

ಲಿಂಗ ಮತ್ತು ವಯಸ್ಸು ಪ್ರಸ್ತುತ ಅಧ್ಯಯನದಲ್ಲಿ ಪ್ರಮುಖ ಪಾತ್ರವಹಿಸುವುದು. ಕಾಯಿದೆಯ ಪ್ರಕಾರ ಉದ್ಯೋಗ ನೀಡುವಲ್ಲಿ ಉದ್ಯೋಗ ಬಯಸುವ ವಯಸ್ಕರಿಗೆ ಉದ್ಯೋಗ ನೀಡಬೇಕಾಗಿರುತ್ತದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಲ್ಲಿ 'ವಯಸ್ಕರಿಗೆ' ಎಂದು ಬಳಕೆ ಮಾಡಿದೆ. ಭಾರತದ ಸಂವಿಧಾನದಲ್ಲಿ ಮತ್ತು ಜನಗಣತಿಯ ವರದಿಯಲ್ಲಿ ವಯಸ್ಕರು ಎಂಬ ಪರಿಕಲ್ಪನೆ 18 ವರ್ಷದ ಮೇಲ್ಪಟ್ಟಿರುವವರಿಗೆ ವಯಸ್ಕರು ಎಂದು ವಿವರಣೆ ನೀಡಿರುತ್ತಾರೆ. ಈ ಪ್ರಸ್ತುತ ಅಧ್ಯಯನದಲ್ಲಿ ಇದನ್ನೇ ಅರ್ಥ ಮಾಡಿಕೊಳ್ಳಲಾಗಿದೆ. ಲಿಂಗ ಎನ್ನುವುದರ ಮಹತ್ವ ಪುರುಷರಿಗೆ ಮತ್ತು ಸ್ತ್ರೀಯರಿಗೆ ಸಮಾನವಾದ ಕೂಲಿ. ಸಮಾನವಾದ ಕೆಲಸ ನೀಡುವ ಹಕ್ಕನ್ನು ಕಲ್ಪಿಸಿದೆ. ಲಿಂಗವು ಮನುಷ್ಯನಿಗೆ ಮೂಲಭೂತವಾದ ಪ್ರಾಥಮಿಕ ಅಂಶವಾಗಿದ್ದು, ಇದು ಸಾಮಾಜಿಕ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಲಿಂಗ ಮತ್ತು ವಯಸ್ಸು ಮುಂದಿನ ಜೀವನದ ಎಲ್ಲಾ ಹಂತಗಳಲ್ಲಿ ಹಾಗು ಹೋಗುಗಳಲ್ಲಿ ಪ್ರಥಮವೂ ಮತ್ತು ಪ್ರಮುಖ ಪಾತ್ರವಹಿಸುವುದು.

ಕೋಷ್ಟಕ: 4.1


ಲಿಂಗ ಮತ್ತು ವಯಸ್ಸಿನ ವಿವರ

ವಯಸ್ಸು	ಬೆಲವತ್ತ				ದೊಡ್ಡೇರಿ				ಒಟ್ಟು	
	ಪುರುಷ	ಶೇಕಡ	ಸ್ತ್ರೀ	ಶೇಕಡ	ಪುರುಷ	ಶೇಕಡ	ಸ್ತ್ರೀ	ಶೇಕಡ	ಒಟ್ಟು	ಶೇಕಡ
18 ರಿಂದ ಕೆಳಗೆ	1	0.68		0.00	1	0.64		0.00	2	0.50
18–30	14	9.52	9	16.98	12	7.64	12	27.91	47	11.75

ವಯಸ್ಸು	ಬೆಲವತ್ತ				ದೊಡ್ಡೇರಿ				ಒಟ್ಟು	
	ಪುರುಷ	ಶೇಕಡ	ಸ್ತ್ರೀ	ಶೇಕಡ	ಪುರುಷ	ಶೇಕಡ	ಸ್ತ್ರೀ	ಶೇಕಡ	ಒಟ್ಟು	ಶೇಕಡ
30–40	46	23.13	15	28.30	35	22.29	12	27.91	96	24.00
40ರ ಮೇಲ್ಪಟ್ಟು	134	66.67	29	54.72	109	69.43	19	44.19	255	63.75
ಒಟ್ಟು	200	100.00	53	100.00	200	100.00	43	100.00	400	100.00

ರೇಖಾಚಿತ್ರ: 6

ಲಿಂಗ ಮತ್ತು ವಯಸ್ಸಿನ ವಿವರ



ಕೋಷ್ಟಕದ ಸಂಖ್ಯೆ 4.1.ರಲ್ಲಿ ವ್ಯಕ್ತವಾಗುವ ಅಂಶವೆಂದರೆ ಲಿಂಗಕ್ಕೆ ಸಂಬಂಧಿಸಿದಂತೆ ಗುಬ್ಬಿ ತಾಲ್ಲೂಕಿನ ಬೆಲವತ್ತ ಗ್ರಾಮಪಂಚಾಯತಿ ಮತ್ತು ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮಪಂಚಾಯತಿಯ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಅದರ ಅನ್ವಯ ಮೇಲಿನ ಕೋಷ್ಟಕವು ತಿಳಿಸುವುದೇನೆಂದರೆ, 40 ವರ್ಷದವರ ಮೇಲ್ಪಟ್ಟ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 66.67ರಷ್ಟು ಕಂಡು ಬಂದಿದೆ. ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 69.43ರಷ್ಟು ಇರುವುದು ಕಂಡುಬಂದಿದೆ. ಒಟ್ಟಾರೆ ಎರಡು ಪಂಚಾಯತಿಗಳಲ್ಲಿ 40 ವಯಸ್ಸಿನವರು ಶೇಕಡ 63.75ರಷ್ಟು ಕಂಡು ಬಂದಿದ್ದು ಬಹುಸಂಖ್ಯಾ ಪ್ರಮಾಣದಲ್ಲಿರುವುದು ಕಂಡುಬಂದಿದೆ.

4.2. ವೈವಾಹಿಕ ಸ್ಥಿತಿ

ವಿವಾಹ ಸಾಮಾಜಿಕ ಸಂಸ್ಥೆಗಳಲ್ಲಿ ಒಂದು, ಮಾನವನ ಮೂಲಭೂತ ಸಂಸ್ಥೆಗಳಲ್ಲಿ ಒಂದು ಆಗಿದ್ದು, ಹಿಂದು ಸಂಸ್ಕೃತಿಯ ಪ್ರಕಾರ ಮಾನವ ವೈವಾಹಿಕ ಜೀವನದ ನಂತರ ಪರಿಪೂರ್ಣ ವ್ಯಕ್ತಿಯಾಗುತ್ತಾನೆ. ಹಾಗೂ ಆನಂತರ ಕುಟುಂಬ, ಹೆಂಡತಿ ಮಕ್ಕಳ ಪೋಷಣೆ ಜವಾಬ್ದಾರಿಯನ್ನು

ನಿರ್ವಹಿಸುತ್ತಾನೆ. ಈ ಸಲುವಾಗಿ ಉದ್ಯೋಗ ಅನಿವಾರ್ಯವಾಗಿದ್ದು, ಅದಕ್ಕಾಗಿ ರೈತರು ಕೈಗಾರಿಕ ಕ್ಷೇತ್ರಗಳಿಗೆ ಮತ್ತು ಇತರೆ ಮೂಲಗಳಿಂದ ದುಡಿಮೆಯನ್ನು ಪ್ರಾರಂಭಿಸಿ ಮನೆ ನಿರ್ವಹಣೆ ಮಾಡುತ್ತಾನೆ. ಆದರೆ ಪ್ರಸ್ತುತ ಕ್ಷೇತ್ರಗಳು ಮನುಷ್ಯನಿಗೆ ಉದ್ಯೋಗ ಸೃಷ್ಟಿಸುವಲ್ಲಿ ವಿಫಲತೆಯನ್ನು ಕಂಡಿದ್ದು, ಬಡತನ ತೀವ್ರತೆಯನ್ನು ಪಡೆದುಕೊಂಡಿದೆ. ಈ ಸಂದರ್ಭದಲ್ಲಿ ಉದ್ಯೋಗವು ಮಾನವನ ಜೀವನ ನಿರ್ವಹಣೆಯ ಒಂದು ಹಂತವಾಗಿದೆ. ಪ್ರಸ್ತುತ ಸಂಶೋಧನೆಗೆ ವೈವಾಹಿಕ ಅಂತಸ್ತು ಯಾವ ರೀತಿ ಸಹಾಯ ಮಾಡುತ್ತದೆ ಎನ್ನುವುದನ್ನು ತಿಳಿಯುವ ಉದ್ದೇಶ ಈ ಭಾಗದಲ್ಲಿ ತಿಳಿಸಲಾಗಿದೆ. ಕೆಳಗಿನ ಕೋಷ್ಟಕ ಪ್ರತಿವರ್ತಿಗಳ ವೈವಾಹಿಕ ಅಂತಸ್ತನ್ನು ತಿಳಿಸುತ್ತದೆ.


ಕೋಷ್ಟಕ : 4.2

ವೈವಾಹಿಕ ಸ್ಥಿತಿ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	**ಶೇಕಡ**	**ಆವೃತ್ತಿ**	**ಶೇಕಡ**	**ಆವೃತ್ತಿ**	**ಶೇಕಡ**
ವಿವಾಹಿತ	190	95.00	194	97.00	384	96.00
ಅವಿವಾಹಿತ	10	5.00	6	3.00	16	4.00
ಒಟ್ಟು	200	100.00	200	100.00	400	100.00

ರೇಖಾಚಿತ್ರ: 7

ವೈವಾಹಿಕ ಸ್ಥಿತಿ



ಕೋಷ್ಟಕ 4.2.ಸೂಚಿಸುವಂತೆ ಪ್ರತಿವರ್ತಿಗಳ ವೈವಾಹಿಕ ಸ್ಥಿತಿಯು ಶೇಕಡ 90ಕ್ಕಿಂತಲೂ ಹೆಚ್ಚು ವಿವಾಹಿತರೇ ಆಗಿದ್ದಾರೆ. ಈ ಎರಡು ಪಂಚಾಯತಿಗಳಲ್ಲಿ ಸಾಮಾನ್ಯವಾಗಿ ವಿವಾಹಿತರು ಸರ್ಕಾರದ ಉದ್ಯೋಗ ಖಾತರಿ ಯೋಜನೆಯ ಸೌಲಭ್ಯ ಪಡೆಯುವ ನಿಟ್ಟಿನಲ್ಲಿ ಮುಂದಾಗಿದ್ದಾರೆ.

4.3. ಶೈಕ್ಷಣಿಕ ಅಂತಸ್ತು

ಶಿಕ್ಷಣ ಮಾನವನಿಗೆ ಅತ್ಯಗತ್ಯವಾಗಿದ್ದು ಶಿಕ್ಷಣದಿಂದ ವ್ಯಕ್ತಿ ಅಭಿವೃದ್ಧಿ ಸಾಧಿಸಲು ಉಪಯುಕ್ತ ಸಾಧನವಾಗಿದೆ. ಅಂತೆಯೇ ಶಿಕ್ಷಣ ಪಡೆದವರು ಅಭಿವೃದ್ಧಿಯ ಮುಂಚೂಣಿಯಲ್ಲಿದ್ದು, ಅವಿದ್ಯಾವಂತರು. ಅಭಿವೃದ್ಧಿಯ ಚಲನೆಯಲ್ಲಿ ಹಿಂದುಳಿದಿರುವುದು ಸಾಮಾನ್ಯ ಸಂಗತಿಯಾಗಿದೆ. ಏಕೆಂದರೆ ಅನೇಕ ಬುದ್ಧಿ ಜೀವಿಗಳು ಶಿಕ್ಷಣದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ್ದು ಇಂದಿಗೂ ಸೂಕ್ತತೆಯನ್ನು ಕಾಪಾಡಿಕೊಂಡಿದೆ. ಪ್ರಸ್ತುತ ಸಂಶೋಧನಾ ಕೇಂದ್ರವಾದ ಮಧುಗಿರಿ ಮತ್ತು ಗುಬ್ಬಿ ತಾಲ್ಲೂಕಿನ ದೊಡ್ಡೇರಿ ಮತ್ತು ಬೆಲವತ್ತ ಪಂಚಾಯತಿಯಲ್ಲಿ ಉದ್ಯೋಗ ಖಾತರಿ ಯೋಜನೆಯ ಸೌಲಭ್ಯ ಪಡೆಯುವಲ್ಲಿ ಅಕ್ಷರಸ್ಥರು ಅಥವಾ ಅನಕ್ಷರಸ್ಥರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೋ ಎನ್ನುವ ಅಂಶವನ್ನಿಟ್ಟುಕೊಂಡು ಮಾಹಿತಿ ಪಡೆಯಲಾಗಿದೆ. ಈ ಮೂಲಕ ಕಾಯಿದೆಯ ನಿಯಮಗಳು ಮತ್ತು ವಿಕೇಂದ್ರೀಕರಣದ ಅಧಿಕಾರಗಳು ಏನು ಎಂಬುದನ್ನು ಶಿಕ್ಷಣದಿಂದ ತಿಳಿಯುತ್ತದೆ. ಪೂರಕವಾಗಿ ಕೆಳಗಿನ ಕೋಷ್ಟಕ ಪ್ರತಿವರ್ತಿಗಳ ಶೈಕ್ಷಣಿಕ ಅಂತಸ್ತನ್ನು ಸೂಚಿಸುತ್ತದೆ.


ಕೋಷ್ಟಕ: 4.3

ಶೈಕ್ಷಣಿಕ ಅಂತಸ್ತು

ಶಿಕ್ಷಣದ ಮಟ್ಟ	ಬೆಲವತ್ತ	ಶೇಕಡ	ದೊಡ್ಡೇರಿ	ಶೇಕಡ	ಒಟ್ಟು	ಶೇಕಡ
ಪ್ರಾಥಮಿಕ	29	14.50	39	19.5	68	17.00
ಮಾಧ್ಯಮಿಕ	24	12.00	27	13.5	51	12.75
ಪ್ರೌಢಶಾಲೆ	38	19.00	41	20.5	79	19.75
ಪಿ.ಯು.ಸಿ	16	8.00	23	11.5	39	9.75
ಪದವಿ	6	3.00	13	6.5	19	4.75
ವೃತ್ತಿಪರ		0.00	4	2	4	1.00
ವೃತ್ತಿಪರವಲ್ಲದ		0.00	1	0.5	1	0.25
ಶಾಲೆಗೆ ದಾಖಲೆ ಯಾಗದಿರುವುದು.	87	43.50	52	26	139	34.75
ಒಟ್ಟು	200	100.00	200	100	400	100.00

ರೇಖಾಚಿತ್ರ: 8

ಶೈಕ್ಷಣಿಕ ಅಂತಸ್ತು



ಕೋಷ್ಟಕ 4.3.ರಲ್ಲಿ ಪ್ರತಿವರ್ತಿಗಳ ಶೈಕ್ಷಣಿಕ ಅಂತಸ್ತನ್ನು ಸೂಚಿಸುತ್ತದೆ. ಶೇಕಡ 34.75 ಪ್ರತಿವರ್ತಿಗಳು ಶಾಲೆಗೆ ದಾಖಲೆಯೇ ಆಗಿಲ್ಲದ್ದು ಕಂಡುಬಂದಿದೆ. ಎರಡು ಗ್ರಾಮಪಂಚಾಯತಿಗಳಲ್ಲಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಹೆಚ್ಚಿನ ಪ್ರಮಾಣದ ಅವಿದ್ಯಾವಂತರು ಕಂಡು ಬರುತ್ತಾರೆ. ಅಂತಯೇ ಶೇಕಡ 19ರಷ್ಟು ಪ್ರೌಢಶಾಲಾ ಶಿಕ್ಷಣ ಪಡೆದವರಾಗಿರುತ್ತಾರೆ. ನಂತರದ ಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರಾಗಿದ್ದು (ಶೇಕಡ 17ರಷ್ಟು). ಒಟ್ಟಾರೆ ಅಧ್ಯಯನದಿಂದ ಕಂಡುಬಂದಿರುವ ಅಂಶವೆಂದರೆ ಅವಿದ್ಯಾವಂತರು ಅಂದರೆ ಶಾಲೆಗೆ ದಾಖಲಾತಿ ಪಡೆದಿಲ್ಲದವರು ಹೆಚ್ಚು ಜನ ಉದ್ಯೋಗ ಖಾತರಿ ಯೋಜನೆಯ ಸಹಾಯದ ನಿರೀಕ್ಷೆಯಲ್ಲಿದ್ದಾರೆ. ಉಳಿದಂತೆ ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢಶಾಲೆ ಶಿಕ್ಷಣ ಪಡೆದಿದ್ದು, ಕೇವಲ ಶೇಕಡ 9.75, ಶೇಕಡ 4.75 ಮತ್ತು ಶೇಕಡ 1ರಷ್ಟು ಪ್ರತಿವರ್ತಿಗಳು ಪಿಯುಸಿ, ಪದವಿ ಮತ್ತು ವೃತ್ತಿಪರಶಿಕ್ಷಣ ಪಡೆದವರಾಗಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಕಂಡುಬಂದಿರುವ ಅಂಶವೆಂದರೆ ಉನ್ನತ ಶಿಕ್ಷಣ ಮತ್ತು ವೃತ್ತಿಪರಶಿಕ್ಷಣ ಪಡೆದವರು ಕೂಡ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಸೌಲಭ್ಯ ಪಡೆಯುವಲ್ಲಿ ಮುಂದಾಗಿದ್ದಾರೆ ಎಂದು ತಿಳಿಯುತ್ತದೆ.

4.4. ಧಾರ್ಮಿಕ ಅಂತಸ್ತು

ಧರ್ಮೋ ರಕ್ಷಿತೋರಕ್ಷಿತ ಪ್ರಕಾರ ಮನುಷ್ಯನಿಗೆ ಧರ್ಮ ಅತ್ಯಗತ್ಯ ಅಲ್ಲದೆ ಧರ್ಮ ವ್ಯಕ್ತಿಯನ್ನು ಗುರುತಿಸುವ ಸಾಧನವಾಗಿದೆ. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿ ತನ್ನ ಜೀವನಾದ್ಯಂತ ಒಂದು ಧರ್ಮಕ್ಕೆ ಬದ್ಧನಾಗಿರಲೇಬೇಕಾಗಿದೆ. ಈ ಬದ್ಧತೆ ಆತನನ್ನು ಅಭಿವೃದ್ಧಿಯೆಡೆಗೆ ಸಾಗಿಸುವುದಲ್ಲದೆ ಅನಾಭಿವೃದ್ಧಿ ಯೆಡೆಗೆ ಕೂಡ ದೂಡಲ್ಪಡುತ್ತದೆ. ಗ್ರಾಮೀಣದ ತಳಮಟ್ಟಕ್ಕೆ ಹೋದರೆ ಧರ್ಮದಲ್ಲಿ ಅಲ್ಪ ಸಂಖ್ಯಾತ ಮತ್ತು ಬಹುಸಂಖ್ಯಾತರಿರುತ್ತಾರೆ ಅವರಿಗೆ ಉದ್ಯೋಗಗಳು ಹೇಗೆ ಲಭ್ಯವಾಗಿವೆ ಎನ್ನುವಂತಹ

ಅಂಶಗಳು ವಿಶ್ಲೇಷಣೆಗೆ ದಾರಿಮಾಡಿಕೊಡುತ್ತವೆ. ಮತ್ತು ಹೆಚ್ಚು ಧಾರ್ಮಿಕವಾದವು ವ್ಯಕ್ತಿಯನ್ನು ಸಂಪ್ರದಾಯವಾದಿಯಂತಲು ಮತ್ತು ಸುಧಾರಣವಾದಿಯಂತಲೂ ವಿಂಗಡಿಸಲು ಸುಲಭವಾಗಿಸುತ್ತದೆ. ಹೀಗಿರುವಾಗ ಧರ್ಮ ಪ್ರಸ್ತುತ ಅಧ್ಯಯನದಲ್ಲಿ ಪ್ರಮುಖ ಸಾಮಾಜಿಕ ಅಂಶವಾಗಿದೆ. ಈ ಸಲುವಾಗಿ ಕೋಷ್ಟಕ 4.4.ರಲ್ಲಿ ಪ್ರತಿವರ್ಷಗಳ ಧಾರ್ಮಿಕ ಅಂತಸ್ತನ್ನು ಸೂಚಿಸುತ್ತದೆ.


ಕೋಷ್ಟಕ: 4.4.

ಧರ್ಮ

	ಬೆಲವತ್ತ ಆವೃತ್ತಿ	ಶೇಕಡ	ದೊಡ್ಡೇರಿ ಆವೃತ್ತಿ	ಶೇಕಡ	ಒಟ್ಟು ಆವೃತ್ತಿ	ಶೇಕಡ
ಹಿಂದೂ	198	99.00	196	98.00	394	98.50
ಮುಸ್ಲಿಂ	2	1.00	4	2.00	6	1.50
ಕ್ರೈಸ್ತ	0	0.00	0	0.00	0	0.00
ಬೌದ್ಧ	0	0.00	0	0.00	0	0.00
ಒಟ್ಟು	200	100.00	200	100.00	400	100.00

ರೇಖಾಚಿತ್ರ : 9

ಧರ್ಮ



ಭಾರತದ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಹಿಂದು ಪ್ರಾಬಲ್ಯತೆ ಇರುವುದು ಪ್ರಸ್ತುತ ಅಧ್ಯಯನದಿಂದಲೂ ತಿಳಿಯುತ್ತದೆ. ಒಟ್ಟು 98%ರಷ್ಟು ಪ್ರತಿವರ್ತಿಗಳು ಹಿಂದೂ ಧರ್ಮಿಯರೇ ಆಗಿದ್ದು, ಕೇವಲ 2% ಮಾತ್ರ ಮುಸ್ಲಿಂ ಸಮುದಾಯದವರು ಪ್ರಸ್ತುತ ಉದ್ಯೋಗ ಖಾತರಿ ಯೋಜನೆಯ ಸೌಲಭ್ಯ ಪಡೆಯಲು ಇಚ್ಚಿಸುತ್ತಾರೆ. ಒಟ್ಟಾರೆ ಭಾರತ ಗ್ರಾಮೀಣ ಪ್ರದೇಶ ಇಂದಿಗೂ ಹಿಂದೂ ಬಾಹುಳ್ಯ ಪ್ರದೇಶವಾಗಿರುತ್ತದೆ.

4.5 ಜಾತಿ

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ತನ್ನದೆ ಆದ ಪ್ರಾಮುಖ್ಯತೆಯನ್ನು ಪಡೆದಿದ್ದು ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಸ್ಥಿತ್ಯಂತರಗಳಲ್ಲಿ ತನ್ನದೇ ಆದ ಕಾರ್ಯವನ್ನು ನಿರ್ವಹಿಸುತ್ತಿದೆ. ಅಲ್ಲದೆ ಜಾತಿ ಆಧಾರಿತ ವೃತ್ತಿ ಆದಾಯ ಸಂಸ್ಕೃತಿ ಮುಂತಾದ ಸಾಮಾಜಿಕ ಅಂಶಗಳು ಇಂದಿಗೂ ಕೂಡ ಭಾರತದಲ್ಲಿ ಕಂಡುಬರುತ್ತದೆ. ಹಾಗೆಯೇ ಹಿಂದುಳಿದ ಸಮುದಾಯಗಳು ಹೆಚ್ಚಿನದಾಗಿ ಬಿ.ಪಿ.ಎಲ್. ಪಟ್ಟಿಯಲ್ಲೂ ಮುಂದುವರೆದ ಜಾತಿಗಳು ಹೆಚ್ಚಿನದಾಗಿ ಎ.ಪಿ.ಎಲ್ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವುದು ಸಾಮಾನ್ಯ ಸಂಗತಿಯಾಗಿದೆ. ಹೀಗೆ ಒಟ್ಟಾರೆ ಉದ್ಯೋಗ ಮತ್ತು ಜೀವನಾಂಶ ಒಂದೆಡೆ ಬೆಸೆದಿರುವ ಸಂಬಂದ ತಿಳಿಯುತ್ತದೆ. ಪ್ರಸ್ತುತ ಸಂಶೋಧನ ಕ್ಷೇತ್ರದಲ್ಲಿ ನೋಡುವ ಉದ್ದೇಶವಿದ್ದು ಪ್ರತಿವರ್ತಿಗಳು ಉದ್ಯೋಗ ಖಾತರಿ ಯೋಜನೆಯ ಸೌಲಭ್ಯ ಪಡೆದು ಉದ್ಯೋಗಸ್ಥರಾಗಿರುವುದು ಮತ್ತು ಜೀವನಾಂಶ ಉತ್ತಮಗೊಂಡಿರುವುದು ತಿಳಿಯುತ್ತದೆ.


ಕೋಷ್ಟಕ : 4.5

ಜಾತಿ ವಿವರ

	ಬೆಲವತ್ತ ಆವೃತ್ತಿ	ಶೇಕಡ	ದೊಡ್ಡೇರಿ ಆವೃತ್ತಿ	ಶೇಕಡ	ಒಟ್ಟು ಆವೃತ್ತಿ	ಶೇಕಡ
ಲಿಂಗಾಯಿತ	27	13.50	11	5.50	38	9.50
ಒಕ್ಕಲಿಗ	20	10.00	96	48.00	116	29.00
ಪ.ಜಾತಿ	77	38.50	20	10.00	97	24.25
ಪ.ಪಂ	12	6.00	12	6.00	24	6.00
ಗೊಲ್ಲ	39	19.50	25	12.50	64	16.00
ಕುರುಬ	0	0.00	2	1.00	2	0.50
ಬಲಜಿಗ	1	0.50	32	16.00	33	8.25
ತಿಗಳ	0	0.00	2	1.00	2	0.50
ಯಳವ	23	11.50	0	0.00	23	5.75
ಅಗಸ	1	0.50	0	0.00	1	0.25
ಒಟ್ಟು	200	100.00	200	100.00	400	100.00

ರೇಖಾಚಿತ್ರ : 10

ಜಾತಿ ವಿವರ



ಕೋಷ್ಟಕ 4.5.ರಲ್ಲಿ ಪ್ರತಿವರ್ತಿಗಳ ಜಾತಿಯನ್ನು ಸೂಚಿಸುತ್ತದೆ. ಶೇಕಡ 29ರಷ್ಟು ಪ್ರತಿವರ್ತಿಗಳು ಒಕ್ಕಲಿಗ ಜಾತಿಯವರಾಗಿದ್ದು ಈ ಭಾಗದ ಬಹುಸಂಖ್ಯಾತರಾಗಿದ್ದಾರೆ. ಪೂರಕವಾಗಿ ಸಂಶೋಧನೆಯಲ್ಲಿ ಕೂಡ ಒಕ್ಕಲಿಗ ಜಾತಿಯ ಪ್ರತಿವರ್ತಿಗಳ ಸಂಖ್ಯೆ ಹೆಚ್ಚು ಕಂಡು ಬರುತ್ತದೆ. ನಂತರದ ಸ್ಥಾನದಲ್ಲಿ ಪರಿಶಿಷ್ಟ ಜಾತಿಯವರು ಶೇಕಡ 24ರಷ್ಟು ಇದ್ದು ಇದು ಕೂಡ ಈ ಭಾಗದ ಬಹುಸಂಖ್ಯಾತ ಉದ್ಯೋಗ ಆಕಾಂಕ್ಷಿಗಳಾಗಿದ್ದಾರೆ. ಮೂರನೇ ಸ್ಥಾನವನ್ನು ಗೊಲ್ಲ ಸಮುದಾಯ ಪಡೆದುಕೊಂಡಿದ್ದು ಇವರು ಕೂಡ ಉದ್ಯೋಗ ಖಾತರಿ ಯೋಜನೆಯಿಂದ ಉಪಯೋಗ ಪಡೆಯುವ ಇಚ್ಚೇ ಉಳ್ಳವರು ಆಗಿದ್ದಾರೆ. ಲಿಂಗಾಯಿತರು ಕೂಡ ಉದ್ಯೋಗ ಖಾತರಿಯ ಆಕಾಂಕ್ಷಿಗಳಾಗಿದ್ದು ಇವರ ಸಂಖ್ಯೆ ಶೇಕಡ 9.50 ಆಗಿರುತ್ತದೆ. ಉಳಿದ ಕುರುಬ, ಪರಿಶಿಷ್ಟ ಪಂಗಡ, ಯಳವ, ತಿಗುಳ, ಅಗಸ ಇವರು ನಂತರದ ಸ್ಥಾನದಲ್ಲಿದ್ದು ಉದ್ಯೋಗ ಖಾತರಿ ಯೋಜನೆಯ ಸೌಲಭ್ಯದ ನಿರೀಕ್ಷೆಯಲ್ಲಿದ್ದಾರೆ. ಒಟ್ಟಾರೆ ಸಂಶೋಧನೆಯ ದತ್ತಾಂಶಗಳು ತಿಳಿಯಪಡಿಸುವುದೇನಂದರೆ ಒಕ್ಕಲಿಗ ಮತ್ತು ಪ.ಜಾತಿ ಜನರು ಬಹುಸಂಖ್ಯೆಯಲ್ಲಿ ಉದ್ಯೋಗ ಖಾತರಿ ಯೋಜನೆಯ ಸೌಲಭ್ಯದ ಆಕಾಂಕ್ಷಿಯಾಗಿದ್ದಾರೆ.

4.6. ಕೌಟುಂಬಿಕ ಪದ್ಧತಿ

ಕುಟುಂಬ ವ್ಯಕ್ತಿಯ ಜೀವನದ ಅವಿಭಾಜ್ಯ ಅಂಗ ಹಾಗೆ ವಿವಾಹ ಮತ್ತು ಕುಟುಂಬ ಎರಡು ಸಂಸ್ಥೆಗಳು ತೀರ ಪ್ರಾಥಮಿಕ ಸಂಬಂಧಗಳನ್ನು ಹೊಂದಿದ್ದು, ಒಂದನೊಂದು ಹೊರತಾಗಿ ನೋಡಲು ಸಾಧ್ಯವಿಲ್ಲ. ಪ್ರಸ್ತುತ ಸಂಶೋಧನ ಕ್ಷೇತ್ರವಾದ ತುಮಕೂರು ಜಿಲ್ಲೆಯ ಗುಬ್ಬಿ ಮತ್ತು ಮಧುಗಿರಿ ತಾಲ್ಲೂಕಿನ ಬೆಲವತ್ತ ಮತ್ತು ದೊಡ್ಡೇರಿ ವ್ಯಾಪ್ತಿಯಲ್ಲಿ ಬರುವ ಜನರು ವಿಶೇಷವಾಗಿ ನನ್ನ ಪ್ರತಿವರ್ತಿಗಳ ಕೌಟುಂಬಿಕ ಹಿನ್ನೆಲೆ ತಿಳಿಯುವ ಉದ್ದೇಶವನ್ನು ಪ್ರಸ್ತುತ ಕೋಷ್ಟಕವು ತಿಳಿಸುತ್ತದೆ.

ಯೋಜನೆಯಿಂದ ಸೌಲಭ್ಯ ನೀಡುವುದು ಕುಟುಂಬಗಳಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಸಮಾಜಶಾಸ್ತ್ರೀಯ ದೃಷ್ಠಿಯಲ್ಲಿ ಕುಟುಂಬವನ್ನು ಎರಡು ವಿಧವಾಗಿ ವಿಂಗಡಿಸಿದ್ದು ವಿಭಕ್ತ ಮತ್ತು ಅವಿಭಕ್ತ ಕುಟುಂಬವೆಂದು ಹೆಸರಿಸಿದ್ದಾರೆ. ಇವುಗಳ ಅನುಸಾರ ಕೋಷ್ಟಕದಲ್ಲಿ ಮಾಹಿತಿಯನ್ನು ಪ್ರಸ್ತುತ ಪಡಿಸಲಾಗಿದೆ.


ಕೊಷ್ಟಕ : 4.6

ಕೌಟುಂಬಿಕ ಪದ್ಧತಿ

	ಕೌಟುಂಬಿಕ ಪದ್ಧತಿ					
	ಬೆಲವತ್ತ ಆವೃತ್ತಿ	ಶೇಕಡ	ದೊಡ್ಡೇರಿ ಆವೃತ್ತಿ	ಶೇಕಡ	ಒಟ್ಟು ಆವೃತ್ತಿ	ಶೇಕಡ
ವಿಭಕ್ತ ಕುಟುಂಬ	183	91.50	179	89.50	362	90.50
ಅವಿಭಕ್ತ ಕುಟುಂಬ	17	8.50	21	10.50	38	9.50
ಒಟ್ಟು	200	100.00	200	100.00	400	100.000

ಸ್ತಂಬರೇಖಾಚಿತ್ರ : 11

ಕೌಟುಂಬಿಕ ಪದ್ಧತಿ



ಕೊಷ್ಟಕ 4.6ರಲ್ಲಿ ಪ್ರತಿವರ್ತಿಗಳ ಕೌಟುಂಬಿಕ ಹಿನ್ನೆಲೆಯನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಆಧುನಿಕ ಸಮಾಜದಲ್ಲಿ ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳಾಗುತ್ತಿವೆ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿಯೂ ಸಹ ಇಂತಹದೇ ಬದಲಾವಣೆಗಳು ತೀವ್ರವಾಗಿ ಕಾಣುತ್ತಿದೆ. ಈ ಅಂಶಕ್ಕೆ ಪೂರಕವಾಗಿ ಸಂಶೋಧನ ಮಾಹಿತಿ ಬಲಕೊಡುತ್ತಿದೆ. ಶೇ 90.50ರಷ್ಟು ಪ್ರತಿವರ್ತಿಗಳು ವಿಭಕ್ತ ಕುಟುಂಬದಿಂದ ಬಂದವರಾಗಿದ್ದು ಕೇವಲ ಶೇ 9.50ರಷ್ಟು ಪ್ರತಿವರ್ತಿಗಳು ಅವಿಭಕ್ತ

ಕುಟುಂಬದ ಹಿನ್ನೆಲೆಯುಳ್ಳವರಾಗಿದ್ದಾರೆ. ಒಟ್ಟಾರೆ ಪ್ರಸ್ತುತ ಕ್ಷೇತ್ರದಲ್ಲಿಯೂ ಕೂಡ ವಿಭಕ್ತ ಕುಟುಂಬಗಳು ಹೆಚ್ಚಿಗೆ ಕಂಡುಬರುತ್ತವೆ.

4.7. ಸ್ಥಿರ ಆಸ್ತಿಯ ವಿವರ

ಮಾನವ ಅಲೆಮಾರಿ ಪ್ರವೃತ್ತಿಯಿಂದ ಸ್ಥಿರ ಜೀವನ ನಡೆಸುವ ಮಹತ್ವದ ಬದಲಾವಣೆ ಕಂಡುಕೊಂಡ ಸಂದರ್ಭದಲ್ಲಿ ಆಸ್ತಿಗಳಿಕೆಯೂ ಕೂಡ ಒಂದು ವಿಶೇಷ ಶೈಲಿಯಾಗಿ ಮಾರ್ಪಾಟುಗೊಂಡಿತು. ಏಕೆಂದರೆ ವ್ಯಕ್ತಿ ಸ್ವಸ್ಥ ಜೀವನಕ್ಕೆ ಆಸ್ತಿ ಅನ್ನುವುದು ಆಧಾರ ಸ್ತಂಭ ಈ ಅಂಶವೇ ಇಂದಿಗೂ ಪ್ರಚಲಿತದಲ್ಲಿದೆ. ಅಂದರೆ ಆಸ್ತಿ ಉಳ್ಳವರು ಉಳ್ಳವವರಾಗಿದ್ದು ಆಸ್ತಿ ಇಲ್ಲದವರಿಗೆ ಇಲ್ಲದವರರೆಂದು ವಿಂಗಡಣೆಗೆ ಕಾರಣವಾಗಿದೆ. ಹೀಗಾಗಿ ವ್ಯಕ್ತಿಗೆ ಅಂತಸ್ತು ಎಷ್ಟು ಮುಖ್ಯವೋ ಆಸ್ತಿ ಕೂಡ ಅಷ್ಟೆ ಮುಖ್ಯ. ವಿಶೇಷವಾಗಿ ಭೂ ಒಡೆತನ ಕೂಡ ಮಹತ್ವದ ಅಂಶವಾಗಿದೆ ಕೆಳಗೆ ಸೂಚಿಸುವ ಕೊಷ್ಟಕ ಪ್ರತಿವರ್ತಿಗಳ ಸ್ಥಿರ ಆಸ್ತಿ ವಿವರವನ್ನು ತಿಳಿಸುತ್ತದೆ. ಅದರಲ್ಲಿಯೂ ಭೂ ಒಡೆತನದ ವಿವರವನ್ನು ತಿಳಿಸುತ್ತದೆ. ಮುಂದೆ ವಿಶ್ಲೇಷಣೆಯ ಸಂದರ್ಭದಲ್ಲಿ ಉದ್ಯೋಗ ಪಡೆದವರಲ್ಲಿ ಆಸ್ತಿವಂತರೆ ಅಥವಾ ಇಲ್ಲದವರೆ ಎನ್ನುವಂತಹ ಅಂಶಗಳು ಚರ್ಚೆಗೆ ಗ್ರಾಸವಾಗುವವು.

ಕೊಷ್ಟಕ: 4.7


ಸ್ಥಿರ ಆಸ್ತಿಯ ವಿವರ

			ಬೆಲವತ್ತ ಆವೃತ್ತಿ	ಶೇಕಡ	ದೊಡ್ಡೇರಿ ಆವೃತ್ತಿ	ಶೇಕಡ	ಒಟ್ಟು ಆವೃತ್ತಿ	ಶೇಕಡ
ಜಮೀನು ಇಲ್ಲ			35	17.50	29	14.50	64	16.00
ಒಂದು ಎಕರೆ ಗಿಂತ ಕಡಿಮೆ		ಒಣ	24	12.00	68	34.00	92	23.0
		ನೀರಾವರಿ	40	20.00	4	2.00	44	11.00
ಜಮೀನು ಇದೆ	1 ರಿಂದ 2	ಒಣ	21	10.50	43	21.50	64	16.00
		ನೀರಾವರಿ	23	11.50	1	0.50	24	6.00
	2 ರಿಂದ 3	ಒಣ	4	2.00	28	14.00	32	8.00
		ನೀರಾವರಿ	17	8.50	1	0.50	18	4.50
	3 ರಿಂದ 4	ಒಣ	5	2.50	10	5.00	15	3.75
		ನೀರಾವರಿ	15	7.50	1	0.50	16	4.00

	4 ರಿಂದ 5	ಒಣ	1	0.50	4	2.00	5	1.25
		ನೀರಾವರಿ	7	3.50	3	1.50	10	2.50
	5 ಕಿಂತ ಹೆಚ್ಚು	ಒಣ	1	0.50	5	2.50	6	1.50
		ನೀರಾವರಿ	7	3.50	3	1.50	10	2.50
ಒಟ್ಟು			**200**	**100.00**	**200.00**	**100.00**	**400**	**100.00**

ಸ್ತಂಭ ರೇಖಾ ಚಿತ್ರ : 12

ಸ್ಥಿರ ಆಸ್ತಿಯ ವಿವರ



ಕೋಷ್ಟಕ 4.7 ಪ್ರತಿವರ್ತಿಗಳ ಆಸ್ತಿ ಹೊಂದಿರುವ ಮಾಹಿತಿಯನ್ನು ಸೂಚಿಸುತ್ತದೆ. ವಿಶೇಷವಾಗಿ ಈ ಮಾಹಿತಿ ಸೂಚಿಸುವುದೇನಂದರೆ ಜಮೀನು ಇಲ್ಲದ ಶೇಕಡ 16ರಷ್ಟು ಪ್ರತಿವರ್ತಿಗಳು ಈ ಎರಡು ಪಂಚಾಯತಿಯಲ್ಲಿ ಕಂಡುಬರುತ್ತಾರೆ. ಅದರಲ್ಲೂ ವಿಶೇಷವಾಗಿ ಬೆಲವತ್ತ ಪ್ರದೇಶ ನಿರಾವರಿ ಪ್ರದೇಶವಾಗಿದ್ದು ಹೆಚ್ಚಿನ ಪ್ರತಿವರ್ತಿಗಳು ನೀರಾವರಿ ಪ್ರದೇಶ ಹೊಂದಿದ್ದಾರೆ. ಆದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಬರುವ ಶೇಕಡ 23ರಷ್ಟು ಜನ ಒಣ ಬೇಸಾಯ ಆಧಾರಿತ ಭೂಮಿಯನ್ನು ಹೊಂದಿದ್ದಾರೆ. ಇದು ಒಂದುವರೆ ಎಕರೆ ಒಳಪಟ್ಟ ಜಮೀನು ಆಗಿದೆ ಹಾಗೆಯೇ ಎರಡು ಎಕರೆ, ಮೂರು ಎಕರೆ, ನಾಲ್ಕು ಎಕರೆ, ಐದು ಎಕರೆ ಜಮೀನು ಹೊಂದಿರುವ ಪ್ರತಿವರ್ತಿಗಳ ಸಂಖ್ಯೆಯು ಕ್ರಮವಾಗಿ ಇಳಿಮುಖಗೊಂಡಿದೆ. ಶೇಕಡ 6, ಶೇಕಡ8, ಶೇಕಡ4. ಶೇಕಡ 5, ಶೇಕಡ 3.75, ಶೇಕಡ 4, ಶೇಕಡ 2.50 ಮತ್ತು ಶೇಕಡ 1.50 ಒಣಭೂಮಿ ಮತ್ತು ನೀರಾವರಿ ಆಶ್ರಿತವಾಗಿದೆ ಒಟ್ಟಾರೆ ದೊಡ್ಡೇರಿ ವ್ಯಾಪ್ತಿಯ ಪ್ರತಿವರ್ತಿಯ ಒಣಭೂಮಿಯನ್ನು ಬೆಲವತ್ತ ಪಂಚಾಯತಿಯ ಪ್ರತಿವರ್ತಿಯು ನೀರಾವರಿ ಹೊಂದಿರುವುದು ಪ್ರಸ್ತುತ ಸಂಶೋಧನೆಯಿಂದ ತಿಳಿದುಬರುತ್ತದೆ.

4.8. ವಸತಿ ವ್ಯವಸ್ಥೆ

ವ್ಯಕ್ತಿಯ ಮೂಲಭೂತ ವ್ಯವಸ್ಥೆಗಳಲ್ಲಿ ವಸತಿ ಪ್ರಮುಖವಾದ ಅಂಶವಾಗಿದ್ದು ಆಹಾರದಷ್ಟೆ ಪ್ರಾಮುಖ್ಯತೆಯನ್ನು ಪಡೆದಿದೆ. ಪ್ರಸ್ತುತ ಸರ್ಕಾರಗಳು ಬಡ ಜನರಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸಿದ್ದಾಗ್ಯೂ ಅನೇಕ ಕುಟುಂಬಗಳು ವಸತಿ ಇಲ್ಲದೆ ಪರಿತಪಿಸುತ್ತಿವೆ. ಪ್ರಸ್ತುತ ವಸತಿ ಕೂಡ ವ್ಯಕ್ತಿಯ ಸಾಮಾಜಿಕ ನಿರ್ಧಾರಕಗಳಾಗಿವೆ. ಈ ವಸತಿ ವ್ಯವಸ್ಥೆಯನ್ನು ಸೂಚಿಸುವಾಗ ಸಾಮಾನ್ಯವಾಗಿ ಕಚ್ಚಾ ಮತ್ತು ಪಕ್ಕ ಎಂದು ಎರಡು ಪ್ರಕಾರದಲ್ಲಿ ವಿಂಗಡಿಸಲಾಗುತ್ತದೆ. ಕಚ್ಚಾ ಮನೆಯೂ ಗರಿ, ಮಣ್ಣು, ಇತರೆ ಸ್ಥಳೀಯ ವಸ್ತುಗಳಿಂದ ನಿರ್ಮಿಸಲ್ಪಟ್ಟಿದ್ದಾಗಿದ್ದು. ಪಕ್ಕ ಮನೆಯು ಸಿಮೆಂಟು ಇಟ್ಟಿಗೆ ಜಲ್ಲಿ ಕಬ್ಬಿಣದ ರಾಡು ಮುಂತಾದುವುಗಳಿಂದ ನಿರ್ಮಿಸಲಾಗುತ್ತದೆ. ಪ್ರಸ್ತುತ ಸಂಶೋಧನೆ ತನ್ನ ಪ್ರತಿವರ್ತಿಗಳ ವಸತಿ ಸೌಲಭ್ಯವನ್ನು ಗುರುತಿಸುವ ಸಲುವಾಗಿ ಮತ್ತು ಉದ್ಯೋಗ ಖಾತರಿಯಿಂದ ಪ್ರಯೋಜನವಾದರೆ ವಸತಿಯ ಅಭಿವೃದ್ಧಿಗೆ ಪ್ರೇರಣೆ ಸಿಗುವುದಾ ಎನ್ನುವಂತಹ ಅಂಶಗಳನ್ನು ಗುರುತಿಸಬಹುದು. ಕೈಗೊಂಡ ಕ್ಷೇತ್ರ ಕಾರ್ಯದಿಂದ ತಿಳಿದು ಬಂದ ಅಂಶವನ್ನು ಕೋಷ್ಟಕ 4.8ರಲ್ಲಿ ತಿಳಿಸಲಾಗಿದೆ.


ಕೋಷ್ಟಕ: 4.8

ವಸತಿ ವ್ಯವಸ್ಥೆ

		ಬೆಲವತ್ತ ಆವೃತ್ತಿ	ಶೇಕಡ	ದೊಡ್ಡೇರಿ ಆವೃತ್ತಿ	ಶೇಕಡ	ಒಟ್ಟು ಆವೃತ್ತಿ	ಶೇಕಡ
ಇದ್ದರೆ	ಸ್ವಂತ ಮನೆ ಇಲ್ಲ	4	2.00	5	2.50	9	2.25
	ಪಕ್ಕ ಮನೆ	111	55.50	134	67.00	245	61.25
	ಕಚ್ಚಾ ಮನೆ	82	41.00	54	27.00	136	34.00
	ಸ್ವಲ್ಪ ಪಕ್ಕ	3	1.50	7	3.50	10	2.50
	ಒಟ್ಟು	200	100.00	200	100.00	400	100.00

ರೇಖಾಚಿತ್ರ : 13

ವಸತಿ ವ್ಯವಸ್ಥೆ



ಕೋಷ್ಟಕ 4.8.ರಲ್ಲಿ ವಸತಿ ವ್ಯವಸ್ಥೆಗಳನ್ನು ಸೂಚಿಸುತ್ತದೆ. ಪ್ರಸ್ತುತ ಸಂಶೋಧನೆ ಮಾಹಿತಿಯೂ ವ್ಯಕ್ತಪಡಿಸುವಂತೆ ಇಂದಿಗೂ ಕೂಡ ಶೇಕಡ 2.25ರಷ್ಟು ಈ ಭಾಗದ ಜನರಿಗೆ ಮನೆ ಇಷ್ಟವಿಲ್ಲದಿರುವುದು ಕಂಡುಬಂದಿದೆ. ಇದು ಪ್ರಸ್ತುತ ಸಂಶೋಧನೆಯ ನೈಜ ಮಾಹಿತಿಗೆ ಕನ್ನಡಿ ಹಿಡಿದಂತಾಗಿದೆ. ನಂತರ ಪಕ್ಕ ಮನೆಯ ಹೊಂದಿರುವ ಪ್ರತಿವರ್ತಿಗಳು ಶೇಕಡ 34ರಷ್ಟು ಇದ್ದು ಈ ಭಾಗದ ಜನರಿಗೆ ಗರಿ, ಮಣ್ಣು ಇತ್ಯಾದಿ ಸ್ಥಳೀಯ ಸಾಮಗ್ರಿಗಳೇ ಮನೆ ನಿರ್ಮಾಣಕ್ಕೆ ಆಧಾರಗಳಾಗಿವೆ ಎನ್ನುವುದನ್ನು ಪ್ರಸ್ತುತ ಮಾಹಿತಿ ವ್ಯಕ್ತ ಪಡಿಸುತ್ತದೆ. 61.25 ಪ್ರತಿವರ್ತಿಗಳು ಪಕ್ಕಾ ಮನೆ ಹೊಂದಿದ್ದು ಹೆಚ್ಚಿನ ಸಂಖ್ಯೆ ಪ್ರತಿವರ್ತಿಗಳು ವ್ಯವಸ್ಥಿತ ಮನೆ ಹೊಂದಿರುವುದು ತಿಳಿದು ಬರುತ್ತದೆ. ಅದಾಗ್ಯೂ ಈ ಎರಡು ತಾಲ್ಲೂಕಿನಲ್ಲಿ ಹೆಚ್ಚಿನ ಮನೆಗಳು ಪಕ್ಕ ಮನೆ ಹೊಂದಿರುವುದು ವಿಶೇಷ ಸಂಗತಿಯಾಗಿದೆ. ಕೇವಲ ಶೇಕಡ 2.5ರಷ್ಟು ಪ್ರತಿವರ್ತಿಗಳು ಸ್ವಲ್ಪ ಪಕ್ಕ ಮನೆಯನ್ನು ಹೊಂದಿದ್ದಾರೆ. ಒಟ್ಟಾರೆ ಸಂಶೋಧನಾ ಕೇಂದ್ರದಲ್ಲಿ ಹೆಚ್ಚಿನ ಪ್ರತಿವರ್ತಿಗಳು ಪಕ್ಕಾ ಮನೆ ಹೊಂದಿರುವುದು ಕಂಡುಬರುತ್ತದೆ.

4.9 ಜೀವನೋಪಾಯದ ವೃತ್ತಿಗಳು

ಉದ್ಯೋಗ ಪುರುಷ ಲಕ್ಷಣ ಎನ್ನುವುದು ಸಾಮಾನ್ಯ ಗಾದೆ ಮಾತಾಗಿದೆ. ಏಕೆಂದರೆ ವ್ಯಕ್ತಿ ಒಂದಲ್ಲ ಒಂದು ವೃತ್ತಿಯನ್ನು ಅನುಸರಿಸುವುದರ ಮೂಲಕ ಜೀವನ ನಿರ್ವಹಣೆ ಕೈಗೊಳ್ಳುತ್ತಿದ್ದಾನೆ. ಇದಕ್ಕೆ ಮುಖ್ಯ ಕಾರಣ ಸ್ವಸ್ಥ ಜೀವನ. ಹಾಗೇಯೇ ಆಧುನಿಕ ಕಾಲದಲ್ಲಿ ಪ್ರತಿಯೊಬ್ಬರು ಸಂಘಟಿತ ವಲಯದಲ್ಲಿ ವೃತ್ತಿ ಜೀವನ ನಿರ್ವಹಣೆಗೆ ಸ್ಪರ್ಧೆ ಉಂಟಾಗಿದ್ದು ಅರ್ಹತೆ ಕೌಶಲ್ಯತೆ ಮಾನದಂಡಗಳು ಸಂಘಟಿತ ವಲಯದಲ್ಲಿ ಎಲ್ಲರನ್ನು ಒಳಗೊಳ್ಳಲು ಸಾಧ್ಯವಿಲ್ಲದಿದ್ದಾಗ ವ್ಯಕ್ತಿ ಅನೇಕ ವೃತ್ತಿಗಳನ್ನು ಆಚರಣೆ ಮಾಡಿಕೊಂಡು ಬರುತ್ತಿದ್ದಾನೆ. ವಿಶೇಷವಾಗಿ ಕೃಷಿ ಮಾನವನ ಜೀವನದ ಅವಿಭಾಜ್ಯ ಅಂಗವಾಗಿದೆ, ಪೂರಕವಾಗಿ ಬಡಗಿ, ಕಮ್ಮಾರ, ಕೃಷಿ ಕೆಲಸ ಮುಂತಾದ ವೃತ್ತಿಗಳನ್ನು ಅನುಸರಿಸಿರುವುದು ಗ್ರಾಮೀಣ ಭಾಗದ ಸಂರಚನೆಯಾಗಿದೆ. ಪ್ರಸ್ತುತ ಸಂಶೊಧನ ಕ್ಷೇತ್ರವಾದ ಗುಬ್ಬಿ ಬೆಲವತ್ತ ಗ್ರಾಮ ಪಂಚಾಯತಿ ಮತ್ತು ಮಧುಗಿರಿಯ ದೊಡ್ಡೇರಿ ಗ್ರಾಮಪಂಚಾಯತಿ ವ್ಯಾಪ್ತಿಯ ಜನರ ವೃತ್ತಿ ಅನುಕರಣೆ ತಿಳಿಯುವುದೇ ಕೆಳಗಿನ ಕೋಷ್ಟಕದ ಪ್ರಮುಖ ಉದ್ದೇಶವಾಗಿದೆ. ಮತ್ತು ಮೂಲವೃತ್ತಿಗೂ ಉದ್ಯೋಗ ಖಾತರಿಯ ವೃತ್ತಿಗೂ ಸಾಮ್ಯತೆ ಇರುವುದನ್ನು ಅಧ್ಯಯನದಿಂದ ವ್ಯಕ್ತವಾಗಬಹುದು.


ಕೋಷ್ಟಕ : 4.9

ಜೀವನೋಪಾಯದ ವೃತ್ತಿಗಳು

	ಬೆಲವತ್ತ ಆವೃತ್ತಿ	ಶೇಕಡ	ದೊಡ್ಡೇರಿ ಆವೃತ್ತಿ	ಶೇಕಡ	ಒಟ್ಟು ಆವೃತ್ತಿ	ಶೇಕಡ
ಕೃಷಿ	93	46.50	57	28.50	150	37.50
ಹೈನುಗಾರಿಕೆ	7	3.50	28	14.00	35	8.75
ಎಲೆಕ್ಟ್ರಿಕಲ್ ಕೆಲಸ	0	0.00	2	1.00	2	0.50
ವಕೀಲ	1	0.50	0	0.00	1	0.25
ಗಾರ್ಮೆಂಟ್	41	20.50	67	33.50	108	27.00
ವ್ಯಾಪಾರಿ	12	6.00	9	4.50	21	5.25
ಕುಂಬಾರಿಕೆ	3	1.50	5	2.50	8	2.00
ಗಾರೆ ಕೆಲಸ	36	18.00	28	14.00	64	16.00
ಬಡಗಿ	5	2.50	3	1.50	8	2.00
ಟೈಲರಿಂಗ್	2	1.00	0	0.00	2	0.50
ಬಣ್ಣದ ಕೆಲಸ		0.00	1	0.50	1	0.25
ಒಟ್ಟು	200	100.00	200	100.00	400	100.00

ಸ್ತಂಬರೇಖಾಚಿತ್ರ : 14

ಜೀವನೋಪಾಯದ ವೃತ್ತಿಗಳ



ಕೋಷ್ಟಕ 4.9ರಲ್ಲಿ ಪ್ರತಿವರ್ತಿಗಳ ಜೀವನೋಪಾಯದ ವೃತ್ತಿಗಳನ್ನು ಸೂಚಿಸುತ್ತದೆ. ಪ್ರಮುಖವಾಗಿ ಇಂದಿಗೂ ಗ್ರಾಮೀಣ ಭಾರತದ ವೃತ್ತಿ ಕೃಷಿಯಾಗಿದ್ದು ಶೇಕಡ 37.50ರಷ್ಟು ಪ್ರತಿವರ್ತಿಗಳು ಕೃಷಿಯನ್ನೇ ಅವಲಂಬಿಸಿದ್ದಾರೆ. ಈ ವಿಚಾರದಲ್ಲಿ ಬೆಲವತ್ತ ಗ್ರಾಮಪಂಚಾಯತಿ ಜನರು ಹೆಚ್ಚು ಕೃಷಿ ವೃತ್ತಿಯನ್ನು ಮಾಡುತ್ತಿದ್ದಾರೆ. ನಂತರದ ಸ್ಥಾನವನ್ನು ಗಾರ್ಮೆಂಟಿನಲ್ಲಿ ತೊಡಗಿರುವ ಬಗ್ಗೆ ಶೇಕಡ 27ರಷ್ಟು ಪ್ರತಿವರ್ತಿಗಳು ಸೂಚಿಸಿದ್ದಾರೆ. ಇದು ಇಂದು ಭಾರತದಲ್ಲಿ ಸಿದ್ಧ ಉಡುಪುಗಳ ಕ್ಷೇತ್ರದಲ್ಲಿ ತೀವ್ರಗತಿಯ ಅಭಿವೃದ್ಧಿ ಸಾಧಿಸುತ್ತಿರುವ ಬಗ್ಗೆ ಮುನ್ಸೂಚನೆ ಸೂಚಿಸುತ್ತದೆ. ನಂತರದ ವೃತ್ತಿ ಅನುಸರಣೆಯಲ್ಲಿ ಗಾರೆ ಕೆಲಸ ಅಥವಾ ಕಟ್ಟಡ ನಿರ್ಮಾಣವಾಗಿದ್ದು ಶೇಕಡ 16ರಷ್ಟು ಪ್ರತಿವರ್ತಿಗಳು ಈ ಕೆಲಸವನ್ನು ಅನುಸರಿಸುತ್ತಿದ್ದಾರೆ ಹಾಗೂ ಹೈನುಗಾರಿಕೆ ಮತ್ತು ವ್ಯಾಪಾರ ಈ ಭಾಗದ ಜನರ ಸಹವೃತ್ತಿಯಾಗಿ ಅವಲಂಬಿಸಿದ್ದಾರೆ. ಒಟ್ಟಾರೆ ಗ್ರಾಮೀಣ ಭಾಗದಲ್ಲಿ ಕೃಷಿ ಪ್ರಧಾನ ವೃತ್ತಿಯಾಗಿದ್ದು ಗಾರ್ಮೆಂಟ್ ಸಿದ್ಧ ಉಡುಪುಗಳ ತಯಾರಿಕೆ ಘಟಕಗಳ ಕಾರ್ಯನಿರ್ವಹಿಸುವುದು ತೀವ್ರಗತಿಯಲ್ಲಿ ಬೆಳವಣಿಗೆ ಸಾಗುತ್ತಿದೆ. ಕೈಗಾರಿಕೆಗಳು ಪ್ರಸ್ತುತ ಗ್ರಾಮೀಣ ಭಾಗದ ಜನರ ಆಕರ್ಷಿಸುತ್ತಿರುವುದು ಪ್ರಮುಖ ಬೆಳವಣಿಗೆಯಾಗಿದೆ. ಒಟ್ಟಾರೆ ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ನಗರದೆಡೆಗೆ ಗ್ರಾಮೀಣ ಜನರ ವಲಸೆ ತೀವ್ರಗತಿಯಲ್ಲಿ ಸಾಗಿರುವುದು ಕಂಡು ಬರುತ್ತದೆ.

4.10. ಮಾಸಿಕ ಆದಾಯ

ಆದಾಯ ಜೀವನದಲ್ಲಿ ಪ್ರಮುಖವಾದ ಪಾತ್ರ ನಿರ್ವಹಿಸುತ್ತದೆ. ಆದಾಯವನ್ನು ಮೂಲವಾಗಿಟ್ಟುಕೊಂಡು ವರ್ಗಗಳನ್ನು ರಚನೆ ಮಾಡಲಾಗಿದೆ. ಸಮಾಜದಲ್ಲಿ ಆದಾಯದ ಮೂಲಗಳನ್ನು ಅನೇಕ ಕ್ಷೇತ್ರಗಳಿಂದ ಗುರುತಿಸಲಾಗಿರುವುದು, ಅದು ದೊಡ್ಡದೇ ಇರಬಹುದು ಅಥವಾ ಚಿಕ್ಕದ್ದೇ ಇರಬಹುದು ಇದರಿಂದ ಬರುವಂತಹ ಆದಾಯಗಳು ಜೀವನದ ಮೂಲಭೂತ ಸೌಕರ್ಯಗಳನ್ನು ಹೊಂದಲು ಸಾಧ್ಯವಾಗಿದೆ. ಹೆಚ್ಚು ಆದಾಯವಿರುವವರು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿದ್ದರೆ ಚಿಕ್ಕ ಆದಾಯವಿರುವವರು ಮೂಲಭೂತ ಸೌಕರ್ಯಗಳನ್ನು ಹೊಂದಲು ಸಾಧ್ಯವಾಗದೇ ಇರಬಹುದು. ಒಟ್ಟಾರೆ ಆದಾಯ ಎಲ್ಲಾ ಆಯಾಮಗಳನ್ನು ವ್ಯಕ್ತಪಡಿಸುವುದು. ಪ್ರಸ್ತುತ ಸಂಶೋಧನೆ ಕ್ಷೇತ್ರದ ಪ್ರತಿವರ್ತಿಗಳ ಮಾಸಿಕ ಆದಾಯದ ಅಂಶವನ್ನು ಸೂಚಿಸುತ್ತದೆ. ಆದಾಯವನ್ನು ಬಹು ಸ್ಥರದಲ್ಲಿ ವಿಂಗಡಿಸಲಾಗಿದ್ದು ಸಂಶೋಧನಾ ವಿಶ್ಲೇಷಣೆ ಪೂರಕವಾಗುವ ಸಲುವಾಗಿ ಮತ್ತು ಮಾಸಿಕ ಆದಾಯಕ್ಕೂ ಉದ್ಯೋಗದ ಬೇಡಿಕೆಗೂ ನೇರವಾದ ಸಂಬಂಧ ಇರುವುದು ತಿಳಿಯುತ್ತದೆ. ಕೋಷ್ಟಕ 30 ಪ್ರತಿವರ್ತಿಗಳ ಆದಾಯವನ್ನು ಸೂಚಿಸುತ್ತದೆ.


ಕೋಷ್ಟಕ : 4.10

ದುಡಿಮೆಯಿಂದ ಮಾಸಿಕ ಆದಾಯ

	ಬೆಲವತ್ತ ಆವೃತ್ತಿ	ಶೇಕಡ	ದೊಡ್ಡೇರಿ ಆವೃತ್ತಿ	ಶೇಕಡ	ಒಟ್ಟು ಆವೃತ್ತಿ	ಶೇಕಡ
1250–2000	102	51.00	169	84.50	271	67.75
2250–3000	35	17.50	25	12.50	60	15.00
3250–4000	32	16.00	5	2.50	37	9.25
4250–5000	10	5.00	1	0.50	11	2.75
5250–6000	7	3.50	0	0.00	7	1.75
6250 ಕ್ಕೂ ಹೆಚ್ಚು	14	7.00	0	0.00	14	3.50
ಒಟ್ಟು	200	100.00	200	100.00	400	100.00

ಸ್ತಂಭ ರೇಖಾ ಚಿತ್ರ : 15

ದುಡಿಮೆಯಿಂದ ಮಾಸಿಕ ಆದಾಯ



ಕೋಷ್ಟಕ 4.10ರಲ್ಲಿ ಪ್ರತಿವರ್ತಿಗಳ ಮಾಸಿಕ ಆದಾಯನ್ನು ಸೂಚಿಸುತ್ತದೆ. 2000ಕ್ಕಿಂತ ಕಡಿಮೆ ಆದಾಯ ಹೊಂದಿರುವ ಪ್ರತಿವರ್ತಿಗಳು ಶೇಕಡ 67.75ರಷ್ಟು ಇದ್ದು ಬಹುಸಂಖ್ಯಾತ ಪ್ರತಿವರ್ತಿಗಳ ಮಾಸಿಕ ವರಮಾನ 2000ಕ್ಕಿಂತ ಕಡಿಮೆ ಇದೆ. 2500 ರಿಂದ 3000 ಮಾಸಿಕ ವರಮಾನ ಪಡೆಯುವ ಪ್ರತಿವರ್ತಿಗಳ ಸಂಖ್ಯೆ ಶೇಕಡ 15ರಷ್ಟು ಇದೆ. ಅದಾಗ್ಯೂ 6000 ಮಾಸಿಕ ಆದಾಯ ಪಡೆಯುವ ಪ್ರತಿವರ್ತಿಗಳ ಸಂಖ್ಯೆ ಶೇಕಡ 3.50ರಷ್ಟಿದೆ ಇದು ವಿಶೇಷ ಅಂಶವಾಗಿದ್ದು ಬೆಲವತ್ತ ಗ್ರಾಮಪಂಚಾಯತಿ ವ್ಯಾಪ್ತಿಯ ಜನರು ಮಾಸಿಕ ವರಮಾನ ಪಡೆಯುವ ದೊಡ್ಡೇರಿ ಪಂಚಾಯತಿಗಿಂತ ಹೆಚ್ಚಿನ ಮಟ್ಟದಲ್ಲಿದ್ದಾರೆ, ಕಾರಣ ಬೆಲವತ್ತ ಪಂಚಾಯತಿ ವ್ಯಾಪ್ತಿಯೂ ನೀರಾವರಿ ಆಧಾರಿತ ಪ್ರದೇಶವಾಗಿದ್ದು ಜನರ ಆದಾಯ ನಿರೀಕ್ಷೆ ಮಟ್ಟಕ್ಕಿದೆ. ಆದರೆ ದೊಡ್ಡೇರಿ ಪಂಚಾಯತಿ

ವ್ಯಾಪ್ತಿಯೂ ಮಾಸಿಕ ಆದಾಯ ಕೇವಲ 3000 ರೂಪಾಯಿಗಿಂತ ಕಡಿಮೆ ಇದೆ. ಉಳಿದಿರುವ ಆದಾಯದ ವಿಧದಲ್ಲಿ ದೊಡ್ಡೇರಿ ಪಂಚಾಯತಿಯಲ್ಲಿ ಯಾವೊಬ್ಬ ಪ್ರತಿವರ್ತಿಗಳು ಕಂಡುಬರುವುದಿಲ್ಲ.

ಸಾಮಾನ್ಯವಾಗಿ ಪ್ರದೇಶವೊಂದರ ಬದಲಾವಣೆ ಹಾಗೂ ಅಭಿವೃದ್ಧಿಯಲ್ಲಿ ಆ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯೆಂಬುದು ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ಪ್ರಸ್ತುತ ಅಧ್ಯಯನವು ಬೆಲವತ್ತ ಮತ್ತು ದೊಡ್ಡೇರಿ ಗ್ರಾಮಪಂಚಾಯತಿಯನ್ನು ಅಧ್ಯಯನ ವ್ಯಾಪ್ತಿಯನ್ನಾಗಿಸಿಕೊಂಡಿದ್ದು, ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಿದ ಸಂದರ್ಭದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಸೌಲಭ್ಯಗಳನ್ನು ಪಡೆಯಲು ಎರಡೂ ಗ್ರಾಮಪಂಚಾಯತಿಗಳು ಮುಂಚೂಣಿಯಲ್ಲಿರುವುದು ಪ್ರಸ್ತುತ ಅಧ್ಯಯನದಿಂದ ತಿಳಿದು ಬಂದಿದೆ. ಅಧ್ಯಯನ ಸಂದರ್ಭದಲ್ಲಿ ಬೆಲವತ್ತ ಗ್ರಾಮಪಂಚಾಯತಿಗಿಂತ ದೊಡ್ಡೇರಿ ಗ್ರಾಮಪಂಚಾಯತಿಗೆ ಉದ್ಯೋಗದ ಅನಿವಾರ್ಯತೆ ಮತ್ತು ಅಗತ್ಯತೆ ಹೆಚ್ಚು ಕಂಡುಬರುತ್ತದೆ. ಏಕೆಂದರೆ ದೊಡ್ಡೇರಿ ಪ್ರದೇಶವು ಕಡಿಮೆ ಮಳೆಬೀಳುವ ಪ್ರದೇಶವಾಗಿದ್ದು, ಕೃಷಿಗೆ ಯಾವುದೇ ನೀರಾವರಿಯ ಮೂಲಗಳು ಇಲ್ಲದಿರುವುದು ಆ ಪ್ರದೇಶದ ಹಿಂದುಳಿದಿರುವುದಕ್ಕೆ ಮುಖ್ಯ ಕಾರಣವೂ ಆಗಿದೆ. ಇವೆಲ್ಲದರ ಹಿನ್ನೆಲೆಯಲ್ಲಿ ಇವರ ಸಾಮಾಜಿಕ ಜೀವನ ಕ್ರಮ, ಜೀವನೋಪಾಯದ ಮೂಲವೃತ್ತಿಗಳು, ಅವುಗಳಿಂದ ಬರುವ ಆದಾಯ, ದೈಹಿಕ ಶ್ರಮದ ಉದ್ಯೋಗದ ಲಭ್ಯತೆ, ಅವರ ಮಾಸಿಕ ಮತ್ತು ವಾರ್ಷಿಕ ಆದಾಯ ಕಡಿಮೆ ಇರುವುದೇ ಉದ್ಯೋಗ ಖಾತರಿ ಯೋಜನೆಯ ಸೌಲಭ್ಯಗಳ ಅಗತ್ಯತೆಯ ಅನಿವಾರ್ಯತೆಯನ್ನು ಮನಗಾಣಿಸುತ್ತದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಹೇಮಾವತಿ ಜಲಾಶಯದ ನೀರಿನ ಮೂಲ ಇರುವುದರಿಂದ ಕೃಷಿ ಭೂಮಿ ಇರುವವರಿಗೆ ಕೃಷಿ ಉತ್ಪಾದನೆ ಹೆಚ್ಚಿಸುತ್ತದೆ. ಇವರಿಗೆ ಉದ್ಯೋಗ ಖಾತರಿ ಯೋಜನೆ ಅವಶ್ಯಕತೆ ಎನಿಸುವುದಿಲ್ಲ. ಆದರೆ ಭೂ ರಹಿತ ಕೃಷಿಕಾರ್ಮಿಕರಿಗೆ ಮತ್ತು ಹಲವು ಅವಕಾಶಗಳಿಂದ ವಂಚಿತರಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉದ್ಯೋಗ ಖಾತರಿ ಯೋಜನೆಯ ಸೌಲಭ್ಯಗಳ ಅವಶ್ಯತೆ ಹೆಚ್ಚು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಉದ್ಯೋಗ ಖಾತರಿಯ ಕಾಯಿದೆ/ಸಿದ್ಧಾಂತದ ಮೂಲಕ ಸೌಲಭ್ಯಗಳನ್ನು ಹೇಗೆ? ಯಾವ ಪ್ರಮಾಣದಲ್ಲಿ ಪಡೆದಿರುತ್ತಾರೆ? ಮತ್ತು ಆಚರಣಾ ಕ್ರಮ ಏನಾಗಿದೆ ಎನ್ನುವುದನ್ನು ಮುಂದಿನ ಅಧ್ಯಾಯದಲ್ಲಿ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಅಧ್ಯಾಯ ಐದು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಸಿದ್ಧಾಂತ ಆಚರಣೆಯ ವಿಶ್ಲೇಷಣೆ

ಅಧ್ಯಾಯ ಐದು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಸಿದ್ಧಾಂತ ಆಚರಣೆಯ ವಿಶ್ಲೇಷಣೆ

ಭಾಗ: ಒಂದು

5.1. ಕಾಯಿದೆಯ ಮಾಹಿತಿ

ಗ್ರಾಮೀಣಾಭಿವೃದ್ಧಿ ಮತ್ತು ಬಡತನ ನಿರ್ಮೂಲನೆ ದೃಷ್ಟಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರ ಅನೇಕ ಪ್ರಕಾರದ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ರೂಪಿಸಿ ಹಿಂದಿನಿಂದಲೂ ಅನುಷ್ಠಾನ ಮಾಡುತ್ತ ಬಂದಿದೆ. ಯಾವುದೇ ಯೋಜನೆಗಳ ದೃಷ್ಟಿಕೋನ ಬೇರೆಯಾದರೂ ಉದ್ದೇಶ ಮಾತ್ರ ಒಂದೆ. ಜನರು ಯೋಜನೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಮುದಾಯವನ್ನು ಅಭಿವೃದ್ಧಿ ಪಡಿಸುವುದೇ ಇವುಗಳ ಆಶಯವಾಗಿದೆ. ಜನರಿಗೆ ಅಭಿವದ್ಧಿ ಯೋಜನೆಗಳ ಅರಿವು ಇದ್ದರೆ ಅಭಿವೃದ್ಧಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ದಿಕ್ಸೂಚಿಯಾಗುವುದು. ಈ ಅರಿವಿನ ಕೊರತೆಯೇ ಯೋಜನೆಗಳ ಅಭಿವೃದ್ಧಿ ವೈಫಲ್ಯತೆಗೆ ಕಾರಣವಾಗಿದೆ ಎಂದು ಅಧ್ಯಯನದ ವರದಿಗಳು ತಿಳಿಸುತ್ತದೆ. ಉದ್ಯೋಗ ಖಾತರಿ ಕಾಯಿದೆಯಲ್ಲಿಯೂ ಯೋಜನೆಗಳ ಮಾಹಿತಿ ಪ್ರಮುಖವಾದ ಪಾತ್ರವಹಿಸುವುದು. ಏಕೆಂದರೆ ಈ ಯೋಜನೆ ಅನುಷ್ಠಾನಕ್ಕೆ ಜನರ ಭಾಗವಹಿಸುವಿಕೆ ಅತ್ಯಂತ ಪ್ರಮುಖ. ಹೀಗಾಗಿ ಅನೇಕ ಭಾಗದ ಸಂಶೋಧನಾ ಅಧ್ಯಯನಗಳು ಅರಿವು ಮತ್ತು ಮಾಹಿತಿ ನೆಲೆಯಲ್ಲಿ ವ್ಯಾಖ್ಯಾನಿಸಿವೆ. ಗ್ರಾಮೀಣ ಜನರಿಗೆ ವ್ಯಾಪಕವಾದ ತಿಳುವಳಿಕೆ ಮಾಡುವ ಹಿನ್ನೆಲೆಯಲ್ಲಿ ಅಭಿವೃದ್ಧಿ ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಾಗಿ ಯೋಜನೆಯ ವೆಚ್ಚದಲ್ಲಿಯೇ ಶೇಕಡ 5 ರಿಂದ 15ರಷ್ಟು ಅನುದಾನ ಮೀಸಲಿರಿಸಿಕೊಂಡು ಯೋಜನೆಗಳನ್ನು ಜನರಿಗೆ ಪರಿಚಯಿಸುತ್ತ ಅನುಷ್ಠಾನ ಮಾಡುತ್ತಾ ಬಂದಿರುವುದು. ಯಾವ ಯಾವ ಯೋಜನೆಗಳು ಜನರಿಗೆ ಯಾವ ಪ್ರಮಾಣದಲ್ಲಿ ತಿಳುವಳಿಕೆ ಮೂಡಿಸಿದೆ ಎನ್ನುವ ಆಧಾರದಲ್ಲಿ ಆ ಯೋಜನೆ ಪ್ರಸ್ತುತ ಅಧ್ಯಯನದಲ್ಲಿ ಆಚರಣೆಯ ಹಿನ್ನೆಲೆಯಲ್ಲಿ

ಎಂ.ಜಿ.ಎನ್.ಆರ್.ಜಿ.ಎ. ಯೋಜನೆ ಕುರಿತು ಪೂರ್ಣ ಮಾಹಿತಿಯನ್ನು ಜನರಿಗಿದೆ ಎನ್ನುವುದನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿದೆ.

ಕೋಷ್ಟಕ: 5.1.

ಸರ್ಕಾರಿ ಯೋಜನೆಗಳ ಬಗ್ಗೆ ಇರುವ ಮಾಹಿತಿ

	ಯೋಜನೆಗಳು	ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಯೋಜನೆ ಬಗ್ಗೆ ತಿಳುವಳಿಕೆ	ಅನ್ನ ಭಾಗ್ಯಯೋಜನೆ	155	77.50	150	75.00	305	76.25
	ರೋಜ್‌ಗಾರ್ ಯೋಜನೆ	11	5.50	16	8.00	27	6.75
	ರಾ.ಗ್ರಾ.ಆ.ಮಿಷನ್	3	1.50	12	6.00	15	3.75
	ನಿರ್ಮಲ್ ಭಾರತ್ ಆಭಿಯಾನ್	23	11.50	15	7.50	38	9.50
	ಮಡಿಲು ಯೋಜನೆ	6	3.00	—	0.00	6	1.50
	ಯೋಜನೆ ತಿಳಿದಿರುವುದಿಲ್ಲ	2	1.00	7	3.50	9	2.25
ಒಟ್ಟು		200	100.00	200	100.00	400	100.00

ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಅನೇಕ ಪ್ರಕಾರದ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದ್ದು, ಅದರಲ್ಲಿ ಅನ್ನಭಾಗ್ಯ ಯೋಜನೆ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 77.50ರಷ್ಟು ಜನರಿಗೆ ಯೋಜನೆಯ ಬಗ್ಗೆ ತಿಳುವಳಿಕೆಯಾಗಿರುವುದು ತಿಳಿದು ಬಂದರೆ, ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 75ರಷ್ಟು ಜನರಿಗೆ ತಿ\ಳುವಳಿಕೆ ಇದೆ. ಒಟ್ಟಾರೆ ಬೇರೆ ಯೋಜನೆಗಳಿಗೆ ಹೋಲಿಕೆ ಮಾಡಿದರೆ ಎರಡು ಪಂಚಾಯತಿಗಳಲ್ಲಿ ಶೇಕಡ 76.25ರಷ್ಟು ಜನರಿಗೆ ಅನ್ನಭಾಗ್ಯ ಯೋಜನೆಯ ತಿಳಿವಳಿಕೆ ಇದೆ. ಎರಡನೆಯದಾಗಿ ನಿರ್ಮಲ್ ಭಾರತ್ ಅಭಿಯಾನ ಯೋಜನೆ ಕುರಿತು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 11.50ರಷ್ಟು ಜನರಿಗೆ ಮಾಹಿತಿ ಇದ್ದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 7.5ರಷ್ಟು ಇರುವುದು ತಿಳಿದು ಬರುತ್ತದೆ. ಅನ್ನಭಾಗ್ಯ ಮತ್ತು ನಿರ್ಮಲ್ ಭಾರತ್ ಅಭಿಯಾನ ಯೋಜನೆ ದೊಡ್ಡೇರಿ ಗ್ರಾಮ ಪಂಚಾಯತಿಗಿಂತ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಹೆಚ್ಚು ಪ್ರಮಾಣ ಮಾಹಿತಿ ಇರುವುದು ತಿಳಿಯುತ್ತದೆ. ಇದಕ್ಕೆ ಬೆಲವತ್ತ ಗ್ರಾಮ ಪಂಚಾಯತಿಯು ಅಭಿವೃದಿ ಹೊಂದಿರುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಈ ತಾಲ್ಲೂಕು ಕೇಂದ್ರಕ್ಕೆ ಮತ್ತು ಜಿಲ್ಲಾ ಕೇಂದ್ರಕ್ಕೆ ಹಾಗೂ ರಾಜಧಾನಿ ಕೇಂದ್ರದಲ್ಲೇ ಸಾರಿಗೆ ಸಂಪರ್ಕ, ರೈಲ್ವೆ ಸಾರಿಗೆ ಹಾಗೂ ಸಂಪರ್ಕ ಮಾಧ್ಯಮಗಳ ಸೇವೆಗಳು ಹೊಂದಿರುವುದು ಹೆಚ್ಚು ತಿಳುವಳಿಕೆ ಇರುವುದು ಪ್ರಮುಖವಾಗಿ ಕಂಡುಬರುತ್ತದೆ.

5.2. ದೈಹಿಕ ಶ್ರಮ ಆಧಾರಿತ ಕೂಲಿ ಯೋಜನೆಗಳ ಕುರಿತ ಮಾಹಿತಿ

ಜನರ ಹಸಿವು ನೀಗಿಸುವ, ಆಹಾರದ ಭದ್ರತೆ ಒದಗಿಸುವ ಮತ್ತು ಬಡತನ ನಿರ್ಮೂಲನೆ ಮಾಡುವ ಸಲುವಾಗಿ ಹಲವು ಗ್ರಾಮೀಣಾಭಿವೃದ್ಧಿ ಯೋಜನೆಗಳಲ್ಲಿ ದೈಹಿಕ ಶ್ರಮ ಆಧಾರಿತ ಉದ್ಯೋಗದ ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಯೋಜನೆಗಳ ಅನುಷ್ಠಾನದಲ್ಲಿ ಪಾತ್ರವಹಿಸುವ, ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯ ಆಯಾಮಗಳು ಜನರಿಗಿರುವ ಮಾಹಿತಿಯ ಮೇಲೆ ಸಾಮಾಜಿಕ ಚಲನೆಗಳಿಗೆ ದಾರಿಮಾಡಿಕೊಟ್ಟಿರುತ್ತವೆ. ಪ್ರಸ್ತುತ ಅಧ್ಯಯನ ಉದ್ಯೋಗ ಖಾತರಿ ಕಾಯಿದೆಯ ನಿಯಮಗಳು, ಹಾಗೂ ಅವುಗಳ ಕಾರ್ಯಗಳು ಯಾವುವು? ಅವುಗಳ ಪಾತ್ರವೇನು? ದೈಹಿಕ ಶ್ರಮದ ಉದ್ಯೋಗ ಯೋಜನೆಗಳು ಯಾವುವು? ಅವುಗಳ ಉದ್ದೇಶ, ಆಶಯಗಳು ಏನು? ಈ ಕುರಿತು ಜನರು ಯಾವ ರೀತಿಯ ಮಾಹಿತಿ ಹೊಂದಿದ್ದಾರೆ? ಒಂದು ಪಕ್ಷ ಮಾಹಿತಿ ಹೊಂದಿದ್ದರೆ ಅದು ಯಾವ ಪ್ರಮಾಣದಲ್ಲಿದೆ? ಎನ್ನುವುದನ್ನು ಇಲ್ಲಿ ಚರ್ಚಿಸಲಾಗಿದೆ.

ಕೋಷ್ಟಕ: 5.2.

ಸರ್ಕಾರದ ದೈಹಿಕ ಶ್ರಮದ ಕೂಲಿ ಯೋಜನೆಗಳ ಬಗ್ಗೆ ಜನರಿಗಿರುವ ಮಾಹಿತಿ

ಯೋಜನೆಗಳು	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಯೋಜನೆ ತಿಳಿದಿರುವುದಿಲ್ಲ	76	38.00	31	15.50	107	26.75
ಕೂಲಿಗಾಗಿ ಕಾಳು ಯೋಜನೆ		0.00	34	17.00	34	8.50
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ	0	0.00	9	4.50	9	2.25
ಜವಾಹರ್ ರೋಜಗರ್ ಯೋಜನೆ	1	0.50	3	1.50	4	1.00
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ	123	61.50	121	60.50	244	61.00
ಗ್ರಾಮೀಣ ಭೂರಹಿತ ಉದ್ಯೋಗ ಖಾತರಿ ಯೋಜನೆ	0	0.00	2	1.00	2	0.50
ಒಟ್ಟು	**200**	**100.00**	**200**	**100.00**	**400**	**100.00**

ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಲ್ಲಿ ಸೌಲಭ್ಯಗಳು ತಳಮಟ್ಟದ ಸೂಚಿತ ಜನರಿಗೂ ನೀಡಬೇಕಾದರೆ ಕಡ್ಡಾಯವಾಗಿ ಆ ಕುಟುಂಬಗಳಿಗೆ ಉದ್ಯೋಗದ ಕಾಯಿದೆಯ ನಿಯಮಗಳ ಮಾಹಿತಿ ನೀಡಬೇಕು ಎನ್ನುವುದು ಕಡ್ಡಾಯಗೊಳಿಸಿದೆ. ಗ್ರಾಮಪಂಚಾಯತಿಯು ಗ್ರಾಮಗಳಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಕಾಯಿದೆಯ ನಿಯಮಗಳನ್ನು ಜನರಿಗೆ ತಿಳಿಸಿದೆಯೇ? ತಿಳಿಸಿದ್ದರೆ

ಅದು ಯಾವ ಪ್ರಮಾಣದಲ್ಲಿ ತಿಳಿಸಿದೆ ಎನ್ನುವುದನ್ನು ಇಲ್ಲಿ ಪರಿಶೀಲನೆ ಮಾಡಿದರೆ, ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 61.50ರಷ್ಟು ಜನರು ಯೋಜನೆಯ ಬಗ್ಗೆ ಮಾಹಿತಿ ಹೊಂದಿದ್ದರೆ, ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 60.50ರಷ್ಟು ಮಾಹಿತಿ ಪಡೆದವರಾಗಿರುತ್ತಾರೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 61ರಷ್ಟು ಜನರಿಗೆ ಎಂ.ಜಿ.ಎನ್.ಆರ್.ಇ.ಜಿ.ಎ ಕಾಯಿದೆಯ ಬಗ್ಗೆ ಮಾಹಿತಿ ಹೊಂದಿದವರಾಗಿರುವುದು ಪ್ರಸ್ತುತ ಅಧ್ಯಯನದಲ್ಲಿ ತಿಳಿಯುತ್ತದೆ.

5.3. ಗ್ರಾಮಪಂಚಾಯತಿ ಮತ್ತು ಉದ್ಯೋಗ ಖಾತರಿ ಕಾಯಿದೆ

ಭಾರತ ಸಂವಿಧಾನದ 73ನೇ ತಿದ್ದುಪಡಿಯು ಅಧಿಕಾರದ ವಿಕೇಂದ್ರೀಕರಣದ ಮೂಲಕ ಗ್ರಾಮ ಪಂಚಾಯಿಗಳು ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಮುಖವಾದ ಪಾತ್ರವಹಿಸುವುದನ್ನು ತಿಳಿಸುತ್ತದೆ. ಗ್ರಾಮ ಪಂಚಾಯತಿಯು ಸ್ಥಳೀಯ ಮಟ್ಟದಲ್ಲಿ ಗುರುತಿಸಿ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡಿಕೊಂಡು ಬರುತ್ತಿದೆ. ಪ್ರಮುಖವಾಗಿ ಜನರಿಗೆ ಯೋಜನೆಗಳ ಮಾಹಿತಿ ನೀಡುವುದು ಜನರನ್ನು ಯೋಜನೆಯಲ್ಲಿ ತೊಡಗಿಸಿಕೊಳ್ಳುವುದು ವಿಕೇಂದ್ರೀಕರಣದ ಭಾಗವಾದ ಗ್ರಾಮಪಂಚಾಯತಿಯ ಆಶಯ. ಮಾಹಿತಿ ತಿಳುವಳಿಕೆಗೂ ಜನರು ಭಾಗವಹಿಸುವಿಕೆಗೂ, ಅನುಷ್ಠಾನಕ್ಕೂ ಅಭಿವೃದ್ಧಿಗೂ ನೇರವಾದ ಸಂಬಂಧವಿರುವುದನ್ನು ಈ ನಮ್ಮ ಅಧ್ಯಯನ ಮಾಡುವುದಲ್ಲದೆ ಗ್ರಾಮ ಪಂಚಾಯತಿಯ ಕೆಲಸ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಸ್ಥಳೀಯ ಮಟ್ಟದಲ್ಲಿ ಜನರಿಗೆ ಮಾಹಿತಿ ಹೇಗೆ ನೀಡಿದೆ ಎನ್ನುವುದನ್ನು ವಿಶ್ಲೇಷಣೆಗೆ ಒಳಪಡಿಸಿದೆ.

ಕೋಷ್ಟಕ 5.3

ಗ್ರಾಮಪಂಚಾಯತಿ ಮತ್ತು ಉದ್ಯೋಗ ಖಾತರಿ ಕಾಯಿದೆ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	136	68.00	152	76.00	288	72.00
ಇಲ್ಲ	64	32.00	48	24.00	112	28.00
ಒಟ್ಟು	200	100.00	200	100.00	400	100.00

ಸರ್ಕಾರ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೊಳಿಸುವ ನಿರುದ್ಯೋಗ ಒಂದನ್ನು ಸಂವಿಧಾನದ 73ನೇ ತಿದ್ದುಪಡಿಯಿಂದ ಖಚಿತಪಡಿಸಿಕೊಂಡಿತ್ತು. ಗ್ರಾಮೀಣಾಭಿವೃದ್ಧಿ ಯೋಜನೆಗಳು ಸುಸ್ಥಿರತೆಯನ್ನು ಕಾಯ್ದುಕೊಳ್ಳಬೇಕಾದರೆ ಜನರಿಗೆ ಮಾಹಿತಿ ನೀಡಿ ಅವರ ಭಾಗವಹಿಸುವಂತೆ ಹೆಚ್ಚು ಪ್ರೇರಣೆ ಮಾಡಬೇಕು ಎನ್ನುವುದು ಮಾರ್ಗದರ್ಶಿಸೂಚಿಯ ನಿಯಮ. ಈ ಹಿನ್ನೆಲೆಯಲ್ಲಿ ಜನರಿಗೆ ಮಾಹಿತಿ ನೀಡಿರುವುದನ್ನು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 68ರಷ್ಟು ಕಂಡು


ಬಂದರೆ ದೊಡ್ಡೇರಿ ಗ್ರಾಮಪಂಚಾಯತಿ ಶೇಕಡ 76ರಷ್ಟು ತಿಳುವಳಿಕೆ ನೀಡಿರುವುದು ತಿಳಿದು ಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 72ರಷ್ಟು ಜನರಿಗೆ ಗ್ರಾಮ ಪಂಚಾಯತಿ ತಿಳುವಳಿಕೆ ನೀಡಿರುವುದು ಕಂಡು ಬರುತ್ತದೆ. ಬೆಲವತ್ತ ಗ್ರಾಮಪಂಚಾಯತಿಗಿಂತ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಯೋಜನೆಯ ಬಗ್ಗೆ ಹೆಚ್ಚು ತಿಳಿವಳಿಕೆ ನೀಡಿರುವುದು ಅಧ್ಯಯನದಿಂದ ವ್ಯಕ್ತವಾಗುತ್ತದೆ.

5.4 ಉದ್ಯೋಗ ಖಾತರಿಯನ್ನು ಯಾರು ಅನುಷ್ಠಾನಕ್ಕೆ ತರುತ್ತಿದ್ದಾರೆ?

ಗ್ರಾಮಪಂಚಾಯತಿ ಮಟ್ಟದಲ್ಲಿ ಗ್ರಾಮಪಂಚಾಯತಿ ಈಗಾಗಲೇ ಅನೇಕ ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದೆ. ಯಾವುದೇ ಯೋಜನೆಗಳು ಜನರಿಗೆ ಸಮರ್ಪಕ ರೀತಿಯಲ್ಲಿ ಜನರಿಗೆ ತಿಳುವಳಿಕೆ ಮೂಡಿಸುವುದು ಇದರಿಂದ ಜನರು ಯೋಜನೆಯಲ್ಲಿ ಭಾಗವಹಿಸುವಿಕೆಯ ಚಲನೆಯನ್ನು ಹೆಚ್ಚಿಸುವುದು ಪ್ರಮುಖವಾದ ಪಾತ್ರವಹಿಸಿದೆ. ಅಧ್ಯಯನ ಕ್ಷೇತ್ರದಲ್ಲಿ ಸದರಿ ಕಾಯಿದೆಯನ್ನು ಅನುಷ್ಠಾನ ಮಾಡಿರುವುದನ್ನು ಜನರಿಗೆ ಕಾಯಿದೆಯ ಬಗ್ಗೆ ಮಾಹಿತಿ ಇದೆಯೋ ಇಲ್ಲವೋ ಎನ್ನುವುದನ್ನು ಅಧ್ಯಯನ ತಿಳಿಯುತ್ತದೆ.

ಸ್ತಂಭ ರೇಖಾಚಿತ್ರ : 16

ಉದ್ಯೋಗ ಖಾತರಿಯನ್ನು ಯಾರು ಅನುಷ್ಠಾನಕ್ಕೆ ತರುತ್ತಿದ್ದಾರೆ?



ಉದ್ಯೋಗ ಖಾತರಿ ಕಾಯಿದೆ ಗ್ರಾಮಪಂಚಾಯತಿ ಮತ್ತು ಗ್ರಾಮಗಳಲ್ಲಿ ಅನುಷ್ಠಾನ ಮಾಡಿದೆಯೇ ಎನ್ನುವಂತಹ ಅಂಶಗಳನ್ನು ವ್ಯಕ್ತಪಡಿಸುತ್ತದೆ. ಕಾಯಿದೆಯನ್ನು ಗ್ರಾಮಪಂಚಾಯತಿಯೇ ಅನುಷ್ಠಾನ ಮಾಡಿರುವುದರ ಬಗ್ಗೆ ಜನರಿಗಿರುವ ಮಾಹಿತಿ ಕುರಿತು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 71 ರಷ್ಟು ಕಂಡುಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಜನರಿಗೆ ಶೇಕಡ 76.50ರಷ್ಟು

ಮಾಹಿತಿ ಇರುವುದು ಕಂಡು ಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಅನುಷ್ಠಾನಕ್ಕೆ ತಂದಿರುವುದು ಶೇಕಡ 73.50ರಷ್ಟು ಅಧ್ಯಯನದಿಂದ ಕಂಡುಬರುತ್ತದೆ. ಗ್ರಾಮಪಂಚಾಯತಿಯಲ್ಲಿ ಕಡಿಮೆ ಮಾಹಿತಿ ಇರುವುದಕ್ಕೆ ಈ ಪ್ರದೇಶದಲ್ಲಿ ಕೂಲಿಯ ಬೇಡಿಕೆಯೂ ಇಳಿಮುಖವಾಗುವುದು ಮತ್ತು ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಬರ ಮತ್ತು ಆಹಾರದ ಅಭಾವ ತೀವ್ರಗತಿಯಲ್ಲಿರುವುದು, ಕೂಲಿಗಾಗಿ ಪ್ರತ್ಯೇಕ್ಷ ಅಥವಾ ಪರೋಕ್ಷವಾಗಿ ಗ್ರಾಮಪಂಚಾಯತಿಗೆ ನಿರಂತರ ಬೇಡಿಕೆ ನೀಡಿರುವುದು ಅಧ್ಯಯನ ತಿಳಿಸುತ್ತದೆ.

5.5. ಯೋಜನೆಯ ಪ್ರಚಾರ

ಭಾರತ ಸರ್ಕಾರ ಯಾವುದೇ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಗ್ರಾಮೀಣರಿಗೆ ಒದಗಿಸುವ ಜವಾಬ್ದಾರಿಯ ಹಿನ್ನೆಲೆಗೆ ಸಂಬಂಧಿಸಿಂತೆ ಸಂವಿಧಾನದ 40ನೇ ಕಾಲಂ ಪರಿಷ್ಕರಿಸಿ ತಳಮಟ್ಟದ ಸ್ಥಳೀಯ ಆಡಳಿತದಲ್ಲಿ ಸುಧಾರಣೆ ತರಲು ಸಂವಿಧಾನದ 73ನೇ ತಿದ್ದುಪಡಿಗೆ ಅನ್ವಯಿಸುವಂತೆ ಅಧಿಕಾರ ವಿಕೇಂದ್ರೀಕರಿಸಲಾಯಿತು. ಈ ಮೂಲಕ ಗ್ರಾಮಪಂಚಾಯತಿಗೆ ಜವಾಬ್ದಾರಿ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮಪಂಚಾಯತಿ ಯಾವುದೇ ಯೋಜನೆಗಳನ್ನು ಗ್ರಾಮೀಣರಿಗೆ ಒದಗಿಸುವುದಕ್ಕಿಂತ ಮೊದಲು ಈ ಯೋಜನೆಯ ಬಗ್ಗೆ ಜನರಿಗೆ ಮಾಹಿತಿ ನೀಡುವ ಸಲುವಾಗಿ ಪ್ರಚಾರ ಹೇಗೆ ನೀಡಿದೆ? ಯಾವ ಪ್ರಚಾರದಿಂದ ಮಾಹಿತಿಯನ್ನು ಜನರು ಪಡೆದರು ಎಂಬುದನ್ನು ತಿಳಿಸುತ್ತದೆ.

5.6 ಯೋಜನೆಯ ಪ್ರಚಾರ

ಕೋಷ್ಟಕ: 5.6

ಯೋಜನೆಯ ಪ್ರಚಾರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಗ್ರಾಮಪಂಚಾಯತಿಯಿಂದ	135	67.50	110	55.00	245	61.25
ಗೋಡೆ ಬರಹದಿಂದ	32	16.00	26	13.00	58	14.50
ಗ್ರಾಮಸಭೆ/ವಾರ್ಡ್‌ಸಭೆಯಿಂದ	3	1.50	2	1.00	5	1.25
ನೆರೆಹೊರೆಯರಿಂದ	20	10.00	36	18.00	56	14.00
ಸಂಬಂಧಿಕರಿಂದ	5	2.50	15	7.50	20	5.00
ಸ್ನೇಹಿತರಿಂದ	5	2.50	11	5.50	16	4.00
ಮನೆಗಳ ಭೇಟಿ ಮೂಲಕ	0	0.00	0	0.00	0	0.00
ಒಟ್ಟು	200	100.00	200	100.00	400	100.00

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ವ್ಯಾಪಕವಾಗಿ ಮತ್ತು ತಳಮಟ್ಟದ ತಿಳುವಳಿಕೆ ನೀಡಲು ಅನೇಕ ಪ್ರಕಾರದ ಮಾಹಿತಿ ಶಿಕ್ಷಣ ಸಂವಹನಗಳಿರುತ್ತವೆ. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ ಯಿಂದಲೇ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 67.50ರಷ್ಟು ಮಾಹಿತಿ ಉಳ್ಳವರು ಕಂಡು ಬಂದರೆ, ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 55.00ರಷ್ಟು ಮಾಹಿತಿಯನ್ನು ಪಡೆದವರಾಗಿರುತ್ತಾರೆ. ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಕ್ರಮವಾಗಿ ಗೋಡೆ ಬರಹದಿಂದ ಶೇಕಡ 16.00ರಷ್ಟು, ನೆರೆಹೊರೆಯಿಂದ ಶೇಕಡ 10ರಷ್ಟು ಮಾಹಿತಿ ನೀಡಿರುವುದು ತಿಳಿದು ಬಂದರೆ, ದೊಡ್ಡೇರಿ ಗ್ರಾಮ ಪಂಚಾಯತಿಯಿಂದ ಕ್ರಮವಾಗಿ ಶೇಕಡ 13 , ಶೇಕಡ 18ರಷ್ಟು ಮತ್ತು ಶೇಕಡ 7.50ರಷ್ಟು ನೀಡಿರುವುದು ತಿಳಿದು ಬರುತ್ತದೆ. ಒಟ್ಟಾರೆ ಗ್ರಾಮ ಪಂಚಾಯತಿಯಿಂದ ಶೇಕಡ 61.25, ರಷ್ಟು ನೆರೆಹೊರೆಯವರಿಂದ ಶೇಕಡ 14.00ರಷ್ಟು ಮತ್ತು ಗೋಡೆ ಬರಹದಿಂದ ಶೇಕಡ 14.50ರಷ್ಟು ಮಾಹಿತಿ ನೀಡಿರುವುದು ತಿಳಿದು ಬರುತ್ತದೆ.

5.7. ಉದ್ಯೋಗದ ಬೇಡಿಕೆ ಮತ್ತು ಮಾಹಿತಿ ಶಿಕ್ಷಣ

ಯಾವುದೇ ಅಭಿವೃದ್ಧಿ ಯೋಜನೆಗಳಲ್ಲಿ ಬೇಡಿಕೆ ಮತ್ತು ಅನುಷ್ಠಾನ ಪ್ರಮುಖವಾದ ಪಾತ್ರವಹಿಸುತ್ತದೆ. ಅಭಿವೃದ್ಧಿಯ ಪೂರಕವಾದ ಯಾವುದೇ ಯೋಜನೆಗಳು ಜನರಿಗೆ ಪರಿಚಯವಾಗ ಬೇಕು, ಇದರಿಂದ ಜನರಿಗೆ ಯೋಜನೆಯ ಬಗ್ಗೆ ಬೇಡಿಕೆ ಉಂಟಾಗಬೇಕು ಎನ್ನುವುದು, ವಿಶ್ವಬ್ಯಾಂಕ್‌ನ ಆಶಯವಾಗಿರುತ್ತದೆ. ವಿಶ್ವಬ್ಯಾಂಕ್ ಯಾವುದೇ ರಾಷ್ಟ್ರಕ್ಕೆ ತನ್ನ ಆರ್ಥಿಕ ನೆರವು ನೀಡುತ್ತದೆ. ಅಂದರೆ ಪ್ರಮುಖವಾಗಿ ಬೇಡಿಕೆ ಆಧಾರಿತ ಯೋಜನೆಗಳನ್ನು ಜನರಿಗೆ ಕಲ್ಪಿಸಿಕೊಡುವ ಷರತ್ತಿಗೊಳಪಟ್ಟು ಹಣಕಾಸು ಮತ್ತು ಕೌಶಲ್ಯವನ್ನು ನೀಡುತ್ತದೆ. ಜೊತೆಗೆ ಜನರನ್ನು ಯೋಜನೆಯಲ್ಲಿ ಭಾಗವಹಿಸಲು ಬಹು ಪ್ರಕಾರದ ಕಾರ್ಯತಂತ್ರಗಳನ್ನು ರೂಪಿಸುತ್ತದೆ. ಇದರಿಂದ ಜನರಿಗೆ ಬೇಡಿಕೆ ಉಂಟುಮಾಡುತ್ತದೆ. ಈ ಬೇಡಿಕೆ ಆಧಾರಿತವಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವ ವಿಶೇಷವಾದ ಉದ್ದೇಶಗಳನ್ನು ಇಟ್ಟುಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿಯಮಾವಳಿ ಪ್ರಕಾರ ಉದ್ಯೋಗದ ಬೇಡಿಕೆ ನೀಡುವುದು ಮೊದಲ ಆದ್ಯತೆಯಾಗಿರುತ್ತದೆ. ಈ ಅಧ್ಯಯನ ಕ್ಷೇತ್ರದಲ್ಲಿ ಯಾವ ಮಾಹಿತಿ ಶಿಕ್ಷಣದ ಸಂವಹನದ ಮೂಲಕ ಬೇಡಿಕೆ ಹೇಗಾಗಿದೆ ಮತ್ತು ಯಾವ ಪ್ರಮಾಣದಲ್ಲಿ ನೀಡಿದೆ ಎಂಬುದನ್ನು ಅಧ್ಯಯನ ತಿಳಿಸುತ್ತದೆ.

ಕೋಷ್ಟಕ: 5.7

ಉದ್ಯೋಗದ ಬೇಡಿಕೆ ಮತ್ತು ಮಾಹಿತಿ ಶಿಕ್ಷಣ

ಮಾಹಿತಿ ಶಿಕ್ಷಣ ಸಂವಹನ	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಗೋಡೆ ಬರಹಗಳು	1	0.50	21	10.50	22	5.50
ಗೋಡೆ ಬರಹಗಳು, ಭಿತ್ತಿ ಪತ್ರಗಳು	0	0.00	7	3.50	7	1.75
ಭಿತ್ತಿ ಪತ್ರಗಳು		0.00	2	1.00	2	0.50
ಕರ ಪತ್ರಗಳು	10	5.00		0.00	10	2.50
ಬೇಡಿಕೆ ನೀಡಿರುವುದಿಲ್ಲ	189	94.50	170	85.00	35989.	89.75
ಒಟ್ಟು	200	100.00	200	100.00	400	100.00

ಉದ್ಯೋಗದ ಬೇಡಿಕೆ ಹೆಚ್ಚಿಸುವ ಸಲುವಾಗಿ ಮಾಹಿತಿ ಶಿಕ್ಷಣ ಸಂವಹನದ ಬಹು ಆಯಾಮದ ಮೂಲಕ ತಳ ಮಟ್ಟದವರೆಗೂ ಮಾಹಿತಿ ನೀಡಿ, ಉದ್ಯೋಗದ ಬೇಡಿಕೆ ಪ್ರಮಾಣ ಜನರಿಗೆ ಹೆಚ್ಚಿಸಿದೆಯೇ? ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಜನರಿಗೆ ಬೇಡಿಕೆ ನೀಡಿರುವುದು ಕರಪತ್ರಗಳಿಂದ ಶೇಕಡ 5 ರಷ್ಟು, ಬಿಟ್ಟರೆ ಗೋಡೆ ಬರಹದಿಂದ ಶೇಕಡ 0.50 ರಷ್ಟು ಮಾತ್ರ ಬೇಡಿಕೆ ನೀಡಿರುತ್ತದೆ. ಇದರಲ್ಲಿ ಗಮನಿಸುವ ಸಂಗತಿ ಎಂದರೆ ಉದ್ಯೋಗದ ಖಾತರಿ ಬೇಡಿಕೆ ನೀಡದೇ ಇರುವುದು ಶೇಕಡ 94.50 ರಷ್ಟು ಕಂಡುಬಂದಿದ್ದು ಇದು ಯೋಜನೆಯ ವೈಫಲ್ಯತೆಯನ್ನು ಎತ್ತಿ ತೋರಿಸುತ್ತದೆ. ಹಾಗೆಯೇ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಗೋಡೆ ಬರಹದಿಂದ ಶೇಕಡ 10 ರಷ್ಟು ಬೇಡಿಕೆ ಬಂದಿರುವುದು, ಅದನ್ನು ಬಿಟ್ಟರೆ ಶೇಕಡ 3.50ರಷ್ಟು ಗೋಡೆ ಬರಹ ಮತ್ತು ಭಿತ್ತಿಪತ್ರಗಳಿಂದ ಮಾಹಿತಿ ದೊರೆತಿರುವುದು.

5.8. ಜನರಿಗಿರುವ ಆಸಕ್ತಿ ಮತ್ತು ಅಭಿರುಚಿ

ಯಾವುದೇ ಯೋಜನೆಗಳನ್ನು ಅನುಷ್ಠಾನ ಮಾಡುವಲ್ಲಿ ಜನರಿಗೆ ಅದರ ಅವಶ್ಯಕತೆ ಇದೆಯೇ ಅಥವಾ ಇಲ್ಲವೊ? ಎನ್ನುವಂತಹ ಜನರ ಮನಸ್ಥಿತಿ ಮತ್ತು ಅವರ ಅಭಿಪ್ರಾಯ ಏನಿದೆ ಎಂಬುದನ್ನು ಅವಲೋಕಿಸಿ ಅರ್ಥಮಾಡಿಕೊಳ್ಳುವುದು. ಆಸಕ್ತಿಯ ಮೇಲೆ ಬೇಡಿಕೆ ಎನ್ನುವ ಪ್ರಶ್ನೆ ಹುಟ್ಟುತ್ತದೆ. ಆ ಯೋಜನೆಯ ಸೌಲಭ್ಯಗಳ ಮೇಲೆ ಜನರಿಗೆ ಆಸಕ್ತಿ ಇದ್ದರೆ ಬೇಡಿಕೆ ಆಧಾರಿತ ಯೋಜನೆಗಳನ್ನು ಕೈಗೊಳ್ಳುವುದು. ಇದರಿಂದ ಯೋಜನೆಗಳು ಯಶಸ್ಸನ್ನು ಕಾಣಬಹುದು. ಈ ಪರಿಕಲ್ಪನೆಯನ್ನು ವಿಶ್ವಬ್ಯಾಂಕ್ ಅನೇಕ ಪ್ರಕಾರದ ಅಧ್ಯಯನಗಳನ್ನು ಕೈಗೊಂಡು ಅದರ ಫಲಿತಾಂಶದ ಮೇಲೆ ಒಂದು ಯೋಜನೆ ಅನುಷ್ಠಾನ ಮಾಡುವುದಕ್ಕೂ ಮೊದಲು ಜನರಿಗೆ ಅದರ ಅವಶ್ಯಕತೆಯ ಬಗ್ಗೆ

ತಿಳಿದುಕೊಂಡು ಯೋಜನೆಗಳನ್ನು ಅನುಷ್ಠಾನ ಮಾಡಬೇಕು ಎನ್ನುವ ಅಂಶಗಳನ್ನು ತಿಳಿಸುತ್ತದೆ. ಹಾಗೆಯೇ ಈ ಅಧ್ಯಯನ ಕ್ಷೇತ್ರದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಜನರಿಗೆ ಯಾವ ಪ್ರಮಾಣದಲ್ಲಿ ಆಸಕ್ತಿ ಮತ್ತು ಅಭಿರುಚಿ ಇದೆ ಎನ್ನುವಂತಹ ಅವಶ್ಯಕತೆಯನ್ನು ತಿಳಿಸುತ್ತದೆ.

ಕೋಷ್ಟಕ: 5.8

ಜನರಿಗಿರುವ ಆಸಕ್ತಿ ಮತ್ತು ಅಭಿವೃಚಿ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	87	43.50	198	99.00	285	71.25
ಇಲ್ಲ	113	56.50	2	1.00	115	28.75
ಒಟ್ಟು	200	100.00	200	100.00	400	100.00

ಯೋಜನೆಯ ಸಫಲತೆ ಮತ್ತು ವಿಫಲತೆಗಳನ್ನು ಮಾನದಂಡಗಳ ಮೂಲಕ ನೋಡಬೇಕಾಗುತ್ತದೆ. ವಾರ್ಡ್‌ಸಭೆ ಮತ್ತು ಗ್ರಾಮಸಭೆಗಳಲ್ಲಿ ಜನರ ಅವಶ್ಯಕತೆ ಏನು? ಅದರ ಆದ್ಯತೆಯ ಮೇಲೆ ಯೋಜನಾ ಸೌಲಭ್ಯಗಳನ್ನು ನೀಡಲು ಎಂ.ಜಿ.ಎನ್.ಆರ್.ಇ.ಜಿ.ಎ ಕಡ್ಡಾಯಗೊಳಿಸಿರುವುದು. ಯೋಜನೆಯ ಅವಶ್ಯಕತೆ ಬೇಕೆ? ಬೇಡವೆ? ಎನ್ನುವುದು ಮೂಲಭೂತವಾದ ಅಂಶ. ಉದ್ಯೋಗದ ಅವಶ್ಯಕತೆ ಇದೆ ಎನ್ನುವುದು ಬೆಲವತ್ತ ಗ್ರಾಮಪಂಚಾಯತಿಯ ಶೇಕಡ 43.50ರಷ್ಟು ತಿಳಿದು ಬಂದರೆ, ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 99.00ರಷ್ಟು ಉದ್ಯೋಗ ಅವಶ್ಯಕತೆ ಇದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಲ್ಲಿ ಉದ್ಯೋಗದ ಅವಶ್ಯಕತೆ ಬಗ್ಗೆ ಶೇಕಡ 71.25ರಷ್ಟು ಕಂಡು ಬಂದಿರುವುದು. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಹೆಚ್ಚು ಕೃಷಿ ನೀರಾವರಿ ಪ್ರದೇಶದ ಭೂಮಿ ಹೊಂದಿರುವುದು ಕಂಡು ಬಂದರೆ, ಇನ್ನೊಂದೆಡೆ ಅಲ್ಪ ಸ್ವಲ್ಪ ಭೂಮಿ ಇರುವವರು ಜೀವನ ಆವಶ್ಯಕತೆಗೆ ಖಾಸಗಿ ಕೃಷಿ ತೋಟಗಳಿಗೆ ಕೂಲಿ ಕೆಲಸಕ್ಕೆ ಹೋಗುವುದು ಕಂಡು ಬರುತ್ತದೆ. ಮತ್ತು ಅದೇ ಖಾಸಗಿ ಕೃಷಿ ಕೂಲಿಯಲ್ಲಿ ಹೆಚ್ಚು ಕೂಲಿ ವೇತನ ದೊರೆಯುವುದು. ಉದ್ಯೋಗ ಖಾತರಿ ಕೂಲಿಗೆ ನಿರಾಸಕ್ತಿ ತೋರಿಸುವುದು ಕಂಡು ಬರುತ್ತದೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಉದ್ಯೋಗ ಅವಶ್ಯಕತೆಯ ಬಗ್ಗೆ ಆಸಕ್ತಿ ತೋರಿಸುತ್ತಿರುವುದಕ್ಕೆ ಭೀಕರವಾಗಿ ಕಾಡುತ್ತಿರುವ ಅನಾವೃಷ್ಟಿಯೇ ಪ್ರಮುಖ ಕಾರಣವಾಗಿ ತಿಳಿಯುತ್ತದೆ.

5.9. ಉದ್ಯೋಗಕ್ಕಾಗಿ ನೋಂದಣಿ ವಿವರ

ರಾಷ್ಟ್ರದಲ್ಲಿ ಬಡತನ ನಿರ್ಮೂಲನೆ ಮಾಡುವ ಉದ್ದೇಶದಿಂದ ಅನೇಕ ಪ್ರಕಾರದ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡುತ್ತಾ ಬಂದಿದೆ ಅದರಲ್ಲೂ ಅರೆಕುಶಲ ಕೂಲಿಕಾರರಿಗೆ ಅನೇಕ ದೈಹಿಕ ಶ್ರಮದ ಉದ್ಯೋಗ ಯೋಜನೆಗಳನ್ನು ಅನುಷ್ಠಾನ ಮಾಡುತ್ತಾ ಬಂದಿದ್ದರು ಯಾವ ಯೋಜನೆಗಳಲ್ಲೂ ದಿನಗೂಲಿಗೆ ನೋಂದಣಿ ಮಾಡಿಸಿ ಅಧಿಕೃತವಾಗಿ ಉದ್ಯೋಗ ನೀಡಿದ ಯೋಜನೆಗಳ ಉದಾಹರಣೆಯೇ ಇಲ್ಲ, ಆ ಎಲ್ಲಾ ಯೋಜನೆಗಳಿಗೆ ಹೋಲಿಕೆ ಮಾಡಿದರೆ ಉದ್ಯೋಗ ಖಾತರಿ ಕಾಯಿದೆ ಜನರಿಗೆ "ಉದ್ಯೋಗದ ಹಕ್ಕು" ನೀಡುವ ಸಲುವಾಗಿ ಅವರಿಗೆ ಅಧಿಕೃತವಾಗಿ ಉದ್ಯೋಗವನ್ನು ಒದಗಿಸುವ ಹಿನ್ನಲೆಯಲ್ಲಿ ಉದ್ಯೋಗಕ್ಕಾಗಿ ನೋಂದಣಿ ಮಾಡಿಸುವುದು ಕಾಯಿದೆಯ ನಿಯಮಾವಳಿಯಲ್ಲಿ ಕಡ್ಡಾಯಗೊಳಿಸಿರುವುದು. ಈ ಅಧ್ಯಯನ ಕ್ಷೇತ್ರದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಜನರಿಗೆ ಯಾವ ಪ್ರಮಾಣದಲ್ಲಿ ಉದ್ಯೋಗಕ್ಕಾಗಿ ನೋಂದಣೆ ಯಾವ ಪ್ರಮಾಣದಲ್ಲಿ ಆಗಿವೆ ಎನ್ನುವಂತಹ ವಿಷಯವನ್ನು ತಿಳಿಸುತ್ತದೆ.

ಕೋಷ್ಟಕ: 5.9

ಉದ್ಯೋಗಕ್ಕಾಗಿ ನೋಂದಣಿ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	126	63.00	158	79.00	284	71.00
ಇಲ್ಲ	74	37.00	42	21.00	116	29.00
ಒಟ್ಟು	200	100.00	200	100.00	400	100.00

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಉದ್ಯೋಗ ಪಡೆಯುವ ಕೂಲಿ ಕಾರ್ಮಿಕರಿಗೆ ಕಡ್ಡಾಯವಾಗಿ ಗ್ರಾಮಪಂಚಾಯತಿಯಲ್ಲಿ ನೋಂದಣಿ ಮಾಡಿಸಿ ಉದ್ಯೋಗ ಚೀಟಿ ಪಡೆಯಬೇಕೆಂಬ ನಿಯಮವಿರುವುದು. ಉದ್ಯೋಗಕ್ಕಾಗಿ ನೋಂದಣೆ ಮಾಡಿಸಿದವರ ಪ್ರಮಾಣ ಗುಬ್ಬಿ ತಾಲೂಕಿನ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 63 ರಷ್ಟು ಕಂಡುಬಂದರೆ, ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 79.00ರಷ್ಟು ಕಂಡುಬರುತ್ತದೆ. ಎರಡು ಗ್ರಾಮಪಂಚಾಯತಿಗಳಲ್ಲಿ ಶೇಕಡ 71ರಷ್ಟು ನೋಂದಣಿಯಾಗಿರುತ್ತದೆ.

5.10. ಉದ್ಯೋಗದ ಚೀಟಿ ವಿವರ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಉದ್ಯೋಗಕ್ಕಾಗಿ ನೋಂದಣಿ ಯಾದ ಮೇಲೆ ಉದ್ಯೋಗ ನೀಡುವ ಭರವಸೆಯ ಹಿನ್ನೆಲೆಯಲ್ಲಿ ಉದ್ಯೋಗದ ಚೀಟಿ ನೀಡುವುದು ಕಾಯಿದೆಯ ನಿಯಮವಾಗಿರುತ್ತದೆ. ದುಡಿಯುವ ಅರ್ಹತೆಯುಳ್ಳ ಪ್ರತಿ ಕುಟುಂಬಗಳಿಗೂ ಉದ್ಯೋಗದ ಚೀಟಿಯನ್ನು ಕಡ್ಡಾಯವಾಗಿ ನೀಡಬೇಕಾಗುತ್ತದೆ. ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ದುಡಿಯುವ ವರ್ಗದ ಕುಟುಂಬಗಳಿಗೆ ಉದ್ಯೋಗದ ಚೀಟಿ ನೀಡಿರುವುದು ಈ ಕೆಳಕಂಡ ಕೋಷ್ಟಕದಿಂದ ತಿಳಿಯುತ್ತದೆ.

ಕೋಷ್ಟಕ : 5.10

ಉದ್ಯೋಗದ ಚೀಟಿ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	115	57.50	131	65.50	246	61.50
ಇಲ್ಲ	85	42.50	69	34.5	154	38.50
ಒಟ್ಟು	200	100.00	200	100.00	300	100.00

ಉದ್ಯೋಗ ಖಾತರಿ ಕಾಯಿದೆಯಡಿ ಗ್ರಾಮಪಂಚಾಯತಿ ಉದ್ಯೋಗಕ್ಕಾಗಿ ನೋಂದಣೆ ಮಾಡಿಸಿದ ಕುಟುಂಬಗಳಿಗೆ ಉದ್ಯೋಗದ ಚೀಟಿಯನ್ನು ನೀಡಿರುವುದರ ಪ್ರಮಾಣ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 57.50ರಷ್ಟು ಮಾಹಿತಿ ನೀಡಿರುವುದು ತಿಳಿದು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಿಂದ ಶೇಕಡ 65.50.ರಷ್ಟು ತಿಳಿದು ಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 61.50ರಷ್ಟು ಕಂಡು ಬರುತ್ತದೆ.


5.11. ಉದ್ಯೋಗದ ಚೀಟಿಯನ್ನು ಎಷ್ಟು ದಿನಕ್ಕೆ ಪಡೆದುಕೊಂಡಿದೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅಡಿ ನೋಂದಣಿ ಮಾಡಿದ ಕುಟುಂಬಗಳಿಗೆ ಉದ್ಯೋಗ ನೀಡುವ ಸಲುವಾಗಿ ಉದ್ಯೋಗದ ಚೀಟಿ ವಿತರಣೆ ಮಾಡುವುದು ಉದ್ಯೋಗದ ಕಾಯಿದೆ ಕಡ್ಡಾಯಗೊಳಿಸಿದೆ. ಗ್ರಾಮೀಣ ಕೂಲಿಕಾರರಿಗೆ "ಉದ್ಯೋಗದ ಹಕ್ಕನ್ನು" ಕಲ್ಪಿಸಿರುವುದು ಒಂದು ವಿಶೇಷತೆಯಾಗಿರುತ್ತದೆ. ಉದ್ಯೋಗ ನೀಡುವಲ್ಲಿ ಕೂಲಿಕಾರರಿಗೆ ನೋಂದಣಿ ಮಾಡಿದ ಮೇಲೆ ಒಂದು ವಾರದೊಳಗೆ ಉದ್ಯೋಗದ ಚೀಟಿ ವಿತರಣೆ ಮಾಡುವುದು ಕಾಯಿದೆಯ ನಿಯಮಾವಳಿ ಆಗಿರುವುದು. ಅಧ್ಯಯನ ಕ್ಷೇತ್ರದಲ್ಲಿ ಉದ್ಯೋಗ ಖಾತರಿ ಕಾಯಿದೆಯ ನಿಯಮಾವಳಿ

ಪ್ರಕಾರ ನೋಂದಣಿ ಮಾಡಿದ ಮೇಲೆ ಎಷ್ಟು ದಿನದೊಳಗಾಗಿ ಉದ್ಯೋಗದ ಚೀಟಿ ವಿತರಣೆ ಮಾಡಿದ್ದಾರೆ ಎಂಬುದನ್ನು ತಿಳಿಸುತ್ತದೆ.

ಸ್ತಂಭ ರೇಖಾ ಚಿತ್ರ : 17

ಉದ್ಯೋಗದ ಚೀಟಿಯನ್ನು ಎಷ್ಟು ದಿನಕ್ಕೆ ಪಡೆದುಕೊಂಡಿದೆ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಅಧ್ಯಯನ ಕ್ಷೇತ್ರದಲ್ಲಿ ಉದ್ಯೋಗಕ್ಕಾಗಿ ನೋಂದಣೆ ಮಾಡಿಸಿದ ಕುಟುಂಬಗಳಿಗೆ ಉದ್ಯೋಗದ ಚೀಟಿಗಳನ್ನು ಒಂದು ವಾರದೊಳಗೆ ವಿತರಿಸುವ ಬದಲು 30 ದಿನದೊಳಗಾಗಿ ವಿತರಿಸಿದೆ ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 39.00 ರಷ್ಟು ಉದ್ಯೋಗದ ಚೀಟಿ ನೀಡಿರುವುದು ತಿಳಿದು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಿಂದ ಶೇಕಡ 18.00.ರಷ್ಟು ಕಂಡುಬಂದರೆ ಒಟ್ಟಾರೆ ಗ್ರಾಮಪಂಚಾಯತಿಯಿಂದ ಶೇಕಡ 28.50ರಷ್ಟು ಕಂಡು ಬರುತ್ತದೆ ಮತ್ತು ಉದ್ಯೋಗದ ಚೀಟಿಗಳನ್ನು ವಿತರಿಸಿರುವ ಮಾಹಿತಿಯೇ ಇಲ್ಲವೆನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 20.00ರಷ್ಟು ಬಂದರೆ, ದೊಡ್ಡೇರಿ ಗ್ರಾಮ ಪಂಚಾಯತಿಯಿಂದ ಶೇಕಡ 10.50ರಷ್ಟು ತಿಳಿಯುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 15.25ರಷ್ಟು ಕಂಡು ಬರುತ್ತದೆ.

5.12. ಹಣ ಪಡೆದು ಉದ್ಯೋಗದ ಚೀಟಿ ವಿತರಣೆ ವಿವರ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅಡಿ ಉದ್ಯೋಗ ಬಯಸುವ ಕೂಲಿಕಾರನಿಗೆ ಉಚಿತವಾಗಿ ಉದ್ಯೋಗದ ಚೀಟಿ ನೀಡಲು ಕಾಯಿದೆ ಸೂಚಿಸಿದೆ. ಆದರೆ ಅಧ್ಯಯನ ಕ್ಷೇತ್ರದಲ್ಲಿ ಉದ್ಯೋಗ ನೀಡುವ ಸಲುವಾಗಿ ಉದ್ಯೋಗದ ಚೀಟಿಗಳನ್ನು ಕೂಲಿ ಕಾರ್ಮಿಕರಿಗೆ ಹೇಗೆ ನೀಡಿದೆ ಎನ್ನುವುದನ್ನು ಈ ಕೋಷ್ಟಕದಲ್ಲಿ ವ್ಯಕ್ತಪಡಿಸುತ್ತದೆ.

ಕೋಷ್ಟಕ: 5.11

ಹಣ ಪಡೆದು ಉದ್ಯೋಗದ ಚೀಟಿ ವಿತರಣೆ ವಿವರ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಉದ್ಯೋಗದ ಚೀಟಿ ಉಚಿತವಾಗಿ ನೀಡಿರುತ್ತಾರೆ		200	100.00	198	99.00	398	99.50
ಪಡೆದು	50 ರೂಪಾಯಿ	0	0.00	2	1.00	2	0.50
	100 ರೂಪಾಯಿ	0	0.00	0	0.00	0	0.00
	300 ರೂಪಾಯಿ	0	0.00	0	0.00	0	0.00
	300 ರೂಪಾಯಿ ಗಿಂತ ಹೆಚ್ಚು	0	0.00	0	0.00	0	0.00
ಒಟ್ಟು		**200**	**100.00**	**200**	**100.00**	**400**	**100.00**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಅಧ್ಯಯನ ಕ್ಷೇತ್ರದಲ್ಲಿ ಉದ್ಯೋಗಕ್ಕಾಗಿ ನೋಂದಣಿ ಮಾಡಿಸಿದ ಕುಟುಂಬಗಳಿಗೆ ಉದ್ಯೋಗದ ಚೀಟಿಗಳನ್ನು ಉಚಿತವಾಗಿಯೇ ನೀಡಿರುತ್ತಾರೆ ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100.00ರಷ್ಟು ಉಚಿತವಾಗಿ ನೀಡಿರುವುದು ಕಂಡು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಿಂದ ಶೇಕಡ 99.00ರಷ್ಟು ಕಂಡುಬಂದರೆ ಒಟ್ಟಾರೆ ಗ್ರಾಮ ಪಂಚಾಯತಿಯಿಂದ ಶೇಕಡ 99.50ರಷ್ಟು ಕಂಡು ಬರುತ್ತದೆ.

5.13 ಉದ್ಯೋಗದ ಚೀಟಿ ಮಾಡಿಸಿಕೊಟ್ಟಿರುವವರು ಯಾರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ 2005ರಲ್ಲಿ ರೂಪಗೊಂಡು ಅನುಷ್ಠಾನಗೊಳ್ಳುತ್ತ ಬಂದಿರುವುದು. ಈ ಕಾಯಿದೆ ಅಡಿ ಗ್ರಾಮಪಂಚಾಯತಿ ವ್ಯಾಪಕವಾದ ತಿಳುವಳಿಕೆ ಮೂಡಿಸುವುದು ಈ ಮೂಲಕ ಸಮುದಾಯದ ಮನಸ್ಸು ಮತ್ತು ಭಾವನೆ ಬದಲಾಯಿಸುವುದು. ಜನರು ತಾವೇ ಯೋಜನೆಯಲ್ಲಿ ಭಾಗವಹಿಸುವಂತೆ ಮಾಡುವುದು. ನೇರವಾಗಿ ಉದ್ಯೋಗದ ಚೀಟಿ ಪಡೆಯುವಂತೆ ಮಾಡುವುದು. ಇದಕ್ಕೆ ಗ್ರಾಮಪಂಚಾಯತಿ ಉದ್ಯೋಗದ ಚೀಟಿ ನೀಡುವುದು ಕಾಯಿದೆಯ ನಿಯಮವಾಗಿರುವುದು. ಈ ಹಿನ್ನೆಲೆಯಲ್ಲಿ ಅಧ್ಯಯನ ಕ್ಷೇತ್ರದಲ್ಲಿ ಕೂಲಿಗಾಗಿ ಉದ್ಯೋಗದ ಚೀಟಿಯನ್ನು ಯಾರು ಮಾಡಿಸಿಕೊಟ್ಟಿರುವವರು ಮತ್ತು ಯಾರು ಯಾವ ಪ್ರಮಾಣದಲ್ಲಿ ಮಾಡಿಸಿಕೊಟ್ಟರು ಎಂಬುದನ್ನು ತಿಳಿಸುತ್ತದೆ.

ಕೋಷ್ಟಕ: 5.12

ಉದ್ಯೋಗದ ಚೀಟಿ ಮಾಡಿಸಿಕೊಟ್ಟಿರುವವರು ಯಾರು

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ವಿವರ	ಉದ್ಯೋಗದ ಚೀಟಿಯನ್ನು ಕಾರ್ಮಿಕರೇ ಮಾಡಿಸಿ ಕೊಂಡಿರುವುದು	0	0.00	10	5.00	10	2.50
	ಗುತ್ತಿಗೆದಾರರಿಂದ ಮಾಡಿಸಿಕೊಂಡಿರುವುದು	200	100.00	158	79.00	358	89.50
	ಗ್ರಾಮಪಂಚಾಯತಿ ನೌಕರರಿಂದ ಮಾಡಿಸಿ ಕೊಂಡಿರುವುದು	0	0.00	4	2.00	4	1.00
	ಗ್ರಾ.ಪಂ ಚುನಾಯತಿ ಪ್ರತಿನಿಧಿಗಳಿಂದ	0	0.00	28	14.00	28	7.00
ಒಟ್ಟು		**200**	**100.00**	**200**	**100.00**	**400**	**100.00**


ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಉದ್ಯೋಗದ ಚೀಟಿಗಳನ್ನು ಗ್ರಾಮ ಪಂಚಾಯತಿ ನೀಡಬೇಕಾಗಿರುತ್ತದೆ. ಆದರೆ ಉದ್ಯೋಗದ ಚೀಟಿಗಳನ್ನು ಗುತ್ತಿಗೆದಾರರೆ ಕೂಲಿಕಾರರ ಹೆಸರು ಹೇಳಿ ಮಾಡಿಸಿಕೊಂಡು ನೀಡಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100.00ರಷ್ಟು ಕಂಡು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಿಂದ ಶೇಕಡ 79.00. ಒಟ್ಟಾರೆ ಗ್ರಾಮ ಪಂಚಾಯತಿಯಿಂದ ಶೇಕಡ 89.50 ರಷ್ಟು ಕಂಡು ಬರುತ್ತದೆ. ಇದನ್ನು ಹೊರೆತು ಪಡಿಸಿದರೆ ಕೂಲಿಕಾರರು, ಗ್ರಾಮಪಂಚಾಯತಿ ಸದಸ್ಯರು, ಗ್ರಾಮಪಂಚಾಯತಿಯವರು ಉದ್ಯೋಗದ ಚೀಟಿಗಳನ್ನು ಮಾಡಿಸಿಕೊಟ್ಟಿರುವುದು ಅತೀ ಕಡಿಮೆ ಪ್ರಮಾಣದಲ್ಲಿರುವುದು ತಿಳಿಯುತ್ತದೆ.

5.14 ಉದ್ಯೋಗದ ಚೀಟಿ ಇರುವ ಜಾಗ/ಸ್ಥಳ ಯಾವುದು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ 2005ರಲ್ಲಿ ರೂಪುಗೊಂಡು ಅನುಷ್ಠಾನಗೊಳ್ಳುತ್ತ ಬಂದಿರುವುದು. ಆದರೆ ಕಾಯಿದೆ ಕೂಲಿಕಾರರ ಅನುಕೂಲಕ್ಕೆ ಮತ್ತು ಕೆಲಸ ಲಭ್ಯವಾದ ಸಮಯಕ್ಕೆ ಉದ್ಯೋಗ ಪಡೆಯಲು ಮತ್ತು ಎಷ್ಟು ದಿನ ಕೂಲಿ ಮಾಡಿದ್ದೇವೆ? ಎಷ್ಟು ಕೂಲಿ ಪಡೆದಿದ್ದೇನೆ? ಎನ್ನುವುದರ ಬಗ್ಗೆ ಸ್ಪಷ್ಟ ಮಾಹಿತಿಗಾಗಿ ಉದ್ಯೋಗದ ಚೀಟಿ ಕಡ್ಡಾಯವಾಗಿ ಕೂಲಿಕಾರರಲ್ಲೇ ಇರತಕ್ಕದ್ದು ಎಂದು ಕಾಯಿದೆ ನಿರ್ದೇಶಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನ ಕ್ಷೇತ್ರದಲ್ಲಿ ಉದ್ಯೋಗಕ್ಕಾಗಿ ನೀಡಿದಂತಹ ಉದ್ಯೋಗದ ಚೀಟಿಗಳು ಎಲ್ಲಿ ಇರುವವು ಎನ್ನುವುದನ್ನು ತಿಳಿಸುತ್ತದೆ.

ಸ್ತಂಭ ರೇಖಾ ಚಿತ್ರ: 18

ಉದ್ಯೋಗದ ಚೀಟಿ ಮಾಡಿಸಿಕೊಟ್ಟಿರುವರು ಯಾರು



ಉದ್ಯೋಗ ಪಡೆಯುವ ಕುಟುಂಬಗಳು ಉದ್ಯೋಗದ ಚೀಟಿಗಳನ್ನು ತಮ್ಮ ಬಳಿಯಲ್ಲಿಯೇ ಇಟ್ಟುಕೊಂಡಿರಬೇಕು ಎಂಬ ಎಂ.ಜಿ.ಎನ್.ಆರ್.ಇ.ಜಿ.ಎ ನಿಯಮದಡಿ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಕೂಲಿಕಾರರಿಗೆ ಸೇರಿದ ಉದ್ಯೋಗದ ಚೀಟಿಗಳು ಶೇಕಡ 87.50ರಷ್ಟು ಗುತ್ತಿಗೆದಾರರ ಕೈಯಲ್ಲಿರುವುದು ಕಂಡು ಬಂದಿದೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 60.50 ರಷ್ಟು ಉದ್ಯೋಗದ ಚೀಟಿಗಳು ಗುತ್ತಿಗೆದಾರರ ಕೈಯಲ್ಲಿರುವುದು ಕಂಡು ಬರುತ್ತವೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 11.50ರಷ್ಟು ಉದ್ಯೋಗದ ಚೀಟಿಗಳು ಗ್ರಾಮ ಪಂಚಾಯತಿಯಲ್ಲಿದ್ದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 22.50ರಷ್ಟು ಗ್ರಾಮ ಪಂಚಾಯತಿಯಲ್ಲಿರುವುದು ಕಂಡು ಬರುತ್ತದೆ. ಒಟ್ಟಾರೆ ಎರಡು ಪಂಚಾಯತಿಯಿಂದ ಗುತ್ತಿಗೆದಾರರಲ್ಲಿ ಶೇಕಡ 74ರಷ್ಟು ಉದ್ಯೋಗದ ಕಾರ್ಡ್ ಇರುವುದು ದೃಢಪಟ್ಟಿದೆ. ಗ್ರಾಮಪಂಚಾಯತಿಯಲ್ಲಿ ಉದ್ಯೋಗದ ಚೀಟಿ ಶೇಕಡ 17ರಷ್ಟು ಉದ್ಯೋಗ ಕಾರ್ಡ್ ಇರುವುದು ಕಂಡು ಬರುತ್ತದೆ. ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಗುತ್ತಿಗೆದಾರರಲ್ಲಿ ಕೂಲಿಕಾರರ ಉದ್ಯೋಗದ ಚೀಟಿ ಇರುವ ಪ್ರಮಾಣ ಹೆಚ್ಚು ಕಂಡು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಉದ್ಯೋಗದ ಚೀಟಿಗಳು ಗ್ರಾಮಪಂಚಾಯತಿ ಕಛೇರಿಯಲ್ಲಿ ಇರುವುದು ಹೆಚ್ಚು ಕಂಡು ಬರುತ್ತವೆ. ಉದ್ಯೋಗ ಖಾತರಿ ಕಾಯಿದೆ ಅಡಿ ಗುತ್ತಿಗೆದಾರರನ್ನು ನಿಷೇಧಿಸಿದ್ದರೂ ಎರಡು ಗ್ರಾಮಪಂಚಾಯತಿಯಲ್ಲಿಯೂ ಗುತ್ತಿಗೆದಾರರು ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳ ಸಹಾಯದಿಂದ ಪ್ರವೇಶ ಮಾಡಿರುವುದು ಶೇಕಡ 56ರಷ್ಟು ಕಂಡು ಬರುತ್ತದೆ.

5.15. ಬ್ಯಾಂಕ್ ಖಾತೆ ಮಾಡಿಸಿಕೊಟ್ಟವರು ಯಾರು

ಭಾರತದಲ್ಲಿ ಅನೇಕ ಗ್ರಾಮೀಣಾಭಿವೃದ್ಧಿ ಯೋಜನೆಗಳು ಅನುಷ್ಠಾನ ಮಾಡಿಕೊಂಡೇ ಬಂದಿರುವುದು ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗ ನೀಡುವುದರ ಮೂಲಕ ಬಡತನ ನಿರ್ಮೂಲನೆ ಮಾಡುವ ಆಶಯವನ್ನು ಇಟ್ಟುಕೊಂಡೇ ಬಂದಿರುವುದು ಕಾಣಬಹುದು. ಹಿಂದೆ ಅನುಷ್ಠಾನಗೊಂಡ ಅನೇಕ ಯೋಜನೆಗಳು ಅನೇಕ ಲೋಪದೋಷಗಳಿಂದ ಕೂಡಿದ್ದವು. ಯೋಜನೆಯಲ್ಲಿ ಕೂಲಿ ಮಾಡಿದ ಕೂಲಿಕಾರನಿಗೆ ಕೂಲಿಯೂ ಸಿಗದೆ ಮಧ್ಯವರ್ತಿಗಳ ಪಾಲಾಗಿರುವುದು ಕಂಡು ಬಂದಿರುವುದು. ಈ ಹಿನ್ನೆಯಲ್ಲಿ ಯೋಜನೆಗಳ ಸಿದ್ಧಾಂತದ ನಿಯಮಗಳನ್ನು ಉಲ್ಲಂಘನೆ ನಿಜವಾದ ಕೂಲಿಕಾರನಿಗೆ ಕೂಲಿ ನೀಡಬೇಕೆಂದು ನೀತಿ ನಿರೂಪಕರ ಮತ್ತು ಜನಪರ ಚಳುವಳಿಗಳ ಪ್ರಯತ್ನವು ನಡೆದಿರುವುದು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಲ್ಲಿ ಕೂಲಿಕಾರನಿಗೆ ಮೋಸ ಹೋಗದಂತೆ ನಿಗದಿ ಪಡಿಸಿದ ಕೂಲಿ ನೀಡುವ ಮಹತ್ವಕಾಂಕ್ಷೆಯಿಂದ ಈ ಕಾಯಿದೆ ಅಡಿ ಕೂಲಿಕಾರ್ಮಿಕರು ಕೂಲಿ ಮಾಡಿದ ಕೂಲಿ ಹಣವನ್ನು ಬ್ಯಾಂಕ್ ಮೂಲಕವಾಗಿ ಪಡೆಯುವ ಅವಕಾಶ ಕಲ್ಪಿಸಲಾಗಿದೆ. ಜನರಿಗೆ ತಿಳುವಳಿಕೆ ಮೂಡಿಸುವುದು ಆ ಮೂಲಕವಾಗಿ ಬ್ಯಾಂಕ್ ಖಾತೆ ಪಡೆಯುವುದು ಈ ಕಾಯಿದೆಯ ಒಂದು ನಿಯಮವಾಗಿರುವುದು. ಈ ಅಧ್ಯಯನ ಕ್ಷೇತ್ರದಲ್ಲಿ ಕೂಲಿಕಾರರ ಬ್ಯಾಂಕ್ ಹೇಗೆ ನಡೆದಿದೆ ಎನ್ನುವುದನ್ನು ಇಲ್ಲಿ ತಿಳಿಸುತ್ತದೆ.


ಕೋಷ್ಟಕ : 5.13

ಬ್ಯಾಂಕ್ ಖಾತೆ ಮಾಡಿಸಿಕೊಟ್ಟವರು ಯಾರು

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ನಾವೆ ಮಾಡಿಸಿಕೊಂಡೆವು	200	100.00	167	83.50	367	91.75
ಗ್ರಾಮಪಂಚಾಯತಿಯಿಂದ	0	0.00	2	1.00	2	0.50
ಗುತ್ತಿಗೆದಾರರಿಂದ	0	0.00	30	15.00	30	7.50
ಗ್ರಾಮಪಂಚಾಯತಿ ಚುನಾಯಿತ ಪ್ರತಿನಿಧಿಗಳಿಂದ.	0	0.00	1	0.50	1	0.25
ಬ್ಯಾಂಕ್‌ನಲ್ಲಿ ಖಾತೆ ಹೊಂದಿಲ್ಲದವರು	0	0.00	0	0.00	0	0.00
ಒಟ್ಟು	**200**	**100.00**	**200**	**100.00**	**400**	**100.00**

ಸ್ತಂಭ ರೇಖಾ ಚಿತ್ರ : 19

ಬ್ಯಾಂಕ್ ಖಾತೆ ಮಾಡಿಸಿಕೊಟ್ಟವರು ಯಾರು



ಎಂ.ಜಿ.ಎನ್.ಆರ್.ಇ.ಜಿ.ಎ ಕಾಯಿದೆಯಡಿ ಪ್ರತಿವರ್ತಿಗಳಿಗೆ ಉದ್ಯೋಗದ ಚೀಟಿಯನ್ನು ಯಾರು ಮಾಡಿಸಿಕೊಟ್ಟರು ಮತ್ತು ಯಾರು ಯಾವ ಪ್ರಮಾಣದಲ್ಲಿ ಮಾಡಿಸಿಕೊಟ್ಟರು ಎನ್ನುವುದರ ಬಗ್ಗೆ ಇಲ್ಲಿ ತಿಳಿಸುತ್ತದೆ. ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 100ರಷ್ಟು ಬ್ಯಾಂಕ್ ಖಾತೆಯನ್ನು ಸ್ವತಃ ಕೂಲಿಕಾರರೇ ಮಾಡಿಸಿಕೊಂಡಿರುವುದು ಕಂಡು ಬರುತ್ತದೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 83.50 ರಷ್ಟು ಬ್ಯಾಂಕ್ ಖಾತೆಯನ್ನು ಕೂಲಿಕಾರರೇ ಮಾಡಿಸಿಕೊಂಡಿರುವುದು ಕಂಡು ಬರುವುದು. ನಂತರದ ಸ್ಥಾನದಲ್ಲಿ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 15ರಷ್ಟು ಗುತ್ತಿಗೆದಾರರಿಂದ ಮಾಡಿಸಿಕೊಂಡರೆ ಉಳಿದ ಶೇಕಡ 0.50ರಷ್ಟು ಗ್ರಾಮಪಂಚಾಯತಿಯ ಸದಸ್ಯರಿಂದ ಬ್ಯಾಂಕ್ ಖಾತೆ ಮಾಡಿಸಿಕೊಂಡಿರುವುದು ಕಂಡುಬರುತ್ತದೆ. ಒಟ್ಟಾರೆ ಸ್ವತಃ ಮಾಡಿಸಿಕೊಂಡಿರುವುದೇ ದೊಡ್ಡ ಪ್ರಮಾಣದಲ್ಲಿ ಕಂಡು ಬರುತ್ತದೆ ಅದರಲ್ಲೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅನುಷ್ಠಾನ ಮಾಡುವುದಕ್ಕೂ ಮೊದಲೇ ಕೂಲಿಕಾರರು ಬ್ಯಾಂಕ್ ಖಾತೆ ಮಾಡಿಸಿ ಕೊಂಡಿರುವುದು ಕಂಡುಬರುವುದು.

5.16. ಬ್ಯಾಂಕ್ ಖಾತೆ ಹೇಗೆ ತೆರೆಯಲಾಗುತ್ತದೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅಡಿ ಗ್ರಾಮೀಣ ಪ್ರದೇಶದಲ್ಲಿ ಕೂಲಿ ಮಾಡಲು ಅರ್ಹತೆ ಇರುವ ಕೂಲಿಕಾರನಿಗೆ ಕೂಲಿ ಕೆಲಸ ಮಾಡಲಿಕ್ಕೆ ಪ್ರೇರಣೆ ನೀಡುವ ಸಲುವಾಗಿ ಮತ್ತು ನಗದು ರೂಪದಲ್ಲಿ ನೀಡುವ ಕೂಲಿಯಲ್ಲಿ ಹಿಂದೆ ಅನೇಕ ಯೋಜನೆಗಳಲ್ಲಿ ಲೋಪದೋಷಗಳು ನಡೆದಿರುತ್ತವೆ. ದುಡಿಮೆಗಾರರಿಗೆ ನಿಗದಿ ಪಡಿಸಿದ ಕೂಲಿ, ಮಾಡಿದ ಕೆಲಸಕ್ಕೆ ತಕ್ಕ ಕೂಲಿಯನ್ನು

ಸಕಾಲಕ್ಕೆ ಪಡೆಯುವ ಸಲುವಾಗಿ ಉದ್ಯೋಗ ಖಾತರಿ ಕಾಯಿದೆಯಲ್ಲಿ ಅವಕಾಶ ಮಾಡಿಕೊಟ್ಟಿದೆ. ಅದರಲ್ಲೂ ಪ್ರಮುಖವಾಗಿ ಕೂಲಿ ಕೆಲಸ ಮಾಡುವ ದುಡಿಮೆಗಾರನಿಗೆ ಬ್ಯಾಂಕ್ ನಲ್ಲಿ ಡಿಪಾಜಿಟ್ ಇಲ್ಲದೆ ಬ್ಯಾಂಕ್ ಖಾತೆ ಮಾಡಿಕೊಡಲು ಕಾಯಿದೆ ನಿಯಮಗಳು ಒತ್ತಿ ಹೇಳುತ್ತದೆ. ಈ ತರಹದ ನಿಯಮಗಳು ಈ ಅಧ್ಯಯನ ಕ್ಷೇತ್ರಗಳಲ್ಲಿ ಹೇಗೆ ಅನುಸರಿಸಿ ಅನುಷ್ಠಾನಗೊಂಡಿರುತ್ತವೆ ಎನ್ನುವ ಅಂಶಗಳನ್ನು ಯಾವ ಪ್ರಮಾಣದಲ್ಲಿ ಅನುಸರಿಸಿವೆ ಎಂಬುದನ್ನು ತಿಳಿಸುತ್ತವೆ.

ಕೋಷ್ಟಕ: 5.14

ಕಾರ್ಮಿಕರ ಬ್ಯಾಂಕ್ ಖಾತೆ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಬ್ಯಾಂಕ್ ಖಾತೆಯನ್ನು ನಿಮಗೆ ಉಚಿತವಾಗಿ ಮಾಡಿಕೊಟ್ಟಿರುವರೆ	0	0.00	9	4.50	9	2.25
100 ರೂ	0	0.00		0.00		0.00
200 ರೂ	0	0.00	1	0.50	1	0.25
300 ರೂ	0	0.00	24	12.00	24	6.00
400 ರೂ	1	0.50		0.00	1	0.25
500 ರೂ	199	99.50	164	82.00	363	90.75
500 ರೂ ಕಿಂತ ಹೆಚ್ಚು	0	0.00	0	0.00	0	0.00
ಮೊದಲೇ ಬ್ಯಾ.ಖಾತೆ ಮಾಡಿಸಲಾಯಿತು	0	0.00	2	1.00	2	0.50
ಒಟ್ಟು	**200**	**100.00**	**200**	**100.00**	**400**	**100.00**

ಉದ್ಯೋಗ ಖಾತರಿ ಕಾಯಿದೆ ಅಡಿ 0.00 ರೂಪಾಯಿ ಡಿಪಾಜಿಟ್ ಹಣಕ್ಕೆ ಕೂಲಿಕಾರರಿಗೆ ಬ್ಯಾಂಕ್ ಖಾತೆ ತೆರೆಯಬೇಕು ಎನ್ನುವುದು ಕಾಯಿದೆಯ ನಿಯಮವಾಗಿರುವುದು. ಈ ಹಿನ್ನೆಯಲ್ಲಿ ಬ್ಯಾಂಕ್ ಖಾತೆಯನ್ನು ಉಚಿತವಾಗಿ ಮಾಡಿಸಿಕೊಟ್ಟಿರುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 0.00 ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 4.50ರಷ್ಟು ಕಂಡು ಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 2.25ರಷ್ಟು ಅಧ್ಯಯನದಿಂದ ವ್ಯಕ್ತವಾಗುತ್ತದೆ. ಒಟ್ಟಾರೆ ಪರಿಸ್ಥಿತಿಯನ್ನು ಅವಲೋಕಿಸಿದರೆ 500 ರೂಪಾಯಿ ಡಿಪಾಜೆಟ್ ಕಟ್ಟಿಸಿಕೊಂಡು ಬ್ಯಾಂಕ್ ಖಾತೆ ತೆರೆಯಲು ಅವಕಾಶ ಮಾಡಿಕೊಟ್ಟಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 99.50ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 82.00ರಷ್ಟು

ಕಂಡು ಬರುತ್ತದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 90.75ರಷ್ಟು ತಿಳಿದು ಬಂದಿದೆ. ಉಚಿತವಾಗಿ ಬ್ಯಾಂಕ್ ಖಾತೆ ಮಾಡಿಸಿಕೊಟ್ಟಿರುವುದು ಕೇವಲ ಶೇಕಡ 2.25ರಷ್ಟು ಜನರಿಗೆ ಮಾತ್ರ. ಆದರೆ ಸಿದ್ಧಾಂತಕ್ಕೂ ಆಚರಣೆಗೂ ತುಂಬಾ ಅಂತರವನ್ನು ಕಾಯ್ದುಕೊಂಡಿರುವುದು ಪ್ರಸ್ತುತ ಅಧ್ಯಯನದಿಂದ ವ್ಯಕ್ತವಾಗುತ್ತದೆ.

5.17. ಉದ್ಯೋಗ ಚೀಟಿ ನವೀಕರಣ ವಿವರ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಕೂಲಿಕಾರರಿಗೆ ಉದ್ಯೋಗ ಪಡೆದುಕೊಳ್ಳಲು ಮತ್ತು ಬ್ಯಾಂಕ್ ಮೂಲಕವಾಗಿ ಕೂಲಿ ವೇತನ ಪಡೆದುಕೊಳ್ಳಲು ಉದ್ಯೋಗದ ಚೀಟಿ ಪ್ರಮುಖವಾದ ಪಾತ್ರ ಪಡೆದುಕೊಳ್ಳುತ್ತದೆ. ಮುಂದೆ ಕೂಲಿಕಾರರು ಮತ್ತೆ ಉದ್ಯೋಗವನ್ನು ಗ್ರಾಮಪಂಚಾಯತಿಯಿಂದ ಪಡೆಯಬೇಕಾದರೆ ಒಂದು ವರ್ಷಕ್ಕೊಮ್ಮೆ ಉದ್ಯೋಗ ಚೀಟಿಗಳನ್ನು ನವೀಕರಣ ಮಾಡಬೇಕು ಎನ್ನುವುದು ಕಾಯಿದೆಯ ನಿಯಮವಾಗಿರುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಒಂದು ಸಾರಿ ವಿತರಣೆ ಮಾಡಿದ ಉದ್ಯೋಗದ ಚೀಟಿಗಳನ್ನು ಐದು ವರ್ಷದ ನಂತರ ನವೀಕರಣ ಮಾಡಿರುವುದನ್ನು ಪ್ರಸ್ತುತ ಅಧ್ಯಯನ ತಿಳಿಸುತ್ತದೆ.

ಕೋಷ್ಠಕ: 5.15

ಉದ್ಯೋಗ ಚೀಟಿ ನವೀಕರಣ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
6 ತಿಂಗಳಿಗೊಮ್ಮೆ	0	0.00	7	3.50	7	1.75
1 ವರ್ಷಕೊಮ್ಮೆ	0	0.00	4	2.00	4	1.00
2 ವರ್ಷಕೊಮ್ಮೆ	0	0.00	3	1.50	3	0.75
3 ವರ್ಷಕೊಮ್ಮೆ	0	0.00	2	1.00	2	0.50
4 ವರ್ಷಕೊಮ್ಮೆ	0	0.00	0	0.00	0	0.00
5 ವರ್ಷಕೊಮ್ಮೆ ಇದುವರೆಗೂ ಚೀಟಿ	0	0.00	0	0.00	0	0.00
ನವೀಕರಿಸಿರುವುದಿಲ್ಲ	198	99.00	125	62.50	323	80.75
ಗೊತ್ತಿರುವುದಿಲ್ಲ	2	1.00	59	29.50	61	15.25
ಒಟ್ಟು	**200**	**100.00**	**200**	**100.00**	**400**	**100.00**

5.18 ಉದ್ಯೋಗ ಚೀಟಿ ನವೀಕರಣಕ್ಕೆ ಸಂಬಂಧಿಸಿದಂತೆ

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಪ್ರಸ್ತುತ ಅಧ್ಯಯನ ಎರಡು ಗ್ರಾಮಪಂಚಾಯತಿಯಲ್ಲಿ ಅಧ್ಯಯನ ಕ್ಷೇತ್ರದಲ್ಲಿ ಅಧ್ಯಯನವನ್ನು ಕೈಗೊಂಡು ಅದರಿಂದ ವ್ಯಕ್ತವಾಗುವ ಅಂಶವೆಂದರೆ ಐದು ವರ್ಷಕ್ಕೊಮ್ಮೆ ಉದ್ಯೋಗದ ಚೀಟಿಗಳನ್ನು ನವೀಕರಣ ಮಾಡಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 0.00ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 0.00ರಷ್ಟು ಕಂಡು ಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 0.00 ರಷ್ಟು ಅಧ್ಯಯನದಿಂದ ವ್ಯಕ್ತವಾಗುತ್ತದೆ. ಇದುವರೆಗೂ ಉದ್ಯೋಗದ ಚೀಟಿ ನವೀಕರಿಸಿರುವುದಿಲ್ಲ ಎನ್ನುವುದಕ್ಕೆ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 99.00ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 62.50ರಷ್ಟು ಕಂಡು ಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 80.75ರಷ್ಟು ಅಧ್ಯಯನದಿಂದ ವ್ಯಕ್ತವಾಗುತ್ತದೆ.

5.19. ಕಾಮಗಾರಿಗಳ ಆಯ್ಕೆಯ ಪ್ರಕಟಣೆ

ಗ್ರಾಮೀಣಾಭಿವೃದ್ಧಿ ಯೋಜನೆಗಳಲ್ಲಿ ಮಾಹಿತಿ ಪ್ರಮುಖವಾದ ಪಾತ್ರವಹಿಸುವುದು. ಮಾಹಿತಿ ತಿಳಿದರೆ ಅದರ ಪ್ರಯೋಜನಗಳು ಮತ್ತು ಅದರ ಮಹತ್ವ ಮತ್ತು ಕೂಲಿಕಾರರ ಪಾತ್ರವೇನು? ಎಂಬುದರ ಬಗ್ಗೆ ಕೂಲಿಕಾರರಲ್ಲಿ ಪ್ರಶ್ನೆ ಎತ್ತುತ್ತದೆ. ಮತ್ತು ಚರ್ಚೆಗೆ ಗ್ರಾಸವಾಗುವುದು. ಯೋಜನೆಯ ಕಾಮಗಾರಿಗಳ ಗಾತ್ರ ಮತ್ತು ಸ್ಥಳ, ಕೆಲಸದ ಸ್ವರೂಪ ಮತ್ತು ಕಾಮಗಾರಿಯ ಸ್ಥಳಕ್ಕೂ ಗ್ರಾಮಕ್ಕೆ ಇರುವ ಅಂತರದ ಬಗ್ಗೆ ಮಾಹಿತಿ ನೀಡುತ್ತದೆ. ಇದರಿಂದ ಕೂಲಿಯ ಲಭ್ಯತೆ ದೊರೆಯುವುದು ಅದಕ್ಕೆ ಅನುಗುಣವಾಗಿ ಉದ್ಯೋಗ ಖಾತರಿ ಕಾಯಿದೆ ಅಡಿ ಉದ್ಯೋಗದ ಬಗ್ಗೆ ಭರವಸೆ ಮೂಡುವುದು. ಈ ವಿಷಯದ ಬಗ್ಗೆ ಉದ್ಯೋಗ ಖಾತರಿ ಕಾಯಿದೆಯ ನಿಯಮಗಳಲ್ಲಿ ಆಯ್ಕೆಯಾದ ಕಾಮಗಾರಿಗಳನ್ನು ಕೂಲಿಕಾರರ ಮಾಹಿತಿಗಾಗಿ ಗ್ರಾಮಪಂಚಾಯತಿ ಪ್ರಕಟಣೆಯ ಫಲಕದಲ್ಲಿ ಪ್ರಕಟಿಸಬೇಕು ಎಂದು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಕ್ಷೇತ್ರದಲ್ಲಿ ಆಯ್ಕೆಯಾದ ಕಾಮಗಾರಿಗಳನ್ನು ಗ್ರಾಮ ಪಂಚಾಯತಿ ನಾಮ ಫಲಕದಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರಿಗೆ ತಿಳಿಯುವಂತೆ ಅಧ್ಯಯನ ಕ್ಷೇತ್ರದಲ್ಲಿ ಪ್ರಕಟಿಸಿರುವುದನ್ನು ತಿಳಿಸುತ್ತದೆ.


ಕೋಷ್ಟಕ 5.16

ಕಾಮಗಾರಿಗಳ ಆಯ್ಕೆಯ ಪ್ರಕಟಣೆ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	0	0.00	11	5.50	11	2.75
ಇಲ್ಲ	200	100.00	176	88.00	376	94.00
ಗೊತ್ತಿಲ್ಲ	0	0.00	13	6.50	13	3.25
ಒಟ್ಟು	200	100.00	200	100.00	400	100.00

ಸ್ತಂಭ ರೇಖಾಚಿತ್ರ : 20

ಕಾಮಗಾರಿಗಳ ಆಯ್ಕೆಯ ಪ್ರಕಟಣೆ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಆಯ್ಕೆಯಾದ ಕಾಮಗಾರಿಗಳನ್ನು ಕೂಲಿಕಾರರಿಗೆ ತಿಳಿಯುವ ಹಾಗೆ ಗ್ರಾಮಪಂಚಾಯತಿಯ ನಾಮಫಲಕದಲ್ಲಿ ಅಥವಾ ಸಾರ್ವಜನಿಕರಿಗೆ ತಿಳಿಯುವ ಹಾಗೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸುವುದನ್ನು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100ರಷ್ಟು ಗ್ರಾಮ ಪಂಚಾಯತಿ ಕೂಲಿಕಾರರಿಗೆ ಯಾವ ಸ್ಥಳದಲ್ಲೂ ಮಾಹಿತಿಯನ್ನು ಪ್ರಕಟಿಸಿರುವುದಿಲ್ಲವೆಂದು ಕಂಡುಬರುತ್ತದೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಕಾಮಗಾರಿಗಳ ವಿವರವನ್ನು ಗ್ರಾಮಪಂಚಾಯತಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಪ್ರಕಟಿಸದೇ ಇರುವುದು ಶೇಕಡ 88ರಷ್ಟು ಕಂಡುಬರುತ್ತದೆ ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 94ರಷ್ಟು ಕಂಡುಬರುವುದು. ಸಾರ್ವಜನಿಕವಾಗಿ ಜನರಿಗೆ ತಿಳಿಯುವ ಹಾಗೆ ಪ್ರಕಟಣೆಯಾಗಿರುವುದು ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ5.50 ರಷ್ಟು ಮಾತ್ರ ಕಂಡುಬರುವುದು. ಬೆಲವತ್ತ ಗ್ರಾಮಪಂಚಾಯತಿಗೆ ಹೋಲಿಕೆ ಮಾಡಿ ನೋಡಿದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಸ್ವಲ್ಪ ಪ್ರಮಾಣ ಪಾರದರ್ಶಕತೆ ಕಾಣಬಹುದು ಕಾರಣ ಇಲ್ಲಿಯ ಬಹುಪಾಲು ಜನರಿಗೆ ನಿರಂತರವಾಗಿ ಕಾಣುವ ನಿರುದ್ಯೋಗ ಸಮಸ್ಯೆ ಇರುವುದರಿಂದ ಜನರು ಕೆಲಸವಿಲ್ಲದೆ ಕೂತು ಕಾಲ ಕಳೆಯುವ ಪರಿಸ್ಥಿತಿ ಕಂಡುಬಂದಿರುವುದು.

5.20 ದಿನಗೂಲಿಗೆ ಅರ್ಜಿಹಾಕಲು ಕಾಮಗಾರಿಗಳ, ಸ್ಥಳದ ಪ್ರಕಟಣೆ

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಗ್ರಾಮಸಭೆ, ವಾರ್ಡ್‌ಸಭೆಗಳು ಮೂಲಕ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಸೃಷ್ಟಿಯಾದ ಉದ್ಯೋಗಗಳು ಮತ್ತು ಉದ್ಯೋಗದ ಸ್ಥಳ ಮುಂತಾದ ಮಾಹಿತಿಯನ್ನು ಸಾರ್ವಜನಿಕರ ಮಾಹಿತಿ ಮತ್ತು ಪಾರದರ್ಶಕತೆ ದೃಷ್ಟಿಯಿಂದ ಹಾಗೂ ಕೂಲಿಕಾರರಿಗೆ ಉದ್ಯೋಗ ಬಯಸಿ ಬರುವವರಿಗೆ ಗ್ರಾಮಪಂಚಾಯತಿಯ ಸೂಚನ ಫಲಕದಲ್ಲಿ ಪ್ರಕಟಿಸಲೇ ಬೇಕಾಗಿರುವುದು

ಕಾಯಿದೆಯ ನಿಯಮವಾಗಿರುತ್ತದೆ. ಈ ಹಿನ್ನೆಯಲ್ಲಿ ಅಧ್ಯಯನ ಕ್ಷೇತ್ರದಲ್ಲಿ ಉದ್ಯೋಗದ ಸ್ವರೂಪಗಳು ಮತ್ತು ಕಾಮಗಾರಿಗಳ ಮಾಹಿತಿಯನ್ನು ನಾಮ ಫಲಕದಲ್ಲಿ ಪ್ರಕಟಿಸಿರುವುದನ್ನು ಅಧ್ಯಯನ ತಿಳಿಸುತ್ತದೆ.


ಕೋಷ್ಟಕ: 5.17

ದಿನಗೂಲಿಗೆ ಅರ್ಜಿಹಾಕಲು ಕಾಮಗಾರಿಗಳ, ಸ್ಥಳದ ಪ್ರಕಟಣೆ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	0	0.00	1	0.50	1	0.25
ಇಲ್ಲ	200	100.00	199	99.50	399	99.75
ಒಟ್ಟು	200	100.00	200	100.00	400	100.00

ಸ್ತಂಭ ರೇಖಾ ಚಿತ್ರ : 21

ದಿನಗೂಲಿಗೆ ಅರ್ಜಿಹಾಕಲು ಕಾಮಗಾರಿಗಳ, ಸ್ಥಳದ ಪ್ರಕಟಣೆ




ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಆಯ್ಕೆಯಾದ ಕಾಮಗಾರಿಗಳನ್ನು ಕೂಲಿಕಾರರಿಗೆ ತಿಳಿಯುವ ಹಾಗೆ ಗ್ರಾಮಪಂಚಾಯತಿಯ ನಾಮ ಫಲಕದಲ್ಲಿ ಅಥವಾ ಸಾರ್ವಜನಿಕರಿಗೆ ತಿಳಿಯುವ ಹಾಗೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಣೆ ಮಾಡಿರುವುದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ0.00ರಷ್ಟು ಕಂಡು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಕಾಮಗಾರಿಗಳ ವಿವರವನ್ನು ಗ್ರಾಮಪಂಚಾಯತಿಯಲ್ಲಿ ಕೇವಲ ಶೇಕಡ 0.25ರಷ್ಟು ಮಾತ್ರ ಕಂಡುಬಂದಿದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 0.25ರಷ್ಟು ಮಾತ್ರ ಕಂಡುಬಂದಿದೆ. ಪ್ರಕಟಣೆ ಮಾಡದೇ ಇರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100.00 ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 99.50ರಷ್ಟು ಅಧ್ಯಯನದಿಂದ ತಿಳಿಯುತ್ತದೆ. ಒಟ್ಟು ರೀಯಾಯಿತಿಯಲ್ಲಿ ಶೇಕಡ 99.75ರಷ್ಟು ಇದೆ ಎನ್ನುವುದು ತಿಳಿಯುತ್ತದೆ.

5.22. ಉದ್ಯೋಗಕ್ಕಾಗಿ ಅರ್ಜಿ ಪ್ರಕ್ರಿಯೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ 2005ರಲ್ಲಿ ರೂಪಗೊಂಡು 2006ರಿಂದ ದೇಶಾದ್ಯಂತ ಅನುಷ್ಠಾನಗೊಂಡಿರುವುದು. ಉದ್ಯೋಗ ಖಾತರಿ ಕಾಯಿದೆಯ ನಿಯಮಗಳು ಏನನ್ನು ನಿರ್ದೇಶಿಸುತ್ತದೆ ಅಂದರೆ ಉದ್ಯೋಗ ನೀಡುವ ಯೋಜನೆಗಳು ಉದ್ಯೋಗ ಭರವಸೆ ನೀಡಲು "ಉದ್ಯೋಗದ ಹಕ್ಕು" ಎನ್ನುವ ಸಂವಿಧಾನಾತ್ಮ ಅಧಿಕಾರ ಗ್ರಾಮೀಣ ಕೂಲಿಕಾರರಿಗೆ ನೀಡಿರುವುದು. ಕಾಮಗಾರಿಗಳ ಆಯ್ಕೆ ಪ್ರಕ್ರಿಯೆಯ ನಂತರ ಉದ್ಯೋಗ ನೀಡಲು ಉದ್ಯೋಗಕ್ಕಾಗಿ ಗ್ರಾಮಪಂಚಾಯತಿ ಅರ್ಜಿಕರೆಯುವುದು ಕಡ್ಡಾಯ ಮಾಡಿರುವುದು. ಈ ಮೂಲಕ ಕೂಲಿ ಮಾಡಲು ಅರ್ಹತೆ ಮತ್ತು ಇಚ್ಚೆ ಉಳ್ಳುವರು ಅರ್ಜಿ ಹಾಕುವುದು ಮತ್ತು ಉದ್ಯೋಗ ಪಡೆಯುವುದು ಈ ಕಾಯಿದೆಯ ನಿಯಮವಾಗಿರುವುದು. ಈ ಕಾಯಿದೆಯ ಅನ್ವಯ ಈ ಅಧ್ಯಯನ ಕ್ಷೇತ್ರದಲ್ಲಿ ನಿಯಮಾವಳಿ ಪ್ರಕಾರ ಕೂಲಿಕಾರರು ಉದ್ಯೋಗಕ್ಕಾಗಿ ಅರ್ಜಿಹಾಕಿರುವುದನ್ನು ಅರ್ಜಿ ಹಾಕಿದ್ದಾರೆಯೇ ಅಥವಾ ಇಲ್ಲವೋ? ಎನ್ನುವುದನ್ನು ಪ್ರಮಾಣ ರೂಪದಲ್ಲಿ ತಿಳಿಸುತ್ತದೆ.

ಸ್ತಂಭ ರೇಖಾ ಚಿತ್ರ: 22

ಉದ್ಯೋಗಕ್ಕಾಗಿ ಅರ್ಜಿ ಪ್ರಕ್ರಿಯೆ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಆಯ್ಕೆಯಾದ ಕಾಮಗಾರಿಗಳನ್ನು ಕೂಲಿಕಾರರಿಗೆ ತಿಳಿಯುವ ಹಾಗೆ ಗ್ರಾಮಪಂಚಾಯತಿಯ ನಾಮ ಫಲಕದಲ್ಲಿ ಅಥವಾ ಸಾರ್ವಜನಿಕರಿಗೆ ತಿಳಿಯುವ ಹಾಗೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸುವುದಾಗಿರುತ್ತದೆ. ನಂತರ ಉದ್ಯೋಗಕ್ಕೆ ಅರ್ಜಿಹಾಕಿರುವುದನ್ನು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 99ರಷ್ಟು ಕೂಲಿಕಾರರು ಉದ್ಯೋಗಕ್ಕಾಗಿ ಅರ್ಜಿಹಾಕಿರವುದು ಇಲ್ಲಿ ಕಂಡು ಬರುವುದು. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಉದ್ಯೋಗಕ್ಕಾಗಿ ಅರ್ಜಿಹಾಕಿರುವುದರ ಪ್ರಮಾಣ ಶೇಕಡ 98.50ರಷ್ಟು ಕಂಡುಬರುತ್ತದೆ, ಎರಡು ಗ್ರಾಮಪಂಚಾಯತಿಯಲ್ಲಿ ಸರಾಸರಿ ಶೇಕಡ 98.75ರಷ್ಟು ಉದ್ಯೋಗಕ್ಕಾಗಿ ಅರ್ಜಿಹಾಕಿರುವುದನ್ನು

ಕಾಣಬಹುದು. ಎರಡು ಗ್ರಾಮಪಂಚಾಯತಿಗಳ ಪೈಕಿ ದೊಡ್ಡೇರಿ ಗ್ರಾಮ ಪಂಚಾಯತಿಗಿಂತ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಹೆಚ್ಚು ಉದ್ಯೋಗಕ್ಕಾಗಿ ಅರ್ಜಿಹಾಕಿರುವುದು ಕಂಡುಬರುವುದು.

5.23 ಅರ್ಜಿಹಾಕಿದ ನಂತರ ಎಷ್ಟು ದಿನದೊಳಗೆ ಉದ್ಯೋಗ ನೀಡಿರುವುದು

ಭಾರತ ಸರ್ಕಾರ ಅನುಷ್ಠಾನ ಮಾಡಿದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಹೋಲಿಕೆ ಮಾಡಿದರೆ ಅತೀ ದೊಡ್ಡ ಮಾನವ ಸುರಕ್ಷ ಯೋಜನೆಯಾಗಿರುವುದು. ಇಂತಹ ಬೃಹತ್ ಗಾತ್ರದ ಯೋಜನೆ ಬೇರೆ ಯಾವ ದೇಶದಲ್ಲೂ ಕಾಣಲು ಸಾಧ್ಯವಿಲ್ಲ ಅದಕ್ಕೆ ಮಾನವ ಇತಿಹಾದ ಮೈಲುಗಲ್ಲೆಂದು ಬಣ್ಣಿಸಲಾಗಿದೆ. ಉದ್ಯೋಗ ನೀಡಲಿಕ್ಕೆ ಸಂವಿಧಾನ್ಮಾಕ ಅಧಿಕಾರ ಒದಗಿಸಿದೆ. ನಂತರ ಉದ್ಯೋಗ ಖಾತರಿ ಕಾಯಿದೆ ನಿಯಮಗಳು ದೈಹಿಕ ಅರ್ಹತೆಯುಳ್ಳ ಮತ್ತು ಆಸಕ್ತಿ ಉಳ್ಳ ಕೂಲಿಕಾರನಿಗೆ ನೋಂದಣಿ ಮಾಡಿದ ಮೇಲೆ ಉದ್ಯೋಗದ ಚೀಟಿ ಪಡೆಯುವುದು, ಗ್ರಾಮಪಂಚಾಯತಿ ಉದ್ಯೋಗಕ್ಕಾಗಿ ಅರ್ಜಿ ಕರೆದಾಗ ಕೂಲಿಕಾರರು ಉದ್ಯೋಗಕ್ಕಾಗಿ ಅರ್ಜಿ ಹಾಕಬೇಕು ಮತ್ತು ಗ್ರಾಮಪಂಚಾಯತಿಯಿಂದ ಉದ್ಯೋಗ ಪಡೆಯಬೇಕು ಎನ್ನುವುದು ಕಾಯಿದೆಯ ಪ್ರಮುಖವಾದ ನಿಯಮವಾಗಿರುವುದು. ಈ ತರಹದ ನಿಯಮಗಳು ಅರ್ಜಿಹಾಕಿದ ಮೇಲೆ ಕೂಲಿಕಾರರಿಗೆ ಹೇಗೆ ಮತ್ತು ಯಾವ ಪ್ರಮಾಣದಲ್ಲಿ ಉದ್ಯೋಗಗಳನ್ನು ನೀಡಿವೆ ಎನ್ನುವಂತಹ ಅಂಶಗಳನ್ನು ಈ ಅಧ್ಯಯನ ಕ್ಷೇತ್ರದಲ್ಲಿ ಹೇಗೆ ಅನುಷ್ಠಾನಗೊಂಡಿವೆ ಎಂಬುದು ಇಲ್ಲಿ ವ್ಯಕ್ತವಾಗುತ್ತದೆ.

ಕೋಷ್ಟಕ: 5.18

ಅರ್ಜಿಹಾಕಿದ ನಂತರ ಎಷ್ಟು ದಿನದೊಳಗೆ ಉದ್ಯೋಗ ನೀಡಿರುವುದು

ದಿನಗಳು	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
15 ದಿನದೊಳಗಾಗಿ	0	0.00	5	2.50	5.00	1.25
30 ದಿನದೊಳಗಾಗಿ	11	5.50	5	2.50	16.00	4.00
60 ದಿನದೊಳಗಾಗಿ	95	47.50	40	20.00	135.00	33.75
90 ದಿನದೊಳಗಾಗಿ	13	6.50	16	8.00	29.00	7.25
ಇದುವರೆಗೂ ಕೆಲಸವೇ ನೀಡಲಿಲ್ಲ	81	40.50	134	67.00	215.00	53.75
ಒಟ್ಟು	**200**	**100.00**	**200**	**100.00**	**400.00**	**100.00**

ಎಂ.ಜಿ.ಎನ್.ಆರ್.ಇ.ಜಿ.ಎ. ಅಡಿ ಕೂಲಿಕಾರರಿಗೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗದ ಭರವಸೆ ನೀಡಬೇಕೆಂಬುದು ಮೂಲ ಉದ್ದೇಶವಿದೆ. ಅದರ ಸಲುವಾಗಿ

ಕಾಯಿದೆ ಅಡಿ ಉದ್ಯೋಗಕ್ಕಾಗಿ ಅರ್ಜಿಹಾಕಿದ ಮೇಲೆ ಕಡ್ಡಾಯವಾಗಿ ಉದ್ಯೋಗ ನೀಡಲು ಕಡ್ಡಾಯಗೊಳಿಸಿದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಅರ್ಜಿಹಾಕಿದರು 60 ದಿನಗಳಾದರೂ ಉದ್ಯೋಗ ನೀಡಿರುವುದು ಶೇಕಡ 47.50ರಷ್ಟು ಕಂಡುಬಂದಿದೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 20ರಷ್ಟು ಕಂಡುಬರುವುದು. ಒಟ್ಟಾರೆ ಎರಡು ಪಂಚಾಯತಿಯಿಂದ ಸರಾಸರಿ 33.75ರಷ್ಟು ಕಂಡುಬರುವುದು. ಇದುವರೆಗೂ ಕೆಲಸವನ್ನೇ ನೀಡದೇ ಇರುವುದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 40.50ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಕೇವಲ ಶೇಕಡ 67ರಷ್ಟು ಕಂಡು ಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಲ್ಲಿ ಶೇಕಡ 53.75ರಷ್ಟು ಕಂಡುಬರುವುದು. ಇದುವರೆಗೂ ಕೆಲಸವೇ ನೀಡದಿರುವುದು ಬೆಲವತ್ತ ಗ್ರಾಮಪಂಚಾಯತಿಗಿಂತ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಹೆಚ್ಚು ಕಂಡುಬರುವುದು.

5.24 ನಿರುದ್ಯೋಗ ಭತ್ಯೆ ನೀಡಲಾಗಿದೆಯೇ?

ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅನುಷ್ಠಾನಗೊಂಡ ದೈಹಿಕ ಶ್ರಮದ ಉದ್ಯೋಗ ಯೋಜನೆಗಳ ಇತಿಹಾಸವನ್ನು ಗಮನಿಸಿದರೆ ಬಡತನ ನಿರ್ಮೂಲನೆಗೆ ಪ್ರಮುಖ ಕಾರಣವಾದ ನಿರುದ್ಯೋಗ ಎನ್ನುವ ಸಮಸ್ಯೆಯನ್ನು ಪರಿಹರಿಸಲು ಬಹು ಪ್ರಕಾರ ಯೋಜನೆಗಳನ್ನು ಅನುಷ್ಠಾನ ಮಾಡಿರುವುದು ಕಾಣಬಹುದು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಯೋಜನೆಗಳಲ್ಲೂ ಕೂಲಿಕಾರರಿಗೆ ನಿರುದ್ಯೋಗ ಭತ್ಯೆ ವಿಷಯವನ್ನು ಎಲ್ಲಿಯೂ ಪ್ರಸ್ತಾಪ ಮಾಡಿರುವುದಿಲ್ಲ. ಹಾಗೆಯೇ ಖಾಸಗಿ ವಲಯದಲ್ಲಿ ಹಿಂದಿನಿಂದಲೂ ಇಲ್ಲಿಯ ತನಕ ಕೂಲಿಕಾರರಿಗೆ ನಿರುದ್ಯೋಗ ಭತ್ಯೆ ನೀಡಿರುವ ನಿದರ್ಶನಗಳು ಸಹ ಇರುವುದಿಲ್ಲ. ಈ ಮಧ್ಯದಲ್ಲಿ ಭಾರತದಲ್ಲಿ ಗ್ರಾಮೀಣರ ಬಡತನ ನಿರ್ಮೂಲನೆ ಮಾಡಲು ಅನೇಕ ಉದ್ಯೋಗ ಯೋಜನೆಗಳನ್ನು ಅನುಷ್ಠಾನ ಮಾಡಲಾಯಿತು. ಆದರೆ ಇಲ್ಲಿಯೂ ಸಹ ಈ ಯಾವುದೇ ಯೋಜನೆಗಳಲ್ಲಿ ನಿರುದ್ಯೋಗ ಭತ್ಯೆಯನ್ನು ನೀಡಲಿಲ್ಲ. ಆದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ 2005ರಲ್ಲಿ ಜಾರಿಗೆ ಬಂದಿದ್ದು ಈ ಕಾಯಿದೆ ಅಡಿ ಗ್ರಾಮೀಣ ಪ್ರದೇಶದಲ್ಲಿ ಕೂಲಿ ಮಾಡಲು ಇಚ್ಛಿಸುವ ಕೂಲಿಕಾರರಿಗೆ ಕಾಯಿದೆ ನಿಯಮಾವಳಿ ಪ್ರಕಾರ ಗ್ರಾಮಪಂಚಾಯತಿಗೆ ಕೂಲಿಗಾಗಿ ಅರ್ಜಿ ಹಾಕಿದ 15 ದಿನದೊಳಗಾಗಿ ಗ್ರಾಮ ಪಂಚಾಯತಿ ಆ ಕೂಲಿಕಾರರಿಗೆ ಉದ್ಯೋಗ ನೀಡಬೇಕು, ಏನಾದರೂ ಕೂಲಿಕಾರರಿಗೆ 15 ದಿನದೊಳಗಾಗಿ ಉದ್ಯೋಗ ನೀಡದಿದ್ದರೆ ಆ ಕೂಲಿಕಾರರಿಗೆ ಅರ್ಜಿಸಲ್ಲಿಸಿದ 30 ದಿನದೊಳಗಾಗಿ ಕೂಲಿಯ ಕಾಲು ಭಾಗ ನಿರುದ್ಯೋಗ ಭತ್ಯೆ ನೀಡಬೇಕು. 30 ದಿನದ ನಂತರ ಕೂಲಿಯ ಅರ್ಧಭಾಗದಷ್ಟು ನಿರುದ್ಯೋಗ ಭತ್ಯೆ ನೀಡಬೇಕು ಎಂದು ಕಾಯಿದೆ ಕಟ್ಟುನಿಟ್ಟಾಗಿ ನಿರ್ದೇಶಿಸಿದೆ. ಈ ಅಧ್ಯಯನ ಕ್ಷೇತ್ರದಲ್ಲಿ ಕಾಯಿದೆ ಪ್ರಕಾರ ಅರ್ಜಿ ಹಾಕಿದ ಮೇಲೆ ಉದ್ಯೋಗ ನೀಡಿದೆಯೇ

ಏನಾದರೂ ಉದ್ಯೋಗ ನೀಡದಿದ್ದರೆ ಅವರಿಗೆ ನಿರುದ್ಯೋಗ ಭತ್ಯೆ ನೀಡಿದೆಯೇ ನೀಡಿದರೆ ಯಾವ ಪ್ರಮಾಣದಲ್ಲಿ ನೀಡಿದೆ ಎನ್ನುವಂತಹ ಅಂಶಗಳನ್ನು ಇಲ್ಲಿ ತಿಳಿಸುತ್ತದೆ.

ಕೋಷ್ಟಕ : 5.19

ನಿರುದ್ಯೋಗ ಭತ್ಯೆ ನೀಡಲಾಗಿದೆಯೇ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಅರ್ಜಿ ಸಲ್ಲಿಸಿದ 30 ದಿನದೊಳಗಾಗಿ ಕನಿಷ್ಟ ಕೂಲಿಯ ಕಾಲುಭಾಗ ಪಡೆದಿರುವುದು	0	0.00	0	0.00	0	0.00
ನಂತರದ ಅವಧಿಗೆ ಕನಿಷ್ಟ ಕೂಲಿಯ ಅರ್ಧಭಾಗದಷ್ಟು (ಆರ್ಥಿಕ ವರ್ಷದ ಕೊನೆಯದರೊಳಗಾಗಿ 1ನೇ ಏಪ್ರಿಲ್‌ನಿಂದ ಮಾರ್ಚ್31ಕ್ಕೆ)	0	0.00	0	0.00	0	0.00
ನಿರುದ್ಯೋಗ ಭತ್ಯೆ ನೀಡಿರುವುದಿಲ್ಲ	200	100.00	200	100.00	400	100.00
ಒಟ್ಟು	**200**	**100.00**	**200**	**100.00**	**400**	**100.00**

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡಲು ಕಾನೂನು ಮಾಡಿದ್ದರು ಅರ್ಜಿಹಾಕಿದ ಮೇಲೆ ಉದ್ಯೋಗ ನೀಡದಿದ್ದರೆ ಉತ್ಸಾಹ ಮತ್ತು ಪ್ರೇರೇಪಿಸಲು ಕಾಯಿದೆ ಅಡಿ ನಿರುದ್ಯೋಗ ಭತ್ಯೆ ನೀಡಲು ಕಡ್ಡಾಯಗೊಳಿಸಿದೆ. ಬೆಲವತ್ತ ಮತ್ತು ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಕೂಲಿ ಮಾಡಿದ ಕೂಲಿಕಾರರಿಗೆ 15 ದಿನದೊಳಗೆ ಎಲ್ಲಿಯೂ ಉದ್ಯೋಗ ನೀಡಿರುವುದಿಲ್ಲ, ಆದರೂ ಇಲ್ಲಿ ಯಾವ ಕೂಲಿಕಾರರಿಗೂ ಶೇಕಡ 100ರಷ್ಟು ಪ್ರಮಾಣ ನಿರುದ್ಯೋಗ ಭತ್ಯೆ ನೀಡದಿರುವ ಅಂಶ ಕಂಡುಬಂದಿದೆ. ಉದ್ಯೋಗ ಖಾತರಿ ಸಿದ್ಧಾಂತದ ನಿರುದ್ಯೋಗ ಭತ್ಯೆಯ ಮಾಹಿತಿಯೂ ಸಹ ಸ್ಪಷ್ಟವಾಗಿ ಜನರಿಗೆ ಇಲ್ಲದಿರುವುದು ಸಹ ಕಂಡು ಬರುತ್ತದೆ.

5.25. ಕೂಲಿಕಾರರಿಗೆ ಎಷ್ಟು ದಿನದೊಳಗಾಗಿ ಕೂಲಿ ನೀಡಲಾಗಿದೆ


ಭಾರತದಂತಹ ಅನೇಕ ರಾಷ್ಟ್ರಗಳಲ್ಲಿ ದೈಹಿಕ ಶ್ರಮದ ಉದ್ಯೋಗವನ್ನೇ ಅವಲಂಬಿಸಿಕೊಂಡು ಅಸಂಖ್ಯಾತ ಜನರು ತಮ್ಮ ಜೀವನ ನಡೆಸಿಕೊಂಡೇ ಬಂದಿರುತ್ತಾರೆ. ಕಾರಣ ಭಾರತದಲ್ಲಿ ಸುಮಾರು ಎರಡು ಶತಮಾನದಿಂದ ಆಹಾರದ ಸಮಸ್ಯೆ ಎದುರಿಸಿಕೊಂಡೆ ಬಂದಿರುತ್ತಾರೆ. ಪ್ರಮುಖವಾಗಿ ಭಾರತ ಹಳ್ಳಿಗಳ ದೇಶವಾಗಿರುವುದರಿಂದ ಇಲ್ಲಿಯ ಮೂಲ ಕಸುಬು ಕೃಷಿಯಾಗಿರುವುದು. ಮಳೆ ಬೆಳೆ ಸಮಸ್ಯೆಗಳಿಂದ ನಿರಂತರವಾಗಿ ಬರ ಎದುರಿಸುತ್ತಿರುವುದು ಕಾಣಬಹುದು. ಇಲ್ಲಿಯ ಬಹುಪಾಲು

ಜನರು ಸಂಘಟಿತ ವಲಯಕ್ಕಿಂತ ಅಸಂಘಟಿತ ವಲಯದಲ್ಲಿ ಹೆಚ್ಚು ಅವಲಂಭಿಸಿರುವುದು ಕಾಣಬಹುದು. ಹಿಂದೆ ಅನೇಕ ಯೋಜನೆಗಳು ಅನುಷ್ಠಾನಗೊಂಡಿರುವವು. ಆದರೆ ಅವು ಯಾವುದೇ ಯೋಜನೆಗಳಲ್ಲಿ ಅರ್ಜಿ ನೀಡುವ, ಉದ್ಯೋಗ ಪಡೆಯುವ, ಅದರಲ್ಲೂ 15 ದಿನದೊಳಗೆ ಉದ್ಯೋಗ ಪಡೆಯುವ ಕಾಯಿದೆ ಅಥವಾ ಯಾವುದೇ ನಿಯಮಾವಳಿ ಇಲ್ಲದಿರುವುದು ಕಾಣಬಹುದು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅಡಿ ಸಿದ್ಧಾಂತದ ಪ್ರಕಾರ ಕೂಲಿಕಾರರು ಗ್ರಾಮಪಂಚಾಯತಿಗೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದರೆ ಗ್ರಾಮಪಂಚಾಯತಿ 15 ದಿನದೊಳಗಾಗಿ ಉದ್ಯೋಗ ಕಡ್ಡಾಯವಾಗಿ ನೀಡಬೇಕು ಎನ್ನುವಂತಹ ಅಂಶಗಳು ಈ ಅಧ್ಯಯನ ಕ್ಷೇತ್ರದಲ್ಲಿ ಕೂಲಿಕಾರರು ಉದ್ಯೋಗಕ್ಕಾಗಿ ಅರ್ಜಿಸಲ್ಲಿಸಿದ ಮೇಲೆ ಎಷ್ಟು ದಿನದೊಳಗಾಗಿ ಉದ್ಯೋಗ ನೀಡಿದ್ದಾರೆ ಎನ್ನುವಂತಹ ಅಂಶಗಳನ್ನು ತಿಳಿಸುತ್ತದೆ.

ಸ್ತಂಭ ರೇಖಾ ಚಿತ್ರ : 23

ಕೂಲಿಕಾರ್ಮಿಕರಿಗೆ ಎಷ್ಟು ದಿನದೊಳಗಾಗಿ ಕೂಲಿ ನೀಡಲಾಗಿದೆ

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡಲು ಕಡ್ಡಾಯಗೊಳಿಸಿದ ಹಿನ್ನೆಲೆಯಲ್ಲಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಅರ್ಜಿ ಹಾಕಿದ



ಮೇಲೆ 15 ದಿನದೊಳಗಾಗಿ ಕೂಲಿ ನೀಡಿಲ್ಲದಿರುವುದು ಕಂಡುಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 0.50ರಷ್ಟು ಮಾತ್ರ ಕಂಡು ಬರುವುದು. ಅರ್ಜಿಹಾಕಿ 30 ದಿನದೊಳಗಾಗಿ ಕೂಲಿ ನೀಡಿರುವುದನ್ನು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ನೋಡಿದರೆ ಶೇಕಡ 56.50ರಷ್ಟು ಕಂಡು ಬರುವುದು. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 10.50ರಷ್ಟು ಕಂಡು ಬರುತ್ತದೆ. ಒಟ್ಟಾರೆ ಎರಡು ಪಂಚಾಯತಿಯಿಂದ ಶೇಕಡ 33.50ರಷ್ಟು ಕಂಡುಬರುತ್ತದೆ. ಈ ಎರಡು ಪಂಚಾಯತಿಗಳಲ್ಲಿ 30 ದಿನಗಳಲ್ಲಿ ಕೂಲಿ ನೀಡಿರುವ ವ್ಯತ್ಯಾಸಗಳನ್ನು ಗಮನಿಸಲಾಗಿದೆ.




5.26 ಕಾಮಗಾರಿ ನಡೆಯುವ ಸ್ಥಳದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೆ?

ಸರ್ಕಾರ ಕೈಗೊಂಡ ಬಹುಪಾಲು ಉದ್ಯೋಗ ನೀಡುವ ಯೋಜನೆಗಳ ಇತಿಹಾಸದಲ್ಲೇ ಕಾಮಗಾರಿ ನಡೆಯುವ ಸ್ಥಳದಲ್ಲಿ ಕನಿಷ್ಟ ಮೂಲಭೂತ ಸೌಲಭ್ಯ ಒದಗಿಸಿರುವುದು ಎಲ್ಲಿಯೂ ಕಂಡು ಬರುವುದಿಲ್ಲ. ಆದರೆ ಖಾಸಗಿ ವಲಯದಲ್ಲಿ ಕೂಲಿಕಾರರಿಗೆ ಕೆಲವು ಮೂಲಭೂತ ಸೌಲಭ್ಯ ಒದಗಿಸಿರುವುದನ್ನು ಕಾಣಬಹುದು. ದಟ್ಟವಾಗಿ ಕಾಡುವ ಬಡತನದ ಸ್ವರೂಪವನ್ನು ಅರಿತ ಸರ್ಕಾರ ಗ್ರಾಮೀಣ ಕೂಲಿಕಾರರಿಗೆ ವ್ಯಾಪಕವಾದ ಉದ್ಯೋಗದ ಬಗ್ಗೆ ಪ್ರೇರಣೆ ನೀಡುವ ಸಲುವಾಗಿ ಕಾಮಗಾರಿಗಳು ನಡೆಯುವ ಸ್ಥಳದಲ್ಲಿ ಕೂಲಿಕಾರರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಉದ್ಯೋಗ ಖಾತರಿ ಕಾಯಿದೆ ಅಥವಾ ಸಿದ್ಧಾಂತದಲ್ಲಿ ಕಡ್ಡಾಯವಾಗಿ ನೀಡುವಂತೆ ನಿರ್ದೇಶಿಸಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನ ಕ್ಷೇತ್ರದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ನಿಯಮಾವಳಿ ಪ್ರಕಾರ ಕಾಮಗಾರಿ ನಡೆಯುವ ಸ್ಥಳದಲ್ಲಿ ಕೂಲಿಕಾರರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿದೆಯೇ? ಯಾವ ಯಾವ ಪ್ರಕಾರವು? ಮತ್ತು ಎಷ್ಟು ಪ್ರಮಾಣ ಒದಗಿಸಿದೆ ಎನ್ನುವಂತಹ ಅಂಶಗಳನ್ನು ಇಲ್ಲಿ ತಿಳಿಸುತ್ತದೆ.

ಸ್ತಂಭ ರೇಖಾ ಚಿತ್ರ :24

ಕಾಮಗಾರಿ ನಡೆಯುವ ಸ್ಥಳದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೆ

ದುಡಿಯುವ ಆಸಕ್ತಿ ಮತ್ತು ಅವರ ಸಾಮರ್ಥ್ಯ ಹೆಚ್ಚಿಸುವ ಸಲುವಾಗಿ ಕಾಯಿದೆ ಅಡಿ ದುಡಿಯುವ ಕೂಲಿಕಾರರಿಗೆ ಕಾಮಗಾರಿ ನಡೆಯುವ ಸಮಯದಲ್ಲಿ ಮೂಲಭೂತ ಸೌಲಭ್ಯಗಳನ್ನು



ಕಡ್ಡಾಯಗೊಳಿಸಲಾಗಿದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100ರಷ್ಟು ಪ್ರಮಾಣ ಸೌಲಭ್ಯಗಳನ್ನು ಒದಗಿಸಿಲ್ಲದಿರುವುದು ಕಂಡುಬರುತ್ತದೆ. ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಕುಡಿಯುವ ನೀರನ್ನು ಶೇಕಡ 0.50ರಷ್ಟು ಮಾತ್ರ ಒದಗಿಸಿರುವುದು ತಿಳಿಯುತ್ತದೆ. ಉಳಿದ ಶೇಕಡ 99.50ರಷ್ಟು ಯಾವ ಸೌಲಭ್ಯಗಳನ್ನು ಒದಗಿಸಿಲ್ಲ ಎನ್ನುವುದು ವ್ಯಕ್ತವಾಗುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಲ್ಲಿ ಕಾಮಗಾರಿ ನಡೆಯುವ ಸ್ಥಳದಲ್ಲಿ ಯಾವುದೇ ಮೂಲಭೂತ ಸೌಲಭ್ಯಗಳನ್ನು ಒದಗಿಸಿಲ್ಲದಿರುವುದು ಕಂಡುಬಂದಿದೆ.

5.27. ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ಕೂಲಿಕಾರರನ್ನು ನೇಮಿಸಲಾಗಿದೆಯೆ?

ಕೂಲಿಕಾರರು ಮಾರುಕಟ್ಟೆಯನ್ನು ಅವಲೋಕಿಸುತ್ತಾ ಬಂದರೆ ಸಂಘಟಿತ ಮತ್ತು ಅಸಂಘಟಿ ಮಾರುಕಟ್ಟೆಯಲ್ಲಿ ಮಹಿಳೆಯರು ಕೂಲಿಕಾರರಾಗಿ ಕೆಲಸ ಮಾಡಿಕೊಂಡೇ ಬಂದಿದ್ದಾರೆ. ಆದರೆ ಅಸಂಘಟಿತ ವಲಯದಲ್ಲಿ ಮಹಿಳೆಯರು ಕೂಲಿಕಾರರಾಗಿ ಕೆಲಸ ಮಾಡುವರ ಸಂಖ್ಯೆ ಹೆಚ್ಚು. ಹಾಗೆಯೇ ಗ್ರಾಮೀಣಾಭಿವೃದ್ಧಿ ಯೋಜನೆಗಳಲ್ಲಿ ಮಹಿಳೆಯರು ಕೆಲಸ ಮಾಡಿಕೊಂಡೇ ಬಂದಿದ್ದಾರೆ. ಎಲ್ಲಿಯೂ ಚಿಕ್ಕ ಮಕ್ಕಳನ್ನು ಹೊಂದಿರುವ ಮಹಿಳೆಗೆ ಕೂಲಿ ಸಮಯದಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಇನ್ನೊಬ್ಬ ಕೂಲಿ ಕಾರ್ಮಿಕಳನ್ನು ನೇಮಿಸಿರುವ ಯಾವ ಉದಾಹರಣೆಗಳು ಇರುವುದಿಲ್ಲ. ಆದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಅಡಿ ಕೂಲಿ ಕೆಲಸ ಮಾಡುವ ಮಹಿಳೆಗೆ 6 ವರ್ಷದೊಳಗೆ ಐದಕ್ಕಿಂತ ಹೆಚ್ಚು ಮಕ್ಕಳಿದ್ದರೆ ಆ ಮಕ್ಕಳನ್ನು ನೋಡಿಕೊಳ್ಳುವ ಒಬ್ಬ ಮಹಿಳಾ ಕಾರ್ಮಿಕಳನ್ನು ಕಡ್ಡಾಯವಾಗಿ ನೇಮಿಸಬೇಕು ಎನ್ನುವುದನ್ನು ಸಿದ್ಧಾಂತದಲ್ಲಿ ನಿರ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನ ಕ್ಷೇತ್ರದಲ್ಲಿ 6 ವರ್ಷದೊಳಗಿರುವ ಮಕ್ಕಳನ್ನು ಹೊಂದಿರುವ ಮಹಿಳಾ ಕೂಲಿಕಾರ್ಮಿಕಳ ಮಕ್ಕಳನ್ನು ಕೆಲಸದ ಸ್ಥಳದಲ್ಲಿ ನೋಡಿಕೊಳ್ಳಲು ಅಧ್ಯಯನ ಕ್ಷೇತ್ರದಲ್ಲಿ ಒಬ್ಬ ಮಹಿಳಾ ಕೂಲಿ ಕಾರ್ಮಿಕಳನ್ನು ನೇಮಿಸಿಲ್ಲದಿರುವುದು ತಿಳಿಸುತ್ತದೆ.

ಕೋಷ್ಟಕ : 5.20

ಮಕ್ಕಳನ್ನು ನೋಡಿಕೊಳ್ಳುಲು ಮಹಿಳಾ ಕೂಲಿಕಾರರನ್ನು ನೇಮಿಸಲಾಗಿದೆಯೆ? ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	0	0.00	0	0.00	0	0.00
ಇಲ್ಲ	200	100.00	200	100.00	400	100.00
ಒಟ್ಟು	200	100.00	200	100.00	400	100.00

ಮಕ್ಕಳಿರುವ ತಾಯಂದಿರಿಗೆ ಉದ್ಯೋಗ ನೀಡುವ ಸಲುವಾಗಿ ತಮ್ಮ ಮಕ್ಕಳನ್ನು ಕೆಲಸ ಮಾಡುವ ಸಮಯದಲ್ಲಿ ನೋಡಿಕೊಳ್ಳಲು ಒಬ್ಬ ಮಹಿಳಾ ಕಾರ್ಮಿಕಳನ್ನು ನೇಮಿಸಬೇಕೆಂದು ಎಂ.ಜಿ.ಎನ್.ಆರ್.ಇ.ಜಿ.ಎ ಕಡ್ಡಾಯಗೊಳಿಸಿದೆ. ಬೆಲವತ್ತ ಮತ್ತು ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಮಹಿಳಾ ಕೂಲಿಕಾರರ 6 ವರ್ಷದೊಳಗಿರುವ ಮಕ್ಕಳನ್ನು ನೋಡಿಕೊಳ್ಳಲು ಶೇಕಡ 0.00ರಷ್ಟು ಸಹ ಮಹಿಳಾ ಕೂಲಿ ಕಾರ್ಮಿಕಳನ್ನು ನೇಮಿಸಿಲ್ಲದಿರುವುದು ಕಂಡುಬರುತ್ತದೆ. ಅಧ್ಯಯನಕ್ಕೆ ಒಳಪಡಿಸಿದಾಗ ಎರಡು ಗ್ರಾಮಪಂಚಾಯತಿಯಲ್ಲಿ ವಿಶೇಷವಾಗಿ ತಾಯಂದಿರ ಮಹಿಳೆಗೂ ಕೂಲಿ ಮಾಡುವ ತಾಯಂದಿರ ಮಕ್ಕಳನ್ನು ನೋಡಿಕೊಳ್ಳಲು ಪ್ರತ್ಯೇಕವಾಗಿ ಒಬ್ಬ ಮಹಿಳಾ ಕೂಲಿಕಾರ್ಮಿಕಳನ್ನು ನೇಮಿಸುವ ಅವಕಾಶವಿದ್ದರೂ, ನಾವು ಅಧ್ಯಯನ ಮಾಡುವ ಸಮಯದಲ್ಲಿ ಕಾಮಗಾರಿ ನಡೆಯುವ ಸ್ಥಳದಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಕೆಲಸಕ್ಕೆ ಯಾರನ್ನು ನೇಮಕ ಮಾಡಿರುವುದಿಲ್ಲ.

5.28. ಕೂಲಿಯನ್ನು ಹೇಗೆ ನೀಡಲಾಗಿದೆ ವಿವರ

ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕೂಲಿ ಮಾಡಿದವರಿಗೆ ಕೂಲಿ ನೀಡುವ ವಿಧಾನವನ್ನು ಸಾಮಾನ್ಯವಾಗಿ ನಗದು ರೂಪದಲ್ಲಿ ಇರುವುದುನ್ನು ಕಾಣಬಹುದು. ಬ್ಯಾಂಕ್ ಮೂಲಕವಾಗಿ ಕೂಲಿವೇತನ ನೀಡುವುದೆಂದರೆ ಅದು ಕೇವಲ ಸಂಘಟಿತ ವಲಯದಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ಅಸಂಘಟಿತ ವಲಯದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವುದು ನಗದು ರೂಪದಲ್ಲಿ ಕಾಣಬಹುದು. ಹಾಗೆಯೇ ರಾಷ್ಟ್ರದಲ್ಲಿ 1952 ನಂತರ ಬಹು ಪ್ರಕಾರದ ಯೋಜನೆಗಳು ಅನುಷ್ಠಾನ ಮಾಡಿರುವುದನ್ನು ನಾವು ಕಾಣಬಹುದು. ಅದರಲ್ಲಿ ಎಲ್ಲಿಯೂ ಬ್ಯಾಂಕ್ ಮೂಲಕ ಕೂಲಿ ವೇತನ ನೀಡಿರುವ ಸಾಧ್ಯತೆಗಳು ತುಂಬ ಕಡಿಮೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ರೂಪಿಸುವಾಗ ಹಿಂದಿನ ಯೋಜನೆಗಳ ಅನುಭವ ಪಡೆದು ಕೂಲಿವೇತನ ಬ್ಯಾಂಕ್ ಮೂಲಕವಾಗಿ ನೀಡಬೇಕೆಂದು ಸಿದ್ಧಾಂತದಲ್ಲಿ ಕಾಣುತ್ತೇವೆ. ಈ ಅಧ್ಯಯನ ಕ್ಷೇತ್ರದಲ್ಲಿ ಕೂಲಿಕಾರರು ಮಾಡಿದ ಕೂಲಿ ವೇತನವನ್ನು ಬ್ಯಾಂಕ್ ಮೂಲಕ ಪಡೆಯುತ್ತಿದ್ದಾರೆ ಎನ್ನುವಂತಹ ಅಥವಾ ನಗದಾಗಿ ಪಡೆಯುತ್ತಿದ್ದಾರೆ ಎನ್ನುವಂತಹ ಅಂಶಗಳನ್ನು ತಿಳಿಸುತ್ತಿದೆ.

ಕೋಷ್ಟಕ :5.21

ಕೂಲಿಯನ್ನು ಹೇಗೆ ನೀಡಲಾಗಿದೆ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಬ್ಯಾಂಕ್ ಶಾಖೆ ಮೂಲಕವಾಗಿ	131	65.5	97	48.5	228	57
ಅಂಚೆ ಕಛೇರಿಯ ಮೂಲಕ	0	0	0	0	0	0
ನಗದಾಗಿ ನೀಡಿರುವುದು	0	0	0	0	0	0
ಕೆಲಸ ಮಾಡಿಲ್ಲದವರು	69	34.5	103	51.5	172	43
ಒಟ್ಟು	**200**	**100**	**200**	**100**	**400**	**100**

ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಬ್ಯಾಂಕ್ ಮೂಲಕವಾಗಿ ಕೂಲಿವೇತನ ನೀಡಿರುವುದು ಶೇಕಡ 65.5ರಷ್ಟು ಕಂಡುಬಂದರೆ ಅಂಚೆ ಮೂಲಕವಾಗಿ ಮತ್ತು ನಗದಾಗಿ ಕೂಲಿವೇತನ ನೀಡಿರುವುದಿಲ್ಲವೆಂದು ಕಂಡುಬಂದರೆ, ಇಲ್ಲಿ ಕೆಲಸ ಮಾಡಿಲ್ಲದವರು ಶೇಕಡ 34.50ರಷ್ಟು ಕಂಡುಬರುತ್ತದೆ. ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 48.50ರಷ್ಟು ಕಂಡುಬಂದರೆ ಅಂಚೆ ಮೂಲಕವಾಗಿ ಮತ್ತು ನಗದಾಗಿ ಕೂಲಿವೇತನ ನೀಡಿರುವುದಿಲ್ಲವೆಂದು ಕಂಡುಬಂದರೆ ಕೆಲಸವೆ ಮಾಡಿಲ್ಲದವರು ಶೇಕಡ 51.50ರಷ್ಟು ಕಂಡುಬರುತ್ತದೆ.

5.29. ಕೂಲಿಯನ್ನು ಪೂರ್ಣ ಪ್ರಮಾಣದಲ್ಲಿ ನೀಡಿದೆಯೆ? ವಿವರ

ಉದ್ಯೋಗ ಖಾತರಿ ಯೋಜನೆಯಡಿ ಕೂಲಿಕಾರರು ಕೆಲಸ ಮಾಡಿದ 15 ದಿನದೊಳಗಾಗಿ ಅನುಷ್ಠಾನದ ಸಂಸ್ಥೆಯಾದ ಗ್ರಾಮ ಪಂಚಾಯತಿ ಕೂಲಿಕಾರರಿಗೆ ಕೂಲಿಯನ್ನು ನೀಡಬೇಕೆಂದು ಕಾಯಿದೆ ಸ್ಪಷ್ಟವಾದ ನಿರ್ದೇಶನ ನೀಡಿದೆ. ಅಧ್ಯಯನ ಕ್ಷೇತ್ರದಲ್ಲಿ ಕೆಲಸ ಮಾಡಿದ ಕೂಲಿಕಾರರಿಗೆ ಕಾಯಿದೆ ಯಾವ ಪ್ರಮಾಣದಲ್ಲಿ ನೀಡಿದೆ ಎನ್ನುವುದನ್ನು ಪ್ರಸ್ತುತ ಅಧ್ಯಯನ ತಿಳಿಸುತ್ತದೆ.

ಕೋಷ್ಟಕ : 5.22


ಕೂಲಿಯನ್ನು ಪೂರ್ಣ ಪ್ರಮಾಣದಲ್ಲಿ ನೀಡಿದೆಯೆ? ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಶೇಕಡ 25	0	0.00	0	0.00	0	0.00
ಶೇಕಡ 50	65	32.50	26	13.00	91	22.75

ಶೇಕಡ 75	40	20.00	8	4.00	48	12.00
ಶೇಕಡ 100	0	0.00	18	9.00	18	4.50
ಕೆಲಸ ಮಾಡಿಲ್ಲದವರು	95	47.50	148	74.00	243	60.75
ಒಟ್ಟು	**200**	**100.00**	**200**	**100.00**	**400**	**100.00**

ಸ್ತಂಭ ರೇಖಾ ಚಿತ್ರ : 25

ಕೂಲಿಯನ್ನು ಪೂರ್ಣ ಪ್ರಮಾಣದಲ್ಲಿ ನೀಡಿದೆಯೆ? ವಿವರ



ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಅಧ್ಯಯನ ಕ್ಷೇತ್ರದಲ್ಲಿ ಕೂಲಿ ಮಾಡಿದ ಕೂಲಿಕಾರರಿಗೆ ಒಟ್ಟು ಕೂಲಿಯ ಹಣದಲ್ಲಿ ಶೇಕಡ 50ರಷ್ಟು ಮಾತ್ರ ಪಾವತಿಸಿರುವುದನ್ನು ನೋಡಿದರೆ. ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 32.50ರಷ್ಟು ಕಂಡು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 13.00ರಷ್ಟು ಮಾತ್ರ ಕಂಡುಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಲ್ಲಿ ಶೇಕಡ 22.75 ರಷ್ಟು ಕಂಡುಬರುವುದು. ಯೋಜನೆಯಡಿ ಕೆಲಸವೇ ಮಾಡಿಲ್ಲದವರ ಪ್ರಮಾಣ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 47.50ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಕೇವಲ ಶೇಕಡ 74.00ರಷ್ಟು ಮಾತ್ರ ಕಂಡುಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಲ್ಲಿ ಶೇಕಡ 60.75ರಷ್ಟು ಕಂಡುಬರುವುದು.

5.30. 2013–14 ನೇ ಸಾಲಿನಲ್ಲಿ ಉದ್ಯೋಗ ಖಾತರಿ ಕಾಯಿದೆ ಅಡಿ ಕನಿಷ್ಠ ಕೂಲಿಯ ಮಾಹಿತಿ ವಿವರ

ಎಂ.ಜಿ.ಎನ್.ಆರ್.ಇ.ಜಿ.ಎ 2006–07ರಿಂದ ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನಗೊಳ್ಳುತ್ತಾ ಬಂದಿದೆ. ಅಲ್ಲಿಂದಲೂ ಕಾಯಿದೆ ಜನರಿಗೆ ಉದ್ಯೋಗದ ಖಾತರಿಯ ಕಾಯಿದೆಯ ಸ್ವರೂಪಗಳನ್ನು ಜನರಿಗೆ ತಿಳುವಳಿಕೆ ಮಾಡುತ್ತಲೇ ಬಂದಿದೆ. ದಿನದ ಕೂಲಿಯ ದರ 2009–10ರಲ್ಲಿ 82 ರೂಪಾಯಿ, 2010–11ರಲ್ಲಿ 100 ರೂಪಾಯಿ, 2011–12ರಲ್ಲಿ 125 ರೂಪಾಯಿ, 2012–13ರಲ್ಲಿ 155 ರೂಪಾಯಿ, 2013–14ರಲ್ಲಿ 174 ರೂಪಾಯಿ, ಕೂಲಿದರವನ್ನು ನಿಗದಿಪಡಿಸಿದ್ದು 2013–14ರಲ್ಲಿ ಕೂಲಿಯ ದರ ಜನರಿಗೆ ಯಾವ ಪ್ರಮಾಣದಲ್ಲಿ ಮಾಹಿತಿ ಇರುವುದನ್ನು ಪ್ರಸ್ತುತ ಅಧ್ಯಯನ ತಿಳಿಸುತ್ತದೆ.

ಕೋಷ್ಟಕ : 5.23

2013–14 ನೇ ಸಾಲಿನಲ್ಲಿ ಉದ್ಯೋಗ ಖಾತರಿ ಕಾಯಿದೆ ಅಡಿ ಕನಿಷ್ಟ ಕೂಲಿಯ ಮಾಹಿತಿ ವಿವರ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಕೂಲಿ	82 ರೂ	0	0.00	1	0.50	1	0.25
	100 ರೂ	0	0.00	1	0.50	1	0.25
	125 ರೂ	0	0.00	2	1.00	2	0.50
	155 ರೂ	0	0.00	8	4.00	8	2.00
	174 ರೂ	0	0.00	0	0.00	0	0.00
	ಗೊತ್ತಿಲ್ಲ	0	0.00	0	0.00	0	0.00
	ಮಾಹಿತಿ ಇಲ್ಲದವರು	200	100.00	188	94.00	388	97.00
ಒಟ್ಟು		**200**	**100.00**	**200**	**100.00**	**400**	**100.00**

ಉದ್ಯೋಗ ಖಾತರಿ ಕಾಯಿದೆಯಡಿ 20013–14ರಲ್ಲಿ ಕೂಲಿಯ ದರ 174 ರೂಪಾಯಿ ನಿಗದಿ ಪಡಿಸಲಾಗಿದ್ದು ಈ ಮಾಹಿತಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 0.00ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 0.00ರಷ್ಟು ಮಾತ್ರ ಕಂಡುಬರುವುದು. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಲ್ಲಿ ಶೇಕಡ 0.00ರಷ್ಟು ಕಂಡು ಬಂದಿರುತ್ತದೆ. ಜನರಿಗೆ ಎರಡು ಪಂಚಾಯತಿಯಲ್ಲಿಯೂ ಮಾಹಿತಿ ಇಲ್ಲದಿರುವುದು ಬೆಲವತ್ತ ಮತ್ತು ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 100ರಷ್ಟು ಅಧ್ಯಯನದಿಂದ ವ್ಯಕ್ತವಾಗುತ್ತದೆ.

5.31. ವೇತನಗಳು ಮತ್ತು ಭತ್ಯೆಗಳು ಆಕರ್ಷಣೆ ನೀಡಿವಿಯೇ ವಿವರ

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಬಡತನ ನಿರ್ಮೂಲನೆಯ ಸಲುವಾಗಿ ಉದ್ಯೋಗಗಳನ್ನು ನೀಡಿ ಆಹಾರ ಭದ್ರತೆಯನ್ನು ಕಲ್ಪಿಸಿಕೊಡುವುದೇ ಕಾಯಿದೆಯ ಆಶಯ. ಈ ಮೂಲಕ ನಿಯಮಾವಳಿ ಪ್ರಕಾರ ಕೂಲಿಕಾರರಿಗೆ ಉದ್ಯೋಗ ನೀಡಿ ಕೂಲಿಕಾರರನ್ನು ಸೆಳೆಯುವ ಹಿನ್ನೆಲೆಯಲ್ಲಿ ವೇತನಗಳು ಮತ್ತು ಭತ್ಯೆಗಳನ್ನು ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ಪರಿಷ್ಕರಿಸಿ ಜಾರಿಗೆ ತಂದಿರುತ್ತದೆ. ಅಧ್ಯಯನ ಕ್ಷೇತ್ರಗಳಲ್ಲಿ ಕಾಯಿದೆಯ ವೇತನ ಮತ್ತು ಭತ್ಯೆಗಳು ಕೂಲಿಕಾರರಿಗೆ ಯಾವ ಪ್ರಮಾಣದಲ್ಲಿ ಆಕರ್ಷಿಸಿವೆ ಎನ್ನುವುದನ್ನು ಈ ಅಧ್ಯಯನ ತಿಳಿಸುತ್ತದೆ.

ಕೋಷ್ಟಕ : 5.24

ವೇತನಗಳು ಮತ್ತು ಭತ್ಯೆಗಳು ಆಕರ್ಷಣೆ ನೀಡಿವಿಯೆ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	0	0.00	4	2.00	4	1.00
ಇಲ್ಲ	200	100.00	196	98.00	396	99.00
ಒಟ್ಟು	200	100.00	200	100.00	400	100.00


ಅಧ್ಯಯನ ಕ್ಷೇತ್ರದಲ್ಲಿ ಕೂಲಿಕಾರರ ವರ್ಗಕ್ಕೆ ಉದ್ಯೋಗ ಖಾತರಿ ಕಾಯಿದೆ ನೀಡಿರುವ ವೇತನಗಳು ಮತ್ತು ಭತ್ಯೆಗಳು ಜನರಿಗೆ ಆಕರ್ಷಿಸುವುದಕ್ಕಿಂತ ನಿರಾಕರಿಸಿರುವುದೇ ದೊಡ್ಡ ಪ್ರಮಾಣದಲ್ಲಿ ಕಂಡು ಬರುತ್ತದೆ. ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 100.00ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಕೇವಲ ಶೇಕಡ 98.00ರಷ್ಟು ಮಾತ್ರ ಕಂಡು ಬರುವುದು. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಲ್ಲಿ ಶೇಕಡ 99.00ರಷ್ಟು ಕಂಡು ಬಂದಿರುತ್ತದೆ.

5.32. ವಾಸಸ್ಥಾನದಿಂದ ದೂರ ಹೋಗಿ ಕೆಲಸ ಮಾಡಿರುವುದು

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ದುಡಿಯಲು ಇಚ್ಛಿಸುವ ಕುಟುಂಬಗಳಿಗೆ ನೀಡುವ ಗುರಿ ಇಟ್ಟುಕೊಂಡಿರುವುದು. ಸ್ಥಳೀಯವಾಗಿ ಅಥವಾ ಐದು ಕಿಲೋ ಮೀಟರ್ ಒಳಗೆ ಉದ್ಯೋಗ ಸೃಷ್ಟಿಸಲು ಸಾಧ್ಯವಾಗದಿದ್ದಾಗ 5 ಕಿಲೋ ಮೀಟರ್‌ಗಿಂತಲೂ ದೂರ ಹೋಗಿ ದುಡಿಯುವವರಿಗೆ ಹೆಚ್ಚುವರಿ ಕೂಲಿಯ ಶೇಕಡ 10ರಷ್ಟು ಕೂಲಿಯನ್ನು ನೀಡಬೇಕಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ 5 ಕಿಲೋಮೀಟರ್ ದೂರಕ್ಕಿಂತಲೂ ದೂರ ಹೋಗಿ ಕೂಲಿ ಕೆಲಸ ಮಾಡುವವರ ಪ್ರಮಾಣವನ್ನು ಪ್ರಸ್ತುತ ಅಧ್ಯಯನ ತಿಳಿಸುತ್ತದೆ.

ಸ್ತಂಭ ರೇಖಾ ಚಿತ್ರ : 26

ವಾಸಸ್ಥಾನದಿಂದ ದೂರ ಹೋಗಿ ಕೆಲಸ ಮಾಡಿರುವುದು



ಉದ್ಯೋಗ ಖಾತರಿ ಕಾಯಿದೆ ಅಡಿ ಕೆಲಸದ ಅಗತ್ಯತೆ ಇರುವ ಆಸಕ್ತರಿಗೆ ಉದ್ಯೋಗ ನೀಡುವ ಸಲುವಾಗಿ 5 ಕಿ.ಮೀಗಿಂತ ದೂರ ಹೋಗಿ ಕೆಲಸ ಮಾಡುವವರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ 5 ಕಿ.ಮೀ ದೂರ ಹೋಗಿ ಕೂಲಿ ಮಾಡಿದವರು ಶೇಕಡ 5.5ರಷ್ಟು ತಿಳಿದುಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 1.50ರಷ್ಟು ಕಂಡು ಬರುತ್ತಾರೆ. ಎರಡು ಪಂಚಾಯತಿಗಳಿಂದ ಒಟ್ಟಾರೆ ಶೇಕಡ 3.50ರಷ್ಟು ಜನರು 5 ಕಿ.ಮೀ ಹೆಚ್ಚು ದೂರ ಹೋಗಿ ದುಡಿಯುತ್ತಿರುವುದು ತಿಳಿಯುತ್ತದೆ. ಉದ್ಯೋಗ ಖಾತರಿ ಕಾಯಿದೆ ಅಡಿ 5 ಕಿ/ಮೀ ಗಿಂತ ದೂರ ಹೋಗಿ ಕೆಲಸ ಮಾಡಿದವರಿಗೆ ಕೂಲಿಕಾರರಿಗೆ ಪ್ರೇರಣೆ ಮತ್ತು ಪ್ರಯಾಣ ದರಕ್ಕೆ ಹೆಚ್ಚುವರಿಯಾಗಿ ಕೂಲಿವೇತನದ ಶೇಕಡ 10ರಷ್ಟು ಕೂಲಿ ನೀಡುವುದನ್ನು ಕಾಯಿದೆ ಕಡ್ಡಾಯಗೊಳಿಸಿದೆ. ಅಧ್ಯಯನಕ್ಕೆ ಒಳಪಡಿಸಿದಾಗ ಬೆಲವತ್ತ ಮತ್ತು ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ 5 ಕಿ.ಮೀ ದೂರ ವಾಸಸ್ಥಳದಿಂದ ಹೊರ ಹೋಗಿ ಕೂಲಿ ಮಾಡಿದವರು. ಹೆಚ್ಚುವರಿ ಕೂಲಿವೇತನ ನೀಡದೇ ಇರುವುದು ಕಂಡುಬರುತ್ತದೆ. ಶೇಕಡ 10ರಷ್ಟು ಕೂಲಿ ನೀಡಬೇಕಾದ ಮಾಹಿತಿ ಕೊರತೆಯಿರುವುದು ಕಂಡುಬರುವುದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡಿಲ್ಲದವರು ಶೇಕಡ 94.50 ಮತ್ತು ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 98.50 ಕಂಡು ಬರುತ್ತದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಗಳಿಂದ ಶೇಕಡ 96.50ರಷ್ಟು ಕಂಡುಬರುತ್ತದೆ.

5.33. ಕಿ.ಮೀ ವಾಸಸ್ಥಳದಿಂದ ಹೊರಗೆ ಹೋಗಿ ಕೆಲಸ ಮಾಡಿದವರಿಗೆ ಹೆಚ್ಚುವರಿ ಕೂಲಿ ನೀಡಲಾಗಿದೆಯೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅಡಿ ಕೂಲಿಕಾರರಿಗೆ 100 ದಿನಗಳವರೆಗೆ ಲಭ್ಯವಾಗುವ ದೃಷ್ಟಿಯಿಂದ ಮತ್ತು ಕೆಲವು ಗ್ರಾಮಗಳಲ್ಲಿ, ಗ್ರಾಮಗಳಿಗೂ ಆ ಗ್ರಾಮಕ್ಕೆ ಸೇರಿದ ಜಮೀನುಗಳು 5 ಕಿಮೀ ಕಿಂತಲೂ ದೂರ ಇರುವುದರಿಂದ ಭೂ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದರಿಂದ ಅಲ್ಲಿಯ ಜಮೀನುಗಳಲ್ಲಿ ಹೋಗಿ ಕೆಲಸ ಮಾಡಿರುವುದರಿಂದ ನಿಗಧಿ ಪಡಿಸಿದ ಕೂಲಿಗಿಂತಲೂ ಹೆಚ್ಚುವರಿ ಕೂಲಿ ನೀಡುವುದನ್ನು ಕಾಯಿದೆಯಲ್ಲಿ ಅವಕಾಶ ಮಾಡಿಕೊಟ್ಟಿದೆ. ಇದು ದೂರದಲ್ಲಿ ಕೂಲಿ ಕೆಲಸ ಮಾಡುವ ಕೂಲಿಕಾರರಿಗೆ ಪ್ರಯಾಣ ದರ ಸೇರಿದಂತೆ ಅವರಿಗೆ ಕೂಲಿವೇತನದಲ್ಲಿ ಹೆಚ್ಚಳ ಮಾಡಿರುವುದು. ಇದರಿಂದ ಕೂಲಿಕಾರರು ಕೂಲಿ ಕೆಲಸಕ್ಕೆ ಬೇಡಿಕೆ ಸಿಗುವುದು. ಈ ಅಧ್ಯಯನ ಕ್ಷೇತ್ರದಲ್ಲಿ 5 ಕಿ.ಮೀ.ಗಿಂತಲೂ ದೂರಹೋಗಿ ಕೆಲಸ ಮಾಡಿದವರಿಗೆ ಹೆಚ್ಚುವರಿ ವೇತನ ನೀಡಿದೆಯಾ ಮತ್ತು ನೀಡಿರುವುದನ್ನು ಇಲ್ಲಿ ತಿಳಿಸುತ್ತದೆ..

ಕೋಷ್ಟಕ : 5.25

ಕಿ.ಮೀ ವಾಸಸ್ಥಳದಿಂದ ಹೋಗಿ ಕೆಲಸ ಮಾಡಿದವರಿಗೆ ಹೆಚ್ಚುವರಿ ಕೂಲಿ ನೀಡಲಾಗಿದೆಯೆ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಶೇಕಡ 2ರಷ್ಟು	0	0.00	0	0.00	0	0.00
ಶೇಕಡ 5ರಷ್ಟು	0	0.00	0	0.00	0	0.00
ಶೇಕಡ 10ರಷ್ಟು	0	0.00	0	0.00	0	0.00
ಶೇಕಡ 15ರಷ್ಟು	0	0.00	0	0.00	0	0.00
ಹೆಚ್ಚುವರಿ ಕೂಲಿ ವೇತನ ನೀಡಿರುವುದಿಲ್ಲ	11	5.50	3	1.50	14	3.50
5 ಕಿ.ಮೀ.ಗಿಂತಲೂ ದೂರ ಹೋಗಿ ಕೆಲಸ ಮಾಡಿಲ್ಲದವರು	189	94.50	197	98.50	386	96.50
ಒಟ್ಟು	**200**	**100.00**	**200**	**100.00**	**400**	**100.00**

ಉದ್ಯೋಗ ಖಾತರಿ ಕಾಯಿದೆ ಅಡಿ ಕೆಲಸದ ಅಗತ್ಯತೆ ಇರುವ ಆಸಕ್ತರಿಗೆ ಉದ್ಯೋಗ ನೀಡುವ ಸಲುವಾಗಿ 5 ಕಿ.ಮೀ.ಗಿಂತ ದೂರ ಹೋಗಿ ಕೆಲಸ ಮಾಡುವವರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ 5 ಕಿ.ಮೀ. ವಾಸಸ್ಥಳದಿಂದ ದೂರ ಹೋಗಿ ಕೂಲಿ ಮಾಡಿದವರು ಶೇಕಡ 5.5 ರಷ್ಟು ತಿಳಿದು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 1.50ರಷ್ಟು ಕಂಡು ಬರುತ್ತಾರೆ. ಎರಡು ಪಂಚಾಯತಿಗಳಿಂದ ಒಟ್ಟಾರೆ ಶೇಕಡ 3.50ರಷ್ಟು ಜನರು 5 ಕಿ.ಮೀ ವಾಸಸ್ಥಳದಿಂದ ದೂರ ಹೋಗಿ ದುಡಿಯುತ್ತಿರುವುದು ತಿಳಿಯುತ್ತದೆ. ಉದ್ಯೋಗ ಖಾತರಿ ಕಾಯಿದೆ ಅಡಿ 5 ಕಿ/ಮೀ ಗಿಂತ ದೂರ ಹೋಗಿ ಕೆಲಸ ಮಾಡಿದವರಿಗೆ ಕೂಲಿಕಾರರಿಗೆ ಪ್ರೇರಣೆ ಮತ್ತು ಪ್ರಯಾಣದರಕ್ಕೆ ಹೆಚ್ಚುವರಿಯಾಗಿ ಕೂಲಿವೇತನದ ಶೇಕಡ 10ರಷ್ಟು ಕೂಲಿ ನೀಡುವುದನ್ನು ಕಾಯಿದೆ ಕಡ್ಡಾಯವಾಗಿ ನಮ್ಮ ಅಧ್ಯಯನಕ್ಕೆ ಒಳಪಡಿಸಿದಾಗ ತಿಳಿಯುತ್ತದೆ. ಬೆಲವತ್ತ ಮತ್ತು ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ 5 ಕಿ.ಮೀ ವಾಸಸ್ಥಳದಿಂದ ಗ್ರಾಮದ ಹೊರಗೆ ಹೋಗಿ ಕೂಲಿ ಮಾಡಿದವರಿಗೆ ಹೆಚ್ಚುವರಿ ಕೂಲಿವೇತನ ನೀಡದೇ ಇರುವುದು ತಿಳಿದು ಬರುತ್ತದೆ. ಶೇಕಡ 10ರಷ್ಟು ಕೂಲಿ ನೀಡಬೇಕಾದ ಮಾಹಿತಿ ಕೊರತೆಯಿಂದ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡಿಲ್ಲದವರು ಶೇಕಡ 94.50ರಷ್ಟು ಮತ್ತು ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 98.50ರಷ್ಟು ಕಂಡು ಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಗಳಿಂದ ಶೇಕಡ 96.50ರಷ್ಟು ಕಂಡುಬರುತ್ತದೆ.

5.34. ಅನುಷ್ಠಾನ ಮಾಡಿದ ಕಾಮಗಾರಿಗಳ ವಿವರ

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಉದ್ಯೋಗ ಖಾತರಿ ಯೋಜನೆ ಅಂತರ್ಜಲ ಮರು ಪೂರಣಕ್ಕೆ ಮತ್ತು ಕೃಷಿಗೆ ಸಂಬಂಧಿಸಿದಂತೆ ದೀರ್ಘಕಾಲಿನ ಆಸ್ತಿಗಳನ್ನು ನಿರ್ಮಾಣ ಮಾಡುವುದು ಉದ್ಯೋಗ ಕಾಯಿದೆಯ ಆಶಯವಾಗಿರುತ್ತದೆ. ಈ ಹಿನ್ನೆಯಲ್ಲಿ ಯಾವ ಯಾವ ಪ್ರಕಾರದ ಕಾಮಗಾರಿಗಳನ್ನು ಯಾವ ಯಾವ ಗ್ರಾಮಪಂಚಾಯತಿಗಳಲ್ಲಿ ಅನುಷ್ಠಾನ ಮಾಡಿದ್ದಾರೆ ಯಾವ ಕಾಮಗಾರಿಗಳಿಗೆ ಹೆಚ್ಚು ಆದ್ಯತೆ ನೀಡಿರುವರು. ಇವು ಸಮುದಾಯದ ಬೇಡಿಕೆ ಆಧಾರಿತ ಕಾಮಗಾರಿಗಳೆ ಅಥವಾ ಗುತ್ತಿಗೆದಾರರ ಅಥವಾ ಗ್ರಾಮಪಂಚಾಯತಿ ತೀರ್ಮಾನದ ಕಾಮಗಾರಿಗಳೇ ಎನ್ನುವುದನ್ನು ತಿಳಿಸುತ್ತದೆ.

ಕೋಷ್ಟಕ : 5.26

ಅನುಷ್ಠಾನ ಮಾಡಿದ ಕಾಮಗಾರಿಗಳ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಜಲನಯನ ಅಭಿವೃದ್ಧಿ ಕೆಲಸ	0	0.00	10	5.00	10	2.50
ಅರಣ್ಯೀಕರಣ	0	0.00	3	1.50	3	0.75
ರಸ್ತೆ	26	13.00	23	11.50	49	12.25
ಚರಂಡಿ	14	7.00	8	4.00	22	5.50
ಶೌಚಾಲಯ	36	18.00	12	6.00	48	12.00
ಕಾಲುವೆ(ಚಾನಲ್)	22	11.00	3	1.50	25	6.25
ಶಾಲೆ ಕಾಂಪೌಂಡ್	5	2.50	2	1.00	7	1.75
ತೋಟಗಾರಿಕೆ ಬೆಳೆಗಳು	4	2.00	2	1.00	6	1.50
ತಂಗುದಾಣ	7	3.50	0	0.00	7	1.75
ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ಮಾಡಿರುವುದಿಲ್ಲ	86	43.00	137	68.50	223	55.75
ಒಟ್ಟು	**200**	**100.00**	**200**	**100.00**	**400**	**100.00**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅಡಿ 2013–14ರಲ್ಲಿ 9 ಪ್ರಕಾರದ ಕಾಮಾಗಾರಿಗಳನ್ನು ಅನುಷ್ಠಾನ ಮಾಡಲಿಕ್ಕೆ ಅನುಮತಿ ನೀಡಿತು. ಈ ಹಿನ್ನೆಲೆಯಲ್ಲಿ ಹೆಚ್ಚು ಶೌಚಾಲಯವನ್ನು ಅನುಷ್ಠಾನ ಮಾಡಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 18.00ರಷ್ಟು

ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಹೆಚ್ಚು ರಸ್ತೆ ನಿರ್ಮಾಣ ಶೇಕಡ 11.50ರಷ್ಟು ಕಂಡು ಬಂದಿರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಹೆಚ್ಚು ರಸ್ತೆ ನಿರ್ಮಾಣ ವಾಗಿರುವುದು ಶೇಕಡ 12.25ರಷ್ಟು ಕಂಡುಬಂದಿದೆ. ಆದರೆ ಉದ್ಯೋಗ ಖಾತರಿ ಕಾಯಿದೆ ಅಡಿ ಕೆಲಸವೇ ಮಾಡಿಲ್ಲದವರು ಹೆಚ್ಚು ಕಂಡು ಬರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 43.00 ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಕೇವಲ ಶೇಕಡ 68.50ರಷ್ಟು ಮಾತ್ರ ಕಂಡು ಬರುವುದು. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಲ್ಲಿ ಶೇಕಡ 55.75ರಷ್ಟು ಕಂಡು ಬಂದಿರುತ್ತದೆ.

5.35. 100 ಉದ್ಯೋಗ ನೀಡಿರುವುದರ ಪ್ರಮಾಣ

ಭಾರತದಲ್ಲಿ ದೈಹಿಕ ಶ್ರಮದ ಉದ್ಯೋಗವನ್ನೇ ಅವಲಂಬಿಸಿಕೊಂಡು ಅಸಂಖ್ಯಾತ ಜನರು ತಮ್ಮ ಜೀವನ ನಡೆಸಿಕೊಂಡೇ ಬಂದಿರುತ್ತಾರೆ. ಕಾರಣ ಭಾರತದಲ್ಲಿ ಸುಮಾರು ಎರಡು ಶತಮಾನದಿಂದ ಆಹಾರದ ಸಮಸ್ಯೆ ಎದುರಿಸಿಕೊಂಡೆ ಬಂದಿರುವ ಚರಿತ್ರೆ ವ್ಯಾಖ್ಯಾನಿಸುತ್ತದೆ. ಅಲ್ಲಿಯ ಮೂಲ ಕಸುಬು ಕೃಷಿಯಾಗಿರುವುದು. ಮಳೆ ಬೆಳೆ ಸಮಸ್ಯೆಗಳಿಂದ ನಿರಂತರವಾಗಿ ಹಸಿವು ಮತ್ತು ಬಡತನವನ್ನು ಎದುರಿಸುತ್ತಿರುವುದು ತಿಳಿಯುತ್ತದೆ. ಇಲ್ಲಿಯ ಬಹುಪಾಲು ಜನರು ಸಂಘಟಿತ ವಲಯಕ್ಕಿಂತ ಅಸಂಘಟಿತ ವಲಯದಲ್ಲಿ ಹೆಚ್ಚು ಅವಲಂಬಿಸಿರುವುದು ಕಾಣಬಹುದು. ಹಿಂದೆ ಅನೇಕ ಯೋಜನೆಗಳು ಅನುಷ್ಠಾನಗೊಂಡಿರುವವು. ಆದರೆ ಕೂಲಿಯ ಖಾಸಗಿ ಮಾರುಕಟ್ಟೆ ಇಟ್ಟುಕೊಂಡು ಕೂಲಿಕಾರರಿಗೆ ಕೂಲಿಯನ್ನು ನಿಗದಿ ಮಾಡಿಲ್ಲದಿರುವುದು ಕಾಣಬಹುದು. ಆದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಸಿದ್ಧಾಂತದಲ್ಲಿ ಖಾಸಗಿ ಕೂಲಿಕಾರರ ಮಾರುಕಟ್ಟೆಯನ್ನಿಟ್ಟುಕೊಂಡು ಈ ಸಿದ್ಧಾಂತದಲ್ಲಿ ನಿಗದಿ ಮಾಡಿರುವುದು ಕಾಣಬಹುದು. ಮತ್ತು ಈ ಯೋಜನೆಯ ಆಶಯವೆನಂದರೆ ಸ್ವ ಇಚ್ಛೆಯಿಂದ ಕೂಲಿ ಕೇಳಿಕೊಂಡು ಬರುವ ಕುಟುಂಬಗಳಿಗೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡುವುದು. ಉದ್ಯೋಗ ಭರವಸೆ ನೀಡುವ ಸಲುವಾಗಿ "ಉದ್ಯೋಗದ ಹಕ್ಕು" ನ್ನು ಕಲ್ಪಿಸಿರುವುದು. ಈ ಯೋಜನೆಯ ಸಿದ್ಧಾಂತವಾಗಿರುವುದು ಅಧ್ಯಯನ ಕ್ಷೇತ್ರದಲ್ಲಿ ಕುಟುಂಬ ಒಂದಕ್ಕೆ 100 ದಿನಗಳ ಉದ್ಯೋಗ ಹೇಗೆ ಮತ್ತು ಯಾವ ಪ್ರಮಾಣದಲ್ಲಿ ಅಧ್ಯಯನ ಕ್ಷೇತ್ರದಲ್ಲಿ ನೀಡಿದೆ ಎನ್ನುವ ಅಂಶಗಳನ್ನು ತಿಳಿಸುತ್ತದೆ.

ಕೋಷ್ಟಕ : 5.27

100 ದಿನಗಳ ಉದ್ಯೋಗ ನೀಡಿರುವುದರ ಪ್ರಮಾಣ

	ಬೆಲವತ್ತ		ದೊಡ್ಡೇರಿ		ಒಟ್ಟು		
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಷರಾ
2009-10	920	4.60	995	4.98	1915	4.79	ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೆ 100X200 . ಸೂಚನಾ ದಾರರು ದಿನ ಗಳನ್ನಿಟ್ಟು ಕೊಂಡು ಲೆಕ್ಕ ಹಾಕಿರುವುದು
2010-11	781	3.91	805	4.03	1586	3.97	
2011-12	889	4.45	837	4.19	1726	4.32	
2012-13	1031	5.16	1088	5.44	2119	5.30	
2013-14	2713	13.57	1320	6.60	4033	10.08	
ಒಟ್ಟು	**20000**	**100.00**	**20000**	**100.00**	**40000**	**100.00**	

ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಒಂದು ಆರ್ಥಿಕ ವರ್ಷದಲ್ಲಿ ಬೆಲವತ್ತ ಮತ್ತು ದೊಡ್ಡೇರಿ ಗ್ರಾಮಪಂಚಾಯತಿಗಳಿಗೆ 100 ದಿನಗಳ ಉದ್ಯೋಗ ನೀಡಿದೆಯೇ? ಎನ್ನುವುದಕ್ಕೆ ಪ್ರಸ್ತುತ ಅಧ್ಯಯನದಲ್ಲಿ 2009-10 ಶೇಕಡ 4.60ರಷ್ಟು, 2010-11 ರಲ್ಲಿ ಶೇಕಡ 3.91ರಷ್ಟು, 2011-12 ರಲ್ಲಿ ಶೇಕಡ 4.45ರಷ್ಟು 2012-13 ರಲ್ಲಿ ಶೇಕಡ 5.16ರಷ್ಟು, 2013-14 ರಲ್ಲಿ ಶೇಕಡ 13.57ರಷ್ಟು ಕಂಡುಬರುತ್ತದೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಒಂದು ಆರ್ಥಿಕ ವರ್ಷದಲ್ಲಿ 2009-10 ಶೇಕಡ 4.98ರಷ್ಟು, 2010-11 ರಲ್ಲಿ ಶೇಕಡ 4.03ರಷ್ಟು, 2011-12 ರಲ್ಲಿ ಶೇಕಡ 4.19ರಷ್ಟು 2012-13 ರಲ್ಲಿ ಶೇಕಡ 5.44ರಷ್ಟು, 2013-14 ರಲ್ಲಿ ಶೇಕಡ 6.60ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಲ್ಲಿ ಶೇಕಡ 10.08ರಷ್ಟು 2013-14 ರಲ್ಲಿ ಕಂಡುಬರುತ್ತದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಪ್ರಕಾರ ಪ್ರತಿವರ್ತಿಗಳಿಗೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡುವ ಭರವಸೆ ನೀಡಿರುವುದು. ಸಿದ್ಧಾಂತದಲ್ಲಿ ಹೇಳಿದಂತೆ ಅಧ್ಯಯನ ಕ್ಷೇತ್ರದಲ್ಲಿ 100 ದಿನಗಳ ಉದ್ಯೋಗ 2009-10ರಿಂದ 2013-14ರವರೆಗೆ ನೀಡಿದೆಯೇ ಅಥವಾ ಇಲ್ಲವೋ? ನೀಡಿದ್ದರೆ ಯಾವ ಪ್ರಮಾಣದಲ್ಲಿ ನೀಡಿದೆ ಎನ್ನುವಂತಹ ಅಂಶಗಳು ಇಲ್ಲಿ ವ್ಯಕ್ತವಾಗುತ್ತದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ 2013-14ರಲ್ಲಿ ಶೇಕಡ 13.57ರಷ್ಟು ಮತ್ತು 2012-13 ರಲ್ಲಿ ಶೇಕಡ 5.16ರಷ್ಟು 100 ದಿನಗಳ ಉದ್ಯೋಗ ನೀಡಿರುವುದು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ 2013-14ರಲ್ಲಿ ಶೇಕಡ 6.60 ರಷ್ಟು ಮತ್ತು 2012-13ರಲ್ಲಿ ಶೇಕಡ 5.44ರಷ್ಟು 100ದಿನಗಳ ಉದ್ಯೋಗ ನೀಡಿರುವುದು ಕಂಡು ಬರುವುದು ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ 2013-14 ರಲ್ಲಿ ಶೇಕಡ 10.08ರಷ್ಟು 100 ದಿನಗಳ ಉದ್ಯೋಗ ನೀಡಿರುವುದು ಕಂಡು ಬಂದರೆ 2012-13ರಲ್ಲಿ ಶೇಕಡ 5.30ರಷ್ಟು 100 ದಿನಗಳ ಉದ್ಯೋಗ ನೀಡಿರುವುದು ಕಂಡು ಬರುತ್ತದೆ. ದೊಡ್ಡೇರಿ ಗ್ರಾಮ ಪಂಚಾಯತಿಗೆ ಹೋಲಿಸಿದರೆ

ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ 100 ದಿನಗಳ ಉದ್ಯೋಗ ನೀಡಿರುವುದರ ಪ್ರಮಾಣ ಹೆಚ್ಚು ಕಂಡು ಬರುತ್ತದೆ.

5.36. ಮಹಿಳೆಯರಿಗೆ ಅವಕಾಶ ಮತ್ತು ಸಮಾನ ಕೂಲಿಯನ್ನು ನೀಡಿದೆಯೆ?

ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಣ್ಣಿನ ದೃಢ ಹೆಜ್ಜೆಗಳು, ಸಂವಿಧಾನಾತ್ಮಕ ಅವಕಾಶಗಳು ಮತ್ತು ಅಧಿಕಾರಗಳು ನೀಡಿರುವುದು ಸಬಲೀಕರಣದ ಹಾದಿ ಹಿಡಿದಿರುವುದನ್ನು ಕಾಣಬಹುದು. ಆದರೂ ಈ ಮಧ್ಯದಲ್ಲಿ ಅವಕಾಶ ವಂಚಿತರಾಗಿರುವುದೇ ಹೆಚ್ಚು, ಭಾರತದಲ್ಲಿ ಎಷ್ಟೋ ಗ್ರಾಮೀಣಾಭಿವೃದ್ಧಿ ಯೋಜನೆಗಳು ಅನುಷ್ಠಾನವಾಗಿರುವವು. ಆದರೆ ಆ ಯೋಜನೆಗಳಲ್ಲಿ ಮಹಿಳಾ ಭಾಗವಹಿಸುವಿಕೆ ತೀರಾ ಕಡಿಮೆ. ಇಂದಿಗೂ ಖಾಸಗಿ ಮತ್ತು ಅಸಂಘಟಿತ ವಲಯದಲ್ಲಿ ಮಹಿಳೆಯರಿಗೆ ಸಮಾನವಾದ ಅವಕಾಶ ಮತ್ತು ಕೂಲಿಯನ್ನು ನೀಡುವುದಿಲ್ಲ. ಬಹು ಹಿಂದೆ ಹುಟ್ಟಿದಂತಹ ಕೂಲಿ ಕಾರ್ಮಿಕರ ಕಾಯ್ದೆಯ ಅನುಗುಣವಾಗಿ ರಾಷ್ಟ್ರದಲ್ಲಿ ಅನೇಕ ಗ್ರಾಮೀಣಾಭಿವೃದ್ಧಿ ಯೋಜನೆಗಳಲ್ಲಿ ಅವಕಾಶ ನೀಡಿದರು ಸರಿಯಾದ ಮಾಹಿತಿ ಇಲ್ಲದೆ ಮಹಿಳೆಯರಿಗೆ ದುಡಿಮೆಯ ಅವಕಾಶದಿಂದ ವಂಚಿತರಾಗಿರುವುದು ಕಾಣಬಹುದು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಲ್ಲಿ ಮಹಿಳೆಯರಿಗೆ ಸಮಾನವಾದ ಕೂಲಿಯನ್ನು ಮತ್ತು ಸಮಾನ ಅವಕಾಶಗಳನ್ನು ನೀಡಬೇಕು ಎಂದು ಕಾಯಿದೆ ಕಡ್ಡಾಯಗೊಳಿಸಿದೆ. 2005ರಲ್ಲಿ ರೂಪಗೊಂಡ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅಥವಾ ಸಿದ್ಧಾಂತ ಈ ಅಧ್ಯಯನ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಮತ್ತು ಸಮಾನವೇತನ ನೀಡಿರುವುದನ್ನು ತಿಳಿಸುತ್ತದೆ.

ಕೋಷ್ಟಕ : 5.28

ಮಹಿಳೆಯರಿಗೆ ಅವಕಾಶ ಮತ್ತು ಸಮಾನ ಕೂಲಿಯನ್ನು ನೀಡಿದೆಯೆ? ವಿವರ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಮಹಿಳೆಯರಿಗೆ ಅವಕಾಶ ನೀಡಿರುವುದು	ಸಮಾನವಾದ ಕೂಲಿಯನ್ನು ನೀಡಿರುವುದು	110	55.00	55	27.50	165	41.25
	ಸಮಾನವಾದ ಕೂಲಿಯನ್ನು ನೀಡಿರುವುದಿಲ್ಲ	4	2.00	4	2.00	8	2.00
	ಮಹಿಳೆಯರಿಗೆ ಅವಕಾಶ ನೀಡಿಲ್ಲ	7	3.50	25	12.50	32	8.00
	ಅವಕಾಶ ನೀಡಿರುವುದು ಗೊತ್ತಿಲ್ಲ	79	39.50	116	58.00	195	48.75
	ಒಟ್ಟು	**200**	**100.00**	**200**	**100.00**	**400**	**100.00**


ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಕೆಲಸ ಮಾಡಲು ಮಹಿಳೆಯರಿಗೆ ಬಹು ಬಗೆಯ ಉದ್ದೇಶ ವಿಟ್ಟುಕೊಂಡು ಅವಕಾಶ ಮತ್ತು ಸಮಾನವಾದ ಕೂಲಿಯನ್ನು ನೀಡಿರುವುದು ಕಲ್ಪಿಸಿದೆ. ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 55.00ರಷ್ಟು ಸಮಾನ ಕೂಲಿ ನೀಡಿರುವುದು ಕಂಡು ಬರುತ್ತದೆ. ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 27.50ರಷ್ಟು ಮಾತ್ರ ಕಂಡು ಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಲ್ಲಿ ಸಮಾನ ಕೂಲಿ ನೀಡಿರುವುದು ಶೇಕಡ 41.25ರಷ್ಟು ಕಂಡುಬರುತ್ತದೆ. ಸಂವಿಧಾನದ 73ನೇ ತಿದ್ದುಪಡಿಯಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿರುವುದರಿಂದ ಎಂ.ಜಿ.ಎನ್.ಆರ್.ಇ.ಜಿ.ಎ ನಲ್ಲೂ ಸಹ ಮಹಿಳೆಯರಿಗೆ ಶೇಕಡ 33ರಷ್ಟು ಕೂಲಿ ನೀಡುವಲ್ಲಿ ಅವಕಾಶ ಕಲ್ಪಿಸಿರುವ ಮಾಹಿತಿ ಕೊರತೆಯಿಂದ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 39.50ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 58ರಷ್ಟು ಕಂಡು ಬರುತ್ತದೆ. ಜನರಿಗೆ ಮಾತ್ರ ಸಮಾನ ಕೂಲಿ ನೀಡಿರುವುದು ತಿಳಿಯುತ್ತದೆ.

5.37. ಎನ್.ಎಂ.ಆರ್ ದಾಖಲೆಗಳ ನಿರ್ವಹಣೆ

ಎನ್.ಎಂ.ಆರ್. ದಾಖಲಾತಿ ನಿರ್ವಹಣೆ ಒಂದು ವಿನೂತನ ಪ್ರಯೋಗ, ಇದರಿಂದ ಪಾರದರ್ಶಕತೆ ಹೆಚ್ಚುತ್ತದೆ. ಈ ತರಹ ವ್ಯವಸ್ಥೆ ಯಾವ ಯೋಜನೆಗಳಲ್ಲೂ ಬಳಕೆಯಾಗಿರುವುದಿಲ್ಲ. ವಿಶೇಷವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಲ್ಲಿ ಮೊದಲ ಬಾರಿಗೆ ಬಳಕೆ ಮಾಡಿರುವುದು ಕಂಡುಬರುತ್ತದೆ. ಇದರಿಂದ ದುಡಿಯು ಕೂಲಿಕಾರನಿಗೆ ಗ್ರಾಮಪಂಚಾಯತಿಯಲ್ಲಿ ನೋಂದಣಿ ಮಾಡಿಸುವುದರೊಂದಿಗೆ ಪ್ರಾರಂಭವಾಗಿ ಜಾಬ್ ಕಾರ್ಡ್ ನೀಡುವಲ್ಲಿ, ಮಾನವ ದಿನಗಳ ಸಂಖ್ಯೆಯನ್ನು ಎಂಟ್ರೀ, ಅವುಗಳಿಗೆ ತಕ್ಕಂತೆ ಕೂಲಿ ನೀಡುವುದಕ್ಕೆ, ಹಾಜರಾತಿ ನಿರ್ವಹಣೆ, ಸೌಲಭ್ಯಗಳ ಒದಗಿಸುವಿಕೆ, ಕೆಲಸ ಮಾಡಿದ ಕಾಮಗಾರಿಗಳ ಸ್ವರೂಪ, ಮತ್ತು ಪ್ರಮಾಣ ಇಂಜಿನಿಯರ್ ಕೆಲಸವನ್ನು ಅಳೆಯುವುದು ಮತ್ತು ಗ್ರಾಮಸಭೆಗಳ ಭಾಗವಹಿಸುವಿಕೆ ಹಾಗೂ ಸಾಮಾಜಿಕ ಲೆಕ್ಕಪತ್ರದ ಸಭೆಯಲ್ಲಿ ಮತ್ತು ಪರಿಶೀಲನೆಯಲ್ಲಿ ಭಾಗವಹಿಸುವಿಕೆ ಮುಂತಾದ ವಿಷಯಗಳ ಬಗ್ಗೆ ಉಲ್ಲೇಖಿಸುವುದು. ಸಿದ್ಧಾಂತದಲ್ಲಿ ಕಡ್ಡಾಯಗೊಳಿಸಿದೆ. ಅಧ್ಯಯನ ಕ್ಷೇತ್ರದಲ್ಲಿ ಎನ್.ಎಂ.ಆರ್. ದಾಖಲಾತಿ ನಿರ್ವಹಣೆ ಹೇಗೆ ಮತ್ತು ಯಾವ ಪ್ರಮಾಣದಲ್ಲಿ ನಿರ್ವಹಿಸಿದೆ ಅಥವಾ ಆಚರಣೆಗೆ ತಂದಿದೆ ಎನ್ನುವಂತಹ ಅಂಶಗಳನ್ನು ತಿಳಿಸುತ್ತದೆ.

ಸ್ತಂಭ ರೇಖಾ ಚಿತ್ರ : 27

ಮಹಿಳೆಯರಿಗೆ ಅವಕಾಶ ಮತ್ತು ಸಮಾನ ಕೂಲಿ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಪ್ರಕಾರ ಪ್ರತಿವರ್ತಿಗಳಿಗೆ ಸಿದ್ಧಾಂತದಲ್ಲಿ ಕಡ್ಡಾಯಗೊಳಿಸಿದೆ. ಅಧ್ಯಯನ ಕ್ಷೇತ್ರದಲ್ಲಿ ಎನ್.ಎಂ.ಆರ್. ದಾಖಲಾತಿ ನಿರ್ವಹಣೆ ಹೇಗೆ ಮತ್ತು ಯಾವ ಪ್ರಮಾಣದಲ್ಲಿ ನಿರ್ವಹಿಸಿದೆ ಅಥವಾ ಆಚರಣೆಗೆ ತಂದಿದೆ ಎನ್ನುವಂತಹದು. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 0.50ರಷ್ಟು ನಿರ್ವಹಣೆ ಮಾಡಿರುವುದು ಕಂಡು ಬಂದರೆ. ನಿರ್ವಹಣೆ ಮಾಡಿಲ್ಲದಿರುವುದು ಶೇಕಡ 60.50ರಷ್ಟು ಪ್ರಮಾಣ ಕಂಡು ಬರುತ್ತದೆ, ಇದರ ಬಗ್ಗೆ ಏನು ಗೊತ್ತಿಲ್ಲದಿರುವುದು ಶೇಕಡ 39ರಷ್ಟು ಪ್ರಮಾಣ ಕಂಡು ಬರುತ್ತದೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 1.00ರಷ್ಟು ನಿರ್ವಹಣೆ ಮಾಡಿರುವುದು ಕಂಡು ಬಂದರೆ. ನಿರ್ವಹಣೆ ಮಾಡಿಲ್ಲದಿರುವುದು ಶೇಕಡ 49.00ರಷ್ಟು ಪ್ರಮಾಣ ಕಂಡುಬರುತ್ತದೆ, ಇದರ ಬಗ್ಗೆ ಏನು ಗೊತ್ತಿಲ್ಲದಿರುವುದು ಶೇಕಡ 50.00ರಷ್ಟು ಪ್ರಮಾಣ ಕಂಡು ಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಎನ್.ಎಂ.ಆರ್. ದಾಖಲಾತಿ ನಿರ್ವಹಣೆ ಯಾಗಿರುವುದು ಶೇಕಡ 0.75 ರಷ್ಟು ಕಂಡುಬಂದರೆ, ನಿರ್ವಹಣೆ ಮಾಡದಿರುವುದು ಶೇಕಡ 54.75 ರಷ್ಟು ಕಂಡುಬರುತ್ತದೆ ಮತ್ತು ಈ ವಿಷಯವೇ ಗೊತ್ತಿಲ್ಲದಿರುವುದು ಶೇಕಡ 44.50 ರಷ್ಟು ಕಂಡುಬರುತ್ತದೆ.

5.38. ಮಾನವನ ದಿನ ಮತ್ತು ಪಾವತಿಸಿದ ವೇತನ

ಹಿಂದಿನಿಂದಲೂ ಖಾಸಗಿ ವಲಯದ ಕೂಲಿ ಮತ್ತು ಸರ್ಕಾರಿ ವಲಯದಲ್ಲಿ ಮಾಡುವ ಕೆಲಸಕ್ಕೆ ನೀಡುವ ಕೂಲಿಯ ಬಗ್ಗೆ ಅನೇಕ ಉದ್ಯೋಗ ಸಿದ್ಧಾಂತಗಳು ಕಾಲ ಘಟ್ಟಗಳಿಗೆ ಅನುಗುಣವಾಗಿ ತನ್ನ ನೀತಿಯಲ್ಲಿ ಪರಿಷ್ಕರಣೆ ತಂದಿರುವುದು. ಈ ಹಿನ್ನೆಯಲ್ಲಿ ಉದ್ಯೋಗ ಖಾತರಿ ಕಾಯಿದೆಯಲ್ಲೂ ಮಾಡಿದ ಕೂಲಿ ದಿನಕ್ಕೂ ಮತ್ತು ನೀಡಿದ ವೇತನಕ್ಕೂ ವ್ಯತ್ಯಾಸವಾಗದಂತೆ ಕೂಲಿವೇತನ ನೀಡಲು

ಕಾಯಿದೆಯಲ್ಲಿ ಸ್ಪಷ್ಟಪಡಿಸಿದೆ. ಬೆಲವತ್ತ ಮತ್ತು ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಕಾಯಿದೆ ಅಡಿ ಕೂಲಿಕಾರರಿಗೆ ಕೂಲಿವೇತನವನ್ನು ಹೇಗೆ ಸಂದಾಯ ಮಾಡಿದೆ ಎನ್ನುವುದನ್ನು ಕೆಳಗಿನ ಕೋಷ್ಟಕದಲ್ಲಿ ತಿಳಿಸುತ್ತದೆ.

ಕೋಷ್ಟಕ : 5.29

ಮಾನವನ ದಿನ ಮತ್ತು ಪಾವತಿಸಿದ ವೇತನ ವಿವರ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
[illegible]	ಮಾಡಿದ ಕೂಲಿಗೂ ನೀಡಲಿರುವ ವೇತನಕ್ಕೂ ಸರಿ ಇತ್ತು	114	57.00	58	29.00	172	43.00
	ಕೆಲಸ ಮಾಡಿದ ದಿನಗಳಿಗಿಂತ ಕಡಿಮೆ ದಿನಗಳು	0	0.00	5	2.50	5	1.25
	ಕೆಲಸ ಮಾಡಿದ ದಿನಗಳಿಗಿಂತ ಹೆಚ್ಚು ದಿನಗಳು	0	0.00	0	0.00	0	0.00
	ಮಾಡಿದ ಕೆಲಸದ ದಿನಗಳಿಗಿಂತ ಕಡಿಮೆ ಕೂಲಿ	0	0.00	0	0.00	0	0.00
	ಮಾಡಿದ ಕೆಲಸದ ದಿನಗಳಿಗಿಂತ ಹೆಚ್ಚು ಕೂಲಿ	0	0.00	0	0.00	0	0.00
	ಕೆಲಸವೇ ಮಾಡಿಲ್ಲ ಕೂಲಿ ದಿನಗಳು ಬಂದಿರುತ್ತವೆ	0	0.00	0	0.00	0	0.00
	ಕೆಲಸವೇ ಮಾಡಿಲ್ಲ	86	43.00	137	68.50	223	55.75
	ಒಟ್ಟು	**200**	**100.00**	**200**	**100.00**	**400**	**100.00**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಖಾಯಿದೆ ಪ್ರಕಾರ ದುಡಿಮೆಗಾರರಿಗೆ ನ್ಯಾಯ ಸಮ್ಮತವಾದ ಕೂಲಿ ನೀಡಬೇಕೆಂದು ಕಾಯಿದೆಯಲ್ಲಿ ಕಡ್ಡಾಯಗೊಳಿಸಿದೆ. ಅಧ್ಯಯನ ಕ್ಷೇತ್ರದಲ್ಲಿ ಮಾಡಿದ ಕೂಲಿಗೂ ನೀಡಲಿರುವ ವೇತನಕ್ಕು ಸರಿ ಇತ್ತು ಎನ್ನುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 57ರಷ್ಟು ಕಂಡು ಬಂದರೆ. ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ ಕೇವಲ 29ರಷ್ಟು ಮಾತ್ರ ಕಂಡುಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 43.00ರಷ್ಟು ಕಂಡುಬರುತ್ತದೆ. ಇದರ ಇನ್ನೊಂದು ವಿಶೇಷವೆಂದರೆ ಎರಡು ಗ್ರಾಮಪಂಚಾಯತಿಯಲ್ಲಿ ಕೆಲಸವೇ ಮಾಡಿಲ್ಲದೆ ಕೂಲಿ ಪಡೆದಿರುತ್ತದೆ ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 43ರಷ್ಟು ಕಂಡು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಅಚ್ಚರಿಯ ವಿಷಯವೆಂದರೆ ಶೇಕಡ 68.50ರಷ್ಟು ಎಂಬುದು ಅಧ್ಯಯನದಿಂದ ತಿಳಿಯುತ್ತದೆ.

5.39. ಹಾಜರಾತಿ ನಿರ್ವಹಣೆ

ಪಾರದರ್ಶಕತೆ ಮತ್ತು ದಾಖಲಾತಿಯ ಸಲುವಾಗಿ ಹಾಜರಾತಿ ಪ್ರಮುಖವಾದ ಪಾತ್ರವಹಿಸುವುದು. ದಾಖಲಾತಿ ಒಂದು ಅಧಿಕೃತ ದಾಖಲೆ, ತಾನು ಕೂಲಿ ಕೆಲಸದಲ್ಲಿ ಹಾಜರಾಗಿರುವುದನ್ನು ಸೂಚಿಸುವುದಲ್ಲದೆ ತಾನು ಆ ದಿನ ಕೆಲಸ ಮಾಡಿದ್ದೇನೆಂದು ಸಾಬಿತು ಮಾಡುವುದು. ಈ ಮೂಲಕವಾಗಿ ತಾನು ಮಾಡಿದ ಕೂಲಿ ವೇತನವನ್ನು ಕೇಳುವ ಹಕ್ಕನ್ನು ಈ ಹಾಜರಾತಿ ಕಲ್ಪಿಸಿಕೊಡುವುದು. ಹಾಜರಾತಿ ನಿರ್ವಹಿಸುವುದು ಕಾಯಿದೆ ಕಡ್ಡಾಯಗೊಳಿಸಿದೆ. ಅದರಲ್ಲೂ ಹಾಜರಾತಿಯನ್ನು ಕಡ್ಡಾಯವಾಗಿ ಗ್ರಾಮಪಂಚಾಯತಿಯೇ ನಿರ್ವಹಿಸಲು ಸೂಚಿಸಿರುವುದು. ಈ ಎರಡು ಗ್ರಾಮಪಂಚಾಯತಿಯಲ್ಲಿ ಹಾಜರಾತಿ ನಿರ್ವಹಿಸುವುದು, ಮತ್ತು ಯಾರು ನಿರ್ವಹಿಸುವರು ಎನ್ನುವುದನ್ನು ಗುರುತಿಸುತ್ತದೆ.

ಕೋಷ್ಟಕ : 5.30

ಹಾಜರಾತಿ ನಿರ್ವಹಣೆ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಗ್ರಾಮಪಂಚಾಯತಿ	0	0.00	0	0.00	0	0.00
ಗುತ್ತಿಗೆದಾರರು	0	0.00	0	0.00	0	0.00
ಗ್ರಾಮಪಂಚಾಯತಿ ಸದಸ್ಯರು	0	0.00	0	0.00	0	0.00
ಗ್ರಾಮದ ಮುಖಂಡರು	0	0.00	0	0.00	0	0.00
ಕಾಯಕ ಬಂಧು	0	0.00	0	0.00	0	0.00
ಎನ್.ಜಿ.ಒ	0	0.00	0	0.00	0	0.00
ಪ್ರತಿ ದಿನ ಹಾಜರಾತಿಯನ್ನು ನಿರ್ವಹಿಸಿರುವುದಿಲ್ಲ	123	61.50	103	51.50	226	56.50
ಪ್ರತಿ ದಿನ ಹಾಜರಾತಿ ನಿರ್ವಹಿಸುತ್ತಿರುವ ಮಾಹಿತಿ ಗೊತ್ತಿಲ್ಲ	77	38.50	97	48.50	174	43.50
ಒಟ್ಟು	200	100.00	200	100.00	400	100.00

ಕಾಮಗಾರಿ ನಡೆಯುವ ಸ್ಥಳದಲ್ಲಿ ಹಾಜರಾತಿ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರತಿ ದಿನ ಹಾಜರಾತಿಯನ್ನು ನಿರ್ವಹಿಸಿರುವುದಿಲ್ಲವೆಂದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 61.50ರಷ್ಟು ಕಂಡು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 51.50ರಷ್ಟು ಅಧ್ಯಯನದಿಂದ ವ್ಯಕ್ತವಾಗುತ್ತದೆ. ಹಾಜರಾತಿ ನಿರ್ವಹಿಸುತ್ತಿರುವ ಮಾಹಿತಿ ಗೊತ್ತಿಲ್ಲ ಎನ್ನುವುದು ಬೆಲವತ್ತ

ಗ್ರಾಮಪಂಚಾಯತಿಯಲ್ಲಿ ಶೇಕಡ 38.50ರಷ್ಟು ಕಂಡು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 48.50ರಷ್ಟು ಅಧ್ಯಯನದಿಂದ ವ್ಯಕ್ತವಾಗುತ್ತದೆ.

5.40. ಗ್ರಾಮಪಂಚಾಯತ್‌ಗೆ ಇಂಜನಿಯರ್ ನೇಮಕ

ಗ್ರಾಮೀಣ ಅಭಿವೃದ್ಧಿ ಯೋಜನೆಗಳು ನಡೆದು ಬಂದ ಇತಿಹಾಸವನ್ನು ಗಮನಿಸಿದರೆ ದೀರ್ಘಕಾಲಿನ ಆಸ್ತಿಗಳ ನಿರ್ಮಾಣ ಕಾರ್ಯದಲ್ಲಿ ಮತ್ತು ಕೂಲಿಮಾಡಿದ ಕೂಲಿಕಾರರಿಗೆ ಸಮಯಕ್ಕೆ ತಕ್ಕಂತೆ ಕೂಲಿ ನೀಡಿಕೆಯಲ್ಲಿ ಅತ್ಯಂತ ಮಹತ್ವದ ಪಾತ್ರ ಪಡೆದುಕೊಳ್ಳುವುದು. ಕೂಲಿಕಾರನಿಗೆ ಕೆಲಸಮಾಡಿದ 15 ದಿನದೊಳಗೆ ಕೂಲಿ ಪಾವತಿಸುವಲ್ಲಿ ಕಾಮಗಾರಿಗಳನ್ನು ಅಳೆಯುವ ಸಲುವಾಗಿ ಕಾಯಿದೆಯಲ್ಲಿ ಗ್ರಾಮಪಂಚಾಯತಿಗೆ ಒಬ್ಬ ಇಂಜನಿಯರ್‌ನ್ನು ನೇಮಕಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಈ ವ್ಯವಸ್ಥೆಯನ್ನು ಹೇಗೆ ಕಲ್ಪಿಸಿದೆ ಎಂಬುದನ್ನು ಪ್ರಸ್ತುತ ಅಧ್ಯಯನ ವ್ಯಕ್ತಪಡಿಸಿದೆ.

ಕೋಷ್ಟಕ : 5.31

ಗ್ರಾಮಪಂಚಾಯತ್‌ಗೆ ಇಂಜನಿಯರ್ ನೇಮಕ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಗ್ರಾಪಂ.ಗೆ ಒಬ್ಬ ಇಂಜನಿಯರ್ ನೇಮಿಸಿದ್ದರು	111	55.50	71	35.50	182	45.50
ಗ್ರಾಪಂ. ನೌಕರರು	12	6.00	21	10.50	37	9.25
ಗ್ರಾಪಂ. ಚುನಾಯಿತ ಪ್ರತಿ ನಿಧಿಗಳು	0	0.00	0	0.00	0	0.00
ಗುತ್ತಿಗೆದಾದರು	0	0.00	4	2.00	0	0.00
ಗ್ರಾಪಂ.ಗೆ ಒಬ್ಬ ಇಂಜನಿಯರ್ ನೇಮಿಸಿರುವುದು ಗೊತ್ತಿರುವುದಿಲ್ಲ	77	38.50	104	52.00	181	45.25
ಒಟ್ಟು	**200**	**100.00**	**200**	**100.00**	**400**	**100.00**

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ದೀರ್ಘಕಾಲಿನ ಆಸ್ತಿಗಳನ್ನು ನಿರ್ಮಾಣ ಮಾಡಲು ಪ್ರತಿ ಗ್ರಾಮಪಂಚಾಯತಿಗೆ ಇಂಜನಿಯರ್ ನೇಮಕ ಮತ್ತು ಕೆಲಸವನ್ನು ಅಳೆಯುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು. ಆದರೆ ಇಂಜನಿಯರ್ ಕೊರತೆಯಿಂದ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 55.50ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 35.50ರಷ್ಟು ಕಂಡುಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಗಳಿಂದ ಶೇಕಡ 45.50 ರಷ್ಟು ಕಂಡುಬಂದಿದೆ.

ಗ್ರಾಮ ಪಂಚಾಯತಿಗೆ ಇಂಜಿನಿಯರ್ ನೇಮಿಸಿರುವ ಮಾಹಿತಿಯೇ ಇಲ್ಲದಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 38.50ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 52.00ಕಂಡು ಬಂದರೆ ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ 45.25 ಕಂಡುಬರುತ್ತದೆ ದಾಖಲಾತಿಗಳಲ್ಲಿ ಕೆಲಸಗಳನ್ನು ಇಂಜಿನಿಯರ್ ಅಳೆಯುವುದನ್ನು ಕಂಡರೆ ವಾಸ್ತವಿಕವಾಗಿ ಗ್ರಾಮ ಪಂಚಾಯತಿಯ ನೌಕರರೇ ಬಹುಪಾಲು ಕೆಲಸವನ್ನು ಅಳೆಯುತ್ತಿದ್ದರು ಎನ್ನುವುದು ಅಧ್ಯಯನ ತಿಳಿಸುತ್ತದೆ.

5.41. ಕಾಮಗಾರಿಗಳ ಅಳತೆ ವಿವರ

ಹಿಂದಿನಿಂದಲೂ ಬಂದ ಕೂಲಿ ಕಾರ್ಮಿಕರ ಚರಿತ್ರೆಯನ್ನು ಗಮನಿಸಿದರೆ ಹಸಿವು, ಆಹಾರದ ಭದ್ರತೆ, ಬಡತನ ವಿಷಯಕ್ಕೆ ಬಂದರೆ ಕೂಲಿಕಾರರು ಅನೇಕ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸಿಕೊಂಡೇ ಬಂದಿದ್ದಾರೆ. ಒಬ್ಬ ಕೂಲಿಕಾರನಿಗೆ ಬೇಕಾಗಿರುವುದು ತನ್ನ ಹಸಿವನ್ನು ನೀಗಿಸಿಕೊಳ್ಳಲು ಕೂಲಿ ಮಾಡಿದ ತಕ್ಷಣ ನ್ಯಾಯಯುತವಾದ ಕೂಲಿ ಮಾತ್ರವಾಗಿರುತ್ತದೆ. ಈ ಅನುಭವಗಳ ಮೇಲೆ ಕೂಲಿಕಾರರಿಗೆ ನ್ಯಾಯಯುತವಾದ ಕೂಲಿಯನ್ನು ಕೂಲಿ ಮಾಡಿದ 15 ದಿನದೊಳಗೆ ನೀಡುವ ಸಲುವಾಗಿ ಕೂಲಿಮಾಡಿದ ತಕ್ಷಣವೇ ಮಾಡಿದ ಕಾಮಗಾರಿಯನ್ನು ಅಳೆಯುವುದಕ್ಕೆ ಕಾಯಿದೆಯಲ್ಲಿ ಸೂಚಿಸಿದೆ. ಅಧ್ಯಯನ ಕೇತ್ರದಲ್ಲಿ ಮಾಡಿದ ಕೆಲಸವನ್ನು ಎಷ್ಟು ದಿನದೊಳಗೆ ಅಳೆಯುತ್ತಿದ್ದರು ಎನ್ನುವುದನ್ನು ಈ ಅಧ್ಯಯನದಿಂದ ತಿಳಿಯುತ್ತದೆ.

ಕೋಷ್ಟಕ : 5.32

ಕಾಮಗಾರಿಗಳ ಅಳತೆ ವಿವರ

ದಿನಗಳು	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
6–9	20	10.00	9	4.50	29	7.25
9–15	50	25.00	47	23.50	97	24.25
15–30	71	35.50	73	36.50	144	36.00
30–45	59	29.50	71	35.50	130	32.50
ಒಟ್ಟು	**200**	**100.00**	**200**	**100.00**	**400**	**100.00**

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಮಾಡಿದ ಕೆಲಸವನ್ನು ಎಷ್ಟು ದಿನಕ್ಕೆ ಅಳೆಯುತ್ತಿದ್ದರು ಎನ್ನುವುದಕ್ಕೆ ಕಾಯಿದೆಯಲ್ಲಿ, ಕೆಲಸವನ್ನು ಒಂದು ವಾರಕ್ಕೆ ಅಳೆಯಬೇಕೆಂಬ ನಿಯಮವಿದ್ದರೂ 15–30 ದಿನಕ್ಕೆ ಅಳೆಯುತ್ತಿದ್ದರೆಂದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 35.50ರಷ್ಟು

ಕಂಡು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 36.50ರಷ್ಟು ಕಂಡು ಬಂದರೆ ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 36.00ರಷ್ಟು ಕಂಡುಬಂದಿದೆ.

5.42. ಕಾಮಗಾರಿಗಳ ಅಳತೆ ಹೇಗೆ

ಖಾಸಗಿ ಕೂಲಿಕಾರರ ಮಾರುಕಟ್ಟೆಗಿಂತ ಸರ್ಕಾರಿ ವಲಯದಲ್ಲಿ ಕೂಲಿಕಾರರು ಶ್ರಮವಹಿಸಿ ಕೆಲಸ ಮಾಡಿರುವುದನ್ನು ನಿರ್ಣಹಿಸುವ ಮಾಪನವೇ ಕೆಲಸ ಅಳೆಯುವುದು. ಇದು ಕೂಲಿಕಾರರ ಕೆಲಸದಲ್ಲಿ ಪ್ರಮುಖವಾದ ಪಾತ್ರವಹಿಸುವುದು. ಕಾರಣ ಶ್ರಮಕ್ಕೆ ತಕ್ಕ ಕೂಲಿ ಪಾವತಿಯಾಗಬೇಕಾದರೆ ಅಳತೆ ಶ್ರಮದ ಪ್ರಮಾಣವನ್ನು ಮಾಪನ ಮಾಡುತ್ತದೆ. ಈ ಹಿನ್ನೆಯಲ್ಲಿ ಉದ್ಯೋಗ ಖಾತರಿ ಕಾಯಿದೆಯಲ್ಲಿ ಕೆಲಸ ಅಳೆಯುವುದನ್ನು ಕಡ್ಡಾಯಗೊಳಿಸಿದ್ದಾರೆ. ಅಧ್ಯಯನ ಕ್ಷೇತ್ರದಲ್ಲಿ ಹೇಗೆ ಅಳೆಯುತ್ತಿದ್ದರು ಎನ್ನುವುದು ತಿಳಿಯುತ್ತದೆ.

ಕೋಷ್ಟಕ : 5.33

ಕಾಮಗಾರಿಗಳ ಅಳತೆ ಹೇಗೆ ಎನ್ನುವುದರ ವಿವರ

ಅಳೆಯುವ ವಿಧಾನ		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಉತ್ತರ	ಸರಿಯಾಗಿ ಅಳೆಯುತ್ತಿದ್ದರು	0	0.00	25	12.50	25	6.25
	ಕ್ಯುಬಿಕ್ ಮೀಟರ್‌ಗಿಂತ ಕಡಿಮೆ ಅಳೆಯುತ್ತಿದ್ದರು	0	0.00	0	0.00	0	0.00
	ಕ್ಯೂಬಿಕ್ ಮೀಟರ್‌ಗಿಂತ ಹೆಚ್ಚಿಗೆ ಅಳೆಯುತ್ತಿದ್ದರು	0	0.00	0	0.00	0	0.00
	ಸರಿಯಾಗಿ ಅಳೆಯುತ್ತಿರುವುದು ಎನ್ನುವುದಕ್ಕೆ ತಾಂತ್ರಿಕ ಮಾಹಿತಿ ಇರುವುದಿಲ್ಲ	200	100.00	175	87.50	375	93.75
ಒಟ್ಟು		**200**	**100.00**	**200**	**100.00**	**400**	**100.00**

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಮಾಡಿದ ಕೆಲಸವನ್ನು ಸರಿಯಾಗಿ ಅಳೆಯಬೇಕು ಎಂದು ಕಾಯಿದೆಯಲ್ಲಿ ಕಡ್ಡಾಯಗೊಳಿಸಿದರು. ಸರಿಯಾಗಿ ಅಳೆಯುತ್ತಾರೆ ಎನ್ನುವುದಕ್ಕೆ ಅಳತೆ ಮತ್ತು ಲೆಕ್ಕಾಚಾರದ ತಾಂತ್ರಿಕ ಮಾಹಿತಿ ಇರುವುದಿಲ್ಲ ಎಂದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100ರಷ್ಟು ಕಂಡು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 87.50ರಷ್ಟು ಅಧ್ಯಯನದಿಂದ ಕಂಡುಬಂದಿದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 93.75ರಷ್ಟು ಕಂಡು ಬಂದಿದೆ. ಇಲ್ಲಿ ಕ್ಯೂಬಿಕ್ ಮೀಟರ್ ಪರಿಕಲ್ಪನೆ ಎಲ್ಲರಿಗೂ ಎದುರಾಗುವ ಸಮಸ್ಯೆ ಕಾರಣ ಅದರ ಅರ್ಥ

ಮತ್ತು ಅಳೆಯುವ ವಿಧಾನದ ಮಾಹಿತಿ ಯಾರಿಗೂ ಇರುವುದಿಲ್ಲ. ಇದರಿಂದ ಅಧ್ಯಯನ ಕ್ಷೇತ್ರದಲ್ಲಿ ಸರಿಯಾಗಿ ಅಳೆದಿದ್ದಾರೆಯೇ ಅಥವಾ ಇಲ್ಲವೋ ಅನ್ನುವುದು ಕೂಲಿಕಾರರಲ್ಲಿ ಸ್ಪಷ್ಟತೆ ಇಲ್ಲದಿರುವಂತಹ ಅಂಶ ಕಂಡುಬರುತ್ತದೆ.

5.43. ಅನುಷ್ಠಾನದಲ್ಲಿ ತಾರತಮ್ಯದ ವಿವರ

ಕೂಲಿಕಾರರಿಗೆ ಉದ್ಯೋಗ ಪಡೆಯುವ ಮತ್ತು ದುಡಿಯುವ ವಿಚಾರದಲ್ಲಿ ಸ್ವಾತಂತ್ರ್ಯದ ನಂತರದಿಂದಲೂ ಬದುಕಿನ ಬವಣೆ ನೀಗಿಸಲು ಉದ್ಯೋಗದ ವಿಷಯದಲ್ಲಿ ತಾರತಮ್ಯದ ಆಚೆ ಈಚೆಯೇ ನಡೆದುಕೊಂಡು ಬಂದಿರುವಂತಹದು ಕೂಲಿಕಾರರಿಗೆ ಹೊಸದೇನಲ್ಲ ಎನ್ನುವುದು ಪ್ರಮುಖ ಅಧ್ಯಯನಗಳಿಂದ ತಿಳಿಯುತ್ತದೆ. ಇಂತಹ ಅನೇಕ ಸಮಸ್ಯೆಗಳಿಂದ "ಉದ್ಯೋಗದ ಹಕ್ಕು" ಎನ್ನುವಂತಹದು ಕಾಯಿದೆಗೆ ದಾರಿ ಮಾಡಿಕೊಟ್ಟಿರುವುದು. ವಿಶೇಷವಾಗಿ ಕಾಯಿದೆಯಲ್ಲಿ ತಾರತಮ್ಯಕ್ಕೆ ಅವಕಾಶ ನೀಡಿರುವುದಿಲ್ಲ ಅಧ್ಯಯನ ಕ್ಷೇತ್ರದಲ್ಲಿ ಉದ್ಯೋಗಗಳನ್ನು ಜನರಿಗೆ ಹೇಗೆ ನೀಡಿದೆ ಎನ್ನುವುದನ್ನು ಇಲ್ಲಿ ತಿಳಿಸುತ್ತದೆ.

ಕೋಷ್ಟಕ : 5.34

ಅನುಷ್ಠಾನದಲ್ಲಿ ತಾರತಮ್ಯದ ವಿವರ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ತಾರತಮ್ಯ ಕಂಡು ಬಂದಿರುವುದು	ಲಿಂಗ ತಾರತಮ್ಯ	29	14.50	7	3.50	36	9.00
	ವರ್ಗ ತಾರತಮ್ಯ	11	5.50	2	1.00	13	3.25
	ಜಾತಿ ತಾರಾತಮ್ಯ	69	34.50	52	26.00	121	30.25
	ರಾಜಕೀಯ ಪಕ್ಷ	46	23.00	89	44.50	135	33.75
	ಗುಂಪುಗಾರಿಕೆ	35	17.50	35	17.50	70	17.50
	ಪಂಚಾಯತಿ	10	5.00	9	4.50	19	4.75
	ಯಾವುದೇ ತಾರತಮ್ಯ ಕಂಡುಬಂದಿರುವುದಿಲ್ಲ	0	0.00	6	3.00	6	1.50
	ಒಟ್ಟು	**200**	**100.00**	**200**	**100.00**	**400**	**100.00**

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಉದ್ಯೋಗ ನೀಡುವುದರ ಮೂಲಕ ಬಡತನ ನಿರ್ಮೂಲನೆ ಮಾಡುವುದು ಇದರ ಪ್ರಮುಖ ಉದ್ದೇಶವಾಗಿರುವುದು. ಈ ಹಿನ್ನೆಲೆಯಲ್ಲಿ ಜನರಿಗೆ ಜಾತಿ, ವರ್ಗರಹಿತ, ತಾರತಮ್ಯವಿಲ್ಲದೆ ಉದ್ಯೋಗ ನೀಡುವ ಆಶಯವನ್ನು ಇಟ್ಟುಕೊಂಡೇ ಕಾಯಿದೆ ಅಡಿ

ತಂದಿರುವುದು. ಈ ನೆಲೆಯಲ್ಲಿ ಅಧ್ಯಯನ ಕ್ಷೇತ್ರಗಳಲ್ಲಿ ಜಾತಿ, ವರ್ಗ, ಲಿಂಗ, ರಾಜಕೀಯ ಪಕ್ಷ, ಪಂಚಾಯತಿ ಸ್ಥರಗಳಲ್ಲಿ ಉದ್ಯೋಗಗಳು ಹಂಚಿಕೆಯಾಗುತ್ತಿರುವುದು ಅಧ್ಯಯನದಿಂದ ದೃಢಪಟ್ಟಿದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಜಾತಿ ತಾರತಮ್ಯ ಶೇಕಡ 34.50ರಷ್ಟು ಕಂಡುಬಂದರೆ, ರಾಜಕೀಯ ಪಕ್ಷಗಳ ಪ್ರಭಾವ ಶೇಕಡ 23.50ರಷ್ಟು ಕಂಡುಬಂದಿದೆ. ಲಿಂಗ ತಾರತಮ್ಯ ಶೇಕಡ 14.50ರಷ್ಟು ಕಂಡು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ರಾಜಕೀಯ ಪಕ್ಷ ಶೇಕಡ 44.50ರಷ್ಟು ಕಂಡುಬಂದರೆ ಜಾತಿ ತಾರತಮ್ಯ ಶೇಕಡ 26ರಷ್ಟು ಕಂಡುಬರುತ್ತದೆ. ಗುಂಪುಗಾರಿಕೆ ಶೇಕಡ 17.50ರಷ್ಟು ಕಂಡುಬರುತ್ತದೆ. ಲಿಂಗ ತಾರತಮ್ಯ ಶೇಕಡ 3.50ರಷ್ಟು ಅಧ್ಯಯನದಿಂದ ವ್ಯಕ್ತವಾಗುತ್ತದೆ.

5.44. ಕಾಮಗಾರಿಗಳನ್ನು ನಿರ್ವಹಣೆ ಹೇಗೆ ಮತ್ತು ಯಾರಿಂದ

ರಾಷ್ಟ್ರದಲ್ಲಿ ಜನಸಂಖ್ಯೆ ಬೆಳೆದಂತೆ ಜೊತೆಯಲ್ಲಿ ಕೈಗಾರೀಕರಣ ಮತ್ತು ಜಾಗತೀಕರಣವು ಬೆಳೆಯಿತು. ಇವುಗಳ ಪೂರ್ವ ಬಡವರಿಗೆ ಬದುಕಲು ದೈಹಿಕ ಶ್ರಮದ ಉದ್ಯೋಗ ಬಿಟ್ಟರೆ ಬೇರೆ ಏನೂ ತಿಳಿದಿರಲಿಲ್ಲ, ನಿರುದ್ಯೋಗವಿದ್ದರೂ ಅದರ ಸ್ವರೂಪಗಳು ಬೇರೆಯಾಗಿದ್ದವು. ಕೈಗಾರಿಕರಣ ಮತ್ತು ಜಾಗತೀಕರಣದ ನಂತರ ನಿರುದ್ಯೋಗದ ತೀವ್ರತೆಯ ದಟ್ಟವಾಯಿತು ಎಂದು ಅಧ್ಯಯನಗಳು ವ್ಯಕ್ತಪಡಿಸುತ್ತವೆ. ದೈಹಿಕ ಶ್ರಮದ ಉದ್ಯೋಗಗಳನ್ನು ಯಂತ್ರಗಳು ನುಂಗುತ್ತವೆ, ಇದರಿಂದ ನಿರುದ್ಯೋಗದ ತೀವ್ರತೆ ದಟ್ಟವಾಗಿ ಕಾಡುತ್ತವೆ. ಇದರಿಂದ ಎಲ್ಲಾ ಸಮಸ್ಯೆಗಳಿಗೂ ದಾರಿಯಾಗುತ್ತದೆ ಎನ್ನುವುದು ಅನೇಕ ಅಧ್ಯಯನಗಳು ತಿಳಿಸುತ್ತವೆ. ಉದ್ಯೋಗ ಖಾತರಿ ಕಾಯಿದೆಯಲ್ಲಿ ಯಂತ್ರಗಳನ್ನು ನಿಷೇಧಿಸಿದೆ. ಈ ಅಧ್ಯಯನ ಕ್ಷೇತ್ರದಲ್ಲಿ ಕಾಮಗಾರಿಗಳು ಹೇಗೆ ನಡೆದಿವೆ ಎನ್ನುವುದನ್ನು ಪ್ರಸ್ತುತ ಅಧ್ಯಯನ ತಿಳಿಸುತ್ತದೆ.


ಕೋಷ್ಟಕ: 5.35

ಕಾಮಗಾರಿಗಳನ್ನು ನಿರ್ವಹಣೆ ಹೇಗೆ ಮತ್ತು ಯಾರಿಂದ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಯಂತ್ರಗಳಿಂದ ನಿರ್ವಹಣೆ	ಟ್ರಾಕ್ಟರ್, ಜೆ.ಸಿ.ಬಿ	117	58.50	83	41.50	200	50.00
	ಜೆ.ಸಿ.ಬಿ	62	31.00	82	41.00	144	36.00
	ಕಾಮಗಾರಿಗಳನ್ನು ಯಂತ್ರಗಳ ಮಾನವರ ಮೂಲಕ ನಿರ್ವಹಿಸುತ್ತಿರುವುದು	21	10.50	35	17.50	56	14.00
ಒಟ್ಟು		**200**	**100.00**	**200**	**100.00**	**400**	**100.00**

ಸ್ತಂಭ ರೇಖಾ ಚಿತ್ರ : 268

ಕಾಮಗಾರಿಗಳನ್ನು ನಿರ್ವಹಣೆ ಹೇಗೆ ಮತ್ತು ಯಾರಿಂದ



ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಕಾಮಗಾರಿಗಳನ್ನು ಯಂತ್ರಗಳ ಮೂಲಕ ಅನುಷ್ಠಾನ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ. ಆದರೆ ಜೆ.ಸಿ.ಬಿ ಮತ್ತು ಟ್ರಾಕ್ಟರ್‌ಗಳಂತಹ ಯಂತ್ರಗಳಿಂದ ಮೂಲಕ ಅನುಷ್ಠಾನ ಮಾಡಿರುವುದು. ಬೆಲವತ್ತ ಗ್ರಾಮಪಂಚಾಯತಿಯಲ್ಲಿ 58.50 ರಷ್ಟು ಮಾಡಿರುವುದು ತಿಳಿದುಬಂದರೆ ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 41.00ರಷ್ಟು ಕಂಡು ಬರುತ್ತದೆ, ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 50.00ರಷ್ಟು ಕಂಡುಬರುತ್ತದೆ. ಮನುಷ್ಯರಿಂದ ಮಾಡುವ ಕೆಲಸಗಳು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 10.50ರಷ್ಟು ಕಂಡು ಬರುತ್ತವೆ. ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಟ್ರಾಕ್ಟರ್ 17.50ರಷ್ಟು ಕಂಡು ಬಂದರೆ, ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 14.00ರಷ್ಟು ಮಾತ್ರ ಕಂಡುಬರುವುದು.

5.45. ಯಂತ್ರಗಳ ಸಹಾಯದಿಂದ ಯಾವ ಕಾಮಗಾರಿಗಳನ್ನು ಅನುಷ್ಠಾನ ಮಾಡಿದೆ?

ಉದ್ಯೋಗ ಖಾತರಿ ಕಾಯಿದೆ ಗುರುತಿಸಿದ ಕಾಮಗಾರಿಗಳಾದ ಜಲ ನಯನ ಅಭಿವೃದ್ಧಿ, ಭೂ ಮರುಪೂರಣ ಕಾಮಗಾರಿಗಳು, ಮಳೆ ನೀರು ಕೊಯ್ಲು, ಅರಣ್ಯೀಕರಣ, ಸಣ್ಣ, ಅತಿಸಣ್ಣ ರೈತರ, ಪ.ಜಾ, ಪ.ಪಂ. 5 ಎಕರೆಗಿಂತ ಕೆಳಗಿರುವ, ಕುಟುಂಬದ ಯಜಮಾನಿ ಮಹಿಳೆ ಇರುವವರ ತೋಟಗಾರಿಕೆ ಬೆಳೆಸುವುದು. ಇಂಗು ಗುಂಡಿ ಉದ್ಯೋಗಗಳಿಂದ ಉದ್ಯೋಗಗಳನ್ನು ಸೃಷ್ಟಿ ಮಾಡುವ ಬಹು ಉಪಯೋಗಿಯಾಗಿರುವವು. ಕೂಲಿಕಾರರ ನಿರಾಳತೆಗೆ ಪ್ರಮುಖ ಪಾತ್ರವಹಿಸುವ ಹಿನ್ನೆಲೆವುಳ್ಳದ್ದು ಆಗಿರುತ್ತದೆ. ಆದರೂ ಅಧ್ಯಯನ ಕ್ಷೇತ್ರದಲ್ಲಿ ಕಾಮಗಾರಿಗಳ ಅನುಷ್ಠಾನದಲ್ಲಿ ಯಂತ್ರಗಳ ಪ್ರವೇಶ ಕಂಡು ಬಂದಿರುವುದನ್ನು ತಿಳಿಸುತ್ತದೆ.

ಕೋಷ್ಟಕ : 5.36

ಯಂತ್ರಗಳ ಸಹಾಯದಿಂದ ಯಾವ ಕಾಮಗಾರಿಗಳನ್ನು ಅನುಷ್ಠಾನ ಮಾಡಿದ ವಿವರ

ಕಾಮಗಾರಿಗಳು	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಜಲನಯನ ಅಭಿವೃದ್ಧಿ	8	4.00	46	23.00	54	13.50
ಭೂ ಮರುಪೂರಣ ಕಾಮಗಾರಿಗಳು	0	0.00	9	4.50	9	2.25
ಮಳೆ ನೀರು ಕೊಯ್ಲು	0	0.00	0	0.00	0	0.00
ಅರಣ್ಯೀಕರಣ	8	4.00	14	7.00	22	5.50
ಸಣ್ಣ,ಅತಿಸಣ್ಣ ರೈತರ, ಪ.ಜಾ, ಪ.ಪಂ.5 ಎಕರೆ ಗಿಂತ ಕೆಳಗಿರುವ, ಕುಟುಂಬದ ಯಜಮಾನಿ ಮಹಿಳೆ ಇರುವವರ ತೋಟಗಾರಿಕೆ ಬೆಳೆಸುವುದು.	12	6.00	21	10.50	33	8.25
ರಸ್ತೆ	23	22.00	52	26.00	75	18.75
ಚರಂಡಿ	24	12.00	32	16.00	56	14.00
ಶಾಲಾ ಕಾಂಪೌಂಡು	44	11.50	12	6.00	56	14.00
ಶೌಚಾಲಯ	36	18.00	14	7.00	50	12.50
ಕಾಲುವೆ(ಚಾನಲ್)	37	18.50	0	0.00	37	9.25
ಇಂಗು ಗುಂಡಿ	8	4.00	0	0.00	8	2.00
ಒಟ್ಟು	200	100.00	200	100.00	400	100.00

ಟ್ರಾಕ್ಟರ್ ಮತ್ತು ಜೆಸಿ.ಬಿಯಂತಹ ಯಂತ್ರಗಳನ್ನು ಬಳಸಿ ಕಾಮಗಾರಿ ಅನುಷ್ಠಾನ ಮಾಡಿರುವುದು. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ರಸ್ತೆಯನ್ನು ಶೇಕಡ 22ರಷ್ಟು, ಚರಂಡಿ ಶೇಕಡ 12 ರಷ್ಟು ಮತ್ತು ಶಾಲಾ ಕಾಂಪೌಂಡು ಶೇಕಡ 11.50ರಷ್ಟು ಕಂಡು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿ ರಸ್ತೆಯನ್ನು ಶೇಕಡ 26ರಷ್ಟು, ಚರಂಡಿ, ಶೇಕಡ 16ರಷ್ಟು ಮತ್ತು ಶಾಲಾ ಕಾಂಪೌಂಡು ಶೇಕಡ 6ರಷ್ಟು ಕಂಡು ಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ರಸ್ತೆಯನ್ನು ಶೇಕಡ 18.75ರಷ್ಟು, ಚರಂಡಿ, ಶೇಕಡ 14ರಷ್ಟು ಮತ್ತು ಶಾಲಾ ಕಾಂಪೌಂಡು ಶೇಕಡ 14ರಷ್ಟು ಕಂಡು ಬಂದಿರವುದು.

5.46. ಕೆಲಸ ಮಾಡುವ ಕಾರ್ಮಿಕರು ಯಾರು, ಎಲ್ಲಿಯವರು

ಬಡತನ ನಿರ್ಮೂಲನೆಗೆ ಉದ್ಯೋಗ ನೀಡುವಿಕೆ ಪ್ರಮುಖ ಆಯಾಮ, ಸ್ಥಳೀಯರಿಗೆ ಸ್ಥಳೀಯದಲ್ಲೇ ಉದ್ಯೋಗ ನೀಡುವುದು ಅಭಿವೃದ್ಧಿಗೆ ಪೂರಕವಾಗಿ ಕೂಲಿಕಾರರಿಗೆ ದುಡಿಮೆಯ ಚಲನೆಯನ್ನು ಹೆಚ್ಚಿಸುತ್ತದೆ. ಅದು ವಲಸೆಯ ಒತ್ತಡವನ್ನು ತಗ್ಗಿಸಲು ಪ್ರಯತ್ನಿಸುತ್ತದೆ. ದಾಖಲಾತಿಗಳ ಪ್ರಕಾರ ಪ್ರಗತಿ ಸಾಧನೆಯಾಗುವುದು, ಕೂಲಿಕಾರರಿಗೆ ಉದ್ಯೋಗ ನೀಡಿರುವುದು, ಕೂಲಿ ಪಾವತಿಸಿರುವುದು ಅದು ಯಾರಿಗೆ? ಅವರು ಸ್ಥಳೀಯರೇ ಎನ್ನುವುದನ್ನು ಈ ಅಧ್ಯಯನ ಗುರುತಿಸಿದೆ.

ಕೋಷ್ಟಕ : 5.37

ಕೌಶಲ್ಯ ಕೆಲಸ ಮಾಡುವ ಕಾರ್ಮಿಕರು ಯಾರು, ಎಲ್ಲಿಯವರು

ಗ್ರಾಮಪಂಚಾಯತಿ		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಕೌಶಲ ಕೆಲಸ ಮಾಡುವ	ಗುತ್ತಿಗೆದಾರರ ಕಡೆಯವರು	200	100.00	200	100.00	400	100.00
	ನಮ್ಮ ಗ್ರಾಮಪಂಚಾಯತಿಯ ಜಾಬ್ ಕಾರ್ಡ್ ಹೊಂದಿದ ನಮ್ಮ ಗ್ರಾಮದವರು	0	0.00	0	0.00	0	0.00
	ನಮ್ಮ ಗ್ರಾಮಪಂಚಾಯತಿಯ ಜಾಬ್ ಕಾರ್ಡ್ ಹೊಂದಿದ ಬೇರೆ ಗ್ರಾಮದವರು	0	0.00	0	0.00	0	0.00
	ಜಾಬ್ ಕಾರ್ಡ್ ಹೊಂದಿದ ಬೇರೆ ಗ್ರಾಮ ಪಂಚಾಯತಿಯ ಕೂಲಿ ಕಾರ್ಮಿಕರು	0	0.00	0	0.00	0	0.00
	ಕುಶಲ ಕೂಲಿಕಾರರಿಂದ ಕೆಲಸ ನಡೆದಿರುವುದಿಲ್ಲ	0	0.00	0	0.00	0	0.00
ಒಟ್ಟು		**200**	**100.00**	**200**	**100.00**	**400**	**100.00**

ಎಂ.ಜಿ.ಎನ್.ಆರ್.ಇ.ಜಿ.ಎ ಅಡಿ ಕೂಲಿಕಾರರಿಗೆ ಉದ್ಯೋಗ ನೀಡುವುದಕ್ಕೆ ಕೆಲವೊಂದು ಮಾನದಂಡಗಳನ್ನು ಅಳವಡಿಸಿರುವುದು ಅವಶ್ಯಕತೆ ಇರುವವರಿಗೆ ಕೂಲಿ ನೀಡುವ ಹಿನ್ನೆಲೆವುಳ್ಳದ್ದು ಆಗಿದೆ. ಸ್ಥಳೀಯವಾಗಿದ್ದು ಗ್ರಾಮಪಂಚಾಯತಿಯಲ್ಲಿ ನೋಂದಣೆ ಮಾಡಿಸಿ ಜಾಬ್ ಕಾರ್ಡ್ ಉಳ್ಳವರಾಗಿದ್ದರೆ ಅವರಿಗೆ ಉದ್ಯೋಗ ನೀಡುವ ಮಾನದಂಡ ನಿಗದಿಪಡಿಸಿರುವುದು. ಆದರೆ ಈ

ಅಧ್ಯಯನ ಕ್ಷೇತ್ರದಲ್ಲಿ ಬಹುಪಾಲು ಕುಶಲ ಕೂಲಿಕಾರರು ಎಂಬ ನೆಪದ ಮೇಲೆ ಬೆಲವತ್ತ ಮತ್ತು ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಗುತ್ತಿಗೆಯವರ ಕಡೆಯಿಂದ ಕೆಲಸ ಮಾಡುವವರು ಶೇಕಡ 100ರಷ್ಟು ಕಂಡುಬರುತ್ತದೆ. ಆ ಕೂಲಿಕಾರರು ಸಹ ಈ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವ ತಂಡದವರು ಮತ್ತು ಅವರೆಲ್ಲಾ 20 ರಿಂದ 30 ಕಿ.ಮೀ ದೂರದವರು ಎಂದು ಅಧ್ಯಯನ ಗುರುತಿಸಿದೆ.

5.47. ಅಪಘಾತ ಸಂಭವಿಸಿದರೆ ಪರಿಹಾರ ಮತ್ತು ಉಚಿತವಾಗಿ ಚಿಕಿತ್ಸೆ

ಅಸಂಘಟಿತ ವಲಯದಲ್ಲಿ ದುಡಿಯುವ ಕಾರ್ಮಿಕರೇ ಹೆಚ್ಚು ಅವರಿಗೆ ಉದ್ಯೋಗದ ಆಧಾರಿತವಾಗಿ ಯಾವುದೇ ಭದ್ರತೆ ಇರುವುದಿಲ್ಲ. ಇದರಿಂದ ಸುರಕ್ಷತೆಯಿಂದ ದುಡಿಯುವ ವರ್ಗ ದೂರವೇ ಉಳಿದು ಬಿಡುತ್ತದೆ. ಕೂಲಿಕಾರರಿಂದ ದುಡಿಸಿಕೊಳ್ಳುವುದು ಎಷ್ಟು ಮುಖ್ಯವೋ ಅವರನ್ನು ಕಾಮಗಾರಿ ನಡೆಯುವ ಸ್ಥಳದಲ್ಲಿ ಜೋಪಾನವಾಗಿ ನೋಡಿಕೊಳ್ಳುವುದು ಅಷ್ಟೇ ಮುಖ್ಯವಾಗಿರುತ್ತದೆ. ಕೂಲಿಕಾರರ ಹಿತದೃಷ್ಟಿಯಿಂದ ಕಾಯಿದೆಯಡಿ ಕಾಮಗಾರಿ ನಡೆಯುವ ಸ್ಥಳದಲ್ಲಿ ಅಪಘಾತ ಸಂಭವಿಸಿದರೆ ಚಿಕಿತ್ಸೆ ಮತ್ತು ವಿಮಾ ಹಣ ನೀಡುವುದು ಕಡ್ಡಾಯವಾಗಿರುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಕಾಮಗಾರಿ ಅನುಷ್ಠಾನದ ಸಮಯದಲ್ಲಿ ಕೂಲಿಕಾರರು ಅಪಘಾತ ಸಂಭವಿಸಿ ವಿಮೆ ಹಣ ಮತ್ತು ಚಿಕಿತ್ಸೆ ನೀಡಿರುವುದನ್ನು ತಿಳಿಸುತ್ತದೆ.

ಕೋಷ್ಟಕ : 5.38

ಅಪಘಾತ ಸಂಭವಿಸಿದರೆ ಮತ್ತು ಉಚಿತವಾಗಿ ಚಿಕಿತ್ಸೆ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಕೆಲಸದ ಅವಧಿಯಲ್ಲಿ ಕೂಲಿಕಾರರಿಗೆ ಅಪಘಾತ ಸಂಭವಿಸಿದ್ದೆ	ಉಚಿತವಾಗಿ ಚಿಕಿತ್ಸೆ ನೀಡಿದಾರೆ	0	0.00	0	0.00	0	0.00
	ಉಚಿತವಾಗಿ ಚಿಕಿತ್ಸೆ ನೀಡಿಲ್ಲ	0	0.00	0	0.00	0	0.00
	ಕೆಲಸದ ಅವಧಿಯಲ್ಲಿ ಅಪಘಾತ ಸಂಭವಿಸಿಲ್ಲ	200	100.00	200	100.0	400	100.00
	ಒಟ್ಟು	**200**	**100.00**	**200**	**100.0**	**400**	**100.00**

ಅಧ್ಯಯನ ಕ್ಷೇತ್ರದಲ್ಲಿ ಕಾಮಗಾರಿ ಅನುಷ್ಠಾನದ ಸಮಯದಲ್ಲಿ ಕೂಲಿಕಾರರು ಅಪಘಾತ ಸಂಭವಿಸಿ ಚಿಕಿತ್ಸೆ ನೀಡಿರುವುದರ ಬಗ್ಗೆ ಅಧ್ಯಯನದ ಕ್ಷೇತ್ರದಲ್ಲಿ ಈ ವಿಷಯಗಳಿಗೆ ಸಂಬಂಧಿಸಿದಂತೆ

ಎರಡು ಗ್ರಾಮಪಂಚಾಯತಿಗಳಲ್ಲಿ ಇದರ ಬಗ್ಗೆ ಎಲ್ಲಿಯೂ ಯಾವೊಬ್ಬ ಕೂಲಿಕಾರರಿಗೂ ಮಾಹಿತಿ ಇರುವುದಿಲ್ಲ ಮತ್ತು ಅಪಘಾತಗಳು ಸಂಭವಿಸಿಲ್ಲ ಎನ್ನುವುದು ಕಂಡು ಬಂದಿದೆ.

5.48. ಕಾಯಕ ಬಂಧು(ಉದ್ಯೋಗ ಮಿತ್ರ) ಸಂಘದ ವಿವರ

ಬಹು ಹಿಂದಿನಿಂದಲೂ ಯಾವುದೇ ವಲಯದಲ್ಲಿ, ನಗರವಾಗಲಿ, ಹಳ್ಳಿಯಾಗಲಿ, ಕೃಷಿಯಾಗಲಿ ಕೈಗಾರಿಕೆಯಾಗಲಿ ಎಲ್ಲಾ ಭಾಗದಲ್ಲೂ ದುಡಿಯುವ ಕೂಲಿಕಾರರ ವರ್ಗ ಇದೆ. ಅವರಿಗೆ ಮಾರ್ಗಸೂಚಿಯಾಗಿ ಬೇರೆ ಬೇರೆ ಹೆಸರುಗಳು ಇವೆ. ಮೇಸ್ತ್ರಿ, ಕೆಲಸ ಮಾಡಿಸುವವರು. ಅದರಂತೆ ಉದ್ಯೋಗ ಖಾತರಿ ಕಾಯಿದೆಯಲ್ಲಿಯೂ ಸಹ ಕಾಯಕ ಬಂಧು ಎಂಬ ಕೂಲಿಕಾರರ ಮಿತ್ರನೆಂದು ಕೂಲಿಕಾರರಿಗೆ ಅನುಕೂಲವಾಗಲೆಂದು ನೇಮಕ ಮಾಡಿದೆ. ಈ ಕಾಯಕ ಬಂಧು ಕೂಲಿಕಾರರಿಗೆ ಹೇಗೆ ಹತ್ತಿರವಾಗಿ ಕೆಲಸ ಮಾಡಿದೆ ಎನ್ನುವುದು ಈ ಅಧ್ಯಯನದಲ್ಲಿ ಕಂಡು ಬರುತ್ತದೆ.


ಕೋಷ್ಟಕ: 5.39

ಕಾಯಕ ಬಂಧು (ಉದ್ಯೋಗ ಮಿತ್ರ) ಸಂಘದ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಕಾಯಕ ಬಂಧು ಸಂಘ ಇದೆ	0	0.00	0	0.00	0	0.00
ಕಾಯಕ ಬಂಧು ಸಂಘ ಇಲ್ಲ	200	0.00	00	100.00000	00	100.00
ಒಟ್ಟು	200	00.00	00	100.00	00	100.00

ಸ್ತಂಭ ರೇಖಾಚಿತ್ರ : 29

ಕಾಯಕ ಬಂಧು (ಉದ್ಯೋಗ ಮಿತ್ರ) ಸಂಘದ ವಿವರ



ಕಾಯಕ ಬಂಧು ಸಂಘ ಗ್ರಾಮದಲ್ಲಿ ಇದೆಯೇ? ಕೂಲಿಕಾರರಿಗೆ ಪೂರಕವಾಗಿ ಕೆಲಸ ಮಾಡಿದೆ ಎನ್ನುವ ವಾಸ್ತವಿಕತೆಯಲ್ಲಿ ಕಾಯಕ ಬಂಧು ಸಂಘವಿದೆಯೇ ಎನ್ನುವುದಕ್ಕೆ ಬೆಲವತ್ತ ಮತ್ತು ದೊಡ್ಡೇರಿಯ ಎರಡು ಗ್ರಾಮಪಂಚಾಯತಿಯಲ್ಲಿ ಕಾಯಕ ಬಂಧು ನೇಮಿಸಿದೆಯೇ ಮತ್ತು ಅದರ ಸಂಘವಿದೆಯೇ ಎನ್ನುವಂತಹ ವಿಷಯಕ್ಕೆ ಎರಡು ಗ್ರಾಮಪಂಚಾಯತಿಯಲ್ಲಿಯೂ ಶೇಕಡ 100ರಷ್ಟು ಇರುವುದಿಲ್ಲ ಎನ್ನುವದು ಅಧ್ಯಯನದ ಮೂಲಕ ಗುರುತಿಸಿದೆ.

5.49. ಕಾಯಿದೆಗೆ ವಿರೋಧವಾಗಿ ಹಣ ಬಳಕೆ

ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಬಡತನ, ನಿರುದ್ಯೋಗದಂತಹ ಸಮಸ್ಯೆಗಳನ್ನು ನಿವಾರಣೆ ಮಾಡುವ ಹಿನ್ನೆಲೆಯಲ್ಲಿ ಅನುಷ್ಠಾನಗೊಳ್ಳುವುದು ಕಾಯಿದೆಯ ನೀತಿಯಾಗಿದೆ. ಯೋಜನೆಗಳ ಪ್ರಮುಖ ಉದ್ದೇಶ ತನ್ನ ಗುರಿ ಸಾಧಿಸಬೇಕಾದರೆ ಯೋಜನೆಯ ಅನುಷ್ಠಾನಕ್ಕೆ ಇಟ್ಟಿರುವ ಅನುದಾನ ಬೇರೆ ಯಾವುದಕ್ಕೆ ಬಳಸಬಾರದು. ಕಾಮಗಾರಿ ನಡೆಯದೇ ಹಣ ಬಳಕೆ ಮಾಡಬಾರದು. ಕಾಮಗಾರಿಗಳ ಗುಣ ಮಟ್ಟ ಉತ್ತಮವಾಗಿ ಅನುಷ್ಠಾನವಾಗ ಬೇಕು ಮತ್ತು ಯೋಜಿತಾಗಿ ಯೋಜನೆಗಳು ರೂಪಿತವಾಗಬೇಕು ಹಾಗೂ ಯಾವುದೇ ಯೋಜನೆಗಳಿಗೆ ಅದಕ್ಕೆ ತಕ್ಕ ಕಾಲಮಿತಿ ಇರುವುದು. ಆ ಕಾಲ ಮಿತಿಯೊಳಗೆ ನಡೆಯಬೇಕಾಗುತ್ತದೆ. ಉದ್ಯೋಗ ಖಾತರಿ ಕಾಯಿದೆ ಅಧ್ಯಯನ ಕ್ಷೇತ್ರದಲ್ಲಿ ಹೇಗೆ ನಡೆದಿರುವುದನ್ನು ತಿಳಿಸುತ್ತದೆ.

ಕೋಷ್ಟಕ: 5.40

ಕಾಯಿದೆಗೆ ವಿರೋಧವಾಗಿ ಹಣ ಬಳಕೆ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	0	0.00	11	5.50	11	2.75
ಇಲ್ಲ	29	14.50	24	12.00	53	13.25
ಗೊತ್ತಿಲ್ಲ	171	85.50	165	82.50	336	84
ಒಟ್ಟು	200	100.00	200	100.00	400	100

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಗೆ ಅನುಸಾರವಾಗಿ ಅನುದಾನ ಬಳಕೆಯಾಗಿದೆಯೇ ಎನ್ನುವುದಕ್ಕೆ ಎರಡು ಗ್ರಾಮಪಂಚಾಯತಿಯಲ್ಲಿ ಸರಿಯಾಗಿ ಬಳಕೆಯಾಗಿದೆಯೇ ಅಥವಾ ವಿರೋಧವಾಗಿ ಬಳಕೆಯಾಗಿದೆಯೇ ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 85.50ರಷ್ಟು ಮಾಹಿತಿ ಇಲ್ಲ ಇದರ ಬಗ್ಗೆ ಮಾಹಿತಿಯೆ ಇರುವುದಿಲ್ಲ ಎನ್ನುವುದು ಕಂಡು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿಯೂ ಸಹ ಶೇಕಡ 82.50ರಷ್ಟು ಮಾಹಿತಿ ಇಲ್ಲ ಎನ್ನುವುದು ಈ ಅಧ್ಯಯನ ತಿಳಿಸುತ್ತದೆ.

5.50. ಉದ್ಯೋಗ ಖಾತರಿ ಕುರಿತು ಜನರ ಅಭಿಪ್ರಾಯ

ಯಾವುದೇ ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಜನರಿಗೆ ಅದರಿಂದ ಉಪಯೋಗವಾಗಬೇಕು ಮತ್ತು ತೃಪ್ತಿ ತರಬೇಕು. ಇದರಿಂದ ಜನರ ಅಭಿವೃದ್ಧಿಯ ಚಲನೆ ಹೆಚ್ಚಿಸಬೇಕು ಎನ್ನುವುದು ಆಶಯವಿರುತ್ತದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅಧ್ಯಯನ ಕ್ಷೇತ್ರಗಳಾದ ಬೆಲವತ್ತ ಮತ್ತು ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ತೃಪ್ತಿ ತಂದಿದೆಯೇ ಇಲ್ಲವೊ ಎನ್ನುವುದರ ಬಗ್ಗೆ ತಿಳಿಸುತ್ತದೆ.


ಕೋಷ್ಟಕ: 5.41

ಉದ್ಯೋಗ ಖಾತರಿ ಕುರಿತು ಜನರ ಅಭಿಪ್ರಾಯ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಯೋಜನೆಯಲ್ಲಿ ತೃಪ್ತಿ ಇಲ್ಲದಿದ್ದರೆ	ಯೋಜನೆಯಲ್ಲಿ ತೃಪ್ತಿ ಇದೆ	12	6.00	23	11.50	35	8.75
	ಗ್ರಾಮಪಂಚಾಯತಿಯಿಂದ ಮಾಹಿತಿ ಇಲ್ಲದಿರುವುದು	62	31.00	74	37.00	136	34.00
	ಅರ್ಜಿಹಾಕಿದ ಮೇಲೆ ಸಮಯಕ್ಕೆ ಸರಿಯಾಗಿ ಕೆಲಸ ಕೊಡದಿರುವುದು	54	27.00	46	23.00	100	25.00
	ಕೆಲಸ ಮಾಡಿದ ಮೇಲೆ ಕೂಲಿ ಸರಿಯಾಗಿ ಕೊಡದಿರುವುದು	33	16.50	19	9.50	52	13.00
	ಕೆಲಸದ ಸ್ಥಳದಲ್ಲಿ ಅಗತ್ಯ ಸೌಲಭ್ಯಗಳನ್ನು ನೀಡದಿರುವುದು	23	11.50	26	13.00	49	12.25
	ನಿರುದ್ಯೋಗದ ಭತ್ಯೆ ಕೊಡದಿರುವುದು	16	8.00	12	6.00	28	7.00
ಒಟ್ಟು		**200**	**100.00**	**200**	**100.00**	**400**	**100.00**

ಸ್ತಂಭ ರೇಖಾ ಚಿತ್ರ : 30

ಉದ್ಯೋಗ ಖಾತರಿ ಕುರಿತು ಜನರ ಅಭಿಪ್ರಾಯ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಜನರ ಪರವಾಗಿ ಮತ್ತು ಜನರಿಗೆ ಪ್ರಯೋಜನವಾಗಿದಿದೆಯೇ ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ತೃಪ್ತಿ ಇದೆ ಎಂದು ಶೇಕಡ 06ರಷ್ಟು ತಿಳಿದು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 11.50 ರಷ್ಟು ತೃಪ್ತಿ ಇದೆ ಎಂದು ತಿಳಿಸುತ್ತದೆ. ತೃಪ್ತಿ ಇಲ್ಲ ಎನ್ನುವ ಪ್ರಮಾಣವೇ ಹೆಚ್ಚು ಕಂಡು ಬರುತ್ತದೆ ಕಾರಣ ಗ್ರಾಮಪಂಚಾಯತಿಗಳಿಂದ ಮಾಹಿತಿ ಕೊರತೆಯೇ ಪ್ರಮುಖ ಕಾರಣವೆಂದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 31.00ರಷ್ಟು ಕಂಡುಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಮಾಹಿತಿ ಕೊರತೆ ಶೇಕಡ 37ರಷ್ಟು ಕಂಡು ಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 34.00ರಷ್ಟು ಅಧ್ಯಯನದಿಂದ ವ್ಯಕ್ತವಾಗುತ್ತದೆ.

5.51. ಉದ್ಯೋಗ ಖಾತರಿ ಹೊರೆತು ಪಡಿಸಿದರೆ ಯಾವ ರೀತಿಯ ಉದ್ಯೋಗ ಉತ್ತಮ

ಅನುಷ್ಠಾನಗೊಳಿಸುವ ಯಾವುದೇ ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಜನರಿಗೆ ಅದರಿಂದ ಪ್ರಯೋಜನವಾಗಬೇಕು ಅದರಿಂದ ಜನರಿಗೆ ತೃಪ್ತಿ ತರಬೇಕು. ಈ ಯೋಜನೆಗಳಿಂದ ಜನರ ಅಭಿವೃದ್ಧಿಯ ಚಲನೆಯ ವೇಗವನ್ನು ಹೆಚ್ಚಿಸಬೇಕು ಎನ್ನುವುದರ ಪರಿಭಾವನೆ ಇರುತ್ತದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅಧ್ಯಯನ ಕ್ಷೇತ್ರಗಳಾದ ಬೆಲವತ್ತ ಮತ್ತು ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಉದ್ಯೋಗ ಖಾತರಿ ಕಾಯಿದೆಯ ಉದ್ಯೋಗಗಳು ಸಮಾಧಾನ ನೀಡಿವೆಯೇ ಎನ್ನುವುದರ ಬಗ್ಗೆ ತಿಳಿಸುತ್ತದೆ.

ಕೋಷ್ಟಕ: 5.42

ಉದ್ಯೋಗ ಖಾತರಿ ಹೊರೆತು ಪಡಿಸಿದರೆ ಯಾವ ರೀತಿಯ ಉದ್ಯೋಗ ಉತ್ತಮ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಖಾಸಗಿ ಕೃಷಿ ಉದ್ಯೋಗ	130	65.00	114	57.00	244	61.00
ಖಾಸಗಿ ಕೃಷಿಯೇತರ ಉದ್ಯೋಗ	70	35.00	86	43.00	156	39.00
ಒಟ್ಟು	200	100.00	200	100.00	400	100.00

ಎಂ.ಜಿ.ಎನ್.ಆರ್.ಇ.ಜಿ.ಎ ಜನರ ಪರವಾಗಿದೆಯೇ ಮತ್ತು ಬಹು ಉಪಯೋಗವಾಗಿದೆಯೇ? ಜನರಿಗೆ ಕಾಯಿದೆಯಲ್ಲಿ ನೀಡುವ ಉದ್ಯೋಗಗಳು ಸಮಾಧಾನ ನೀಡಿವೆಯೇ ಎನ್ನುವುದಕ್ಕೆ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಉದ್ಯೋಗಗಳಿಗಿಂತ ಖಾಸಗಿ ವಲಯದ ಕೃಷಿ ಉದ್ಯೋಗಗಳು ಸಮಾಧಾನ ತಂದಿವೆ ಎನ್ನುವುದು ಶೇಕಡ 65ರಷ್ಟು ಕಂಡು ಬಂದರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿಯೂ ಶೇಕಡ 57ರಷ್ಟು ಕಂಡುಬಂದಿದೆ. ಖಾಸಗಿ ಕೃಷಿ ಕೂಲಿಯೇ ಸಮಾಧಾನ ನೀಡಿವೆ ಎಂದು ಮತ್ತು ಎರಡು ಗ್ರಾಮಪಂಚಾಯತಿಯಿಂದ ಖಾಸಗಿ ಕೃಷಿ ಕೂಲಿ ಉದ್ಯೋಗಗಳು ಸಮಾಧಾನ ತಂದಿವೆ ಎಂದು ಶೇಕಡ 61ರಷ್ಟು ಅಭಿಪ್ರಾಯಗಳನ್ನು ಈ ಅಧ್ಯಯನ ವ್ಯಕ್ತಪಡಿಸುವುದು.

5.52. ಉದ್ಯೋಗ ಖಾತರಿ ಮತ್ತು ಖಾಸಗಿ ದುಡಿಮೆ

ಕೂಲಿಕಾರರಿಗೆ ಕೂಲಿ ನೀಡುವ ಉದ್ಯೋಗಗಳು ಯಾವಾಗ ಹೇಗೆ ಸಮಾಧಾನ ತರುತ್ತವೆ ಎಂದರೆ ಕೂಲಿಕಾರರಿಗೆ ದುಡಿಯುವ ಕೆಲಸದಲ್ಲಿ ಇಷ್ಟವಾಗಬೇಕು ಮತ್ತು ದುಡಿಯುವ ಶ್ರಮಕ್ಕೆ ಕೂಲಿಯ ಕಾಲ ಮಿತಿಯಲ್ಲೇ ಪ್ರತಿಫಲ ಸಿಗಬೇಕು. ಆಗ ದುಡಿಯು ವರ್ಗಕ್ಕೆ ಯಾವ ವಲಯವಾದರೂ ಸರಿ ಸಮಾಧಾನ ಸಿಗುವುದು. ಉದ್ಯೋಗ ಖಾತರಿ ಕಾಯಿದೆಯ ಅಧ್ಯಯನ ಕ್ಷೇತ್ರದಲ್ಲಿ ಸಮಾಧಾನ ಯಾವ ವಲಯದಿಂದ ದೊರೆತಿದೆ ಎಂದು ಅಧ್ಯಯನದಿಂದ ವ್ಯಕ್ತವಾಗುತ್ತದೆ.

ಕೋಷ್ಟಕ: 5.43

ಉದ್ಯೋಗ ಖಾತರಿ ಮತ್ತು ಖಾಸಗಿ ದುಡಿಮೆ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಕೂಲಿ ಕಡಿಮೆಯಾಗಲಿ ಹೆಚ್ಚು ಆಗಲಿ ಪ್ರತಿ ದಿನ ಕೂಲಿಮಾಡಿದ ಸಂಜೆ ಕೂಲಿ ಸಿಗುವುದು	118	59.00	116	58.00	234	58.50

ಕಷ್ಟಕ್ಕೆ ಮುಂಗಡವಾಗಿ ಕೂಲಿ ನೀಡುವುದು	26	13.00	32	16.00	58	14.50
ಕೆಲಸದ ಸ್ಥಳದಲ್ಲಿ ಮೂಲ ಸೌಕರ್ಯ ನೀರು, ನೆರಳು ಮತ್ತು ಊಟ ನೀಡುವುದು	32	16.00	26	13.00	58	14.50
ನಿರಂತರವಾಗಿ ಕೂಲಿ ನೀಡುತ್ತಿರುವುದು	16	8.00	14	7.00	30	7.50
ಖಾಸಗಿ ಕೆಲಸಕ್ಕೆ ವಾಹನದಲ್ಲಿ ಕರೆದುಕೊಂಡು ಹೋಗುವುದು	8	4.00	12	6.00	20	5.00
ಒಟ್ಟು	**200**	**100.00**	**200**	**100.00**	**400**	**100.00**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಜನರ ಪರವಾಗಿ ಮತ್ತು ವಿರೋಧವಾದ ವಾದ ವಿವಾದಗಳು ನಡೆದಿರುವವು ಆದರೆ ಉದ್ಯೋಗ ಖಾತರಿಗಿಂತ ಖಾಸಗಿ ವಲಯದಲ್ಲಿನ ಉದ್ಯೋಗಗಳು ಸಮಾಧಾನ ದೊರೆತಿವೆ ಎಂದು ಹೇಳುತ್ತಿವೆ. ಅದಕ್ಕೆ ಕಾರಣ ಕೂಲಿ ಕಡಿಮೆಯಾಗಲಿ ಹೆಚ್ಚು ಆಗಲಿ ಪ್ರತಿ ದಿನ ಹಸಿವನ್ನು ನೀಗಿಸಲು ದುಡಿಮೆ ಮಾಡಿದ ಕೂಲಿ ಸಂಜೆ ಸಿಕ್ಕರೆ ಅವರಿಗೆ ಇದರಿಂದ ಸಮಾಧಾನಸಿಗುವುದು. ಕೂಲಿ ಕಡಿಮೆಯಾಗಲಿ ಹೆಚ್ಚು ಆಗಲಿ ಪ್ರತಿ ದಿನ ಕೂಲಿ ಮಾಡಿದ ಸಂಜೆ ಕೂಲಿ ಸಿಗುವುದು. ಈ ಕುರಿತು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 59ರಷ್ಟು ಎನ್ನುವುದು ಕಂಡು ಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿಯೂ ಶೇಕಡ 58ರಷ್ಟು ಅಧ್ಯಯನ ವ್ಯಕ್ತಪಡಿಸುವುದು.

5.53. ಬರಗಾಲ ಮತ್ತು ಉದ್ಯೋಗದ ಬೇಡಿಕೆ

ಬೇಡಿಕೆ ವಿಷಯ ಬಂದಾಗ ಕೊರತೆಯೂ ಮತ್ತು ಅಗತ್ಯತೆ ಬೇಡಿಕೆಯನ್ನು ಹೆಚ್ಚಿಸುತ್ತದೆ. ದೀರ್ಘಕಾಲಿನ ಆಸ್ತಿಗಳು ಭವಿಷ್ಯವನ್ನು ಒಳಗೊಂಡ ದೃಷ್ಟಿ ಕೋನಗಳನ್ನು ಇಟ್ಟುಕೊಂಡಿರುತ್ತದೆ. ಸದ್ಯದ ಪರಿಸ್ಥಿತಿಯಲ್ಲು ಆಹಾದ ಭದ್ರತೆಯನ್ನು ಒದಗಿಸುತ್ತದೆ ಹಾಗೆಯೇ ಉದ್ಯೋಗ ಖಾತರಿ ಕಾಯಿದೆಯಲ್ಲಿ ಜಲ, ಕೃಷಿ ಮತ್ತು ಅರಣ್ಯ ಇತರೆ ಬಹು ಪ್ರಕಾರದ ಕಾಮಗಾರಿಗಳು ಇವೆ. ಅವುಗಳಲ್ಲಿ ಯಾವ ಕಾಮಗಾರಿಗಳು ಉದ್ಯೋಗದ ಬೇಡಿಕೆ ಪೂರೈಸಿವೆ ಎನ್ನುವುದಕ್ಕೆ ಈ ಅಧ್ಯಯನ ತಿಳಿಸುತ್ತದೆ.

ಕೋಷ್ಟಕ: 5.44

ಬರಗಾಲ ಮತ್ತು ಉದ್ಯೋಗದ ಬೇಡಿಕೆ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಕೈಗೊಂಡ [illegible] ಕಾಮಗಾರಿ	ಜಲನಯನ ಅಭಿವೃದ್ಧಿ	0	0.00	5	2.50	5	1.25
	ಭೂ ಮರುಪೂರಣ ಕಾಮಗಾರಿಗಳು	0	0.00	0	0.00	0	0.00
	ಮಳೆ ನೀರು ಕೊಯ್ಲು	0	0.00	0	0.00	0	0.00
	ಅರಣ್ಯೀಕರಣ	1	0.50	2	1.00	3	0.75
	ಸಣ್ಣ, ಅತಿಸಣ್ಣ ರೈತರ, ಪ.ಜಾ, ಪ.ಪಂ. 5 ಎಕರೆ ಗಿಂತ ಕೆಳಗಿರುವ, ಕುಟುಂಬದ ಯಜಮಾನಿ ಮಹಿಳೆ ಇರುವವರ ತೋಟಗಾರಿಕೆ ಬೆಳೆಸುವುದು.	0	0.00	3	1.50	3	0.75
	ರಸ್ತೆ	0	0.00	2	1.00	2	0.50
	ಚರಂಡಿ	0	0.00	4	2.00	4	1.00
	ಶಾಲಾ ಕಾಂಪೌಂಡು	8	4.00	3	1.50	11	2.75
	ಶೌಚಾಲಯ	8	4.00	4	2.00	12	3.00
	ಕಾಲುವೆ(ಚಾನಲ್)	6	3.00	0	0.00	6	1.50
	ತಂಗುದಾಣ	2	1.00	0	0.00	2	0.50
	ಉದ್ಯೋಗದ ಬೇಡಿಕೆ ಯನ್ನು ಪೂರೈಸಿರುವುದಿಲ್ಲ	175	87.50	177	88.50	352	88.00
ಒಟ್ಟು		**200**	**100.00**	**200**	**100.00**	**400**	**100.00**

ಕಾಮಗಾರಿಗಳ ಗುಣಮಟ್ಟದಲ್ಲಿ ನಿರ್ಮಾಣಗೊಂಡು ಉದ್ಯೋಗ ಖಾತರಿ ಕಾಯಿದೆಯ ಆಶಯಕ್ಕೆ ಅನುಗುಣವಾಗಿ ಅನುಷ್ಠಾನವಾಗಬೇಕು. ಅವುಗಳಲ್ಲಿ ಯಾವ ಕಾಮಗಾರಿಗಳು ಉದ್ಯೋಗದ ಬೇಡಿಕೆ ಪೂರೈಸಿವೆ ಎನ್ನುವುದಕ್ಕೆ ಎದುರಾಗಿ ಉದ್ಯೋಗ ಖಾತರಿ ಕಾಯಿದೆ ಉದ್ಯೋಗದ ಬೇಡಿಕೆಯನ್ನು ಪೂರೈಸಿರುವುದಿಲ್ಲ ಎಂದು ಭೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 87.50ರಷ್ಟು ತಿಳಿಸಿದರೆ ಇದರ ಆಚೆ ಈಚೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿಯೂ ಸಹ ಶೇಕಡ 88.50ರಷ್ಟು ಉದ್ಯೋಗ ಖಾತರಿ ಕಾಯಿದೆ ಕೂಲಿಕಾರರಿಗೆ ಉದ್ಯೋಗದ ಬೇಡಿಕೆಯನ್ನು ಹೆಚ್ಚಿಸಿರುವುದಿಲ್ಲವೆಂದು

ಕಂಡುಬಂದಿದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಗಳಿಂದ ಶೇಕಡ 88ರಷ್ಟು ಬೇಡಿಕೆ ಪೂರೈಸಿರುವುದಿಲ್ಲ. ಅಂದರೆ ಯಾವ ಕಾಮಗಾರಿಗಳು ಬೇಡಿಕೆ ಆಧಾರಿತವಾಗಿ ಆಯ್ಕೆಯಾಗಿಲ್ಲ, ಸಮುದಾಯವನ್ನು ಹೊರಗಿಟ್ಟು ಅನುಷ್ಠಾನವಾಗಿರುವುದು ಎಂದು ಅಧ್ಯಯನ ತಿಳಿಸುತ್ತದೆ.

ಕೋಷ್ಟಕ: 5.45

ಬೇಡಿಕೆ, ನೀಡಿಕೆ ಮತ್ತು ಅನುಷ್ಠಾನ/ಗುಣಮಟ್ಟ

ಉದ್ಯೋಗ ಖಾತರಿ ಕಾಯಿದೆಯಲ್ಲಿ ಬಹು ಪ್ರಕಾರದ ಕಾಮಗಾರಿಗಳು ಇವೆ. ಜಲನಯನ ಅಭಿವೃದ್ಧಿ ಭೂ ಮರುಪೂರಣ ಕಾಮಗಾರಿಗಳು ಅ) ಮಳೆ ನೀರು ಕೊಯ್ಲು ಆ) ಅರಣ್ಯೀಕರಣ ಇ) ಸಣ್ಣ, ಅತಿಸಣ್ಣ ರೈತರ, ಪ.ಜಾ, ಪ.ಪಂ. 5 ಎಕರೆಗಿಂತ ಕೆಳಗಿರುವ, ಕುಟುಂಬದ ಯಜಮಾನಿ ಮಹಿಳೆ ಇರುವವರ ತೋಟಗಾರಿಕೆ ಬೆಳೆಸುವುದು. ಈ) ರಸ್ತೆ, ಋ) ಚರಂಡಿ ಉ) ಶಾಲಾ ಕಾಂಪೌಂಡು ಋ) ಶೌಚಾಲಯ ಎ) ಕಾಲುವೆ(ಚಾನಲ್) ಏ) ತಂಗುದಾಣ ಇವುಗಳಲ್ಲಿ ಯಾವ ಕಾಮಗಾರಿಗಳು ನಿಯಮಾನುಸಾರ ಅನುಷ್ಠಾನವಾಗಿವೆ ಮತ್ತು ಮಾಡಿದ ಕಾಮಗಾರಿಗಳಾದರೂ ಗುಣಮಟ್ಟವನ್ನು ಕಾಪಾಡಿಕೊಂಡಿವೆ ಎನ್ನುವುದನ್ನು ಅಧ್ಯಯನ ಇಲ್ಲಿ ತಿಳಿಸುತ್ತದೆ.

ಕೋಷ್ಟಕ: 5.46

ಬೇಡಿಕೆ, ನೀಡಿಕೆ ಮತ್ತು ಅನುಷ್ಠಾನ/ಗುಣಮಟ್ಟ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
AB	0	0.00	1	0.50	1	0.25
ABCD	200	100.00	194	97.00	394	98.50
ABCDEF	0	0.00	1	0.50	1	0.25
ABGF	0	0.00	1	0.50	1	0.25
ABGH	0	0.00	3	1.50	3	0.75
ಒಟ್ಟು	200	100.00	200	100.00	400	100.00

ಸೂಚನೆ: ಕೋಷ್ಟಕದಲ್ಲಿ ತೋರಿಸಿರುವ ABCDEFGHIJK ಈ ಕೆಳಕಂಡಂತೆ ಅರ್ಥಮಾಡಿಕೊಳ್ಳುವುದು

A) ಜಲನಯನ ಅಭಿವೃದ್ಧಿ B) ಭೂ ಮರುಪೂರಣ ಕಾಮಗಾರಿಗಳು C) ಮಳೆ ನೀರು ಕೊಯ್ಲು D) ಅರಣ್ಯೀಕರಣ E) ಸಣ್ಣ, ಅತಿಸಣ್ಣ ರೈತರ, ಪ.ಜಾ, ಪ.ಪಂ. 5 ಎಕರೆಗಿಂತ ಕೆಳಗಿರುವ, ಕುಟುಂಬದ ಯಜಮಾನಿ ಮಹಿಳೆ ಇರುವವರ ತೋಟಗಾರಿಕೆ ಬೆಳೆಸುವುದು. F) ರಸ್ತೆ, ಋ) ಚರಂಡಿ G) ಶಾಲಾ ಕಾಂಪೌಂಡು H) ಶೌಚಾಲಯ I) ಕಾಲುವೆ(ಚಾನಲ್) J) ತಂಗುದಾಣ

ಉದ್ಯೋಗ ಖಾತರಿ ಕಾಯಿದೆಯಲ್ಲಿ ಬಹು ಪ್ರಕಾರದ ಕಾಮಗಾರಿಗಳು ಇವೆ. ಅವುಗಳಲ್ಲಿ ಯಾವ ಕಾಮಗಾರಿಗಳು ಇವೆ, ಅವುಗಳಲ್ಲಿ ಜಲನಯನ ಅಭಿವೃದ್ಧಿಗೆ ಸಂಬಂಧಿಸಿದ ಕಾಮಗಾರಿಗಳು ಭೂ ಮರುಪೂರಣ ಕಾಮಗಾರಿಗಳು ಸರಿಯಾಗಿ ಅನುಷ್ಠಾನವಾಗಿರುವುದಿಲ್ಲ. ಗುಣಮಟ್ಟ ಕಳೆದುಕೊಂಡಿವೆ ಅದರಲ್ಲೂ ಅ) ಮಳೆ ನೀರು ಕೊಯ್ಲು ಆ) ಅರಣ್ಯೀಕರಣ ಎಂದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100ರಷ್ಟು ತಿಳಿಸಿದರೆ ಇದರ ಆಚೆ ಈಚೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 97ರಷ್ಟು ಗುಣ ಮಟ್ಟ ಕಳೆದುಕೊಂಡಿರುವುದು ತಿಳಿಯುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಗಳಿಂದ ಶೇಕಡ 98.50ರಷ್ಟು ಅನುಷ್ಠಾನಗೊಂಡ ಕಾಮಗಾರಿಗಳು ನಿಯಮಾನುಸಾರ ನಡೆದಿಲ್ಲ ಮತ್ತು ಗುಣಮಟ್ಟ ಕಳೆದುಕೊಂಡಿರುವುದು ತಿಳಿಯುತ್ತದೆ.

5.55. ಯೋಜನೆಯ ಪ್ರಯೋಜನಗಳು

ಸರ್ಕಾರಗಳು ರಾಷ್ಟ್ರದಲ್ಲಿ ಯೋಜನೆಗಳನ್ನು ಕೈಗೊಳ್ಳಬೇಕಾದರೆ ಅದರ ಹಿಂದೆ ಬಡತನದಂತಹ ಸಮಸ್ಯೆಯನ್ನು ನಿರ್ಮೂಲನೆ ಮಾಡುವ ಬಹು ಬಗೆಯ ಉದ್ದೇಶಗಳನ್ನಿಟ್ಟು ಅನುಷ್ಠಾನ ಮಾಡುವುದು. ಈ ಹಿಂದೆ ಭಾರತ ಸರ್ಕಾರ ಗ್ರಾಮೀಣ ಅಭಿವೃದ್ಧಿಗಾಗಿ ಅನೇಕ ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡಿರುತ್ತದೆ. ಇದರಿಂದ ಗ್ರಾಮೀಣರಿಗೆ ಅನುಕೂಲಗಳಾಗುತ್ತವೆ. ಯಾವುದೇ ಯೋಜನೆಗಳು ಅಭಿವೃದ್ಧಿ ಅಥವಾ ಪ್ರಯೋಜನದ ಹಿನ್ನೆಲೆಯಲ್ಲಿ ಇಟ್ಟುಕೊಂಡೆ ಅನುಷ್ಠಾನ ಮಾಡುವುದು. ಈ ಮೂಲಕ ತನ್ನ ಮಹತ್ವವನ್ನು ಸಾಧಿಸುವುದು. ಆದರೂ ಅನಾನುಕೂಲಗಳೇ ಆಗಿರುವುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ. ಪ್ರಸ್ತುತ ಅಧ್ಯಯನದಲ್ಲಿ ಪ್ರಯೋಜನ ಏನಾಗಿದೆ ಎಂಬುದನ್ನು ತಿಳಿಸುತ್ತದೆ.

ಕೋಷ್ಟಕ: 5.47

ಪ್ರಸ್ತುತ ಉದ್ಯೋಗ ಖಾತರಿ ಯೋಜನೆಯಿಂದ ಪ್ರಯೋಜನವಾಗಿರುವ ವಿವರ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಪ್ರಯೋಜನಗಳು	ಊಟ ಬಟ್ಟೆಗೆ	38	19.00	13	6.50	51	12.75
	ಊಟ ಬಟ್ಟೆಗೆ, ಮಕ್ಕಳ ಶಿಕ್ಷಣಕ್ಕೆ	69	34.50	36	18.00	105	26.25
	ಕೃಷಿ ಅಭಿವೃದ್ಧಿಗೆ		0.00		0.00		0.00
	ಊಟ ಬಟ್ಟೆಗೆ, ಮಕ್ಕಳ ಶಿಕ್ಷಣ& ಸಾಲ ತೀರಿಸುವುದು	0	0.00	1	0.50	1	0.25
	ಮಕ್ಕಳ ಶಿಕ್ಷಣಕ್ಕೆ	2	1.00	0	0.00	2	0.50

	ಬೇರೆ ಕಡೆ ಕೂಲಿಗಾಗಿ ವಲಸೆ ಹೋಗುವುದನ್ನು ತಪ್ಪಿಸಿರುವುದು	0	0.00	0	0.00	0	0.00
	ವೈಯುಕ್ತಿಕ ಅಭಿವೃದ್ಧಿಗೆ	0	0.00	0	0.00	0	0.00
	ಕುಟುಂಬದ ಆರೋಗ್ಯ ಮತ್ತು ಆಹಾರ	0	0.00	0	0.00	0	0.00
	ಜೀವನಕ್ಕೆ ಪ್ರಯೋಜನ ವಾಗಿರುವುದಿಲ್ಲ	91	45.50	150	75.00	241	60.25
ಒಟ್ಟು		200	100.00	200	100.00	400	100.00


ಗ್ರಾಮೀಣ ಪ್ರದೇಶದಲ್ಲಿ ಬಡತನ ನಿರ್ಮೂಲನೆ ಮಾಡುವ ಹಿನ್ನೆಲೆಯನ್ನು ಇಟ್ಟುಕೊಂಡು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಅನುಷ್ಠಾನ ಮಾಡಲಾಗಿರುವುದು. ಪ್ರಸ್ತುತ ಅಧ್ಯಯನದಲ್ಲಿ ವ್ಯಕ್ತವಾಗುವ ಅಂಶವೆಂದರೆ ಜೀವನಕ್ಕೆ ಪ್ರಯೋಜನವೇ ಆಗಿಲ್ಲವೆಂದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 45.50ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 75ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 60.25ರಷ್ಟು ಕಂಡುಬರುತ್ತದೆ. ಉದ್ಯೋಗ ಖಾತರಿ ಕಾಯಿದೆಯಿಂದ ಪ್ರಯೋಜನವಾಗಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಊಟ, ಬಟ್ಟೆ ಮತ್ತು ಮಕ್ಕಳ ಶಿಕ್ಷಣಕ್ಕೆ ಪಡೆಯಲಿಕ್ಕೆ ಶೇಕಡ 34.50ರಷ್ಟು ತಿಳಿದು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 18ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 26.25ರಷ್ಟು ಪ್ರಯೋಜನವಾಗಿರುವುದನ್ನು ಅಧ್ಯಯನ ಗುರುತಿಸಿದೆ.

5.56. ಉದ್ಯೋಗ ನೀಡದಿದ್ದಾಗ?

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಆಶಯ ದುಡಿಯಲು ಇಚ್ಛಿಸುವ ಗ್ರಾಮೀಣರಿಗೆ ಉದ್ಯೋಗ ನೀಡುವುದು ಸಂವಿಧಾನಾತ್ಮಕ ಕಾನೂನು ಆಗಿರುತ್ತದೆ. ಈ ಹಿನ್ನೆಯಲ್ಲಿ ಉದ್ಯೋಗ ನೀಡುವುದು ಇದರ ಪ್ರಮುಖ ಕರ್ತವ್ಯವು ಆಗಿರುತ್ತದೆ. ಅನುಷ್ಠಾನದಲ್ಲಿನ ಅನೇಕ ಲೋಪದೋಷಗಳು ಉದ್ಯೋಗ ನೀಡಲು ಹಿಂದುಳಿದಿರುವುದು, ಪ್ರಸ್ತುತ ಅಧ್ಯಯನದಿಂದ ವ್ಯಕ್ತವಾಗುತ್ತದೆ. ಮುಂದೆ ಗ್ರಾಮೀಣರು ತಮ್ಮ ಜೀವನೋಪಾಯಕ್ಕೆ ಇತರೆ ಉದ್ಯೋಗಗಳನ್ನು ಅವಲಂಬಿಸಿರುವುದು ಇಲ್ಲಿ ತಿಳಿಯುತ್ತದೆ.

ಸ್ತಂಭ ರೇಖಾಚಿತ್ರ : 31

ಉದ್ಯೋಗ ನೀಡದಿದ್ದಾಗ



ಸರ್ಕಾರದ ನೀತಿಗಳು ದುಡಿಯುವ ವರ್ಗಕ್ಕೆ ಉದ್ಯೋಗ ನೀಡುವುದರ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಬಡತನ ನಿರ್ಮೂಲನೆ ಮಾಡುವ ಹಿನ್ನೆಲೆಯನ್ನು ಇಟ್ಟುಕೊಂಡು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಅನುಷ್ಠಾನ ಮಾಡಲಾಗಿರುವುದು. ಪ್ರಸ್ತುತ ಅಧ್ಯಯನದಲ್ಲಿ ವ್ಯಕ್ತವಾಗುವ ಅಂಶವೆಂದರೆ ಉದ್ಯೋಗ ಖಾತರಿ ಕಾಯಿದೆಯಡಿ ಉದ್ಯೋಗ ನೀಡಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 65ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 24ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 40ರಷ್ಟು ಕಂಡುಬರುತ್ತದೆ. ಉದ್ಯೋಗ ಖಾತರಿ ಕಾಯಿದೆ ಅಡಿ ಉದ್ಯೋಗ ದೊರೆಯದೇ ಬೇರೆ ಉದ್ಯೋಗವನ್ನು ಅವಲಂಬಿಸಿರುವುದು ಕಂಡುಬಂದಿದೆ. ಬೇರೆ ಗ್ರಾಮಗಳಿಗೆ ಜೀವನೋಪಾಯಕ್ಕಾಗಿ ಕೃಷಿ ಕೂಲಿಗೆ ವಲಸೆ ಹೋಗಿರುವವರ ಪ್ರಮಾಣ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 22ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 29ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 25.50ರಷ್ಟು ಪ್ರಸ್ತುತ ಅಧ್ಯಯನ ಗುರುತಿಸಿದೆ.

5.57. ಖಾಸಗಿ ಕೆಲಸಗಳು ಮತ್ತು ಕೂಲಿಯ ದರ

ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ವರ್ಗದ ಜೀವನ ಅವಲಂಬಿಸಿರುವುದು. ಹಸಿವು, ಆಹಾರದ ಭದ್ರತೆಗಾಗಿ ಖಾಸಗಿ ವಲಯದ ಮಾರುಕಟ್ಟೆಯಲ್ಲಿ ಇವುಗಳನ್ನು ನೀಗಿಸಲು ಅವಕಾಶ ಮಾಡಿಕೊಟ್ಟಿದೆ. ಪ್ರಮುಖವಾಗಿ ಖಾಸಗಿ ವಲಯದ ಕೃಷಿ ಕೂಲಿಯ ಮಾರುಕಟ್ಟೆ, ಇದು ಸಣ್ಣ,

ಅತಿ ಸಣ್ಣ ಮತ್ತು ಭೂರಹಿತ ಕೂಲಿ ಕೂಲಿಕಾರರಿಗೆ ದಿನ ನಿತ್ಯ ಕೂಲಿ ಒದಗಿಸುವುದು. ಖಾಸಗಿ ವಲಯದ ಕೂಲಿ ಮಾರುಕಟ್ಟೆಯಲ್ಲಿ ದಿನದ ಕೂಲಿಯ ದರವನ್ನು ಪ್ರಸ್ತುತ ಅಧ್ಯಯನ ತಿಳಿಸುತ್ತದೆ.

ಕೋಷ್ಟಕ: 5.48

ಖಾಸಗಿ ಕೆಲಸಗಳು ಮತ್ತು ಕೂಲಿಯ ದರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
200 ರೂ	0	0.00	84	42.00	84	21.00
250 ರೂ	74	37.00	50	25.00	124	31.00
300 ರೂ	2	1.00	7	3.50	9	2.25
350 ರೂ	5	2.50	6	3.00	11	2.75
400 ರೂ	0	0.00	2	1.00	2	0.50
450 ರೂ	0	0.00	1	0.50	1	0.25
500 ರೂ ಗಿಂತ ಹೆಚ್ಚು	7	3.50	2	1.00	9	2.25
ಉಖಾಕಾ ಕೆಲಸ ಮಾಡಿದವರು	112	56.00	48	24.00	160	40.00
ಒಟ್ಟು	200	100.00	200	100.00	400	100.00

ಉದ್ಯೋಗ ಖಾತರಿ ಕಾಯಿದೆಗೆ ಎದುರಾಗಿ ಖಾಸಗಿ ಕೃಷಿ ವಲಯದ ಮಾರುಕಟ್ಟೆಯಲ್ಲಿ ನೀಡುವ ಕೂಲಿಯ ದರವನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಿದರೆ ಉದ್ಯೋಗ ಖಾತರಿಯನ್ನು ಹೊರೆತು ಪಡಿಸಿದರೆ ದಿನಕ್ಕೆ ಸರಾಸರಿ 200 ರೂಪಾಯಿಗಿಂತ ಕಡಿಮೆ ಕೂಲಿ ಪಡೆಯುವದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 0.00ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 42 ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 21.00ರಷ್ಟು ಪ್ರಸ್ತುತ ಅಧ್ಯಯನ ಗುರುತಿಸಿದೆ. 250 ರೂಪಾಯಿ ಕೂಲಿ ಪಡೆಯುವುದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 37.00ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 25.00ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 31.00ರಷ್ಟು ಪ್ರಸ್ತುತ ಅಧ್ಯಯನ ಗುರುತಿಸಿದೆ.

5.58. ಖಾಸಗಿ ಉದ್ಯೋಗಕ್ಕಾಗಿ ಎಲ್ಲಿಗೆ ಹೋಗುವರು?

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ತನ್ನ ನಿಯಮಾವಳಿ ಪ್ರಕಾರ ದುಡಿಯುವ ಇಚ್ಛೆವುಳ್ಳವರಿಗೆ ಉದ್ಯೋಗ ನೀಡುವುದು ಸಂವಿಧಾನ ಬದ್ಧ ಹಕ್ಕು ಆಗಿರುವುದು. ಆದರೆ

ಅನುಷ್ಠಾನದಲ್ಲಿನ ಲೋಪದೋಷಗಳು ಉದ್ಯೋಗ ನೀಡಲಿಕ್ಕೆ ಸಾಧ್ಯವಾಗದೇ ಇರುವುದರಿಂದ ಅನಿವಾರ್ಯತೆ ಇರುವ ಕೂಲಿಕಾರರು ಕೂಲಿಯನ್ನು ಹುಡುಕಿಕೊಂಡು ಎಲ್ಲಿಗೆ ಹೋಗುವರು ಎನ್ನುವುದನ್ನು ಇಲ್ಲಿ ತೋರಿಸುತ್ತದೆ.

ಕೋಷ್ಟಕ: 5.49

ಉದ್ಯೋಗ ಖಾತರಿ ಉದ್ಯೋಗ ನೀಡದಿದ್ದರೆ ಉದ್ಯೋಗಕ್ಕಾಗಿ ಎಲ್ಲಿಗೆ ಹೋಗುವರು

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
A	20	10.00	48	24.00	68	17.00
AB	0	0.00	22	11.00	22	5.50
ABC	0	0.00	3	1.50	3	0.75
AC	0	0.00	1	0.50	1	0.25
B	14	7.00	18	9.00	32	8.00
BC	9	4.50	41	20.50	50	12.50
C	45	22.50	19	9.50	64	16.00
ಉಖಾಕಾ ಕೆಲಸ ಮಾಡಿದವರು	112	56.00	48	24.00	160	40.00
ಒಟ್ಟು	200	100.00	200	100.00	400	100.00

ಸೂಚನೆ: ಕೋಷ್ಟಕದಲ್ಲಿ ತೋರಿಸಿರುವ ABCಈ ಕೆಳಕಂಡಂತೆ ಅರ್ಥಮಾಡಿಕೊಳ್ಳುವುದು

A) ಗ್ರಾಮದಲ್ಲೇ ***B***) ಬೇರೆ ಗ್ರಾಮಗಳಿಗೆ ಗುಳೆ (ವಲಸೆ) ಹೋಗುವುದು ***C***) ಬೇರೆ ನಗರಗಳಿಗೆ ಗುಳೆ (ವಲಸೆ) ಹೋಗುವುದು

ಇಚ್ಛೆವುಳ್ಳವರಿಗೆ ಸಂವಿಧಾನದ 'ಉದ್ಯೋಗದ ಹಕ್ಕು' ನೀಡಿದ್ದರೂ ಅವರಿಗೆ ಉದ್ಯೋಗ ಸಿಗದೆ ಬೇರೆ ಕಡೆ ವಲಸೆ ಹೋಗುವುದನ್ನು ಕಂಡರೆ ಅದರಲ್ಲಿ ನಗರಗಳಿಗೆ ವಲಸೆ ಹೋಗುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 22.50ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 9.50ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 61.00ರಷ್ಟು ಪ್ರಸ್ತುತ ಅಧ್ಯಯನ ಗುರುತಿಸಿದೆ. ತನ್ನ ಗ್ರಾಮದಲ್ಲಿ ಮತ್ತು ಬೇರೆ ಗ್ರಾಮಗಳಿಗೆ ಕೂಲಿಗಾಗಿ ವಲಸೆ ಹೋಗುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 10.00ರಷ್ಟು ಮತ್ತು ಶೇಕಡ 7ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 9.50ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 61.00ರಷ್ಟು ಪ್ರಸ್ತುತ ಅಧ್ಯಯನ ಗುರುತಿಸಿದೆ.

5.59. ಖಾಸಗಿ ಕೂಲಿಗೆ ಹೋಗುವ ಸ್ಥಳಕ್ಕೆ ಇರುವ ದೂರ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ತನ್ನ ನಿಯಮಾವಳಿ ಪ್ರಕಾರ ದುಡಿಯುವ ಇಚ್ಚೆವುಳ್ಳವರಿಗೆ ಸಂವಿಧಾನದಲ್ಲಿ "ಉದ್ಯೋಗದ ಹಕ್ಕು" ನೀಡಿದ್ದರೂ ಅವರಿಗೆ ಉದ್ಯೋಗ ಸಿಗದೆ ಬೇರೆ ಕಡೆ ವಲಸೆ ಹೋಗುವುದನ್ನು ಕಂಡರೆ ಅದರಲ್ಲಿ ಎಷ್ಟು ದೂರ ನಗರಗಳಿಗೆ ವಲಸೆ ಹೋಗುವುದು ಎನ್ನುವುದನ್ನು ತಿಳಿಸುತ್ತದೆ.

ಕೊಷ್ಟಕ: 5.50

ಖಾಸಗಿ ಕೂಲಿಗೆ ಹೋಗುವ ಸ್ಥಳಕ್ಕೆ ಇರುವ ದೂರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
A	12	6.00	84	42.00	96	24.00
AB	0	0.00	2	1.00	2	0.50
B	35	17.50	30	15.00	65	16.25
BC	0	0.00	1	0.50	1	0.25
BCD	0	0.00	1	0.50	1	0.25
C	0	0.00	12	6.00	12	3.00
CD	17	8.50	19	9.50	36	9.00
D	4	2.00	2	1.00	6	1.50
E	5	2.50	0	0.00	5	1.25
F	15	7.50	01	0.50	16	4.00
ಉ.ಖಾ.ಕಾ ಕೆಲಸ ಮಾಡಿದವರು	112	56.00	48	24.00	160	40.00
ಒಟ್ಟು	200	100.00	200	100.00	400	100.00

ಸೂಚನೆ: ಕೋಷ್ಠಕದಲ್ಲಿ ತೋರಿಸಿರುವ ABCDEF ಈ ಕೆಳಕಂಡಂತೆ ಅರ್ಥಮಾಡಿಕೊಳ್ಳುವುದು

A) 5 ಕಿ.ಮೀ *B*) 10 ಕಿ.ಮಿ *C*) 15 ಕಿ.ಮೀ *D*) 20 ಕಿ.ಮಿ *E*) 25 ಕಿ.ಮೀ *F*) 50 ಕಿ.ಮೀ

ತನ್ನ ಗ್ರಾಮದಿಂದ ಅಥವಾ ವಾಸಸ್ಥಳದಿಂದ ದೂರದ ಬೇರೆ ಗ್ರಾಮಗಳಿಗೆ ಮತ್ತು ನಗರಗಳಿಗೆ ಕೂಲಿಗಾಗಿ ಎಷ್ಟು ದೂರ ವಲಸೆ ಹೋಗುವುದನ್ನು ನೋಡಿದರೆ 5 ಕಿ.ಮೀಟರ್‌ಗಿಂತಲೂ ದೂರ ಹೋಗಿ ಬರುವವರು ಪ್ರಮಾಣ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 6.00ರಷ್ಟು ಕಂಡು

ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 42ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 24ರಷ್ಟು ಪ್ರಸ್ತುತ ಅಧ್ಯಯನ ಗುರುತಿಸಿದೆ. 10 ಕಿ.ಮೀಟರ್‌ಗಿಂತಲೂ ದೂರ ಹೋಗಿ ಬರುವವರು ಪ್ರಮಾಣ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 17.50ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 15ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 16.50ರಷ್ಟು ಪ್ರಸ್ತುತ ಅಧ್ಯಯನ ಗುರುತಿಸಿದೆ.

5.60. ಗುತ್ತಿಗೆದಾರರು ಕೊಟ್ಟ ಪಾಕೇಟ್ ಹಣ ಎಷ್ಟು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಎಷ್ಟೋ ಕಾಮಗಾರಿಗಳು ಯಂತ್ರಗಳ ಸಹಾಯದಿಂದ ಅನುಷ್ಠಾನ ಮಾಡಿರುತ್ತಾರೆ. ಈ ಕೆಲಸಕ್ಕೆ ಕೂಲಿಕಾರರು ಕೆಲಸ ಮಾಡದಿದ್ದರೂ ಗುತ್ತಿಗೆದಾರರು ಇವರ ಖಾತೆಗೆ ಕೂಲಿ ಹಣವನ್ನು ಹಾಕಿರುತ್ತಾರೆ. ಕೂಲಿಕಾರರ ಬ್ಯಾಂಕ್ ಖಾತೆಯಿಂದ ಬಿಡಿಸಿಕೊಟ್ಟದ್ದಕ್ಕೆ ಕೂಲಿಕಾರರಿಗೆ ಪಾಕೇಟ್ ಮನಿ ನೀಡಿರುವುದು ಈ ಕೋಷ್ಟಕದಲ್ಲಿ ತಿಳಿಯುತ್ತದೆ.

ಕೋಷ್ಟಕ : 5.51

ಗುತ್ತಿಗೆದಾರರು ಕೊಟ್ಟ ಪಾಕೇಟ್ ಹಣ ಎಷ್ಟು

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಎನ್.ಎಮ್.ಆರ್ ನಲ್ಲಿ ಕೂಲಿ ತೋರಿಸಿದ ಪೂರ್ಣಭಾಗ	10	5.00	0	0.00	10	2.50
ಅರ್ಧಭಾಗ	0	0.00	1	0.50	1	0.25
ಕಾಲು ಭಾಗ	0	0.00	1	0.50	1	0.25
ಪಾಕೇಟ್ ಮನಿ ಅಂತ 200ರಿಂದ 400 ರೂಗಳು	99	49.50	169	84.50	268	67.00
ಹಣವನ್ನು ಬಿಡಿಸಿಕೊಟ್ಟಿರುವುದಿಲ್ಲ	91	45.50	29	14.50	120	30.00
ಒಟ್ಟು	**200**	**100.00**	**200**	**100.00**	**400**	**100.00**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಕೆಲಸ ಮಾಡದಿದ್ದರೂ ಕೂಲಿಕಾರರ ಖಾತೆಗೆ ಕೂಲಿ ಹಣವನ್ನು ಅವರ ಬ್ಯಾಂಕ್ ಖಾತೆಗೆ ನೀಡಿ ಬ್ಯಾಂಕಿನಿಂದ ಗುತ್ತಿಗೆದಾರರಿಗೆ ಬಿಡಿಸಿ

ಕೊಟ್ಟಿದ್ದಕ್ಕೆ ಪಾಕೇಟ್ ಮನಿ ಅಂತ 200ರಿಂದ 400 ರೂಪಾಯಿ ಕೊಟ್ಟಿರುವುದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 49.50ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 84.50ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 67.00ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಬರುತ್ತದೆ.

5.60. ಯೋಜನೆಯ ದುರ್ಬಳಕೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಯೋಜನೆ ನಡೆಸುವ ಚೌಕಟ್ಟನ್ನು ಕಟ್ಟಿಕೊಟ್ಟಿದ್ದಾರೆ. ತಳಮಟ್ಟದಿಂದ ವಾರ್ಡ್‌ಸಭೆ ಮೂಲಕ ಕಾಮಗಾರಿಗಳ ಗುರುತಿಸುವಿಕೆ, ಗ್ರಾಮ ಸಭೆಯಲ್ಲಿ ನಿರ್ಣಯ, ಗ್ರಾಮಪಂಚಾಯತಿಗಳು ನಿಯಮಾನುಸಾರ ಅನುಷ್ಠಾನ ಮಾಡುವುದನ್ನು ತಿಳಿಸುತ್ತದೆ. ಕೂಲಿಕಾರರಿಂದಲೇ ಮಾಡಿದ ಕೆಲಸಕ್ಕೆ ಕೂಲಿ ಕಾರ್ಮಿಕರಿಗೆ ಕೂಲಿ ನೀಡುವುದು ನಿಯಮವಾಗಿರುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಕೆಲಸ ಮಾಡದಿದ್ದರೂ ಕೂಲಿಕಾರರ ಬ್ಯಾಂಕ್ ಖಾತೆಗೆ ಕೂಲಿ ಹಣವನ್ನು ಸಂದಾಯ ಮಾಡಿರುವುದು. ಈ ಹಣವನ್ನು ಕೂಲಿಕಾರರು ಯಾರಿಗೆ ಬಿಡಿಸಿ ಕೊಟ್ಟಿದ್ದಾರೆ ಎನ್ನುವುದನ್ನು ಪ್ರಸ್ತುತ ಅಧ್ಯಯನ ತಿಳಿಸುತ್ತದೆ.

ಕೋಷ್ಟಕ : 5.52

ಯೋಜನೆಯ ದುರ್ಬಳಕೆ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಗುತ್ತಿಗೆದಾರರಿಗೆ	109	54.50	171	85.50	280	70.00
ಗ್ರಾಮಪಂಚಾಯತಿ ನೌಕರರಿಗೆ	0	0.00	0	0.00	0	0.00
ಗ್ರಾಪಂ ಚುನಾಯಿತ ಪ್ರತಿನಿಧಿಗಳಿಗೆ	0	0.00	0	0.00	0	0.00
ಹಣವನ್ನು ಬಿಡಿಸಿಕೊಟ್ಟಿರುವುದಿಲ್ಲ	91	45.50	29	14.50	120	30.00
ಒಟ್ಟು	**200**	**100.00**	**200**	**100.00**	**400**	**100.00**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಕೆಲಸ ಮಾಡದಿದ್ದರೂ ಕೂಲಿಕಾರರ ಖಾತೆಗೆ ಕೂಲಿ ಹಣವನ್ನು ಅವರ ಬ್ಯಾಂಕ್ ಖಾತೆಯಿಂದ ಹಣ ತೆಗೆದು ಗುತ್ತಿಗೆದಾರರಿಗೆ ಬಿಡಿಸಿ ಕೊಟ್ಟಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 54.50ರಷ್ಟು ಕಂಡುಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 85.50ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 70.00ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಬರುತ್ತದೆ.

5.61. ಕಾಮಗಾರಿಗಳ ಗುಣಮಟ್ಟ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ದೀರ್ಘಕಾಲಿನ ಆಸ್ತಿಗಳು ದೀರ್ಘಕಾಲದವರೆಗೂ ಬಾಳಿಕೆ ಬರಬೇಕು ಮತ್ತು ಅವುಗಳು ಗುಣಮಟ್ಟದಲ್ಲಿ ನಿರ್ಮಾಣವಾಗಬೇಕು ಎನ್ನುವುದು ಸಿದ್ಧಾಂತದ ಆಶಯ. ಇದರಿಂದ ಕೃಷಿ, ಜಲ, ಅರಣ್ಯ ಜಲನಯನ ಮುಂತಾದ ಕಾಮಗಾರಿಗಳು. ಆ ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿ ಮಾಡಬೇಕು ಎನ್ನುವುದು ಯೋಜನೆಯ ಧ್ಯೇಯವಾಗಿರುತ್ತದೆ. ಮಾನವ ಕೂಲಿ ದಿನಗಳ ಮೂಲಕವೇ ಗ್ರಾಮೀಣ ಪ್ರದೇಶದಲ್ಲಿ ದೀರ್ಘಕಾಲಿನ ಆಸ್ತಿಗಳು ನಿರ್ಮಾಣವಾಗಬೇಕು ಎನ್ನುವುದು ನಿಯಮವಾಗಿರುತ್ತದೆ. ಆದರೆ ಇಲ್ಲಿ ದೀರ್ಘಕಾಲಿನ ಆಸ್ತಿಗಳು ನಿರ್ಮಾಣವಾಗಿವೆಯೇ ಅಥವಾ ಇಲ್ಲವೇ ಎನ್ನುವುದನ್ನು ಪ್ರಸ್ತುತ ಅಧ್ಯಯನ ತಿಳಿಸುತ್ತದೆ.


ಕೋಷ್ಟಕ: 5.53

ಕಾಮಗಾರಿಗಳ ಗುಣಮಟ್ಟ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	150	75.00	141	70.50	291	72.75
ಇಲ್ಲ	50	25.00	59	29.50	109	27.25
ಒಟ್ಟು	200	100.00	200	100.00	400	100.00

ಸ್ತಂಭ ರೇಖಾ ಚಿತ್ರ : 32

ಕಾಮಗಾರಿಗಳ ಗುಣಮಟ್ಟ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ದೀರ್ಘಕಾಲಿನ ಆಸ್ತಿಗಳು ನಿರ್ಮಾಣವಾಗಬೇಕು, ನಿರ್ಮಾಣವಾದ ಕಾಮಗಾರಿಗಳು ಗುಣಮಟ್ಟವಾಗಿರಬೇಕು ಎನ್ನುವುದು ಕಾಯಿದೆಯ ನಿಯಮಾವಳಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಾಮಗಾರಿಗಳು ಗುಣಮಟ್ಟತೆಯನ್ನು ಕಾಪಾಡಿಕೊಂಡಿವೆ ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 75.00ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 70.50ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 72.75ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಬರುತ್ತದೆ.

5.62. ಉದ್ಯೋಗ ಖಾತರಿಯಿಂದ ನಿರೀಕ್ಷಿತ ಫಲಿತಾಂಶದ ವಿವರ

ಬಡತನ ಮತ್ತು ಅಭಿವೃದ್ಧಿಯ ಹಿನ್ನೆಲೆಯಲ್ಲಿ ಯಾವುದೇ ಯೋಜನೆಗಳು ರೂಪಿಸಿ ಅನುಷ್ಠಾನ ಮಾಡಿದರೂ ಆ ಯೋಜನೆಗಳು ನಿರೀಕ್ಷಿತ ಫಲಿತಾಂಶ ಇಟ್ಟುಕೊಂಡಿರುತ್ತವೆ. ಹಾಗೆಯೇ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಮಾಡುವುದಕ್ಕೆ ತನ್ನದೇ ಆದಂತಹ ನಿರೀಕ್ಷಿತ ಫಲಿತಾಂಶ ಇಟ್ಟುಕೊಂಡಿರುವುದು ಈ ಅಧ್ಯಯನ ತಿಳಿಸುತ್ತದೆ.

ಕೋಷ್ಟಕ : 5.54

ಉದ್ಯೋಗ ಖಾತರಿಯಿಂದ ನಿರೀಕ್ಷಿತ ಫಲಿತಾಂಶದ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಅಂತರ್ಜಲ ಹೆಚ್ಚಿರುವುದು	41	20.50	7	3.50	48	12.00
ಬೆಳೆಗಳ ಇಳುವರಿ ಪ್ರಮಾಣ ಹೆಚ್ಚಿರುವುದು.	0	0.00	4	2.00	4	1.00
ದನಕರುಗಳಿಗೆ ನೀರು ಮೇವು ಹೆಚ್ಚಿರುವುದು	75	37.50	74	37.00	149	37.25
ನಿರೀಕ್ಷಿತ ಫಲಿತಾಂಶ ದೊರೆತಿರುವುದಿಲ್ಲ	84	42.00	115	57.50	199	49.75
ಒಟ್ಟು	**200**	**100.00**	**200**	**100.00**	**400**	**100.00**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಈಗಾಗಲೇ ಮಾಡಿರುತ್ತದೆ. ಇದರಿಂದ ನಿರೀಕ್ಷಿತ ಫಲಿತಾಂಶ ನೀಡಿಲ್ಲ. ಅವುಗಳಲ್ಲಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 42.00ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 57.50ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ

ಶೇಕಡ 49.75ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡು ಬರುತ್ತದೆ. ಆದರೂ ಉಳಿದಿರುವುದರಲ್ಲಿ ಫಲಿತಾಂಶ ದೊರೆತಿರುವುದು. ದನಕರುಗಳಿಗೆ ನೀರು, ಮೇವು ಹೆಚ್ಚಿರುವುದು. ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 37.50ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 37.00ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 37.25ರಷ್ಟನ್ನು ಪ್ರಸ್ತುತ ಅಧ್ಯಯನದಿಂದ ತಿಳಿಯುತ್ತದೆ.

5.63. ಕಳಪೆ ಗುಣಮಟ್ಟದ ಕಾಮಗಾರಿಗಳು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ನಿರೀಕ್ಷಿತ ಫಲಿತಾಂಶದ ಸಲುವಾಗಿ ಗುಣಮಟ್ಟದ ಕಾಮಗಾರಿಗಳನ್ನು ನಿರೀಕ್ಷಿಸುವುದು ಕಾಯಿದೆಯ ಆಶಯವಾಗಿರುತ್ತದೆ. ಕಾಯಿದೆಯಡಿ ಕೆಲವು ಕಾಮಗಾರಿಗಳು ಉತ್ತಮ ಗುಣಮಟ್ಟತೆಯನ್ನು ಕಾಯ್ದುಕೊಂಡರೆ ಇನ್ನೂ ಅನೇಕ ಕಾಮಗಾರಿಗಳು ತನ್ನ ಗುಣಮಟ್ಟತೆಯನ್ನು ಕಳೆದುಕೊಂಡಿರುವುದು ಪ್ರಸ್ತುತ ಅಧ್ಯಯನದಲ್ಲಿ ಕಂಡು ಬರುತ್ತದೆ.

ಕೋಷ್ಟಕ : 5.55

ಕಳಪೆ ಗುಣಮಟ್ಟದ ಕಾಮಗಾರಿಗಳು

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ರಸ್ತೆಗಳಿಗೆ ಮಣ್ಣು ಹಾಕಿಸಿರುವುದು	33	16.50	27	13.50	60	15.00
ಅಣೆಕಟ್ಟು ಒಡೆದು ಹೋಗಿರುವುದು.	14	7.00	33	16.50	47	11.75
ತಡೆ ಗೋಡೆ ಬಿದ್ದಿರುವುದು	0	0.00	2	1.00	2	0.50
ಕಳಪೆ ಮಟ್ಟದ ಶೌಚಾಲಯ	0	0.00	1	0.50	1	0.25
ತೋಟಗಾರಿಕೆ ಬೆಳೆಗಳು ಮಾಡದೆ ಹಣ ಬಿಡಿಸಿರುವುದು	0	0.00	2	1.00	2	0.50
ರಸ್ತೆ, ಚರಂಡಿ ಕಳಪೆ ಕಾಮಗಾರಿ	1	0.50	1	0.50	2	0.50
ಶಾಲಾ ಕಾಂಪೌಂಡ್ ಕಳಪೆ	0	0.00	0	0.00	0	0.00
ದೀರ್ಘಕಾಲಿನ ಗುಣಮಟ್ಟದ ಕಾಮಗಾರಿಗಳು	150	75.00	141	70.50	291	72.75
ಒಟ್ಟು	200	100.00	200	100.00	400	100.00

ಕಾಯಿದೆಯಡಿ ಕಳಪೆ ಗುಣಮಟ್ಟದಲ್ಲಿ ನಿರ್ಮಾಣವಾದ ಕಾಮಗಾರಿಯಲ್ಲಿ ರಸ್ತೆಗೆ ಮಣ್ಣು ಹಾಕಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 16.50ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 13.50ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 15.00ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡು ಬರುತ್ತದೆ. ಕಾಯಿದೆಯಡಿ ಕಳಪೆ ಗುಣಮಟ್ಟದಲ್ಲಿ ನಿರ್ಮಾಣವಾದ ಕಾಮಗಾರಿಯಲ್ಲಿ ಅಣೆಕಟ್ಟು ಒಡೆದಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 7.00ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 16.50ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 11.75ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡು ಬರುತ್ತದೆ.

5.64. ಅನುಷ್ಠಾನಗೊಂಡ ಕಾಮಗಾರಿಗಳು ಮತ್ತು ಮಾನವ ದಿನಗಳ ಪ್ರಕಟಣೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಪಾರದರ್ಶಕತೆಯ ದೃಷ್ಟಿಯಿಂದ ಮಾಹಿತಿಯನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಮುಖ್ಯ ಉದ್ದೇಶವಾಗಿರುತ್ತದೆ. ಇಲ್ಲಿ ನಿರ್ಮಾಣಗೊಂಡ ಕಾಮಗಾರಿಯ ಹೆಸರು ಇದಕ್ಕೆ ತಗುಲಿರುವ ಮಾನವ ದಿನಗಳ ಸಂಖ್ಯೆ ಒಟ್ಟಾರೆ ಅಂದಾಜು ವೆಚ್ಚ ಮತ್ತು ಇಸವಿಯನ್ನು ಗ್ರಾಮಪಂಚಾಯತಿಯ ಗೋಡೆ ಮೇಲೆ ಹಾಕಬೇಕಾಗಿರುವುದನ್ನು ಈ ಅಧ್ಯಯನದಿಂದ ಕಂಡು ಬರುತ್ತದೆ.

ಕೋಷ್ಟಕ : 5.56.

ಅನುಷ್ಠಾನಗೊಂಡ ಕಾಮಗಾರಿಗಳು ಮತ್ತು ಮಾನವ ದಿನಗಳ ಪ್ರಕಟಣೆ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	0	0.00	0	0.00	0.00	0.00
ಇಲ್ಲ	200	100.00	200	100.00	400	100.00
ಒಟ್ಟು	200	100.00	200	100.00	400	100.00

ಉದ್ಯೋಗ ಖಾತರಿ ಅಡಿಯಲ್ಲಿ ನಿಯಮಾನುಸಾರ ಮಾಡಿದ ಕಾಮಗಾರಿಗಳು, ಕೂಲಿಕಾರನ ಹೆಸರು ಮತ್ತು ಮಾನವ ದಿನಗಳನ್ನು ಗ್ರಾ.ಪಂ ಗೋಡೆ ಮೇಲೆ ಪ್ರಕಟಿಸದೇ ಇರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100.00ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 100.00ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 100.00 ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಬರುತ್ತದೆ.

5.65. ಕೂಲಿಕಾರರ ಸಮಸ್ಯೆಗಳು

ಕಾಯಿದೆಯಡಿ ಅನುಷ್ಠಾನದ ಪ್ರಕ್ರಿಯೆಯಲ್ಲಿ ಬಂದಂತಹ ಸಮಸ್ಯೆ ಮತ್ತು ಸವಾಲುಗಳನ್ನು ಬಗೆಹರಿಸಬೇಕಾಗಿರುವುದು ಗ್ರಾಮಪಂಚಾಯತಿಯ ಆದ್ಯ ಕರ್ತವ್ಯವಾಗಿರುತ್ತದೆ. ನೋಂದಣಿ, ಚೀಟಿ ವಿತರಣೆ, ಕೆಲಸದ ನೀಡಿಕೆ, ಕೂಲಿಪಾವತಿ, ಕಾಮಗಾರಿಗಳ ಸ್ಥಳದಲ್ಲಿ ಸೌಲಭ್ಯಗಳ ಕೊರತೆ, ಗ್ರಾ.ಪಂ ಅಧಿಕಾರಿ ಮತ್ತು ಕಾರ್ಯದರ್ಶಿಗಳಂತಹ ಸಮಸ್ಯೆಗಳನ್ನು ಬಗೆ ಹರಿಸುವುದರ ಮತ್ತು ಯಾವ ಕಾರಣಕ್ಕೆ ಬಗ್ಗೆ ಅಧ್ಯಯನ ಕ್ಷೇತ್ರಗಳಲ್ಲಿ ಬಗೆಹರಿಸದಿರುವುದನ್ನು ಕೋಷ್ಟಕದಲ್ಲಿ ತಿಳಿಸುತ್ತದೆ.

ಕೋಷ್ಟಕ : 5.57

ಕೂಲಿಕಾರರ ಸಮಸ್ಯೆಗಳು

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಸಮಸ್ಯೆಗಳನ್ನು ಬಗೆ ಹರಿಸಿದ್ದಾರೆ	0	0	0	0	0	0
ಸಮಸ್ಯೆಗಳನ್ನು ಬಗೆಹರಿಸಿಲ್ಲ ದಿದ್ದರೆಗ್ರಾಮ ಪಂಚಾಯತಿ ಅಧಿಕಾರಿಗಳು ಸ್ಪಂದಿಸುತ್ತಿಲ್ಲ	0	0.00	1	0.50	1	0.25
ಯಾವಾಗಲು ಸಿಗುತ್ತಿಲ್ಲ	0	0.00	26	13.00	26	6.50
ಸಿಕ್ಕರೂ ಏನು ಪ್ರಯೋಜನ ವಾಗಲಿಲ್ಲ	200	100.00	173	86.50	373	93.25
ಒಟ್ಟು	**200**	**100.00**	**200**	**100.00**	**400**	**100.00**

ಕಾಯಿದೆಯಡಿ ಕೂಲಿಕಾರರಿಗೆ ಏನೂ ಪ್ರಯೋಜನವಾಗಿಲ್ಲದಿರುವುದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 100.00ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 86.50ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 93.25ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡು ಬರುತ್ತದೆ.

5.66. ಮಾಹಿತಿ ಹಕ್ಕು ಮತ್ತು ಉದ್ಯೋಗ ಖಾತರಿ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಮಾಹಿತಿ ತಿಳಿದುಕೊಳ್ಳಲು ಮತ್ತು ಈ ಮೂಲಕ ಲೋಪದೋಷಗಳನ್ನು ಗುರುತಿಸಲು ದಾಖಲಾತಿಗಳನ್ನು ಪಡೆದಾಗ ಮಾತ್ರ ಉಪಯೋಗವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಾಹಿತಿ ಹಕ್ಕು ಅಧಿನಿಯಮ ಮಾಹಿತಿ ಪಡೆಯಲು

ಅವಕಾಶ ಕಲ್ಪಿಸಿಕೊಟ್ಟಿರುತ್ತದೆ. ಈ ಅವಕಾಶಗಳನ್ನು ಕೊಟ್ಟಿರುವುದು ಕೂಲಿಕಾರರಿಗೆ ಕೊಟ್ಟಿರುವ ಅವಕಾಶಗಳನ್ನು ಈ ಕೋಷ್ಟಕದಲ್ಲಿ ವ್ಯಕ್ತವಾಗುತ್ತದೆ.

ಕೋಷ್ಟಕ: 5.58

ಮಾಹಿತಿ ಹಕ್ಕು ಮತ್ತು ಉದ್ಯೋಗ ಖಾತರಿ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	0	0.00	0	0.00	0	0.00
ಇಲ್ಲ	200	100.00	200	100.00	400	100.00
ಒಟ್ಟು	200	100.00	200	100.00	400	100.00

ಮಾಹಿತಿ ಹಕ್ಕು ಅಧಿನಿಯಮದಡಿ ಅವಕಾಶವಿದ್ದರೂ ಮಾಹಿತಿ ನೀಡದೇ ಇರುವುದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 100.00ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 100.00ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 100.00ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡು ಬರುತ್ತದೆ.

5.67. ಉದ್ಯೋಗ ಖಾತರಿ ಅನುಷ್ಠಾನಕ್ಕೆ ಕೂಲಿಕಾರರ ಪರಿಗಣನೆ

ಬಡತನ ನಿರ್ಮೂಲನೆಯ ಪ್ರಕ್ರಿಯೆಯಲ್ಲಿ ದೇಶಾದ್ಯಂತ ಬಹು ಬಗೆಯ ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡಲಾಗಿರುತ್ತದೆ. ಆದರೆ ಎಲ್ಲಾ ಯೋಜನೆಗಳು ಪರಿಪೂರ್ಣತೆಯನ್ನು ಹೊಂದುವಲ್ಲಿ ವಿಫಲಗೊಂಡಿರುವುದು ವಾಸ್ತವಿಕತೆಯಾಗಿರುತ್ತದೆ. ಈ ವೈಫಲ್ಯತೆಯನ್ನು ಯಶಸ್ಸಿನ ದಾರಿಗೆ ತರಲು ತಳಮಟ್ಟದ ಸೂಚಕ ಗುಂಪುಗಳಿಂದ ಸಲಹೆ ಸೂಚನೆಗಳನ್ನು ಪಡೆದುಕೊಂಡಂತಹ ನಿದರ್ಶನಗಳನ್ನು ಕಾಣಬಹುದು. ಹಾಗೆಯೇ ಉದ್ಯೋಗ ಖಾತರಿ ಕಾಯಿದೆ ಯಶಸ್ವಿಗಿಂತ ಬಹುಪಾಲು ವೈಫಲ್ಯಗಳನ್ನು ಕಂಡಿರುವುದು ತಿಳಿಯುತ್ತದೆ. ಈ ವೈಫಲ್ಯಗಳನ್ನು ಅಭಿವೃದ್ಧಿ ಪಡಿಸಲು ತಳಮಟ್ಟದ ಸೂಚಕ ಗುಂಪುಗಳು ಸಲಹೆ ಮತ್ತು ಸೂಚನೆಗಳನ್ನು ಈ ಅಧ್ಯಯನ ಗುರುತಿಸಿದೆ.

ಕೋಷ್ಟಕ : 5.59

ಉದ್ಯೋಗ ಖಾತರಿ ಅನುಷ್ಠಾನಕ್ಕೆ ಕೂಲಿಕಾರರ ಪರಿಗಣನೆ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ABEFM	28	14.00	31	15.50	59	14.75
ABEHI	25	12.50	20	10.00	45	11.25


AGHIJKM	45	22.50	30	15.00	75	18.75
ABDGHN	39	19.50	35	17.50	74	18.50
ABCEKJLN	29	14.50	46	23.00	75	18.75
ABCDEFL	34	17.00	38	19.00	72	18.00
ಒಟ್ಟು	200	100.00	200	100.00	400	100.00

ಸೂಚನೆ: ಕೋಷ್ಟಕದಲ್ಲಿ ತೋರಿಸಿರುವ ABCDEFGHIJKLMN ಈ ಕೆಳಕಂಡಂತೆ ಅರ್ಥಮಾಡಿಕೊಳ್ಳುವುದು

A) ವ್ಯಾಪಕವಾದ ತಿಳುವಳಿಕೆ *B*) ಜನಭಾಗವಹಿಸುವಂತೆ *C*) ಸಮಾನವಾಗಿ ಉದ್ಯೋಗದ ಚೀಟಿಯನ್ನು ನೀಡಿರುವುದು *D*) ನಿಗದಿತ ಸಮಯಕ್ಕೆ ಜಾಬ್ ಕಾರ್ಡ್ ಒದಗಿರುವುದು *E*) ಕೆಲಸ ನೀಡಬೇಕು *F*) ಜನರಿಗೆ ಬೇಕಿರುವುವ ಕಾಮಗಾರಿಗಳನ್ನು ಒದಗಿಸುವುದು *G*) ದೀರ್ಘಕಾಲಿನ ಆಸ್ತಿಗಳ ನಿರ್ಮಾಣ *H*) ಗುತ್ತಿಗೆದಾರರ ನಿಷೇದ *I*) ಯಂತ್ರಗಳ ನಿಷೇಧ, *J*) ಕಾಯಿದೆ ಗುರುತಿಸಿದ ಕಾಮಗಾರಿಗಳ ಆಯ್ಕೆ, *K*) ವಾರಕ್ಕೊಮ್ಮೆ ಕೂಲಿ ವೇತನ ನೀಡುವುದು, *L*) ಪ್ರತಿಯೊಂದು ಹಂತದಲ್ಲೂ ಪಾರದರ್ಶಕತೆ ಇರುವಂತೆ ನೋಡಿಕೊಳ್ಳುವುದು, *M*) ಗ್ರಾಮಕ್ಕೊಂದು ಮೌಲ್ಯಮಾಪನ ಸಮಿತಿ ಅದರಲ್ಲಿ ಶೇಕಡ 50ರಷ್ಟು ಮಹಿಳೆಯರಿಗೆ ಆಧ್ಯತೆ, *N*) ಸಮಾಜಿಕ ಲೆಕ್ಕ ಪತ್ರದಲ್ಲಿ ಕೂಲಿಕಾರರನ್ನು ತೊಡಗಿಸಿಕೊಳ್ಳುವುದು.

ಚಿತ್ರ : 33

ಉದ್ಯೋಗ ಖಾತರಿ ಅನುಷ್ಠಾನಕ್ಕೆ ಕೂಲಿಕಾರರ ಪರಿಗಣನೆ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಅನುಷ್ಠಾನದ ಲೋಪದೋಷಗಳಾದ *A*) ವ್ಯಾಪಕವಾದ ತಿಳುವಳಿ *G*) ದೀರ್ಘಕಾಲಿನ ಆಸ್ತಿಗಳ ನಿರ್ಮಾಣ *H*) ಗುತ್ತಿಗೆದಾರರ ನಿಷೇಧ *I*) ಯಂತ್ರಗಳ ನಿಷೇಧ ,*J*) ಕಾಯಿದೆ ಗುರುತಿಸಿದ ಕಾಮಗಾರಿಗಳ ಆಯ್ಕೆ, *K*) ವಾರಕ್ಕೊಮ್ಮೆ ಕೂಲಿ ವೇತನ ನೀಡುವುದು, *L*) ಪ್ರತಿಯೊಂದು ಹಂತದಲ್ಲೂ ಪಾರದರ್ಶಕತೆ ಇರುವಂತೆ ನೋಡಿಕೊಳ್ಳುವುದು, *M*) ಗ್ರಾಮಕ್ಕೊಂದು ಮೌಲ್ಯಮಾಪನ ಸಮಿತಿ ಅದರಲ್ಲಿ ಶೇ 50ರಷ್ಟು ಮಹಿಳೆಯರಿಗೆ ಆದ್ಯತೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 22.50ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 15.00 ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮ ಪಂಚಾಯತಿಯಿಂದ ಶೇಕಡ 18.75 ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡು

ಬರುತ್ತದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಅನುಷ್ಠಾನದ ಲೋಪದೋಷಗಳಾದ ***A***) ವ್ಯಾಪಕವಾದ ತಿಳುವಳಿಕೆ***B***) ಜನ ಭಾಗವಹಿಸುವಂತೆ ***C***) ಸಮಾನವಾಗಿ ಉದ್ಯೋಗದ ಚೀಟಿಯನ್ನು ನೀಡಿರುವುದು, ***E***) ಕೆಲಸ ನೀಡಬೇಕು, ***K***) ವಾರಕ್ಕೊಮ್ಮೆ ಕೂಲಿ ವೇತನ ನೀಡುವುದು, ***J***) ಕಾಯಿದೆ ಗುರುತಿಸಿದ ಕಾಮಗಾರಿಗಳ ಆಯ್ಕೆ ಐ) ಪ್ರತಿಯೊಂದು ಹಂತದಲ್ಲೂ ಪಾರದರ್ಶಕತೆ ಇರುವಂತೆ ನೋಡಿಕೊಳ್ಳುವುದು,, ***N***) ಸಾಮಾಜಿಕ ಲೆಕ್ಕ ಪತ್ರದಲ್ಲಿ ಕೂಲಿಕಾರರನ್ನು ತೊಡಗಿಸಿಕೊಳ್ಳುವುದು. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ **14.50**ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 23.00 ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 18.75ರಷ್ಟು ಪ್ರಸ್ತುತ ಅಧ್ಯಯನದಲ್ಲಿ ಕಂಡು ಬರುತ್ತದೆ.

ಒಟ್ಟಾರೆ ಸಾಮಾಜಿಕ ನ್ಯಾಯದ ನೆಲೆಯಲ್ಲಿ ಉದ್ಯೋಗ ಖಾತರಿ ಕಾಯಿದೆಯನ್ನು ಪ್ರಜಾಸತ್ತಾತ್ಮಕ ನೆಲೆಯಲ್ಲಿ ಅನುಷ್ಠಾನಕ್ಕೆ ತರಬೇಕೆನ್ನುವುದು ದೊಡ್ಡ ಆಯಾಮವಾಗಿದ್ದು, ಎಂ.ಎನ್.ಆರ್.ಇ.ಜಿ.ಎ ಸಿದ್ಧಾಂತದಲ್ಲಿದೆ. ಆದರೆ ಪ್ರಸ್ತುತ ಅನುಷ್ಠಾನದ ಕ್ರಮಗಳು ಸಿದ್ಧಾಂತದ ಕ್ರಮಗಳು ವ್ಯತಿರಿಕ್ತವಾಗಿರುವುದನ್ನು ಅಂಕಿ ಅಂಶಗಳು ಈಗಾಗಲೇ ಸೂಚಿಸುತ್ತವೆ. ಆದಾಗ್ಯೂ ಸಾಮಾಜಿಕವಾಗಿ ಅವಕಾಶ ವಂಚಿತ ಪರಿಶಿಷ್ಟ ಜಾತಿ ಮತ್ತು ಪಂಗಡದ ಜಾತಿ ವರ್ಗದವರು ಈ ಕಾಯಿದೆ ಉದ್ಯೋಗದ ಹಕ್ಕು ಆಗಿದ್ದರೂ, ಈ ಕಾಯಿದೆ ಅವರಿಗೆ ಕೂಲಿ ಬೆಲೆಯಲ್ಲಿ ಚೌಕಾಶಿ ಮಾಡುವ ಶಕ್ತಿ ಮಾತ್ರ ನೀಡಿದೆಯೇ ಹೊರತು ಅವರ ಸಾಮಾಜಿಕ ಸ್ಥಿತಿಯ ಏರುಮುಖ ಚಲನೆಗೆ ಒಂದಿಷ್ಟು ನೀರು ಹುಣಿಸಿದೆ. ಇದಷ್ಟೆ ಸಾಲದೆ ಅನುಷ್ಠಾನ ಕ್ರಮವನ್ನು ಇನ್ನಷ್ಟು ಪಾರದರ್ಶಕವಾದ ಬಡಜನರು ತಲುಪಬೇಕಾದ ದಿಕ್ಕಿನ ಕಡೆಗೆ ಚಲಿಸಬೇಕಾದರೆ ಈ ಕುರಿತು ಇನ್ನಷ್ಟು ಅಧ್ಯಯನಗಳು, ಚರ್ಚೆಗಳು ನಡೆಯಲಿ ಎನ್ನುವ ಆಶಯ, ಇದರೊಟ್ಟಿಗೆ ಕೂಡಿ ಹಂಚಿಕೆ ಕೆಲಸ, ಬೇಡಿಕೆ ನೀಡಿಕೆಗಳನ್ನು ಅತ್ಯಂತ ಸೂಕ್ಷ್ಮ ಜಾತಿ ರಾಜಕಾರಣಗಳಿಂದ ಬಿಡಿಸುವುದು ನಮ್ಮೆಲ್ಲರ ಅಗತ್ಯವಾಗಿರುತ್ತದೆ. ನಮ್ಮ ಅಧ್ಯಯನ ಸಂಪೂರ್ಣವಾಗಿ ಸಫಲವಾಗಿಲ್ಲ ಅನಿಸುತ್ತಿದೆ ಇದಕ್ಕೆ ಕಾರಣ ನಮ್ಮ ಕೆಲಸದ ಒತ್ತಡವೂ ಕಾರಣ ಇರಬಹುದು ಎಂಬುದನ್ನು ಮುಗಿಸುವ ಮುನ್ನ ಇದನ್ನು ಪ್ರಾಮಾಣಿಕವಾಗಿ ದಾಖಲಿಸಲು ಇಚ್ಛಿಸುತ್ತೇನೆ.

ಅಧ್ಯಾಯ ಆರು

ಉದ್ಯೋಗ ಖಾತರಿ ಕಾಯಿದೆ ಮತ್ತು ವಿಕೇಂದ್ರೀಕರಣ

ಅಧ್ಯಾಯ ಆರು

ಉದ್ಯೋಗ ಖಾತರಿ ಕಾಯಿದೆ ಮತ್ತು ವಿಕೇಂದ್ರೀಕರಣ

6.1. ಸ್ವಾತಂತ್ರ್ಯ ನಂತರದ ಸ್ಥಳೀಯ ಸರ್ಕಾರದ ಹೆಜ್ಜೆಗಳು

ಗ್ರಾಮೀಣ ಅಭಿವೃದ್ಧಿ ಮತ್ತು ಸ್ಥಳೀಯ ಸರ್ಕಾರಗಳಿಗೂ ನೇರವಾದ ಸಂಬಂಧವಿರುವುದು. ಇದು ಇಂದು ನಿನ್ನೆಯದಲ್ಲ, ಋಗ್ವೇದದ ಕಾಲದಿಂದಲೂ ಅಭಿವೃದ್ಧಿಯ ನೆಲೆಯಲ್ಲಿ ಸಂಬಂಧವಿರುವುದು ಕಂಡು ಬಂದಿದೆ. ಕಾಲಘಟ್ಟಗಳು ಬದಲಾದರೂ ಗ್ರಾಮಗಳ ಕಲ್ಯಾಣ ಸ್ಥಳೀಯ ಆಡಳಿತದ ಸರ್ಕಾರಗಳಿಂದಲೇ ಸಾಧ್ಯ ಎನ್ನುವುದನ್ನು ಮನಗಂಡು ಭಾರತದಲ್ಲಿ ಬ್ರಿಟೀಷ್ ಆಡಳಿತದ ಜವಾಬ್ದಾರಿವಹಿಸಿದ್ದ ಲಾರ್ಡ್ ಮೇಯೋರವರು 1890ರಲ್ಲಿ ಸ್ಥಳೀಯ ಸರ್ಕಾರಗಳನ್ನು ಗ್ರಾಮೀಣ ಮಟ್ಟಕ್ಕೆ ವಿಸ್ತರಿಸಿದರು. ಈ ಸಂದರ್ಭದಲ್ಲಿ ದೇಶದಲ್ಲಿ ಬರ ಮತ್ತು ಬಡತನದ ಪರಿಸ್ಥಿತಿ ಎದುರಾಯಿತು. ಈ ಸಮಸ್ಯೆಯನ್ನು ಬಿಡಿಸಲು 1907ರಲ್ಲಿ ರಾಯಲ್ ಕಮಿಷನ್‌ಗೆ ವಹಿಸಲಾಯಿತು. ಇದು ಪಂಚಾಯತಿಯಂತಹ ಸ್ಥಳೀಯ ಸರ್ಕಾರಗಳ ಅಗತ್ಯತೆಯ ಬಗ್ಗೆ ವರದಿ ಮಾಡಿತು. ಈ ಎಲ್ಲದರ ಅನುಭವದ ಆಧಾರಗಳ ಹಿನ್ನೆಯಲ್ಲಿ ಪಂಚಾಯತ್ ಸಂಸ್ಥೆಗಳನ್ನು ಹಿಂದೆಯೆ ತಳಮಟ್ಟದ ಗ್ರಾಮೀಣ ಪ್ರದೇಶದವರೆಗೂ ವಿಸ್ತರಿಸಿತು.

ಬ್ರಿಟೀಷ್ ಆಡಳಿತ ಗ್ರಾಮೀಣ ಅಭಿವೃದ್ಧಿಗಾಗಿ ರಚನಾತ್ಮಕ ಸಮಸ್ಯೆಗಳನ್ನು ಬಿಡಿಸಲಾಗದೇ ಬಡತನಕ್ಕೆ ಪೂರಕವಾಗಿ ಅಭಿವೃದ್ಧಿಯನ್ನು ಬೆಸೆಯುವಲ್ಲಿ ಸಮರ್ಥವಾಗಿ ಅನುಷ್ಠಾನ ಮಾಡದೇ ಹಿಂದೆ ಸರಿದಿತು. ಮುಂದೆ ಮಹಾತ್ಮ ಗಾಂಧೀಜಿಯವರು ರಾಷ್ಟ್ರದ ಗ್ರಾಮೀಣ ಪರಿಸ್ಥಿತಿಯನ್ನು ಅರಿತು ಅಭಿವೃದ್ಧಿ ಮತ್ತು ಸಾಮಾಜಿಕ ಸುರಕ್ಷತೆಯ ಅಗತ್ಯತೆ ನೀಡುವ ಸಲುವಾಗಿ ಗ್ರಾಮಗಳ ಅಭಿವೃದ್ಧಿಗೆ ಪಂಚಾಯತ್ ಸಂಸ್ಥೆಗಳ ಪಾತ್ರ ಅನಿವಾರ್ಯವೆಂದು ವ್ಯಾಖ್ಯಾನಿಸುತ್ತಾರೆ. ಗಾಂಧೀಜಿಯವರು ತನ್ನ ನಂಬಿಕೆಯ ಸ್ವರಾಜ್ ಕಲ್ಪನೆಯನ್ನು ಹುಟ್ಟು ಹಾಕಿದರು. ಈ ಸಲುವಾಗಿ 1919ರಲ್ಲಿ ನವಜೀವನ್ ಸಂಸ್ಥೆಯನ್ನು ಸ್ಥಾಪಿಸಿ ಜನರ ಅರಿವಿಗೆ ಬರಲೆಂದು ಈ ಸ್ವರಾಜ್ ಬಗ್ಗೆ

ಅನೇಕ ಲೇಖನಗಳನ್ನು ಮಂಡಿಸುತ್ತಾರೆ. ಇಂಡಿಯಾ ಸ್ವಾತಂತ್ರ್ಯದ ನಂತರ ಸರ್ದಾರ್ ವಲ್ಲಭಬಾಯಿ ಪಟೇಲ್, ಮೌಲನಾ ಅಬುಲ್ ಕಲಾಂ ಅಜಾದ್, ಡಿ.ವಿ.ಸಾವರ್ಕರ್ ಮತ್ತು ರಾಮ್ ಮನೋಹರ್ ಲೋಹಿಯಾ, ರವೀಂದ್ರನಾಥ್ ಠ್ಯಾಗೋರ್ ಅವರ ಚಿಂತನೆ ಅಭಿವೃದ್ಧಿಯ ಕಡೆ ಗಮನ ಸೆಳೆಯಿತು. ಗಾಂಧೀಜಿಯವರ ಸರ್ವೋದಯ ಎಂಬ ಕಲ್ಪನೆ ಸರ್ವರ ಪ್ರಗತಿ ಸಾಧಿಸಬೇಕಾದರೆ ಸ್ವರಾಜ್ ಉತ್ತಮ ಸಾಧನ ಎಂಬ ಅಭಿಪ್ರಾಯಕ್ಕೆ ಮಣಿದು ಅನುಷ್ಠಾನಕ್ಕೆ ತರುಲು ಬಯಸುತ್ತಾರೆ. ಇಂಡಿಯಾ ಸ್ವಾತಂತ್ರ್ಯದ ನಂತರ ಅಂದು ಬಡತನದ ಬಿಕ್ಕಟ್ಟನ್ನು ಬಿಡಿಸಲು ಬಹು ಪ್ರಕಾರದ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಅಂದು ಅನಿವಾರ್ಯವೂ ಆಗಿರುತ್ತದೆ. ತಳಮಟ್ಟದವರೆಗೆ ಅಭಿವೃದ್ಧಿಯನ್ನು ಸಾಧಿಸಲು ಸಮುದಾಯ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಗಳನ್ನು ಅಭಿವೃದ್ಧಿ ಸಾಧಿಸಲು ರಚನಾತ್ಮಕವಾದ ಮಾರ್ಗಸೂಚಿ ತರುವುದಕ್ಕೆ 1957ರಲ್ಲಿ ಬಲವಂತ ರಾಯ್ ಮೆಹ್ತಾ ಸಮಿತಿಯನ್ನು ನೇಮಿಸಿತು. ಸದರಿ ಸಮಿತಿಯು ಅಭಿವೃದ್ಧಿ ಹಿನ್ನೆಲೆಯಲ್ಲಿ "ಪಂಚಾಯತ್ ರಾಜ್" ಎಂಬ ಹೆಸರಿನ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ವ್ಯವಸ್ಥೆಯನ್ನು ಸ್ಥಾಪಿಸುವಂತೆ ಬಲವಾಗಿ ಶಿಫಾರಸ್ಸು ಮಾಡಿತು. ಮೂರು ಹಂತದ ಪಂಚಾತ್ ರಾಜ್ ವ್ಯವಸ್ಥೆಯನ್ನು ಮೊದಲ ಬಾರಿಗೆ ರಾಜಸ್ಥಾನ ರಾಜ್ಯವು ಜಾರಿಗೊಳಿಸಿತು. ಪಂಚಾಯತ್ ರಾಜ್ ವ್ಯವಸ್ಥೆಯನ್ನು ರಾಷ್ಟ್ರದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಅಳವಡಿಸಿಕೊಂಡ ರಾಜ್ಯ ಎಂಬ ಕೀರ್ತಿ ರಾಜಸ್ಥಾನಕ್ಕೆ ಸಲ್ಲುತ್ತದೆ. ಎಷ್ಟೇ ಪ್ರಯತ್ನಿಸಿದರೂ ಭಾಗವಹಿಸುವಿಕೆ ಮತ್ತು ಅಭಿವೃದ್ಧಿಯಲ್ಲಿ ಹೊಸ ಬದಲಾಣೆ ತರಲು ವಿಫಲವಾದ ಕಾರಣ ಹಿಂದಿನಿಂದಲೂ ರೂಢಿಸಿಕೊಂಡು ಬಂದ ಸಾಂಪ್ರದಾಯಿಕ ಆಡಳಿತ ಪದ್ಧತಿಯಿಂದ ಅಂದರೆ ಗೌಡ, ಶಾನುಭೋಗ, ಗೊಂಚಿಗಾರ ಆಡಳಿತದಿಂದ ಹೊರ ಬರಲು ಸಾಧ್ಯವಾಗದ ಹಿನ್ನೆಲೆಯಲ್ಲಿ ರಾಷ್ಟ್ರದ ಆರ್ಥಿಕತೆ ಕುಂಠಿತವಾಯಿತು. ಕೆಲವು ರಾಜ್ಯಗಳಲ್ಲಿ ಚುನಾವಣೆ ನಡೆದವು ಇನ್ನೂ ಕೆಲವು ರಾಜ್ಯಗಳಲ್ಲಿ ನಡೆಯಲೇ ಇಲ್ಲ ಸಾಂಪ್ರದಾಯಿಕ ಆಡಳಿತ ವ್ಯವಸ್ಥೆಯನ್ನೇ ಮುಂದುವರೆಸಿಕೊಂಡು ಬಂದಿರುವುದು.

ಬಲವಂತ ರಾಯ್ ಮೆಹ್ತಾ ಸಮಿತಿಯ ಆಧಾರದ ಮೇಲೆ ಅನುಷ್ಠಾನವಾದ ಪಂಚಾಯತ್ ರಾಜ್ ಆಡಳಿತದಲ್ಲಿ ವೈಫಲ್ಯದ ಲೋಪದೋಷಗಳನ್ನು ಗುರುತಿಸಲು ಮತ್ತು ಅದನ್ನು ಬಲಗೊಳಿಸಲು ಅಗತ್ಯವಾದ ಶಿಫಾರಸ್ಸಗಳಿಗಾಗಿ ಜನತಾ ಸರ್ಕಾರ 1977ರಲ್ಲಿ ಅಶೋಕ್ ಮೆಹ್ತಾ ಸಮಿತಿಯನ್ನು ನೇಮಿಸಿತು. ಸದರಿ ಸಮಿತಿಯು 1978ರಲ್ಲಿ ಅಧ್ಯಯನ ಮಾಡಿ ತಾನು ಗುರುತಿಸಿದ ಲೋಪದೋಷಗಳನ್ನು ಮತ್ತು ಅದನ್ನು ಬಲಪಡಿಸಲು ಮತ್ತು ಪುನಶ್ಚೇತನಗೊಳಿಸಲು 132 ಶಿಫಾರಸ್ಸಿನ ವರದಿಯನ್ನು ಸಲ್ಲಿಸಿತು. ಮೂರು ಹಂತದ ಆಡಳಿತ ವ್ಯವಸ್ಥೆಯ ಬದಲಿಗೆ. ಅದು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಮತ್ತು ಗ್ರಾಮ ಮಟ್ಟದಲ್ಲಿ ಮಂಡಲ್ ಪಂಚಾಯತ್ ಎಂಬ ಎರಡು ಹಂತದ

ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಿತು. ಇಲ್ಲಿಯೂ ಸಹ ಸಮುದಾಯ ಭಾಗವಹಿಸುವಿಕೆ ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆ ಮುಂತಾದ ಚಟುವಟಿಕೆಗಳ ಮೂಲಕ ಅಭಿವೃದ್ಧಿ ಸಹ ನಿರೀಕ್ಷೆಗೆ ತಕ್ಕಂತೆ ಸಾಧನೆ ಮಾಡುವ ಲೆಕ್ಕಾಚಾರಗಳು ತಲೆಕೆಳಗಾಗಿ ಹಿಂದುಳಿಯುವುದಕ್ಕೆ ಬಲವಾದ ದಾರಿಯೂ ಆಯಿತು. ಕೇಂದ್ರದಲ್ಲಿ ಸರ್ಕಾರಗಳ ಬದಲಾವಣೆಯಿಂದ ಸದರಿ ಸ್ಥಳೀಯ ಆಡಳಿತವು ಯಶಸ್ಸು ಕಾಣಲಿಲ್ಲ.

ಅಶೋಕ್ ಮೆಹ್ತಾ ಸಮಿತಿಯ ಶಿಫಾರಸ್ಸಿನ ಎರಡು ಹಂತದ ಆಡಳಿತ ವ್ಯವಸ್ಥೆ ವೈಫಲ್ಯದ ನಂತರ ಈ ಆಡಳಿತದ ಲೋಪದೋಷಗಳನ್ನು ಗುರುತಿಸಲು ಅವುಗಳನ್ನು ಬಲಪಡಿಸಲು ಮತ್ತು ಪುನಶ್ಚೇತನಗೊಳಿಸಲು ಸರ್ಕಾರ ಎರಡು ಉಪಸಮಿತಿಗಳನ್ನು ನೇಮಿಸುತ್ತದೆ. ಒಂದು ಎನ್.ಪಿ.ಕೆ.ಸಾಲ್ವೆ ಮತ್ತು ಎರಡನೆಯದು ಜಿ.ಕೆ.ಆರ್.ವಿ ಸಮಿತಿಯನ್ನು ನೇಮಿಸಿತು. ಇದರಲ್ಲಿ ಪ್ರಮುಖವಾಗಿ ಮೀಸಲಾತಿ ವಿಷಯ ಹಾಗೂ ಸಂವಿಧಾನಾತ್ಮಕ ಅಧಿಕಾರ ನೀಡಲು ಶಿಫಾರಸ್ಸು ಮಾಡಿತು. ಅಗತ್ಯತೆ, ಮಹಿಳಾ ಭಾಗವಹಿಸುವಿಕೆ, ಸ್ಥಳೀಯವಾಗಿ ಸಂವಿಧಾನದ ಅಧಿಕಾರ ಮತ್ತು ಹಿಂದೆ ಇದ್ದಂತಹ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳಿಗೆ ನೀಡಿದ ಅಧಿಕಾರವನ್ನು ಇಲ್ಲಿ ಜನರಿಗೆ ಅಧಿಕಾರ ನೀಡುವ ಸಲುವಾಗಿ ತಳಮಟ್ಟದಲ್ಲಿ ವಾರ್ಡ್‌ಸಭೆಗೆ ಮತ್ತು ಗ್ರಾಮಸಭೆಗಳಿಗೆ ಸಂವಿಧಾನಾತ್ಮಕ ಅಧಿಕಾರ ನೀಡಿತು. ಜನರಿಗೆ ವ್ಯಾಪಕ ತಿಳುವಳಿಕೆ ನೀಡಲು ಮತ್ತು ಪಾರದರ್ಶಕತೆ ಕಾಪಾಡಲು ಭಿತ್ತಿಪತ್ರ, ಡಂಗೂರ ಸಾರುವುದು, ಗೋಡೆಬರಹ, ಯೋಜನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ್ದನ್ನು ನಾಮಫಲಕದಲ್ಲಿ ಪ್ರದರ್ಶನ ತರುವುದು, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ, ಹಣಕಾಸು ಬಳಕೆ, ಸಾಮಾಜಿಕ ಲೆಕ್ಕಪತ್ರ, ಮೂರು ಹಂತದ ಸ್ಥಳೀಯ ಚುನಾವಣೆ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ, ಸ್ಥಾನಗಳ ಮೀಸಲಾತಿ ಮುಂತಾದ ಶಿಫಾರಸ್ಸಿನ ವರದಿಯನ್ನು ಪಾರ್ಲಿಮೆಂಟ್‌ನಲ್ಲಿ ಮೂರು ಬಾರಿ ಅನುಮೋದನೆ ತಡೆಹಿಡಿದು ನಾಲ್ಕನೇ ಬಾರಿಗೆ ಪಿ.ವಿ.ನರಸಿಂಹರಾವ್ ಆಡಳಿತದ ಅವಧಿಯಲ್ಲಿ ಈ ಶಿಫಾರಸ್ಸಿಗೆ ಅನುಮೋದನೆ ನೀಡಲಾಗುತ್ತದೆ. ಈ ಶಿಫಾರಸ್ಸು ಸಂವಿಧಾನದ 73ನೇ ತಿದ್ದುಪಡಿಗೆ ಅಡಿಪಾಯ ಹಾಕಿ ಕೊಡುತ್ತದೆ. ಆ ತಿದ್ದುಪಡಿಯೇ ಪಂಚಾಯತ್‌ರಾಜ್ 1993ರಲ್ಲಿ ಜಾರಿಗೆ ಬರುವುದು. ಈ ಶಿಫಾರಸ್ಸಿನಲ್ಲಿ ಬರುವ ಮೂರು ಹಂತಗಳ ಸ್ಥಳೀಯ ಸರ್ಕಾರಗಳೇ "ಅಧಿಕಾರದ ವಿಕೇಂದ್ರೀಕರಣ" ಈ ಮೂರು ಪ್ರಕಾರದ ಸರ್ಕಾರಗಳನ್ನು ಪ್ರಜಾಪ್ರಭುತ್ವದ ಜೀವಾಳವೆಂದು ಅನೇಕ ಅಧ್ಯಯನಗಳು ಗುರುತಿಸಿವೆ.

6.1. ಸ್ಥಳೀಯ ಸರ್ಕಾರಗಳ ಪರಿಕಲ್ಪನೆ

ಸ್ಥಳೀಯ ಸರ್ಕಾರಗಳೆಂದರೆ ಸ್ಥಳೀಯ ನಿರ್ದಿಷ್ಟ ಪ್ರದೇಶಗಳ ಸಾಮಾಜಿಕ ಸುರಕ್ಷತೆ ಮತ್ತು ಅಭಿವೃದ್ಧಿಯ ಸಲುವಾಗಿ ಕಾರ್ಯನಿರ್ವಹಣೆಗಾಗಿ ಅಲ್ಲಿನ ಆಗು-ಹೋಗುಗಳನ್ನು ನಿಯಂತ್ರಿಸಲು ನ್ಯಾಯಬದ್ಧವಾಗಿ ಸ್ಥಾಪಿತವಾದಂತಹ ಸರ್ಕಾರದ ವ್ಯವಸ್ಥೆಗಳಿಗೆ ಸ್ಥಳೀಯ ಸರ್ಕಾರಗಳು, ಸ್ವಯಂ

ಸರ್ಕಾರಗಳು, ಪ್ರಾದೇಶಿಕ ಸರ್ಕಾರಗಳು ಎನ್ನುವಂತಹ ಸೆಲ್ಫ್ ಗೌರ್ನಮೆಂಟ್ ಎನ್ನುವಂತಹ ವಿವಿಧ ಹೆಸರುಗಳಲ್ಲಿ ಕರೆಯಲಾಗಿದೆ. ಸ್ಥಳೀಯ ಜನರಿಗಾಗಿ ಸ್ಥಳೀಯ ಜನರಿಂದಲೇ ನಡೆಯುವಂತಹ ಸರ್ಕಾರಗಳನ್ನು ಸ್ಥಳೀಯ ಜನರ ಸರ್ಕಾರಗಳೆಂದು ವ್ಯಾಖ್ಯಾನಿಸಿವೆ.

ಡಾ..ರಾಧಾಕೃಷ್ಣನ್‌ರವರು "ಸ್ಥಳೀಯ ಜನತೆಯ ಆಶೋತ್ತರ ಮತ್ತು ಕಲ್ಯಾಣವನ್ನು ಸಾಧಿಸುವುದಕ್ಕಾಗಿ ಸ್ಥಾಪಿತವಾಗಿರುವ ಸರ್ಕಾರವೇ ಸ್ಥಳೀಯ ಸರ್ಕಾರ" ಎಂದು ವ್ಯಾಖ್ಯಾನಿಸಿರುವರು.

ಹಿಂದೆ ಇದ್ದ ಕೇಂದ್ರಿಕೃತ ಅಧಿಕಾರದಿಂದ ಆಡಳಿತದಲ್ಲಿ ಅನೇಕ ಲೋಪದೊಷಗಳು ಉಲ್ಬಣವಾಗಿದ್ದರಿಂದ ಗ್ರಾಮೀಣ ಮಟ್ಟದಲ್ಲಿ ಅಭಿವೃದ್ಧಿ ಹಿಂದುಳಿಯುವುದಕ್ಕೆ ಕಾರಣವೂ ಆಗಿರುವುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ. ಸ್ಥಳೀಯ ಸಂಪನ್ಮೂಲಗಳನ್ನು ಬಳಕೆಗೆ ಆಧ್ಯತೆ ನೀಡಿರುತ್ತಾರೆ. ಜನರಿಗೆ ಸ್ಥಳೀಯ ಸಂಪನ್ಮೂಲಗಳ ಬಳಕೆಯಿಂದ ಕ್ರಮಬದ್ಧವಾಗಿ ನಿರ್ವಹಿಸಿ ಸ್ಥಳೀಯ ಸಂಸ್ಥೆಗಳನ್ನು ಬಲಗೊಳಿಸುವುದು ಅವಶ್ಯಕತೆ ಇದರಿಂದ ಕೆಲವು ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಸಹಕಾರಿಯಾಗುತ್ತದೆ. ಅಧಿಕಾರದ ವಿಕೇಂದ್ರೀಕರಣ ಸ್ಥಳೀಯ ಆಡಳಿತವನ್ನು ಸಬಲೀಕರಣ ಗೊಳಿಸುವುದರಿಂದ ಸ್ಥಳೀಯ ಆಡಳಿತ ಸಂಸ್ಥೆಗಳು ಸಕ್ರೀಯವಾಗಿ ಭಾಗವಹಿಸಲು, ಈ ಮೂಲಕ ಅಭಿವೃದ್ಧಿಯ ದಾರಿ ಸುಗಮವಾಗುವುದು. ಸ್ಥಳೀಯ ಸರ್ಕಾರಗಳನ್ನೆ ತಳಮಟ್ಟದ ಪ್ರಜಾಪ್ರಭುತ್ವಗಳೆಂದು ಪರಿಭಾವಿಸಲಾಗಿದೆ (ಅಗರ್‌ವಾಲ್ ಮತ್ತು ಗಿಬ್‌ಸನ್ 1999).

ಪ್ರಜಾಪ್ರಭುತ್ವದ ವಿಕೇಂದ್ರೀಕರಣದ ಪರಿಕಲ್ಪನೆಯ ಉದ್ದೇಶ ಅಥವಾ ಆಶಯವೇನಂದರೆ ಗ್ರಾಮೀಣ ಮಟ್ಟದಲ್ಲಿ ಆಡಳಿತ ಮತ್ತು ಅಭಿವೃದ್ಧಿಯನ್ನು ಸುಧಾರಿಸುವುದು. ಸ್ಥಳೀಯ ಜನರ ಸಕ್ರೀಯ ಭಾಗವಹಿಸುವಿಕೆಯಿಂದ ತೀವ್ರ ಮತ್ತು ಸಮಗ್ರವಾಗಿ ಅಭಿವೃದ್ಧಿಯಾಗುವುದು. ಸ್ಥಳೀಯ ಸಮಸ್ಯೆಗಳನ್ನು ಗುರುತಿಸುವ, ಗಮನಿಸುವ, ಮತ್ತು ಬಿಡಿಸುವ ನಾಯಕತ್ವದ ಗುಣ ರಾಜ್ಯ ಸರ್ಕಾರಕ್ಕೆ ಪೂರ್ಣ ಜ್ಞಾನ ಇರುವುದಿಲ್ಲ. ರಾಷ್ಟ್ರದ ನಿರ್ಮಾಣದ ಚಟುವಟಿಕೆಗಳಿಗೆ ಪ್ರಜಾಪ್ರಭುತ್ವದ ವಿಕೇಂದ್ರೀಕರಣದ ಕೊಡುಗೆ ಅಮುಲ್ಯವಾದುದು(ಜಿನ್ ಡ್ರೀಜ್ ಮತ್ತು ಅಮರ್ತ್ಯಸೇನ್ (1996).

6.2. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ-1993

ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸ್ಥಳೀಯ ಸರ್ಕಾರದ ಸಂಸ್ಥೆಗಳು 1983ರಲ್ಲಿ ಜಾರಿಗೆ ಬಂದಿರುವುದು. ಈ ಇಸವಿಯನ್ನು ಗ್ರಾಮೀಣ ಅಭಿವೃದ್ಧಿಯ ಒಂದು ಮೈಲುಗಲ್ಲು ಎಂದು ಬಣ್ಣಿಸುತ್ತಾರೆ. ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಸರ್ಕಾರಗಳು ಅಶೋಕ್ ಮೆಹ್ತಾ ಸಮಿತಿಯ ಶಿಫಾರಸ್ಸನ್ನು ಆಧರಿಸಿ ಕರ್ನಾಟಕ ರಾಜ್ಯ ಜಿಲ್ಲಾ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಕಾಯ್ದೆ 1983ನ್ನು ರೂಪಿಸಿತು. ಈ ಕಾಯ್ದೆಯು 1985ರಲ್ಲಿ

ಜಾರಿಗೆ ಬಂದಿತು. ನಂತರ ಭಾರತ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ 1993ರಲ್ಲಿ ಕಾರ್ಯರೂಪಕ್ಕೆ ಬಂದಿರುವುದು ಅಭಿವೃದ್ಧಿಯ ಹೊಸ ಅಲೆಯಾಗಿಯೇ ಕಂಡಿತ್ತು ಇದು ಕರ್ನಾಟಕದಲ್ಲಿ ಅಧಿಕಾರದ ವಿಕೇಂದ್ರೀಕರಣದತ್ತ ದಿಟ್ಟ ಹೆಜ್ಜೆಯಾಗಿದೆ.

6.3. ಪ್ರಮುಖ ಲಕ್ಷಣಗಳು

- ಪ್ರತಿ 5000 ಜನಸಂಖ್ಯೆಗೆ ಒಂದು ಗ್ರಾಮಪಂಚಾಯತಿ ರಚನೆ
- ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರತ್ಯೇಕ ಚುನಾವಣೆ
- ಗ್ರಾಮಪಂಚಾಯತಿಗಳಿಗೆ ಪಕ್ಷರಹಿತ ಚುನಾವಣೆ
- ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡುವುದು.
- ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅಳವಡಿಸುವುದು.

ಮೂರು ಹಂತದ ಪ್ರಕಾರಗಳಾಗಿ ವಿಂಗಡಿಸಿ ಜಿಲ್ಲಾ ಮಟ್ಟದಿಂದ ಗ್ರಾಮ ಮಟ್ಟದವರೆಗೆ ಅನುಷ್ಠಾನಗೊಳಿಸಲಾಗಿದೆ. ಒಂದೊಂದು ಹಂತದ ಕಾರ್ಯಕ್ಷೇತ್ರ ಅದರದೇ ಆಗಿರುವ ಜವಾಬ್ದಾರಿಯನ್ನು ಹಂಚಿಕೊಂಡಿರುವುದು.

1. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿ
2. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತಿ
3. ಗ್ರಾಮ ಮಟ್ಟದಲ್ಲಿ ಗ್ರಾಮಪಂಚಾಯತಿ.

ರಾಷ್ಟ್ರದಲ್ಲಿ ಕೇಂದ್ರ ಸರ್ಕಾರ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಬಹು ಪ್ರಕಾರದ ಉದ್ದೇಶಗಳನ್ನಿಟ್ಟುಕೊಂಡು ಗ್ರಾಮೀಣ ಅಭಿವೃದ್ಧಿಗೆ ಬಹು ಬಗೆಯ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿಕೊಂಡು ಬಂದಿರುತ್ತದೆ. ಆದರೆ ಅಭಿವೃದ್ಧಿ ಸಾದಿಸುವಲ್ಲಿ ಎಷ್ಟೊ ದಶಕಗಳೇ ಕಳೆದು ಹೋದರು ತನ್ನ ನಿರೀಕ್ಷೆಯ ಗುರಿ ಮಟ್ಟಲಿಲ್ಲ ಎನ್ನುವುದನ್ನು ಅನೇಕ ಅಧ್ಯಯನಗಳು ದೃಢಪಡಿಸಿವೆ. ಈ ದೇಶದಲ್ಲಿ ಹಳ್ಳಿಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾಗುವುದು ಕಾರಣ ದೇಶದಲ್ಲಿ ಸರಿಸುಮಾರು ಶೇಕಡ 70ರಷ್ಟು ಜನ ಹಳ್ಳಿಗಳಲ್ಲೇ ತನ್ನ ಬದುಕನ್ನು ಕಟ್ಟಿಕೊಂಡಿರುವುದು. ಇಲ್ಲಿ ಅಭಿವೃದ್ಧಿಗೆ ಬೇಕಾಗಿರುವುದು ರಾಷ್ಟ್ರ, ರಾಜ್ಯ ಮಟ್ಟದ ಸರ್ಕಾರಗಳಿಂದಲ್ಲ, ಅದೇನಿದ್ದರೂ ಸ್ಥಳೀಯ ಮಟ್ಟದ ಸ್ಥಳೀಯ ಸರ್ಕಾರಗಳಿಂದ ಏಳಿಗೆ ಸಾಧ್ಯ. ಇದರಿಂದ ಸಂವಿಧಾನದ 73ನೇ ತಿದ್ದು ಪಡಿಯಲ್ಲಿ ವಿಶೇಷವಾಗಿ ಸ್ಥಳೀಯ ಸರ್ಕಾರಗಳ ಆಡಳಿತಕ್ಕೆ ಹೊಸ ತಿರುವು ಸಿಕ್ಕಿತು. ಅಲ್ಲಿಂದ ವಾರ್ಡ್‌ಸಭೆ, ಗ್ರಾಮಸಭೆ, ಗ್ರಾಮಪಂಚಾಯತಿ , ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ

ಎನ್ನುವ ಸ್ಥಳೀಯ ಸರ್ಕಾರನ್ನು ಯೋಜನೆಗಳಲ್ಲಿ ತರಲಾಯಿತು. ಉದ್ಯೋಗ ಖಾತರಿ ಕಾಯಿದೆಯಲ್ಲಿಯೂ ಸ್ಥಳೀಯ ಸರ್ಕಾರಗಳು ಪ್ರಾಮುಖ್ಯತೆ ಪಡೆಯಿತು. ಅಧಿಕಾರದ ವಿಕೇಂದ್ರೀಕರಣ ಮತ್ತು ಉದ್ಯೋಗ ಖಾತರಿ ಕಾಯಿದೆ ಹೇಗೆ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಿದೆ ಎನ್ನುವಂತಹ ಅಂಶಗಳನ್ನು ಅಧ್ಯಯನ ಗುರುತಿಸಿದೆ.

6.4. ತಾಲ್ಲೂಕು ಪಂಚಾಯತಿಯ ಜವಾಬ್ದಾರಿಗಳು

- ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಪ್ರಸ್ತಾವನೆಯನ್ನು ಕಾರ್ಯಕ್ರಮ ಅಧಿಕಾರಿಗಳಿಗೆ ಕಳುಹಿಸಿಕೊಡುವುದು.
- ಕಾರ್ಯಕ್ರಮ ಅಧಿಕಾರಿಗಳಿಂದ ಮಂಜೂರಾದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.
- ತಾಲ್ಲೂಕು ಯೋಜನೆಯನ್ನು ಅನುಮೋದಿಸುವುದು ಮತ್ತು ಅದನ್ನು ಅಂತಿಮ ಅನುಮೋದನೆಗಾಗಿ ಜಿಲ್ಲಾ ಪಂಚಾಯತ್‌ಗೆ ಕಳುಹಿಸಿಕೊಡುವುದು.
- ಗ್ರಾಮಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ ಕೈಗೊಂಡ ಯೋಜನೆಗಳ ಉಸ್ತುವಾರಿ ಮತ್ತು ಪರಿಶೀಲನೆ ನಡೆಸುವುದು.
- ರಾಜ್ಯಸಭೆಯಿಂದ ನಿಯಮಿಸಲ್ಪಟ್ಟ ಇತರ ಯಾವುದೇ ಜವಾಬ್ದಾರಿಗಳು.
- ಕಾರ್ಯಕ್ರಮ ಅಧಿಕಾರಿಗಳನ್ನು ಗ್ರಾಮಪಂಚಾಯತಿನ ಯೋಜನೆಗಳ ಕ್ರೂಢಿಕೃತ ಪಟ್ಟಿಯನ್ನು ಅನುಮೋದನೆಗಾಗಿ ತಾಲ್ಲೂಕು ಪಂಚಾಯತ್ ಸಭೆಗೆ ಮಂಡಿಸಬೇಕು.
- ಸರಿ ಇರುವ ಹಾಗೂ ಅನುಮೋದನೆಯಾದ ಪ್ರಸ್ತಾವನೆಗಳನ್ನು ಕಾರ್ಯಕ್ರಮ ಅಧಿಕಾರಿ, ಅನುಮೋದನೆಗಾಗಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗಳಿಗೆ ನೀಡುವುದು

6.5 ಗ್ರಾಮಪಂಚಾಯತಿಯ ಜವಾಬ್ದಾರಿಗಳು

- ಗ್ರಾಮಸಭೆಯ ಶಿಫಾರಸ್ಸುಗಳನ್ನು ಗಣನೆಗೆ ತೆಗೆದುಕೊಂಡು ಮಾಡಬೇಕಾದ ಸಂಭಾವ್ಯ ಕೆಲಸಗಳ ಪಟ್ಟಿಯನ್ನು ಸಿದ್ಧಪಡಿಸಿ ಒಂದು ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು.
- ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೆಲಸ ಮಾಡಲು ಇಚ್ಚಿಸುವವರನ್ನು ನೋಂದಾಯಿಸಿ ಉದ್ಯೋಗ ಚೀಟಿಯನ್ನು ನೀಡುವುದು.
- ಕೆಲಸಕ್ಕೆ ಅರ್ಜಿಗಳನ್ನು ಸ್ವೀಕರಿಸಿ ದಿನಾಂಕವನ್ನು ನಮೂದಿಸಿದ ಸ್ವೀಕೃತಿ ರಶೀದಿಯನ್ನು ನೀಡುವುದು.

➢ ಅರ್ಜಿದಾರರಿಗೆ ಕೆಲಸದ ಅವಕಾಶಗಳನ್ನು ಹಂಚುವುದು ಮತ್ತು ಅವರು ಕೆಲಸಕ್ಕೆ ಹಾಜರಾಗುವಂತೆ ಮಾಡುವುದು. ಗ್ರಾಮಪಂಚಾಯತ್ ಮಾಹಿತಿ ಫಲಕದಲ್ಲಿ ಕೆಲಸ ನೀಡಿದವರ ಪಟ್ಟಿಯನ್ನು ಹಾಕುವುದು. ಕಾರ್ಯಕ್ರಮ ಅಧಿಕಾರಿಯಿಂದ ಮಂಜೂರಾದ ಕೆಲಸವನ್ನು ಅನುಷ್ಠಾನಗೊಳಿಸುವುದು. ಗ್ರಾಮಸಭೆಯಲ್ಲಿ ಲೆಕ್ಕ ಪರಿಶೋಧನೆಗೆ ಅಗತ್ಯವಿರುವ ಎಲ್ಲಾ ಅಗತ್ಯ ದಾಖಲಾತಿಗಳನ್ನು ಲಭ್ಯವಾಗಿರಿಸುವುದು.

➢ ಗ್ರಾಮಪಂಚಾಯತಿ ಸಾರ್ವಜನಿಕ ಪರಿಶೀಲನೆಗಾಗಿ ಹಾಜರಾತಿ ಪಟ್ಟಿಯ ಪ್ರತಿಯನ್ನು ಲಭ್ಯವಾಗಿರಿಸುವುದು.

➢ ಯೋಜನೆಯ ಅನುಷ್ಠಾನದ ಬಗ್ಗೆ ವಾರ್ಷಿಕ ವರದಿಯನ್ನು ತಯಾರಿಸುವುದು. ಪ್ರತಿ ಗ್ರಾಮ ಪಂಚಾಯತಿ ತಮಗೆ ನಿಗದಿಪಡಿಸಿದ ಮೊತ್ತಕ್ಕೆ, ಆಧ್ಯತೆ ಮೇರೆಗೆ ತಮ್ಮ ವ್ಯಾಪ್ತಿಯ ಕಾಮಗಾರಿಗಳನ್ನು ವಾರ್ಡ್‌ಸಭೆ ಮತ್ತು ಗ್ರಾಮಸಭೆಗಳ ಶಿಫಾರಸ್ಸಿನ ಮೇರೆಗೆ ತಯಾರಿಸಬೇಕು. ಗ್ರಾಮ ಪಂಚಾಯತ್ ಅನುಮೋದಿಸಿ ಸಿದ್ಧಪಡಿಸಿದ ಕಾಮಗಾರಿಗಳ ಅಂದಾಜು ಪಟ್ಟಿಯೊಂದಿಗೆ ಅನುಮೋದನೆಗಾಗಿ ಗ್ರಾಮ ಪಂಚಾಯತಿನ ಕಾರ್ಯಕ್ರಮ ಅಧಿಕಾರಿಗಳಿಗೆ ಸಲ್ಲಿಸಬೇಕು.

6.6 ಗ್ರಾಮಸಭೆಯ ಜವಾಬ್ದಾರಿಗಳು

* ಗ್ರಾಮಪಂಚಾಯತಿಯ ಯೋಜನೆಗಳನ್ನು, ಅಭಿವೃದ್ಧಿ ಯೋಜನೆಯನ್ನು ಮತ್ತು ಸಂಭಾವ್ಯ ಕೆಲಸದ ಪಟ್ಟಿಯನ್ನು ಶಿಫಾರಸ್ಸು ಮಾಡುವುದು.

* ಗ್ರಾಮಪಂಚಾಯತಿಯಲ್ಲಿ ನಿರ್ವಹಿಸಲ್ಪಡುವ ಕೆಲಸಗಳನ್ನು ಉಸ್ತುವಾರಿ ನಡೆಸುವುದು.

* ಗ್ರಾಮಪಂಚಾಯತಿ ಮಟ್ಟದಲ್ಲಿ ಎಲ್ಲಾ ಯೋಜನೆಗಳ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸುವುದು.

6.7 ಉದ್ಯೋಗ ಖಾತರಿಯ ಅನುಷ್ಠಾನವನ್ನು ಯಾರು ಮಾಡುತ್ತಿದ್ದಾರೆ?

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಭಾರತ ಸರ್ಕಾರ ಸಂವಿಧಾನದ 73ನೇ ತಿದ್ದುಪಡಿ ಮೂಲಕವಾಗಿ ಸ್ಥಳೀಯ ಮಟ್ಟದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾಪಂಚಾಯತಿ ಸಂಸ್ಥೆಗಳನ್ನು ಜಾರಿಗೆ ತಂದು ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡುವಲ್ಲಿ ಸಂವಿಧಾನದ ಹಕ್ಕು ನೀಡಿರುವುದು. ಕೆಲವು ಯೋಜನೆಗಳಲ್ಲಿ ಅನುಷ್ಠಾನ ಯಾರು ಮಾಡುತ್ತಿದ್ದಾರೆ? ಯೋಜನೆಗಳ ಕಾರ್ಯವೈಖರಿಯ ಸ್ವರೂಪದ ಬಗ್ಗೆ ಜನರಿಗೆ ಸ್ಪಷ್ಟತೆ ಇಲ್ಲದೆ ಇರುವುದು ತಿಳಿಯುತ್ತದೆ. ಉದ್ಯೋಗ

ಖಾತರಿ ಕಾಯಿದೆಯನ್ನು ಗ್ರಾಮದಲ್ಲಿ ಯಾರು ಅನುಷ್ಠಾನ ಮಾಡಿರುವರು ಎನ್ನುವುದನ್ನು ಅಧ್ಯಯನ ತಿಳಿಸುತ್ತದೆ. ಪಂಚಾಯತಿಗಳು ಪಂಚಾಯತ ಯೋಜನೆ ತಯಾರಿಕೆಯಲ್ಲಿ ಸ್ಥಾಯಿ ಸಮಿತಿಗಳು ಸ್ಥಳೀಯ ಸಮಸ್ಯೆಗಳನ್ನು ಗುರುತಿಸುತ್ತದೆ ಮತ್ತು ಶಿಫಾರಸ್ಸು ಮಾಡುತ್ತದೆ (ಜೈನ್.ಸಿ 2005).


ಕೋಷ್ಟಕ : 6.1

ಉದ್ಯೋಗ ಖಾತರಿಯ ಅನುಷ್ಠಾನವನ್ನುಯಾರು ಮಾಡುತ್ತಿದ್ದಾರೆ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಗ್ರಾಮಪಂಚಾಯತಿ	13	6.50	45	22.50	58	14.50
ಗ್ರಾಮಪಂಚಾಯತಿ ಸದಸ್ಯರು	155	77.50	75	37.50	230	57.50
ತಾಲ್ಲೂಕು ಪಂಚಾಯತಿ ಸದಸ್ಯರು	0	0.00	5	2.50	5	1.25
ಜಿಲ್ಲಾಪಂಚಾಯತಿ ಸದಸ್ಯರು	0	0.00	4	2.00	4	1.00
ಗುತ್ತಿಗೆದಾರರು	32	16.00	71	35.50	103	25.75
ಎನ್.ಜಿ.ಒ ಗಳು	0	0.00	0	0.00	0	0.00
ಒಟ್ಟು	200	100.00	200	100.00	400	100.00

ಸ್ತಂಭ ರೇಖಾ ಚಿತ್ರ : 34

ಉದ್ಯೋಗ ಖಾತರಿಯ ಅನುಷ್ಠಾನವನ್ನು ಯಾರು ಮಾಡುತ್ತಿದ್ದಾರೆ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಪ್ರಕಾರ ಗ್ರಾಮಪಂಚಾಯತಿಯೇ ಅನುಷ್ಠಾನ ಸಂಸ್ಥೆಯಾಗಿರುವುದು. ಆದರೂ ಅಧ್ಯಯನ ಕ್ಷೇತ್ರದಲ್ಲಿ ಅನುಷ್ಠಾನ ಯಾರು ಮಾಡಿರುವರು ಎನ್ನುವುದಕ್ಕೆ ಗ್ರಾಮಪಂಚಾಯತಿ ಸದಸ್ಯರೇ ಅನುಷ್ಠಾನ ಮಾಡಿರುವರು ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 77.50ರಷ್ಟು ಕಂಡುಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ

ಶೇಕಡ 37.50ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಲ್ಲಿ ಶೇಕಡ 57.50ರಷ್ಟು ತಿಳಿದು ಬರುತ್ತದೆ. ಇದನ್ನು ಹೊರೆತು ಪಡಿಸಿದರೆ ನಂತರದ ಸ್ಥಾನದಲ್ಲಿ ಯೋಜನೆಯ ಅನುಷ್ಠಾನವನ್ನು ಗುತ್ತಿಗೆದಾರರಿಂದಲೇ ನಡೆದಿರುವುದು ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 16ರಷ್ಟು ಕಂಡು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 35.50ರಷ್ಟು ಕಂಡು ಬರುತ್ತದೆ. ಒಟ್ಟಾರೆ ಎರಡು ಪಂಚಾಯತಿಯಿಂದ ಶೇಕಡ 25.75ರಷ್ಟು ಕಂಡು ಬರುತ್ತದೆ. ಕಾಯಿದೆಯ ಅಡಿಯಲ್ಲಿ ಯೋಜನೆಯ ಅನುಷ್ಠಾನ ಗ್ರಾಮಪಂಚಾಯತಿ ಮಾಡಬೇಕಾಗಿದ್ದರು ಇಲ್ಲಿ ಬಹುತೇಕ ಗ್ರಾಮಪಂಚಾಯತಿ ಸದಸ್ಯರು ಮತ್ತು ಗುತ್ತಿಗೆದಾರರು ಅನುಷ್ಠಾನ ಮಾಡಿರುವುದು ಅಧ್ಯಯನದಿಂದ ವ್ಯಕ್ತವಾಗುತ್ತದೆ.

6.8. ವಾರ್ಡಸಭೆ ಮತ್ತು ಕಾಮಗಾರಿಗಳ ಆಯ್ಕೆ

ಗ್ರಾಮೀಣಾಭಿವೃದ್ಧಿ ಯೋಜನೆಗಳು ಪ್ರಾರಂಭದಿಂದಲೂ ಯಶಸ್ವಿಗಿಂತಲೂ ವೈಫಲ್ಯಗಳೇ ಹೆಚ್ಚು ಕಂಡು ಬಂದಿರುವುದು ಇಂತಹ ಅನುಭಗಳನ್ನು ಮನಗಂಡು ಯೋಜನಕಾರರು ಮತ್ತು ಯೋಜನೆಯ ನೀತಿ ನಿಪುಣರು ಹಾಗೂ ಅನೇಕ ಅಧ್ಯಯನ ತಂಡಗಳು ನೀಡಿದ ಸಲಹೆಗಳು ಮತ್ತು ಸಂವಿಧಾನದ 73ನೇ ತಿದ್ದುಪಡಿ ಮೂಲಕ ಬಂದಂತಹ ಸಲಹೆಗಳು ಯೋಜನೆಗಳನ್ನು ರೂಪಿಸುವಾಗ, ಅನುಷ್ಠಾನ ಮಾಡುವಾಗ ಮತ್ತು ನಿರ್ವಹಣೆಯ ಹಂತದಲ್ಲಿ ಗ್ರಾಮಸಭೆಗಳು ಪ್ರಮುಖವಾದ ಪಾತ್ರವಹಿಸುತ್ತವೆ. ಇವು ಸ್ಥಳೀಯ ಮಟ್ಟದ ಸರ್ಕಾರಗಳು ಎನ್ನುವಂತಹ ಅರ್ಥವನ್ನು ಹೊಂದಿದೆ. ಸ್ಥಳೀಯರ ಅಭಿಪ್ರಾಯಗಳನ್ನು ಯೋಜನೆಯನ್ನು ಯೋಜಿಸು, ರೂಪಿಸುವ ಹಾಗೂ ಅನುಷ್ಠಾನ ಮಾಡುವಾಗ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ವಾರ್ಡಸಭೆ ಗ್ರಾಮಸಭೆಗಳ ಮೂಲಕ ಕಾಮಗಾರಿಗಳನ್ನು ಗುರುತಿಸಬೇಕು. ಹಾಗಾದರೆ ಗ್ರಾಮಸಭೆಗಳು ಎಲ್ಲಿ ನಡೆದಿವೆ ಮತ್ತು ಹೇಗೆ ನಡೆದಿವೆ ಎಂಬುದನ್ನು ತಿಳಿಸುತ್ತದೆ.

ಕೋಷ್ಟಕ : 6.2


ಕಾಮಗಾರಿ ಗುರ್ತಿಸಲಿಕ್ಕೆ ವಾರ್ಡಸಭೆ ನಡೆದಿರುವ ಸ್ಥಳದ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಇದೇ ಗ್ರಾಮದಲ್ಲಿ	2	1.00	4	2.00	6	1.50
ಗ್ರಾಮಪಂಚಾಯತಿಯಲ್ಲಿ	10	5.00	1	0.50	11	2.75
ಗುತ್ತಿಗೆದಾದರ ಮನೆಯಲ್ಲಿ	1	0.50	0	0.00	1	0.25
ಚುನಾಯಿತ ಸದಸ್ಯರ ಮನೆಯಲ್ಲಿ	7	3.50	0	0.00	7	1.75

ಗ್ರಾಮದ ಮುಖಂಡರ ಮನೆಯಲ್ಲಿ	2	1.00	0	0.00	2	0.50
ದೇವಸ್ಥಾನ	5	2.50	16	8.00	21	5.25
ಶಾಲೆ	0	0.00	0	0.00	0	0.00
ಅರಳಿ ಕಟ್ಟೆ	0	0.00	9	4.50	9	2.25
ಗೊತ್ತಿಲ್ಲ	0	0.00	4	2.00	4	1.00
ಗಾಮಸಭೆಗಳೇ ನಡೆದಿಲ್ಲ	173	86.50	166	83.00	339	84.75
ಒಟ್ಟು	200	100.00	200	100.00	400	100.00

ಸ್ತಂಭ ರೇಖಾಚಿತ್ರ : 35

ಕಾಮಗಾರಿ ಗುರ್ತಿಸಲಿಕ್ಕೆ ವಾರ್ಡಸಭೆ ನಡೆದಿರುವ ಸ್ಥಳದ ವಿವರ



ಕಾಮಗಾರಿ ಗುರ್ತಿಸಲಿಕ್ಕೆ ವಾರ್ಡಸಭೆ ನಡೆದಿರುವ ಸ್ಥಳದ ವಿವರಕ್ಕೆ ಪೂರಕವಾಗಿ ಭಾಗವಹಿಸುವಿಕೆ ಮಾನದಂಡವಿಟ್ಟುಕೊಂಡು ಅಧಿಕಾರದ ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಕಾಮಗಾರಿ ಗುರುತಿಸಲಿಕ್ಕೆ ಅಧಿಕಾರವನ್ನು ವಾರ್ಡ್‌ಸಭೆ ಮತ್ತು ಗ್ರಾಮಸಭೆಗಳಿಗೆ ಮಾಡಿರುವುದು. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಕಾಮಗಾರಿಗಳನ್ನು ಗುರುತಿಸಲಿಕ್ಕೆ ಗ್ರಾಮಸಭೆ ದೇವಸ್ಥಾನದ ಬಳಿ ನಡೆದಿವೆ ಎಂದು ಶೇಕಡ 2.50ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 8ರಷ್ಟು ಕಂಡು ಬರುವುದು. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 5.25ರಷ್ಟು ಕಂಡು ಬರುವುದು. ಗ್ರಾಮಪಂಚಾಯತಿಯಲ್ಲಿ ಗ್ರಾಮಸಭೆಗಳು ನಡೆದಿವೆ ಎನ್ನಲಾದ ಬೆಲವತ್ತ ಗ್ರಾಮ

ಪಂಚಾಯತಿಯಲ್ಲಿ ಶೇಕಡ 5ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 0.50ರಷ್ಟು ಕಂಡುಬಂದರೆ ಒಟ್ಟಾರೆ ಶೇಕಡ 2.75ರಷ್ಟು ಕಂಡುಬರುವುದು. ವಿಶೇಷವಾಗಿ ಕಾಮಗಾರಿ ಗಳನ್ನು ಗುರುತಿಸಲಿಕ್ಕೆ ಗ್ರಾಮಸಭೆಗಳೆ ನಡೆದಿರುವುದಿಲ್ಲ ಎನ್ನುವಂತಹ ಅಂಶಗಳು ಹೊರಬರುವವು ಅದರಲ್ಲಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 86.50ರಷ್ಟು ಗ್ರಾಮಸಭೆಗಳ ಮೂಲಕ ಗುರುತಿಸಿಲ್ಲ ಎನ್ನುವ ಅಂಶಗಳು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 83ರಷ್ಟು ಕಾಮಾಗಾರಿ ಗುರುತಿಸಲಿಕ್ಕೆ ಗ್ರಾಮಸಭೆಗಳೇ ನಡೆದಿರುವುದಿಲ್ಲ ಎನ್ನುವ ಅಂಶಗಳು ಕಂಡುಬರುವವು.

6.9. ಗ್ರಾಮಸಭೆಗಳು ಎಲ್ಲಿ ನಡೆದಿವೆ

ವಿಶೇಷವಾಗಿ ಗ್ರಾಮಸಭೆಗಳಿಗೆ ಒಂದು ಅರ್ಥವಿದೆ ಗ್ರಾಮಸಭೆ ಎಂದರೇನು ಮತ್ತು ಗ್ರಾಮ ಸಭೆಯ ಪಾತ್ರವೇನು? ವಾರ್ಡ್‌ಸಭೆ ಗ್ರಾಮಸಭೆಗಳಿಗೆ ವಿಶೇಷವಾದ ಮತ್ತು ಮಹತ್ವವಾದ ಅರ್ಥವಿದೆ. ಮತ್ತು ಗ್ರಾಮಸಭೆಗಳು ಎಲ್ಲಿ ನಡೆಯಬೇಕು? ಎನ್ನುವಂತಹ ಪ್ರಶ್ನೆಗಳಿಗೆ ಗ್ರಾಮಸಭೆಗಳು ಸಮುದಾಯ ಭಾಗವಹಿಸುವಿಕೆಯ ಮೂಲಕ ಅಭಿವೃದ್ಧಿಯಾಗಬೇಕು ಎನ್ನುವುದು ಗ್ರಾಮಸಭೆಯ ಆಶಯವಾದರೆ. ಗ್ರಾಮಪಂಚಾಯತಿಯ ಎಲ್ಲ ಗ್ರಾಮಗಳ ಪ್ರತಿನಿಧಿಗಳು ಒಂದು ಗ್ರಾಮದಲ್ಲಿ ಸಾರ್ವಜನಿಕರು ಮುಕ್ತವಾಗಿ ಸೇರುವ ಸ್ಥಳದಲ್ಲಿ ಗ್ರಾಮಸಭೆಗಳು ನಡೆಯಬೇಕು. ಭಾರತ ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ ಪಂಚಾಯತ್‌ರಾಜ್‌ನಲ್ಲಿ ಹಾಗೂ ಕಾಯಿದೆಯಲ್ಲಿ ಕಡ್ಡಾಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನ ಕ್ಷೇತ್ರದಲ್ಲಿ ಗ್ರಾಮಸಭೆಗಳು ಎಲ್ಲಿ ನಡೆದಿರುತ್ತವೆ ಎನ್ನುವ ಅಂಶಗಳನ್ನು ತಿಳಿಸುತ್ತದೆ.


ಕೋಷ್ಟಕ : 6.3

ಉದ್ಯೋಗ ಖಾತರಿ ಯೋಜನೆ ಅನುಷ್ಠಾಕ್ಕೆ ಗ್ರಾಮಸಭೆಗಳು ಎಲ್ಲಿ ನಡೆದಿರುವುದರ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಗ್ರಾಮಪಂಚಾಯತಿ	0	0.00	1	0.50	1	0.25
ತಾಲ್ಲೂಕು ಪಂಚಾಯತಿ	0	0.00	0	0.00	0	0.00
ಗುತ್ತಿಗರದಾರರ ಮನೆಯಲ್ಲಿ	32	16.00	26	13.00	58	14.50
ಗ್ರಾಮದ ಮುಖಂಡರ ಮನೆಯಲ್ಲಿ	0	0.00	0	0.00	0	0.00
ಗೊತ್ತಿಲ್ಲ	168	84.00	173	86.50	341	85.25
ಒಟ್ಟು	200	100.00	200	100.00	400	100.00

ಸ್ತಂಭ ರೇಖಾ ಚಿತ್ರ : 36

ಉದ್ಯೋಗ ಖಾತರಿ ಯೋಜನೆ ಅನುಷ್ಠಾಕ್ಕೆ ಗ್ರಾಮಸಭೆಗಳು ಎಲ್ಲಿ ನಡೆದಿರುವುದರ ವಿವರ



ಉದ್ಯೋಗ ಖಾತರಿ ಯೋಜನೆ ಕಾಮಗಾರಿಗಳ ಆಯ್ಕೆಯ ತೀರ್ಮಾನ, ಅನುಷ್ಠಾಕ್ಕೆ ಗ್ರಾಮಸಭೆಗಳು ಎಲ್ಲಿ ನಡೆದಿವೆ ಎನ್ನುವುದಕ್ಕೆ ಗುತ್ತಿಗೆದಾರರ ಮನೆಯಲ್ಲಿ ನಡೆದಿರುವವು ಎಂದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 16ರಷ್ಟು ಕಂಡುಬಂದರೆ, ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 13ರಷ್ಟು ಕಂಡು ಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಗಳಿಂದ ಶೇಕಡ 14.50ರಷ್ಟು ಕಂಡುಬರುತ್ತದೆ. ವಿಶೇಷವಾಗಿ ಅವಲೋಕಿಸುವುದಾದರೆ ಗ್ರಾಮಸಭೆಗಳು ನಡೆದಿರುವ ಮಾಹಿತಿಯೇ ಇಲ್ಲ ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 84ರಷ್ಟು ಕಂಡು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 86.50ರಷ್ಟು ಕಂಡು ಬರುತ್ತದೆ. ಎರಡು ಪಂಚಾಯತಿಗಳಿಂದ ಒಟ್ಟಾರೆ ಶೇಕಡ 85.25ರಷ್ಟು ಗ್ರಾಮಸಭೆಗಳು ನಡೆದಿರುವುದಿಲ್ಲ ಎನ್ನುವುದು ಅಧ್ಯಯನದಿಂದ ಕಂಡುಬರುತ್ತದೆ.

6.10. ಕಾಮಗಾರಿಗಳ ಆಯ್ಕೆ ಮಾಡಿದವರು ಯಾರು

1952ರಿಂದಲೂ ಸಮುದಾಯ ಅಭಿವೃದ್ಧಿ ಯೋಜನೆಗಳನ್ನೊಳಗೊಂಡಂತೆ ಪಂಚವಾರ್ಷಿಕ ಯೋಜನೆಗಳನ್ನು ಭಾರತದಲ್ಲಿ ಬಹು ಪ್ರಕಾರದ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಸರ್ಕಾರ ಅನುಷ್ಠಾನ ಮಾಡುತ್ತಾ ಬಂದಿರುವುದು. ಆ ಯೋಜನೆಗಳಲ್ಲಿ ಕೆಲವು ಮಾತ್ರ ಆಯ್ಕೆ ತೀರ್ಮಾನ ಸಮುದಾಯದಾಗಿರುವುದು. ಇನ್ನು ಅನೇಕ ಯೋಜನೆಗಳು ಅನುಷ್ಠಾನ ಮಾಡುವಲ್ಲಿ ಜನರ ತೀರ್ಮಾನ ವಾಗದೇ ಬದಲಿಗೆ ಜನಪ್ರತಿನಿಧಿಗಳ ಹಾಗೂ ಇಲಾಖೆ ಸಿಬ್ಬಂದಿಗಳ ಯೋಜನೆಯ ಕಾಮಗಾರಿಗಳನ್ನು ತೀರ್ಮಾನವಾಗಿರುವುದರಿಂದ ಯೋಜನೆಗಳು ವೈಫಲ್ಯ ಕಂಡಿರುವುದನ್ನು ಅನೇಕ

ಅಧ್ಯಯನಗಳು ಈ ವೈಫಲ್ಯಗಳನ್ನು ದೃಢಪಡಿಸಿರುವವು. ಈ ಹಿನ್ನೆಯಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನ ಮಾಡುತ್ತಿರುವುದರಿಂದ ಯೋಜನೆಗಳು ಸುಸ್ಥಿರ ಅಭಿವೃದ್ಧಿಯಾಗಬೇಕೆಂದರೆ ಜನರು ಬೇಕು ಬೇಡಗಳ ತೀರ್ಮಾನ ಜನರದಾಗಬೇಕು ಎಂದು ವಿಶ್ವಬ್ಯಾಂಕ್ ಸಲಹೆಯ ಮೇರೆಗೆ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ ಯಾವುದೇ ಅಭಿವೃದ್ಧಿ ಯೋಜನೆಗಳು ಜನರ ಭಾಗವಹಿಸುವಿಕೆಯ ಮತ್ತು ಅವರ ತೀರ್ಮಾನದಂತೆ ಅನುಷ್ಠಾನವಾಗಬೇಕು. ಅವರ ಮಾರ್ಗದರ್ಶನದಡಿ ಅನುಷ್ಠಾನವಾಗಬೇಕು. ಉದ್ಯೋಗ ಖಾತರಿ ಕಾಯಿದೆಯಲ್ಲಿಯೂ ಜನರ ತೀರ್ಮಾನ ಈ ಯೋಜನೆಯಲ್ಲಿ ಪ್ರಮುಖ ಮತ್ತು ಕಡ್ಡಾಯವಾಗಿರುವುದು. ಈ ಅಧ್ಯಯನ ಕ್ಷೇತ್ರದಲ್ಲಿ ಜನರು ಅಥವಾ ಸಮುದಾಯ ತೀರ್ಮಾನ ಹೇಗಿದೆ ಎಂಬುದನ್ನು ತಿಳಿಸುತ್ತದೆ.


ಕೋಷ್ಟಕ : 6.4

ಕಾಮಗಾರಿಗಳ ಆಯ್ಕೆ ಮಾಡಿದವರು ಯಾರು

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ನಮ್ಮ ಗ್ರಾಮಸ್ಥರ	23	11.50	10	5.00	33	8.25
ಗ್ರಾಮಪಂಚಾಯತಿಯ	51	25.50	44	22.00	95	23.75
ಗುತ್ತಿಗೆದಾರರ	62	31.00	71	35.50	133	33.25
ಚುನಾಯಿತ ಪ್ರತಿನಿಧಿಗಳ	61	30.50	45	22.50	106	26.50
ಗ್ರಾಮದ ಮುಖಂಡರ		0.00	1	0.50	1	0.25
ಗೊತ್ತಿಲ್ಲ	3	1.50	24	12.00	27	6.75
ತಾಲ್ಲೂಕು ಪಂಚಾಯತಿ ಅಧಿಕಾರಿಗಳು	0	0.00	2	1.00	2	0.50
ಗ್ರಾ.ಪಂ ಪಿ.ಡಿ.ಒ	0	0.00	3	1.50	3	0.75
ಒಟ್ಟು	200	100.00	200	100.00	400	100.00

ಸ್ತಂಭ ರೇಖಾ ಚಿತ್ರ : 37

ಕಾಮಗಾರಿಗಳ ಆಯ್ಕೆ ಮಾಡಿದವರು ಯಾರು



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಕಾಮಗಾರಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಕಾಯಿದೆ ಪ್ರಕಾರ ತೀರ್ಮಾನಗಳು ಕೈಗೊಂಡಿರುವರು. ಯಾವ ಪ್ರಮಾಣದಲ್ಲಿ ನಡೆದಿವೆ ಎನ್ನುವುದಕ್ಕೆ ಗುತ್ತಿಗೆದಾರರೇ ತೀರ್ಮಾನಿಸಿರುವುದನ್ನು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 31ರಷ್ಟು ಆದರೆ, ಗ್ರಾಮಪಂಚಾಯತಿ ಪ್ರತಿನಿಧಿಗಳ ತೀರ್ಮಾನ ಶೇಕಡ 30ರಷ್ಟು ಕಂಡು ಬರುವುದು, ಮತ್ತು ಗ್ರಾಮಪಂಚಾಯತಿಯ ತೀರ್ಮಾನ ಶೇಕಡ 25.50ರಷ್ಟು ಕಂಡುಬರುವುದು. ಹಾಗೆಯೇ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಗುತ್ತಿಗೆದಾರರ ತೀರ್ಮಾನ ಶೇಕಡ 35.50ರಷ್ಟು ಆದರೆ, ಗ್ರಾಮಪಂಚಾಯತಿ ಪ್ರತಿನಿಧಿಗಳ ತೀರ್ಮಾನ ಶೇಕಡ 22.50ರಷ್ಟು ಕಂಡು ಬರುವುದು ಮತ್ತು ಗ್ರಾಮಪಂಚಾಯತಿಯ ತೀರ್ಮಾನ ಶೇಕಡ 22ರಷ್ಟು ಕಂಡುಬರುವುದು. ಎರಡು ಗ್ರಾಮಪಂಚಾಯತಿಗಳನ್ನು ವಿಶ್ಲೇಷಿಸಿದರೆ ಬೆಲವತ್ತ ಗ್ರಾಮಪಂಚಾಯತಿಗಿಂತ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಗುತ್ತಿಗೆದಾರರ ಸಂಖ್ಯೆ ಹೆಚ್ಚು ಇರುವುದು ಕಂಡುಬರುತ್ತದೆ. ಉಳಿದ ಎರಡು ಗ್ರಾಮಪಂಚಾಯತಿಗಳಲ್ಲಿ ಗ್ರಾಮಪಂಚಾಯತಿ ಮತ್ತು ಜನಪ್ರತಿನಿಧಿಗಳು ಹೆಚ್ಚು ಕಂಡುಬರುವುದು.

6.11. ಸಾಮಾಜಿಕ ಲೆಕ್ಕ ಪತ್ರದ ಪರಿಶೀಲನೆ ವಿವರ

ಅಭಿವೃದ್ಧಿ ಯೋಜನೆಗಳ ಚರಿತ್ರೆಯನ್ನು ಗಮನಿಸಿದರೆ ಅಭಿವೃದ್ಧಿಗಾಗಿ ಅನೇಕ ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ಸರ್ಕಾರ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಮಾಡಿರುವುದು. ಆ ಯೋಜನೆಗಳ ಉದ್ದೇಶಗಳು ಎಷ್ಟರ ಮಟ್ಟಿಗೆ ತನ್ನ ಆಶಯಗಳು ಪೂರೈಸಿವೆ? ಎನ್ನುವುದಕ್ಕೆ ಅನುಷ್ಠಾನದ ಸಂಸ್ಥೆಗಳು ಉತ್ತರಿಸಲು ಹಿಂದೆ ಸರಿಯುತ್ತವೆ. ಕಾಲ ವ್ಯಯವಾಗುವುದರ ಜೊತೆಗೆ ಶ್ರಮ ಮತ್ತು ನಿರೀಕ್ಷಿತ ಫಲಿತಾಂಶವಿಲ್ಲದೆ ಹಣ ಖರ್ಚಾಗುವುದು. ಪ್ರಶ್ನಿಸಲು ಹಿಂದೆ ಯಾವ

ಮಾನದಂಡವು ಇಲ್ಲದೆ ಇರುವುದು ಈ ವೈಫಲ್ಯತೆ ಕಾರಣವೂ ಆಗಿರುವುದು. ಅನುಷ್ಠಾನವಾಗಿರುವ ಕಾಮಗಾರಿಗಳ ಲೆಕ್ಕ ಪರಿಶೀಲನೆ ಸಮುದಾಯ ಭಾಗವಹಿಸುವ ಮೂಲಕವಾಗಿಯೇ ಸಾಮಾಜಿಕ ಲೆಕ್ಕ ಪರಿಶೋಧನೆ ಮಾಡಬೇಕು ಎನ್ನುವುದು ಕಾಯಿದೆಯಲ್ಲಿ ಕಡ್ಡಾಯಗೊಳಿಸಿದೆ. ಇದರಿಂದ ಯೋಜನೆ ರೂಪಿಸುವಾಗ ಅನುಷ್ಠಾನ ಮಾಡುವಾಗ ಸಮುದಾಯ ಭಾಗವಹಿಸುವಿಕೆ ಮುಖೇನ ನಡೆಯಬೇಕು. ಸಮುದಾಯ ಭಾಗವಹಿಸುವಿಕೆ ಮೂಲಕ ಲೆಕ್ಕ ಪರಿಶೋಧನೆ ನಡೆದು ಯೋಜನಾ ಮಾರ್ಗಸೂಚಿ ಮೂಲಕ ಸಮುದಾಯ ಒಪ್ಪಿಕೊಂಡ ಎಂಬ ವರದಿಗಳನ್ನು ಸರ್ಕಾರ ಸಲ್ಲಿಸಬೇಕು ಎನ್ನುವುದನ್ನು ಈ ಅಧ್ಯಯನ ಕ್ಷೇತ್ರದಲ್ಲಿ ಸಾಮಾಜಿಕ ಲೆಕ್ಕ ಪತ್ರ ನಡೆದಿದೆ, ಇಲ್ಲವೋ ಅಥವಾ ಗೊತ್ತಿಲ್ಲ ಎನ್ನುವುದನ್ನು ಅಧ್ಯಯನ ತಿಳಿಸುತ್ತದೆ.


ಕೋಷ್ಟಕ: 6.5

ಉದ್ಯೋಗ ಖಾತರಿ ಕಾಯಿದೆಯಲ್ಲಿ ಸಾಮಾಜಿಕ ಲೆಕ್ಕ ಪತ್ರದ ಪರಿಶೀಲನೆ ವಿವರ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಸಾಮಾಜಿಕ ಲೆಕ್ಕ ಪತ್ರ ನಡೆದಿದೆ	ಒಂದು ಸಾರಿ	0	0.00	0	0.00	0	0.00
	ಎರಡು ಸಾರಿ	0	0.00	0	0.00	0	0.00
	ಸಾಮಾಜಿಕ ಲೆಕ್ಕ ಪತ್ರಗಳು ನಡೆದಿಲ್ಲ	0	0.00	58	29.00	58	14.50
	ಸಾಮಾಜಿಕ ಲೆಕ್ಕ ಪತ್ರದ ಮಾಹಿತಿಯೇ ಗೊತ್ತಿಲ್ಲ	200	100.00	142	71.00	342	85.50
ಒಟ್ಟು		**200**	**100.00**	**200**	**100.00**	**400**	**100.00**

ಸ್ತಂಭ ರೇಖಾಚಿತ್ರ : 38

ಉದ್ಯೋಗ ಖಾತರಿ ಕಾಯಿದೆಯಲ್ಲಿ ಸಾಮಾಜಿಕ ಲೆಕ್ಕ ಪತ್ರದ ಪರಿಶೀಲನೆ ವಿವರ



ಸಾಮಾಜಿಕ ಲೆಕ್ಕ ಪರಿಶೋಧನೆ ಈ ಅಧ್ಯಯನ ಕ್ಷೇತ್ರದಲ್ಲಿ ನಡೆದಿದೆಯೇ? ಹೇಗೆ ನಡೆದಿದೆ? ಸಾಮಾಜಿಕ ಲೆಕ್ಕ ಪರಿಶೋಧನೆ ಯಾರು ಮಾಡುತ್ತಾರೆ? ಎನ್ನುವುದಕ್ಕೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100ರಷ್ಟು ಯಾರಿಗೂ ಮಾಹಿತಿ ಇಲ್ಲದಿರುವುದು ಕಂಡುಬಂದರೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 97.50ರಷ್ಟು ಇಲ್ಲಿಯೂ ಇದರ ಬಗ್ಗೆ ಮಾಹಿತಿ ಇಲ್ಲದೆ ಇರುವುದು ಈ ಅಧ್ಯಯನ ಗುರುತಿಸಿದೆ.

6.12. ಸಾಮಾಜಿಕ ಲೆಕ್ಕಪತ್ರ ಯಾರು ಮಾಡುತ್ತಾರೆ

ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಲೆಕ್ಕ ಪತ್ರ ಪ್ರಮುಖವಾದ ಪಾತ್ರವಹಿಸುವುದು. ಆದರೆ ಉದ್ಯೋಗ ಖಾತರಿ ಕಾಯಿದೆ ಯೋಜನೆಗಿಂತ ಪೂರ್ವದಲ್ಲಿ ಅಭಿವೃದ್ಧಿ ಯೋಜನೆಗಳಲ್ಲಿ ಸಾಮಾಜಿಕ ಲೆಕ್ಕ ಪತ್ರ ಅಷ್ಟಾಗಿ ಗಮನಿಸದಿರುವುದು ಅನೇಕ ಅಧ್ಯಯನದಿಂದ ತಿಳಿಯುತ್ತದೆ. ಇದನ್ನು ಯಾರು ಮಾಡುತ್ತಾರೆ ಎನ್ನುವುದಕ್ಕೆ ಜಿಲ್ಲಾ ಪಂಚಾಯತಿ, ತಾಲ್ಲೂಕ್ ಪಂಚಾಯತಿ ಮಟ್ಟದಿಂದ ಸಾಮಾಜಿಕ ಲೆಕ್ಕ ಪತ್ರಕ್ಕೆ ನೇಮಕ ಮಾಡುತ್ತಾರೆ. ಅವರು ಯಾರು, ಯಾವಾಗ ಸಾಮಾಜಿಕ ಲೆಕ್ಕ ಪತ್ರ ಮಾಡಬೇಕು ಎನ್ನುವುದಕ್ಕೆ ಒಂದು ಆರ್ಥಿಕ ವರ್ಷದ ಕೊನೆಯಲ್ಲಿ ಮಾಡಬೇಕು ಮತ್ತು ಆ ಮಾಹಿತಿ ಜನರಿಗೆ ತಿಳಿದಿರಬೇಕು ಎನ್ನುವುದನ್ನು ಅಧ್ಯಯನ ತಿಳಿಸುತ್ತದೆ.

ಕೋಷ್ಟಕ: 6.6

ಸಾಮಾಜಿಕ ಲೆಕ್ಕ ಪತ್ರ ಯಾರು ಮಾಡುತ್ತಾರೆ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಜಿಲ್ಲಾ ಪಂಚಾಯತಿ ವತಿಯಿಂದ	0	0.00	0	0.00	0	0.00
ತಾಲ್ಲೂಕು ಪಂಚಾಯತಿ ವತಿಯಿಂದ	0	0.00	4	2.00	4	1.00
ಗ್ರಾಮಪಂಚಾಯತಿ ವತಿಯಿಂದ	0	0.00	1	0.50	1	0.25
ಗೊತ್ತಿಲ್ಲ	200	100.00	195	97.50	395	98.75
ಒಟ್ಟು	200	100.00	200	100.00	400	100.00

ಸ್ತಂಭ ರೇಖಾ ಚಿತ್ರ : 39

ಸಾಮಾಜಿಕ ಲೆಕ್ಕ ಪತ್ರ ಯಾರು ಮಾಡುತ್ತಾರೆ



ಸಾಮಾಜಿಕ ಲೆಕ್ಕ ಪರಿಶೋಧನೆ ಯಾರು ಮಾಡಬೇಕು ಮತ್ತು ನಿರ್ದಿಷ್ಟವಾಗಿ ಎಲ್ಲಿ ಮಾಡಬೇಕು ಎನ್ನುವ ಪ್ರಶ್ನೆಗಳಿಗೆ ಅಧ್ಯಯನ ಕ್ಷೇತ್ರದಲ್ಲಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100ರಷ್ಟು ಇದರ ಬಗ್ಗೆ ಮಾಹಿತಿ ಇಲ್ಲದಿರುವುದು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 98.75ರಷ್ಟು ಇಲ್ಲಿಯೂ ಇದರ ಬಗ್ಗೆ ಮಾಹಿತಿ ಇರುವುದು ವ್ಯಕ್ತವಾಗುತ್ತದೆ.

6.13 ಅಧಿಕಾರಿಗಳಿಂದ ತಪಾಸಣಾ ಸೌಲಭ್ಯ

ಯೋಜನೆಗಳ ಸಫಲತೆ ಮತ್ತು ವಿಫಲತೆಗೆ ನೌಕರ ಶಾಹಿವರ್ಗ ಪ್ರಮುಖ ಪಾತ್ರವಹಿಸುವುದು. ಮೇಲ್ಮಟ್ಟದಿಂದ ತಳಮಟ್ಟದವರೆಗೆ ಎಲ್ಲ ಹಂತಗಳಲ್ಲೂ ಅಧಿಕಾರಿಗಳು ಯೋಜನೆಗಳಿಗೆ ಪೂರಕ ಮತ್ತು ಯೋಜನೆಗಳನ್ನು ಎಲ್ಲಾ ಹಂತಗಳಲ್ಲೂ ಅಧಿಕಾರಿಗಳಿಂದ ತಪಾಸಣೆ ಮಾಡುವುದು ಕಾಯಿದೆಯಲ್ಲಿ ಸೂಚಿಸಿದೆ. ಈ ಎರಡು ಗ್ರಾಮಪಂಚಾಯತಿಗಳಲ್ಲಿ ತಪಾಸಣಾ ಮಾಡಿರುವುದರ ಬಗ್ಗೆ ಈ ಅಧ್ಯಯನ ಕ್ಷೇತ್ರದಲ್ಲಿ ಮಾಹಿತಿಯೇ ಇಲ್ಲದ್ದು ತಿಳಿಸುತ್ತದೆ.


ಕೋಷ್ಟಕ : 6.7

ಅಧಿಕಾರಿಗಳಿಂದ ತಪಾಸಣಾ ಸೌಲಭ್ಯ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	0	0.00	0	0.00	0	0.00
ಇಲ್ಲ	200	100.00	200	100.00	400	100.00
ಒಟ್ಟು	200	100.00	200	100.00	400	100.00

ಸ್ತಂಭ ರೇಖಾಚಿತ್ರ : 40

ಅಧಿಕಾರಿಗಳಿಂದ ತಪಾಸಣಾ ಸೌಲಭ್ಯ



ಯೋಜನೆಗಳ ಅನುಷ್ಠಾನ ಹೇಗೆ ನಡೆಯಬೇಕು, ಎನ್ನುವ ಮಾರ್ಗಸೂಚಿ ಇಟ್ಟುಕೊಂಡು ಸರಿಯಾದ ದಾರಿಯಲ್ಲಿ ನಡೆಸಲು ಲೋಪದೋಷಗಳನ್ನು ತಡೆಯಲು ಅಧಿಕಾರಿಗಳು ಮತ್ತೆ ಯೋಜನಾ ಕ್ಷೇತ್ರದಲ್ಲಿ ಮೇಲ್ವಿಚಾರಣೆ ಮತ್ತು ತಪಾಸಣೆ ಮಾಡಲು ಕಾಯಿದೆ ತಿಳಿಸಿರುವುದು. ಈ ಪ್ರಕಾರವಾಗಿ ಅಧ್ಯಯನ ಕ್ಷೇತ್ರದಲ್ಲಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100ರಷ್ಟು ತಪಾಸಣೆ ಮಾಡಿಲ್ಲದೆ ಇರುವುದು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿಯೂ ಸಹ ಶೇಕಡ 100ರಷ್ಟು ತಪಾಸಣೆ ಮಾಡಿಲ್ಲದ್ದು ಮತ್ತು ತಪಾಸಣೆ ಬಗ್ಗೆ ಮಾಹಿತಿಯೇ ಇಲ್ಲದಿರುವುದು ಈ ಅಧ್ಯಯನ ತಿಳಿಸುತ್ತದೆ.

6.14. ಸಾಮಾಜಿಕ ಲೆಕ್ಕ ಪತ್ರದಲ್ಲಿ ಕೂಲಿ ಕಾರ್ಮಿಕರು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ನಿರ್ದಿಷ್ಟ ಸೂಚನಾ ಗುಂಪುಗಳನ್ನು ತೊಡಗಿಸಿಕೊಳ್ಳುವುದು ಕಾಯಿದೆಯ ವಿಶೇಷ ನಿಯಮವಾಗಿರುವುದು. ಕಾಯಿದೆಯಡಿ ಕೆಲಸ ಮಾಡುವವರು ಕೂಲಿಕಾರರೇ ಆಗಿರುವುದರಿಂದ ಅವರಿಗೆ ಉದ್ಯೋಗದ ಹಕ್ಕು ನೀಡಿರುವುದು ಕಾಯಿದೆಯ ನಿಯಮವಾಗಿರುತ್ತದೆ. ಕಾಯಿದೆಯಡಿ ಗ್ರಾಮಪಂಚಾಯತಿ ಕೂಲಿಕಾರರಿಗೆ ನೀಡುವ ಪ್ರೇರಣೆ, ಭತ್ಯೆ, ಕೂಲಿ ವೇತನ ಸೌಕರ್ಯಗಳು ನೀಡುವ ಒಟ್ಟು ಮಾನವ ದಿನಗಳು, ಕೂಲಿ ಪಡೆಯುವ ವಿಧಾನ, ಮಾಡುವ ಕೆಲಸ ಮುಂತಾದವುಗಳನ್ನು ನ್ಯಾಯಯುತವಾಗಿ ಚರ್ಚಿಸುವ ಪ್ರಶ್ನಿಸುವ ದಾಖಲಿಸುವ ಕೂಲಿಕಾರರಿಗೆ ಸಾಮಾಜಿಕ ಲೆಕ್ಕ ಪರಿಶೀಲನೆಯಲ್ಲಿ ಅವಕಾಶ ನೀಡಿದೆ. ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ನಡೆದಿರುವುದನ್ನು ಈ ಕೋಷ್ಟಕದಲ್ಲಿ ವ್ಯಕ್ತವಾಗುತ್ತದೆ.




ಕೋಷ್ಟಕ : 6.8

ಸಾಮಾಜಿಕ ಲೆಕ್ಕ ಪತ್ರದಲ್ಲಿ ಕೂಲಿಕಾರ್ಮಿಕರು

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಹೌದು	0	0	0	0	0	0
ಇಲ್ಲ	200	100.00	200	100	400	100.00
ಒಟ್ಟು	200	100.00	200	100	400	100.00

ಸ್ತಂಭ ರೇಖಾಚಿತ್ರ : 41

ಸಾಮಾಜಿಕ ಲೆಕ್ಕ ಪತ್ರದಲ್ಲಿ ಕೂಲಿಕಾರ್ಮಿಕರು



ಸಾಮಾಜಿಕ ಲೆಕ್ಕ ಪರಿಶೀಲನೆಗೆ ಸಂಬಂಧಿಸಿದಂತೆ ಕೂಲಿಕಾರರನ್ನು ಸಾಮಾಜಿಕ ಲೆಕ್ಕ ಪತ್ರದಲ್ಲಿ ತೊಡಗಿಸಿಕೊಂಡಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 0.00ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 0.00ರಷ್ಟು ಕಂಡು ಬಂದರೆ ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 0.00ರಷ್ಟು ಕಂಡು ಬಂದಿರುವುದು ಅಧ್ಯಯನ ಕ್ಷೇತ್ರದಲ್ಲಿ ಗ್ರಾಮಪಂಚಾಯತಿ ಸಾಮಾಜಿಕ ಲೆಕ್ಕ ಪತ್ರದಲ್ಲಿ ಎಲ್ಲಿಯೂ ತೊಡಗಿಸಿಕೊಳ್ಳದೇ ಕೂಲಿಕಾರರನ್ನು ದೂರ ಇಟ್ಟಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ.

6.15. ಲೋಪದೋಷಗಳು ಮತ್ತು ಗ್ರಾಮಪಂಚಾಯತಿ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಅನುಷ್ಠಾನದ ಸಂದರ್ಭದಲ್ಲಿ ಏನೇ ಲೋಪದೋಷಗಳು ಬಂದರೂ ತಕ್ಷಣವೇ ಗ್ರಾಮಪಂಚಾಯತಿಯ ಗಮನಕ್ಕೆ ತಂದು ಸಮಸ್ಯೆಗಳನ್ನು

ಬಿಡಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ನಡೆದಿರುವ ಲೋಪದೋಷಗಳನ್ನು ಗ್ರಾಮಪಂಚಾಯತಿಯ ಗಮನಕ್ಕೆ ತಂದಿರುವುದನ್ನು ಪ್ರಸ್ತುತ ಅಧ್ಯಯನವು ತಿಳಿಸುತ್ತದೆ.


ಕೋಷ್ಟಕ : 6.9

ಲೋಪದೋಷಗಳು ಮತ್ತು ಗ್ರಾಮಪಂಚಾಯತಿ

		ಬೆಲವತ್ತ		ದೊಡ್ಡೇರಿ		ಒಟ್ಟು	
		ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಕೂಲಿಕಾರರನ್ನು ತೊಡಗಿಸಿಕೊಂಡಿದ್ದರೆ	ರಾ.ಗ್ರಾ.ಉ.ಖಾ.ಕಾ ಬಗ್ಗೆ ಮಾಹಿತಿ ನೀಡದಿರುವುದು	0	0.00	0	0.00	0	0.00
	ಜಾಬ್ ಕಾರ್ಡ ನೀಡದಿರುವುದು	0	0.00	0	0.00	0	0.00
	ಕೆಲಸ ನೀಡದಿರುವುದು	0	0.00	0	0.00	0	0.00
	ಸಮಯಕ್ಕೆ ಸರಿಯಾಗಿ ಕೂಲಿ ನೀಡದಿರುವುದು	0	0.00	0	0.00	0	0.00
	ಕಾಮಗಾರಿ ನಡೆಯುವ ಸ್ಥಳ ದಲ್ಲಿ ಸೌಲಭ್ಯಗಳನ್ನು ಒದಗಿ ಸದಿರುವುದು	0	0.00	0	0.00	0	0.00
	ಬೇಡಿಕೆ ಆಧಾರಿತ ಕಾಮಗಾರಿ ಗಳನ್ನು ಅನುಷ್ಟಾನ ಮಾಡದಿರುವುದು	0	0.00	0	0.00	0	0.00
	ಕಳಪೆ ಕಾಮಗಾರಿಗಳು	0	0.00	0	0.00	0	0.00
	ಯಂತ್ರಗಳ ಬಳಕೆ	0	0.00	0	0.00	0	0.00
	ಗುತ್ತಿಗೆದಾರರ ಆಗಮನ	0	0.00	0	0.00	0	0.00
	ಒಂದು ಕೆಲಸಕ್ಕೆ ಎರಡು ಬಿಲ್ಲು	0	0.00	0	0.00	0	0.00
	ವಾರ್ಡ ಮತ್ತು ಗ್ರಾಮ ಸಭೆಯಲ್ಲಿ ಗುರ್ತಿಸಿಲ್ಲದ ಕಾಮಗಾರಿಗಳ ಅನುಷ್ಟಾನ	0	0.00	0	0.00	0	0.00
	ಕೂಲಿ ಕಾರರನ್ನು ತೊಡಗಿಸಿ ಕೊಂಡಿರುವುದಿಲ್ಲ	200	100.00	200	100.00	400	100.00
ಒಟ್ಟು		**200**	**100.00**	**200**	**100.00**	**400**	**100.00**

ಸ್ತಂಭ ರೇಖಾಚಿತ್ರ : 42

ಲೋಪದೋಷಗಳು ಮತ್ತು ಗ್ರಾಮಪಂಚಾಯತಿ



ಯೋಜನೆಯನ್ನು ಅನುಷ್ಠಾನ ಮಾಡುವ ಸಂದರ್ಭದಲ್ಲಿ ಕೂಲಿಕಾರರನ್ನು ತೊಡಗಿಸಿಕೊಂಡಿಲ್ಲದೇ ಇರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 100.00ರಷ್ಟು ಕಂಡುಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 100.00ರಷ್ಟು ಕಂಡುಬರುತ್ತದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಯಿಂದ ಶೇಕಡ 100.00ರಷ್ಟನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡು ಬರುತ್ತದೆ.

6.16. ಯೋಜನೆಯಲ್ಲಿ ತೃಪ್ತಿ ಇದೆ ಇಲ್ಲದಿರುವುದರ ವಿವರ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪಂಚಾಯತ್‌ರಾಜ್ ಸಂಸ್ಥೆಗಳು ಅನುಷ್ಠಾನ ಮಾಡಲಾಗಿದ್ದು ಯೋಜನಾ ಸೌಲಭ್ಯಗಳು ಕೂಲಿಕಾರರಿಗೆ ದೊರಕಿವೆಯೇ ಎನ್ನುವುದು ಕಂಡು ಬರುತ್ತದೆ. ಯಾವ ಸೌಲಭ್ಯಗಳಿಂದ ಜನರಿಗೆ ತೃಪ್ತಿ ಸಿಕ್ಕಿದೆ, ಯಾವ ಸೌಲಭ್ಯಗಳಿಂದ ತೃಪ್ತಿ ಸಿಕ್ಕಿಲ್ಲ, ಯಾವ ಪ್ರಮಾಣದಲ್ಲಿ ತೃಪ್ತಿ ಸಿಕ್ಕಿಲ್ಲ ಇದರಿಂದ ಯೋಜನೆ ಯಶಸ್ವಿಯಾಗಿದೆಯೇ ಎನ್ನುವುದು ಈ ಅಧ್ಯಯನ ಗುರುತಿಸಿದೆ.


ಕೋಷ್ಟಕ : 6.10

ಯೋಜನೆಯಲ್ಲಿ ತೃಪ್ತಿ ಇದೆ ಇಲ್ಲದಿರುವುದರ ವಿವರ

	ಬೆಲವತ್ತ		ದೊಡ್ಡೇರಿ		ಒಟ್ಟು	
	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ	ಆವೃತ್ತಿ	ಶೇಕಡ
ಯೋಜನೆಯಲ್ಲಿ ತೃಪ್ತಿ ಇದೆ	12	6.00	23	11.50	35	8.75
ಗ್ರಾಮಪಂಚಾಯತಿಯಿಂದ ಮಾಹಿತಿ ಇಲ್ಲದಿರುವುದು	62	31.00	74	37.00	136	34.00

ಯೋಜನೆಯಲ್ಲಿ ತೃಪ್ತಿ ಇಲ್ಲದಿದ್ದರೆ	ಅರ್ಜಿಹಾಕಿದ ಮೇಲೆ ಸಮಯಕ್ಕೆ ಸರಿಯಾಗಿ ಕೆಲಸ ಕೊಡದಿರುವುದು	54	27.00	46	23.00	100	25.00
	ಕೆಲಸ ಮಾಡಿದ ಮೇಲೆ ಕೂಲಿ ಸರಿಯಾಗಿ ಕೊಡದಿರುವುದು	33	16.50	19	9.50	52	13.00
	ಕೆಲಸದ ಸ್ಥಳದಲ್ಲಿ ಅಗತ್ಯ ಸೌಲಭ್ಯಗಳನ್ನು ನೀಡದಿರುವುದು	23	11.50	26	13.00	49	12.25
	ನಿರುದ್ಯೋಗದ ಭತ್ಯೆ ಕೊಡದಿರುವುದು	16	8.00	12	6.00	28	7.00
ಒಟ್ಟು		**200**	**100.00**	**200**	**100.00**	**400**	**100.00**

ಸ್ತಂಭ ರೇಖಾಚಿತ್ರ : 43
ಯೋಜನೆಯಲ್ಲಿ ತೃಪ್ತಿ ಇದೆ ಇಲ್ಲದಿರುವುದರ ವಿವರ



ಉದ್ಯೋಗ ಖಾತರಿ ಕಾಯಿದೆಯಡಿ ಯೋಜನೆಯನ್ನು ಅನುಷ್ಠಾನ ಮಾಡಲಾಗಿದ್ದು, ಇದು ಜನರಿಗೆ ತೃಪ್ತಿ ತಂದಿರುವುದರ ಬಗ್ಗೆ ಅವಲೋಕಿಸಿದರೆ, ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 6.00ರಷ್ಟು ಕಂಡು ಬಂದಿದ್ದು, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 11.50ರಷ್ಟು ಕಂಡುಬಂದಿದೆ. ಒಟ್ಟಾರೆ ಎರಡು ಗ್ರಾಮಪಂಚಾಯತಿಗಳಿಂದ ಶೇಕಡ 8.75ರಷ್ಟು ಪ್ರಮಾಣದಲ್ಲಿ ತೃಪ್ತಿ ತಂದಿರುವುದು ಕಂಡುಬಂದಿದೆ. ಒಟ್ಟು ಪ್ರಮಾಣವನ್ನು ಅವಲೋಕಿಸಿದಾಗ ತೃಪ್ತಿ ಪಡೆದವರ ಪ್ರಮಾಣ ಅತ್ಯಲ್ಪವಾಗಿರುವುದನ್ನು ಕಾಣಬಹುದಾಗಿದೆ. ಇದರ ಒಳಗಿನ ಸತ್ಯಾಸತ್ಯತೆಗಳನ್ನು ಗಮನಿಸಿದಾಗ ಅತೃಪ್ತಿಗೆ ಅನೇಕ ಕಾರಣಗಳು ಗೋಚರಿಸುತ್ತವೆ. ಅವುಗಳಲ್ಲಿ ಪ್ರಮುಖವಾದದು ಕೂಲಿಕಾರರಿಗೆ, ಸಾಮಾನ್ಯ ಜನರಿಗೆ, ಮಹಿಳೆಯರಿಗೆ ಗ್ರಾಮಪಂಚಾಯತಿಯಿಂದ ಮಾಹಿತಿ ದೊರೆಯದೇ ಇರುವುದು ಮತ್ತು 100 ದಿನಗಳ ಉದ್ಯೋಗ ಜನರಿಗೆ ದೊರೆಯದೇ ಇರುವುದು ಅತೃಪ್ತಿಗೆ ಮುಖ್ಯ ಕಾರಣಗಳಾಗಿ

ಕಂಡುಬರುತ್ತವೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 31.00ರಷ್ಟು ಕಂಡು ಬಂದರೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 37.00ರಷ್ಟು ಕಂಡುಬಂದಿದೆ. ಒಟ್ಟಾರೆ ಅತೃಪ್ತಿಯ ಪ್ರಮಾಣ ಎರಡು ಗ್ರಾಮಪಂಚಾಯತಿಯಿಂದ ಶೇಕಡ 34.00ರಷ್ಟು ಕಂಡು ಬಂದಿದೆ.

ಪ್ರಸ್ತುತ ಅಧ್ಯಯನದ ಮೂಲಕ ಎರಡು ಗ್ರಾಮಪಂಚಾಯತಿಯ ಕಾರ್ಯವ್ಯಾಪ್ತಿಯ ಹಿನ್ನೆಲೆಯನ್ನು ಗಮನಿಸಿದಾಗ ಉದ್ಯೋಗ ಖಾತರಿ ಯೋಜನೆಯ ಮೂಲ ಆಶಯಗಳಾದ 100 ದಿನಗಳ ಉದ್ಯೋಗ ಒದಗಿಸುವುದು, ಜನರಿಂದಲೇ ದೀರ್ಘಕಾಲೀನ ಆಸ್ತಿಗಳನ್ನು ನಿರ್ಮಾಣ ಮಾಡುವ, ವಲಸೆ ಪ್ರಮಾಣ ತಗ್ಗಿಸುವಂತಹ, ದುಡಿಯುವ ವರ್ಗಕ್ಕೆ ಸಮಯಕ್ಕೆ ಸರಿಯಾಗಿ ಅಥವಾ ಕಾಲಕಾಲಕ್ಕೆ ಕೂಲಿ ಮತ್ತಿತರ ಸೌಲಭ್ಯಗಳನ್ನು ಒದಗಿಸುವುದು, ಸಂವಿಧಾನಿಕ ನೆಲೆಯಲ್ಲಿ ಉದ್ಯೋಗದ ಹಕ್ಕನ್ನು ಕಲ್ಪಿಸುವುದು, ಉದ್ಯೋಗ ಖಾತರಿ ಯೋಜನೆ ಕಾರ್ಯವೈಖರಿ ಮತ್ತಿತರ ವಿಚಾರಗಳಲ್ಲಿ ಪಾರದರ್ಶಕತೆ, ಇವೆಲ್ಲಾ ವಿಚಾರಗಳು ಸಿದ್ಧಾಂತದ ಚೌಕಟ್ಟಿನ ನೆಲೆಯಲ್ಲಿ ಅನುಷ್ಠಾನವಾಗಬೇಕಾಗಿದ್ದು, ಅನೇಕ ಲೋಪದೋಷಗಳ ಹಿನ್ನೆಲೆಯಲ್ಲಿ ಉದ್ಯೋಗ ಖಾತರಿ ಯೋಜನೆಯ ಮೂಲ ಆಶಯ ಮತ್ತು ದೋರಣೆಗಳಿಗೆ ಪೆಟ್ಟುಕೊಡಲಾಗಿದೆ.

ಯಂತ್ರಗಳ ಬಳಕೆ, ಗುತ್ತಿಗೆದಾರರ ಅನಗತ್ಯ ಪ್ರವೇಶ, ಜನಸಾಮಾನ್ಯರ ಬೇಡಿಕೆ ಆಧಾರಿತ ಅಥವಾ ಅನಿವಾರ್ಯ ಕಾಮಗಾರಿಗಳನ್ನು ಕಾರ್ಯರೂಪಕ್ಕೆ ತರದೇ ಇರುವುದು ಹಾಗೂ ಎಲ್ಲಾ ಹಂತದಲ್ಲೂ ಕಾಯಿದೆಯ ನಿಯಮಗಳನ್ನು ಉಲ್ಲಂಘನೆ ಮಾಡಿದ್ದು, ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಜನ ಸಾಮಾನ್ಯರು ಹಲವು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಎಲ್ಲಾ ರೀತಿಯ ಹಕ್ಕನ್ನು ಗ್ರಾಮಪಂಚಾಯತಿಗೆ ನೀಡಿದ್ದು, ಗ್ರಾಮಪಂಚಾಯತಿ ಈ ಯೋಜನೆಯ ನಿಯಮಗಳನ್ನು ಉಲ್ಲಂಘನೆ ಮಾಡಿರುವುದನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ ಇವೆಲ್ಲದರ ಹಿನ್ನೆಲೆಯಲ್ಲಿ ಅಧ್ಯಯನದ ಮೂಲಕ ಕಂಡುಬಂದತಹ ಮುಖ್ಯ ಅಂಶವೆಂದರೆ ಈ ಎರಡು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲೂ ಉದ್ಯೋಗ ಖಾತರಿ ಯೋಜನೆಯ ಸಿದ್ಧಾಂತವು ಸಿದ್ಧಾಂತವಾಗಿಯೇ ಉಳಿದಿದೆ ಹೊರೆತು ಸಮರ್ಥ ರೀತಿಯಲ್ಲಿ ಆಚರಣೆಗೆ ಬಂದಿಲ್ಲವೆಂದೇ ಹೇಳಬಹುದು.

ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಸಮರ್ಥವಾಗಿ ಜಾರಿಗೆ ತರುವಲ್ಲಿ ಅಥವಾ ಕಾರ್ಯಗತಗೊಳಿಸುವಲ್ಲಿ ಗ್ರಾಮಪಂಚಾಯತಿಯು ಹಲವು ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸಿದ್ದು ಗ್ರಾಮಪಂಚಾಯತಿಯು ಯೋಜನೆಯ ಆಶಯಕ್ಕೆ ತಕ್ಕಂತೆ ಜಾರಿಗೆ ತರುವಲ್ಲಿ ಎದುರಿಸಿದಂತಹ ಸವಾಲು ಮತ್ತು ಸಮಸ್ಯೆಗಳಿಗೆ ಕಾರಣಗಳು ಯಾವುವು? ಮತ್ತು ಅವುಗಳ ಸ್ವರೂಪವನ್ನು ಮುಂದಿನ ಅಧಿಕಾರದ ವಿಕೇಂದ್ರೀಕರಣ ಅಧ್ಯಾಯದಲ್ಲಿ ಅಧ್ಯಯನದ ಮೂಲಕ ಚರ್ಚಿಸಲಾಗಿದೆ.

ಕೊನೆಯ ಟಿಪ್ಪಣಿಗಳು

1. ಲೋಹಿತಾಶ್ವ ಎಚ್.ಸಿ, (2003), ಪಂಚಾತ್‌ರಾಜ್ ವ್ಯವಸ್ಥೆ, ವಿದ್ಯಾನಿಧಿ ಪ್ರಕಾಶನ, ಗದಗ.
2. Agrawal, A. & Gibson, C.C. (1999), Enhantment and Disenchantment: The Role of Community in Natural Conservation, World Development, 27(6):629-649.
3. Agnihotri, V.K et al. (1993) 'Human Resources for Development for Panchayats', The Administrator, vol. xxxviii, pp. 109-132. Anand, S and S. Kothari (1999): 'Minor Forest Produce and Community Control over Natural Resources under Adivasi Self-Rule', unpublished paper,
4. Lokayan, New Delhi. Gaiha, Raghav, P. D. Kaushik and Vani Kulkarni. 1998. Jawahar Rozgar Yojana, Panchayats, and the Rural Poor in India, Asian Survey, November.
5. Choudhary, R.C. and R.C.Jain (eds.) (1999) Strengthening Village Democracy, NIRD, pp. 77- 80. Crook, R.C and J. Manor, 1988. Democracy and Decentralization in South Asia and West Africa, chapter 2, 'Karnataka', Cambridge University Press.
6. Girglani, J.M. (1993) 'Financial Resources of Panchayati Raj Institutions', The Administrator, vol. xxxviii, pp. 39-63.
7. Gulati, C.J. (1996) Panchayati Raj in India: Problems and Prospects, IRIS-India Working Paper 31, Center For Institutional Reform and Informal Sector (IRIS), University of Maryland.
8. Hanumantha Rao, C.H. (1989): 'Decentralized Planning: An overview of Experience and Prospects', Economic and Political Weekly, February 25.
9. Hooja, R. (1997) 'Training of Panchayati Raj Functionaries: Some issues', Journal of Rural Development, vol. 16 (4) pp. 723-737.
10. Institute of Social Sciences (1999): Reported in Panchayati Raj Update, Vol. 65, May 1999, New Delhi.

11. Jain, S.P. (1999) 'Gram Sabha — Task Before the Nation' in: Ministry of Rural Development (1999), The Year of the Gram Sabha , Kurukshetra , Annual Issue, 1999-2000, October, 48(1).

12. Larbeer, Mohan (1997). "Atrocities in Melavalavu Panchayat', Panchayati Raj update, July, no. 43, p. 6. Leiten,

13. G.K. and R.Srivastava (1999) Unequal Partners: Power Relations, Devolution and Development in Uttar Pradesh, IDPAD no 23, SAGE, New Delhi.

14. Krishna, S. (1993): Restructuring the Institutional Arrangements to Strengthen the Panchayati Raj, The Administrator, vol. xxxviii, pp. 87-100.

15. Planning Commission (1997) Ninth Five Year Plan 1997-2000, Development Goals, Strategy and Policies, Government of India, New Delhi, vol. 1, p. 214.

ಅಧ್ಯಾಯ ಏಳು

ಅಧ್ಯಯನದ ತಾತ್ಕಾಲಿಕ ತೀರ್ಮಾನಗಳ ಸಲಹೆಗಳು

ಅಧ್ಯಾಯ ಏಳು

ಅಧ್ಯಯನದ ತಾತ್ಕಾಲಿಕ ತೀರ್ಮಾನಗಳ ಸಲಹೆಗಳು

7.1 ಪೀಠಿಕೆ

ಸ್ವಾತಂತ್ರ್ಯ ಪೂರ್ವದಿಂದಲೂ ಬಡತನದ ಸಮಸ್ಯೆಯನ್ನು ನಿರಂತರವಾಗಿ ನಾವು ಎದುರಿಸುತ್ತಲೇ ಬಂದಿದ್ದೇವೆ. ಸ್ವಾತಂತ್ರ್ಯ ನಂತರ ಸರ್ಕಾರಗಳು ಬಡತನ ನಿರ್ಮೂಲನೆಯ ಸಲುವಾಗಿ ಅಭಿವೃದ್ಧಿ ಯೋಜನೆಗಳನ್ನು ನಿರಂತರವಾಗಿ ಅನುಷ್ಠಾನ ಮಾಡುತ್ತಲೇ ಬಂದಿವೆ. ಆದರೂ ಬಡತನ ನಿರ್ಮೂಲನೆ ನಮಗೆ ಮರೀಚಿಕೆಯಾಗಿದೆ. ಹಸಿವು, ಬಡತನ, ಅಪೌಷ್ಟಿಕತೆ, ವಲಸೆ, ನಿರುದ್ಯೋಗ, ಮಹಿಳೆಯರು, ದಲಿತರು ಹೀಗೆ ಬಡವರ ಮೇಲಿನ ದೌರ್ಜನ್ಯ ಸೇರಿದಂತೆ ಇನ್ನೂ ಮುಂತಾದ ಸಾಮಾಜಿಕ ಸವಾಲುಗಳನ್ನು ಹೋಗಲಾಡಿಸಲು ನಾಗರೀಕ ಸಮಾಜ ಹೋರಾಟ ಮಾಡುತ್ತಲೇ ಬರುತ್ತಿದೆ. ಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಉಂಟಾದ ಬದಲಾವಣೆಯಿಂದ ಉತ್ಪಾದನೆಯಲ್ಲಿ ಹೆಚ್ಚಳವು ಆರ್ಥಿಕ ಬೆಳವಣಿಗೆಯ ವೇಗವನ್ನು ಹೆಚ್ಚಿಸಿತು. ಆದರೂ ನಿರುದ್ಯೋಗದ ಸ್ವರೂಪ ದಿನದಿಂದ ದಿನಕ್ಕೆ ರೂಪಾಂತರವಾಯಿತು. ಈ ಸ್ಥಿತಿಯಿಂದ ಹೊರಬರಲು ಪ್ರಯತ್ನ ಇಂದಿಗೂ ಮುಂದುವರೆದರೂ ಅದು ಸವಾಲಾಗಿಯೇ ಉಳಿದಿದೆ.

ಜನರ ಭೂಮಿಯ ಮೇಲಿನ ಅವಲಂಬನೆಯ ಒತ್ತಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದಕ್ಕೆ ಪ್ರತಿಯಾಗಿ ಅತಿಯಾದ ತಾಂತ್ರಿಕತೆ ಮತ್ತು ತಂತ್ರಜ್ಞಾನ ಬಳಕೆಯಿಂದ ಉದ್ಯೋಗಾವಕಾಶಗಳು ಕಡಿಮೆಯಾಗಿ ಕೃಷಿ ಸಮಾಜದ ಸವಾಲುಗಳು ಹೆಚ್ಚಾಗುತ್ತಿವೆ. ಇದರ ಪರಿಣಾಮವಾಗಿ ಭಾರತದ ಆರ್ಥಿಕ ಸ್ಥಿತಿ ಕುಸಿದು ಆರ್ಥಿಕ ಸಮತೋಲನ ಹದಗೆಡುತ್ತಿದೆ. ವಿಶೇಷವಾಗಿ ಭೂರಹಿತ ಕಾರ್ಮಿಕರಿಗೆ, ಅತಿ ಸಣ್ಣ ರೈತರಿಗೆ ಉದ್ಯೋಗದ ಅವಕಾಶಗಳು ಕ್ಷೀಣಿಸುತ್ತಿವೆ. ಆಹಾರ ಪದಾರ್ಥಗಳ ಬೆಲೆ ಏರಿಕೆ, ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ, ಉತ್ಪಾದನೆಗೆ ಖಾತರಿ ಇಲ್ಲದಂತೆಯಾಗಿ ಕೃಷಿಕರ ಮತ್ತು ಗ್ರಾಮೀಣ ಜನರ ಜೀವನೋಪಾಯದಲ್ಲಿ ಏರುಪೇರಾಗಿ ಕೃಷಿ ಸಮಾಜ ಆತ್ಮಹತ್ಯೆಯಂತಹ ಬಿಕ್ಕಟ್ಟನ್ನು

ಎದುರಿಸುತ್ತಿದೆ. ನಿರುದ್ಯೋಗಿಗಳಿಗೆ ಕೂಲಿ ಆಧಾರಿತ ಉದ್ಯೋಗಗಳನ್ನು ನೀಡಿದರೆ, ಅವರ ಆಹಾರ ಭದ್ರತೆಯ ಪ್ರಮಾಣವನ್ನು ಹೆಚ್ಚಿಸಬಹುದು ಎನ್ನುವ ಆಶಯ ನಾಗರೀಕ ಸಮಾಜದಿಂದ ರೂಪಾಂತರವಾಗಿದೆ. ಆಹಾರ ಭದ್ರತೆಯ ಮೂಲಕ ಜೀವನೋಪಾಯ ಸುಧಾರಣೆ ಮಾಡುವ ಸಲುವಾಗಿ ಗ್ರಾಮೀಣ ದುಡಿಮೆಗಾರರಿಗೆ ಉದ್ಯೋಗದ ಭರವಸೆ ಕಲ್ಪಿಸುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಜಾರಿಗೆ ತರಲು ಲೋಕಸಭೆಯಲ್ಲಿ 2004ರಂದು ಉದ್ಯೋಗದ ಮಸೂದೆಯ ಕರಡು ಅಂಗೀಕಾರವಾಯಿತು. ಲೋಕಸಭೆಯಲ್ಲಿ ಅಂಗೀಕಾರವಾದ ಉದ್ಯೋಗದ ಮಸೂದೆ ಅಂತಿಮವಾಗಿ 2005ರಲ್ಲಿ ರಾಷ್ಟ್ರಪತಿಗಳಿಂದ ಅನುಮೋದನೆಗೊಂಡು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಾಗಿ ಅನುಷ್ಠಾನಕ್ಕೆ ಬಂದಿತು. 2006ರಲ್ಲಿ ದೇಶದಲ್ಲಿ ಅತ್ಯಂತ ಹಿಂದುಳಿದ 200 ಜಿಲ್ಲೆಗಳನ್ನು ಮೊದಲ ಹಂತದಲ್ಲಿ ಅನುಷ್ಠಾನ ಗೊಳಿಸಲಾಯಿತು. 2007ರ ಎರಡನೇಯ ಹಂತದಲ್ಲಿ 130 ಜಿಲ್ಲೆಗಳು ಮತ್ತು 2008ರಲ್ಲಿ ಉಳಿದ 285 ಜಿಲ್ಲೆಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನ ಮಾಡಲಾಯಿತು.

ತುಮಕೂರು ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯು 2007–08ರಿಂದಲೇ ಅನುಷ್ಠಾನಕ್ಕೆ ಬಂದಿದೆ. ಹೀಗೆ ಅನುಷ್ಠಾನವಾದ ಯೋಜನೆಯ ಸಿದ್ಧಾಂತ ಮತ್ತು ಆಚರಣೆಯನ್ನು ವಾಸ್ತವಿಕ ರೀತಿಯಲ್ಲಿ ವಿಶ್ಲೇಷಣೆ ಮಾಡಲು ಈ ಅಧ್ಯಯನದಲ್ಲಿ ಪ್ರಯತ್ನ ಮಾಡಲಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಕುರಿತಾಗಿ ಅನೇಕ ಅಧ್ಯಯನಗಳು ಬೇರೆ ಬೇರೆ ಆಯಾಮಗಳ ಮೂಲಕ ನಡೆದಿವೆ. ಆದರೆ ಸಿದ್ಧಾಂತ ಮತ್ತು ಆಚರಣೆಗಳ ಬಗೆಗೆ ನಡೆದಿರುವಂತಹ ಅಧ್ಯಯನಗಳು ಕಡಿಮೆ. ಪ್ರಸ್ತುತ ಅಧ್ಯಯನವು ಎರಡು ಗ್ರಾಮಪಂಚಾಯತಿಗಳಿಗೆ ಸೀಮಿತಗೊಳಿಸಿಕೊಂಡಿದ್ದು, 2009–10 ರಿಂದ 2013–14ರ ಕಾಲಾವಧಿಯಲ್ಲಿ ಅನುಷ್ಠಾನಗೊಂಡಿರುವ ಉದ್ಯೋಗ ಖಾತರಿ ಯೋಜನೆಯನ್ನು ಅಧ್ಯಯನದ ಮಿತಿಯಾಗಿರಿಸಿಕೊಳ್ಳಲಾಗಿದೆ.

ಮೇಲಿನಿಂದ ನಿರ್ದೇಶಿಸಲ್ಪಟ್ಟು ಕೆಳಗಡೆ ಬರುವ ಸಾಂಪ್ರದಾಯಿಕ ಅಭಿವೃದ್ಧಿ ಯೋಜನೆಗಳ ಕಾರ್ಯಕ್ರಮಗಳನ್ನು ವಿಶ್ಲೇಷಣೆಗೆ ಒಳಪಡಿಸಿದ ನಂತರ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದನ್ನು ಅನೇಕ ಸಂಶೋಧನಾ ಅಧ್ಯಯನಗಳು ತಿಳಿಸಿವೆ. ಅಭಿವೃದ್ಧಿ ಯೋಜನೆಗಳಲ್ಲಿ ಸ್ಥಳೀಯ ಜನರ ಭಾಗವಹಿಸುವಿಕೆ ಮತ್ತು ವಿಕೇಂದ್ರೀಕರಣದ ಬಗ್ಗೆ ಹಲವು ಸಂಶೋಧನಾ ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಎಂ.ಚಂದ್ರಪೂಜಾರಿಯವರ "ಜನಯೋಜನೆ", ಟಿ.ಆರ್. ಚಂದ್ರಶೇಖರ್‌ರವರ "ಜನರ ಯೋಜನೆ"

ಮತ್ತು ಹೆಚ್.ಡಿ.ಪ್ರಶಾಂತ್ ರವರ "ಶಾಲಾ ಶಿಕ್ಷಣದಲ್ಲಿ ವಿಕೇಂದ್ರೀಕರಣ/ಎಸ್.ಡಿ.ಎಂ.ಸಿ.ಯ ಕಾರ್ಯಕ್ಷಮತೆ" ಈ ಮೂವರು ವಿದ್ವಾಂಸರ ಅಧ್ಯಯನಗಳು ಅಭಿವೃದ್ಧಿ ಕಾರ್ಯಕ್ರಮಮಗಳಲ್ಲಿ ಸ್ಥಳೀಯ ಜನರ ಭಾಗವಹಿಸುವಿಕೆ ಕುರಿತು ವಿಶ್ಲೇಷಣೆ ನಡೆಸಿವೆ. ವಿಶೇಷವಾಗಿ ಜನರ ಭಾಗವಹಿಸುವಿಕೆ ಮೂಲಕ ಮಾತ್ರ ಸ್ಥಳೀಯ ಸರ್ಕಾರಗಳು ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಜಾಸತಾತ್ಮಕವಾಗಿ ಆಚರಣೆಗೆ ತರಲು ಸಾದ್ಯ ಎನ್ನುವುದನ್ನು ಗುರುತಿಸಿವೆ.

ಜನರ ಭಾಗಹಿಸುವಿಕೆ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಾತ್ಮಕವಾಗಿ ಅನುಷ್ಠಾನ ಮಾಡಬೇಕಾದರೆ ವಿಕೇಂದ್ರೀಕರಣ ಮತ್ತು ವಿಕೇಂದ್ರೀಕರಣಾತ್ಮಕ ಆಡಳಿತ ಬೇಕು. ಇದರ ಮಹತ್ವವೆಂದರೆ ಜನರ ಬೇಕು ಬೇಡಗಳನ್ನು ಸೂಕ್ಷ್ಮವಾಗಿ ಅರಿಯುವುದು ಮತ್ತು ಅರ್ಥಮಾಡಿಕೊಳ್ಳುವುದು. ಜನರು ಪ್ರಜಾಸತಾತ್ಮಕವಾಗಿ ಭಾಗವಹಿಸಲು ಮಾಹಿತಿ ಅಗತ್ಯ. ಉದಾಹರಣೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಬೇಕಾದರೆ ನಿಯಮಾವಳಿಗಳು ಮತ್ತು ಕಾಯಿದೆಗಳು ಅಗತ್ಯ. ಈ ತರಹದ ಕಾಯಿದೆಗಳು ಬಹುತೇಕ ಸಂವಿಧಾನಬದ್ಧವಾಗಿಯೂ ಮತ್ತು ಕಾನೂನಾತ್ಮಕವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಮೊದಲನೆಯದು ಎಂದು ಹೇಳಬಹುದು. ಈ ಆಶಯದೊಂದಿಗೆ ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಕಾಯಿದೆ ಕುರಿತು ಜನರಲ್ಲಿ ಯಾವ ಮಾಹಿತಿ ಇದೆ ಎಂದು ತಿಳಿಯಲು ಪ್ರಯತ್ನಿಸಲಾಗಿದೆ. ಇದನ್ನು ಗುಣಾತ್ಮಕವಾಗಿ ಮತ್ತು ಸಂಖ್ಯಾತ್ಮಕವಾಗಿ ಹಿಡಿದಿಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಪ್ರಸ್ತುತ ಸಂಶೋಧನ ಕ್ಷೇತ್ರದಲ್ಲಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 68ರಷ್ಟು ಜನರಿಗೆ ಉದ್ಯೋಗ ಖಾತರಿ ಕಾಯಿದೆಯ ನಿಯಮಗಳ ಮಾಹಿತಿಯಿರುವುದು ತಿಳಿದುಬರುತ್ತದೆ. ದೊಡ್ಡೇರಿ ಗ್ರಾಮಪಂಚಾಯತಿ ಶೇಕಡ 76ರಷ್ಟು ಜನರಿಗೆ ಮಾಹಿತಿಯಿರುವುದು ಕಂಡುಬಂದಿದೆ. ಉದಾಹರಣೆಗೆ ಗ್ರಾಮಪಂಚಾಯತಿಯಲ್ಲಿ ನೋಂದಣಿ, ಉದ್ಯೋಗಕ್ಕಾಗಿ ಅರ್ಜಿ ಹಾಕುವುದು, 15 ದಿನದೊಳಗೆ ಉದ್ಯೋಗ ನೀಡುವುದು, ಉದ್ಯೋಗ ನೀಡದಿದ್ದರೆ ನಿರುದ್ಯೋಗ ಭತ್ಯೆ ನೀಡಬೇಕೆನ್ನುವ ಕಾನೂನು, ಕಾಮಗಾರಿ ನಡೆಯುವ ಸ್ಥಳದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು, 15 ದಿನದೊಳಗೆ ಉದ್ಯೋಗದ ಕೂಲಿವೇತನವನ್ನು ಬ್ಯಾಂಕ್‌ಗಳ ಮೂಲಕ ನೀಡುವುದು, ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡುವುದು. ಉದ್ಯೋಗ ಖಾತರಿ ಯೋಜನೆಯಲ್ಲಿ ಗುತ್ತಿಗೆದಾರರನ್ನು, ಯಂತ್ರಗಳನ್ನು ನಿಷೇಧಿರಿಸಿರುವುದರ ಕುರಿತ ಮಾಹಿತಿಗಳಿದ್ದರೂ ಸಹ, ಎರಡೂ ಗ್ರಾಮಪಂಚಾಯತಿಗಳಲ್ಲಿ ಸಿದ್ಧಾಂತಕ್ಕೆ ವಿರುದ್ಧವಾಗಿ ಕಾಮಗಾರಿಗಳ ಕೆಲಸ ನಡೆದಿರುವುದನ್ನು ಪ್ರಸ್ತುತ ಅಧ್ಯಯನ ಗುರುತಿಸಿದೆ.

ಕಾಯಿದೆ ಕುರಿತು ಪ್ರಚಾರಕ್ಕೆ ಸಂಬಂಧಿಸಿದಂತೆ ಸ್ಥಳೀಯವಾಗಿಯೇ ಉದ್ಯೋಗಗಳು ಹೇಗೆ ರೂಪಿಸಬೇಕು ಎನ್ನುವ ಕುರಿತು ಜನರಿಗೆ ಮಾಹಿತಿ ತಲುಪಿಸುವ ಕೆಲಸ ಮಾಡಬೇಕು ಎನ್ನುವುದನ್ನು ಈ ಕಾಯಿದೆ ಸ್ಪಷ್ಟ ಪಡಿಸುತ್ತದೆ. ಉದಾಹರಣೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಮೂಲಕ ಯಾವ ಕೆಲಸವನ್ನು ತೆಗೆದುಕೊಳ್ಳುವುದು, ಜನರ ಮೂಲಕ ಕಾಮಗಾರಿಗಳನ್ನು ಗುರುತಿಸಿ, ಗುರುತಿಸಿದ ಕಾಮಗಾರಿಗಳನ್ನು ಗ್ರಾಮದಲ್ಲಿ ದೀರ್ಘಕಾಲಿನ ಆಸ್ತಿಗಳನ್ನು ನಿರ್ಮಾಣ ಮಾಡುವುದು. ಅವುಗಳೆಂದರೆ ಜಲ ಸಂರಕ್ಷಣೆಗೆ ಸಂಬಂಧಿಸಿದ ಕಾಮಗಾರಿಗಳನ್ನು, ಕೆರೆಗಳ ಅಭಿವೃದ್ಧಿ, ಜಲನಯನ ಅಭಿವೃದ್ಧಿ, ಒಡ್ಡುಗಳ ನಿರ್ಮಾಣ, ಕೃಷಿಹೊಂಡಗಳು, ನಡೆತೋಪುಗಳು, ರಸ್ತೆ ಪಕ್ಕದಲ್ಲಿ ಸಸಿ ನೆಡೆಸುವುದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮತ್ತು ಮಹಿಳಾ ಕೃಷಿ ಜಮೀನುಗಳಲ್ಲಿ ತೋಟಗಾರಿಕೆ ಸಸಿಗಳನ್ನು ಬೆಳೆಸುವುದು, ಕೆರೆಗಳ ಹೂಳು ತೆಗೆಯುವುದು, ಕೃಷಿ ಭೂಮಿಯನ್ನು ಸಮತಟ್ಟಾಗಿ ಮಾಡುವುದು, ಚರಂಡಿ, ಶೌಚಾಲಯ, ಗ್ರಾಮೀಣ ರಸ್ತೆಗಳ ನಿರ್ಮಾಣ ಕಾಮಗಾರಿ, ಅರಣ್ಯೀಕರಣ, ಬಸಿ ಕಾಲುವೆಗಳು ಮುಂತಾದ ಕಾಮಗಾರಿಗಳನ್ನು ಅನುಷ್ಠಾನ ಮಾಡುವ ಅವಕಾಶವನ್ನು ಕಾಯಿದೆ ನೀಡಿದೆ. ಉದ್ಯೋಗ ಪಡೆಯುವ ಬಗ್ಗೆ ಜನರಿಗೆ ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ಮಾಡಲು ಅಂದರೆ ಮಾಹಿತಿ ಶಿಕ್ಷಣ ಮತ್ತು ಸಂವಹನದ ವೆಚ್ಚಕ್ಕೆ ಯೋಜನೆಯ ಒಟ್ಟು ಬಜೆಟ್‌ನ ಶೇಕಡ 25ಕ್ಕಿಂತ ಹೆಚ್ಚು ಬಳಕೆಯಾಗದಂತೆ ನೋಡಿಕೊಳ್ಳಲು ಸಿದ್ಧಾಂತದಲ್ಲಿ ಅವಕಾಶ ಮಾಡಿಕೊಟ್ಟಿದೆ. ಅನುಷ್ಠಾನದಲ್ಲಿ ಈ ಅನುದಾನವನ್ನು ಪ್ರಚಾರಕ್ಕಾಗಿ ಬಳಸಲಾಗಿದೆಯೇ, ಸೂಕ್ತ ಮತ್ತು ಸಮರ್ಪಕವಾಗಿ ಬಳಸಿದ್ದರೆ ಜನರಿಗೆ ಹೆಚ್ಚು ಪ್ರಚಾರ ನೀಡಿ ಯೋಜನೆಯ ಬಗ್ಗೆ ವ್ಯಾಪಕವಾದ ಮಾಹಿತಿ ಇರಬೇಕಾಗಿತ್ತು. ಈ ಹಿನ್ನೆಲೆಯಲ್ಲಿ ವಾಸ್ತವಿಕವಾಗಿ ಜನರಿಗೆ ಕಾಯಿದೆಯಲ್ಲಿ ಸ್ಪಷ್ಟತೆ ಇದೆಯೇ ಎನ್ನುವುದನ್ನು ಪರಿಶೀಲಿಸಲಾಯಿತು. ಈ ಕುರಿತು ದೊರೆತ ಮಾಹಿತಿ ಅಚ್ಚರಿ ಮತ್ತು ಆಘಾತವನ್ನು ಹುಟ್ಟಿಸುತ್ತದೆ.

ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 16.00ರಷ್ಟು ಗೋಡೆಬರಹದ ಮೂಲಕ ಪ್ರಚಾರ ನಡೆದಿರುವುದು ತಿಳಿದಿದೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 13ರಷ್ಟು ಪ್ರಚಾರ ಗೋಡೆಬರಹದ ಮೂಲಕ ನಡೆದಿದೆ. ವಾರ್ಡ್‌ಸಭೆ, ಗ್ರಾಮಸಭೆ, ಭಿತ್ತಿಪತ್ರಗಳ, ಬೀದಿನಾಟಕಗಳು, ಸಿನಿಮಾ ಸ್ಲೈಡ್ಸ್‌ಗಳು, ಬ್ಯಾನರ್‌ಗಳು, ಕರಪತ್ರಗಳ ಮತ್ತು ಜನರ ಜೊತೆ ಸಂವಾದಗಳ ಮೂಲಕ ಉದ್ಯೋಗ ಖಾತರಿ ಯೋಜನೆಯ ಮೂಲಕ ಪ್ರಚಾರ ಪಡಿಸುವುದು ತಿಳಿಯುತ್ತದೆ. ಆದರೆ ಅಧ್ಯಯನ ಕ್ಷೇತ್ರದಲ್ಲಿ ಪ್ರಚಾರ ಕಾರ್ಯ ನಿರೀಕ್ಷಿತ ಮಟ್ಟದಲ್ಲಿ ನಡೆದಿರುವುದಿಲ್ಲ ಎನ್ನುವ ಅಂಶವನ್ನು ಕ್ಷೇತ್ರಕಾರ್ಯ ಸಮಯದಲ್ಲಿ ತಿಳಿದುಬಂದಿದೆ. ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಪ್ರಬಲ ಜಾತಿಯ ರಾಜಕಾರಣ, ಕೆಲವು ಗುತ್ತಿಗೆದಾರರು, ಪ್ರಬಲ ರಾಜಕೀಯ ವ್ಯಕ್ತಿಗಳು, ಗ್ರಾಮಪಂಚಾಯತಿ ಸದಸ್ಯರು, ಕಾಮಗಾರಿಗಳನ್ನು

ತಾವೆ ಗುತ್ತಿಗೆ ಪಡೆಯುವ ಉದ್ದೇಶದಿಂದ ಪ್ರಚಾರವನ್ನು ಸರಿಯಾಗಿ ಮಾಡಿಲ್ಲ ಎಂಬುದು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ನಡೆಸಿದ ಗುಂಪು ಚರ್ಚೆಗಳಿಂದ ತಿಳಿದು ಬಂದಿತು.

ಯೋಜನೆಯ ಅನುಷ್ಠಾನದ ಪೂರ್ವದಲ್ಲಿ ಅವಶ್ಯಕತೆ ಮತ್ತು ಅಗತ್ಯತೆಗೆ ಸಂಬಂಧಿಸಿದಂತೆ ಜನರ ಅವಶ್ಯಕತೆಗಳನ್ನು ಗುರುತಿಸಿ ಬೇಡಿಕೆ ಪಟ್ಟಿ ತಯಾರಿಸಲು ಸಂವಿಧಾನದ 73 ಮತ್ತು 74ರ ತಿದ್ದುಪಡಿಯಲ್ಲಿ ಅವಕಾಶವಿದೆ. ಅಧಿನಿಯಮದ 13ನೇ ವಿಧಿಯ ಪ್ರಕಾರ ಉದ್ಯೋಗ ಖಾತರಿ ಯೋಜನೆಯನ್ನು ತಯಾರಿಸುವವರು ಮತ್ತು ದಾಖಲಿಸುವುದು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮಪಂಚಾಯತಿಗಳ ಜವಾಬ್ದಾರಿ. ಈ ಮೂರು ಸಂಸ್ಥೆಗಳ ನಡುವೆ ಜವಾಬ್ದಾರಿಗಳನ್ನು ವ್ಯವಸ್ಥಿತವಾಗಿ ವಿಭಜಿಸಲಾಗಿದೆ. ಇದರ ಅರ್ಥ ಇಷ್ಟೆ ಜನರ ಸಹಭಾಗಿತ್ವದ ಮೂಲಕ ಸಂವಾದ, ವಾರ್ಡ್‌ಸಭೆ, ಗ್ರಾಮಸಭೆ ಮೂಲಕ ಅವರ ಅಗತ್ಯಗಳನ್ನು ಕಲೆಹಾಕಿ ಗ್ರಾಮಪಂಚಾಯತಿ ಸಭೆಗಳಲ್ಲಿ ಚರ್ಚಿಸಿ ತೀರ್ಮಾನಿಸಿ ಅಗತ್ಯ ಪಟ್ಟಿಯನ್ನು ಆಧ್ಯತೆಯ ಮೇಲೆ ತಯಾರಿಸಬೇಕು. ಇದರ ಆಧಾರದಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಮಾಡಬೇಕು. ನಂತರ ಜನರ ಸಹಭಾಗಿತ್ವದಲ್ಲಿ ಯೋಜನೆಯನ್ನು ರೂಪಿಸಬೇಕು. ಈ ರೀತಿಯ ಯೋಜನಾ ಪ್ರಕ್ರಿಯೆ ಬಹುತೇಕ ಜನರ ಸಮಸ್ಯೆಗಳಿಗೆ ಸ್ಪಂಧಿಸಲು ಅವಕಾಶ ನೀಡಿದೆ. ಅಲ್ಲದೆ ಇದರಿಂದ ಜನರ ಬೇಡಿಕೆಗೆ ಮಾನ್ಯತೆ ಕೊಟ್ಟಂತೆ ಆಗುತ್ತದೆ. ಆದರೆ ಅಧ್ಯಯನದಲ್ಲಿ ಕಂಡುಬರುವ ಅಂಶಗಳೆಂದರೆ ಜನರ ಅಗತ್ಯತೆ ಮತ್ತು ಬೇಡಿಕೆಗೆ ಅನುಗುಣವಾಗಿ ಯೋಜನೆಗಳು ಆಚರಣೆಗೆ ಬಂದಿಲ್ಲವೆಂದೇ ಹೇಳಬಹುದು. ಯೋಜನೆಯ ಆಶಯದೊಂದಿಗೆ ಅಧ್ಯಯನ ಕ್ಷೇತ್ರದಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಹೇಗೆ ರೂಪಿಸಿದೆ? ಜನರ ಅಭಿಪ್ರಾಯ ಪರಿಗಣಿಸಲಾಗಿದೆಯೆ? ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ. ಆಗ ಪ್ರಸ್ತುತ ಅಧ್ಯಯನದ ಅರಿವಿಗೆ ಬಂದ ವಿಷಯ ಈ ಕೆಳಕಂಡಂತ್ತಿದೆ.

ಕಾಮಗಾರಿಗಳ ಆಯ್ಕೆಗೆ ಸಂಬಂಧಿಸಿದಂತೆ ಭಾಗವಹಿಸುವಿಕೆ ಮಾನದಂಡವಿಟ್ಟುಕೊಂಡು ಅಧಿಕಾರದ ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಕಾಮಗಾರಿ ಗುರುತಿಸಲು ಎಂ.ಜಿ.ಎನ್.ಆರ್.ಇ.ಜಿ.ಎ ಸ್ಥಳೀಯ ಜನರಿಗೆ ಅಧಿಕಾರ ನೀಡಿದೆ. ನಿಯಮ 1, 10ನೇ ಪ್ಯಾರಾದಲ್ಲಿ ಗ್ರಾಮಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಜನರು ಗ್ರಾಮಸಭೆಯಲ್ಲಿ ಭಾಗವಹಿಸಿದಾಗ ಅಗತ್ಯವಿರುವ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಜನರ ಪಾಲು ಇರುತ್ತದೆ. ಕಾಮಗಾರಿಗಳನ್ನು ವಾರ್ಡ್‌ಸಭೆ ಮತ್ತು ಗ್ರಾಮಸಭೆಗಳ ಮೂಲಕವೆ ಆಯ್ಕೆ ಮಾಡಬೇಕು ಎನ್ನುವುದು ಸಿದ್ಧಾಂತ. ಆದರೆ ಉದ್ಯೋಗ ಖಾತರಿಯ ಕಾಮಗಾರಿಗಳನ್ನು ಆಯ್ಕೆ ಮಾಡಲು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 86.50ರಷ್ಟು ಗ್ರಾಮಸಭೆಗಳೇ ನಡೆದಿರುವುದಿಲ್ಲವೆಂದು ಜನರು ಮಾಹಿತಿ ನೀಡಿದ್ದಾರೆ. ವಾರ್ಡ್‌ಸಭೆಗಳು ನಡೆದಿಲ್ಲವೆಂದು ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 83ರಷ್ಟು ಜನರು ಹೇಳಿದ್ದಾರೆ. ಇಲ್ಲಿ

ಆಯ್ಕೆಯಾದ ಬಹುತೇಕ ಕಾಮಗಾರಿಗಳು ಜನರ ಭಾಗವಹಿಸುವಿಕೆಯನ್ನು ಹೊರತುಪಡಿಸಿದ ತೀರ್ಮಾನವೇ ಅಂತಿಮವಾಗಿರುವುದು. ರಾಜಕೀಯ ಪ್ರಭಾವಿಗಳು, ಗುತ್ತಿಗೆದಾರರು ತೀರ್ಮಾನಿಸಿದ ಕಾಮಗಾರಿಗಳು ಆಯ್ಕೆ ಮಾಡಿ ಅನುಷ್ಠಾನವಾಗಿರುವುದು ಅಧ್ಯಯನದಿಂದ ತಿಳಿದುಬಂದಿದೆ. ಕಾಮಗಾರಿಗಳು ಜನರ ಮೂಲಕವೇ ಆಯ್ಕೆಯಾಗಿವೆ ಎಂದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 25.50ರಷ್ಟು ತಿಳಿದು ಬಂದಿದೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 22ರಷ್ಟು ಕಾಮಗಾರಿಗಳನ್ನು ಜನರು ಆಯ್ಕೆಮಾಡಿರುವುದನ್ನು ಗಮನಿಸಬಹುದಾಗಿದೆ. ಗುತ್ತಿಗೆದಾರರ ರೂಪದ ಗ್ರಾಮಪಂಚಾಯತಿ ಸದಸ್ಯರು ಮತ್ತು ರಾಜಕಾರಣಿಗಳು ಅವರ ಮನೆಗಳಲ್ಲಿ ಕಾಮಗಾರಿಗಳನ್ನು ಆಯ್ಕೆ ಮಾಡಿರುತ್ತಾರೆ ಎನ್ನುವುದನ್ನು ಜನರ ಜೊತೆ ನಡೆಸಿದ ಗುಂಪು ಚರ್ಚೆಗಳಿಂದ ತಿಳಿದು ಬಂದಿವೆ. ಎರಡು ಮಾದರಿಗಳಲ್ಲಿ ಆಯ್ಕೆ ಮಾಡಿದ ಕಾಮಗಾರಿಗಳಲ್ಲಿ ಬಹುತೇಕ ಕಾಮಗಾರಿಗಳು ಯಂತ್ರಗಳ ಮೂಲಕ ಅನುಷ್ಠಾನ ಮಾಡಲಾಗಿದೆ.

ಆಯ್ಕೆಯಾದ ಕಾಮಗಾರಿಗಳ ಪ್ರಕಟಣೆಗೆ ಸಂಬಂಧಿಸಿದಂತೆ ನಿಯಮ II, ಪ್ಯಾರಾ 10,18,19ರ ಅನ್ವಯ 15 ದಿನದೊಳಗೆ ಯಾವ ಸ್ಥಳಕ್ಕೆ, ಯಾವ ಕೆಲಸಕ್ಕೆ ಹಾಜರಾಗಬೇಕೆಂದು ಒಂದು ಪತ್ರದ ಮೂಲಕ ಅಥವಾ ಸಾರ್ವಜನಿಕ ಸೂಚನಾ ಫಲಕದಲ್ಲಿ (ಪಂಚಾಯತಿ ಸೂಚನಾ ಫಲಕ ಅಥವಾ ಕಾರ್ಯನಿರ್ವಾಹಕ ಅಧಿಕಾರಿಯ ಸೂಚನಾ ಫಲಕ) ಪ್ರಕಟಿಸಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಆಯ್ಕೆಯಾದ ಕಾಮಗಾರಿಗಳನ್ನು ಕೂಲಿಕಾರರಿಗೆ ತಿಳಿಯುವ ಹಾಗೆ ಗ್ರಾಮಪಂಚಾಯತಿಯ ನಾಮಫಲಕದಲ್ಲಿ ಅಥವಾ ಸಾರ್ವಜನಿಕರಿಗೆ ತಿಳಿಯುವ ಹಾಗೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸಬೇಕು ಎನ್ನುವುದು ನಿಯಮ. ದುಡಿಮೆಗಾರರಿಗೆ ಅನುಕೂಲವಾಗಲೆಂದು ಕಾಮಗಾರಿ, ಅದರ ಸ್ವರೂಪ, ಕಾಮಗಾರಿ ಅನುಷ್ಠಾನ ಮಾಡಬೇಕಾದ ಸ್ಥಳ, ಅವರ ವಾಸ ಸ್ಥಳದಿಂದ ಕಾರ್ಯಕ್ಷೇತ್ರದ ಅಂತರ ಇತ್ಯಾದಿಗಳನ್ನು ದುಡಿಮೆಗಾರರಿಗೆ ಅರ್ಜಿಹಾಕಲು ಅನುಕೂಲವಾಗಲೆಂದು ಮಾಡಲಾಗಿದೆ. ಸಾರ್ವಜನಿಕ ಸ್ಥಳದಲ್ಲಿ ಕಾಮಗಾರಿಗಳ ಪ್ರಕಟಣೆಯನ್ನು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಮಾಡಿಲ್ಲ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಬಹುತೇಕ ಕಾಮಗಾರಿಗಳನ್ನು ಗುತ್ತಿಗೆದಾರರು ಯಂತ್ರಗಳ ಮೂಲಕ ಅನುಷ್ಠಾನ ಮಾಡಿರುವುದರಿಂದ ಉದ್ಯೋಗದ ಅವಶ್ಯಕತೆ ಇರುವ ದುಡಿಮೆಗಾರರಿಗೆ ತಿಳಿಸಿರುವುದಿಲ್ಲ. ಉದ್ಯೋಗ ಖಾತರಿ ಕಾಮಗಾರಿಗಳು ಕಾಯಿದೆಯ ನಿಯಮಗಳಿಗೆ ವಿರೋಧವಾಗಿ ನಡೆಯುತ್ತಿದೆ ಎಂದು ಜನರಿಂದ ತಿಳಿದುಬಂದಿದೆ. ಕಾಮಗಾರಿಗಳ ಅನುಷ್ಠಾನ ನಿಯಮಗಳಿಗೂ, ಆಚರಣೆಗೂ ಒಂದಕ್ಕೊಂದು ವಿರುದ್ಧ ದಿಕ್ಕಿನತ್ತ ಚಲಿಸುತ್ತಿರುವುದು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಉದ್ಯೋಗ ಖಾತರಿ ಸಿದ್ಧಾಂತದಲ್ಲಿ ಜನರ ಅವಶ್ಯಕತೆ ಮತ್ತು ಬೇಡಿಕೆ ಆಧಾರದ ಮೇಲೆ ಕೆಲಸವನ್ನು ಜನರಿಗೆ ನೀಡಬೇಕು. ಪ್ರಸ್ತುತ ಅಧ್ಯಯನದಲ್ಲಿ ಉದ್ಯೋಗದ ಅವಶ್ಯಕತೆಯನ್ನು ಎರಡು

ಪಂಚಾಯತಿಗಳಿಗೆ ಹೋಲಿಕೆ ಮಾಡಿದಾಗ ಬೆಲವತ್ತ ಗ್ರಾಮಪಂಚಾಯತಿಗಿಂತ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಉದ್ಯೋಗದ ಬೇಡಿಕೆ ಹೆಚ್ಚಿದೆ. ಉದ್ಯೋಗದ ಬೇಡಿಕೆ ಮತ್ತು ಅವಶ್ಯಕತೆಯಿದೆಯೆಂದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 43.50ರಷ್ಟು ಜನರು ತಿಳಿಸಿದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 99.00ರಷ್ಟು ಜನರು ಉದ್ಯೋಗದ ಅವಶ್ಯಕತೆ ಇದೆ ಎಂದು ಅಧ್ಯಯನದ ಸಂದರ್ಭದಲ್ಲಿ ತಿಳಿಸಿದ್ದಾರೆ. ದೊಡ್ಡೇರಿ ಗ್ರಾಮಪಂಚಾಯತಿಯ ವ್ಯಾಪ್ತಿ ಪ್ರದೇಶದಲ್ಲಿ ನೀರಾವರಿ ಸೌಲಭ್ಯಗಳೂ ಕಡಿಮೆ. ಅಲ್ಲಿ ನೀರಿನ ಮೂಲಗಳು ಕಡಿಮೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಈ ಸೌಲಭ್ಯಗಳು ಇದ್ದರೂ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೃಷಿ ಭೂಮಿ ಇಲ್ಲದಿರುವುದು ಉದ್ಯೋಗದ ಬೇಡಿಕೆಯನ್ನು ತೀವ್ರಗೊಳಿಸಿದೆ. ಅವಶ್ಯಕತೆಗೆ ಅನುಗುಣವಾಗಿ ಉದ್ಯೋಗ ಮತ್ತು ಬೇಡಿಕೆ ಹೆಚ್ಚಿಸಲಿಲ್ಲ. ಏಕೆಂದರೆ ಪಂಚಾಯತ್ ಆಡಳಿತ ನಿರಾಸಕ್ತಿ, ರಾಜಕೀಯತೆ, ಪಂಚಾಯತಿಗಳ ಜೊತೆ ಗುತ್ತಿಗೆದಾರರ ಹೊಂದಾಣಿಕೆ ಮುಂತಾದ ಅಂಶಗಳು ಅವಶ್ಯಕತೆ ಮತ್ತು ಬೇಡಿಕೆಗೆ ಪೂರಕವಾಗಿರದೇ ಉದ್ಯೋಗ ಖಾತರಿ ಯೋಜನೆ ಯಶಸ್ವಿಯಾಗಿ ಬಾರದಿರುವುದನ್ನು ತಿಳಿಸುತ್ತದೆ.

ಉದ್ಯೋಗ ಖಾತರಿ ಕಾಯಿದೆಯಲ್ಲಿ ಮತ್ತೊಂದು ಆಶಯ, ದುಡಿಯುವ ಸಾಮರ್ಥ್ಯವಿರುವ ದುಡಿಯುವವರಿಗೆ ಅವಕಾಶ ಕಲ್ಪಿಸಿಕೊಡುವುದರ ಜೊತೆಗೆ, ದುಡಿಯುವ ವಯೋಮಾನದವರಿಗೆ ಎಲ್ಲರಿಗೂ ಉದ್ಯೋಗವನ್ನು ಪಡೆಯಲು ನೋಂದಣಿ ಮೂಲಕ ಉದ್ಯೋಗದ ಹಕ್ಕನ್ನು ಕಲ್ಪಿಸುವುದು ಈ ಹಿಂದೆ ಅನುಷ್ಠಾನಗೊಂಡ ಬಹು ಬಗೆಯ ಗ್ರಾಮೀಣ ಅಭಿವೃದ್ಧಿ ಉದ್ಯೋಗ ಯೋಜನೆಗಳು ಬರಗಾಲದ ಪರಿಸ್ಥಿತಿಯಲ್ಲಿ ಆಹಾರ ಅಭದ್ರತೆಗೆ ಸಿಲುಕಿ ಗೂಳೆ ಹೋಗಲು ತಡೆಯುವಂತೆ, ಕೂಲಿಗಾಗಿ ಕಾಳು ಯೋಜನೆ ಮೂಲಕ ಜನರಿಗೆ ದುಡಿಯುವ ಅವಕಾಶ ಕಲ್ಪಿಸಿಕೊಡಲಾಗಿದೆ. ದುಡಿಯುವ ಅವಕಾಶ ಕಲ್ಪಿಸಿದರೂ ಅದು ಅವಶ್ಯಕತೆ ಇರುವ ವ್ಯಕ್ತಿಗಳಿಗೆ ಅಥವಾ ಕುಟುಂಬಗಳಿಗೆ ದೊರಕದೆ ಮಧ್ಯವರ್ತಿಗಳ ಪಾಲಾಗಿರುವುದನ್ನು ತಿಳಿಯುತ್ತದೆ (ಪ್ರಶಾಂತ್ 2004 ಮತ್ತು 2006). ಇದಲ್ಲದೆ ರಾಜ್ಯಮಟ್ಟದಲ್ಲಿ ನಡೆಸಿದ ಅನೇಕ ಸಂಶೋಧನೆಗಳಿಂದ ಉದ್ಯೋಗದ ಅಗತ್ಯ ಇರುವವರಿಗೆ ದೊರಕದೆ ಇರುವುದನ್ನು ತಿಳಿಸುತ್ತವೆ. ಎಂ.ಜಿ.ಎನ್.ಆರ್.ಇ.ಜಿ.ಎ ಆಶಯದಲ್ಲಿ ಉದ್ಯೋಗದ ನೋಂದಣಿ ಕೇವಲ ಉದ್ಯೋಗ ಪಡೆಯುವುದೇ ಅಲ್ಲದೆ, ಅದರ ಜೊತೆಗೆ ಉದ್ಯೋಗದ ಬೇಡಿಕೆ ಮತ್ತು ನೀಡಿಕೆ ಆಧಾರದಲ್ಲಿ ಉದ್ಯೋಗದ ಹಕ್ಕನ್ನು ಕಡ್ಡಾಯಗೊಳಿಸಿರುವುದರಿಂದ ನಿಗದಿತ ಕಾಲಾವಧಿಯಲ್ಲಿ ಉದ್ಯೋಗ ನೀಡದಿದ್ದರೆ ನಿರುದ್ಯೋಗದ ಭತ್ಯೆಯನ್ನು ನೀಡುವುದು ಕಡ್ಡಾಯ. ಈ ಎಲ್ಲಾ ಅಂಶಗಳು ಪಾರದರ್ಶಕತೆಯಿಂದ ಕಾಯಿದೆ ಮಾನವನ ಶ್ರಮವನ್ನು ಬಳಸಿಕೊಳ್ಳಲು ಅತ್ಯಂತ ಮಹತ್ವದಾಗಿದೆ. ಅಂದರೆ ಕಾಯಿದೆಯ ನಿಯಮಗಳು ನೋಂದಣಿಯ ಮೂಲಕ ಎಲ್ಲಾ ಹಂತದಲ್ಲೂ ಪಾರದರ್ಶಕತೆ

ತರುವುದಾಗಿದೆ. ಈ ಹಿನ್ನೆಲೆಯಲ್ಲಿ ಕಾಯಿದೆಯಡಿ ದುಡಿಯಲು ಸಾಮರ್ಥ್ಯವಿರುವ ಪ್ರತಿಯೊಬ್ಬರಿಗೂ ಮೊದಲು ನೋಂದಣಿ ಮಾಡಿಸಬೇಕು. ಉದ್ಯೋಗದ ಚೀಟಿಯನ್ನು ದುಡಿಯುವವರ ಹೆಸರಲ್ಲಿ ನೀಡಿ ಮತ್ತು ವೇತನಕ್ಕಾಗಿ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಇರಬೇಕೆಂಬುದು ಕಾಯಿದೆಯ ನಿಯಮವಾಗಿದೆ.

ಈ ಸ್ಪಷ್ಟ ನಿಯಮಗಳು ವಾಸ್ತವಿಕವಾಗಿ ಹೇಗೆ ಅನುಷ್ಠಾನಗೊಂಡಿವೆ ಎನ್ನುವುದನ್ನು ಇಲ್ಲಿ ಪರಿಶೀಲನೆಗೆ ಒಳಪಡಿಸಿದೆ.

ನೋಂದಣಿ ವಿಷಯಕ್ಕೆ ಸಂಬಂಧಿಸಿದಂತೆ ನಿಯಮ II, ಪ್ಯಾರಾ 21, 22ರ ಪ್ರಕಾರ ಉದ್ಯೋಗ ಬಯಸುವ ಕುಟುಂಬ ಗ್ರಾಮಪಂಚಾಯತಿಯಲ್ಲಿ ನೋಂದಣಿ ಮಾಡಬೇಕೆಂಬು ಕಾಯಿದೆಯ ನಿಯಮ. ಉದ್ಯೋಗ ಪಡೆಯಲು ಅವಶ್ಯಕತೆ ಇರುವ ದುಡಿಮೆಗಾರರಿಗೆ ತಿಳುವಳಿಕೆ ಕೊರತೆಯಿಂದ ಉದ್ಯೋಗಕ್ಕಾಗಿ ನೋಂದಣಿ ಮಾಡಿಸಿದವರ ಪ್ರಮಾಣ ಬೆಲವತ್ತ ಗ್ರಾಮಪಂಚಾಯತಿ ಯಲ್ಲಿ ಶೇಕಡ 63ರಷ್ಟು ಇದರ ಪ್ರಯೋಜನ ಪಡೆದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಪ್ರಯೋಜನ ಪಡೆದವರ ಪ್ರಮಾಣ ಶೇಕಡ 79.00ರಷ್ಟಿದೆ. ಈ ಯೋಜನೆಯು ಜನರಿಗೆ ತಲುಪದಿರುವುದಕ್ಕೆ ಕಾರಣ ಸಾಮಾಜಿಕವಾಗಿ ಹಿಂದುಳಿದ ಕುಟುಂಬಗಳು, ತೋಟದ ಮನೆಯ ಗ್ರಾಮಗಳು, ಗ್ರಾಮಪಂಚಾಯತಿಯನ್ನು ನೋಡದ ಕುಟುಂಬಗಳು ಈ ಪ್ರಕ್ರಿಯೆಯಿಂದ ದೂರ ಉಳಿದಿರುವುದಕ್ಕೆ ನಿದರ್ಶನಗಳಾಗಿ ಕಂಡುಬಂದಿವೆ. ಗುತ್ತಿಗೆದಾರರ ಗುತ್ತಿಗೆ ಕೆಲಸಗಳಿಗೆ ಸಹಕರಿಸುವ ಕುಟುಂಬಗಳಿಗೆ ಮಾತ್ರ ನೋಂದಣಿ ಮಾಡಿಸಲಾಗಿದೆ. ಜೊತೆಗೆ ಇವರ ಸಂಬಂಧಿಕರ, ಹಿಂಬಾಲಕರ, ರಾಜಕೀಯ ಪಕ್ಷದವರ ಮತ್ತು ಇವರ ಮಾತು ಕೇಳುವವರನ್ನು ಮಾತ್ರ ಉದ್ಯೋಗ ನೋಂದಣಿಗೆ ಅವಕಾಶ ನೀಡಿರುವುದನ್ನು ಪ್ರಸ್ತುತ ಅಧ್ಯಯನ ಗುರುತಿಸಿದೆ.

ಅಧ್ಯಯನಕ್ಕೆ ಒಳಪಡಿಸಿದ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 57.50ರಷ್ಟು ಜನರಿಗೆ ಉದ್ಯೋಗದ ಚೀಟಿ ನೀಡಿರುವುದು ತಿಳಿದು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 65.50.ರಷ್ಟು ಜನರಿಗೆ ಉದ್ಯೋಗದ ಚೀಟಿ ನೀಡಲಾಗಿದೆ. ಉದ್ಯೋಗದ ಚೀಟಿ ವಿತರಿಸಿರುವುದರಲ್ಲಿ ಗ್ರಾಮಪಂಚಾಯತಿ ಸದಸ್ಯರೇ ಹೆಚ್ಚು. ಬೆಲವತ್ತ ಗ್ರಾಮಪಂಚಾಯತಿಗಿಂತ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಒಂದೊಂದು ಕುಟುಂಬದಲ್ಲಿ ಎರಡೆರಡು ಉದ್ಯೋಗದ ಚೀಟಿಗಳನ್ನು ವಿತರಿಸಿರುವುದು ಅಧ್ಯಯನದಿಂದ ತಿಳಿಯುತ್ತದೆ. ಉದ್ಯೋಗದ ಚೀಟಿಯಲ್ಲಿ ಓದುವ ವಿದ್ಯಾರ್ಥಿಗಳು, ಕೆಲವು ಸರ್ಕಾರಿ, ಅರೆ ಸರ್ಕಾರಿ ನೌಕರರು, ಇದರ ಜೊತೆಗೆ ಸಂಬಂಧಿಕರ, ಹಿಂದಿನ ಮನೆಯವರ, ಮುಂದಿನ ಮನೆಯವರ, ಅಕ್ಕ ಪಕ್ಕದ ಮನೆಯವರ ಹೆಸರುಗಳನ್ನು ಸೇರಿಸಿರುವುದು ಮತ್ತು 10–15 ವರ್ಷದ ಹಿಂದೆ ಮದುವೆ ಆಗಿ ಹೋದ ಹೆಣ್ಣು ಮಕ್ಕಳ ಹೆಸರುಗಳು ಉದ್ಯೋಗದ ಚೀಟಿಗಳಲ್ಲಿ

ದಾಖಲಿಸಿರುವುದು ಕಂಡುಬಂದಿದೆ. ಉದ್ಯೋಗದ ಅವಶ್ಯಕತೆ ಇದ್ದು ಉದ್ಯೋಗ ಚೀಟಿಗಾಗಿ ಅರ್ಜಿ ಹಾಕಿದವರಿಗೆ ಯಾವಾಗಲೋ ಒಂದು ಅಥವಾ ಎರಡು ತಿಂಗಳ ಅಂತರದಲ್ಲಿ ವಿತರಿಸಿರುವುದು, ಕೆಲವರಿಗೆ ವಿತರಿಸದೇ ಇರುವುದು ತಿಳಿಯುತ್ತದೆ. ದುಡಿವ ಮಾನವ ದಿನಗಳು, ಅದಕ್ಕೆ ನೀಡಿದ ಕೂಲಿ ವೇತನದ ಪ್ರಮಾಣ, ದಿನಾಂಕಗಳನ್ನು ಉದ್ಯೋಗದ ಚೀಟಿಗಳಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಆದರೆ ಉದ್ಯೋಗದ ಚೀಟಿಗಳಲ್ಲಿ ಹೆಸರು ದಾಖಲಿಸಿರುವುದನ್ನು ಬಿಟ್ಟರೆ ಉಳಿದೆಲ್ಲವೂ ಖಾಲಿ ಇರುವುದು ಅಧ್ಯಯನದಲ್ಲಿ ತಿಳಿಯಿತು. ಉದ್ಯೋಗದ ಚೀಟಿಗಳು ಕಡ್ಡಾಯವಾಗಿ ಕೂಲಿ ಕಾರ್ಮಿಕರ ಬಳಿ ಇಟ್ಟುಕೊಳ್ಳಬೇಕು ಎಂದು ಸಿದ್ಧಾಂತದಲ್ಲಿ ಹೇಳಿದರೂ ಅಧ್ಯಯನ ಕ್ಷೇತ್ರಗಳಲ್ಲಿ ಬಹುಪಾಲು ಉದ್ಯೋಗದ ಚೀಟಿಗಳು ಗುತ್ತಿಗೆದಾರರು ಇಟ್ಟುಕೊಂಡಿರುವುದು ಕಂಡುಬಂದಿದೆ. ಯಂತ್ರಗಳ ಮೂಲಕ ಕಾಮಗಾರಿಗಳನ್ನು ಅನುಷ್ಠಾನ ಮಾಡುವ ಗುತ್ತಿಗೆದಾರರು ಬ್ಯಾಂಕ್ ಮೂಲಕವಾಗಿ ಕೂಲಿ ವೇತನ ಪಡೆಯಲು ಕೂಲಿ ಕಾರ್ಮಿಕರ ಉದ್ಯೋಗದ ಚೀಟಿಗಳನ್ನು ತಮ್ಮ ಬಳಿ ಇಟ್ಟುಕೊಂಡಿರುವುದು ಅಧ್ಯಯನದ ಸಂದರ್ಭದಲ್ಲಿ ತಿಳಿದು ಬಂದಿದೆ.

ಹಿಂದಿನ ಬಹುಪಾಲು ಯೋಜನೆಗಳಲ್ಲಿ ನಗದು ಕೂಲಿ ವೇತನ ನೀಡಲಾಗಿದೆ. ನಗದಾಗಿ ನೀಡುವುದರಿಂದ ಕೂಲಿ ವೇತನ ನ್ಯಾಯಯುತವಾಗಿ ಕೂಲಿ ಕಾರ್ಮಿಕರಿಗೆ ಸಿಗುತ್ತಿರಲಿಲ್ಲ. ಈ ತರಹದ ಸಮಸ್ಯೆಗಳನ್ನು ತಡೆಯಲು ಕೂಲಿ ಕಾರ್ಮಿಕರಿಗೆ ಕೂಲಿ ವೇತನವನ್ನು ಬ್ಯಾಂಕ್ ಮೂಲಕ ನೇರವಾಗಿ ಫಲಾನುಭವಿಯೇ ಪಡೆಯಬೇಕು ಎನ್ನುವುದನ್ನು ಕಾಯಿದೆ ಕಡ್ಡಾಯ ಮಾಡಿದೆ. ಅಧ್ಯಯನ ಕೇತ್ರದಲ್ಲಿ ಮಾಹಿತಿಯ ಕೊರತೆಯಿಂದ ಬಹುಪಾಲು ಕೂಲಿ ಕಾರ್ಮಿಕರು ಬ್ಯಾಂಕ್ ಖಾತೆ ಮಾಡಿಸಿರುವುದಿಲ್ಲ. ಗುತ್ತಿಗೆದಾರರು ಕೂಲಿ ಕಾರ್ಮಿಕರ ಖಾತೆಯನ್ನು ಕಾರ್ಮಿಕರಿಗೆ ಗೊತ್ತಿಲ್ಲದೆಯೇ ಮಾಡಿಸಿದರೇ, ಕೆಲವರು ಮಾತ್ರ ಬ್ಯಾಂಕ್ ಖಾತೆಯನ್ನು ನೇರವಾಗಿ ಮಾಡಿಸಿರುತ್ತಾರೆ. ಕಾಯಿದೆಯ ನಿಯಮಾವಳಿಯಲ್ಲಿ ಉಚಿತವಾಗಿ ಬ್ಯಾಂಕ್ ಖಾತೆ ಮಾಡಿಸಲು ಅವಕಾಶ ಕಲ್ಪಿಸಿಕೊಟ್ಟಿದೆ. ಉದ್ಯೋಗ ಖಾತರಿ ಕಾಯಿದೆ ಅಡಿ ಕೂಲಿಕಾರ್ಮಿಕರು ಬ್ಯಾಂಕ್ ಖಾತೆಗಳನ್ನು ಎರಡು ಗ್ರಾಮಪಂಚಾಯತಿಗಳಲ್ಲಿ ಅರ್ಧಕಿಂತಲೂ ಹೆಚ್ಚು ಕೂಲಿ ಕಾರ್ಮಿಕರಿಗೆ ಬ್ಯಾಂಕ್ ಖಾತೆಗಳನ್ನು ಗುತ್ತಿಗೆದಾರರೇ ಮಾಡಿಸಿಕೊಟ್ಟಿರುತ್ತಾರೆ. ಉದ್ಯೋಗ ಖಾತರಿ ಕಾಯಿದೆ ಅಡಿ 0.00 ರೂಪಾಯಿ ಡೆಪಾಜಿಟ್ ಹಣಕ್ಕೆ ಕೂಲಿಕಾರರಿಗೆ ಬ್ಯಾಂಕ್ ಖಾತೆ ತೆರೆಯಬೇಕು. ಈ ಹಿನ್ನೆಲೆಯಲ್ಲಿ ಬ್ಯಾಂಕ್ ಖಾತೆಯನ್ನು ಉಚಿತವಾಗಿ ಮಾಡಿಸಿಕೊಟ್ಟಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 0.00ರಷ್ಟು ಕಂಡು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 4.50ರಷ್ಟು ಕಂಡು ಬಂದಿದೆ. ಉಳಿದಂತೆ 500 ರೂಪಾಯಿ ಡೆಪಾಜಿಟ್ ಕಟ್ಟಿಸಿಕೊಂಡು ಬ್ಯಾಂಕ್ ಖಾತೆ ತೆರೆಸಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 99.50ರಷ್ಟು ಕಂಡುಬಂದಿದೆ. ಈ ನಿದರ್ಶನವು ಸಿದ್ಧಾಂತಕ್ಕೆ ವಿರುದ್ಧವಾಗಿ ಆಚರಣೆ ಮಾಡಿರುವುದಕ್ಕೆ ಸಾಕ್ಷಿಯಂತಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಯೋಜನೆಯು ವಿಕೇಂದ್ರೀಕೃತ ಆಶಯವನ್ನು ಹೊಂದಿದೆ. ವಿಕೇಂದ್ರೀಕರಣದ ಮುಖ್ಯ ಆಶಯ ಜನರು ತಮ್ಮ ಆಯ್ಕೆಗಳನ್ನು ಮತ್ತು ಬೇಡಿಕೆಗಳನ್ನು ಅವರೇ ನಿರ್ಧರಿಸಬೇಕೆಂಬುದು. ಇಲ್ಲಿ ಜನರ ಭಾಗವಹಿಸುವಿಕೆ ಮುಖ್ಯ. ಆದರೆ ಮೇಲಿಂದ ಕೆಳಕ್ಕೆ ಹರಿದುಬರುವ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನರು ತಮ್ಮನ್ನು ತಾವು ಒಡ್ಡಿಕೊಳ್ಳುವ ಪ್ರಕ್ರಿಯೆಯನ್ನು ಅನಿವಾರ್ಯವಾಗಿ ಸೃಷ್ಟಿಸಲಾಗುತ್ತಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಸಂಖ್ಯೆ ನಿಯಮ 1, 10ನೇ ಪ್ಯಾರಾದಲ್ಲಿ ಕಾಮಗಾರಿ ಆಯ್ಕೆಯನ್ನು ವಸತಿಸಭೆ, ವಾರ್ಡ್‌ಸಭೆಗಳಲ್ಲಿಯೇ ಆಯ್ಕೆ ಮಾಡಬೇಕೆನ್ನುವುದನ್ನು ಕಡ್ಡಾಯ ಮಾಡಲಾಗಿದೆ. ಜನರ ಬೇಕು ಬೇಡಗಳನ್ನು ಅವರೆ ಅನುಷ್ಠಾನ ಮಾಡುವ ಅಧಿಕಾರವನ್ನು ಈ ಕಾಯಿದೆ ಜನರಿಗೆ ನೀಡಿದೆ. ಹೀಗೆ ನೀಡಿರುವ ಅಧಿಕಾರವು ಗ್ರಾಮೀಣ ಪ್ರದೇಶದಲ್ಲಿ ಮಹತ್ವದ ಅನೇಕ ಬದಲಾವಣೆಗಳನ್ನು ತಂದಿದೆ. ಉದಾಹರಣೆಗೆ ಜನರು ಕಾಮಗಾರಿ ವಿಷಯದ ಕುರಿತು ಮಾತನಾಡುತ್ತಾರೆ, ಇದರ ಬಗ್ಗೆ ಪ್ರಶ್ನಿಸುತ್ತಾರೆ, ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಅವು ಹೇಗೆ ನಡೆಯುತ್ತಿವೆ ಮತ್ತು ಹೇಗೆ ನಡೆಯಬೇಕು ಎಂದು ಪ್ರಶ್ನಿಸುವ ಹಾಗೂ ಸೂಚಿಸುವ ಹಂತಕ್ಕೆ ಜನರು ಬೆಳೆದಿದ್ದಾರೆ. ಇಂತಹ ಬೆಳವಣಿಗೆಗಳು ಪಂಚಾಯತ್ ರಾಜ್ ವ್ಯವಸ್ಥೆಯ ಕೊಡುಗೆ ಎಂದರೆ ತಪ್ಪಾಗಲಾರದು.

ಈ ಹಿನ್ನೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿದ ಎರಡು ಪಂಚಾಯತಿಗಳಲ್ಲಿ ಕಾಮಗಾರಿಗಳ ಆಯ್ಕೆ ಪ್ರಕ್ರಿಯೆ ಹೇಗೆ ನಡೆದಿದೆ ಮತ್ತು ಪಾರದರ್ಶಕತೆಗೆ ಒಳಪಟ್ಟಿದೆಯೇ ಎನ್ನುವುದನ್ನು ನಾವು ಪರಿಶೀಲನೆಗೆ ಒಳಪಡಿಸಿದಾಗ ಸಂಖ್ಯಾತ್ಮಕ ಮಾಹಿತಿಯ ಆಧಾರದಲ್ಲಿ ಕೆಳಗಿನ ತೀರ್ಮಾನಗಳಿಗೆ ಬರಲಾಗಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಪ್ರಕಾರ ಉದ್ಯೋಗದ ಚೀಟಿ ಹೊಂದಿರುವ ದುಡಿಯುವ ಜನರಿಗೆ ಮತ್ತು ದುಡಿಯುವ ಶಕ್ತಿ ಇರುವ ಎಲ್ಲರಿಗೆ ಅರ್ಜಿಸಲ್ಲಿಸಿದ ನಂತರ ಎಷ್ಟು ದಿನದೊಳಗಾಗಿ ಉದ್ಯೋಗ ನೀಡಿದೆ? ನೀಡಿಲ್ಲದಿದ್ದರೆ ನಿರುದ್ಯೋಗ ಭತ್ಯೆ ನೀಡಿದೆಯೇ, ನೀಡಿದ್ದರೆ ಎಷ್ಟು ನೀಡಿದೆ? ಎಷ್ಟು ದಿನದೊಳಗೆ ನೀಡಿಲಾಗಿದೆ, ಎನ್ನುವ ಪ್ರಶ್ನೆಗಳನ್ನು ಇಲ್ಲಿ ಚರ್ಚಿಸುವುದರ ಮೂಲಕ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಪರಿಶೀಲನೆ ಮಾಡಲಾಗಿದೆ.

ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದ ಮೇಲೆ 15 ದಿನಗಳೊಳಗಾಗಿ ಉದ್ಯೋಗ ನೀಡುವ ಕುರಿತು ದುಡಿಮೆಗಾರರಿಗೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡಬೇಕು ಎನ್ನುವುದು ಸಿದ್ಧಾಂತ. ಇದರ ಹಿನ್ನೆಲೆಯಲ್ಲಿ ಅಧ್ಯಯನ ಕ್ಷೇತ್ರದಲ್ಲಿ ಪರಿಶೀಲನೆ ಮಾಡಿದಾಗ ಅರ್ಜಿಹಾಕಿ 60 ದಿನಗಳ ನಂತರ ಉದ್ಯೋಗ ನೀಡಿದ್ದು, ಇದರಲ್ಲಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 47.50ರಷ್ಟು ಜನರಿಗೆ ಮಾತ್ರ ಉದ್ಯೋಗ ನೀಡಿದ್ದು, ಹಾಗೆಯೆ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ

ಶೇಕಡ 20ರಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 40.50ರಷ್ಟು ದುಡಿಯುವ ಕೂಲಿ ಕಾರ್ಮಿಕರಿಗೆ ಕೆಲಸವನ್ನೇ ನೀಡದೇ ಇರುವುದು ಕಂಡುಬಂದಿದೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 67ರಷ್ಟು ದುಡಿಮೆಗಾರರಿಗೆ ಕೆಲಸಗಳನ್ನು ನೀಡಿಲ್ಲ. ಇದರ ಹಿಂದೆ ಇರುವ ಸತ್ಯಾಸತ್ಯತೆಯನ್ನು ಅವಲೋಕಿಸಿದರೆ, ಗ್ರಾಮಪಂಚಾಯತಿ ನೌಕರರಿಗೆ ಉದ್ಯೋಗ ಖಾತರಿ ಯೋಜನೆಯಲ್ಲಿ ನಿರಾಸಕ್ತಿ ಮನೋಭಾವ ಇರುವುದು ತಿಳಿಯುತ್ತದೆ ಇಲ್ಲಿ ಗುತ್ತಿಗೆದಾರರು ಅನುಷ್ಠಾನದ ಎಲ್ಲಾ ಹಂತದಲ್ಲೂ ಅನಗತ್ಯವಾಗಿ ಕೈ ಹಾಕಿರುವುದು ತಿಳಿಯುತ್ತದೆ. ಈ ಕುರಿತು ಅಧ್ಯಯನ ಸಂದರ್ಭದಲ್ಲಿ ಒಂದು ಪ್ರಕರಣ ಅಧ್ಯಯನವನ್ನು ಗಮನಿಸಲಾಗಿದೆ.

ಪ್ರಕರಣ ಅಧ್ಯಯನ :- ಅಧ್ಯಯನ ವ್ಯಾಪ್ತಿಗೆ ಒಳಪಡುವ ದೊಡ್ಡೇರಿ ಗ್ರಾಮದಲ್ಲಿ ಕಾವಲಮ್ಮ ಮತ್ತು ಅವರ ಕುಟುಂಬ ಸುಮಾರು 50 ವರ್ಷದಿಂದ ವಾಸವಾಗಿರುತ್ತಾರೆ. ಆ ಕುಟುಂಬಕ್ಕೆ ಜಮೀನು ಇರುವುದಿಲ್ಲ. ಜೀವನ ನಿರ್ವಹಣೆಗೆ ಯಾವುದೇ ಆದಾಯ ಮೂಲಗಳೂ ಇಲ್ಲ. ಜೊತೆಗೆ ವಾಸ ಮಾಡಲಿಕ್ಕೆ ಸ್ವಂತ ಮನೆಯೂ ಇಲ್ಲ. ನಾಲ್ಕು ಜನ ಮಕ್ಕಳು ಇದ್ದು ಅದರಲ್ಲಿ ಎರಡು ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ್ದಾರೆ. ಆ ಹೆಣ್ಣು ಮಕ್ಕಳ ಗಂಡಂದಿರ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದ ಕಾರಣ, ಮದುವೆಯಾದ ಹೆಣ್ಣು ಮಕ್ಕಳು ತವರು ಮನೆಯಲ್ಲೆ ವಾಸವಾಗಿದ್ದಾರೆ. ಇವರನ್ನು ನೋಡಿಕೊಳ್ಳುವ ಜವಾಬ್ದಾರಿ ಇವರದೇ ಆಗಿದೆ. ಜೀವನ ನಡೆಸಲಿಕ್ಕೆ ಕಾವಲಮ್ಮನ ಗಂಡ 60 ಕಿ.ಮೀಟರ್ ದೂರದ ಹಿರಿಯೂರಿನಲ್ಲಿ ಬಿದಿರು ಬೊಂಬು ಕೆಲಸ ಮಾಡುತ್ತಿದ್ದಾರೆ. ಅವರಿಗೆ ದಿನಕ್ಕೆ 180 ರೂಪಾಯಿ ಕೂಲಿ ದೊರಕುವುದು. ಆ ದುಡಿಮೆ ಸಾಕಾಗದಿದ್ದಕ್ಕೆ ಅವರು ಅಲ್ಲಿಂದ 6 ಕಿ.ಮೀಟರ್ ದೂರದಲ್ಲಿ ಬಡವನಹಳ್ಳಿ ಎಂಬಲ್ಲಿ ಪ್ರಸಿದ್ಧವಾದ ಹೂವಿನ ಮಾರುಕಟ್ಟೆ ನಡೆಯುತ್ತದೆ. ಅಲ್ಲಿನ ಅಂಗಡಿ ಮಾಲಿಕರು ಹೂವು ಕಟ್ಟಲಿಕ್ಕೆ ಮನೆಗಳಿಗೆ ಹೂವನ್ನು ಸರಬರಾಜು ಮಾಡುತ್ತಾರೆ. ಒಂದು ಕೆ.ಜಿ ಹೂವು ಕಟ್ಟಿದಕ್ಕೆ 10 ರೂಪಾಯಿ ನಿಗದಿ ಪಡಿಸಿರುತ್ತಾರೆ. ಒಂದು ದಿನಕ್ಕೆ ಎರಡುವರೆ ಕೆ.ಜಿ ಹೂವನ್ನು ಇವರು ಕಟ್ಟುತ್ತಾರೆ. ಅದರಿಂದ ಅವರಿಗೆ ದಿನಕ್ಕೆ 25 ರೂಪಾಯಿ ದುಡಿಯುತ್ತಿದ್ದಾರೆ. ಈ ಆದಾಯವು ಆರು ಜನರಿರುವ ಕುಟುಂಬಕ್ಕೆ ಜೀವನ ನಿರ್ವಹಿಸಲು ಸಾಕಾಗುತ್ತಿಲ್ಲ. ಕಡಿಮೆ ಮಳೆ ಬೀಳುವ ಪ್ರದೇಶವಾಗಿರುವುದರಿಂದ ಇಲ್ಲಿ ಸ್ಥಳೀಯವಾಗಿ ಕೂಲಿಯೂ ದೊರೆಯುವುದಿಲ್ಲ. ಗ್ರಾಮಪಂಚಾಯತಿಗೆ ಉದ್ಯೋಗಬೇಕೆಂದು ಕೇಳುವುದಕ್ಕೆ, ಪ್ರಶ್ನಿಸುವುದಕ್ಕೆ, ಅವರಿಗೆ ಉದ್ಯೋಗ ಖಾತರಿಯ ಬಗ್ಗೆ ಸಂವಿಧಾನಾತ್ಮಕ ಮಾಹಿತಿ ಇರುವುದಿಲ್ಲ. ಉದ್ಯೋಗ ಖಾತರಿ ಪ್ರಾರಂಭವಾದ ಎರಡು ವರ್ಷದಲ್ಲಿ 10 ದಿನ ಉದ್ಯೋಗ ನೀಡಿರುವುದನ್ನು ಬಿಟ್ಟರೆ, ಇಂದಿಗೂ ಗ್ರಾಮ ಪಂಚಾಯತಿ ಯಾವುದೇ ನೀಡಿರುವುದಿಲ್ಲ. ಈ ಕುರಿತು ಜನರು ಹೀಗೆ ವಿವರಿಸುತ್ತಾರೆ. ಉದ್ಯೋಗ ನೀಡಿರುವುದಿಲ್ಲ, ಉದ್ಯೋಗದ ಚೀಟಿ ಗುತ್ತಿಗೆದಾರ ಬಲವಂತವಾಗಿ ಇವರಿಂದ

ಪಡೆದುಕೊಂಡ ಮೇಲೆ ಮತ್ತೆ ಉದ್ಯೋಗದ ಚೀಟಿ ಗುತ್ತಿಗೆದಾರರಿಂದ ಪಡೆಯಲಿಕ್ಕೆ ಆಗಲಿಲ್ಲ ಎನ್ನುತ್ತಾರೆ. ಕಾವಲಮ್ಮ ನಿರಂತರವಾಗಿ ಉದ್ಯೋಗದ ಖಾತರಿ ಕಾಯಿದೆಯಲ್ಲಿ ಅದರಲ್ಲೂ 2013ರಲ್ಲಿ ಹೆಚ್ಚು ಕೆಲಸವನ್ನು ಯಂತ್ರಗಳ ಮೂಲಕ ನಡೆದಿರುವುದು ಬಿಟ್ಟರೆ, ಜನರಿಂದ ಕೆಲಸಗಳನ್ನು ಮಾಡಿಸದಿರುವುದು ತಿಳಿಯುತ್ತದೆ. ಗ್ರಾಮಪಂಚಾಯತಿಗೆ ಉದ್ಯೋಗ ಕೇಳಲು ಹೋದರೆ ಗ್ರಾಮಪಂಚಾಯತಿ ಕಾರ್ಯದರ್ಶಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಯೂ ಸಿಗುತ್ತಿರಲಿಲ್ಲ. ಸಿಕ್ಕಾಗಲೂ ಸರ್ಕಾರದಿಂದ ಇನ್ನೂ ಆದೇಶ ಬಂದಿಲ್ಲವೆಂದು ನೆಪ ಹೇಳುತ್ತಾರೆ. ಅಕ್ಕ ಪಕ್ಕದ ಮನೆಯವರು ಕೂಲಿ ಮಾಡದಿದ್ದರೂ ಬ್ಯಾಂಕಿಗೆ ಗುತ್ತಿಗೆದಾರರು ಕರೆದುಕೊಂಡು ಹೋಗಿ ಹಣ ಬಿಡಿಸಿಕೊಟ್ಟಿದ್ದಕ್ಕೆ ರೂ 200 ಪಾಕೇಟ್ ಮನಿ ಅಂತ ಕೊಡುತ್ತಾರೆ. ನಾವು ಕೇಳಿದರೆ ನಿಮಗಿನ್ನು ಹಣ ಬಂದಿಲ್ಲವೆಂದು ಹೇಳುತ್ತಾರೆ. ಕಾಯಿದೆ ಹಸಿವು ನೀಗಿಸಲು ಪರ್ಯಾಯವಾಗಿ ಉದ್ಯೋಗ ನೀಡಲಿಲ್ಲ, ನೀಡಿದ ಭರವಸೆಗಳೆಲ್ಲ ದುಡಿಮೆಗಾರರಿಗೆ ಬರೀ ಕನಸುಗಳಾಗಿಯೇ ಉಳಿದವು. ಕೈತುಂಬ ಕೆಲಸಕೊಟ್ಟು ಹೊಟ್ಟೆ ತುಂಬಿಸಿಕೊಳ್ಳಲು ದಾರಿ ಮಾಡಿಕೊಡುವ ಸರ್ಕಾರಿ ಯೋಜನೆಗಳು ಬರಲಿಲ್ಲ ಎನ್ನುವುದು ಕಾವಲಮ್ಮ ಕುಟುಂಬದವರ ಅನುಭವಕ್ಕೆ ಬಂದಿದೆ. ಅವರು ವಿವರಿಸಿರುವುದನ್ನು ಪ್ರಸ್ತುತ ಅಧ್ಯಯನ ಸಂದರ್ಭದಲ್ಲಿ ದಾಖಲಿಸಿಕೊಂಡಿದ್ದು, ಈ ಸಂಗತಿಯು ಉದ್ಯೋಗ ಖಾತರಿ ಯೋಜನೆಯ ಆಚರಣೆಯಲ್ಲಿ ಹಲವು ವೈಫಲ್ಯಗಳನ್ನು ಕಂಡಿರುವುದನ್ನು ಸಾಕ್ಷೀಕರಿಸುತ್ತದೆ.

ನಿರುದ್ಯೋಗ ಭತ್ಯೆಗೆ ಸಂಬಂಧಿಸಿದಂತೆ ಉದ್ಯೋಗ ಖಾತರಿ ಸಿದ್ಧಾಂತದಲ್ಲಿ ಸೂಚಿಸಿರುವಂತೆ ಅರ್ಜಿ ಹಾಕಿದ ನಂತರ ಹದಿನೈದು ದಿನಗಳ ಅವಧಿಯ ಒಳಗಾಗಿ ಉದ್ಯೋಗವನ್ನು ಒದಗಿಸಲಾಗದೆ ಹೋದರೆ ಕೂಲಿ ಕಾರ್ಮಿಕರಿಗೆ ಪ್ರತಿ ದಿನ ನಿರುದ್ಯೋಗ ಭತ್ಯೆ ನೀಡಬೇಕು. ಕಾಯಿದೆ ಪ್ರಕರಣ 7(1)ರ ಮತ್ತು 7(2)ರ ಪ್ಯಾರಾ 29ರ ಅನ್ವಯ ನಿರುದ್ಯೋಗ ಭತ್ಯೆಯ ಅವಕಾಶ ಕಲ್ಪಿಸಿದೆ. ಈ ಕೆಲಸವನ್ನು ಗ್ರಾಮಪಂಚಾಯತಿ ನಿರ್ವಹಿಸಬೇಕು. ಇದು "ಉದ್ಯೋಗದ ಹಕ್ಕು". ಕೂಲಿ ಕಾರ್ಮಿಕರ ಉತ್ಸಾಹವನ್ನು ಹೆಚ್ಚಿಸುವುದರಿಂದ ಅವರನ್ನು ಪ್ರೇರೇಪಿಸಲು ಮತ್ತು ಆಹಾರದ ಭದ್ರತೆಯನ್ನು ಒದಗಿಸಲು 15 ದಿನದೊಳಗೆ ಉದ್ಯೋಗ ನೀಡಬೇಕು. ನೀಡದಿದ್ದರೆ ನಿರುದ್ಯೋಗ ಭತ್ಯೆ ನೀಡುವುದು ಕಡ್ಡಾಯ. ಅರ್ಜಿ ಸಲ್ಲಿಸಿದ 30 ದಿನದೊಳಗಾಗಿ ಉದ್ಯೋಗ ನೀಡದಿದ್ದರೆ ಕೂಲಿಯ ಕಾಲು ಭಾಗ ನಿರುದ್ಯೋಗ ಭತ್ಯೆಯಾಗಿ ನೀಡಬೇಕು. ಈ ಅವಧಿಗಿಂತಲೂ ನಿಧಾನವಾದರೆ ಕೂಲಿಯ ಅರ್ಧದಷ್ಟು ನಿರುದ್ಯೋಗ ಭತ್ಯೆ ನೀಡಬೇಕು ಎನ್ನುವುದು ಕಾಯಿದೆ. ಅಧ್ಯಯನ ಕ್ಷೇತ್ರಗಳಾದ ಬೆಲವತ್ತ ಮತ್ತು ದೊಡ್ಡೇರಿಯ ಎರಡು ಗ್ರಾಮಪಂಚಾಯತಿಗಳಲ್ಲಿ ಕೂಲಿ ಮಾಡಿದ ಕೂಲಿಕಾರರಿಗೆ 15 ದಿನದೊಳಗೆ ಎಲ್ಲಿಯೂ ಉದ್ಯೋಗ ನೀಡಿರುವುದಿಲ್ಲ ಹಾಗೂ ಇಲ್ಲಿ ಯಾವ ಕೂಲಿಕಾರರಿಗೂ ನಿರುದ್ಯೋಗ ಭತ್ಯೆ ನೀಡಿರುವುದಿಲ್ಲ. ಕೂಲಿ ಕಾರ್ಮಿಕರಿಂದ ಕಾಮಗಾರಿಗಳು ನಡೆದಿರುವುದೇ ಕಡಿಮೆ. ನಡೆದರೂ ಬಹುಪಾಲು ಜನರಿಗೆ ಇದರ ಬಗ್ಗೆ ಮಾಹಿತಿ ಕೊರತೆ ಇರುವುದು ತಿಳಿಯುತ್ತದೆ. ಗ್ರಾಮಪಂಚಾಯತಿಯ

ನಿರಾಸಕ್ತಿ ಮತ್ತು ಬೇಜವಾಬ್ದಾರಿಯಿಂದಲೂ ನಿರುದ್ಯೋಗ ಭತ್ಯೆ ಭರಿಸಲು ಗ್ರಾಮಪಂಚಾಯತಿ ಮುಂದೆ ಬಾರದಿರುವುದನ್ನು ಪ್ರಸ್ತುತ ಅಧ್ಯಯನ ಗುರುತಿಸಿದೆ.

ಕೂಲಿ ಕಾರ್ಮಿಕರಿಗೆ ಎಷ್ಟು ದಿನದೊಳಗಾಗಿ ಕೂಲಿ ನೀಡಿದೆ ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ ಉದ್ಯೋಗ ಖಾತರಿ ಕಾಯಿದೆ ಪ್ರಕರಣ (3) 3ರ ಅಡಿ ಕೆಲಸ ಮಾಡಿದ 15 ದಿನದೊಳಗಾಗಿ ಕೂಲಿ ಕಾರ್ಮಿಕರಿಗೆ ಕೂಲಿಯನ್ನು ಪಾವತಿಸಬೇಕು ಎನ್ನುವುದು ಕಾಯಿದೆಯ ನಿಯಮ. ಆದರೆ ಕೂಲಿ ಮಾಡಿರುವವರ ಪ್ರಮಾಣವೂ ಕಡಿಮೆ. ಅದರಲ್ಲಿಯೂ ಕೂಲಿ ಮಾಡಿದ 15 ದಿನದೊಳಗಾಗಿ ಕೂಲಿಯನ್ನು ಎಲ್ಲಿಯೂ ನೀಡಿರುವುದಿಲ್ಲ. ಅರ್ಜಿ ಹಾಕಿದ ನಂತರ 30 ದಿನಗಳಾದರೂ ಕೂಲಿ ನೀಡದಿರುವುದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 56ರಷ್ಟಿದ್ದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 10.50ರಷ್ಟು ಕಂಡು ಬಂದಿರುತ್ತದೆ. ಗುತ್ತಿಗೆದಾರರೆ ಉದ್ಯೋಗ ಖಾತರಿಯನ್ನು ಅನುಷ್ಠಾನ ಮಾಡುತ್ತಿರುವುದರಿಂದ ಗ್ರಾಮಪಂಚಾಯತಿಯು ಜವಾಬ್ದಾರಿ ವಹಿಸದೇ ಇರುವುದು ಮತ್ತು ಕೂಲಿ ಕಾರ್ಮಿಕರಿಗೆ ಮಾಹಿತಿ ಕೊರತೆಯಿರುವುದರಿಂದ ಕೂಲಿಯನ್ನು ಪ್ರಶ್ನಿಸದೇ ಇರುವುದು, ಕೂಲಿ ವೇತನ ನೀಡುವಲ್ಲಿ ವಿಳಂಬವಾಗಿರುವುದಕ್ಕೆ ಕಾರಣಗಳಾಗಿ ಕಂಡುಬರುತ್ತಿವೆ. ಈ ಕುರಿತು ಒಂದು ಪ್ರಕರಣ ಅಧ್ಯಯನವನ್ನು ಈ ಕೆಳಕಂಡಂತೆ ಗಮನಿಸಬಹುದಾಗಿದೆ.

ಪ್ರಕರಣ ಅಧ್ಯಯನ: ದೊಡ್ಡೇರಿ ಗ್ರಾಮಪಂಚಾಯತಿಯ ಬಾಣಗಾರನಹಳ್ಳಿಗೆ ಸೇರಿದ ಒಂದು ಭೋವಿ ಕಾಲೋನಿ ಇದೆ. ಈ ಕಾಲೋನಿಯ ಜನರು ಹಿಂದಿನಿಂದಲೂ ತಮ್ಮ ಮೂಲ ವೃತ್ತಿಯಾದ ಮಣ್ಣಿನ ಕೆಲಸ, ಕಲ್ಲಿನ ಕೆಲಸ ಮತ್ತು ಬಾವಿ ಕೆಲಸ ಮಾಡಿಕೊಂಡೇ ಬದುಕು ನಡೆಸುತ್ತಿದ್ದಾರೆ. ಈ ಕಾಲೋನಿಯಲ್ಲಿ ಭೋವಿ ಸಮುದಾಯವೊಂದಕ್ಕೆ ಸೇರಿದ ಸುಮಾರು 46 ಕುಟುಂಬಗಳು ವಾಸವಾಗಿವೆ. ಇವರ ಮೂಲ ವೃತ್ತಿಗಳು ಕೃಷಿ ಮತ್ತು ದೈಹಿಕ ಶ್ರಮಾಧಾರಿತ ಕೂಲಿ, ಕಲ್ಲು ಮತ್ತು ಮಣ್ಣಿನ ಕೆಲಸಗಳಾಗಿರುತ್ತವೆ. ಇವರಿಗೆ ಕೃಷಿ ಬೇಸಾಯಕ್ಕೆ ಸಂಬಂಧಿಸಿದಂತೆ ವರ್ಷದಲ್ಲಿ ಸುಮಾರು 4 ತಿಂಗಳ ಕಾಲ ಮಾತ್ರ ಕೆಲಸವಿರುತ್ತದೆ. ವರ್ಷದಲ್ಲಿ ಉಳಿದ 8 ತಿಂಗಳ ಕಾಲ ಇವರು ಬೇರೆ ಗ್ರಾಮಗಳಿಗೆ ಕೆಲಸಕ್ಕಾಗಿ ವಲಸೆ ಹೋಗಿ ಕಲ್ಲು ಮತ್ತು ಮಣ್ಣಿನ ಕೆಲಸಮಾಡಿ ದುಡಿಯುವುದೇ ಇವರ ಪ್ರಮುಖ ವೃತ್ತಿಯಾದಂತಾಗಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯ ಕಾಯಿದೆಯು 2007–08ರಲ್ಲಿ ಜಾರಿಯಾದಾಗ ಇವರಿಗೆ ಉದ್ಯೋಗದ ಭರವಸೆಯ ಮಹಾಪೂರವೇ ಹರಿದುಬಂದಿದೆ. ಈ ಸಂದರ್ಭದಲ್ಲಿ ಇವರ ಬದುಕಿನಲ್ಲೂ ನಿರಂತರವಾಗಿ ಉದ್ಯೋಗವು ಸ್ಥಳೀಯವಾಗಿ ದೊರೆಯುತ್ತದೆ ಎಂದು ಅವರ ಮನಸ್ಸಿನಲ್ಲಿಯೂ ದೊಡ್ಡ ಕನಸುಗಳನ್ನು ಕಟ್ಟಿಕೊಂಡರು. ಈ ಹಿನ್ನೆಲೆಯಲ್ಲಿ ಕಾಮಗಾರಿಗಳ ಆಯ್ಕೆಗೆ ಗ್ರಾಮಪಂಚಾಯತಿ ಏರ್ಪಡಿಸಿದ ವಾರ್ಡ್‌ಸಭೆ ಗ್ರಾಮಸಭೆಗಳಲ್ಲಿ ಭಾಗವಹಿಸಿ ಗ್ರಾಮಸ್ಥರು

ಹೊಸ ಕೆರೆ ಅಭಿವೃದ್ಧಿಯ ಕಾಮಗಾರಿಗಳನ್ನು ಕೈಗೊಳ್ಳುವಂತೆ ಬೇಡಿಕೆಯನ್ನಿಟ್ಟರು. ಕಾರಣ ಕೆರೆಯಲ್ಲಿ ಹೂಳು ತುಂಬಿದ್ದರಿಂದ ಮಳೆಗಾಲದಲ್ಲಿ ಮಳೆಯ ನೀರು ಹೆಚ್ಚು ಸಂಗ್ರಹವಾಗುತ್ತಿರಲಿಲ್ಲ. ಅಂತರ್ಜಲದ ಮಟ್ಟ ಸಹ ಅತ್ಯಂತ ಕೆಳಗೆ ಇಳಿದಿದ್ದು, ಇದರಿಂದ ಬಾವಿ ಮತ್ತು ಬೋರುಗಳಲ್ಲಿ ನೀರು ಕಡಿಮೆಯಾಗಿವೆ. ಆದ್ದರಿಂದ ದನಕರುಗಳಿಗೆ ಕುಡಿಯುವ ನೀರು ಮತ್ತು ಕೃಷಿಗೆ ನೀರು ಸಾಕಾಗುತ್ತಿರಲಿಲ್ಲ ಹಾಗೂ ಅಂತರ್ಜಲದ ಮಟ್ಟ ಹೆಚ್ಚಿಸಲು ಮತ್ತು ಕೂಲಿಗಾಗಿ ವಲಸೆ ಹೋಗುವುದನ್ನು ತಗ್ಗಿಸಲು ಇವರು ಗ್ರಾಮಕ್ಕೆ ಹತ್ತಿರವಿರುವ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಬೇಡಿಕೆಯನ್ನು ಆ ಗ್ರಾಮದ ಜನರು ಮುಂದಿಟ್ಟರು. ಇದು ವಾರ್ಡ್‌ಸಭೆ ಮತ್ತು ಗ್ರಾಮಸಭೆಯಲ್ಲಿ ಒಪ್ಪಿ ಗ್ರಾಮಪಂಚಾಯತಿಯಲ್ಲಿಯೂ ಸಹ ಅಧಿಕೃತವಾಗಿ ಅನುಮೋದನೆ ಮಾಡಿ ತಾಲ್ಲೂಕು ಪಂಚಾಯತಿಯಿಂದ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಅನುಮೋದಿಸಲಾಗಿತ್ತು. ಇದಾದ ನಂತರ ಗ್ರಾಮ ಪಂಚಾಯತಿ ಭೋವಿ ಕಾಲೋನಿ ಗ್ರಾಮಸ್ಥರಿಗೆ ಕಾಮಗಾರಿ ಕೈಗೊಳ್ಳಲು ಆದೇಶದ ಮೂಲಕ ಸೂಚಿಸಲಾಯಿತು.

ಭೋವಿ ಕಾಲೋನಿ ಕೂಲಿಕಾರರು ಕೆರೆಯ ಹೂಳೆತ್ತುವ ಕಾಮಗಾರಿ ಕೈಗೊಂಡರು. ಇದಕ್ಕೆ ಗ್ರಾಮಪಂಚಾಯತಿ ಇಂಜಿನಿಯರ್ ಸಹ ಬಂದು ಕಾಮಗಾರಿಗಳಿಗೆ ಮಾರ್ಕ್ ಔಟ್ ಮಾಡಲಾಯಿತು. ಅದರಂತೆ ಕಾಮಗಾರಿಗಳು ನಡೆದು ಹೋದವು. ಇಂಜಿನಿಯರ್ ಸಹ ಕಾಮಗಾರಿಗಳನ್ನು ಅಳತೆ ಮಾಡಿ ಎಂ.ಬಿ.ಪುಸ್ತಕಕ್ಕೆ ದಾಖಲಿಸಿ ವರದಿಯನ್ನು ಗ್ರಾಮಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗೆ ಕಳುಹಿಸಿದರು. ಇದೆಲ್ಲವೂ ಉದ್ಯೋಗ ಖಾತರಿ ಕಾಯಿದೆಯ ನಿಯಮಾವಳಿ ಪ್ರಕಾರ ಪ್ರಕ್ರಿಯೆ ನಡೆದು ಬಂದಿರುತ್ತದೆ. ಅಂದರೆ ದುಡಿಮೆಗಾರರು ಗ್ರಾಮಪಂಚಾಯತಿಯಲ್ಲಿ ಉದ್ಯೋಗಕ್ಕಾಗಿ ನೋಂದಣಿ ಮಾಡಿಸುವುದು ಮತ್ತು ಜಾಬ್ ಕಾರ್ಡ್ ಪಡೆದು ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿ ಗ್ರಾಮಪಂಚಾಯತಿ ಉದ್ಯೋಗವನ್ನು ನೀಡಿತು. ಭೋವಿ ಕಾಲೋನಿಯ ದುಡಿಮೆಗಾರರು ಕೆರೆ ಹೂಳೆತ್ತುವ ಕೆಲಸವನ್ನು ಮಾಡಿದರು.

ಕಾಯಿದೆಯ ಅನ್ವಯ ಕೆಲಸ ಮಾಡಿದ 15 ದಿನಗೊಳಗಾಗಿ ಕೂಲಿ ನೀಡಬೇಕಾಗಿತ್ತು. ಆದರೆ ಕೆಲಸ ಮುಗಿದು ಆರು ವರ್ಷಗಳಾದರೂ ಇವರಿಗೆ ಕೂಲಿಯನ್ನು ನೀಡಿರುವುದಿಲ್ಲ. ಕೂಲಿಗಾಗಿ ದುಡಿಮೆಗಾರರು ದೊಡ್ಡೇರಿ ಗ್ರಾಮಪಂಚಾಯತಿಯ ವಿರುದ್ಧ ನಿರಂತರವಾದ ಅನೇಕ ಹೋರಾಟಗಳು, ಮತ್ತು ಧರಣಿ ಮಾಡಿದ್ದಾರೆ. ಆದರೆ ಗ್ರಾಮಪಂಚಾಯತಿಯು ಇವರಿಗೆ ಕೂಲಿ ಮಾತ್ರ ಕೊನೆಗೂ ನೀಡಲಿಲ್ಲ. ಇದೇ ರೀತಿಯಲ್ಲಿ ತಾಲ್ಲೂಕು ಪಂಚಾಯತಿಯಲ್ಲಿಯೂ ಸಹ ಕೂಲಿ ಕೇಳಲು ನಿರಂತರವಾದ ಹೋರಾಟ ಮಾಡಿದರು ದುಡಿಮೆಗಾರರಿಗೆ ನ್ಯಾಯ ಸಿಗಲಿಲ್ಲ. ಈ ಕೂಲೀಕಾರರಿಗೆ ಏಕೆ ಕೂಲಿ ಸಿಗಲಿಲ್ಲ? ಗ್ರಾಮಪಂಚಾಯತಿ ಕೂಲಿ ನೀಡುವಲ್ಲಿ ಏಕೆ ಹಿಂದೆ ಸರಿಯಿತು? ಕಾಯಿದೆ ನಿಯಮಗಳು

ಏನು ಹೇಳುತ್ತವೆ? ಪಂಚಾಯತ್‌ರಾಜ್ ವ್ಯವಸ್ಥೆ ಮಾಡಿದ್ದಾದರು ಏನು? ಎನ್ನುವ ಪ್ರಶ್ನೆಗಳಿಗೆ ವಾಸ್ತವಾಂಶಗಳನ್ನು ಹುಡುಕಿದರೆ ಹೊಸ ಕೆರೆಯಲ್ಲಿ ಈಗಾಗಲೇ ಉದ್ಯೋಗ ಖಾತರಿಯಿಂದ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿ ಅನುಷ್ಠಾನ ಮಾಡುತ್ತಿದ್ದರು. ತಾಲ್ಲೂಕಿನ ಪಟ್ಟಭದ್ರ ಹಿತಾಸಕ್ತಿಗಳು ಅಂದರೆ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷರೊಬ್ಬರು ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಜಲಸಂವರ್ಧನೆ ಯೋಜನೆಯಡಿ ಇದೇ ಕೆರೆಗೆ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಮಂಜೂರು ಮಾಡಿಸಿಕೊಂಡು ಕೆರೆಯಲ್ಲಿ ಹೂಳು ಎತ್ತುವ ಕಾರ್ಯ ಅನುಷ್ಠಾನ ಮಾಡಿದರು. ಅಲ್ಲಿಯ ಸ್ಥಳೀಯ ಜನರು ಎಂ.ಜಿ.ಎನ್.ಆರ್.ಇ.ಎ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನ ಮಾಡಿದ್ದನ್ನು ಸೇರಿಸಿಕೊಂಡು ತಾನೇ ಮಾಡಿಸಿದ್ದಾಗಿ ವರಧಿ ನೀಡಿ ಹಣವನ್ನು ಪಡೆದುಕೊಂಡರು. ದುರಂತವೆಂದರೆ ಹಿಂದೆ ಭೋವಿ ಕಾಲೋನಿ ದುಡಿಮೆಗಾರರು ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಮಾಡಿದ ಕಾಮಗಾರಿಗಳನ್ನು ಪ್ರಭಾವಿ ರಾಜಕೀಯ ನಾಯಕರು ತಾವೇ ಮಾಡಿಸಿದ್ದಾಗಿ ಭೋವಿ ಕಾಲೋನಿ ಕೂಲಿಕಾರರಿಗೆ ಬರಬೇಕಾದ ಕೂಲಿ ಹಣ ರೂ1,50,000ಗಳನ್ನು ಮತ್ತು ಅನುಧಾನವನ್ನು ದುರುಪಯೋಗ ಮಾಡಿಕೊಂಡರು. ದುಡಿದು ಕೂಲಿ ವೇತನ ಪಡೆಯದೇ ವಂಚಿತರಾಗಿದ್ದ ಭೋವಿ ಕಾಲೋನಿಯ ದುಡಿಯುವ ವರ್ಗ ಇಂದಿಗೂ ಕೂಲಿಗಾಗಿ ಧ್ವನಿ ಎತ್ತುವ ಕೆಲಸವನ್ನು ಮಾಡುತ್ತಲೇ ಇವೆ. ಆದರೆ ದೊಡ್ಡೇರಿ ಗ್ರಾಮಪಂಚಾಯತಿ ಮಾತ್ರ ಇಂದಿಗೂ ಮೌನವಹಿಸಿರುವುದು ಹಾಗೂ ಕೂಲಿ ಮಾಡಿದ ದುಡಿಮೆಗಾರರಿಗೆ ಕೂಲಿ ನೀಡದೆ ವಂಚನೆ ಮಾಡಿದ್ದರಿಂದ ಜನರು ಯೋಜನೆಯ ಬಗ್ಗೆ ನಂಬಿಕೆ ಕಳೆದುಕೊಂಡಿದ್ದಾರೆ. ಇವೆಲ್ಲದರ ಹಿನ್ನೆಲೆಯಲ್ಲಿ ಇಲ್ಲಿನ ಜನರು ಉದ್ಯೋಗ ಖಾತರಿ ಯೋಜನೆಯೆಂದರೆ ದುಡ್ಡು ಇದ್ದವರ, ಅಧಿಕಾರ ಇದ್ದವರ, ಜಾತಿಬಲ ಇದ್ದವರಿಗೆ ಮಾತ್ರ ಉದ್ಯೋಗ ಖಾತರಿಯಲ್ಲಿ ಸೌಲಭ್ಯಗಳನ್ನು ಪಡೆಯಲು ಸಾಧ್ಯ ಎನ್ನುವುದು ಇಲ್ಲಿಯ ಬಹುಪಾಲು ಜನರ ಅಭಿಪ್ರಾಯವಾಗಿದ್ದು, ಈ ಪ್ರಕರಣವನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಉದ್ಯೋಗ ಖಾತರಿ ಯೋಜನೆಯು ಆಚರಣೆಯ ಸಂದರ್ಭದಲ್ಲಿ ಕೆಲವೇ ವ್ಯಕ್ತಿಗಳ ಹಾಗೂ ಹಲವು ಪ್ರಭಾವಿ ಅಂಶಗಳಿಂದ ನಿಯಂತ್ರಣಕ್ಕೊಳಪಟ್ಟಿದ್ದು, ಯೋಜನೆಯ ಮೂಲ ಆಶಯಗಳು ಈ ಸಂದರ್ಭದಲ್ಲಿ ಸಮರ್ಪಕವಾಗಿ ಈಡೇರುತ್ತಿಲ್ಲವೆಂಬುದನ್ನು ಪ್ರಸ್ತುತ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಕೂಲಿಯನ್ನು ಹೇಗೆ ನೀಡಲಾಗಿದೆ ಎನ್ನುವ ವಿಷಯಕ್ಕೆ ಸಂಬಂಧಿದಂತೆ, ವಿಶೇಷವಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ದುಡಿಮೆಗಾರರಿಗೆ ಕೆಲಸ ಮಾಡಿದ ಮೇಲೆ ನೇರವಾಗಿ ಕೂಲಿ ವೇತನ ದೊರೆಯಲಿ ಎಂದು ಕೂಲಿವೇತನವನ್ನು ಬ್ಯಾಂಕ್ ಮೂಲಕ ಅಥವಾ ಅಂಚೆ ಕಛೇರಿಯ ಮೂಲಕ ನೀಡಬೇಕು ಎಂದು ಕಾಯಿದೆ ತಿಳಿಸುತ್ತದೆ. ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ

ಬ್ಯಾಂಕ್ ಮೂಲಕವಾಗಿ ಕೂಲಿವೇತನ ನೀಡಿರುವುದು ಶೇಕಡ 65.5ರಷ್ಟು ಕಂಡುಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 48.50ರಷ್ಟು ಕಂಡುಬಂದಿದೆ. ಆದರೆ ಕೆಲಸವೇ ಮಾಡಿಲ್ಲದವರ ಪ್ರಮಾಣ ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 34.5ರಷ್ಟು ಕಂಡುಬಂದಿದ್ದು, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 51.50ರಷ್ಟಿದೆ. ಅಧ್ಯಯನ ಕ್ಷೇತ್ರದಲ್ಲಿ ದುಡಿಮೆಗಾರರು ಮಾಡುವ ಕೆಲಸವನ್ನು ಯಂತ್ರಗಳ ಮೂಲಕ ಅನುಷ್ಠಾನ ಮಾಡಿಸಿರುತ್ತಾರೆ. ಕೂಲಿ ಪಡೆಯುವ ಕ್ರಮದಲ್ಲಿ ಕೂಲಿಕಾರರ ಹೆಸರು ಹೇಳಿ ಗುತ್ತಿಗೆದಾರರೂ ಕೆಲಸ ಮಾಡದಂತಹ ಜನರನ್ನು ಬಳಸಿಕೊಂಡು ಅಕ್ರಮವಾಗಿ ಬ್ಯಾಂಕ್‌ನಲ್ಲಿ ಹಣ ಬಿಡಿಸಿಕೊಳ್ಳುವ ವ್ಯವಹಾರ ನಡೆಸುತ್ತಿದ್ದಾರೆ. ಕೆಲವು ಗುತ್ತಿಗೆದಾರರು ತಮ್ಮ ಸ್ವಂತ ಜಮೀನಿನಲ್ಲಿ ಕೆಲಸಗಳನ್ನು ಮಾಡಿಸಿಕೊಂಡು ಅದರ ಲೆಕ್ಕವನ್ನು ಉದ್ಯೋಗ ಖಾತರಿ ಯೋಜನೆಯ ಖರ್ಚು ವೆಚ್ಚದಲ್ಲಿ ತೋರಿಸಿರುವ ಉದಾಹರಣೆಗಳನ್ನು ಹಾಗೂ ಇದರೊಂದಿಗೆ ಕೆಳಮಟ್ಟದಿಂದ ಜನರ ಅಗತ್ಯತೆಗಳಿಗೆ ಅನುಗುಣವಾಗಿ ಯೋಜನೆಗಳು ರೂಪುಗೊಳ್ಳಬೇಕೆಂಬ ಉದ್ಯೋಗ ಖಾತರಿ ಯೋಜನೆಯ ಸಿದ್ಧಾಂತಕ್ಕೆ ವಿರುದ್ಧವಾದ ಆಚರಣೆಗಳು ನಡೆಯುತ್ತಿರುವುದನ್ನು ಪ್ರಸ್ತುತ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ಕೂಲಿಕಾರ್ಮಿಕರಿಗೆ ಯಾವ ಪ್ರಮಾಣದಲ್ಲಿ ಕೂಲಿ ನೀಡಿದೆ ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ನಿಯಮಾವಳಿ ಪ್ರಕಾರ ಕೂಲಿಮಾಡಿದ 15 ದಿನದೊಳಗಾಗಿ ಪೂರ್ಣ ಪ್ರಮಾಣದಲ್ಲಿ ಕೂಲಿ ನೀಡಬೇಕು ಎನ್ನುವುದು ನಿಯಮ. ಆದರೆ ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಕೂಲಿಯ ಸರಾಸರಿಯಲ್ಲಿ ಅರ್ಧಭಾಗದಷ್ಟು ಮಾತ್ರ ಕೂಲಿ ನೀಡಿರುವುದು ತಿಳಿದುಬಂದಿದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 32.50ರಷ್ಟು ದುಡಿಮೆಗಾರರಿಗೆ ಯಾವುದೇ ಕೂಲಿ ನೀಡದಿರುವುದು ಕಂಡು ಬಂದಿದೆ. ಇದು ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 13ರಷ್ಟು ಕೂಲಿಕಾರರಿಗೆ ಕೂಲಿ ನೀಡದಿರುವುದು ತಿಳಿದುಬರುತ್ತದೆ. ಗ್ರಾಮಪಂಚಾಯತಿಗಳಲ್ಲಿ ಕೆಲಸ ನೀಡಿರುವ ವಿಚಾರಕ್ಕೆ ಬಂದರೆ, ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 47.50ರಷ್ಟು ಕೆಲಸ ನೀಡದಿರುವುದು ತಿಳಿದುಬಂದಿದೆ. ಇದು ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 74ರಷ್ಟು ಪ್ರಮಾಣದಲ್ಲಿದೆ. ಇದಕ್ಕೆ ಯಂತ್ರಗಳ ಮೂಲಕ ಬಹು ಪಾಲು ಕಾಮಗಾರಿಗಳನ್ನು ಅನುಷ್ಠಾನ ಮಾಡಿರುವುದನ್ನು ತಪಾಸಣಾ ತಂಡಗಳು ಗುರುತಿಸಿ ಕೂಲಿ ವೇತನ ತಡೆಹಿಡಿದಿರುವುದನ್ನು ಮತ್ತು ಗ್ರಾಮ ಪಂಚಾಯತಿ ಎಲ್ಲಾ ಹಂತದಲ್ಲೂ ವಿಳಂಬನೀತಿ ಅನುಸರಿಸಿರುವ ಜೊತೆಗೆ ಜವಾಬ್ದಾರಿಯಿಂದ ಅನುಷ್ಠಾನ ಮಾಡದಿರುವುದು ಕೂಲಿಯನ್ನು ನೀಡುವಲ್ಲಿ ವಿಳಂಬವಾಗಿದೆ ಎಂಬುದನ್ನು ಪ್ರಸ್ತುತ ಅಧ್ಯಯನ ಗುರುತಿಸಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಕಾಮಗಾರಿಗಳು ನಡೆಯುವ ಸ್ಥಳದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ಹಾಗೆ ಒದಗಿಸುವುದರ ಮೂಲಕ ದುಡಿಮೆಗಾರರ ಹಕ್ಕನ್ನು ಮಾನವ ಹಕ್ಕಿನ ನೆಲೆಯಲ್ಲಿ ನೋಡುವಂತೆ ವಿವರಿಸುತ್ತದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಅನುಸೂಚಿ 2, ಪ್ಯಾರಾ 27ರ ಅಡಿಯಲ್ಲಿ ದುಡಿಯುವ ಸ್ಥಳದಲ್ಲಿ ಕುಡಿಯುವ ನೀರು, ನೆರಳು, ಆರೋಗ್ಯ ಸಲಹಾ ಪೆಟ್ಟಿಗೆ ಕಡ್ಡಾಯವಾಗಿ ಒದಗಿಸಬೇಕು ಎನ್ನುವುದು ಕಾಯಿದೆಯ ನಿಯಮ. ಅನುಸೂಚಿ–2, ಪ್ಯಾರಾ 28ರಲ್ಲಿ 6 ವರ್ಷದೊಳಗಿನ ಹಾಗೂ 5ಕ್ಕಿಂತ ಹೆಚ್ಚು ಮಕ್ಕಳನ್ನು ನೋಡಿಕೊಳ್ಳಲು ಒಬ್ಬ ಮಹಿಳಾ ಕೂಲಿ ಕಾರ್ಮಿಕರನ್ನು ನೇಮಿಸುವಂತೆ ಕಾಯಿದೆ ನಿರ್ದೇಶಿಸುತ್ತದೆ. ಈ ಕುರಿತು ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿರುವ ಎರಡು ಗ್ರಾಮಪಂಚಾಯತಿಗಳಲ್ಲಿ ಕೇವಲ ಕುಡಿಯುವ ನೀರನ್ನು ಒದಗಿಸಿರುವುದು ಬಿಟ್ಟರೆ, ಇನ್ನುಳಿದ ನೆರಳು, ಆರೋಗ್ಯ ಸಲಹಾಪೆಟ್ಟಿಗೆ, 6 ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳಲು ಒಬ್ಬ ಮಹಿಳಾ ಕೂಲಿ ಕಾರ್ಮಿಕರ ನೇಮಕ ಮಾಡುವ ಯಾವುದೇ ಮೂಲಭೂತ ಸೌಲಭ್ಯಗಳನ್ನು ಒದಗಿಸದೇ ಇರುವುದು ಕಂಡುಬಂದಿದೆ. ಏಕೆಂದರೆ ಬಹು ಪಾಲು ಕಾಮಗಾರಿಗಳು ಜನರಿಗೆ ಮಾಹಿತಿ ನೀಡದೇ, ಯೋಜನೆಗಳ ಬಗೆಗೆ ಜನರು ತೀರ್ಮಾನಿಸದೇ ಗುತ್ತಿಗೆದಾರರು ಮತ್ತು ಗ್ರಾಮಪಂಚಾಯತಿಯವರ ಹೊಂದಾಣಿಕೆಯ ಮೇರೆಗೆ ಯೋಜನೆಗಳನ್ನು ಯಂತ್ರಗಳ ಮೂಲಕ ಅನುಷ್ಠಾನ ಮಾಡಿರುವುದು ಹೆಚ್ಚು. ಇಂತಹ ದುಡಿಮೆಗಾರರನ್ನು ಹೊರೆತುಪಡಿಸಿದ, ನಿಯಮರಹಿತ ಆಚರಣೆಗಳಲ್ಲಿ, ಕಾಮಗಾರಿ ನಡೆಯುವ ಸ್ಥಳಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಅಗತ್ಯತೆ ಇರುವುದಿಲ್ಲ, ಇಂತಹ ಜನಹಿತರಹಿತ ಮತ್ತು ನಿಯಮಭಾಹಿರ ಯೋಜನೆಗಳ ಅನುಷ್ಠಾನವೇ ಹೆಚ್ಚಾಗುತ್ತಿದ್ದು, ಕಡಿಮೆ ಪ್ರಮಾಣದಲ್ಲಿ ಅಂದರೆ ಅತ್ಯಲ್ಪ ಜನರಿಗೆ ಉದ್ಯೋಗ ಖಾತರಿ ಕೆಲಸ ನೀಡುತ್ತಿರುವ ಸಂದರ್ಭದಲ್ಲೂ ಈ ಮೇಲಿನ ಸೌಲಭ್ಯಗಳಿಂದ ಅವರನ್ನು ವಂಚಿತರನ್ನಾಗಿ ಮಾಡಲಾಗುತ್ತಿದೆ. ಈ ಮೂಲಕ ಮೂಲಭೂತ ಸೌಲಭ್ಯಗಳನ್ನು ಅಪಬಳಕೆ ಮಾಡುತ್ತಿರುವುದನ್ನು ಜೊತೆಗೆ ಕಾಯಿದೆ ಉಲ್ಲಂಘನೆ ಮಾಡುತ್ತಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಪ್ರಸ್ತುತ ಅಧ್ಯಯನದ ಮೂಲಕ ಗುರುತಿಸಲಾಗಿದೆ.

ಉದ್ಯೋಗ ಖಾತರಿ ಕಾಯಿದೆ ಅಡಿ ಕೆಲಸದ ಅಗತ್ಯತೆ ಇರುವ ಆಸಕ್ತರಿಗೆ ಉದ್ಯೋಗ ನೀಡುವ ಸಲುವಾಗಿ ಸ್ಥಳೀಯವಾಗಿಯೇ ಕೆಲಸ ನೀಡಬೇಕು. ಒಂದು ವೇಳೆ ವಾಸಮಾಡುವ ಪ್ರದೇಶದಿಂದ 5 ಕಿ.ಮೀ ಗಿಂತ ದೂರದ ಪ್ರದೇಶದಲ್ಲಿ ಕೆಲಸ ನೀಡಿದರೆ, ಕಾಯಿದೆಯ ಅನುಸೂಚಿ–2, ಪ್ಯಾರಾ 12 ಮತ್ತು 14ರ ಪ್ರಕಾರ ಪ್ರಯಾಣದ ವೆಚ್ಚಕ್ಕಾಗಿ ಕೂಲಿಯ ಶೇಕಡ 10ರಷ್ಟು ಹೆಚ್ಚುವರಿ ಕೂಲಿ ನೀಡಬೇಕು. ವಾಸಸ್ಥಳದಿಂದ 5 ಕಿ.ಮೀ ದೂರಹೋಗಿ ಕೂಲಿ ಮಾಡಿದವರು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 5.5ರಷ್ಟು ಕಂಡುಬಂದರೆ, ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಶೇಕಡ 1.50ರಷ್ಟಿದೆ. ವಾಸಸ್ಥಳದಿಂದ 5 ಕಿ.ಮೀ ದೂರ ಹೋಗಿ ದುಡಿಯುವುದು ಕಡಿಮೆ.

ದುಡಿಮೆಗೆ ಹೋದರೂ ದಿನದ ಕೂಲಿಯ ದರದಲ್ಲಿ ಶೇಕಡ 10ರಷ್ಟು ಕೂಲಿ ವೇತನವನ್ನು ಹೆಚ್ಚುವರಿಯಾಗಿ ಪಡೆಯಬೇಕೆಂಬ ಮಾಹಿತಿ ಜನರಿಗೆ ಇರುವುದಿಲ್ಲ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ 2013–14ರಲ್ಲಿ ಅಂತರ್ಜಲ ಹೆಚ್ಚಿಸುವಂತಹ ದೀರ್ಘಕಾಲಿನ ಕಾಮಾಗಾರಿಗಳನ್ನು ಸಾರ್ವಜನಿಕ ಸ್ಥಳದಲ್ಲಿ ನಿರ್ಮಾಣವಾಗಬೇಕು ಎನ್ನುವುದನ್ನು ಅನುಸೂಚಿ ಒಂದರ ತಿದ್ದುಪಡಿಯ ಪ್ಯಾರಾ 1, ಬಿ.ನಲ್ಲಿ ಸೇರಿಸಲಾಗಿದೆ. ಉದ್ಯೋಗ ಖಾತರಿ ಸಿದ್ಧಾಂತದ ಪ್ರಕಾರ ಅಂತರ್ಜಲ ಮರುಪೂರಣದ ಕಾಮಗಾರಿಗಳನ್ನು ಅನುಷ್ಠಾನ ಮಾಡಬೇಕು. ಆದರೆ ಅನುಷ್ಠಾನ ಮಾಡಿದ ಕಾಮಗಾರಿಗಳಲ್ಲಿ ಹೆಚ್ಚು ಶೌಚಾಲಯಗಳ ನಿರ್ಮಾಣ ಮಾಡಿದ್ದು, ಅಂದರೆ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 18.00ರಷ್ಟು ಶೌಚಾಲಯಗಳ ನಿರ್ಮಾಣವಾಗಿದ್ದು, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 11.50ರಷ್ಟು ರಸ್ತೆ ಕಾಮಗಾರಿ ನಿರ್ಮಾಣ ಮಾಡಲಾಗಿದೆ. ಉದ್ಯೋಗ ಖಾತರಿಯ ಆಶಯದಂತೆ ದೀರ್ಘಕಾಲಿನ ಆಸ್ತಿಗಳಾದ ಅಂತರ್ಜಲ ಹೆಚ್ಚಿಸುವುದಕ್ಕೆ ಸಂಬಂಧಿಸಿಂತೆ ಕಾಮಗಾರಿಗಳು ನಡೆದಿರುವುದು ಅತ್ಯಂತ ಕಡಿಮೆ. ಕಾಮಗಾರಿಗಳ ಆಯ್ಕೆ ಜನರ ತೀರ್ಮಾನಗಳಾಗಿ ಅಂತಿಮವಾಗಿ ಪಂಚಾಯತಿಯಿಂದ ಅನುಮೋದನೆಯಾಗಬೇಕು. ಆದರೆ ಕಾಮಗಾರಿಗಳ ಆಯ್ಕೆ ಮತ್ತು ತೀರ್ಮಾನ ಬಹುತೇಕ ಗುತ್ತಿಗೆದಾರರೆ ಮಾಡಿರುವುದಕ್ಕೆ ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ಗುತ್ತಿಗೆದಾರರ ಜಮೀನುಗಳಲ್ಲಿ ಅವರಿಗೆ ಬೇಕಾದ ಕಾಮಗಾರಿಗಳನ್ನು ನಿರ್ಮಾಣ ಮಾಡಿಕೊಂಡಿದ್ದು ಅದಕ್ಕೆ ಪೂರಕವಾಗಿ ಜಮೀನುಗಳಲ್ಲಿ ತಡೆಗೋಡೆಗಳು, ಬದುಗಳು, ಜಮೀನಿನೊಳಗೆ ಹೋಗುವ ರಸ್ತೆಗಳನ್ನು ಮಾಡಿಕೊಂಡಿರುವುದು ತಿಳಿದುಬಂದಿದೆ. ಅಂತರ್ಜಲ ಹೆಚ್ಚಿಸುವ ಯೋಜನೆಯ ಸಂದರ್ಭದಲ್ಲೂ ಗುತ್ತಿಗೆದಾರರು ಮತ್ತು ಗ್ರಾಮಪಂಚಾಯತಿ ಸದಸ್ಯರುಗಳು ತಮ್ಮ ಸ್ವಾರ್ಥಕ್ಕಾಗಿ ಈ ಯೋಜನೆಯ ಸೌಲಭ್ಯಗಳನ್ನು ಯೋಜನೆಯ ಆಶಯಕ್ಕೆ ವಿರುದ್ಧವಾಗಿ ಕಾರ್ಯರೂಪಕ್ಕೆ ತಂದಿರುವುದು ಅಧ್ಯಯನ ಸಂದರ್ಭದಲ್ಲಿ ಕಂಡುಬಂದಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಪ್ರಕಾರ ಪ್ರತಿವರ್ತಿಗಳಿಗೆ ಒಂದು ಆರ್ಥಿಕ ವರ್ಷದಲ್ಲಿ ದುಡಿಯಲು ಇಚ್ಚಿಸುವ ಕುಟುಂಬಗಳಿಗೆ 100 ದಿನಗಳ ಉದ್ಯೋಗ ನೀಡುವ ಭರವಸೆಯನ್ನು ಕಾಯಿದೆಯಲ್ಲಿ ನೀಡಲಾಗಿದೆ. ಅಧ್ಯಯನ ಅವಧಿಯಲ್ಲಿ 2009–10 ರಿಂದ 2013–14ರವರೆಗೆ ಪ್ರತಿ ವರ್ಷವೂ 100 ದಿನಗಳ ಉದ್ಯೋಗ ನೀಡಿದೆಯೆ? ಎನ್ನುವುದನ್ನು ಪರಿಶೀಲಿಸಲಾಗಿದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ 2013–14ರಲ್ಲಿ ಶೇಕಡ 13.57ರಷ್ಟು ಮತ್ತು 2012–13ರಲ್ಲಿ ಶೇಕಡ 5.16ರಷ್ಟು ಕುಟುಂಬಗಳಿಗೆ 100 ದಿನಗಳ ಉದ್ಯೋಗ ನೀಡಲಾಗಿದೆ. ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ 2013–14ರಲ್ಲಿ ಗ್ರಾಮ ಪಂಚಾಯತಿ ದಾಖಲೆಗಳ ಪ್ರಕಾರ ಸರಾಸರಿ ಪ್ರತೀ ಕುಟುಂಬಕ್ಕೂ 120 ದಿನಗಳ ಉದ್ಯೋಗ ನೀಡಿರುವುದು ದಾಖಲೆಗಳಿವೆ. ಇದು ರಾಜ್ಯಾದಂತ ಸುದ್ದಿಯೂ ಆಗಿತ್ತು. ಆದರೆ ವಾಸ್ತವಿಕವಾಗಿ ಶೇಕಡ 6.60ರಷ್ಟು ಕುಟುಂಬಗಳಿಗೆ

ಮಾತ್ರ 100 ದಿನಗಳ ಉದ್ಯೋಗ ನೀಡಿರುವುದು ಪ್ರಸ್ತುತ ಅಧ್ಯಯನದಿಂದ ತಿಳಿಯುತ್ತದೆ. ದಾಖಲಾತಿಗಳಲ್ಲಿ ಹೆಚ್ಚು ಪ್ರಗತಿ ಸಾಧಿಸಿರುವುದು ಕಂಡುಬರುತ್ತದೆ. ಆದರೆ ವಾಸ್ತವಿಕವಾಗಿ ಮಾನವ ದಿನಗಳ ಮೂಲಕ ಸಾಧನೆ ಇಲ್ಲದೆ ಇರುವುದು ಕಂಡುಬಂದಿದೆ. ಯೋಜನೆಯ ಅನುಷ್ಠಾನ ಸಂಸ್ಥೆಗಳು ಗುತ್ತಿಗೆದಾರರ ಜೊತೆ ಹೊಂದಾಣಿಗೆ ಮಾಡಿಕೊಂಡು ಬಹು ಪಾಲು ಕಾಮಗಾರಿಗಳು ಯಂತ್ರಗಳ ಮೂಲಕ ಅನುಷ್ಠಾನ ಮಾಡಿರುವುದರಿಂದ ಇಲ್ಲಿಯ ಕುಟುಂಬಗಳಿಗೆ ವರ್ಷದಲ್ಲಿ 100 ದಿನಗಳ ಉದ್ಯೋಗ ನೀಡುವಲ್ಲಿಯೂ ಸೋತಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ತಿಳಿಯಲಾಗಿದೆ.

ಕಾಮಗಾರಿ ದಾಖಲೆ ನಿರ್ವಹಣೆ ಮತ್ತು ಹಾಜರಾತಿಗೆ ಸಂಬಂಧಪಟ್ಟ ವಿಷಯವನ್ನು ಅಧ್ಯಯನದ ಸಂದರ್ಭದಲ್ಲಿ ಪರಿಶೀಲಿಸಿದಾಗ ಕಂಡುಕೊಂಡ ಸತ್ಯಾಸತ್ಯೆಗಳನ್ನು ಈ ಕೆಳಕಂಡಂತೆ ವಿವರಿಸಿ ವಿಶ್ಲೇಷಿಸಲಾಗಿದೆ.

ಹಾಜರಾತಿ ಪಟ್ಟಿಗಳ ನಿರ್ವಹಣೆಗೆ (ಎನ್.ಎಂ.ಆರ್.) ಸಂಬಂಧಪಟ್ಟಂತಹ ದಾಖಲಾತಿಗಳನ್ನು ನಿರ್ವಹಣೆ ಮಾಡುವುದರ ಮೂಲಕ ಸುಲಭವಾಗಿ ಕೆಲಸ ಮುಗಿದ ಮೇಲೆ ಕೆಲಸದ ಸ್ವರೂಪ, ಮಾನವ ದಿನಗಳ ಸಂಖ್ಯೆ ಹಾಗೂ ಅದಕ್ಕೆ ನೀಡಬೇಕಾದ ಹಣವನ್ನು ಆನ್‌ಲೈನ್‌ನಲ್ಲಿ ದಾಖಲಿಸಿ ಕೂಲಿಯನ್ನು ನೀಡಬೇಕು. ಈ ಹಿನ್ನೆಲೆಯಲ್ಲಿ ಕೂಲಿಕಾರ್ಮಿಕರಿಗೆ ಕೂಲಿ ಮಾಡಿದ ಮೇಲೆ 15 ದಿನದೊಳಗಾಗಿ ಕೂಲಿ ನೀಡುವುದು ಕಡ್ಡಾಯಗೊಳಿಸಲಾಗಿದೆ. ಎನ್.ಎಂ.ಆರ್ ದಾಖಲೆ ನಿರ್ವಹಣೆ ಕುರಿತು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎಯಲ್ಲಿ ನಡೆಯುವ ಕಾಮಗಾರಿಗಳಲ್ಲಿ ಶೇಕಡ 0.50ರಷ್ಟು ಕಾಮಗಾರಿಗಳಲ್ಲಿ ದಾಖಲೆ ನಿರ್ವಹಣೆ ಮಾಡಲಾಗಿದೆ. ಇದನ್ನು ಪರಿಗಣಿಸುವುದಾದರೆ ನಿರ್ವಹಣೆ ಮಾಡಿಲ್ಲದ್ದೇ ಹೆಚ್ಚು. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಅಡಿಯಲ್ಲಿ ನಡೆದಿರುವ ಕಾಮಗಾರಿಗಳ ದಾಖಲೀಕರಣ ನಡೆದಿರುವುದು ಶೇಕಡ 1.00ರಷ್ಟು ಕಾಮಗಾರಿಗಳಲ್ಲಿ ಮಾತ್ರ. ನಡೆದಿರುವ ಕಾಮಗಾರಿಗಳಲ್ಲಿ ಶೇಕಡ 49.00ರಷ್ಟು ಕಾಮಗಾರಿಗಳ ದಾಖಲೀಕರಣ ನಿಯಮಾನುಸಾರ ಮಾಡಿಲ್ಲ. ಉಳಿದ ಶೇಕಡ 52ರಷ್ಟು ಕಾಮಗಾರಿಗಳ ಬಗ್ಗೆ ಯಾವುದೇ ದಾಖಲೆಗಳು ಸಿಗುವುದಿಲ್ಲ. ದಾಖಲೆಗಳ ನಿರ್ವಹಣೆ ಕೊರತೆಗೆ ಅತ್ಯಂತ ಪ್ರಮುಖ ಅಂಶವೆಂದರೆ ಗಣಕಯಂತ್ರ ಮತ್ತು ಅಂತರ್ಜಾಲದ ಬಗ್ಗೆ ಪರಿಣಿತಿ ಪಡೆದ ತಜ್ಞರ ಕೊರತೆ ಮತ್ತು ಅನುಷ್ಠಾನಾಧಿಕಾರಿಗಳ ಹಾಗೂ ಇಂಜಿನಿಯರ್ ಅವರ ಮಧ್ಯೆ ಸಮನ್ವಯತೆ ಇಲ್ಲದೆ ಇರುವುದು ಪ್ರಸ್ತುತ ಅಧ್ಯಯನದಿಂದ ಕಂಡುಬಂದಿದೆ.

ದುಡಿಮೆಗಾರರ ಹಾಜರಾತಿಯಲ್ಲಿ ನ್ಯಾಯಯುತವಾದ ಕೂಲಿಕಾರ್ಮಿಕರಿಗೆ ಕೂಲಿ ಒದಗಿಸಲು ಮತ್ತು ಪಾರದರ್ಶಕತೆಯಿಂದ ನಿಯಮಾನುಸಾರ ಹಾಜರಾತಿಯನ್ನು ಅಧ್ಯಯನ ಕ್ಷೇತ್ರದಲ್ಲಿ ನಿರ್ವಹಿಸಿರುವುದಿಲ್ಲ. ಇದಕ್ಕೆ ನಿದರ್ಶನವಾಗಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ದುಡಿಮೆಗಾರರ

ಹಾಜರಾತಿ ಶೇಕಡ 61.50ರಷ್ಟು ಕಂಡು ಬಂದರೆ, ಇದು ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 51.50ರಷ್ಟಿದೆ. ಗುತ್ತಿಗೆದಾರರು ಕಾಮಗಾರಿಗಳನ್ನು ಅನುಷ್ಠಾನ ಮಾಡುವುದರಿಂದ ಗ್ರಾಮಪಂಚಾಯತಿ ಹಾಜರಾತಿ ನಿರ್ವಹಣೆ ಮಾಡುವುದು ಕಡಿಮೆ. ಕಾಮಗಾರಿಗಳು ಹೆಚ್ಚು ಯಂತ್ರಗಳ ಮೂಲಕ ಅನುಷ್ಠಾನವಾಗಿರುವುದರಿಂದ ದಾಖಲೆಗಳ ನಿರ್ವಹಣೆ ಗ್ರಾಮಪಂಚಾಯತಿ ಬದಲಿಗೆ ಯೋಜನೆಯ ನಿಯಮಭಾಹಿರವಾಗಿ ಗುತ್ತಿಗೆದಾರರು ನಿರ್ವಹಿಸಿರುವುದು ಅಧ್ಯಯನದಲ್ಲಿ ತಿಳಿದು ಬಂದಿದೆ.

ಇಂಜಿನಿಯರ್ ನೇಮಕಾತಿಗೆ ಮತ್ತು ಕಾಮಗಾರಿಗಳ ಗುಣಾತ್ಮಕ ಅನುಷ್ಠಾನಕ್ಕೆ ಹತ್ತಿರದ ಸಂಬಂಧವಿದೆ. ಆದರೆ ಅಧ್ಯಯನ ನಡೆಸಿದ ಎರಡು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಸರ್ಕಾರದಿಂದ ನೇಮಕವಾದ ಇಂಜಿನಿಯರ್ ಇಲ್ಲವೇ ಇಲ್ಲ ಎನ್ನುವಷ್ಟರ ಮಟ್ಟಿಗಿದೆ. ಕೆಲವು ಕಾಮಗಾರಿಗಳಲ್ಲಿ ವೈಜ್ಞಾನಿಕವಾಗಿ ಕ್ರೀಯಾಯೋಜನೆಯನ್ನು ತಯಾರಿಸಿ ನಡೆಸಿಕೊಟ್ಟಿರುವುದಿಲ್ಲ. ಕೆಲವನ್ನು ಸ್ಥಳೀಯವಾಗಿ ಇರುವ ಖಾಸಗಿ ಇಂಜಿನಿಯರ್ ಯೋಜನೆಯಂತೆ ಅನುಷ್ಟಾನ ಮಾಡಲಾಗಿದೆ. ಇಲ್ಲಿ ಉದ್ಯೋಗ ಖಾತರಿ ಕಾಯಿದೆ ಮತ್ತು ನಿಯಮಗಳು ಗೌಣವಾಗಿವೆ.

ಅಪಘಾತ ಮತ್ತು ಚಿಕಿತ್ಸೆಗೆ ಸಂಬಂಧಿಸಿದಂತೆ ಕೆಲಸ ನಡೆಯುವ ಸ್ಥಳದಲ್ಲಿ ಅಪಘಾತಗಳಾಗಿ ಕೆಲಸಗಾರರಿಗೆ ಗಾಯಗಳಾದರೆ ಈ ಯೋಜನೆಯಲ್ಲಿ ಸೂಚಿತವಾದ ಪರಿಹಾರ ಉಚಿತವಾಗಿ ಸಿಗಬೇಕು. ಆಸ್ಪತ್ರೆಗೆ ಸೇರಿಸುವ ಪ್ರಸಂಗ ಬಂದರೆ ಆಸ್ಪತ್ರೆಯಲ್ಲಿ ಹಾಸಿಗೆ, ಚಿಕಿತ್ಸೆ, ಔಷಧಿಗಳು ಎಲ್ಲವೂ ಉಚಿತವಾಗಿ ಸಿಗಬೇಕು ಮತ್ತು ದಿನಗೂಲಿಯ ಅರ್ಧಭಾಗ ನೀಡಬೇಕು. ಕೂಲಿಕಾರರ ಜೊತೆ ಅವರ ಮಗು ಬಂದಿದ್ದು, ಅದಕ್ಕೆ ಗಾಯ/ತೊಂದರೆ ಯಾದಾಗ ಅದಕ್ಕೂ ಪರಿಹಾರ ಸಿಗಬೇಕು. ಸಾವು ಸಂಭವಿಸಿದರೆ ರೂ 25000/ ಕಡಿಮೆ ಇಲ್ಲದಷ್ಟು ಅಥವಾ ಕೇಂದ್ರ ಸರ್ಕಾರ ಸೂಚಿಸಿರುವಷ್ಟು ಪರಿಹಾರದ ಹಣವು ಅವರ ಕುಟುಂಬಕ್ಕೆ ಸಿಗಬೇಕು. (ನಿಯಮ II 24, 25, 26 ಮತ್ತು 33 ನೇ ಪ್ಯಾರಾ). ಹೀಗೆ ತುರ್ತು ಪರಿಹಾರ ನೀಡಲು ಉದ್ಯೋಗ ಖಾತರಿ ಸಿದ್ಧಾಂತದಲ್ಲಿ ಅವಕಾಶ ಕಲ್ಪಿಸಿದೆ. ಆದರೆ ಎರಡು ಗ್ರಾಮಪಂಚಾಯತಿಗಳಲ್ಲಿ ಇದರ ಬಗ್ಗೆ ಎಲ್ಲಿಯೂ ಯಾವೊಬ್ಬ ಕೂಲಿಕಾರರಿಗೂ ಮಾಹಿತಿ ಇರುವುದಿಲ್ಲ. ಈ ವ್ಯಾಪ್ತಿಯಲ್ಲಿ ದೊಡ್ಡ ಅಪಘಾತಗಳು ಸಂಭವಿಸಿಲ್ಲವಾದರೂ, ಸಣ್ಣ ಪುಟ್ಟ ಗಾಯಗಳು ಆಗಿವೆ. ಕಾಮಗಾರಿ ನಡೆಯುವ ಸ್ಥಳದಲ್ಲಿ ಎಲ್ಲಿಯೂ ಪ್ರಥಮ ಚಿಕಿತ್ಸಾ ಪೆಟ್ಟಿಗೆ ಇಟ್ಟಿರುವುದು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿಲ್ಲ.

ಸಮಾನವೇತನ ಕಾನೂನಿನ ಹಿನ್ನೆಲೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಅನ್ವಯ ಪುರುಷ ಮತ್ತು ಮಹಿಳೆ ಇಬ್ಬರಿಗೂ ಸಮಾನ ಕೂಲಿ ನೀಡಬೇಕು. ಯಾವುದೇ ರೀತಿಯ ಲಿಂಗ ತಾರತಮಯ್ಯ ಮಾಡುವುದನ್ನು ಕಾಯಿದೆಯ ನಿಯಮ 2, ಪ್ಯಾರಾ 34 ರಲ್ಲಿ

ನಿಷೇಧಿಸಿದೆ. ಆದರೆ ಅಧ್ಯಯನ ಕ್ಷೇತ್ರದಲ್ಲಿ ಮಹಿಳಾ ಸಬಲೀಕರಣದ ದೃಷ್ಟಿಯಿಂದ ಸಂವಿಧಾನದ 73ನೇ ತಿದ್ದುಪಡಿಯಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿರುವುದರಿಂದ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಲ್ಲಿಯೂ ಸಹ ಮಹಿಳೆಯರಿಗೆ ಉದ್ಯೋಗದಲ್ಲಿ ಶೇಕಡ 33ರಷ್ಟು ಅವಕಾಶ ನೀಡುವುದು ಕಡ್ಡಾಯವಾಗಿದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 55.00ರಷ್ಟು ಸಮಾನ ಕೂಲಿ ನೀಡಿರುವುದು ಕಂಡು ಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 27.50ರಷ್ಟು ಸಮಾನ ಕೂಲಿ ನೀಡಿರುವುದು ಕಂಡು ಬಂದಿದೆ. ಇದು ವಾಸ್ತವಕ್ಕೆ ದೂರವಾಗಿದ್ದು, ದಾಖಲೆಗಳಲ್ಲಿ ಮಾತ್ರ ನಿರ್ವಹಣೆಯಾಗಿರುವುದು ತಿಳಿಯುತ್ತದೆ, ಏಕೆಂದರೆ ಯಂತ್ರಗಳಿಂದಲೇ ಬಹುತೇಕ ಕಾಮಗಾರಿಗಳು ನಡೆದಿರುವುದರಿಂದ ಇದು ಮಹಿಳೆಯರಿಗೆ ನೇರವಾಗಿ ದೊರೆತ್ತಿಲ್ಲ. ಮಹಿಳಾ ಕೂಲಿ ಕಾರ್ಮಿಕರು ಗುತ್ತಿಗೆದಾರರ ಜಮೀನುಗಳಲ್ಲಿ ಕೂಲಿ ಕೆಲಸಮಾಡಿದ್ದು, ಅವುಗಳನ್ನು ಉದ್ಯೋಗ ಖಾತರಿಯ ಕೂಲಿ ದಿನಗಳಾಗಿ ಪರಿಗಣಿಸಿ ಕೂಲಿ ನೀಡಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿದೆ. ಅಧ್ಯಯನ ನಡೆಸಿದ ಪ್ರದೇಶಗಳಲ್ಲಿ ಮಹಿಳೆಯರು ಜೀವನೋಪಾಯಕ್ಕಾಗಿ ನಗರದ ಹೋಟೆಲ್, ಕಟ್ಟಡಗಳ ಕೆಲಸ ಮತ್ತು ಗಾರ್ಮೆಂಟ್‌ಗಳಲ್ಲಿ ಕೂಲಿಕೆಲಸ ಆಶ್ರಯಿಸಿ ಹೋಗುವುದನ್ನು ಪ್ರಸ್ತುತ ಅಧ್ಯಯನ ಗುರುತಿಸಿದೆ.

ಅನುಷ್ಠಾನದಲ್ಲಿ ತಾರತಮ್ಯಕ್ಕೆ ಸಂಬಂಧಿಸಿದಂತೆ ಉದ್ಯೋಗ ಖಾತರಿಯ ಕಾಯಿದೆ ಗ್ರಾಮೀಣ ಪ್ರದೇಶದಲ್ಲಿ ದುಡಿಮೆಯನ್ನು ಇಚ್ಛಿಸುವವರಿಗೆ ಯಾವುದೇ ತಾರತಮ್ಯವಿಲ್ಲದೆ ಉದ್ಯೋಗ ನೀಡಬೇಕು ಎನ್ನುವುದನ್ನು ತಿಳಿಸುತ್ತದೆ. ಆದರೆ ಜಾತಿ, ವರ್ಗ, ಲಿಂಗ, ರಾಜಕೀಯ ಪಕ್ಷ, ಪಂಚಾಯತಿ ಸ್ಥರಗಳಲ್ಲಿ ಉದ್ಯೋಗಗಳು ಹಂಚಿಕೆಯಾಗುತ್ತಿರುವುದು ಕಂಡುಬಂದಿದೆ. ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಜಾತಿ ಆಧಾರದಲ್ಲಿ ಶೇಕಡ 34.50ರಷ್ಟು, ರಾಜಕೀಯ ಪಕ್ಷಗಳ ಪ್ರಭಾವದಿಂದ ಶೇಕಡ 23.50ರಷ್ಟು, ಲಿಂಗ ತಾರತಮ್ಯ ಶೇಕಡ 14.50ರಷ್ಟು ಪ್ರಮಾಣದಲ್ಲಿ ಕಾಮಗಾರಿಗಳು ನಡೆದಿವೆ. ದೊಡ್ಡೇರಿ ಗ್ರಾಮ ಪಂಚಾಯತಿಯಲ್ಲಿ ರಾಜಕೀಯ ಪ್ರಭಾವದಿಂದ ಶೇಕಡ 44.50ರಷ್ಟು, ಜಾತಿಪ್ರಭಾವದಲ್ಲಿ ಶೇಕಡ 26ರಷ್ಟು, ಗುಂಪುಗಾರಿಕೆ ಆಧಾರದಲ್ಲಿ ಶೇಕಡ 17.50ರಷ್ಟು ಕಾಮಗಾರಿಗಳು ನಡೆದಿವೆ. ಎರಡು ಗ್ರಾಮಪಂಚಾಯತಿಗಳಲ್ಲಿ ಕಂಡುಬರುತ್ತಿರುವ ಈ ಮೇಲಿನ ತಾರತಮ್ಯಸಹಿತ ಉದ್ಯೋಗ ಹಂಚಿಕೆ ಉದ್ಯೋಗ ಖಾತರಿ ಯೋಜನೆಯ ಮುಖ್ಯ ಆಶಯಗಳಲ್ಲೊಂದಾದ ಸರ್ವರಿಗೂ ತಾರತಮ್ಯವಿಲ್ಲದೆ ಸಮಾನವಾಗಿ ಉದ್ಯೋಗ ಹಂಚಬೇಕು ಎಂಬುದನ್ನು ಮುಖ್ಯವಾಗಿ ಪರಿಗಣಿಸದೇ ಮೂಲ ಆಶಯಕ್ಕೆ ದಕ್ಕೆ ತಂದಿರುವುದನ್ನು ಗುರುತಿಸಲಾಗಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯಡಿ ನಿಯಮ 1, ಪ್ಯಾರಾ 11ರಲ್ಲಿ ಗುತ್ತಿಗೆದಾರರು ಅಥವಾ ಯಂತ್ರಗಳ ಮೂಲಕ ಕಾಮಗಾರಿಗಳನ್ನು ಮಾಡುವುದು ಅಪರಾದ.

ಹೀಗೆ ನಿಷೇದಿಸಿದ್ದರೂ ಸಿದ್ಧಾಂತಕ್ಕೆ ವಿರುದ್ಧವಾಗಿ ಗುತ್ತಿಗೆದಾರರು ಕಾಮಗಾರಿಗಳನ್ನು ಜೆ.ಸಿ.ಬಿ ಯಂತ್ರಗಳಿಂದ ಅನುಷ್ಠಾನ ಮಾಡಿರುವುದು ಅಧ್ಯಯನ ಕ್ಷೇತ್ರದಲ್ಲಿ ಕಂಡುಬಂದಿದೆ. ರಸ್ತೆ, ಚರಂಡಿ, ಶೌಚಾಲಯದ ಗುಂಡಿ ತೆಗೆಯುವುದು, ತೋಟಗಾರಿಕೆ ಸಸಿಗಳನ್ನು ಹಾಕಲು ಗುಂಡಿ ತೆಗೆಯುವುದು ಮತ್ತು ಬದುಗಳನ್ನು ಹಾಕುವುದರಲ್ಲಿ ಯಂತ್ರಗಳನ್ನು ಬಳಕೆ ಮಾಡಲಾಗಿದೆ. ಈ ರೀತಿ ಅನುಷ್ಠಾನ ಮಾಡಿರುವುದು ಬೆಲವತ್ತ ಗ್ರಾಮ ಪಂಚಾಯತಿಯಲ್ಲಿ ಶೇಕಡ 58.50ರಷ್ಟು ಕಂಡುಬಂದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 41.00ರಷ್ಟು ನಡೆದಿದೆ. ಇಲ್ಲಿ ದುಡಿಯುವ ಕಾರ್ಮಿಕರಿಗೆ ಉದ್ಯೋಗ ನೀಡುವ ಬದಲು ಹೆಚ್ಚು ಯಂತ್ರಗಳ ಬಳಕೆ ಮಾಡಿರುವುದರಿಂದ ನಿರುದ್ಯೋಗ ಸಮಸ್ಯೆ ತೀವ್ರವಾಗಿ, ದುಡಿಮೆಯನ್ನರಸಿ ನಗರ ಪ್ರದೇಶಗಳಿಗೆ ಇಲ್ಲಿನ ಜನರು ವಲಸೆ ಹೋಗುತ್ತಿರುವುದು ಅವರ ಬಹುಕನ್ನು ಅತಂತ್ರ ಸ್ಥಿತಿಗೆ ತಂದಿರುವುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಕಾಯಕ ಬಂಧು (ಉದ್ಯೋಗ ಮಿತ್ರ) ಸಂಘದ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಕಂಡಿಕೆ 6.5.5 ಉದ್ಯೋಗ ಮಿತ್ರರು(ಮೇಟ್ಸ್) ಕೂಲಿಕಾರ್ಮಿಕರಿಗೆ ಪೂರಕ ಮತ್ತು ಸಹಾಯಕರಾಗಿ ಕೆಲಸ ಮಾಡಲು ಉದ್ಯೋಗ ಮಿತ್ರ ಅವಕಾಶ ಕಲ್ಪಿಸಿದೆ. ಉದ್ಯೋಗ ಮಿತ್ರರು ಹಲವು ಜವಾಬ್ದಾರಿಗಳನ್ನು ನಿರ್ವಹಿಸಿ ಯೋಜನೆಯ ಯಶಸ್ವಿಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಅನುಷ್ಠಾನದ ಸಂದರ್ಭದಲ್ಲಿ ಕಾಮಗಾರಿ ನಡೆಯಬೇಕಾದ ಸ್ಥಳದ ಕುರಿತು ಮಾಹಿತಿ ನೀಡುವುದು, ಹಾಜರಾತಿ ನಿರ್ವಹಣೆ, ಕೂಲಿಕಾರ್ಮಿಕರಿಗೆ ಕಾಮಗಾರಿ ಸಂದರ್ಭದ ಸೌಕರ್ಯಗಳನ್ನು ಒದಗಿಸುವುದು, ಇನ್ನು ಹಲವು ರೀತಿಯಲ್ಲಿ ಸಹಾಯಕರಾಗಿ ಕೆಲಸ ನಿರ್ವಹಿಸುವ ಕಾರ್ಯವ್ಯಾಪ್ತಿ ಉದ್ಯೋಗ ಮಿತ್ರರದು.

ಕಾಮಗಾರಿಯನ್ನು ಅನುಷ್ಠಾನ ಮಾಡುವ ಸಂದರ್ಭದಲ್ಲಿ ಹೆಚ್ಚು ಯಂತ್ರಗಳನ್ನೇ ಬಳಸುವುದರಿಂದ ಉದ್ಯೋಗಮಿತ್ರರ ಅವಶ್ಯಕತೆ ಇಲ್ಲವೆಂಬ ವಾದವು ಬಹು ಪಾಲು ಜನರಿಂದ ಕೇಳಿಬಂದಿತು. ಕೂಲಿಕಾರ್ಮಿಕರಿಗೆ ಉದ್ಯೋಗಾವಕಾಶ ನೀಡುತ್ತಿರುವ ಕಡಿಮೆ ಪ್ರಮಾಣದ ಸಂದರ್ಭದಲ್ಲಿಯೂ ಕಾಮಗಾರಿಗಳ ಅನುಷ್ಠಾನಕ್ಕೆ ಪೂರಕವಾಗಿ ಹಾಗೂ ಉದ್ಯೋಗ ಖಾತರಿ ಯೋಜನೆಯ ಸಿದ್ಧಾಂತದ ಸಫಲತೆಗಾಗಿ ಉದ್ಯೋಗ ಮಿತ್ರರ ನೇಮಕ ಮಾಡಿಲ್ಲ. ಈ ಪ್ರಕ್ರಿಯೆಯು ಉದ್ಯೋಗ ಖಾತರಿ ಯೋಜನೆಯ ಹಿನ್ನಡೆಗೆ ಮತ್ತು ಕೂಲಿ ಕಾರ್ಮಿಕರ ಹಿತಕ್ಕೆ ದಕ್ಕೆ ತರುತ್ತಿರುವುದು ಕ್ಷೇತ್ರಕಾರ್ಯ ಅಧ್ಯಯನದ ಸಂದರ್ಭದಲ್ಲಿ ಗೋಚರಿಸಿದೆ.

ಉದ್ಯೋಗ ಖಾತರಿ ಕುರಿತು ಜನರ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಜನರ ಪರವಾಗಿ ಮತ್ತು ಬಹು ಬಗೆಯ ಉಪಯೋಗವಾಗಿದೆಯೇ ಎನ್ನುವುದನ್ನು ಅಧ್ಯಯನದ ಮೂಲಕ ಅರ್ಥಮಾಡಿಕೊಳ್ಳಲು ಇಲ್ಲಿ ಪ್ರಯತ್ನಮಾಡಲಾಗಿದೆ.

ಉದ್ಯೋಗ ಖಾತರಿ ಯೋಜನೆಯ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ಆಹಾರದ ಭದ್ರತೆಯನ್ನು ಒದಗಿಸುವುದಾಗಿದ್ದು ಅಧ್ಯಯನ ಕೇತ್ರದಲ್ಲಿ ಅದನ್ನು ನಿರ್ವಹಿಸಿರುವ ಬಗೆಯನ್ನು ಈ ಕೆಳಕಂಡಂತೆ ಅವಲೋಕಿಸಲಾಗಿದೆ. ಆಹಾರ ಭದ್ರತೆ ಒದಗಿಸಿದೆ ಎಂದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಅಧ್ಯಯನಕೊಳಪಡಿದ ಶೇಕಡ 45.50ರಷ್ಟು ಜನರು ಹೇಳಿದ್ದಾರೆ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 75ರಷ್ಟು ಜನರು ಆಹಾರ ಭದ್ರತೆ ನೀಡಿರುವುದಾಗಿ ತಿಳಿಸಿದ್ದಾರೆ. ಬೆಲವತ್ತ ಮತ್ತು ದೊಡ್ಡೇರಿ ಗ್ರಾಮ ಪಂಚಾಯತಿಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ದುಡಿಯಲು ಬೇರೆ ಹೆಚ್ಚು ಅವಕಾಶಗಳಿಲ್ಲ. ಗ್ರಾಮಪಂಚಾಯತಿಯಲ್ಲಿ ಜಮೀನು ಇರುವ ಮತ್ತು ಇಲ್ಲದವರಿಗೂ ಉದ್ಯೋಗದ ಅವಶ್ಯಕತೆಗಳಿವೆ. ಬೆಲವತ್ತ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಕೆಲವರಿಗೆ ದುಡಿಯಲು ಭೂಮಿ ಇಲ್ಲ. ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಕೆಲವರಿಗೆ ಭೂಮಿ ಇದ್ದು, ಇಲ್ಲಿ ಒಣ ಭೂಮಿ ಬೇಸಾಯ ಹೆಚ್ಚಾಗಿರುವ ಕಾರಣ ಈ ಪ್ರದೇಶ ಬರ ಪೀಡಿತ ಪ್ರದೇಶವಾಗಿದೆ. ಉದ್ಯೋಗ ಖಾತರಿಯಿಂದ ಊಟ, ಬಟ್ಟೆ ಮತ್ತು ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಿದೆ ಎಂದು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 34.50ರಷ್ಟು ಜನರು ಹೇಳಿದರೆ, ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 18ರಷ್ಟು ಜನರು ನಮ್ಮ ಕುಟುಂಬದ ನಿರ್ವಹಣೆಗೆ, ಮಕ್ಕಳ ಶಿಕ್ಷಣಕ್ಕೆ ಉದ್ಯೋಗ ಖಾತರಿಯಿಂದ ಅನುಕೂಲವಾಗಿದೆ ಎಂದು ಹೇಳಿದ್ದಾರೆ. ಉದ್ಯೋಗ ಖಾತರಿಯ ಮತ್ತು ಆಹಾರ ಭದ್ರತೆಯ ಕುರಿತಾಗಿ ಜನಾಭಿಪ್ರಾಯಗಳ ಹಿನ್ನೆಲೆಯಲ್ಲಿ ಈ ಮೇಲಿನ ಅಂಕಿಅಂಶಗಳನ್ನು ವಿಶ್ಲೇಷಿಸಿದಾಗ ಉದ್ಯೋಗ ಖಾತರಿ ಯೋಜನೆಯ ಧ್ಯೇಯೋದ್ದೇಶಗಳಿಗನುಗುಣವಾಗಿ 100ದಿನಗಳ ಉದ್ಯೋಗ ಸಮರ್ಥ ರೀತಿಯಲ್ಲಿ ಜನಸಾಮಾನ್ಯರಿಗೆ ತಲುಪಿಲ್ಲವೆಂಬುದು ಮತ್ತು ಈ ಮೂಲಕ ಕಾಯಿದೆಯ ಉಲ್ಲಂಘನೆಯಾಗಿರುವುದು ಗಮನಾರ್ಹ ಸಂಗತಿಯಾಗಿದೆ. ಇದನ್ನು ಅಧ್ಯಯನ ಸಮರ್ಥವಾಗಿ ವಿಶ್ಲೇಷಿಸಿದೆ.

ಖಾಸಗಿ ಉದ್ಯೋಗಕ್ಕಾಗಿ ವಲಸೆ ಎಲ್ಲಿಗೆ ಹೋಗುವರು, ಎಷ್ಟು ದೂರಕ್ಕೆ ಹೋಗುವರು ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಉದ್ದೇಶಕ್ಕೆ ತಕ್ಕಂತೆ ಆಹಾರ ಭದ್ರತೆಗೆ ಮತ್ತು ಜೀವನ ನಿರ್ವಹಣೆಗೆ ತನ್ನ ಸ್ವಂತ ಸ್ಥಳದಿಂದ ಬೇರೆ ಗ್ರಾಮಗಳಿಗೆ ಮತ್ತು ದೂರದ ಪಟ್ಟಣಗಳಿಗೆ ವಲಸೆ ಹೋಗುವುದನ್ನು ನಿಯಂತ್ರಿಸುವಂತೆ ಕಾಯಿದೆ ಮಾಡಿದೆ. ಅಧ್ಯಯನ ಕ್ಷೇತ್ರದಲ್ಲಿ ಉದ್ಯೋಗ ಖಾತರಿಯ ಮೂಲಕ ಜನರಿಗೆ ಉದ್ಯೋಗದ ಅವಶ್ಯಕತೆ ಇದೆ. ಉದ್ಯೋಗಕ್ಕಾಗಿ ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 22.50ರಷ್ಟು ಜನರು ತಮ್ಮ ಗ್ರಾಮದಿಂದ ದೂರದ ಬೇರೆ ಗ್ರಾಮಗಳಿಗೆ ಮತ್ತು ನಗರಗಳಿಗೆ ಕೂಲಿಗಾಗಿ ವಲಸೆ ಹೋಗಿದ್ದಾರೆ. ಹೀಗೆ ವಲಸೆ ಹೋದವರು ದುಡಿಮೆಯನ್ನು ಆಶ್ರಯಿಸಿ ಎಷ್ಟು ದೂರ ಪ್ರಯಾಣ ಮಾಡಿದ್ದಾರೆ

ಎನ್ನುವುದು ಈ ಕೆಳಕಂಡಂತಿದೆ. 5 ಕಿ.ಮೀಟರ್‌ಗಿಂತಲೂ ದೂರ ಹೋಗಿ ಬರುವವರು ಬೆಲವತ್ತ ಗ್ರಾಮಪಂಚಾಯತಿಯಲ್ಲಿ ಶೇಕಡ 6.00ರಷ್ಟು ಜನರು ಇದ್ದರೆ, ಪ್ರತಿ ದಿನ ದೊಡ್ಡೇರಿ ಗ್ರಾಮಪಂಚಾಯತಿಯಲ್ಲಿ ಶೇಕಡ 42ರಷ್ಟು ಜನರು 10 ಕಿ.ಮೀಟರ್‌ಗಿಂತಲೂ ಹೆಚ್ಚು ದೂರ ದುಡಿಮೆಯನ್ನು ಅರಸಿ ಹೋಗುತ್ತಾರೆ. ಈ ಮೇಲಿನ ಅಂಶಗಳು ಉದ್ಯೋಗ ಖಾತರಿ ಯೋಜನೆಯು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲ ಎನ್ನುವುದನ್ನು ಸೂಚಿಸುತ್ತದೆ.

ಅನುಷ್ಠಾನಗೊಂಡ ಕಾಮಗಾರಿಗಳು ಮತ್ತು ಮಾನವ ದಿನಗಳ ಪ್ರಕಟಣೆಗೆ ಸಂಬಂಧಿಸಿದಂತೆ ಯೋಜನೆಯಲ್ಲಿ ಪಾರದರ್ಶಕತೆ ಮತ್ತು ಜನರಿಗೆ ಈ ಹಿಂದೆ ಕಾಮಗಾರಿ ಅನುಷ್ಠಾನಗೊಂಡ ಮಾಹಿತಿಯನ್ನು ಒದಗಿಸುವ ಹಿನ್ನೆಲೆಯಲ್ಲಿ, ಉದ್ಯೋಗ ಖಾತರಿ ಕಾಯಿದೆಯಡಿಯಲ್ಲಿ ನಿಯಮಾನುಸಾರ ಮಾಡಿದ ಕಾಮಗಾರಿಗಳು ನಿಯಮ 1, ಪ್ಯಾರಾ 17ರಲ್ಲಿ ಸೂಚಿಸಿದಂತೆ ಕೂಲಿಕಾರನ ಹೆಸರು ಮತ್ತು ಮಾನವ ದಿನಗಳ ಸಂಖ್ಯೆಯನ್ನು ಪ್ರಕಟಣೆ ಮಾಡಬೇಕು. ಆದರೆ ಈ ತರಹದ ಯಾವುದೇ ಪ್ರಕಟಣೆಗಳನ್ನು ಗ್ರಾಮಪಂಚಾಯತಿಗಳು ಮಾಡಿಲ್ಲ. ಇದಕ್ಕೆ ಕಾರಣ ಜನಗಳ ಮುಲಕ ಕಾಮಗಾರಿಗಳನ್ನು ಮಾಡಿಸದೇ, ಹೆಚ್ಚು ಕೆಲಸಗಳನ್ನು ಯಂತ್ರಗಳ ಮೂಲಕವೇ ಮಾಡಿಸಿರುವುದು ಮಾನವ ದಿನಗಳ ಪ್ರಕಟಣೆಗೆ ಅವಕಾಶವಿಲ್ಲದಂತಾಗಿದೆ. ಹಾಗೆಯೇ ಈ ಕಾಯಿದೆಯ ಕುರಿತು ಜನರಿಗೆ ಮಾಹಿತಿ ಇಲ್ಲದಿರುವುದು ಪರೋಕ್ಷವಾಗಿ ಮತ್ತೊಂದು ಕಾರಣವಾಗಿದೆ. ಇವುಗಳ ಕುರಿತು ನಕಲಿ ಬಿಲ್ಲುಗಳ ಮೂಲಕ ಅನುಧಾನವನ್ನು ಅಕ್ರಮವಾಗಿ ಪಡೆಯುತ್ತಿರುವುದನ್ನು ಕ್ಷೇತ್ರಕಾರ್ಯ ಅಧ್ಯಯನದ ಮೂಲಕ ಗುರುತಿಸಲಾಗಿದೆ.

ಮಾಹಿತಿಹಕ್ಕು ಮತ್ತು ಉದ್ಯೋಗ ಖಾತರಿಗೆ ಸಂಬಂಧಿದಂತೆ ನಿಯಮ 1, ಪ್ಯಾರಾ 16ರಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿ ಉದ್ಯೋಗ ಖಾತರಿ ಯೋಜನೆಯಲ್ಲಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಜನರು ಮಾಹಿತಿ ಪಡೆಯುವ ಹಕ್ಕು ಉಳ್ಳವರಾಗಿರುತ್ತಾರೆ. ಈ ತರಹದ ಹಕ್ಕು ಕೇಳುವ ಅವಕಾಶವಿದ್ದರೂ, ಗ್ರಾಮಪಂಚಾಯತಿ ಯಾವುದೇ ರೀತಿಯ ಮಾಹಿತಿಯನ್ನು ಜನರಿಗೆ ನೀಡಿರುವುದಿಲ್ಲ. ಅಧ್ಯಯನ ಕ್ಷೇತ್ರಗಳಾದ ಬೆಲವತ್ತ ಮತ್ತು ದೊಡ್ಡೇರಿ ಎರಡೂ ಗ್ರಾಮಪಂಚಾಯತಿಗಳಲ್ಲಿ ಶೇಕಡ 100.00ರಷ್ಟು ಮಾಹಿತಿ ನೀಡದೇ ಇರುವುದನ್ನು ಅಧ್ಯಯನ ಗುರುತಿಸಿದೆ. ಉದ್ಯೋಗ ಖಾತರಿ ಕಾಯಿದೆಯ ಪ್ರಕಾರ ಕಾಮಗಾರಿಗಳ ಆಯ್ಕೆ ಅಂತಿಮವಾಗಿ ಜನರ ತೀರ್ಮಾನವಾಗಿರಬೇಕು. ಈ ಪ್ರಕ್ರಿಯೆಯನ್ನು ವಾರ್ಡ್‌ಸಭೆ ಗ್ರಾಮಸಭೆಗಳಲ್ಲಿ ತೀರ್ಮಾನಿಸಬೇಕು. ಕೂಲಿಕಾರ್ಮಿಕರಿಂದ ಕಾಮಗಾರಿಗಳನ್ನು ಅನುಷ್ಠಾನ ಮಾಡಿಸಬೇಕು. ಯಂತ್ರಗಳನ್ನು ಮತ್ತು ಗುತ್ತಿಗೆದಾರರನ್ನು ನಿಷೇಧಿಸಬೇಕು. 100 ದಿನಗಳ ಉದ್ಯೋಗ ನೀಡಬೇಕು. 15 ದಿನದೊಳಗೆ ಉದ್ಯೋಗ ನೀಡಬೇಕು. 15 ದಿನದೊಳಗೆ ಕೂಲಿ ವೇತನ ಬ್ಯಾಂಕ್ ಮೂಲಕವೇ ನೀಡಬೇಕು. ಗುಣಮಟ್ಟದ ಕಾಮಗಾರಿ ಅನುಷ್ಠಾನ ಮಾಡಬೇಕು. ಸಾಮಾಜಿಕ ಲೆಕ್ಕ ಪರಿಶೋಧನೆ ಮಾಡಬೇಕು ಎನ್ನುವ ಈ ಕಾಯಿದೆಯಲ್ಲಿ ನಿಯಮಗಳಿವೆ. ಆದರೆ

ಈ ಮೇಲಿನ ಉದ್ಯೋಗ ಖಾತರಿ ಯೋಜನೆಯ ಎಲ್ಲಾ ನಿಯಮಗಳನ್ನು ಅಧ್ಯಯನ ಕ್ಷೇತ್ರಗಳಲ್ಲಿ ಅನುಷ್ಠಾನ ಮಾಡದೇ ಇರುವುದು ಕಂಡುಬಂದಿರುವುದರಿಂದ, ಗ್ರಾಮಪಂಚಾಯತಿಯವರು ಬಹುಪಾಲು ಕಾಮಗಾರಿಗಳನ್ನು ಕಾಯಿದೆಯ ಉಲ್ಲಂಘನೆಯ ಮೂಲಕ ಅಕ್ರಮವಾಗಿ ಅನುಷ್ಟಾನ ಮಾಡಿರುವ ಕಾರಣಕ್ಕಾಗಿ ತಮ್ಮ ದೌರ್ಬಲ್ಯಗಳ ಹಿನ್ನೆಲೆಯಲ್ಲಿ ಬೇರೆಯವರಿಗೆ ಮಾಹಿತಿ ಹಕ್ಕು ಅದಿನಿಯಮದ ಪ್ರಕಾರ ಮಾಹಿತಿ ನೀಡದೇ ಇರುವುದು ಹೆಚ್ಚಾಗಿ ಕಂಡುಬಂದಿದೆ. ಇದಕ್ಕೆ ಕಾರಣವಾಗಿ ಉದ್ಯೋಗ ಖಾತರಿ ಯೋಜನೆಯಲ್ಲಿ ಮಾಹಿತಿ ಹಕ್ಕಿನ ಕಾಯಿದೆಯಡಿಯಲ್ಲಿ ಕಾಮಗಾರಿಗಳ ಬಗೆಗೆ ಸಂಪೂರ್ಣ ಮಾಹಿತಿ ಪಡೆಯಬಹುದೆಂಬ ನಿಯಮದ ಕುರಿತು ಬಹುಪಾಲು ಜನರಿಗೆ ಮಾಹಿತಿಯ ಕೊರತೆಯಿರುವುದೇ ಇದಕ್ಕೆ ಪ್ರಮುಖ ಕಾರಣವೆಂದು ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

ಒಟ್ಟಾರೆ ನಮ್ಮ ಅಧ್ಯಯನಕ್ಕೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಂತೆ ಎಲ್ಲಾ ಚಟುವಟಿಕೆ ನಡೆದಿದೆ ಎನ್ನುವುದನ್ನು ದೃಢೀಕರಿಸಲು ಸಾಧ್ಯವಾಗಲಿಲ್ಲ. ಆದರೆ ಅನುಷ್ಠಾನದಲ್ಲಿರುವ ಸವಾಲುಗಳನ್ನು ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಹಿಡಿದಿಡುವಲ್ಲಿ ಸ್ವಲ್ಪಮಟ್ಟಿಗೆ ಸಫಲತೆ ಕಂಡಿದೆ. ಉದಾಹರಣೆಗೆ ಎಂ.ಎನ್. ಶ್ರೀನಿವಾಸ್‌ರವರು ಬಳಸಿದ ಪ್ರಬಲಜಾತಿಯ ಪರಿಕಲ್ಪನೆಯ ಆಧಾರಿತ ಜಾತಿರಾಜಕಾರಣವು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ಆಶಯಗಳನ್ನು ಹೇಗೆ ಅಡ್ಡಿಪಡಿಸುತ್ತದೆ. ಎನ್ನುವುದನ್ನು ಕಂಡುಕೊಂಡಿದ್ದೇವೆ. ಉದಾಹರಣೆಗೆ ದೊಡ್ಡೇರಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಬಾಣಗಾರನಹಳ್ಳಿ ಭೋವಿ ಕಾಲೋನಿ ಜನರು ನಿರ್ವಹಿಸಿದ ಕೆಲಸಕ್ಕೆ ಮತ್ತೊಬ್ಬ ರಾಜಕಾರಣಿ ತನ್ನ ರಾಜಕೀಯ ಪ್ರಾಭಲ್ಯ ಬಳಸಿ ಹಣಪಡೆದಿರುವುದು ಸ್ಪಷ್ಟ ನಿದರ್ಶನವಾಗಿದೆ. ಹಾಗೆಂದ ಮಾತ್ರಕ್ಕೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಯಾವುದೇ ಬಗೆಯ ಬದಲಾವಣೆ ಸಾಧ್ಯವಾಗಿಲ್ಲ ಎಂದು ಹೇಳಲಾಗುವುದಿಲ್ಲ.

ಸಮಕಾಲಿನ ಸಂದರ್ಭದಲ್ಲಿ ಅಭಿವೃದ್ಧಿ ರಾಜಕಾರಣವು ಗ್ರಾಮೀಣ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ಪರಿವರ್ತಿಸುತ್ತದೆ. ಕರ್ನಾಟಕದಲಲಿ ಕಳೆದ ಹತ್ತು ವರ್ಷಗಳಲ್ಲಿ ಟೌನ್‌ಶಿಪ್‌ಗಳು, ಗೇಟರ್ ಬೆಂಗಳೂರು, ಕೈಗಾರಿಕ ವಲಯಗಳು, ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ರಸ್ತೆಗಳ ಅಭಿವೃದ್ಧಿಗಾಗಿ ಸುಮಾರು 928 ಗ್ರಾಮಗಳ ವ್ಯಾಪ್ತಿಯಲ್ಲಿ 11ಲಕ್ಷ (2011) ಎಕರೆಗಳಿಗೂ ಹೆಚ್ಚಿನ ಭೂಮಿಯನ್ನು ಖಾಸಗಿಯವರಿಗೆ ಮತ್ತು ಕಾರ್ಪೋರೇಟ್ ಸಂಸ್ಥೆಗಳಿಗೆ ಅತ್ಯಂತ ಕಡುಮೆ ಬೆಲೆಗೆ ನೀಡಲಾಗಿದೆ. ಅಲ್ಲದೆ ಪ್ರತೀ ವರ್ಷ ವಿಶೇಷ ಆರ್ಥಿಕ ವಲಯ ಸ್ಥಾಪನೆಗೆ ಮತ್ತು ವಿದೇಶಿ ನೇರ ಬಂಡವಾಳ ಹೂಡಿಕೆ ವಿಶೇಷ ಪ್ರಯತ್ನ ಮಾಡುವ ಮೂಲಕ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆ ರೂಪಾಂತರ ಮಾಡಲಾಗುತ್ತದೆ. ಕರ್ನಾಟಕ ರಾಜ್ಯ ಯೋಜನಾ ಮಂಡಳಿಯು 'ಕರ್ನಾಟಕದ ಒಂದು ದೃಷ್ಟಿ ಕೋನ: 20–20' ಎನ್ನುವ

ಹೆಸರಿನಲ್ಲಿ ಸಿದ್ದಪಡಿಸಿರುವ ವಲಯದಲ್ಲಿ, ಕೃಷಿ ಸಮಾಜದ ಬಿಕ್ಕಟ್ಟುಗಳನ್ನು ಚರ್ಚಿಸದೇ ಯೋಚಿಸದೇ ಕೃಷಿಯ ಅವಲಂಬನೆಯನ್ನು ಶೇಕಡ 61% ರಿಂದ 2020ರ ವೇಳೆಗೆ ಶೇಕಡ 35–40%ಕ್ಕೆ ಇಳಿಸಬೇಕೆಂದು ಶಿಫಾರಸ್ಸನ್ನು ಮಾಡಿದೆ. ಇದರಲ್ಲಿ ಹೊಸ ತಯಾರಿಕಾ ವಲಯಗಳಿಗೆ ಸ್ಥಳೀಯರು ಹಾದಿ ಮಾಡಿಕೊಡಬೇಕೆಂದು ನಿರೀಕ್ಷಿಸಲಾಗಿದೆ. ಇಂತಹ ಸಂದರ್ಭದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ತನ್ನ ಆಶಯದಂತೆ ಜನರಿಗೆ ಉದ್ಯೋಗ, ಗ್ರಾಮೀಣ ಪ್ರದೇಶದಲ್ಲಿ ದೀರ್ಘಕಾಲಿನ ಆಸ್ತಿಗಳನ್ನು ನೀಡುವುದು ಒಂದು ಕಡೆಯಾದರೆ, ಇನ್ನೊಂದು ಬಗೆಯಲ್ಲಿ ಗ್ರಾಮೀಣ ಪ್ರದೇಶದ ಕೃಷಿ ಚಟುವಟಿಕೆಗಳಲ್ಲಿ ಕೃಷಿಕಾರ್ಮಿಕರಿಗೆ ನೀಡುತ್ತಿದ್ದ ಕೂಲಿದರವನ್ನು ಹೆಚ್ಚಿಸಿದೆ ಎನ್ನುವ ಅಂಶ ಪ್ರಸ್ತುತ ಅಧ್ಯಯನದಿಂದ ತಿಳಿದುಬಂದಿದೆ.

2011ರ ಸಾಮಾಜಿಕ ಆರ್ಥಿಕ ಜಾತಿ ಗಣತಿ(ಎಸ್.ಐ.ಸಿ.ಸಿ.)ಯ ಗ್ರಾಮೀಣ ಪ್ರದೇಶ (ಗ್ರಾ.ಪ) ಇವರ ಶೇಕಡ 49ರಷ್ಟು ಕುಟುಂಬಗಳು ಬಡತನದಲ್ಲಿವೆ. ಶೇಕಡ 51ರಷ್ಟು ಕುಟುಂಬಗಳು ಬದುಕಿಗೆ ಪ್ರತಿ ದಿನವೂ ಕೂಲಿ ಕೆಲಸವನ್ನು ಅವಲಂಬಿಸಿವೆ. ಶೇಕಡ 30ರಷ್ಟು ಕುಟುಂಬಗಳು ಭೂಮಾಲಿಕತ್ವವನ್ನು ಹೊಂದಿಲ್ಲ, ಹಳ್ಳಿಗಳಲ್ಲಿ ಇರುವ ಶೇಕಡ 77ರಷ್ಟು ಕುಟುಂಬಗಳು ಪ್ರತೀದಿನ ದುಡಿಮೆಗಾಗಿ 5 ಕಿಲೋಮೀಟರ್ ಪ್ರಯಾಣ ಮಾಡಬೇಕಾಗಿದೆ. ಕಳೆದ ಮೂರು ಜನಗಣತಿ (1991–2011) ಅವಧಿಯಲ್ಲಿ ಭೂ ರಹಿತ ಕೃಷಿ ಕೂಲಿ ಕಾರ್ಮಿಕರ ಸಂಖ್ಯೆ(ಶೇಕಡ 26 ರಿಂದ ಶೇಕಡ 30ರಷ್ಟು) ಹೆಚ್ಚಾಗಿದೆ. ಆದರೆ ಕೂಲಿಯು 1980ರಲ್ಲಿ ಶೇಕಡ 5ರ ಪ್ರಮಾಣದಲ್ಲಿ ಹೆಚ್ಚಳ ಕಂಡುಬಂದರೆ, 1990ರಲ್ಲಿ ಶೇಕಡ 2ರಷ್ಟು ಬೆಳವಣಿಗೆ ಸಾಧಿಸಿ, 2000ರ ಮೊದಲ ಅರ್ಧದಲ್ಲಿ ಶೂನ್ಯವಾಗಿದೆ. ಹೀಗಾಗಿ ಅರ್ಧದಷ್ಟು ಜನರು ಮಾಸಿಕ ತಲಾ ಅನುಭೋಗ ವೆಚ್ಚ ರೂ.1030ಕ್ಕಿಂತಲೂ ಕಡಿಮೆ. ಸ್ವಲ್ಪ ಹೆಚ್ಚು ಕಡಿಮೆ ಶೇಕಡ 40ರಷ್ಟು ಜನರ ಮಾಸಿಕ ತಲಾ ಅನುಭೋಗ ವೆಚ್ಚ ರೂ.922/ಕ್ಕಿಂತಲೂ ಕಡಿಮೆ ಇಂತಹ ಸಮಯದಲ್ಲಿ ಸ್ಥಳೀಯರು ದುಡಿಯುವ ವರ್ಗ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಗೆ ಸ್ವಲ್ಪ ಮಟ್ಟಿಗೆ ಉಸಿರಾಡುವ ಅವಕಾಶ ನೀಡಿದೆ. ಆದರೆ ಉದ್ಯೋಗ ಅವಕಾಶಗಳು ನಿರಂತರವಾಗಿ ದೊರಕದ ಕಾರಣ ಜನರು ದುಡಿಯಲು ಅರಸಿ ವಲಸೆ ಹೋಗುವುದನ್ನು ಮತ್ತು ಅದರಿಂದ ಉಂಟಾಗುವ ಸಾಮಾಜಿಕ ಪರಿಣಾಮಗಳನ್ನು ತಡೆಯಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಇನ್ನಷ್ಟು ಪರಿಣಾಮಕಾರಿಯಾಗಿ, ಪಾರದರ್ಶಕವಾಗಿ, ಪ್ರಜಾಸತಾತ್ಮಕವಾಗಿ ಅನುಕೂಲಗಳು ಬೇಕಾಗಿದೆ ಎನ್ನುವುದನ್ನು ನಮ್ಮ ಅಧ್ಯಯನದಲ್ಲಿ ದೊರೆತ ಸಂಖ್ಯಾತ್ಮಕ ಮತ್ತು ಗುಣಾತ್ಮಕ ಮಾಹಿತಿಯಿಂದ ತಿಳಿಯುತ್ತದೆ. ಈ ದಿಕ್ಕಿನಲ್ಲಿ ಈಗಾಗಲೇ ಮಾಹಿತಿ ಹಕ್ಕು ಕಾಯಿದೆ ಮತ್ತು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಹೇಳಿರುವ ಆಶಯಗಳಂತೆ ಪ್ರಜಾಸತಾತ್ಮಕ ಪಾರದರ್ಶಕತೆಯ ಮೂಲಕ ಈ ಯೋಜನೆಗಳನ್ನು ಅನುಷ್ಠಾನ ಮಾಡುವುದು ಅವಶ್ಯಕವಾಗಿದೆ.

ಪರಾಮರ್ಶನ ಗ್ರಂಥಗಳು

ಕನ್ನಡ

1. ಚಂದ್ರಪೂಜಾರಿ.ಎಂ., (2004), **ಜನಾ ಯೋಜನೆ ಹೈದರಾಬಾದ್ ಕರ್ನಾಟಕದ ಅನುಭವಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

2. ಚಂದ್ರಶೇಖರ್.ಟಿ.ಆರ್. (2005), **ಜನರಯೋಜನೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

3. ಜನಾರ್ದನ, (2014) **ಬಡತನದ ವಿವಿಧ ರೂಪಗಳು ಅವುಗಳನ್ನು ನಿರ್ಧರಿಸುವ ಮಾನದಂಡಗಳು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ.

4. ಡಿಸೋಜ, ವಿಲ್. ಫ್ರೆಡ್ (2008) **ಇಡೀ ರಾಜ್ಯಕ್ಕೆ ಬಂದ ಉದ್ಯೋಗ ಖಾತರಿ ಯೋಜನೆಯಿಂದ ಯಾರಿಗೆ ಲಾಭ,** ಸಾಲು ಹೆಜ್ಜೆ ಮಾಸಿಕ, ಬೆಂಗಳೂರು.

5. ಥ್ಯಾಕೋರ್ .ಬಿ. ಕೆ. ಮತ್ತು ಬ್ರಜೇಶ್ ಕರ್ ಚೌದರಿ, (2010) **ಜಾರ್ಕಂಡ್‌ನ ಹಳ್ಳಿಗಳಲ್ಲಿ ಉದ್ಯೋಗ ಮತ್ತು ಕೂಲಿಗಳು,** ಆರ್ಥಿಕ ಪುನರ್ ರಚನೆಗಳ ಕಾಲದಲ್ಲಿನ ಒಂದು ಅಧ್ಯಯನ, ಸದರನ್ ಎಕನಾಮಿಸ್ಟ್, ಬೆಂಗಳೂರು.

6. ನಿಕಿಲ್ ಡೇ ಮತ್ತು ತಂಡದವರು, (2006) **ಉದ್ಯೋಗ ಖಾತರಿ ಕಾಯಿದೆ,** ನ್ಯಾಷನಲ್ ಬುಕ್ ಟ್ರಸ್ಟ್, ಹೊಸದೆಹಲಿ. ಯಾರಿಗೆ ಲಾಭ, ಸಾಲು ಹೆಜ್ಜೆ ,ಮಾಸಿಕ.ಬೆಂಗಳೂರು.

7. ಪ್ರಶಾಂತ್ ಎಚ್.ಡಿ., (2014) **ಶಿಕ್ಷಣ ಹಕ್ಕು ಕಾಯಿದೆ–2009, ಹಕ್ಕಲ್ಲ ಹಕ್ಕಿನ ಪ್ರತೀಕ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

8. ಪ್ರಶಾಂತ್.ಎಚ್.ಡಿ., (2016) **ಮಾರುಕಟ್ಟೆ ಮತ್ತು ಜ್ಞಾನ, ಅರುಹು ಕುರುವು,** ವಿಸ್ಮಯ ಫೌಂಡೇಶನ್, ಮೈಸೂರು.

9. ಪ್ರಶಾಂತ್.ಎಚ್.ಡಿ., (2015) **ಕೃಷಿ ಮತ್ತು ಸಂಸ್ಕೃತಿ, ಸಾಮಾಜಿಕ ಆಕಾರ ರೇಖೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

10. ಬಾಗಲಕೋಟಿ ಮತ್ತು ಪೊಟೆ ಎಸ್. ಎಮ್, (2011) **ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಸಾಮಾಜಿಕ ಆರ್ಥಿಕ ಸಬಲೀಕರಣದ ದೂರದೃಷ್ಟಿ ಮತ್ತು ಸಮಸ್ಯೆಗಳು.** ಪ್ರತಿಭಾನ್ವೇಷಣ, ಧಾರವಾಡ.

11. ಬೋಧಕರು ಮತ್ತು ತರಬೇತಿ ಸಮಾಲೋಚಕರು, (2011) **ಮಗಾರಾಗ್ರಾಉಖಾಯೋ, ಅಬ್ದಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ,** ಲಲಿತ ಮಹಾಲ್ ರಸ್ತೆ, ಮೈಸೂರು.

12. ಭೀಮೇಶ, (2010) **ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಹಿಳಾ ಪ್ರತಿನಿಧೀಕರಣ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

13. ಮಹಿರ್ ಷಾಹ್, (1985) **ಕನಿಯಟ್ಟ ಫಾರಂ ಆಫ್ ಲೇಬರ್,** ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ.

14. ರಿತಿಕಾ.ಕೆ. ಮತ್ತು ನಂದಿನಿ ಎನ್, (2009) **ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಮಹಿಳಾ ಕೂಲಿಕಾರರು ಮತ್ತು ಅನುಭವ** ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಅಕ್ಟೋಬರ್ 24 ವಾಲ್ಯುಮ್ ಎಕ್ಸ್ ಎಲ್ ಪಿ ವಿ ನಂ 33.

15. ಲೋಹಿತಾಶ್ವ ಎಚ್.ಸಿ, (2003) **ಪಂಚಾಯತ್‌ರಾಜ್ ವ್ಯವಸ್ಥೆ,** ವಿದ್ಯಾನಿಧಿ ಪ್ರಕಾಶನ, ಗದಗ.

16. ವಸಂತರಾಜ .ಕೆ.ಎನ್, (2009) **ಆಹಾರದ ಭದ್ರತೆಗೆ ಉದ್ಯೋಗದ ಭದ್ರತೆ, ಹಸಿವಿನ ಸಾಮ್ರಾಜ್ಯಕ್ಕೆ ಕೊನೆಯಂತು,** ಸಿಂತನ ಪುಸ್ತಕ, ಜಯನಗರ ಬೆಂಗಳೂರು.

17. ವಿಟೋಬ ಮತ್ತು ವಗ್ಗಿ, (2011) **ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಒಂದು ಅವಲೋಕನ** ಹೊಸತು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

18. ಶಂಕರ್.ಕೆ.ಆರ್ (2009) **ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವರದಿ,** ಬೆಂಗಳೂರು.

19. ಶ್ರೀಧರ.ಎ., (2012) **ಪಂಚಾಯತ್ ಸಂಸ್ಥೆಯ ಸಾಮಾಜಿಕ ಆಯಾಮಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

20. ಶ್ರೀಧರ, ಎಂ.ವಿ, (2008), **ಮಾನವ ಶ್ರಮಕ್ಕೆ ಇದೂ ಬೆಂಬಲ ಬೆಲೆ,** ಕನ್ನಡಪ್ರಭ, ಬೆಂಗಳೂರು.

21. ಸಿಖಾ, (2011) **ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಜೊತೆಗೆ ವಿವಿಧ ಇಲಾಖೆಗಳ ಕಾರ್ಯತಂತ್ರಗಳ ಸಂಯೋಜನೆ,** 2011 ಕರ್ನಾಟಕ ವಿಕಾಸ. ಬೆಂಗಳೂರು.

22. ಸಿದ್ದಗಂಗಮ್ಮ(2010), ಕರ್ನಾಟಕದಲ್ಲಿ ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

English

1. Abhay sing, (2008) "Awareness in the Development of Tribals". Yojana, Vol No 52.p No 34-36.

2. Afridi, F. (2008) Can Community Monitoring Improve the Accountability of Public O_cials.Economic and Political Weekly, 35{40.

3. Agrawal, A. & Gibson, C.C. (1999) Enhantment and Disenchantment: The Role of Community in Natural Conservation, World Development, 27(6):629-649.

4. Angelucci, M. and G. D. Giorgi (2009) Indirect E_ects of an Aid Program: How do CashInjections A_ect Ineligibles' Consumption? American Economic Review 99 (1), 486{508.

5. Anish Vanaik, (2008) NREGA and the death of tapas soren, Economic and political weekly, Orissa.

6. Azam, M. (2011) The Impact of Indian Job Guarantee Scheme on Labor Market Outcomes:Evidence from a Natural Experiment. Working Paper.

7. Badiani, R. and A. Sar (2009) Coping with Aggregate Shocks: Temporary Migration andOther Labor Responses to Climactic Shocks in Rural India, Chapter 2. Oxford UniversityPress.

8. Banerjee, A. and E. Duo (2007) The Economic Lives of the Poor. Journal of EconomicPerspectives 21 (1), 141{167.

9. Bardhan , P., ed. (1989). The economic theory of agrarian institutions, Oxford: clarendon press.

10. Basanth K. Sahu, (2011) Impacts of MGNREGA's on house hold in drought area A Study of two villages in odisha,MNREGA as right to empoverment, Abhijith publications Delhi.

11. Basu, A. K. (2011). Impact of Rural Employment Guarantee Schemes on Seasonal Labor, Economic and Political Weekly. Orissa, Vo-VIII , I .

12. Braun ,J. von, T. Teklu and p, webb , (1991) .Labour – Intensive public works for food security: Experience in Africa Working papers on Food security: experiencein Africa .Working Papers on Food subsidieswashington D.C International Food policy Research institute.

13. Braunn ,J. von and E. kannedy. 1(994) commercialization of agriculture,economic development and nutrition Baltimore , Md ., U.S.A .: Johns Hopkins University press for the International Food Policy Research Institute.

14. Burki, S.J ., D.G .Davies ,R.H Hook and J.W Thomas (1976) public works programmes in developing countries. A comparative analysis World Bank staff Paper 224 . Washington , D.C .: world Bank.

15. Chaiya Dhater, (2013) "Failure of National Rural Employment Guarantee Scheme in Maharashtra. Economic and Political Weekly.

16. Chandra pradhan and Ramesh golithi, (2011) MNREGA : A virtuous social protuction MNREGA as right to empoverment, Abhijith publications, Delhi .

17. Chandrashaker CP and Jayanth ghosh, (2012) "Public works and wages in Rural India".

18. Clay , E.J. (1986) Rural public works and food for work : A survey world Development 14(10/11) : 1237-1252.

19. Day and Bedi, (2010) "The National Rural Employment Guarantee Scheme in Birbhum" Economic and Political Weekly. Orissa, Vo-VIII , I .

20. Dey, S. and Bedi, A. (2010) 'The National Rural Employment Guarantee Scheme in Birbhum, Economic and Political Weekly, XLV (41). Pp: 19-25.

21. Dreze , Jean (2009) "NREGA is not artificial employment" Civil society , Economic and Political Weekly, Vo-VIII ,May 2009; 7-8,

22. Flinn, M.W. (1961) The poor Employment Act of 1817. Economic History Review , Economic and Political Weekly.11: 56-58

23. Gangadhara Reddy Y1and Aswath G.R.2,(2016) Performance of Mahatma Gandhi National Rural Employment Guarantee Act in Karnataka, India,International Research Journal of Social Sciences,www.isca.in.

24. Gaude,J., A. Guichoana, B, Martens , and S. Miller.(1987) Rural development and Labor – intensive schemes : Impact studies of some pilot programmes . International Labor Review 126(4) : 423 -446.

25. Gopinath Ghosh , (2008) Social Audit and NREGA, Yojana, Vol,No52, P.No 18-21.

26. Gopinath Ghosh, (2008) Social Audit and NREGA, Yojana, vol No. 52 Page No 18/21.

27. Hossain. M., and M Akash (1993) Rural public works for relief and development: A review of Bangladesh experience working papers on Food subsidies 7. Washington ,D.C .International Food Policy Research institute.

28. International Labour Organization (1986) Economically active population estimates 1950-1980 : projections 1985-2025. Six volume . geneva.

29. Indian Institute of Technology, Madras, Chennai (2009) Evaluation of National Rural Employment Guarantee Act: In Districts: Cuddlore, Dindugal, Kanchipuram,Nagai, Thiruvalallur: State: TamilNadu, May.

30. Institute of Applied Manpower Research, (2009) All India Report on Evaluation of NREGA, A Survey of Twenty Districts", Delhi.

31. Jain,S.P. (2001) "Emerging Institutions for Decentralized Rural Development", NIRD Publication, Hyderabad.

32. Jean dreze, (2010) a pilot study on NREGA in Orissa New Delhi. Orissa. Economic and Political Weekly.

33. Jean Dreze, Reetika Khera and Siddharta, (2008) Corruption in NREGA, Myths and Reality Yojana Vol.No 52 .P.No 66-68.Bangalore.

34. Kamala Kanna.K, (2006) Rural Industrialisation and poverty alleviation, Kurukshetra P.No 3-8.

35. Kamala kanna K, (2006) Rural Industrialisation and poverty alleviation, Kurukshetra. Bangalore.

36. Karalay, G.N. (2005) "Integrated Approach to Rural Development: Policies, Programmes and strategies", Concept Publishing Company, New Delhi.

37. Karuna Vakati Aakella, Sowmya Kidamba,(2007) Social Audits in Andhra Pradesh: A Process in Evolution. Economic and Political Weekly.Orissa.

38. Kashyap, C. L. (1989) "Management and Planning of Rural Development in India", Sterling publishers, New Delhi.

39. Khan, A. U. and Saluja, M.R. (2007) Impact of MNREGA on Rural Livelihoods, Paper Presented in 10thSustainable Development Conference on Sustainable Solutions: A Spotlight on South Asian Research, Islamabad, Pakistan, December10-12.

40. Khuulla and Salju, (2007) "Impact of NREGA on ural live hoods", Economic and Political Weekly.

41. Kumar Anandharaja P. and Well Haorei, (2010) "Impact Assessment of MGNREGS on Rural Migration" Kuruksetra, Vol.59, No.10, December 2010, pp. 26-28.

42. Kusthv Byanargi, Partha saha, (2010) "The NREGA, the Maoists and the Development Woes of the Indian State ; .Economic and political weekly EPW July 10, 2010 VOL XLV No 28.

43. Lewis , WA (1955) The theory of economic growth , Home wood , III ., U.S.A .: Richard D .Irwin.

44. Lipton ,M., and J. Van der Gaag , eds .(1993) Including the poor Washington, DC : World Bank.

45. Mathuru, (2007) "Employment Guarantee Progress so for" Economic and Political Weekly. Orissa.

46. Mellor , J. W (1986) Agriculture on the road to industrialization . In Development strategies reconsidered ,ed. J.P .Lewis and V. kallab. U.S.A.: Transaction Books.

47. Mihir shah (2004) "A Historic Opportunity". Economic and Political Weekly.Orissa.

48. Mihir shah (2008) "Direct cash transfer No magic bullet Economic and political weekly. Orissa.

49. Mihir shah (2010) "Emloyment Guarantee, Civil Society and Indian Democracy Economic and Political Weekly. Orissa.

50. Moitri Dey, (2010) National Rural Employment Guarantee Act(NREGA) A Range of Possibilities. International Journal of RuralStudies(IJRS) vol.17 no.2 Oct 2010

51. Nikhil Day, Jean Dreze and Reetika Khera, (2006) Employment Guarantee Act, National Book Trust, India A-5 Green Park, New Delhi-110016.

52. Palanichami AP, (2012) "A study on Mahtma Gandhi National Rural Employment Guarantee Programe (MNREGP) in Thuinjapuram block.

53. Parshuram Rai, (2010) "Study on NREGA by CEFS, New Delhi, Compilation by Chitta Behera, 4A Jubilee Tower, Choudhury Bazar, Cuttack-9, Orissa.

54. Patnaik B.K, (2012) National Rural Employment Guarantee Scheme some preliminary Findings from Hoshiarpur District.

55. Pinstrup-Anderson P.,ad (1988) Food subsidies in developing countries Costs, benefits and policy options . Baltimore ,Md ., U.S.A – Johns Hopkins University press for the International Food policyResearch Institute.

56. Rajkumar Sivan Sunilkumar, (2011) "Implementing NREGS in Hiriyena; A study of Social Audit. Economic and Political Weekly.

57. Rakesh tiwari and others, (2011) "MGNREGA for Environmental Service Enhancement anf Vulnerability Reduction: Rapid Appraisal in Chitradurga District, Karnataka .Economic and political weekly EPW MAY 14, VOL XLVI NO 20.

58. Ramu maurya and Shraddha pal, (2011) Economic policy of public work programme, A case study from India MNREGA as right to empoverment Abhijith publications, Delhi.

59. Ranjith sing Guman and Paravindra Kor dyu ,(2008) NREGA and Evaluative study of Hoshiarpur District" Conference on Emlpoyment Opportunities and Public employment policy in Globalising India,Organized by CDS during .

60. Ravikumar C.H, Kha Rakhesh kumar, Sita Lakhmi.S, (2008), National Rural Employment Guarantee Act in Andrapradesh.

61. Sanjoy Roy, (2010) "Implementation of NREGS in Tripura: An Evaluation, the NEHU Journal, Vol.VIII, No. 1, January.

62. Schultz ,T.W. (1981) Investing in people : The economics of population quality, Berkely ,calif ,U.S.A .: University of California Press.

63. Sen ,G ., A .Iyer and A. George(2002) class ,Gender and Health Equity Lessons from Liberalisation in India Harvard centre for population and Development studies , working paper series ,vol. 12 ,No .3.

64. Shaji Joseph, (2006) "Power of the people Political Mobilisation and Guaranteed Employment" Economic and Political Weekly December.

65. Sick Rajan Mishra,(2013) "The National Rural Employment Guarantee Scheme, Some Reflections on apportunities and challenges.

66. Sidharta, (2012) Team of academic researchs find significant lacunae wage payment delays hit NREGA work in Jharkhand transparency Revie –journal of transparency studies.

67. Strauss , J., and D Thomas . (1994) Human resources .Empirical modeling of household and family decisions For handbook of development economies , vol.3, ed T.N Srinivasan and J.R Behrman. Working Paper Series Santa Monica, Calif ., U.S.A .: Rand ,Labour and population programme.

68. Streeten P.(1981) First things first : Meeting basic human needs in developing countries . Oxford : Oxford University Press.

69. Suamhat Mahanthi, (2002) Mahtma Gandhi National Rural Employment Guarantee Act (MNREGA) and Tribal livelihoods, a case study in Sundargarh District of Odisha.

70. Sudhanarayann, (2008) "Women and Children" Yojna..Vol No 52 Page No 59-63.

71. Sumanthasharma Vijay KR Boddu, (2013) "Critical evaluation of NREGA": Indian Institute of Planning and management, New Delhi.

72. Todaro, M.P (1989) Economic developmentin the Third world New York : Longman.

73. Vidiya Das, Pramod Pradilan, (2007) Illusions of Change :Economic and political weekly August, Orissa.

ವರದಿಗಳು

ಕನ್ನಡ

1. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2004–05, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2005, ಪುಟ 23.

2. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2005–06, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2006, ಪುಟ 31.

3. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2006–07, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2007, ಪುಟ 23–43

4. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2007–08, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2008, ಪುಟ 8=24.

5. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2008–09, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2009, ಪುಟ

6. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2009–10, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2010, ಪುಟ 8–19

7. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2010–11, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2011, ಪುಟ.

8. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2012–13, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2013, ಪುಟ.

9. ತುಮಕೂರು ಜಿಲ್ಲೆಗಳ ಅಂಕಿ ಅಂಶಗಳ ನೋಟ: 2013–14, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಪ್ರಕಟಣೆ, ತುಮಕೂರು, 2005, ಪುಟ.

10. ತುಮಕೂರು ಜಿಲ್ಲಿಯ ಮಾನವ ಅಭಿವೃದ್ಧಿ ವರದ 2013–14

11. ಕರ್ನಾಟಕ ರಾಜ್ಯದ ಮಾನವ ಅಭಿವೃದ್ಧಿ ವರದಿ–2013–14

12. ತುಮಕೂರು ಜಿಲ್ಲೆಯ ಜನಗಣತಿ ವರದಿ 2011, ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ.

English Reports

1 Abhishankar . K. (1969), Tumkur District Gazetteer , publication

2 Gangadhara Reddy Y1and Aswath G.R.2: Performance of Mahatma Gandhi National Rural Employment Guarantee Act in Karnataka, India

3 Gazetter Dapartment of Karnataka, Tumkur

4 Human Development Report Karnataka 2014

5 Human Development Report Tumkur 2013

6 Indian exclusion report, 2014.

7 International Labour Organization (1986) Economically active population estimates ; 1950-1980 : projections 1985-2025. Six volume . geneva.

8 Nagaraj. N, Uttam Deb, GD Nageswara Rao, R Anusha and Cynthia Bantilan (2013) POLICY INDUCED TRANSFORMATION IN DR Tumkur District, Karnataka-Central Ground Water Board Report

9 NFHS-3(2007) : 2005-06 National Family Health survey , Ministry of Health and Family welfare, Government of India.

10. The Directorate of Area Development Programmes Rural Development and Panchayat Raj Department, GOK.

11 World bank (2007) :World Development Indicators 2007

12 World bank (2009) :World Development Indicators 2009.

13. Yland Agriculture: The Case of Tharati Villag in Karnataka, Research Program on Markets, Institutions and Politicies ICRISAT, Patancheru 502 324, AP, India.

ಪತ್ರಿಕೆಗಳು

1. ಇಳಾ ಪಾಟ್ನಾಯಕ್, (2011) "ಪರಿಹಾರದ ಬದಲು ಸಮಸ್ಯೆಯಾಯಿತೆ" ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಕನ್ನಡ ಪ್ರಭ, ಬೆಂಗಳೂರು.

2. ಜೋಷಿ, ಜಿ.ವಿ. (2013) ಗಾಂಧಿ ಹೆಸರಿನ ಯೋಜನೆಯಲ್ಲಿ ಕಾಣದ "ಖಾತ್ರಿ" (ಜಸ್ಟಿ ಕೆ.ಎಸ್.ಹೆಗಡೆ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ನಿಟ್ಟೆ) ಪ್ರಜಾವಾಣಿ ಪತ್ರಿಕೆ. ಬೆಂಗಳೂರು.

3. ಶ್ರೀಧರ, ಎಂ.ವಿ, (2008), ಮಾನವ ಶ್ರಮಕ್ಕೆ ಇದೂ ಬೆಂಬಲ ಬೆಲೆ, ಕನ್ನಡ ಪ್ರಭ, ಬೆಂಗಳೂರು. ಪುಟ–6

4. ಸಂತೋಷ ಈ ಚನಗುಂಡಿ, (2013) ದುಡಿದ ಕೈಗಳಿಗೆ ಕೂಲಿ ನೀಡದ ಸರ್ಕಾರ ಉದ್ಯೋಗ ಖಾತರಿ ಕೋಟಿ ಬಾಕಿ, ಪ್ರಜಾವಾಣಿ ಪತ್ರಿಕೆ, ಬೆಂಗಳೂರು,

ಇಂಗ್ಲೀಷ್ ಪತ್ರಿಕೆಗಳು

1 Baisakh, P. (2007) Has NREGA Reduced Poverty in Orissa?, *Odishadiary,* July 23.

2 CAG Staff Reporter "The Hindu Paper (2012) Irregularities found in MNREGA Implementation.

3 Swaminathan M. S. (2011) "To the hungry , god is bread" The Hindu paper October 1 2011.

4 Dreze J. (2007) NREGA: Dismantling the contractor raj *The Hindu*, 20th November.

5 Mathur, L. (2009) Silent but successful initiative, *The Hindu*. 1st March.

6 Arun Ray and Nikhilde, (2012) "much more then a survival scheme" Hindu paper.

ಅಂತರ್ಜಾಲ

1. Anshuman Jaswal-Ms Paulomee Mistry, (2009) "Will NREGA Ensure Security against Hunger? http:google.com.

2. Ashish, R. and K. Bhatia (2009) Alternative to Migration. Frontline 16.Association for Indian Development, Key Observations on NREGA work in Andhra Pradesh. Availableat http://aidindia.org/main/content/view/y88/279.

3. Bhagavati Patel, (2008) Link Bhagavatipatal, http.www nrega.org.

4. C&AG, (2010) Perfomance audit into states of NREGA in First phase, New Delhi.Online report Orissa.

5. www. Fao-ilo.org/fao –ilo-youth / fao-ilo-jffls/en page No 1

6. http://www.food security/enemployment/poverty.org

7. https://www.google.co.in/url Tumkur District, Karnataka-Central Ground Water Board Report.

8. http://www.gov.in eage employment programmes

9. Jean dreze, (2010) a pilot study on NREGA in Orissa New Delhi.Online report Orissa.

10. http://www.nrega.net

11. http://www.nrega.nic.in/guidelines.htm

12. PRIA, (2010) A Sample study on NREGA in Orissa, New Delhi.Online report Orissa.




ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯಲ್ಲಿ ಬಿ. ಕೋಡಿಹಳ್ಳಿಯಲ್ಲಿ ನಿರ್ಮಿಸಿರುವ ಚರಂಡಿ ಕಾಮಗಾರಿ.



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯಲ್ಲಿ ದೊಡ್ಡೇರಿ ಗ್ರಾಮದಲ್ಲಿ ನಿರ್ಮಿಸಿರುವ ಚರಂಡಿ ಕಾಮಗಾರಿ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯಲ್ಲಿ ಪುರಗೊಲ್ಲರಹಟ್ಟಿ ಗ್ರಾಮದಲ್ಲಿ ನಿರ್ಮಿಸಿರುವ ಶೌಚಾಲಯ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯಲ್ಲಿ ಬೆಲವತ್ತೆ ಗ್ರಾಮ ಪಂಚಯತಿಯಲ್ಲಿ ನೀಡಿರುವ ಜಾಬ್ ಕಾರ್ಡ್‌ಗಳು

ಅಂಬೇಡ್ಕರ್ ಅಧ್ಯಯನ ವಿಭಾಗ